ಕರ್ನಾಟಕ ಸರಕಾರ

# ಮರಕ್ಕೊಗು ಆವಾತೆ ಮರ್ಹೂಂ ಬ್ಯಾರಿಜ

## ಮರೆಯಲಾಗದ ಬ್ಯಾರಿ ಮಹನೀಯರು

## UNFORGETTABLE BEARY ACHIEVERS




**ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ**

2ನೇ ಮಹಡಿ, ಸಾಮರ್ಥ್ಯ ಸೌಧ, ಮಂಗಳೂರು ತಾಲೂಕು ಪಂಚಾಯತ್ ಹಳೇ ಕಟ್ಟಡ,
ಮಿನಿ ವಿಧಾನಸೌಧದ ಬಳಿ, ಮಂಗಳೂರು - 575 001.

ಇಮೇಲ್ : bearyacademyyahoo.in / www.karnatakabearysahithyaacademy.org

ಕರ್ನಾಟಕ ಸರಕಾರ

# ಮರಕ್ಕೊಗು ಆವಾತೆ ಮರ್ಹೂಂ ಬ್ಯಾರಿಜ

## ಮರೆಯಲಾಗದ ಬ್ಯಾರಿ ಮಹನೀಯರು

**UNFORGETTABLE BEARY ACHIEVERS**



## ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

2ನೇ ಮಹಡಿ, ಸಾಮರ್ಥ್ಯ ಸೌಧ, ಮಂಗಳೂರು ತಾಲೂಕು ಪಂಚಾಯತ್ ಹಳೇ ಕಟ್ಟಡ,
ಮಿನಿ ವಿಧಾನಸೌಧದ ಬಳಿ, ಮಂಗಳೂರು - 575 001.
ಇಮೇಲ್ : **bearyacademyyahoo.in / www.karnatakabearysahithyaacademy.org**

Published By

The Registrar
KARNATAKA BEARY SAHITHYA ACADEMY
2nd Floor, Samarthya Soudha, Old Taluk Panchayath Office,
Mangaluru, Dakshina Kannada Dist.
Email : bearyacademy@yahoo.in
Website : www. karnatakabearysahithyaacademy.org
Office : 0824-2412297,4260038. Mobile : 7483946578

Copyright The Registrar, KARNATAKA BEARY SAHITHYA ACADEMY
No part of this book may be reproduced, stored in a retrieval system, or transmitted by arty means. electronic, mechanical, photocopying, recording. or otherwise, without the prior written permission of the publisher except as provided by Indian copyright law.

| | | |
|---|---|---|
| First Impression | : | 2020 |
| Copies | : | 400 |
| Paper used | : | 80GSM |
| Size | : | 17.5X24.5 CMS |
| DTP Designing | : | R.K. Enterprises<br>Kudroli, Mangaluru |
| Total Pages | : | 15+173 |
| Printed at | : | R.K. Enterprises<br>Kudroli, Mangaluru |
| Price | : | 400/- |

**ರಹೀಂ ಉಚ್ಚಿಲ್**
ಪ್ರಧಾನ ಸಂಪಾದಕರು, ಅಧ್ಯಕ್ಷರು
ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

**ಪೂರ್ಣಿಮಾ**
ಪ್ರಕಾಶಕರು, ರಿಜಿಸ್ಟ್ರಾರ್
ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

**ಹಂಝ ಮಲಾರ್,**
**ಜಲೀಲ್ ಮುಕ್ರಿ,**
**ಆಯಿಶಾ ಯು.ಕೆ.ಉಳ್ಳಾಲ**
ಸಂಪಾದಕ ಮಂಡಳಿ/ಪುಸ್ತಕ ಪ್ರಕಟನಾ ಸಮಿತಿಯ ಸದಸ್ಯರು

ಆಯ್ಕೆ ಸಮಿತಿಯ ಸದಸ್ಯರು

**ಬಿ.ಎ.ಮುಹಮ್ಮದ್ ಅಲಿ** (ಮಂಗಳೂರು ತಾಲೂಕು)
**ಎಂ ಅಹ್ಮದ್ ಬಾವಾ ಪಡೀಲ್** (ಮಂಗಳೂರು ತಾಲೂಕು)
**ಹನೀಫ್ ಹಾಜಿ ಗೋಳ್ತಮಜಲು** (ಬಂಟ್ವಾಳ ತಾಲೂಕು)
**ನೂರುದ್ದೀನ್ ಸಾಲ್ಮರ** (ಪುತ್ತೂರು ತಾಲೂಕು)
**ಕೆ.ಕೆ.ಶಾಹುಲ್ ಹಮೀದ್** (ಬೆಳ್ತಂಗಡಿ ತಾಲೂಕು)
**ಇಬ್ರಾಹೀಂ ಗೂನಡ್ಕ** (ಸುಳ್ಯ ತಾಲೂಕು)
**ಸಲೀಂ ಹಂಡೇಲು** (ಮೂಡುಬಿದಿರೆ ತಾಲೂಕು)
**ಯಾಕೂಬ್ ಖಾದರ್ ಗುಲ್ವಾಡಿ** (ಉಡುಪಿ ಜಿಲ್ಲೆ)
**ಬಿ.ಎ.ಸಂಶುದ್ದೀನ್ ಮಡಿಕೇರಿ** (ಕೊಡಗು ಜಿಲ್ಲೆ)
**ಬಿ.ಎ.ಜಮಾಲುದ್ದೀನ್** (ಹಾಸನ ಜಿಲ್ಲೆ)
**ಮುಹಮ್ಮದ್ ಕರಂಬಾರ್** (ಚಿಕ್ಕಮಗಳೂರು ಜಿಲ್ಲೆ)
**ಸಾದಾತ್ ಶಿವಮೊಗ್ಗ** (ಶಿವಮೊಗ್ಗ ಜಿಲ್ಲೆ)
**ಅಬ್ದುಲ್ ಹಮೀದ್ ಅನ್ಸಾರಿ** (ಮೈಸೂರು ಜಿಲ್ಲೆ)
**ಅತ್ತೂರು ಚೈಯ್ಯಬ್ಬ** (ಬೆಂಗಳೂರು ಜಿಲ್ಲೆ)
**ಹರ್ಷದ್ ವರ್ಕಾಡಿ** (ಕಾಸರಗೋಡು ಜಿಲ್ಲೆ)
**ರಹೀಂ ಸಚ್ಚರಿಪೇಟೆ** (ಮುಂಬೈ)
**ಮುಹಮ್ಮದ್ ಅಲಿ ಉಚ್ಚಿಲ್** (ಅಬುಧಾಬಿ)
**ಎಂ.ಇ.ಮೂಳೂರು** (ದುಬೈ)
**ಝಕರಿಯಾ ಜೋಕಟ್ಟೆ** (ಸೌದಿ ಅರೇಬಿಯಾ)
**ಶರ್ಫುದ್ದೀನ್ ಬಣಕಲ್** (ಕುವೈತ್)
**ಅಬ್ದುಲ್ಲಾ ಮೋನು** (ಕತರ್)
**ಅನ್ಸಾರ್ ಕಾಟಿಪಳ್ಳ** (ಮಸ್ಕತ್)
**ಸಫ್ವಾನ್ ಶಾ** (ಬಹರೈನ್)



**ರಹೀಂ ಉಚ್ಚಿಲ್**

ಪ್ರಧಾನ ಸಂಪಾದಕರು,
ಅಧ್ಯಕ್ಷರು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ



**ಪೂರ್ಣಿಮಾ**

ಪ್ರಕಾಶಕರು, ರಿಜಿಸ್ಟ್ರಾರ್
ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ



**ಹಂಝ ಮಲಾರ್**



**ಜಲೀಲ್ ಮುಕ್ರಿ**



**ಆಯಿಶಾ ಯು.ಕೆ.ಉಳ್ಳಾಲ**

ಸಂಪಾದಕ ಮಂಡಳಿ/ಪುಸ್ತಕ ಪ್ರಕಟನಾ ಸಮಿತಿಯ ಸದಸ್ಯರು

# ಆಯ್ಕೆ ಸಮಿತಿಯ ಸದಸ್ಯರು



**ಝಕರಿಯಾ ಜೋಕಟ್ಟೆ**
(ಸೌದಿ ಅರೇಬಿಯಾ)



**ಎಂ. ಇ. ಮೂಳೂರು**
(ದುಬೈ)




**ಮುಹಮ್ಮದ್ ಅಲಿ ಉಚ್ಚಿಲ್**
(ಅಬುಧಾಬಿ)



**ಮುಹಮ್ಮದ್ ಕರಂಬಾರ್**
(ಚಿಕ್ಕಮಗಳೂರು ಜಿಲ್ಲೆ)



**ಎಂ ಅಹ್ಮದ್ ಬಾವಾ ಪಡೀಲ್**
(ಮಂಗಳೂರು ತಾಲೂಕು)



**ಹನೀಫ್ ಹಾಜಿ ಗೋಳ್ತಮಜಲು**
(ಬಂಟ್ವಾಳ ತಾಲೂಕು)



**ಕೆ.ಕೆ.ಶಾಹುಲ್ ಹಮೀದ್**
(ಬೆಳ್ತಂಗಡಿ ತಾಲೂಕು)



**ಬಿ. ಎ. ಮುಹಮ್ಮದ್ ಅಲಿ**
(ಮಂಗಳೂರು ತಾಲೂಕು)



**ಬಿ.ಎ.ಸಂಶುದ್ದೀನ್ ಮಡಿಕೇರಿ**
(ಕೊಡಗು ಜಿಲ್ಲೆ)



**ಶರ್ಫುದ್ದೀನ್ ಬಣಕಲ್**
(ಕುವೈತ್)



**ಅತ್ತೂರು ಚೈಯ್ಯಬ್ಬ**
(ಬೆಂಗಳೂರು ಜಿಲ್ಲೆ)



**ಅಬ್ದುಲ್ಲಾ ಮೋನು**
(ಕತರ್)

# ಆಯ್ಕೆ ಸಮಿತಿಯ ಸದಸ್ಯರು



**ನೂರುದ್ದೀನ್ ಸಾಲ್ಮರ**
(ಪುತ್ತೂರು ತಾಲೂಕು)




**ಅಬ್ದುಲ್ ಹಮೀದ್ ಅನ್ಸಾರಿ**
(ಮೈಸೂರು ಜಿಲ್ಲೆ)



**ಬಿ.ಎ.ಜಮಾಲುದ್ದೀನ್**
(ಹಾಸನ ಜಿಲ್ಲೆ)



**ಇಬ್ರಾಹೀಂ ಗೂನಡ್ಕ**
(ಸುಳ್ಯ ತಾಲೂಕು)



**ಸಲೀಂ ಹಂಡೇಲು**
(ಮೂಡುಬಿದಿರೆ ತಾಲೂಕು)



**ಹರ್ಷದ್ ವರ್ಕಾಡಿ**
(ಕಾಸರಗೋಡು ಜಿಲ್ಲೆ)



**ಯಾಕೂಬ್ ಖಾದರ್ ಗುಲ್ವಾಡಿ**
(ಉಡುಪಿ ಜಿಲ್ಲೆ)



**ರಹೀಂ ಸಚ್ಚರಿಪೇಟೆ**
(ಮುಂಬೈ)



**ಅನ್ಸಾರ್ ಕಾಟಿಪಳ್ಳ**
(ಮಸ್ಕತ್)



**ಸಾದಾತ್ ಶಿವಮೊಗ್ಗ**
(ಶಿವಮೊಗ್ಗ ಜಿಲ್ಲೆ)



**ಸಫ್ವಾನ್ ಶಾ**
(ಬಹರೈನ್)

# ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸದಸ್ಯರು



**ರಹೀಂ ಉಚ್ಚಿಲ್**
ಅಧ್ಯಕ್ಷರು



**ಪೂರ್ಣಿಮಾ**
ರಿಜಿಸ್ಟ್ರಾರ್



**ರಾಜೇಶ್ ಜಿ.**
ಅರ್ಥ ಸದಸ್ಯರು

## ಸದಸ್ಯರು



ಶ್ರೀ ರೂಪೇಶ್ ಎನ್ ಉಚ್ಚಿಲ್



ಶ್ರೀ ಮುರಳಿರಾಜ್



ಶ್ರೀಮತಿ ಸುರೇಖ ಜಯಪ್ರಕಾಶ್



ಶ್ರೀಮತಿ ಚಂಚಲಾಕ್ಷಿ



ರಾಧಾಕೃಷ್ಣ ನಾವಡ



ಕು। ರೂಪಶ್ರೀ ವರ್ಕಾಡಿ



ಶ್ರೀ ನಝೀರ್ ಪೊಲ್ಯ



ಶ್ರೀ ಶಂಶೀರ್ ಬುಡೋಳಿ



ಜಲೀಲ್ ಮುಕ್ರಿ



ನಫೀಸ ಮಿಸ್ರಿಯಾ



ಅಬ್ದುಲ್ ರಝಾಕ್ ಸಾಲ್ಮರ


| ಕ್ರ.ಸಂ. | ಸಾಧಕರ ಹೆಸರು | ಪುಟ ಸಂಖ್ಯೆ |
|---|---|---|
| 1. | ಸೌಹಾರ್ದ ಸಮಾಜ ಕಟ್ಟಿದ ಮುಲ್ಕಿಯ ಬಪ್ಪ ಬ್ಯಾರಿ | 1 |
| 2. | ರಾಜಕೀಯ ಮುತ್ಸದ್ದಿತನ ಮೆರೆದ ಬಿ.ಎ.ಮೊಹಿದಿನ್ | 2 |
| 3. | ಕನ್ನಡದ ಕೋಗಿಲೆ ಬಿ.ಎಂ. ಇದಿನಬ್ಬ | 5 |
| 4. | ತತ್ವ ನಿಷ್ಠೆಗೆ ಸಾಕ್ಷಿಯಾದ ಯು.ಟಿ.ಫರೀದ್ | 8 |
| 5 | ಅದ್ವಿತೀಯ ಮಾತುಗಾರ ಬಿ.ಎ. ಉಮರಬ್ಬ | 10 |
| 6. | ಬ್ಯಾರಿ ಸಮುದಾಯದ ಪ್ರಥಮ ಸಂಯುಕ್ತ ಖಾಝಿ ಬೇಕಲ್ ಉಸ್ತಾದ್ | 13 |
| 7. | ಬ್ಯಾರಿ ಸಮುದಾಯಕ್ಕೆ ಕೀರ್ತಿ ತಂದ ಜಡ್ಜ್ ಉಳ್ಳಾಲ ಹಮ್ಮಬ್ಬ | 15 |
| 8. | ಬ್ಯಾರಿ ಸಮುದಾಯದ ಹಿರಿಮೆ ಹೆಚ್ಚಿಸಿದ ಜಡ್ಜ್ ಅಬ್ದುರ್ರಹೀಂ ಅಹ್ಮದ್ ಮಂಗಳೂರು | 16 |
| 9. | ಸ್ವಾತಂತ್ರ್ಯ ಹೋರಾಟಗಾರ ಡಾ.ಎಫ್.ಎಚ್.ಒಡೆಯರ್ | 17 |
| 10. | ಶಿಕ್ಷಣಕ್ಕೆ ಬೆಳಕು ಬೀರಿದ ಸಿ. ಮಹ್ಮೂದ್ ಮಂಗಳೂರು | 18 |
| 11. | ಖಾನ್ ಬಹದ್ದೂರ್ ಬಿರುದು ಪಡೆದ ಅಬೂಬಕರ್ ಹಾಜಿ ಯಾನೆ ಬಾವಾ ಹಾಜಿ | 20 |
| 12. | ಸಾಮಾಜಿಕ ಧುರೀಣ ಮೊಹಿದ್ದಿನ್ ಕುಟ್ಟಿ ಹಾಜಿ ಮೂಡಿಗೆರೆ | 21 |
| 13. | ಸಮಾಜಮುಖಿಯಾಗಿದ್ದ ಚಕ್ಕಮಕ್ಕಿ ಹಾಜಿ ಕೆ.ಅಬ್ದುಲ್ ರೆಹಮಾನ್ | 23 |
| 14. | ಸಾಮಾಜಿಕ ಮುಖಂಡ ಹಾಜಿ ಎಂ.ಎ.ಖಾದರ್ ಬೇಲೂರು | 25 |
| 15. | ಆದರ್ಶ ಶಿಕ್ಷಕ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಕೋಡಿ ಕುಂದಾಪುರ | 26 |
| 16. | ಪ್ರಖ್ಯಾತ ಬಿಲ್ಡರ್ ಐ. ಮುಹಮ್ಮದ್ ಹಾಜಿ (ಇಲಂತಿಲ) ಮೈಸೂರು | 29 |
| 17. | ಉಳ್ಳಾಲದ ಶಿಲ್ಪಿ ಹಾಜಿ ಯು.ಕೆ. ಇಬ್ರಾಹೀಂ | 30 |
| 18. | ತುಂಬೆಯ ಬೆಳಕು ಬಿ.ಅಹ್ಮದ್ ಹಾಜಿ ಮುಹಿಯುದ್ದೀನ್ | 32 |
| 19. | ಜನಪ್ರಿಯ ನಾಯಕ ಹಾಜಿ ಮುಹಮ್ಮದ್ ಕಮಾಲ್ ಮಂಗಳೂರು | 34 |
| 20. | ಕೃಷಿ ಜಮೀನ್ದಾರ ಬಜಪೆ ಜಕ್ರಿ ಬ್ಯಾರಿ | 36 |
| 21. | ಜನಮನದಲ್ಲಿ ಅಚ್ಚಳಿಯದೆ ಉಳಿದ ಸಾಲ್ಮರ ಅಬ್ಬು ಹಾಜಿ | 38 |
| 22. | ಸಮುದಾಯಕ್ಕೆ ಜೀವ ತುಂಬಿದ ಸಿ.ಅಬ್ದುಲ್ ಹಮೀದ್ ಮಂಗಳೂರು | 40 |
| 23. | ಮಡಿಕೇರಿಯ ಚಿತ್ರಣ ಬದಲಿಸಿದ್ದ ಪಿ.ಎ.ಮೊಹಿದಿನ್ ಮಡಿಕೇರಿ | 41 |
| 24. | ದಕ್ಷಿಣ ಕನ್ನಡದಲ್ಲಿ ಹುಟ್ಟಿ ಕೊಡಗಿನಲ್ಲಿ ಮೆರೆದ ಸಾಯಿರಾಕ ಮಡಿಕೇರಿ | 43 |
| 25. | ರಾಜಮನೆತನದ ಹಿರಿಮೆ ಹೆಚ್ಚಿಸಿದ್ದ ಮಮ್ಮಾಲಿ ಪಟೇಲ್ ಐವತ್ತೊಕ್ಲು | 44 |
| 26. | ಮಂಗಳೂರಿನ ಪ್ರಮುಖ ವರ್ತಕ ಬಿ. ಮುಹಿಯ್ಯುದ್ದೀನ್ (ಮೊಯ್ದಿನ್) ಹಾಜಿ | 46 |
| 27. | ಪ್ರಮುಖ ವರ್ತಕ ಹಾಜಿ ಕೆ. ಅಬ್ದುಲ್ ಖಾದರ್ ಬಾವಾ ಮಂಗಳೂರು | 47 |
| 28. | ಮಂಗಳೂರಿನ ಪ್ರಮುಖ ವರ್ತಕ ದಿಲ್ ದಲ್ಲಾಳ್ ಮಮ್ಮುಂಞಾಕ | 49 |
| 29. | ಪ್ರಖ್ಯಾತ ಕಾರ್ಮಿಕ ನೇತಾರ: ಸಿ.ಕುಂಞಿಪಕ್ಕಿ ಹಾಜಿ ಮಂಗಳೂರು | 50 |
| 30. | ಜಾಗೀದಾರಿಕೆ ವಿರುದ್ಧ ಧ್ವನಿ ಎತ್ತಿದ್ದ ಹಾಜಿ ಎಂ.ಕುಂಞಾಮು | 52 |
| 31. | ಸಮಾಜ ಸೇವಕ ಬಿ.ಎಂ. ಹಸನ್ ಹಾಜಿ ಮಂಗಳೂರು | 53 |
| 32. | ಅಸಾಧಾರಣ ವ್ಯಕ್ತಿತ್ವದ ಕೆ.ಎಂ.ಬ್ಯಾರಿ ಬೆಂಗಳೂರು | 54 |

| ಕ್ರ.ಸಂ. | ಸಾಧಕರ ಹೆಸರು | ಪುಟ ಸಂಖ್ಯೆ |
|---|---|---|
| 33. | ಪ್ರಖ್ಯಾತ ಕ್ರಿಮಿನಲ್ ನ್ಯಾಯವಾದಿ ಯೂಸುಫ್ ಹೈದರ್ | 55 |
| 34. | ರಾಜಿ ಪಂಚಾಯತಿಗೆಗೆ ಹೆಸರಾಗಿದ್ದ ಸಜಿಪ ಕಾಟು ಬಾವ | 57 |
| 35. | ಉಳುವವರಿಗೆ ಒಡೆಯರಾಗಲು ಸಹಕರಿಸಿದ್ದ ಕೆ.ಕೆ. ಅಬ್ದುಲ್ಲ | 58 |
| 36. | ನಿಷ್ಕಳಂಕ ರಾಜಕಾರಣಿ ಕೆ.ಪಿ. ಅಬ್ದುಲ್ಲಾ ಪುತ್ತೂರು | 59 |
| 37. | ರಾಜಕಾರಣದಲ್ಲಿ ಮಿಂಚಿದ್ದ ಕಲ್ಲಡ್ಕ ಇಸ್ಮಾಯಿಲ್ | 60 |
| 38. | ಸಮಾಜ ಸೇವಕ ಮುಹಮ್ಮದ್ ಹುಸೈನ್ ಮಂಗಳೂರು | 61 |
| 39. | ಶಿಕ್ಷಕ–ಸಾಹಿತಿ–ಪತ್ರಕರ್ತ–ವಿದ್ವಾಂಸ ಅಹ್ಮದ್ ನೂರಿ | 62 |
| 40. | ಬ್ಯಾರಿ ಸಂಶೋಧಕ ಡಾ.ಎ.ವಹಾಬ್ ದೊಡ್ಡಮನೆ | 63 |
| 41. | ಶಿಕ್ಷಣ ತಜ್ಞ ಪಿ.ಎ.ಖಾದರ್ ಕುಕ್ಕಾಡಿ | 64 |
| 42. | ಕವಿ, ವಿದ್ವಾಂಸ, ತತ್ವಜ್ಞಾನಿ ಖಾಝಿ ತಲಪಾಡಿ ಬಾಪಕುಂಞಿ ಮುಸ್ಲಿಯಾರ್ | 65 |
| 43. | ಧಾರ್ಮಿಕ ವಿದ್ವಾಂಸ ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ | 66 |
| 44. | ಧಾರ್ಮಿಕ ವಿದ್ವಾಂಸ ಪಿ.ಎ. ಅಹ್ಮದ್ ಮುಸ್ಲಿಯಾರ್ ಪರಿಯಕ್ಕಳ | 68 |
| 45. | ಅನಾಥರ ಪಾಲಕ: ಶೈಖುನಾ ಪಿ.ಎಂ. ಅಬ್ಬಾಸ್ ಮುಸ್ಲಿಯಾರ್ ಮಂಜನಾಡಿ | 70 |
| 46. | "ಬೈತಾರ್ ಉಸ್ತಾದ್" ಖ್ಯಾತಿಯ ಬಿ.ಮುಹಮ್ಮದ್ ಮುಸ್ಲಿಯಾರ್ | 72 |
| 47. | ವಿದ್ವತ್ ಲೋಕದ ನಕ್ಷತ್ರ: ಅಹ್ಮದ್ ಬಾವ ಮುಸ್ಲಿಯಾರ್ ಉಳ್ಳಾಲ | 73 |
| 48. | ಇಸ್ಲಾಮೀ ಜ್ಞಾನ ಪ್ರಚಾರಕ: ಡಾ.ಕೆ.ಎಂ.ಶಾಹ್ ಮುಸ್ಲಿಯಾರ್ | 74 |
| 49. | ರಾತ್ರಿ ಶಾಲೆಯ ಪ್ರೇರಕ ಶಕ್ತಿ ಹಾಜಿ ಖಾಲಿದ್ ಮುಹಮ್ಮದ್ ಮಂಗಳೂರು | 75 |
| 50. | ಕಾಟಿಪಳ್ಳದ ಹಿರಿಮೆ ಹೆಚ್ಚಿಸಿದ್ದ ಹಾಜಿ ಪಿ.ಹಸನಬ್ಬ ಮಾಸ್ಟರ್ | 77 |
| 51. | ಸಮಾಜ ಸೇವಕ ಕೌನ್ಸಿಲರ್ ಕೆ.ಎಂ.ಮುಹಮ್ಮದ್ ಕೋಡಿ ಕುಂದಾಪುರ | 79 |
| 52. | ಬ್ರಿಟಿಷ್ ಸರಕಾರದ ಉನ್ನತ ಅಧಿಕಾರಿ ವಿ. ರಮ್ಲಾನ್ ಹಾಜಿ | 80 |
| 53. | ಪರಿಸರವಾದಿ–ನಾಟಿವೈದ್ಯ ಹರೇಕಳ ಮೊಯ್ದಿನ್ | 81 |
| 54. | ಗ್ರಾಮೀಣ ಭಾಗದ ಶಿಕ್ಷಣ ಪ್ರೇಮಿ ಹಾಜಿ ಎಂ.ಪಿ. ಇಸ್ಮಾಯಿಲಬ್ಬ ಪಾರೆ | 82 |
| 55. | ರಾಷ್ಟ್ರಮಟ್ಟದಲ್ಲಿ ಮಿಂಚಿದ ಪ್ರಥಮ ಬ್ಯಾರಿ ಕ್ರಿಕೆಟಿಗ ಅಬ್ದುಲ್ ರಶೀದ್ ಮಂಗಳೂರು | 83 |
| 56. | ಅನಾಥ ಮಕ್ಕಳ ಪರಿಚಾರಕ ಎಸ್. ಮಮ್ಮುಂಞಿ ಹಾಜಿ ಕುಂಬ್ರ | 84 |
| 57. | ಉಲಮಾಗಳ ಮನಗೆದ್ದಿದ್ದ ಉಸ್ಮಾನ್ ಹಾಜಿ ಮಿತ್ತೂರು | 86 |
| 58. | ಸಮಾಜ ಸೇವಕ ಎಸ್. ಉಮ್ಮರ್ ಶಾಫಿ ಹಾಜಿ ಪುತ್ತೂರು | 87 |
| 59. | ಸಾಹಿತ್ಯ ಪೋಷಕ ಹಾಜಿ ಜಿ. ಅಬ್ದುಲ್ ಖಾದರ್ ಗೋಳ್ತಮಜಲು | 89 |
| 60. | ಕೊಡುಗೈದಾನಿ ಹಾಜಿ ಬಿ.ಹುಸೈನ್ ಕೊಡಾಜೆ | 91 |
| 61. | ಬ್ಯಾರಿ ಸಮುದಾಯದ ಪ್ರಥಮ ಮೇಯರ್ ಬಿ. ಅಬ್ದುಲ್ ಖಾದರ್ ಹಾಜಿ ಮಂಗಳೂರು | 93 |
| 62. | ಬ್ಯಾರಿ ಸಮುದಾಯದ ಪ್ರಥಮ ಜಿಲ್ಲಾ ಪಂಚಾಯತ್ ಅಧ್ಯಕ್ಷ ಅಹ್ಮದ್ ಕುಂಞಿ ಮಂಜೇಶ್ವರ | 94 |
| 63. | ಬ್ಯಾರಿ ಸಮುದಾಯದ ಪ್ರಥಮ ತಾಲೂಕು ಪಂಚಾಯತ್ ಅಧ್ಯಕ್ಷ ಎಂ.ಎಸ್. ಅಬೂಬಕರ್ | 95 |
| 64. | ದ.ಕ.ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಪ್ರಥಮ ಅಧ್ಯಕ್ಷ ಡಾ.ಎಂ.ಎಂ.ಸಾಲಿಹ್ | 96 |

| ಕ್ರ.ಸಂ. | ಸಾಧಕರ ಹೆಸರು | ಪುಟ ಸಂಖ್ಯೆ |
|---|---|---|
| 65. | ಮುಸ್ಲಿಂ ಲೇಖಕರ ಸಂಘದ ಪ್ರಥಮ ಅಧ್ಯಕ್ಷ ಸಿ.ಕೆ.ಹುಸೈನ್ | 97 |
| 66. | ಸಂಪಾದಕ–ಸಂಘಟಕ–ಚಿಂತಕ ಇಬ್ರಾಹೀಮ್ ಸಈದ್ | 98 |
| 67. | ಅನುವಾದವನ್ನೇ ಕಾಯಕವನ್ನಾಗಿಸಿಕೊಂಡಿದ್ದ ಪಿ.ನೂರ್ ಮುಹಮ್ಮದ್ | 100 |
| 68. | ವಿದ್ಯಾದಾಹಿ ಹಾಜಿ ಕೆ.ಅಚ್ಚಬ್ಬ ಮಾಸ್ಟರ್ ಮೂಲರಪಟ್ನ | 102 |
| 69. | ಹೂ ಮನಸ್ಸಿನ ಭಾವಜೀವಿ ಅಬ್ದುಲ್ ರಹೀಮ್ ಟೀಕೆ | 103 |
| 70. | ಪಟೇಲರ ಕಾಲದ ಪಂಚಾಯತಿಗೆದಾರ ಮಡ್ಮಣ್ ಅಬೂಬಕ್ಕರ್ ಬ್ಯಾರಿ | 104 |
| 71. | ಸಾಮಾಜಿಕ ಧುರೀಣ ಅಬ್ಬಾಸ್ ಹಾಜಿ ಕೆಮ್ಮಾರ | 105 |
| 72. | ಸಮಾಜ ಸೇವಕ ಹಾಜಿ ಎಸ್. ಇಬ್ರಾಹೀಂ ಕಮ್ಮಾಡಿ | 106 |
| 73. | ಮುಲ್ಕಿಯ ಸುಲ್ತಾನ ನೂರ್ ಮುಹಮ್ಮದ್ | 107 |
| 74. | ಸಮಾಜ ಸೇವಕ: ಹಾಜಿ ಹಮೀದ್ ಕಂದಕ್ | 108 |
| 75. | ಗ್ರಾಮೀಣ ಜನರ ಪ್ರೇರಕ ಶಕ್ತಿ ಹಾಜಿ ಟಿ.ಹುಸೈನ್ ಗುರುಪುರ | 109 |
| 76. | ಬೀಡಿ ಕಾರ್ಮಿಕರ ಧ್ವನಿಯಾಗಿದ್ದ ಅಬ್ದುಲ್ಲಾ ನಯಾಪಟ್ನ | 110 |
| 77. | ಸೋಮೇಶ್ವರ ಉಚ್ಚಿಲದ ಹೆಮ್ಮೆಯ ಪುತ್ರ: ಜಿ.ಎಂ.ಹಸೈನಾರ್ | 112 |
| 78. | ಸಮಾಜ ಸೇವಕ ಇಸ್ಮಾಯೀಲ್ ಹಾಜಿ ಉಚ್ಚಿಲ | 114 |
| 79. | ಶಿಕ್ಷಣಕ್ಕೆ ಪ್ರೇರಣೆ ನೀಡಿದ್ದ ಶಾಬಾನ್ ಮಾಸ್ಟರ್ ಮೂಳೂರು | 115 |
| 80. | ಸಮಾಜ ಸೇವಕ ಮಹಮೂದ್ ಶೇಖಬ್ಬ ಮೂಳೂರು | 116 |
| 81. | ನಾಟಿವೈದ್ಯೆ ಬೀಪಾತುಮ್ಮ ಯಾನೆ ಪೊಡಿಮ್ಮ ಇಂಞ್ಞ ಕೂರ್ನಡ್ಕ | 117 |
| 82. | ಎಲೆಮರೆಯ ಕಾಯಿಯಂತಹ ಪ್ರತಿಭೆ: ಹವ್ವಾಕುಂಞಿ ಉಪ್ಪಿನಂಗಡಿ | 118 |
| 83. | ಸಮಾಜ ಸೇವಕಿ ಆಮಿನಮ್ಮ ಬಸ್ತಿಪಡ್ಪು ಉಳ್ಳಾಲ | 120 |
| 84. | ಸಮಾಜ ಸೇವಕಿ ರುಖಿಯಾದ ಮಂಚಿಲ ಉಳ್ಳಾಲ | 121 |
| 85. | ಮಾತೃಹೃದಯದ ಲೇಖಕಿ ರಝಿಯಾ ಬೆಳ್ಳಾಯರು | 123 |
| 86. | ಆರ್ಯುವೇದ ಪಂಡಿತ: ಹುಸೈನ್ ಕುಂಞಿ ವೈದ್ಯರ್ ವಿಟ್ಲ | 124 |
| 87. | ಕರ್ಮಭೂಮಿಗೆ ಕೀರ್ತಿ ತಂದ ಡಾ.ಹಮ್ಮಬ್ಬ ಪಕ್ಕಲಡ್ಕ | 126 |
| 88. | ಆಯುರ್ವೇದಿಕ್ ವೈದ್ಯ ಪಂಡಿತ್ ಹಮ್ಮಬ್ಬ ಉಳ್ಳಾಲ | 128 |
| 89. | ನಾಟಿವೈದ್ಯ ಮೊಂಟೆಪದವು ಕೆ.ಎಲ್. ಉಮರ್‌ಕುಂಞಿ ಹಾಜಿ | 129 |
| 90. | ಕಾರ್ಮಿಕ ನಾಯಕ ಮೂಸಬ್ಬ ಪಕ್ಕಲಡ್ಕ | 130 |
| 91. | ಶಿಕ್ಷಣ ಪ್ರೇಮಿ ಹಾಜಿ ಮಾಸ್ಟರ್ ಮಹಮೂದ್ ಕೋಡಿ ಕುಂದಾಪುರ | 131 |
| 92. | ಹಾಡನ್ನೇ ಉಸಿರನ್ನಾಗಿಸಿದ್ದ ಇಬ್ರಾಹೀಂ ತಣ್ಣೀರುಬಾವಿ | 133 |
| 93. | ಮುಅಲ್ಲಿಮುಲ್ ಕುರ್‌ಆನ್ ಖ್ಯಾತಿಯ ಮುಹಮ್ಮದಾಲಿ ಬೋಳಾರ | 135 |
| 94. | ಕವಿ ಹೃದಯದ ಅಬ್ದುಲ್ ಹಮೀದ್ ವೇಣೂರು | 136 |
| 95. | ಸಮಾಜ ಸೇವಕ ಹಾಜಿ ಎಂ.ಕೆ. ಅಬ್ದುಲ್ಲಾ ಕುದ್ರೋಳಿ | 137 |
| 96. | ಪ್ರಥಮ ಬ್ಯಾರಿ ಫೋಟೋಗ್ರಾಫರ್ ಎಂ.ಶೇಖ್ ಮುಹಮ್ಮದ್ ಮಂಗಳೂರು | 138 |
| 97. | ಮುಂಬೈಯಲ್ಲಿ ಬ್ಯಾರಿ ಸಂಘಟನೆ ಸ್ಥಾಪಿಸಿದ್ದ ಸುಲೈಮಾನ್ ಅಮ್ಮದ್ ಕಾಪು ಮಲ್ಲಾರ್ | 139 |
| 98. | ಸಮಾಜ ಸೇವಕ ಹಾಜಿ ಅಬ್ಬಾಸ್ ಸಜಿಪ | 140 |
| 99. | ಸಮಾಜ ಸೇವಕ ಬಂಟ್ವಾಳ ಅಬ್ದುಲ್ ಖಾದರ್ ಬೈಕಂಪಾಡಿ | 141 |
| 100. | ಸ್ವಾತಂತ್ರ್ಯ ಹೋರಾಟಗಾರ ಬೊಳ್ಳಾಡಿ ಇಬ್ರಾಹೀಂ ಹಾಜಿ | 142 |
| 101. | ಬ್ಯಾರಿ ಭಾಷಣ ರಂಗದ ಭೀಷ್ಮ: ನೆಕ್ಕಿಲಾಡಿ ಇಸ್ಮಾಯೀಲ್ ಮುಸ್ಲಿಯಾರ್ | 144 |

| ಕ್ರ.ಸಂ. | ಸಾಧಕರ ಹೆಸರು | ಪುಟ ಸಂಖ್ಯೆ |
|---|---|---|
| 102. | ಬ್ಯಾರಿ ಭಾಷೆಯ ನಿರರ್ಗಳ ಭಾಷಣಕಾರ: ಟಿ.ಎಚ್.ಇಬ್ರಾಹಿಂ ಮದನಿ ತೆಕ್ಕಿಲ್ | 146 |
| 103. | ಹಿರಿಯ ವಿದ್ವಾಂಸ ಎಂ.ಎಸ್.ಮೂಸಾ ಮುಸ್ಲಿಯಾರ್ ಕಕ್ಕಿಂಜೆ | 147 |
| 104. | ಗುಲ್ವಾಡಿಯ ಬೆಲಿಯೆ ಉಸ್ತಾದ್: ಕುಂಞಿ ಅಹ್ಮದ್ ಮುಸ್ಲಿಯಾರ್ | 148 |
| 105. | ದಾಖಲಾತಿಯ ಮಹತ್ವ ಅರಿತಿದ್ದ ಹಾಜಿ ಎಂ.ಮುಹಮ್ಮದ್ ಸ್ವಾಲಿಹ್ ಕಾಟಿಪಳ್ಳ | 149 |
| 106. | "ಜೋಕಟ್ಟೆ ಉಸ್ತಾದ್" ಖ್ಯಾತಿಯ ಹಾಜಿ ಫಕ್ರುದ್ದೀನ್ ಮುಸ್ಲಿಯಾರ್ | 150 |
| 107. | ಸಾಲೆತ್ತೂರು ಎಂಬ ಕುಗ್ರಾಮ ಬೆಳಗಿಸಿದ್ದ ಮಮ್ಮುಂಞಿ ಉಸ್ತಾದ್ | 151 |
| 108 | ಮಣಿಪಾಲ ಉಸ್ತಾದ್ ಖ್ಯಾತಿಯ ಹಾಜಿ ಪಿ.ಕೆ. ಅಬ್ದುಲ್ ರಹ್ಮಾನ್ ಮುಸ್ಲಿಯಾರ್ | 152 |
| 109. | ದಫ್ ಉಸ್ತಾದ್ : ಹಾಜಿ ಅಬ್ದುಲ್ಲಾ ಮಂಡೆಕೋಲು ಸುಳ್ಯ | 154 |
| 110. | ದಫ್ ಹಾಡುಗಾರ: ಕೆ.ಇ. ಮುಹಮ್ಮದ್ ಕೋಡಿ ಕುಂದಾಪುರ | 155 |
| 111. | ತಾಲೀಮು ಉಸ್ತಾದ್: ಹಾಜಿ ಇಬ್ರಾಹೀಂ ಬಡ್ಡೂರು | 156 |
| 112. | ಯಕ್ಷಗಾನದಲ್ಲಿ ಮಿಂಚಿದ್ದ ಜೋಕಟ್ಟೆಯ ಗುತ್ತು ಬಿ. ಮುಹಮ್ಮದ್ | 157 |
| 113. | ಗಾಂಧಿ ಅಜ್ಜ ಖ್ಯಾತಿಯ ಎಂ. ಅಹ್ಮದ್ ಕುಂಞಿ ಮರಿಕ್ಕಳ | 158 |
| 114. | ಕಸ್ಬ ಬೆಂಗ್ರೆಯ ಶೈಕ್ಷಣಿಕ ಹರಿಕಾರ ಉಸ್ತಾದ್ ಕೆ.ಪಿ. ಇಸ್ಮಾಯಿಲ್ | 160 |
| 115. | ಕ್ರಾಂತಿಕಾರಿ ಗ್ರಾಮೀಣ ಶಿಕ್ಷಕ ಪಿ.ಎಂ. ಮೂಸಬ್ಬ ಮಾಸ್ಟರ್ ಮಂಜನಾಡಿ | 162 |
| 116. | ಬೀಡಿ ಕಾರ್ಮಿಕರ ಪಾಲಿನ ಹಿತೈಷಿ ಎಡಪದವು ಅಬ್ದುಲ್ ಖಾದರ್ ಹಾಜಿ | 163 |
| 117. | ಯುವಕರಿಗೆ ಶಕ್ತಿ ತುಂಬಿದ್ದ ಮುಹಮ್ಮದ್ ಬದ್ರುದ್ದೀನ್ | 164 |
| 118. | ನಿಷ್ಠಾವಂತ ಪೊಲೀಸ್ ಅಧಿಕಾರಿ ವಿಟ್ಲ ಮುಹಮ್ಮದ್ ಹಾಜಿ | 165 |
| 119. | ಮಾಧ್ಯಮ ಕ್ಷೇತ್ರದಲ್ಲಿ ಮಿಂಚಿದ್ದ ಬಿ.ಎಂ. ರಶೀದ್ ಉಪ್ಪಿನಂಗಡಿ | 166 |
| 120. | ಬಹುಮುಖ ಪ್ರತಿಭೆಯ ರಫೀಕ್ ಉಪ್ಪಿನಂಗಡಿ | 168 |
| 121. | ಕ್ಯಾಮರಾ ಕಣ್ಣಿನ ಕವಿ: ಅಹ್ಮದ್ ಅನ್ವರ್ ಮಂಗಳೂರು | 169 |
| 122. | ಅಚ್ಚರಿಯ ಕಥೆಗಾರ : ಫಕ್ರುದ್ದೀನ್ ಇರುವೈಲು | 170 |
| 123. | ಸಮಾಜ ಸೇವಕ ಅಬ್ದುಲ್ ಖಾದರ್ ಉಳ್ಳಾಲ | 171 |

# ಪ್ರಧಾನ ಸಂಪಾದಕರ ಮಾತು



ಕರ್ನಾಟಕ ಸರಕಾರ ಬ್ಯಾರಿ ಅಕಾಡೆಮಿಯನ್ನು ನೀಡಿದ ಬಳಿಕ ಎಲ್ಲಾ ಅಧ್ಯಕ್ಷರು ತಮ್ಮ ಅವಧಿಯಲ್ಲಿ ಹಲವಾರು ಅತ್ಯುತ್ತಮ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದಾರೆ. ಇದಕ್ಕಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ ಎಲ್ಲಾ ಅಧ್ಯಕ್ಷರಿಗೆ ಕೃತಜ್ಞತೆ ಹಾಗೂ ಅಭಿನಂದನೆ ಸಲ್ಲಿಸುತ್ತೇನೆ. ಅಕಾಡೆಮಿಯು ಕಲೆ, ಸಾಹಿತ್ಯ, ಸಂಸ್ಕೃತಿಯ ಹೆಸರಲ್ಲಿ ಬರೀ ನೃತ್ಯ, ನಾಟಕ ಅಥವಾ ಇತರ ಕಾರ್ಯಕ್ರಮಗಳ ಹೆಸರಲ್ಲಿ ಹಣವನ್ನು ದುಂದುವೆಚ್ಚ ಮಾಡುವುದು ಸರಿಯಲ್ಲ. ಬದಲಾಗಿ ಭಾಷೆಯನ್ನು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಅಕಾಡೆಮಿಕ್ ಆಗಿರುವ ಕೆಲಸ ಕಾರ್ಯಗಳಿಗೆ ಹೆಚ್ಚು ಒತ್ತು ಕೊಟ್ಟು ಈಗಿರುವ ಜನಾಂಗ ಹಾಗೂ ಮುಂದಿನ ತಲೆಮಾರು ಸದಾ ನೆನಪಿನಲ್ಲಿಡುವಂತೆ ಮಾಡಬೇಕೆಂಬುದೇ ನನ್ನ ಹಾಗೂ ನನ್ನ ತಂಡದ ಉದ್ದೇಶವಾಗಿದೆ. ನನ್ನ ಕನಸು ನನಸಾಗಲಿಲ್ಲ, ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಕ್ಷನಾದ ನಂತರ ಸಾವಿರ ವರ್ಷದ ಇತಿಹಾಸವಿರುವ ಬ್ಯಾರಿ ಭಾಷೆಗೆ ಲಿಪಿ ಇಲ್ಲ ಎಂಬ ಕೊರಗನ್ನು ನಿವಾರಿಸುವ ಸಲುವಾಗಿ ಅನುಭವಿ ತಜ್ಞರ ಸಮಿತಿಯನ್ನು ರಚಿಸಿ ಬ್ಯಾರಿ ಭಾಷೆಗೆ ಶ್ರೀಮಂತಿಕೆಯನ್ನು ಕೊಡುವ ಸಲುವಾಗಿ ಈಗಾಗಲೇ ನೂತನ ಲಿಪಿ ಹಾಗೂ ಕ್ಯಾಲೆಂಡರನ್ನು ತಯಾರಿಸಿ ಲೋಕಾರ್ಪಣೆ ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುವ ಐತಿಹಾಸಿಕ ಹೆಜ್ಜೆಯನ್ನಿಟ್ಟ ಸಂತೋಷ ಮತ್ತು ಸಂತೃಪ್ತಿ ನಮಗಿದೆ. ಈ ನೂತನ ಲಿಪಿ ಲೋಕಾರ್ಪಣೆಗೊಂಡ ಕಾರಣದಿಂದ ಜನಗಣತಿಯಲ್ಲಿ, ದೂರದರ್ಶನದಲ್ಲಿ, ಆಕಾಶವಾಣಿಯಲ್ಲಿ, ಮುಂದಿನ ಹಂತದಲ್ಲಿ 8ನೇ ಪರಿಚ್ಛೇದಕ್ಕೆ ಸೇರ್ಪಡೆ, ಶಾಸ್ತ್ರೀಯ ಸ್ಥಾನಮಾನ, ರಾಜ್ಯದ ತೃತೀಯ ಅಧಿಕೃತ ಭಾಷೆ, ಪಠ್ಯ ಪುಸ್ತಕಗಳಲ್ಲಿ ಸೇರ್ಪಡೆ  ಇವೆಲ್ಲ ಈ ಲಿಪಿಯ ಕಾರಣದಿಂದಾಗಿ ಜಾರಿಗೆ ಬಂದಲ್ಲಿ ಮುಂದಿನ ತಲೆಮಾರು ನಮ್ಮ ಈ ಸಾಧನೆಯನ್ನು ಕೊಂಡಾಡುವಾಗ ನಾವು ಜೀವಂತವಾಗಿ ಇಲ್ಲದಿದ್ದರೂ ನಾವು ಮಾಡಿದ ಸಾಧನೆಯ ಮಹತ್ವ ಮಾತ್ರ ಮುಂದಿನ ತಲೆಮಾರು ಕೊಂಡಾಡುವುದು ಖಂಡಿತ. (ಇನ್‌ಶಾ ಅಲ್ಲಾಹ್)

ಈ ಮಧ್ಯೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದೇಶಗಳಲ್ಲಿ ಅಳಿದು ಹೋಗುವ ಭಾಷೆಯ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಬ್ಯಾರಿ–ಕನ್ನಡ–ಇಂಗ್ಲಿಷ್–ಹಿಂದಿ–ರೋಮನ್–ಐಪಿ ಲಿಪಿಯನ್ನೊಳಗೊಂಡ ಶಬ್ಧಕೋಶವನ್ನು ಬಿಡುಗಡೆ ಮಾಡಿ ಬ್ಯಾರಿ ಭಾಷೆಯ ಕಂಪು ವಿಶ್ವದೆಲ್ಲೆಡೆ ಬ್ಯಾರಿಯೇತರ ವಿದ್ಯಾರ್ಥಿಗಳಿಗೂ ಪಸರಿಸಿದ್ದೇವೆ. ಈ ರೀತಿ ಹಲವು ಯೋಜನೆಗಳನ್ನು ಮಾಡಿದ್ದೇವೆ. ಮಾಡುತ್ತಲಿದ್ದೇವೆ.

ಬ್ಯಾರಿ ಭಾಷೆ, ಕಲೆ, ಸಾಹಿತ್ಯ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ವ್ಯಾಪಾರ, ಉದ್ಯಮ, ವೈದ್ಯಕೀಯ, ನ್ಯಾಯಾಂಗ, ಪತ್ರಿಕೋದ್ಯಮ, ಧಾರ್ಮಿಕ, ಸಿನಿಮಾ, ಚಿತ್ರರಂಗ, ನಾಟಕ, ಧಫ್, ಬುರ್ದಾ, ಕೋಲ್ಕಲಿ, ಚಿತ್ರಕಲೆ, ಸರಕಾರಿ ನೌಕರಿ, ಐಪಿಎಸ್, ಐಎಎಸ್, ರಕ್ಷಣಾ ಕ್ಷೇತ್ರ, ಮುಂತಾದ ನೂರಾರು ಕ್ಷೇತ್ರದಲ್ಲಿ ಸಾಧನೆ ಮಾಡಿದ  ಬ್ಯಾರಿ ಭಾಷಿಕ ಸಮುದಾಯದ ಗತಿಸಿಹೋದ ವ್ಯಕ್ತಿಗಳ ಪೈಕಿ ಹಲವಾರು ಮಂದಿಯ ಹೆಸರು ಇಂದಿಗೂ ಯುವ ಪೀಳಿಗೆಯ ನೆನಪಲ್ಲಿ ಉಳಿದಿಲ್ಲ. ಕೆಲವು ಹಿರಿಯರ ಬಾಯಲ್ಲಿ ಮಾತ್ರ ಇವರ ಹೆಸರುಗಳನ್ನು ಪ್ರಸಕ್ತ ದಿನಗಳಲ್ಲಿ ನಾವು ಕೇಳಿ ತಿಳಿಯಬಹುದಾಗಿದೆ. ಇಂತಹ ನೂರಾರು ಸಾಧಕರು ಮರೆಯಾಗಿ ಇತಿಹಾಸದ ಪುಟದಲ್ಲಿ ಸೇರಬಾರದು, ಸೂರ್ಯ ಚಂದ್ರರು ಇರುವಷ್ಟು ತನಕ ಈ ಹೆಸರುಗಳು ಅಜರಾಮರವಾಗಿ ಉಳಿಯಬೇಕು. ಸಾವಿರಾರು ವರ್ಷಗಳ ಹಿಂದೆ ಇಂತಹ ವ್ಯಕ್ತಿಗಳು ಬ್ಯಾರಿ ಭಾಷಿಕರ ಮಧ್ಯೆ ವಾಸವಾಗಿದ್ದರೂ, ಸಾಧನೆಗಳನ್ನು ಮಾಡಿ ಗತಿಸಿ ಹೋಗಿದ್ದಾರೆ ಎಂಬ ನಿಟ್ಟಿನಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯು ಇಂತಹ ಗತಿಸಿಹೋದ ಮಹಾನ್ ಸಾಧಕರ ಹೆಸರು, ಅವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವರ ಸಾಧನೆ, ಜೀವನ ಚರಿತ್ರೆಯ ಸತ್ಯ ವಿಚಾರಗಳನ್ನೊಳಗೊಂಡ ಒಂದು ಗ್ರಂಥ

ಮಾಲಿಕೆಯನ್ನು ಹೊರ ತರುವ ಮಹತ್ತರವಾದ ಯೋಜನೆಯನ್ನು ಹಮ್ಮಿಕೊಂಡು, ಈ ಒಂದು ಪ್ರಯತ್ನವನ್ನು ಮಾಡಿ "ಮರಕಗಾವತೋ ಮರ್‌ಹೂಮ್ ಬ್ಯಾರಿಜ" ಎಂಬ ಹೆಸರಿನ ಈ ಗ್ರಂಥವನ್ನು ನಿಮ್ಮ ಮುಂದಿಡಲು ಸಂತೋಷ ಪಡುತ್ತಿದ್ದೇನೆ. ಈ ಅತ್ಯುತ್ತಮ ಕೆಲಸವನ್ನು ನಿರ್ವಹಿಸಲು ಪ್ರೇರಣೆ ಹಾಗೂ ಶಕ್ತಿಯನ್ನು ನೀಡಿದ ಸೃಷ್ಟಿಕರ್ತನಿಗೆ ಸರ್ವಸ್ತುತಿ ಅರ್ಪಿಸುತ್ತಿದ್ದೇನೆ. ಈ ಕೃತಿಯಲ್ಲಿ ಸದ್ಯಕ್ಕೆ 123 ಮಂದಿ ಗತಿಸಿಹೋದ ಮಹನೀಯರ ಬಗ್ಗೆ ಪರಿಚಯಾತ್ಮಕ ಲೇಖನ ಬರೆಯಲಾಗಿದೆ. ಇನ್ನು ಹಲವಾರು ಮಂದಿ ನಮ್ಮ ನೆನಪಿನಲ್ಲಿ ಮತ್ತು ಪಟ್ಟಿಯಲ್ಲಿದ್ದಾರೆ.ಅದನ್ನು ಮುಂದಿನ ಸಂಪುಟದಲ್ಲಿ ಬರೆದು ಪ್ರಕಟಿಸುವ ಯೋಜನೆ ಇದೆ. ಈಗಾಗಲೇ ಈ ಗ್ರಂಥವನ್ನು ತಯಾರಿಸುವ ಸಂದರ್ಭದಲ್ಲಿ ಬ್ಯಾರಿ ಭಾಷಿಗರ ಮೂಲ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಬಿ.ಎ.ಮುಹಮ್ಮದ್ ಅಲಿ, ಅಹ್ಮದ್ ಬಾವ ಮೊಹಿದಿನ್ ಪಡೀಲ್, ಬಂಟ್ವಾಳ ತಾಲೂಕಿನ ಹಾಜಿ ಮುಹಮ್ಮದ್ ಹನೀಫ್ ಗೋಳ್ತಮಜಲು, ಪುತ್ತೂರು ತಾಲೂಕಿನ ನೂರುದ್ದೀನ್ ಸಾಲ್ಮರ, ಸುಳ್ಯ ತಾಲೂಕಿನ ಇಬ್ರಾಹೀಂ ಗೂನಡ್ಕ, ಬೆಳ್ತಂಗಡಿ ತಾಲೂಕಿನ ಕೆ.ಕೆ. ಶಾಹುಲ್ ಹಮೀದ್, ಉಡುಪಿ ಜಿಲ್ಲೆಯ ಯಾಕೂಬ್ ಖಾದರ್ ಗುಲ್ವಾಡಿ ಮತ್ತು ಬ್ಯಾರಿ ಭಾಷಿಕರ ಬಾಹುಳ್ಯವಿರುವ ಬೆಂಗಳೂರು, ಮೈಸೂರು, ಚಿಕ್ಕಮಗಳೂರು ಕೊಡಗು ಜಿಲ್ಲೆಯಿಂದ ಕರಂಬಾರ್ ಮುಹಮ್ಮದ್, ಬಿ.ಎ. ಸಂಶುದ್ದೀನ್, ಅಬ್ದುಲ್ ಹಮೀದ್ ಅನ್ಸಾರಿ, ಅತ್ತೂರು ಚೆಯ್ಯಬ್ಬ, ಬಿ.ಎ. ಜಮಾಲುದ್ದೀನ್, ಸಾದಾತ್, ಮುಂಬೈಯ ರಹೀಮ್ ಸಚ್ಚರಿಪೇಟೆ, ಕಾಸರಗೊಡು ಜಿಲ್ಲೆಯ ಹರ್ಷಾದ್ ವರ್ಕಾಡಿ, ಗಲ್ಫ್ ರಾಷ್ಟ್ರಗಳಲ್ಲಿಯೂ ಅತ್ಯಂತ ಹೆಚ್ಚು ಬ್ಯಾರಿ ಭಾಷಿಕರು ವಾಸವಾಗಿರುವ ಅಬುದಾಭಿಯಿಂದ ಮುಹಮ್ಮದ್ ಅಲಿ ಉಚ್ಚಿಲ್, ಸೌದಿ ಅರೇಬಿಯಾದಿಂದ ಝಕರಿಯಾ ಜೋಕಟ್ಟೆ, ಮಸ್ಕತ್‌ನಿಂದ ಅನ್ಸಾರ್ ಕಾಟಿಪಳ್ಳ, ದುಬೈಯಿಂದ ಎಂ.ಇ. ಮೂಳೂರು, ಬಹರೈನ್‌ನಿಂದ ಸಫ್ವಾನ್ ಶಾ, ಕುವೈಟ್‌ನಿಂದ ಶರ್ಫುದ್ದೀನ್ ಬಣಕಲ್ ಮುಂತಾದವರನ್ನು ಆಯ್ಕೆ ಮತ್ತು ಸಲಹಾ ಸಮಿತಿ ಸದಸ್ಯರಾಗಿ ನೇಮಕ ಮಾಡಿ ಅವರೊಂದಿಗೆ ನಿರಂತರವಾಗಿ ಚರ್ಚೆ ನಡೆಸಿ 123 ಮಂದಿಯ ಪಟ್ಟಿಯನ್ನು ರಚಿಸಲಾಗಿದೆ.ಇದಕ್ಕೆ ಸಲಹೆ ಸೂಚನೆಯನ್ನು ನೀಡಿದ ಎಲ್ಲರಿಗೂ ಅಭಾರಿಯಾಗಿದ್ದೇನೆ.

ಇನ್ನು ಪುಸ್ತಕ ಪ್ರಕಟಣಾ ಸಮಿತಿ ಹಾಗೂ ಸಂಪಾದಕ ಮಂಡಳಿಯ ಸದಸ್ಯರಾದ ಪತ್ರಕರ್ತ ಹಂಝ ಮಲಾರ್, ಜಲೀಲ್ ಮುಕ್ರಿ, ಆಯಿಶಾ ಯುಕೆ ಇವರ ಸಹಕಾರಕ್ಕೂ ಧನ್ಯವಾದಗಳು.

ಕರ್ನಾಟಕ ಸರಕಾರವು 2009ರಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯನ್ನು ಸ್ಥಾಪಿಸಿದಾಗ ಹಂಝ ಮಲಾರ್ ಅಕಾಡಮಿಯ ಸದಸ್ಯರಾಗಿದ್ದರು. ಆಗ ನಾನು ಕೂಡ ಪ್ರಥಮ ಅವಧಿಯ ಸದಸ್ಯನಾಗಿದ್ದೆ.ಅಕಾಡಮಿಯ ಸ್ಥಾಪನೆಯ ಅವಧಿಯ ವರ್ಷದಲ್ಲೇ ಹಂಝ ಮಲಾರ್ ಈ ಬಗ್ಗೆ ಪ್ರಸ್ತಾಪಿಸಿದ್ದರು. ಹಾಗೇ ಈ ಅವಧಿಯಲ್ಲಿ 23 ಮಂದಿಯನ್ನು ಒಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದ ಅಗಲಿದ ಮಹನೀಯರ ಹೆಸರು ನೀಡುವಂತೆ ಮಾಧ್ಯಮ ಪ್ರಕಟನೆಯನ್ನೂ ನೀಡಿದೆ.ಸಾರ್ವಜನಿಕರು ಅಗಲಿದ ಬ್ಯಾರಿ ಮಹನೀಯರ ಹೆಸರುಗಳನ್ನು ಕಳುಹಿಸಿಕೊಡುವ ಮೂಲಕ ಉತ್ತಮವಾಗಿ ಸ್ಪಂದಿಸಿದರು.ಹೀಗೆ ಸಾರ್ವಜನಿಕರಿಂದ ಬಂದ ಹೆಸರು, ಆಯ್ಕೆ ಸಮಿತಿ ಸದಸ್ಯರು ನೀಡಿದ ಹೆಸರು ಮತ್ತು ಹಂಝ ಮಲಾರ್ ಅವರ ಬಳಿಯಿದ್ದ ಪಟ್ಟಿಯನ್ನು ಕ್ರೋಢೀಕರಿಸಿದೆ.ಸುಮಾರು 175 ಮಂದಿಯ ಪೈಕಿ 100 ಮಂದಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ನನ್ನ ಮೇಲೆ ಬಿತ್ತು. ಹೇಗೂ 100 ಮಂದಿಯ ಪಟ್ಟಿ ಸಿದ್ಧಪಡಿಸಿದೆ. ಬಳಿಕ ಅದು 101ಕ್ಕೇರಿತು.ನಂತರ 111ಕ್ಕೇರಿತು.ಕೊನೆಗೆ 123ಕ್ಕೆ ಅಂತಿಮಗೊಳಿಸಲಾಯಿತು. ಸಂಪರ್ಕಕ್ಕೆ ಪ್ರಯತ್ನಿಸಿದ ಮೊದಲ ಯತ್ನಕ್ಕೆ ಎಲ್ಲರೂ ಸಿಗಲಿಲ್ಲ. ಅಂದರೆ ಕೆಲವರು ಕರೆ ಸ್ವೀಕರಿಸಲಿಲ್ಲ. ಇನ್ನು ಕೆಲವರು ಮತ್ತೆ ಕರೆ ಮಾಡಿ ಎಂದರು.ಆದಾಗ್ಯೂ ಪಟ್ಟು ಬಿಡದೆ ಸಂಬಂಧಪಟ್ಟವರಿಗೆ ಕರೆಯ ಮೇಲೆ ಕರೆ ಮಾಡಿ ಮಾಹಿತಿ ಕಲೆ ಹಾಕಿದರು. ಒಟ್ಟಿನಲ್ಲಿ ಬಹುತೇಕ ಮಂದಿ ಈ ಕಾರ್ಯಕ್ಕೆ ಕ್ಷಣಾರ್ಧದಲ್ಲಿ ಸಂಪೂರ್ಣ ಸಹಕಾರ ನೀಡಿದ್ದಾರೆ. ಇದು ಅಕಾಡಮಿಯ ಮೇಲೆ ಅವರಿಟ್ಟ ಪ್ರೀತಿ ವಿಶ್ವಾಸಕ್ಕೆ ಸಾಕ್ಷಿಯಾಗಿದೆ.

ವಿವಿಧ ಕ್ಷೇತ್ರಗಳಲ್ಲಿ ಕೈಯಾಡಿಸಿದ ಮಹನೀಯರನ್ನು ಈ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಪ್ರಯತ್ನಿಸಲಾಗಿದೆ.ನಾನು ಇಲ್ಲಿ ಸಾಧನೆಯನ್ನು ಪರಿಗಣಿಸಿದ್ದೇವೆಯೇ ವಿನಃ ಯಾವತ್ತೂ ರಾಜಕೀಯ ಬೆರೆಸಿಲ್ಲ ಎಂಬ ತೃಪ್ತಿ ನನಗಿದೆ.ಯಾಕೆಂದರೆ 123 ಮಂದಿಯ ಹಿನ್ನೆಲೆಯನ್ನು ಅವಲೋಕಿಸಿದಾಗ ಅವರು ಯಾವ್ಯಾವ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು ಎಂಬುದು ನಿಮಗೆ ವೇದ್ಯವಾಗುತ್ತದೆ.

ಹಂಝ ಮಲಾರ್ ಅವರೊಂದಿಗೆ ಆಯ್ಕೆ ಸಮಿತಿಯ ಸದಸ್ಯರಲ್ಲದೆ ಹಲವು ಮಂದಿ ಸಾಧಕರ ಬಗ್ಗೆ ಲೇಖನ ಬರೆದಿದ್ದಾರೆ, ಮಾಹಿತಿಗಳನ್ನು ನೀಡಿ ಸಹಕರಿಸಿದ್ದಾರೆ. ಅವರಿಗೆ ನಾನು ಕೃತಜ್ಞ.123 ಮಂದಿಯ ಬರೆಹವು ಒಂದೇ ಮಾದರಿಯಲ್ಲಿ ಮೂಡಿ ಬರಲಿ ಎಂಬ ಉದ್ದೇಶದಿಂದ ಹೆಚ್ಚಿನ ಲೇಖನಗಳಿಗೆ ಲೇಪನ ನೀಡಲಾಗಿದೆ.

ಪುಸ್ತಕದ ಆರಂಭದಿಂದ ಅಂತ್ಯದ ತನಕ ಪ್ರತಿ ಹಂತದಲ್ಲೂ ಮಾಹಿತಿ ಸಂಗ್ರಹ ಮುದ್ರಣ ಸೇರಿದಂತೆ ಎಲ್ಲಾ ಸಂದರ್ಭದಲ್ಲೂ ಜೊತೆಯಾಗಿ ನೆರಳಂತೆ ನಿಂತು ವಿಶೇಷ ಆಸಕ್ತಿ ವಹಿಸಿ ಪ್ರಕಟಣೆಯ ಹಂತದ ತನಕ ಎಲ್ಲಾ ರೀತಿಯಲ್ಲೂ ನೆರವಾದ ಆತ್ಮೀಯ ಮಿತ್ರ ಪತ್ರಕರ್ತ ಹಂಝ ಮಲಾರ್‌ರವರ ಸೇವೆಯನ್ನು ನಾನು ವಿಶೇಷವಾಗಿ ಗುರುತಿಸಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ಗ್ರಂಥವನ್ನು ಪ್ರತಿಯೊಬ್ಬರು ಕೊಂಡು ಓದಬೇಕು. ಪ್ರತಿಯೊಬ್ಬರ ಮನೆಯಲ್ಲಿ, ಸಂಸ್ಥೆಗಳಲ್ಲಿ, ಕಚೇರಿಗಳಲ್ಲಿ ಎಲ್ಲಾ ವಿದ್ಯಾ ಸಂಸ್ಥೆಗಳ ಗ್ರಂಥಾಲಯಗಳಲ್ಲಿ ಪ್ರದರ್ಶಿಸುವಂತೆ ಓದುಗರಿಗೆ ಸದಾ ಲಭ್ಯವಿರುವಂತೆ ಮಾಡುವ ಮಹತ್ತರವಾದ ಜವಾಬ್ದಾರಿಯನ್ನು ಬ್ಯಾರಿ ಭಾಷಿಕರು ತನ್ನದಾಗಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಈ ಗ್ರಂಥ ರಚನೆಯ ಸಂದರ್ಭದಲ್ಲಿ ಸಂಪೂರ್ಣವಾದ ಸಹಕಾರ ನೀಡಿದ ದಕ್ಷ ನಿಷ್ಠಾವಂತೆ ರಿಜಿಸ್ಟ್ರಾರ್ ಆಗಿರುವ ಶ್ರೀಮತಿ ಪೂರ್ಣಿಮರವರಿಗೆ, ಅಕಾಡೆಮಿಯ ಎಲ್ಲಾ ಸದಸ್ಯರಿಗೆ, ಕಚೇರಿಯ ಸಿಬ್ಬಂದಿಗಳಾದ ಖತೀಜಮ್ಮ ರಝೀಮತ್, ವಿಜಯ್ ಕೆ, ಹಸನ್ ಬಶೀರ್ ಕೆಇ ಅವರಿಗೆ, ಮುಖಪುಟ ತಯಾರಿಸಿದ ವಿನಯರಾಜ್ ಇವರಿಗೆ, ಅತ್ಯುತ್ತಮವಾಗಿ ಮುದ್ರಣ ಮಾಡಿದ ಆರ್.ಕೆ. ಪ್ರಿಂಟರ್ ಇವರೆಲ್ಲರಿಗೂ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ.

**ರಹೀಂ ಉಚ್ಚಿಲ್**
ಅಧ್ಯಕ್ಷರು/ಪ್ರಧಾನ ಸಂಪಾದಕರು
ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

**ಸ್ಥಳ : ಮಂಗಳೂರು**
**ದಿನಾಂಕ : 01.12.2020**

# ಪ್ರಕಾಶಕರ ಮಾತು



ಅಕಾಡಮಿಗಳು ಸಾಹಿತ್ಯ ಶಿಬಿರ, ಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾತ್ರ ಹಮ್ಮಿಕೊಳ್ಳುತ್ತದೆ ಎಂಬ ಮಾತು ಸಾರ್ವತ್ರಿಕವಾಗಿದೆ. ಆದರೆ, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ ಪ್ರಸಕ್ತ ಅವಧಿಯಲ್ಲಿ ಕಾರ್ಯಕ್ರಮಗಳಾಚೆಗಿನ ತಳಮಟ್ಟದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡಿವೆ. ಬ್ಯಾರಿ ಪಠ್ಯಪುಸ್ತಕ ರಚನೆ, ಬ್ಯಾರಿ ಲಿಪಿ ಸಂಶೋಧನೆ, ಬ್ಯಾರಿ ಸಹಿತ ನಾಲ್ಕೈದು ಭಾಷೆಗಳನ್ನು ಒಳಗೊಂಡ ಪದಕೋಶ ರಚನೆ, ನಾಡಿನ ಪ್ರಮುಖ ಗಣ್ಯರ ಕುರಿತು ಬ್ಯಾರಿ ಭಾಷೆಯಲ್ಲಿ ಕೃತಿ ರಚನೆ ಹೀಗೆ ಒಂದಲ್ಲೊಂದು ವಿಭಿನ್ನ ಮಾದರಿಯ ಕೆಲಸ ಕಾರ್ಯಗಳನ್ನು ಮಾಡಲಾಗಿದೆ.

ಇದೀಗ ನಮ್ಮನ್ನು ಅಗಲಿದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ವೈದ್ಯಕೀಯ, ಆರ್ಥಿಕತೆ, ಕಾನೂನು, ನಾಯಕತ್ವ, ಸಂಘಟನೆ, ಆಡಳಿತ, ವ್ಯಾಪಾರ–ವಹಿವಾಟು, ಕಲೆ, ಸಾಹಿತ್ಯ, ಸಂಸ್ಕೃತಿ, ಗಾಯನ, ಮಾಧ್ಯಮ, ಸಂಶೋಧನೆ, ಕ್ರೀಡೆ, ಯಕ್ಷಗಾನ, ಅನಾಥರ ರಕ್ಷಣೆಯಲ್ಲದೆ ರಾಜಿ ಮಾತುಗಾರಿಕೆ, ಕಾರ್ಮಿಕರ ಪರ ಧ್ವನಿ, ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗಿ, ಸೌಹಾರ್ದ ಸಮಾಜ ಕಟ್ಟಿದವರು ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಮಹನೀಯರ ಪರಿಚಯಾತ್ಮಕ ಲೇಖನವನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ. ಇದೊಂದು ಅತ್ಯಮೂಲ್ಯ ಮತ್ತು ದಾಖಲೆಯೋಗ್ಯ ಕೃತಿಯಾಗಿದೆ. ಮುಂದಿನ ದಿನಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಈ ಕೃತಿಯು ಸಹಕಾರಿಯಾಗಬಹುದು.

ಹತ್ತು–ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಮಹನೀಯರು ದೈಹಿಕವಾಗಿ ನಮ್ಮನ್ನು ಅಗಲಿದರೂ ಕೂಡ ಮಾನಸಿಕವಾಗಿ ಅವರ ಸಾಧನೆ ಅಚ್ಚೊತ್ತಿ ಉಳಿಸುವಂತಹ ಪ್ರಯತ್ನ ಈ ಕೃತಿಯ ಮೂಲಕ ಮಾಡಲಾಗಿದೆ ಎಂಬ ವಿಶ್ವಾಸ ನನಗೆ ಇದೆ. ಈ ಕೃತಿಯನ್ನು ನಿರೂಪಿಸಿದ ಹಂಝ ಮಲಾರ್‌ಗೂ, ಲೇಖನ ಮತ್ತು ಮಾಹಿತಿ ನೀಡಿದ ಸರ್ವರಿಗೂ ನನ್ನ ಮನದಾಳದ ನಮನಗಳು.

**ಸ್ಥಳ : ಮಂಗಳೂರು**
**ದಿನಾಂಕ : 02.12.2020**

**ಪೂರ್ಣಿಮಾ**
**ರಿಜಿಸ್ಟ್ರಾರ್**
**ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿ**

# ನಾಲ್ಕು ಮಾತು




ಬ್ಯಾರಿ ಭಾಷಿಕ ಸಮುದಾಯದಲ್ಲಿ ಸಾಧನೆಗೈದ ಮಹನೀಯರ ಹೆಸರುಗಳನ್ನು ಮುಂದಿನ ತಲೆಮಾರುಗಳ ತನಕ ಕೊಂಡೊಯ್ಯಬೇಕು ಮತ್ತು ಅವರ ಹೆಸರು ಅಚ್ಚಳಿಯದೆ ಉಳಿಯಬೇಕು ಎಂಬ ವಿಚಾರ ನನ್ನ ಕಲ್ಪನೆಯಲ್ಲಿತ್ತು. ಆ ಗುರಿ ಸಾಧಿಸಬೇಕು ಎಂಬ ಹುಮ್ಮಸ್ಸೂ ಇತ್ತು. ಇದೀಗ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ರಹೀಂ ಉಚ್ಚಿಲ ಅವರು ಈ ಬಗ್ಗೆ ಪುಸ್ತಕ ಪ್ರಕಟಣಾ ಸಮಿತಿಯ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಎಲ್ಲರಿಗಿಂತ ಹೆಚ್ಚು ಆನಂದ ನನಗಾಯಿತು. ಈಗಾಗಲೇ ಹಲವು ಮಂದಿಯ ಹೆಸರನ್ನು ನಾನು ಸಂಗ್ರಹಿಸಿ ಇಟ್ಟಿದ್ದೇನೆ, ಅದನ್ನು ಅಕಾಡೆಮಿಗೆ ನೀಡಲು ಸಿದ್ದನಿದ್ದೇನೆ ಎಂದು ಸಂತೋಷದಿಂದ ಹೇಳಿಕೊಂಡೆ. ಅದರಂತೆ ಅಧ್ಯಕ್ಷರು ಪುಸ್ತಕ ಪ್ರಕಟಣಾ ಸಮಿತಿಗೆ ಈ ಜವಾಬ್ದಾರಿ ನೀಡಿದರು. ಅದರಲ್ಲೂ ಅತ್ಯಂತ ಹೆಚ್ಚು ನನ್ನನ್ನು ಈ ಪುಸ್ತಕ ರಚನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ನನ್ನ ಕನಸು ನನಸಾಗಲು ಅವಕಾಶ ಮಾಡಿಕೊಟ್ಟ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್‌ರಿಗೆ ನಾನು ತುಂಬು ಹೃದಯದ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ಈ ಹಿಂದೆ ಹಲವು ಪುಸ್ತಕ ಪ್ರಕಟಣೆಗಳಲ್ಲಿ ನಾನು ಕೆಲಸ ಮಾಡಿದ್ದೇನೆ, ಆದರೆ "ಮರಕೊಗಾವಾತೊ ಮರ್‌ಹೂಮ್ ಬ್ಯಾರಿಜ' ಪುಸ್ತಕಕ್ಕೆ ಕೆಲಸ ಮಾಡಲು ನನಗೆ ಅದೇನೋ ಅಸಕ್ತಿ... ತುಡಿತ. 123 ಮಂದಿಯ ಬಗ್ಗೆ ಮಾಹಿತಿ ಕಲೆ ಹಾಕಲು ಸುಮಾರು 200 ಮಂದಿಯನ್ನು ನಾನು ಸಂಪರ್ಕಿಸಿರಬಹುದು. ಆವಾಗ ನನಗೆ ಆದ ಅನುಭವ ಮರೆಯಲಾಗದ್ದು.

ಈ ಪುಸ್ತಕದಲ್ಲಿ ಬರುವಂತಹ ವ್ಯಕ್ತಿಗಳು ಪ್ರತಿಯೊಬ್ಬರ ಮನೆ ಮತ್ತು ಮನದಲ್ಲಿ ನೆಲೆ ನಿಲ್ಲಲಿದ್ದಾರೆ. ಮುಂದಿನ ಪೀಳಿಗೆಗೆಯೂ ಇತಿಹಾಸದ ಪುಟದಲ್ಲಿ ಮರೆಯಾಗಿ ಹೋಗಲಿರುವ ವ್ಯಕ್ತಿಗಳನ್ನು ಸದಾ ನೆನಪಿನಲ್ಲಿಡಲಿದ್ದಾರೆ. ಆದ್ದರಿಂದ ಈ ಸಂಪಾದಕ ಮಂಡಳಿಯಲ್ಲಿ ಪ್ರಮುಖ ಸ್ಥಾನ ನನಗೆ ಒದಗಿ ಬಂದಿದ್ದು ಬಹಳ ಸಂತೋಷವನ್ನುಂಟು ಮಾಡಿದೆ. ಮುಂದಿನ ದಿನಗಳಲ್ಲಿ ಇಂತಹ ಐತಿಹಾಸಿಕ ಹೆಜ್ಜೆಯನ್ನು ಮತ್ತು ಐತಿಹಾಸಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಅಕಾಡೆಮಿ ಇನ್ನಷ್ಟು ಮುಂದುವರಿಯಲಿ, ಬ್ಯಾರಿ ಭಾಷಿಗರ ಮನಸ್ಸನ್ನು ಗೆಲ್ಲುವಂತಾಗಲಿ ಎಂದು ಈ ಮೂಲಕ ಹಾರೈಸುತ್ತೇನೆ.

**ಹಂಝ ಮಲಾರ್**
**(ಪತ್ರಕರ್ತರು, ಕತೆಗಾರರು)**
**ಸಂಪಾದಕ ಮಂಡಳಿಯ ಪರವಾಗಿ**

**ಸ್ಥಳ : ಮಂಗಳೂರು**
**ದಿನಾಂಕ : 03.12.2020**

# ಸೌಹಾರ್ದ ಸಮಾಜ ಕಟ್ಟಿದ ಮುಲ್ಕಿಯ ಬಪ್ಪ ಬ್ಯಾರಿ


ಕಾಲ್ಪನಿಕ ಚಿತ್ರ

ಬ್ಯಾರಿ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜನಾಂಗಕ್ಕೆ ಸಾವಿರಾರು ವರ್ಷಗಳ ಇತಿಹಾಸ ಇದೆ ಎನ್ನುವುದಕ್ಕೆ ದಾಖಲೆ ಏನಿದೆ ಎಂದು ಪ್ರಶ್ನಿಸುವವರಿಗೆ ಸುಮಾರು 800 ವರ್ಷಗಳ ಹಿಂದೆ ಮುಲ್ಕಿಯಲ್ಲಿ ಬಪ್ಪ ಬ್ಯಾರಿ ಇದ್ದುದು ಕೂಡ ಸಾಕ್ಷಿ. ಅವರು ಕೇವಲ ಒಬ್ಬ ಬ್ಯಾರಿ ಆಗಿರಲಿಲ್ಲ. ಸೌಹಾರ್ದ ಸಮಾಜ ಕಟ್ಟಿದ ಪ್ರಮುಖ ಬ್ಯಾರಿ ಆತದ್ದರು.

ಬಪ್ಪ ಬ್ಯಾರಿಯ ಜನನ ಮತ್ತು ಮರಣ, ಪತ್ನಿ ಹಾಗೂ ಮಕ್ಕಳ ಸಹಿತ ಕುಟುಂಬದವರ ಬಗ್ಗೆ ಸ್ಪಷ್ಟ ದಾಖಲೆ ಇಲ್ಲ. ಆದರೆ, ಬಪ್ಪ ಬ್ಯಾರಿ ಎಂಬ ವರ್ತಕರೊಬ್ಬರಿದ್ದರು ಮತ್ತು ಐತಿಹಾಸಿಕ ಮುಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವನ್ನು ಕಟ್ಟಿಸಿದರು ಎಂಬುದಕ್ಕೆ ಐತಿಹಾಸಿಕ ದಾಖಲೆ ಇದೆ. ಅದನ್ನು ಹಿಂದೂ ಬಾಂಧವರು ಕೂಡ ಒಪ್ಪುತ್ತಾರೆ. ಹಾಗಾಗಿ ಪ್ರತೀ ವರ್ಷ ನಡೆಯುವ ದೇವಸ್ಥಾನದ ಜಾತ್ರೆಯ ಸಂದರ್ಭ ಬಪ್ಪಬ್ಯಾರಿ ವಾಸವಾಗಿದ್ದರು ಎನ್ನಲಾದ ಮನೆಗೆ ಪ್ರಸಾದವನ್ನು ದೇವಸ್ಥಾನದ ಆಡಳಿತ ಸಮಿತಿಯವರು ಒಪ್ಪಿಸುತ್ತಿದ್ದುದು ಸಾಕ್ಷಿ.

ಸುಮಾರು 800 ವರ್ಷಗಳ ಹಿಂದೆ ಮೂಲತಃ ಕೇರಳದಿಂದ ಬಂದಿದ್ದ "ಬಪ್ಪ" ಮುಲ್ಕಿಯ ಮಹಿಳೆಯನ್ನು ವಿವಾಹವಾಗಿ ಇಲ್ಲೇ ವಾಸಿಸತೊಡಗಿದರು. ಸ್ಥಳೀಯ ಹಿಂದೂಗಳು ಅವರನ್ನು ಬಪ್ಪ ಬ್ಯಾರಿ ಎಂದು ಕರೆಯುತ್ತಿದ್ದರು. ಹಾಗಾಗಿ ಬ್ಯಾರಿ ಜನಾಂಗಕ್ಕೆ ಸಾವಿರಕ್ಕೂ ಅಧಿಕ ಇತಿಹಾಸ ಇತ್ತು ಎಂಬುದಕ್ಕೆ ಹಿಂದೂಗಳು ಸ್ಥಳೀಯ ಮುಸ್ಲಿಮರನ್ನು ಬ್ಯಾರಿ ಎಂದು ಸಂಭೋದಿಸುತ್ತಿದ್ದುದು ಸಾಕ್ಷಿ. ಬಪ್ಪ ಬ್ಯಾರಿಯಿಂದಲೇ ಮುಲ್ಕಿ ಸಮೀಪದ ಪ್ರದೇಶಕ್ಕೆ ಬಪ್ಪನಾಡು ಎಂಬ ಹೆಸರು ಬಂತೆನ್ನುವುದು ಇತಿಹಾಸ.

ಮುಲ್ಕಿಯ ಶಾಫಿ ಜುಮಾ ಮಸೀದಿಯನ್ನು ಬಪ್ಪಬ್ಯಾರಿಯ ಪತ್ನಿಯ ಸಹೋದರ ಶಾಹಿರಿ ಬ್ಯಾರಿ ಎಂಬವರು ಕಟ್ಟಿಸಿದ್ದಾರೆ ಎಂಬುದನ್ನು ಇತಿಹಾಸಕಾರರು ಒಪ್ಪುತ್ತಾರೆ. ಆ ಮೂಲಕ ಬಪ್ಪಬ್ಯಾರಿ ಮುಲ್ಕಿಯ ಮಹಿಳೆಯನ್ನು ಮದುವೆಯಾಗಿದ್ದರು ಎಂಬುದಕ್ಕೆ ಸಾಕ್ಷಿ ಒದಗಿಸುತ್ತದೆ.

ಹಿಂದೆ "ಮುಲ್ಕಿ" ಕರಾವಳಿಯ ಪ್ರಮುಖ ಬಂದರ್‌ಗಳಲ್ಲಿ ಒಂದಾಗಿತ್ತು. ಇಲ್ಲಿಂದಲೇ ಆಮದು–ರಫ್ತು ವಹಿವಾಟು ನಡೆಯುತ್ತಿತ್ತು. ವರ್ತಕರಾಗಿದ್ದ ಬಪ್ಪ ಬ್ಯಾರಿಗೆ ಹಡಗು ಕೂಡ ಇತ್ತು. ಮಧ್ಯ ಏಷ್ಯಾ ರಾಷ್ಟ್ರಗಳಿಗೆ ಹಡಗಿನಲ್ಲಿ ಸಾಮಗ್ರಿಗಳನ್ನು ರಫ್ತು ಮಾಡುವುದರಲ್ಲಿ ಬಪ್ಪ ಬ್ಯಾರಿ ಮುಂಚೂಣಿಯಲ್ಲಿದ್ದರು.

ಬಪ್ಪ ಬ್ಯಾರಿ ಎಲ್ಲಾ ಧರ್ಮಗಳ ಬಗ್ಗೆ ಸಹಿಷ್ಣುತೆ ಮತ್ತು ಗೌರವವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಅದೊಂದು ದಿನ ದೋಣಿಯಲ್ಲಿ ಸಾಮಗ್ರಿಗಳನ್ನು ಹೇರಿಕೊಂಡು ಬಪ್ಪ ಬ್ಯಾರಿ ಹೊರಟರು. ಮುಲ್ಕಿಯ ಶಾಂಭವಿ ನದಿಯ ಮಧ್ಯೆ ದೋಣಿ ಮುಂದಕ್ಕೆ ಸಾಗದೆ ನಿಂತಿತು. ತಕ್ಷಣ ನದಿಯಲ್ಲಿ ರಕ್ತವೂ ಕಾಣಿಸಿತು. ಬಪ್ಪಬ್ಯಾರಿ ಬೆದರಿದರು. ಅಷ್ಟರಲ್ಲಿ ಅಶರೀರ ವಾಣಿಯೊಂದು ಕೇಳಿಸಿತು.


ಜೈನ ವಂಶದ ದುಗ್ಗಣ್ಣ ಸಾವಂತರು ಮುಲ್ಕಿ ಸೀಮೆಯ ಒಂಭತ್ತು ಮಾಗಣೆಗಳನ್ನು ಒಗ್ಗೂಡಿಸಿ ರಾಜ್ಯಭಾರ ನಡೆಸುತ್ತಿದ್ದರು. ಬಪ್ಪ ಬ್ಯಾರಿ ತಕ್ಷಣ ರಾಜರ ಬೀಡಿಗೆ ತೆರಳಿ ನಡೆದ ಸಂಗತಿಗಳನ್ನು ಹೇಳಿದರು. ಸಾವಂತ ಅರಸರ ಸೂಚನೆಯಂತೆ ಬಪ್ಪಬ್ಯಾರಿಯು ಬಪ್ಪನಾಡಿನಲ್ಲಿ ದೇವಸ್ಥಾನ ನಿರ್ಮಿಸಿಕೊಟ್ಟರು. ಬಪ್ಪಬ್ಯಾರಿಯಿಂದಾಗಿಯೇ ಈ ಕ್ಷೇತ್ರಕ್ಕೆ ಬಪ್ಪನಾಡು ಎಂಬ ಹೆಸರು ಬಂತೆಂದು ಇತಿಹಾಸ ಸಾರುತ್ತದೆ.

ಅಲ್ಲಿಂದೀಚೆಗೆ ಈ ಕ್ಷೇತ್ರವು ಕೋಮು ಸೌಹಾರ್ದಕ್ಕೆ ಪ್ರಮುಖ ಸಾಕ್ಷಿಯಾಗಿದೆ. ಹಲವಾರು ವರ್ಷಗಳಿಂದ ವಿವಿಧ ಯಕ್ಷಗಾನ ತಂಡಗಳು "ಬಪ್ಪನಾಡು ಕ್ಷೇತ್ರ ಮಹಾತ್ಮೆ" ಎಂಬ ಯಕ್ಷಗಾನದಲ್ಲಿ ಬಪ್ಪ ಬ್ಯಾರಿ ಮತ್ತು ಅವರು ನಿರ್ಮಿಸಿದ ದೇವಸ್ಥಾನದ ಕಥೆಯನ್ನು ಸಾರುತ್ತದೆ.

ಬಪ್ಪ ಬ್ಯಾರಿಯ ಹೆಂಡತಿ ಮಕ್ಕಳ ಬಗ್ಗೆ ದಾಖಲೆಗಳಲ್ಲಿ ಉಲ್ಲೇಖವಿಲ್ಲದಿದ್ದರೂ ಕೂಡ ಅವರ ವಂಶಸ್ಥರು ಇಂದಿಗೂ ಮುಲ್ಕಿ ಪರಿಸರದಲ್ಲಿ ವಾಸವಾಗಿದ್ದಾರೆ. ಅಲ್ಲದೆ ದೇವಸ್ಥಾನದ ಕಾರ್ಯಕ್ರಮಗಳಲ್ಲಿ ಈಗಲೂ ಅವರಿಗೆ ವಿಶೇಷ ಗೌರವ ಮತ್ತು ಮನ್ನಣೆ ನೀಡಲಾಗುತ್ತದೆ. ಬಪ್ಪ ಬ್ಯಾರಿಯ ಕುಟುಂಬದ ಹಿರಿಯರು ದೇವಸ್ಥಾನಕ್ಕೆ ಹಣ್ಣು, ಹೂವುಗಳನ್ನು ನೀಡುತ್ತಾರೆ.

ಬಪ್ಪಬ್ಯಾರಿ ಕಟ್ಟಿಸಿದ ವೈಭವಯುತ ಮನೆಯ ನೂರಾರು ವರ್ಷಗಳವರೆಗೂ ಬಾಳಿಕೆಯಲ್ಲಿತ್ತು. ಆದರೆ ವರ್ಷ ಕಳೆಯುತ್ತಲೇ ಅದರ ಒಂದೊಂದೇ ಭಾಗ ಶಿಥಿಲಗೊಂಡು ಈಗ ಅಂದಿನ ವೈಭವವನ್ನು ಕಳೆದುಕೊಂಡಿವೆ. ಬಪ್ಪಬ್ಯಾರಿಯ ಈ ಮನೆಯಲ್ಲಿ ಸುರಂಗವೂ ಇತ್ತೆನ್ನುವುದು ಐತಿಹ್ಯ.

# ರಾಜಕೀಯ ಮುತ್ಸದ್ದಿತನ ಮೆರೆದ ಬಿ.ಎ.ಮೊಹಿದಿನ್



ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಬಜ್ಪೆ ಸಮೀಪದ ಕುಗ್ರಾಮವಾದ ಪೇಜಾವರ (ಬ್ಯಾರಿ ಭಾಷೆಯಲ್ಲಿ ಪ್ಯಾರ) ಎಂಬಲ್ಲಿ 1938ರ ಜೂನ್ 5ರಂದು ಆರ್ಥಿಕವಾಗಿ ತೀರಾ ಹಿಂದುಳಿದ ಕುಟುಂಬದಲ್ಲಿ ಅಬ್ದುಲ್ ಖಾದರ್ ಬ್ಯಾರಿ–ಹಲಿಮಮ್ಮ ದಂಪತಿಯ ಪುತ್ರನಾಗಿ ಹುಟ್ಟಿ ಬೆಳೆದ ಬಿ.ಎ.ಮೊಹಿದಿನ್ (ಬಜ್ಪೆ ಅಬ್ದುಲ್ ಖಾದರ್ ಮೊಹಿದಿನ್) ಗಣ್ಯರ ಸ್ಥಾನಮಾನದಲ್ಲಿ ಮೆರೆದುದರ ಹಿಂದೆ ಅವರದೇ ಆದ ಪರಿಶ್ರಮವಿದೆ. ಬಹುಶಃ ಅವರು ರಾಜಕೀಯ ರಂಗಕ್ಕೆ ಪದಾರ್ಪಣೆ ಮಾಡದೇ ಇರುತ್ತಿದ್ದರೆ ಒಬ್ಬ ನುರಿತ ಮುತ್ಸದ್ದಿಯನ್ನು ರಾಜಕೀಯ ಕ್ಷೇತ್ರ ಕಳೆದುಕೊಳ್ಳುತ್ತಿತ್ತೋ ಏನೋ?. ರಾಜಕೀಯ ಕ್ಷೇತ್ರದಲ್ಲಿದ್ದುಕೊಂಡೇ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದ ಅವರು ಮುಸ್ಲಿಮ್ ಸಮುದಾಯದ ಪ್ರಮುಖ ನಾಯಕರಾಗಿಯೂ ಗುರುತಿಸಲ್ಪಟ್ಟಿದ್ದರು.

ರಾಜ್ಯದ ಪ್ರಪ್ರಥಮ ಬ್ಯಾರಿ ಮುಸ್ಲಿಮ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಪ್ರಥಮ ಉಸ್ತುವಾರಿ (ಬ್ಯಾರಿ ಮುಸ್ಲಿಮ್) ಸಚಿವ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅವರು ರಾಜಕೀಯ ಕ್ಷೇತ್ರದಲ್ಲಿ ಅಜಾತಶತ್ರುವಾಗಿ ಮೆರೆದವರು. ರಾಜ್ಯ ಕಂಡ ಅತ್ಯಂತ ಪ್ರಾಮಾಣಿಕ, ಜಾತ್ಯತೀತ, ದಕ್ಷ ರಾಜಕಾರಣಿಯಾಗಿ ಗುರುತಿಸಿದ್ದರು. ರಾಜಕೀಯ ಮಾತ್ರವಲ್ಲ ವ್ಯಕ್ತಿಗತವಾಗಿಯೂ ಒಂದೇ ಒಂದು ಕಪ್ಪುಚುಕ್ಕೆ ಬೀಳದಂತೆ ವರ್ಚಸ್ಸು ಬೆಳೆಸಿಕೊಂಡಿದ್ದ ಅವರು ತನ್ನ ದೂರದೃಷ್ಟಿಯಿಂದಲೇ ಕರಾವಳಿಯ ಮುಸ್ಲಿಮ್ ಸಮಾಜದಲ್ಲಿ ಶೈಕ್ಷಣಿಕ ಕ್ರಾಂತಿ ತಂದವರು.

ಎಂದೂ ಅಧಿಕಾರದ ಹಿಂದೆ ಬೀಳದೆ, ಸಿಕ್ಕಿದ ಅಧಿಕಾರವನ್ನು ಅತ್ಯಂತ ಪ್ರಾಮಾಣಿಕವಾಗಿ ಬಳಸಿಕೊಂಡು ಯಾರಿಗೂ ನೋವನ್ನುಂಟು ಮಾಡದೆ, ಭ್ರಷ್ಟಾಚಾರದಿಂದ ದೂರವಿದ್ದು ಕೈ–ಬಾಯಿ ಶುದ್ಧ ಮಾಡಿಕೊಂಡಿದ್ದ ಬಿ.ಎ.ಮೊಹಿದಿನ್ ಮುಸ್ಲಿಮ್ ಸಮಾಜದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಸೃಷ್ಟಿಸಿದರು. ಶಿಕ್ಷಣವಿಲ್ಲದಿದ್ದರೆ ಮುಸ್ಲಿಮ್ ಸಮಾಜಕ್ಕೆ ಉಳಿಗಾಲವಿಲ್ಲ ಎಂದೇ ನಂಬಿದ್ದ ಅವರು ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶದ ಉತ್ಸಾಹಿ ಯುವಕರು, ಉದ್ಯಮಿಗಳನ್ನು ಕಂಡು ಶಿಕ್ಷಣ ಸಂಸ್ಥೆ ಕಟ್ಟಲು ಪ್ರೋತ್ಸಾಹ ನೀಡಿದರು. ಹಾಗಾಗಿ ಇಂದು ಸಮಾಜದ ಲಕ್ಷಾಂತರ ಮುಸ್ಲಿಮ್ ಹುಡುಗಿಯರು ಶೈಕ್ಷಣಿಕ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈಯಲು ಸಾಧ್ಯವಾಯಿತು.

ತನ್ನ ಸುತ್ತಮುತ್ತ ಅಷ್ಟೇ ಯಾಕೆ, ಸ್ವತಃ ಅಕ್ಕ–ತಂಗಿಯರೇ ಅನಕ್ಷರಸ್ಥರಾಗಿದ್ದುದನ್ನು ಕಂಡ ಅವರು ಮುಸ್ಲಿಮ್ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಪಣತೊಟ್ಟರು. ಹಾಗೇ ಹಗಲಿಡೀ ಪಾಳುಬೀಳುತ್ತಿದ್ದ ಮದ್ರಸದ ಕಟ್ಟಡದಲ್ಲೇ ಶಿಕ್ಷಣ ನೀಡಲು ಆಸಕ್ತರಾದರು. ಅದಕ್ಕೆ ಧರ್ಮಗುರುಗಳ ವಿರೋಧವಿದ್ದರೂ ಕೂಡ ಅವರ ಮನವೊಲಿಸಿ ಮೊದಲು ತನ್ನ ಹುಟ್ಟೂರು ಬಜ್ಪೆಯ ಮದ್ರಸದಲ್ಲೇ ಶಾಲೆ ತೆರೆದರು. ಆಗಿನ್ನೂ ಆಂಗ್ಲ ಮಾಧ್ಯಮಕ್ಕೆ ಮಕ್ಕಳ ಹೆತ್ತವರು ಒಲವು ತೋರುತ್ತಿದ್ದ ದಿನಗಳು. ಆಂಗ್ಲಮಾಧ್ಯಮ ಶಿಕ್ಷಣದ ಮಹತ್ವವನ್ನು ಅರಿತಿದ್ದ ಅವರು ಕನ್ನಡ ಶಾಲೆಗಳನ್ನು ಉಳಿಸುವುದರೊಂದಿಗೆ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಪ್ರೋತ್ಸಾಹ ನೀಡಿದರು. ಅದರ ಫಲವಾಗಿ ಬಜ್ಪೆ ಆಸುಪಾಸಿನ ಕಾಟಿಪಳ್ಳ, ಕೃಷ್ಣಾಪುರ, ಸೂರಿಂಜೆ, ಜೋಕಟ್ಟೆ, ಬೈಕಂಪಾಡಿ ಮತ್ತಿತರ ಪ್ರದೇಶದ ಮುಸ್ಲಿಮರು ಆಂಗ್ಲಮಾಧ್ಯಮ ಶಾಲೆಗಳನ್ನು ತೆರೆದರು. ಅದರ ಫಲವಾಗಿಯೇ ಮೀಫ್ (ಮುಸ್ಲಿಮ್ ಎಜುಕೇಶನಲ್ ಇನ್‌ಸ್ಟಿಟ್ಯೂಶನ್ಸ್ ಫೆಡರೇಶನ್) ತಲೆ ಎತ್ತಿತು. ಕರಾವಳಿ ಕರ್ನಾಟಕದಲ್ಲಿ ಮುಸ್ಲಿಮರು ಅದರಲ್ಲೂ ವಿಶೇಷವಾಗಿ ಮುಸ್ಲಿಮ್ ಹೆಣ್ಣುಮಕ್ಕಳು ಇಂದು ಭಾರೀ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದರೆ, ಅಧಿಕ ಸಂಖ್ಯೆಯ ಮುಸ್ಲಿಮ್ ಶಿಕ್ಷಣ ಸಂಸ್ಥೆಗಳು ಬೆಳೆದು ನಿಂತಿದ್ದರೆ ಅದರ ಹಿಂದೆ ಅವರ ಪರಿಶ್ರಮವಿರುವುದು ಸುಳ್ಳಲ್ಲ.

ಐದು ದಶಕಗಳ ರಾಜಕೀಯ ಬದುಕಿನಲ್ಲಿ ಅನಿವಾರ್ಯ ಕಾರಣಕ್ಕಾಗಿ ಪಕ್ಷಾಂತರ ಮಾಡಿದ್ದರೂ ಕೂಡ ಎಲ್ಲಾ ಪಕ್ಷಗಳ, ರಾಜಕೀಯ ನಾಯಕರುಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿರುವುದು ಅವರ ಹಿರಿಮೆ ಎನ್ನಬಹುದು. 1978ರಲ್ಲಿ ಬಂಟ್ವಾಳ ವಿಧಾನ ಸಭಾ ಕ್ಷೇತ್ರದಿಂದ ಪಕ್ಷೇತರ ಶಾಸಕರಾಗಿ ಆಯ್ಕೆಯಾಗಿದ್ದ ಬಿ.ಎ.ಮೊಹಿದಿನ್ 1980ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ದೇವರಾಜ ಅರಸು ಅವರೊಂದಿಗೆ ಕೈ ಜೋಡಿಸಿದರು. ಅರಸು ನಿಧನದ ಬಳಿಕ ಮತ್ತೆ ಇಂದಿರಾ ಗಾಂಧಿಯ ಜೊತೆ ಸೇರಿಕೊಂಡರೂ ಕೂಡ ಅವರಿಗೆ 1983ರಲ್ಲಿ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತು. ಆವಾಗ ಅವರಿಗೆ ಶಕ್ತಿ ತುಂಬಿದ್ದು ಜನತಾ ಪಕ್ಷ. ಆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯತ್ವ, ಮುಖ್ಯ ಸಚೇತಕ. ಮಂತ್ರಿ ಪದವಿ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದ ಜವಾಬ್ದಾರಿಯೂ ಅವರ ಹೆಗಲ ಮೇಲೆ ಬಿತ್ತು.

1999ರಲ್ಲಿ ಜನತಾ ಪಕ್ಷ ಇಬ್ಭಾಗವಾದಾಗ ಅವರು ತಟಸ್ಥರಾದರು. 2002ರಲ್ಲಿ ಮತ್ತೆ ಕಾಂಗ್ರೆಸ್ ಸೇರಿಕೊಂಡ ಅವರು ಕೊನೆಯ ಉಸಿರಿರುವರೆಗೂ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿದ್ದರು. ಹಾಗಂತ ಜನತಾ ಪಕ್ಷ ಅಥವಾ ಜನತಾ ದಳದ ನಾಯಕರ ಸ್ನೇಹವನ್ನು ಕಳಕೊಳ್ಳಲಿಲ್ಲ. ಅವರೆಲ್ಲರ ಪ್ರೀತಿ–ವಿಶ್ವಾಸವನ್ನು ಉಳಿಸಿಕೊಂಡ ಮಾನವ ಪ್ರೇಮಿಯಾಗಿದ್ದರು.

ಸಚಿವರಾಗಿದ್ದಾಗ ಮಂಗಳೂರು ಮಹಾನಗರ ಪಾಲಿಕೆಗೆ ಸುರತ್ಕಲ್ ಆಸುಪಾಸಿನ ಪ್ರದೇಶಗಳ ಸೇರ್ಪಡೆ, ಉಳ್ಳಾಲಕ್ಕೆ ಎಡಿಬಿ ಯೋಜನೆ ವಿಸ್ತರಣೆ, ಬೆಳ್ತಂಗಡಿಯ ಕುಗ್ರಾಮವಾದ ಪಟ್ರಮೆಗೆ ಸೇತುವೆ ನಿರ್ಮಾಣ, ತುಂಬೆ ಡ್ಯಾಂನಿಂದ ಮಂಗಳೂರಿಗೆ ನೀರು ಸರಬರಾಜು, ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ, ಗವರ್ನ್‌ಮೆಂಟ್ ಟೂಲ್ ರೂಮ್ ಟ್ರೈನಿಂಗ್ ಸೆಂಟರ್ ಸ್ಥಾಪನೆ, ಪ್ರಾಧ್ಯಾಪಕರಿಗೆ ವೇತನ ಶ್ರೇಣಿ ಜಾರಿ, ಮಂಗಳೂರಿನ ಮೂರು ಮೆಡಿಕಲ್ ಕಾಲೇಜುಗಳಿಗೆ ಅನುಮತಿ, ಮಂಗಳೂರಿನ ಪಿಲಿಕುಳ ನಿಸರ್ಗಧಾಮ ಯೋಜನೆಗೆ ಅಂಕಿತ ಇತ್ಯಾದಿ ಮಹತ್ವದ ಕೆಲಸ ಕಾರ್ಯಗಳನ್ನು ನೆರವೇರಿಸಿದ್ದರು.

1998–99ರಲ್ಲಿ ಸುರತ್ಕಲ್ ಕೋಮುಗಲಭೆ ಸಂಭವಿಸಿದ ಸಂದರ್ಭ ಅವರು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಒಬ್ಬ ನಿಷ್ಕಳಂಕ ಜಾತ್ಯತೀತ ವ್ಯಕ್ತಿಯಾಗಿದ್ದ ಅವರು ಆ ಗಲಭೆಯನ್ನು ಹತ್ತಿಕ್ಕಲು ಪಟ್ಟ ಶ್ರಮ ಅಪಾರ. ಅದಕ್ಕೆ ಅಂದು ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲ್ ಕೂಡ ಬಿ.ಎ.ಮೊಹಿದಿನ್ ಅವರ ಪರ ಆಡಿದ ಮಾತುಗಳೇ ಸಾಕ್ಷಿಯಾಗಿತ್ತು.

*** ಬ್ಯಾರಿ ಆಂದೋಲನದಲ್ಲಿ ಮುಂಚೂಣಿಯ ಪಾತ್ರ**

ಬ್ಯಾರಿ ಆಂದೋಲನದಲ್ಲೂ ಮುಂಚೂಣಿಯ ಪಾತ್ರ ವಹಿಸಿದ್ದ ಬಿ.ಎ.ಮೊಹಿದಿನ್, ಬ್ಯಾರಿ ಸಾಹಿತ್ಯ ಅಕಾಡಮಿಯ ಸ್ಥಾಪನೆಗೂ ಪ್ರಾಮಾಣಿಕವಾಗಿ ಶ್ರಮಿಸಿದ್ದರು. ಯುವ ಜನಾಂಗಕ್ಕೆ ಸದಾ ಮಾರ್ಗದರ್ಶನ ನೀಡುತ್ತಿದ್ದ ಅವರು ಯಾರೊಂದಿಗೂ ನಿಷ್ಠುರ ಕಟ್ಟಿಕೊಂಡವರಲ್ಲ. ಸದಾ ಹಸನ್ಮುಖರಾಗಿಯೇ ಇದ್ದ ಅವರು ತನ್ನ ಬಳಗಕ್ಕೆ ಸೇರ್ಪಡೆಗೊಂಡ ಎಲ್ಲರನ್ನೂ ಸ್ಥಾನಮಾನ ನೋಡದೆ ಹೆಸರು ಹಿಡಿದು ಕರೆಯುವಂತಹ ಆತ್ಮೀಯತೆ ಬೆಳೆಸಿಕೊಂಡಿದ್ದರು. ಹಾಗಾಗಿಯೇ ಅವರನ್ನು ಬೆಂಗಳೂರಿನ ದಿ ಬ್ಯಾರೀಸ್ ವೆಲ್ಫೇರ್ ಎಸೋಸಿಯೇಶನ್ "ಶತಮಾನದ ಬ್ಯಾರಿ" ಎಂಬ ಬಿರುದು ನೀಡಿ ಸನ್ಮಾನಿಸಿತ್ತು.

*** ಬಡತನ ಮೆಟ್ಟಿ ನಿಂತರು**

ಬಿ.ಎ.ಮೊಹಿದಿನ್ ಅವರ ತಂದೆ ಬಜ್ಪೆಯ ಪಾಲದಕಟ್ಟೆ ಎಂಬಲ್ಲಿ ಗೂಡಂಗಡಿ ವ್ಯಾಪಾರಿಯಾಗಿದ್ದರು. ವ್ಯಾಪಾರದ ಮಧ್ಯೆ ಬೀಡಿಯನ್ನೂ ಕಟ್ಟುತ್ತಿದ್ದರು. ಮುಳಿಹುಲ್ಲಿನ ಮನೆ. ಅದರಲ್ಲೇ ಉಂಡಾಡಿ ಬೆಳೆದ ಬಿ.ಎ.ಮೊಹಿದಿನ್ ಊರಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಗೂಡಂಗಡಿಯಿಂದ ಕುಟುಂಬ ಸಲಹಲು ಸಾಧ್ಯವಾಗದಿದ್ದಾಗ ಅಬ್ದುಲ್ ಖಾದರ್ ಬ್ಯಾರಿ ಚಿಕ್ಕಮಗಳೂರಿಗೆ ತೆರಳಿ ಹೊಟೇಲ್‌ವೊಂದನ್ನು ತೆರೆದರು. ಅನಿವಾರ್ಯವಾಗಿ ಬಿ.ಎ.ಮೊಹಿದಿನ್ ಕೂಡ ಚಿಕ್ಕಮಗಳೂರಿಗೆ ತೆರಳಿದರು. ಅಲ್ಲೇ ಹೈಸ್ಕೂಲ್ ಮತ್ತು ಕಾಲೇಜು ಮುಗಿಸಿದರು. ಬಳಿಕ ಬೆಂಗಳೂರಿನಲ್ಲಿ ಬಿಎಸ್ಸಿ ಪದವಿ ಪಡೆದರು. ಮುಂದೇನು ಮಾಡಬೇಕು ಎಂದು ಅವರಿಗೆ ಗೊತ್ತಿಲ್ಲ. ಆದಾಗ್ಯೂ ಜೇಸಿಸ್ ಸಂಘಟನೆ, ಸಾಂಸ್ಕೃತಿಕ ಸಂಘಟನೆಗಳಲ್ಲದೆ ಕೆಲಕಾಲ ಕೃಷಿಯಲ್ಲೂ ತೊಡಗಿಸಿಕೊಂಡರು. ಈ ಮಧ್ಯೆ ದೇವರಾಜು ಅರಸು ಅವರ ಕಣ್ಣಿಗೆ ಬಿದ್ದ ಬಿ.ಎ.ಮೊಹಿದಿನ್ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಬಡತನವನ್ನು ಮೆಟ್ಟಿ ನಿಂತು ಕಲುಷಿತ ರಾಜಕಾರಣದ ಮಧ್ಯೆಯೂ ರಾಜಕೀಯದಲ್ಲಿ ಮಿಂಚಿದರು. ಯಾವುದೇ ಲಾಬಿಗೆ ಮಣಿಯದೆ, ಯಾರನ್ನೂ ಓಲೈಸದೆ ಅಧಿಕಾರವನ್ನು ಸಮರ್ಪಕವಾಗಿ ಬಳಸಿದರು. ರಾಜಕೀಯದಲ್ಲಿದ್ದರೂ ಕೂಡ ಪಕ್ಕಾ ರಾಜಕಾರಣಿಯಾಗಲಿಲ್ಲ. ಬದಲಾಗಿ ಸಮಾಜ ಮತ್ತು ಸಮುದಾಯದ ಅಭಿವೃದ್ಧಿಗೆ ಪಣತೊಟ್ಟರು. ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸಿದರು. ಅದರಲ್ಲಿ ಯಶಸ್ವಿಯನ್ನೂ ಸಾಧಿಸಿದರು. ಅವರ ಜೀವಮಾನದ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರಕಾರವು 2006 ಸೆಪ್ಟಂಬರ್ 15ರಂದು "ದೇವರಾಜ ಅರಸು" ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿತ್ತು.

*** ಅರ್ಹತೆಗೆ ತಕ್ಕ ಸಿಗದ ಸ್ಥಾನಮಾನ**

ಹಿರಿಯ ರಾಜಕೀಯ ನೇತಾರ, ಶಿಕ್ಷಣ ಪ್ರೇಮಿ, ಮುಸ್ಲಿಂ ಶೈಕ್ಷಣಿಕ ಕ್ರಾಂತಿಯ ರೂವಾರಿ ಬಿ.ಎ.ಮೊಹಿದಿನ್‌ರ ಅಗಲಿಕೆ ರಾಜ್ಯಕ್ಕೆ ತುಂಬಲಾರದ ನಷ್ಟ. ಮುಖ್ಯಮಂತ್ರಿ ಹುದ್ದೆಯನ್ನೂ ನಿಭಾಯಿಸಬಲ್ಲಂತಹ ಜಾಣ್ಮೆ, ಪ್ರೌಢಿಮೆ, ಅನುಭವ ಎಲ್ಲವೂ ಇದ್ದ  ಅವರಿಗೆ ರಾಜಕೀಯದಲ್ಲಿ ಅನಿವಾರ್ಯ ಅರ್ಹತೆಗಳಾಗಿ ಬಿಟ್ಟಿರುವ ವಶೀಲಿಬಾಜಿ, ಕಾಪಟ್ಯ, ಸುಳ್ಳು ಇತ್ಯಾದಿ ಗುಣಗಳು ಸಿದ್ಧಿಸಿರಲಿಲ್ಲ. ಬಹುಶ ಅದೇ ಕಾರಣಕ್ಕೆ ಎಲ್ಲ ಅರ್ಹತೆಗಳಿದ್ದೂ ಸೂಕ್ತ ಸ್ಥಾನಮಾನ ಪಡೆಯುವಲ್ಲಿ


ಅವರು ವಿಫಲರಾಗಿದ್ದರು. ಆದರೆ ಇದ್ದಷ್ಟು ದಿನ ತಾನು ನಂಬಿದ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದೆ ತನ್ನ ಹಿರಿಮೆ ಹೆಚ್ಚಿಸಿದರು.

*** ಆತ್ಮಕಥನ ಅನಾವರಣಕ್ಕೂ ಮುನ್ನ**

ತೆರೆದ ಪುಟದಂತಿದ್ದ ತನ್ನ ಬದುಕಿನ ಸಿಹಿ–ಕಹಿ ಘಟನೆಗಳ ಸಹಿತ ಎಲ್ಲಾ ನೆನಪುಗಳನ್ನು ಹಂಚಿಕೊಂಡಿದ್ದ 'ನನ್ನೊಳಗಿನ ನಾನು' ಎಂಬ ಆತ್ಮಕಥನವು 2018ರ ಆಗಸ್ಟ್ 20ಕ್ಕೆ ಮಂಗಳೂರಿನ ಪುರಭವನದಲ್ಲಿ ಅನಾವರಣಗೊಳ್ಳಲು ಎಲ್ಲಾ ಸಿದ್ಧತೆ ನಡೆಸಲಾಗಿತ್ತು. ಹಿರಿಯ ಸಾಹಿತಿ ಮುಹಮ್ಮದ್ ಕುಳಾಯಿ ಮತ್ತು ಬಿ.ಎ. ಮುಹಮ್ಮದ್ ಅಲಿ ನಿರೂಪಿಸಿದ್ದ ಈ ಆತ್ಮಕಥನ ಕೃತಿಯ ಬಿಡುಗಡೆ ಕಾರ್ಯಕ್ರಮದ ಆಮಂತ್ರಣ ಪತ್ರವೂ ಅವರ ಅಭಿಮಾನಿ ಬಳಗದ ಕೈ ಸೇರಿತ್ತು. ಕೃತಿ ಬಿಡುಗಡೆಯ ದಿನಕ್ಕಾಗಿ ಕ್ಷಣಗಣನೆ ಎದುರಿಸುತ್ತಿದ್ದ ಅವರು ಅದಕ್ಕೂ ಮೊದಲೇ ಕಾಣದ ಲೋಕಕ್ಕೆ ತೆರಳಿ ಅಭಿಮಾನಿ ಬಳಗವನ್ನು ದು:ಖಕ್ಕೀಡು ಮಾಡಿದ್ದರು. ಅಂದರೆ ಪತ್ನಿ ಖದೀಜಾ, ಪುತ್ರರಾದ ಅಬ್ದುಲ್ ಖಾದರ್ ಮುಷ್ತಾಕ್, ಆಸೀಫ್ ಮಸೂದ್, ಪುತ್ರಿಯರಾದ ಹಲೀಮಾ ಶಾಹಿನ್, ಫಾತಿಮಾ ಸಬೀನಾ ಹಾಗೂ ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳನ್ನು ಬಿಟ್ಟು 2018ರ ಜುಲೈ 10ರಂದು ಅಲ್ಪಕಾಲದ ಅಸೌಖ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಆವಾಗ ಅವರಿಗೆ 81 ವರ್ಷ ಪ್ರಾಯವಾಗಿತ್ತು. ಗಣ್ಯಾತಿಗಣ್ಯರ, ಜನಸಾಮಾನ್ಯರ ಕಂಬನಿಯೊಂದಿಗೆ ಬಜ್ಪೆ ಈದ್ಗಾ ಜುಮಾ ಮಸ್ಜಿದ್‌ನಲ್ಲಿ ಸಕಲ ಸರಕಾರಿ ಗೌರವದೊಂದಿಗೆ ಅವರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.

ಬಳಿಕ "ನನ್ನೊಳಗಿನ ನಾನು" ಆತ್ಮಕಥನವು ಅವರ ಅನುಪಸ್ಥಿತಿಯಲ್ಲಿ ಬಿಡುಗಡೆಗೊಂಡಿತ್ತು. ಅಲ್ಲೂ ಅಭಿಮಾನಿಗಳ ಕಂಬನಿಗೆ ಕೊನೆ ಇರಲಿಲ್ಲ. ಈ ಆತ್ಮಕಥನವನ್ನು ಪ್ರೊ.ಬಿ. ಸುರೇಂದ್ರ ರಾವ್ ಇಂಗ್ಲಿಷ್‌ಗೆ ಅನುವಾದಿಸಿದ್ದರು. "ದಿ ಐ ವಿದಿನ್ ಮಿ" ಇಂಗ್ಲಿಷ್ ಆವೃತ್ತಿಯು ಬಿಡುಗಡೆಗೊಂಡು ಅಪಾರ ಮನ್ನಣೆಗೆ ಪಾತ್ರವಾಗಿತ್ತು.

# ಕನ್ನಡದ ಕೋಗಿಲೆ ಬಿ.ಎಂ.ಇದಿನಬ್ಬ



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಸಮೀಪದ ಮಠ ಎಂಬಲ್ಲಿ 1919ರ ಸೆಪ್ಟಂಬರ್ 17ರಂದು ಅಬ್ದುಲ್ ರಹ್ಮಾನ್ ಮತ್ತು ಫಾತಿಮಾ ದಂಪತಿಯ ಪುತ್ರನಾಗಿ ಜನಿಸಿದ ಬೊಳುಂಬುಡ ಮಠ (ಬಿಎಂ) ಇದಿನಬ್ಬ "ಕನ್ನಡದ ಕಟ್ಟಾಳು" ಎಂದೇ ಗುರುತಿಸಲ್ಪಟ್ಟಿದ್ದರು. ಕನ್ನಡವನ್ನು ಅನ್ಯರ ಭಾಷೆ ಎಂದು ಪರಿಗಣಿಸಲ್ಪಟ್ಟಿದ್ದ ಆ ಕಾಲದಲ್ಲಿ ಬ್ಯಾರಿ ಮಾತೃಭಾಷಿಗರಾಗಿದ್ದ ಇದಿನಬ್ಬ ಕನ್ನಡಕ್ಕಾಗಿ ಕೈ ಎತ್ತಿದರು. ಕನ್ನಡದಲ್ಲಿ ನೂರಾರು ಕವನ ಕಟ್ಟಿದರು. ಸಾವಿರಾರು ಬಾರಿ ಹಾಡಿದರು. ಕೊನೆಯ ಉಸಿರು ಎಳೆಯುವವರೆಗೂ ಕನ್ನಡಕ್ಕಾಗಿ ಮನ ಮಿಡಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಉಳ್ಳಾಲ ಕ್ಷೇತ್ರದಿಂದ ಮೂರು ಬಾರಿ ಗೆದ್ದರು. ಆದರೆ ಎಂದೂ ಸಚಿವ ಸ್ಥಾನ ಸಹಿತ ಯಾವುದೇ ಅಧಿಕಾರಕ್ಕಾಗಿ ಲಾಬಿ ನಡೆಸಿದವರಲ್ಲ. ರಾಜಕಾರಣವನ್ನು ಕಸುಬನ್ನಾಗಿಸಿದವರಲ್ಲ. ತನ್ನ ಕುಟುಂಬದ ಸದಸ್ಯರನ್ನು ರಾಜಕೀಯದಲ್ಲಿ ಪಳಗಿಸಿದವರಲ್ಲ. ಅರ್ಹವಾಗಿ ಬಂದ ಅಧಿಕಾರವನ್ನು ಸದುಪಯೋಗಿಸಿಕೊಂಡರು. 1994ರಲ್ಲಿ ರಾಜ್ಯದ 224 ಶಾಸಕರ ಪೈಕಿ "ತನಗೆ ಮುಂದಿನ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಬೇಡ" ಎಂದಿದ್ದ ಏಕೈಕ ಶಾಸಕ. ರಾಜಕಾರಣಿ ಎಂದು ಗುರುತಿಸಿಕೊಳ್ಳುವುದಕ್ಕಿಂತಲೂ ಸ್ವಾತಂತ್ರ್ಯ ಹೋರಾಟಗಾರ, ಅಪ್ಪಟ ಗಾಂಧಿವಾದಿ, ಖಾದಿದಾರಿ, ಕವಿ, ಕಥೆಗಾರ, ಹಾಡುಗಾರ, ಕನ್ನಡದ ಕಟ್ಟಾಳು ಆಗಿ ಗುರುತಿಸಲ್ಪಟ್ಟಿದ್ದರು.

ಪುತ್ತೂರಿನಲ್ಲಿ ಹೈಸ್ಕೂಲ್ ಕಲಿತ ಬಳಿಕ ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಹಕಾರಿ ಸಂಘದಲ್ಲಿ 34 ವರ್ಷಗಳ ಕಾಲ ಉದ್ಯೋಗಿಯಾಗಿದ್ದರು. 1978ರಲ್ಲಿ ನಿವೃತ್ತರಾಗುವಾಗ "ದಕ್ಷ ಸಹಕಾರಿ" ಎಂಬ ಬಿರುದು ಅವರಿಗೆ ಪ್ರಾಪ್ತವಾಗಿತ್ತು.

*** ರಾಜಕೀಯ ಕ್ಷೇತ್ರ**

ತನ್ನ 19ರ ಹರೆಯದಲ್ಲಿ ಅಂದರೆ 1938ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದ್ದ ಬಿ.ಎಂ.ಇದಿನಬ್ಬ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದರ ಫಲವಾಗಿ ಉಳ್ಳಾಲ ವಿಧಾನಸಭಾ ಕ್ಷೇತ್ರದಿಂದ 1962ರಲ್ಲಿ ಟಿಕೆಟ್ ಲಭಿಸಿತ್ತು. ಮೊದಲ ಯತ್ನದಲ್ಲಿ ಅವರಿಗೆ ಸೋಲಾಯಿತು. 1967 ಮತ್ತೆ ಟಿಕೆಟ್ ಸಿಕ್ಕಿತ್ತು. ನಿರೀಕ್ಷೆಯಂತೆ ಗೆಲುವು ಸಾಧಿಸಿದರು. ಆ ಮೂಲಕ ಬ್ಯಾರಿ ಮುಸ್ಲಿಮ್ ಸಮುದಾಯದ ಪ್ರಪ್ರಥಮ ಶಾಸಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. 1972, 1978. 1983ರಲ್ಲಿ ಟಿಕೆಟ್ ಲಭಿಸಲಿಲ್ಲ. ಆದರೂ ಧೃತಿಗೆಡಲಿಲ್ಲ. ಪಕ್ಷಕ್ಕೆ ನಿಷ್ಠೆ ತೋರಿಸಿದ್ದರಿಂದ 1985ರಲ್ಲಿ ಕಾಂಗ್ರೆಸ್ ಮತ್ತೆ ಟಿಕೆಟ್ ನೀಡಿತ್ತು. ಎರಡನೇ ಬಾರಿ ಶಾಸಕರಾದ ಅವರು 1989ರಲ್ಲಿ ಮೂರನೇ ಬಾರಿಯೂ ಶಾಸಕರಾದರು. ನಾಲ್ಕನೇ ಬಾರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದ್ದರೂ ಕೂಡ ತನಗೆ ಟಿಕೆಟ್ ಬೇಡ ಎಂದು ಹೇಳಿ ರಾಜಕೀಯಕ್ಕೆ ಸ್ವಯಂ ನಿವೃತ್ತಿ ಘೋಷಿಸಿ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

*** ಭಾಷೆ–ಸಾಹಿತ್ಯ–ಸಾಂಸ್ಕೃತಿಕ ಜವಾಬ್ದಾರಿ**

ಶಾಸಕರಾಗಿ ರಾಜಕಾರಣದಲ್ಲಿ ಸಕ್ರಿಯರಾಗಿದ್ದರೂ ಕೂಡ ಎಂದೂ ಅಧಿಕಾರಕ್ಕೆ ಲಾಬಿ ಮಾಡಿದವರಲ್ಲ. ಅಧಿಕಾರ ಅವರನ್ನೇ ಹುಡುಕಿಕೊಂಡು ಬರುತ್ತಿತ್ತು. ಕೈ–ಬಾಯಿ ಕೆಡಿಸಿಕೊಳ್ಳದ ಶುದ್ಧ–ಶುಭ್ರ ರಾಜಕಾರಣಿ. ಸಂಪ್ರದಾಯಸ್ಥರೇ ತುಂಬಿದ್ದ ಆ ಕಾಲದಲ್ಲಿ ಅವರು ರಚಿಸಿದ ಸಾಹಿತ್ಯದಲ್ಲಿ ತಣ್ಣನೆಯ ಬಂಡಾಯ, ಕಿಡಿಕಾರುವ ವ್ಯಂಗ್ಯ ಎದ್ದು ಕಾಣುತ್ತಿತ್ತು. ತನ್ನ 83ರ ಹರೆಯದ ಇಳಿ ವಯಸ್ಸಿನಲ್ಲಿ ಅಂದರೆ 2003ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನದ ಜವಾಬ್ದಾರಿ ಸಿಕ್ಕಾಗ ಅದನ್ನು ಪ್ರೀತಿಪೂರ್ವಕವಾಗಿ ಸ್ವೀಕರಿಸಿ ನಾಡಿನಾದ್ಯಂತ ಸಂಚರಿಸಿ ಕನ್ನಡದ ಅಭಿವೃದ್ಧಿಗೆ ಟೊಂಕ ಕಟ್ಟಿದರು. ಅದಕ್ಕೂ ಮೊದಲು ಅಂದರೆ 1991ರಿಂದ 1994ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಈ ಮಧ್ಯೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಆಯ್ಕೆ ಸಮಿತಿ, ಪಂಪ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿದ್ದ ಅವರು 1962ರಿಂದ 1971ರವರೆಗೆ ಸತತ 9 ವರ್ಷಗಳ ಕಾಲ ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 1970ರಿಂದ 1982ರವರೆಗೆ ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್‌ನ ಕೇಂದ್ರ ಸಮಿತಿಯ ಸದಸ್ಯರಾಗಿಯೂ 12 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

2002ರಲ್ಲಿ ಮೂಡುಬಿದಿರೆಯಲ್ಲಿ ನಡೆದ 12ನೆ ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮತ್ತು ಕಿನ್ನಿಗೋಳಿ ಸಮೀಪದ ಪಕ್ಷಿಕೆರೆಯಲ್ಲಿ ನಡೆದ ಮಂಗಳೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ

ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಮಂಗಳೂರಿನ ಕನ್ನಡ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಇವರ ಬದುಕಿನ ಘಟನೆಯನ್ನು ಆಧರಿಸಿ ಸಾಹಿತಿ ವಿ.ಗ. ನಾಯಕ ಬರೆದ "ಕನ್ನಡದ ಕಟ್ಟಾಳು: ಬಿಎಂ ಇದಿನಬ್ಬ" ಕೃತಿಯನ್ನು ಕಾಂತಾವರ ಕನ್ನಡ ಸಂಘವು "ನಾಡಿಗೆ ನಮಸ್ಕಾರ' –ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆ'ಯಡಿ ಪ್ರಕಟಿಸಿತ್ತು.

*** ರಾಜಕೀಯ ಸ್ಥಾನಮಾನ**

1993ರಲ್ಲಿ ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಅದರೊಂದಿಗೆ ದ.ಕ.ಜಿಲ್ಲಾ ಕಾಂಗ್ರೆಸ್ ಪಕ್ಷದ ವಿವಿಧ ಸ್ಥಾನಗಳನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ್ದರು. ರಾಜಕೀಯವನ್ನು ಎಂದಿಗೂ ದುರುಪಯೋಗಪಡಿಸಿಕೊಳ್ಳದ, ಹೆಸರನ್ನೂ ಕೆಡಿಸಿಕೊಳ್ಳದ ಬಿ.ಎಂ. ಇದಿನಬ್ಬ ಅಧಿಕಾರವನ್ನು ಸಮಾಜಕ್ಕಾಗಿ ಬಳಸಿಕೊಂಡರು. ಮಂಗಳೂರು ವಿಶ್ವವಿದ್ಯಾನಿಲಯ ಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿ, ರಾಜ್ಯ ಮೀನುಗಾರಿಕಾ ನಿಗಮ, ಮಂಗಳೂರು ಬಂದರ್ ಟ್ರಸ್ಟ್‌ನ ಸದಸ್ಯರಾಗಿ, ದ.ಕ.ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

*** ಸಾಹಿತ್ಯ ಕ್ಷೇತ್ರ**

ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾರಿ–ಮುಸ್ಲಿಂ ಸಮುದಾಯದಿಂದ ಹೊರಹೊಮ್ಮಿದ ಮೊತ್ತ ಮೊದಲ ಸಾಹಿತಿ ಎಂಬ ಕೀರ್ತಿಗೆ ಪಾತ್ರರಾಗಿದ್ದ ಅವರು "ಮಾನವತಾ ಸಾಹಿತ್ಯ ಮಾಲೆ" ಪ್ರಕಾಶನ ಸಂಸ್ಥೆಯ ಮೂಲಕಒಟ್ಟು 6 ಕಥಾ ಸಂಕಲನ, 6 ಕವನ ಸಂಕಲನ, 2 ಮಕ್ಕಳ ಸಾಹಿತ್ಯ ಕೃತಿಯನ್ನೂ ರಚಿಸಿದ್ದಾರೆ. ಅದರಲ್ಲಿ ಹೃದಯಗೀತೆಗಳು, ಜೇನುಗೂಡು, ವಿರಹಗೀತೆಗಳು, ಕಿಡಿಗಳು, ಹನಿಗವನಗಳು, ಕಾವ್ಯಕುಂಜ ಎಂಬ ಕವನ ಸಂಕಲನಗಳಲ್ಲದೆ ಬಾಳಿನ ಚಿತ್ರಗಳು, ಹರಿದ ಕೋಟು, ಒಂದು ಗೊನೆ ರಸಬಾಳೆ, ರತ್ನಮಾಲೆ, ಹೃದಯ ಪರಿವರ್ತನೆ, ಕಥಾಗೊಂಚಲು ಎಂಬ ಕಥಾಸಂಕಲನಗಳು ಹಾಗೂ ಚುಟುಕ ರಾಶಿ, ಮಣಿಮಾಲೆ ಇತ್ಯಾದಿಯಾಗಿ ಮಕ್ಕಳಿಗೆ ಸಂಬಂಧಿಸಿದ ಕೃತಿಗಳೂ ಸೇರಿವೆ.

ಭಾರತ–ಚೀನಾ, ಭಾರತ–ಪಾಕಿಸ್ತಾನ ಯುದ್ಧ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿ ಅನೇಕ ಕವನಗಳನ್ನು ರಚಿಸಿದ್ದಾರೆ. ಉಪ್ಪಿನಂಗಡಿಯ ಮಠದಲ್ಲಿ ಹುಟ್ಟಿ ಬೆಳೆದರೂ ಉಳ್ಳಾಲವನ್ನು ತನ್ನ ಕರ್ಮಭೂಮಿಯನ್ನಾಗಿಸಿದರು. ಅದರ ಫಲವಾಗಿ ಉಳ್ಳಾಲದ ನಾಡಗೀತೆ ಎಂದೇ ಹೇಳಲಾಗುವ "ಇದು ಉಳ್ಳಾಲ' ಕವಿತೆಯಲ್ಲಿ ಉಳ್ಳಾಲದ ಸೌಂದರ್ಯವನ್ನು ಬಣ್ಣಿಸಿದ್ದಾರೆ. ಜೊತೆಗೆ "ಸ್ವಾಗತ ಗೀತೆ", "ಉಳ್ಳಾಲದ ಉರೂಸ್" ಕವಿತೆಗಳ ಮೂಲಕ ಉಳ್ಳಾಲದ ಹಿರಿಮೆ ಎತ್ತಿ ಹಿಡಿದಿದ್ದಾರೆ.

ಸೌಹಾರ್ದಕ್ಕೆ ಒತ್ತು ಕೊಟ್ಟು "ಗಮಕ" ಕಲೆಯಲ್ಲೂ ನಿರತರಾಗಿದ್ದರು. ದೇಶಭಕ್ತಿ ಸಹಿತ ಅನೇಕ ಕವಿತೆಗಳನ್ನು ವಾಚನ–ಹಾಡುವ ಮೂಲಕ "ಕನ್ನಡದ ಕೋಗಿಲೆ", "ಸಾಹಿತ್ಯರತ್ನ", "ಕಾವ್ಯಜ್ಯೋತಿ" ಇತ್ಯಾದಿ ಬಿರುದುಗಳಿಗೂ ಪಾತ್ರರಾಗಿದ್ದರು.

ಬೆಂಗಳೂರು ಮತ್ತು ಮಂಗಳೂರು ಆಕಾಶವಾಣಿಯಲ್ಲೂ ಆಗಾಗ ಕವನ ವಾಚನ, ಚಿಂತನಾ ಭಾಷಣ ಪ್ರಸಾರವಾಗಿದೆ. ಸತತ ಮೂರು ಬಾರಿ ಮೈಸೂರು ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿದ ಹಿರಿಮೆಯೂ ಅವರದ್ದು.

*** ಮಾಧ್ಯಮ ಕ್ಷೇತ್ರ**

ಕತೆ, ಕವನ ಸಹಿತ ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಬರೆಯುತ್ತಿದ್ದ ಅವರು ಕಯ್ಯಾರ ಕಿಂಞಣ್ಣ ರೈ "ಐಕ್ಯಗಾನ' ಕವಿತೆಯನ್ನು ವಿವಿಧ ವೇದಿಕೆಗಳಲ್ಲಿ ಒಂದು ಸಾವಿರಕ್ಕೂ ಅಧಿಕ ಬಾರಿ ಹಾಡಿ ದಾಖಲೆ ನಿರ್ಮಿಸಿದ್ದರು. ಎಳೆಯ ಹರೆಯದಲ್ಲೇ ಭಾಷಣ, ಬರೆಹದಲ್ಲಿ ಆಸಕ್ತಿ ವಹಿಸುತ್ತಿದ್ದ ಅವರು ಮಾಧ್ಯಮ ಕ್ಷೇತ್ರದಲ್ಲೂ ಕೈಯಾಡಿಸಿದ್ದರು. ಶಾಲೆಯ ಹಸ್ತ ಪತ್ರಿಕೆ "ವಿದ್ಯಾರ್ಥಿ ಮಿತ್ರ"ದಲ್ಲಿ ಪ್ರಕಟವಾಗುತ್ತಿದ್ದ ಬರೆಹಗಳಲ್ಲಿ ಅವರ ಕಥೆ, ಕವನ, ಲೇಖನಗಳೇ ತುಂಬಿತ್ತು. ಆವಾಗಲೇ ಸಹಕಾರಿ ಧುರೀಣ ಮೊಳಹಳ್ಳಿ ಶಿವರಾಯರು ಇದಿನಬ್ಬರನ್ನು ಗುರುತಿಸಿದ್ದರು. ಹಾಗೇ ಪ್ರೌಢಶಾಲೆಯ ಕಲಿಕೆ ಮುಗಿದ ಬಳಿಕ ಸಹಕಾರಿ ಕ್ಷೇತ್ರದಲ್ಲಿ ತನ್ನ ವೃತ್ತಿ ಬದುಕು ಕಟ್ಟಿಕೊಂಡರು.

"ಉದಯಚಂದ್ರ" ಪತ್ರಿಕೆಯ ಮೂಲಕ ಮಾಧ್ಯಮ ಕ್ಷೇತ್ರದಲ್ಲಿ ಗುರುತಿಸಿಕೊಂಡರು. ಪ್ರಜಾವಾಣಿ, ವಿಶಾಲ ಕರ್ನಾಟಕ, ನವಕೀರ್ತಿ ಪತ್ರಿಕೆಗಳಲ್ಲೂ ದುಡಿದರು. ಬೇರೆ ಬೇರೆ ಪತ್ರಿಕೆಗಳಲ್ಲಿ ಅವರ 700ಕ್ಕೂ ಅಧಿಕ ಲೇಖನಗಳು ಪ್ರಕಟಗೊಂಡಿವೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಹೊರತರುತ್ತಿದ್ದ ಪತ್ರಿಕೆಯ ಸಂಪಾದಕರೂ

ಆಗಿದ್ದರು. ದ.ಕ.ಜಿಲ್ಲಾ ಜರ್ನಲಿಸ್ಟ್ ಅಸೋಸಿಯೇಶನ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

*** ಬ್ಯಾರಿ ಆಂದೋಲನದ ಮುಂದಾಳು**

ಬಿ.ಎಂ.ಇದಿನಬ್ಬ ಬ್ಯಾರಿ ಆಂದೋಲನದ ಮುಂದಾಳು ಕೂಡ ಆಗಿದ್ದರು. ಬೆಂಗಳೂರಿನಲ್ಲಿ ನಡೆದ ಪ್ರಥಮ ಬ್ಯಾರಿ ಸಮ್ಮೇಳನದಲ್ಲಿ ತನ್ನ ಛಾಪು ಮೂಡಿಸಿದ್ದ ಅವರು 1998ರ ನವೆಂಬರ್ 22ರಂದು ಮಂಗಳೂರಿನ ಪುರಭವನದಲ್ಲಿ ನಡೆದ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದರು. ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್‌ನ ಗೌರವ ಸಲಹೆಗಾರರಾಗಿದ್ದರು. ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಘೋಷಿಸಲೇಬೇಕು ಎಂದು ಸರಕಾರದ ಮುಂದೆ ಪಟ್ಟು ಹಿಡಿದು ಆಗ್ರಹಿಸಿದ್ದರು.

*** ಪ್ರಶಸ್ತಿಗಳ ಗರಿ**

ಖಾದಿ ಜುಬ್ಬಾ, ಕೋಟು, ಬಿಳಿ ಪಂಚೆ ಉಡುವ, ಟೋಪಿ ಧರಿಸುವ ಅವರು ಬಿಳಿಗಡ್ಡಧಾರಿಯೂ ಹೌದು. ಶುದ್ಧ ಮತ್ತು ಶುಭ್ರ ಮನಸ್ಸಿನ, ಸರಳ–ಸಜ್ಜನಿಕೆಯ, ದೇಶಪ್ರೇಮಿ–ಮಾನವತಾವಾದಿಯಾಗಿದ್ದ ಬಿ.ಎಂ. ಇದಿನಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ, ಸಂದೇಶ ಪ್ರತಿಷ್ಠಾನದ ಪ್ರಶಸ್ತಿ, ಕನ್ನಡ ಏಕೀಕರಣ ಪ್ರಶಸ್ತಿ, ಗೋರೂರು ರಾಮಸ್ವಾಮಿ ಅಯ್ಯಂಗಾರ ಪ್ರಶಸ್ತಿಯೂ ಲಭಿಸಿದೆ.

*** ಕೊನೆಯುಸಿರು**

ತನ್ನ ಬದುಕಿಗೆ, ತನ್ನ ಯಶಸ್ಸಿಗೆ ಪ್ರೇರಣೆಯಂತಿದ್ದ ಪತ್ನಿ ಹಲೀಮಾರ ಅಗಲಿಕೆಯ ಬಳಿಕ ಬಿಎಂ ಇದಿನಬ್ಬ ಅತೀವವಾಗಿ ನೊಂದಿದ್ದರು. ಅದೇ ಕೊರಗಿನಿಂದ 2009ರ ಎಪ್ರಿಲ್ 11ರಂದು ಅವರು ಇಬ್ಬರು ಪುತ್ರರು ಮತ್ತು ನಾಲ್ಕು ಮಂದಿ ಪುತ್ರಿಯರನ್ನು ಬಿಟ್ಟಗಲಿದರು.

# ತತ್ವ ನಿಷ್ಠೆಗೆ ಸಾಕ್ಷಿಯಾದ ಯು.ಟಿ.ಫರೀದ್



ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದ ಯು.ಟಿ.ಫರೀದ್ ಕರಾವಳಿ ಕನ್ನಡಿಗರ ಅಭಿಮಾನದ ಬಿಂದು. 1967ರಲ್ಲಿ ಮಂಗಳೂರಿನಲ್ಲಿ ನ್ಯಾಯವಾದಿಯಾಗಿ ವೃತ್ತಿ ಜೀವನ ಆರಂಭಿಸಿದ್ದ ಅವರು ಬಳಿಕ ರಾಜಕೀಯಕ್ಕೆ ಪದಾರ್ಪಣೆಗೈದರು. ಹಾಗೇ ಯುವ ಕಾಂಗ್ರೆಸ್‌ನ ನಾಯಕನಾಗಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡರು. ಇಂಟಕ್ ಉಪಾಧ್ಯಕ್ಷರಾಗಿ, ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಕರಾವಳಿಯ ಮುಸ್ಲಿಮ್ ಸಮಾಜದ ಯುವಕನೊಬ್ಬ ರಾಜಕೀಯದಲ್ಲಿ ಸಂಚಲನ ಮೂಡಿಸುತ್ತಿರುವುದನ್ನು ಕಂಡ ಕಾಂಗ್ರೆಸ್ ಹೈಕಮಾಂಡ್ ಉಳ್ಳಾಲ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿತನಕ್ಕೆ ಟಿಕೆಟ್ ನೀಡಿ ಪ್ರೋತ್ಸಾಹಿಸಿತ್ತು. ಅದರಂತೆ ಯು.ಟಿ. ಫರೀದ್ 1972ರಲ್ಲಿ ಪ್ರಥಮ ಯತ್ನದಲ್ಲೇ ಶಾಸಕರಾಗಿ ವಿಧಾನಸೌಧದ ಮೆಟ್ಟಿಲೇರಿದರು.

ಯು.ಟಿ.ಫರೀದ್ ಉಳ್ಳಾಲ ಕ್ಷೇತ್ರದ ಅಜಾತ ಶತ್ರು ಎನ್ನಬಹುದು. ನಾಲ್ಕು ಬಾರಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಪಣತೊಟ್ಟು ಸೈ ಎನಿಸಿಕೊಂಡವರು. ವಿಧಾನಸಭೆಯಲ್ಲಿ "ಸದನವೀರ" ಎನಿಸಿಕೊಂಡವರು. 1972 ಮತ್ತು 1978ರಲ್ಲಿ ಸತತ ಎರಡು ಬಾರಿ ಶಾಸಕನಾಗಿ ಜನರ ಪ್ರೀತಿಗೆ ಪಾತ್ರರಾದರೂ ಕಾರಣಾಂತರದಿಂದ ಪಕ್ಷ ಮತ್ತೆ ಅವರಿಗೆ ಟಿಕೆಟ್ ನೀಡಿಲಿಲ್ಲ. ಆದರೆ ತಾಳ್ಮೆಯಿಂದ ಕಾದ ಯು.ಟಿ.ಫರೀದ್ ಪಕ್ಷಕ್ಕಾಗಿ ದುಡಿದರು. ಅಧಿಕಾರ ಇದ್ದರೂ, ಇಲ್ಲದೇ ಇದ್ದರೂ ಜನರ ಸೇವೆಗೆ ತನ್ನನ್ನು ಮುಡಿಪಾಗಿಟ್ಟರಲ್ಲದೆ ಕಾಂಗ್ರೆಸ್ ಪಕ್ಷದ ನಿಷ್ಠೆಯನ್ನು ಕಾಪಾಡಿಕೊಂಡರು. ರಾಜ್ಯ ಕಾಂಗ್ರೆಸ್‌ನ ವಿವಿಧ ಹುದ್ದೆಯೊಂದಿಗೆ ಪಕ್ಷದ ಬೆಳವಣಿಗೆಗೆ ಜೀವನ ಸವೆಸಿದರು. ಸತತ 21 ವರ್ಷಗಳ ತಾಳ್ಮೆಗೆ ಫಲವೆಂಬಂತೆ 1999ರಲ್ಲಿ ಉಳ್ಳಾಲ ಕ್ಷೇತ್ರದ ಶಾಸಕ ಸ್ಥಾನಕ್ಕೆ ಮತ್ತೆ ಟಿಕೆಟ್ ದೊರಕಿತು. ಯು.ಟಿ.ಫರೀದ್ ಪುನಃ ಶಾಸಕರಾದರು. 2004ರ ಚುನಾವಣೆಯಲ್ಲೂ ವಿಜೇತರಾಗಿ ಜನಾನುರಾಗಿಯಾಗಿ ಬೆಳೆದರು. ಕೊನೆಯ ಶಾಸಕಾವಧಿ ಪೂರೈಸುವ ಮುನ್ನವೇ ಅಂದರೆ 2007ರ ಫೆಬ್ರವರಿ 6ರಂದು ಅಲ್ಪಕಾಲದ ಅಸೌಖ್ಯದಿಂದ ತನ್ನ 68ರ ಹರೆಯದಲ್ಲಿ ನಿಧನರಾದರು.

*** ಜನ್ಮಭೂಮಿ ಒಂದೆಡೆ-ಕರ್ಮಭೂಮಿ ಇನ್ನೊಂದೆಡೆ**

1938ರ ಜುಲೈ 15ರಂದು ಯು.ಟಿ. ಮುಹಮ್ಮದ್ ಹಾಜಿ-ಹಲೀಮಾ ದಂಪತಿಯ ಪುತ್ರನಾಗಿ ಯು.ಟಿ.ಫರೀದ್ ಜನಿಸಿದರು. ಯು.ಟಿ. ಮುಹಮ್ಮದ್ ಹಾಜಿಯ ಮೂಲಮನೆ ಕನ್ಯಾನ ಸಮೀಪದ ಬಾಯಾರಿನ ಚಿಪ್ಪಾರ್. ಬಳಿಕ ಅವರು ಉಪ್ಪಳದ ತುರ್ತಿಯಲ್ಲಿ ನೆಲೆಸಿದ್ದರು. ಮನೆ ತುರ್ತಿಯಲ್ಲಾದರೂ ಮುಹಮ್ಮದ್ ಹಾಜಿಯ ವ್ಯವಹಾರ ವಿಟ್ಲ ಸಮೀಪದ ಪುಣಚ ಪರಿಯಾಲ್ತಡ್ಕದಲ್ಲಿತ್ತು. ಫರೀದ್ ಅವರು ಉಪ್ಪಳ ತುರ್ತಿ (ಯು.ಟಿ)ಯಲ್ಲಿ ಬೆಳೆದರೂ ಅವರ ರಾಜಕೀಯ ಜೀವನ ಉಳ್ಳಾಲ ಕ್ಷೇತ್ರದಲ್ಲಾಯಿತು. ಉಳ್ಳಾಲದ ತೋಟ ಎಂಬಲ್ಲಿ ಮನೆ ಮಾಡಿಕೊಂಡರು. ಬಳಿಕ ಮಂಗಳೂರಿನ ಕಂಕನಾಡಿಗೆ ವಾಸ್ತವ್ಯ ಬದಲಿಸಿದರು.

ಯು.ಟಿ.ಫರೀದ್ ಮಂಗಳೂರಿನಲ್ಲಿ ಕೈಯ್ಯಾಡಿಸದ ಕ್ಷೇತ್ರವಿಲ್ಲ. ರಾಜಕೀಯವಲ್ಲದೆ ಮಂಗಳೂರಿನ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಆ ವಲಯಗಳಿಗೆ ಅಪಾರ ಕೊಡುಗೆ ನೀಡಿದ್ದರು. ಸಮಾಜದ ಬಗ್ಗೆ ಅಪಾರ ಕಾಳಜಿಯಿತ್ತು. ಅಳೆದು ತೂಗಿ ನೋಡುವ ಮಿತಭಾಷಿಗ. ರಾಜಕೀಯವಾಗಿಯೂ ಆರೋಪ-ಪ್ರತ್ಯಾರೋಪ ಮಾಡಿದವರಲ್ಲ. ತನ್ನ ಬಳಿ ಬಂದ ಎಲ್ಲರ ಅಹವಾಲುಗಳನ್ನು ಅತ್ಯಂತ ತಾಳ್ಮೆಯಿಂದಲೇ ಆಲಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ಅವರು ಎಂದೂ ಕೂಡ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡವರಲ್ಲ. ತನ್ನವ ತಪ್ಪು ಮಾಡಿದರೂ ಕೂಡ ಆತನನ್ನು ಶಿಕ್ಷೆಯಿಂದ ಪಾರು ಮಾಡಲು ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ಒತ್ತಡ ಹೇರಿದವರಲ್ಲ. ಶಿಕ್ಷೆ ಕಡಿಮೆ ಪ್ರಮಾಣದಲ್ಲಾದರೂ ಸರಿ ನಿಮ್ಮ ಇತಿಮಿತಿಯೊಳಗೆ ಕ್ರಮ ಜರುಗಿಸುವಂತೆ ಪೊಲೀಸರಿಗೆ ಸೂಚಿಸುತ್ತಿದ್ದುದನ್ನು ಅವರ ನಿಕಟವರ್ತಿಗಳು ನೆನಪಿಸಿಕೊಳ್ಳುತ್ತಾರೆ.


ಅವರ ಸಮಾಜಮುಖಿ ಸೇವೆಗೆ ಮಂಗಳೂರು ತಾಲೂಕಿನ ಹರೇಕಳ ಗ್ರಾಮ ಸಾಕ್ಷಿಯಾಗಿದೆ. ಈ ಗ್ರಾಮದ ನೂರಾರು ಬಡವರಿಗೆ ಒಂದೆಡೆ ಮನೆ ನಿರ್ಮಿಸಿಕೊಟ್ಟಿದ್ದರು. ಬಡವರ ಬಗ್ಗೆ ಅಪಾರ ಕರುಣೆ ತೋರಿಸುತ್ತಿದ್ದ ಫರೀದ್‌ರನ್ನು ಮುಂದಿನ ಪೀಳಿಗೆಯೂ ನೆನಪಿಸಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ಸ್ಥಳೀಯ ಹಿರಿಯರು ಆ ಊರಿಗೆ "ಫರೀದ್ ನಗರ" ಎಂದು ಹೆಸರಿಸಿ ಅವರಿಗೆ ಗೌರವ ಸಲ್ಲಿಸಿದ್ದಾರೆ.

*** ಸಂತೃಪ್ತ ಕುಟುಂಬ**

ಯು.ಟಿ.ಫರೀದ್ ಕಡಬದ ಮುಳಿಮಜಲಿನ ಹಾಜಿ ಅಬ್ದುಲ್ ಖಾದರ್ ಕಡಬಕ್ಕಾರ್-ಮರಿಯಮ್ಮ ದಂಪತಿಯ ಮಗಳು ನಸೀಮಾರನ್ನು ವಿವಾಹವಾದರು. ಈ ದಂಪತಿಗೆ ನಾಲ್ಕು ಮಂದಿ ಪುತ್ರರು ಮತ್ತು ಒಬ್ಬ ಪುತ್ರಿಯ ಸಹಿತ ಐವರು ಮಕ್ಕಳು.

ಹಿರಿಯ ಪುತ್ರ ಯು.ಟಿ.ಮಹಮ್ಮದ್ ಅಲಿ ಇಮ್ತಿಯಾಝ್ ವೃತ್ತಿಯಲ್ಲಿ ವೈದ್ಯ. ದ್ವಿತೀಯ ಪುತ್ರ ಯು.ಟಿ. ಖಾದರ್ ತನ್ನ ತಂದೆಯ ಮಾರ್ಗದರ್ಶನ-ಗರಡಿಯಲ್ಲಿ ಪಳಗಿ ಸತತ ನಾಲ್ಕು ಬಾರಿ ಶಾಸಕರಾಗಿ, ರಾಜ್ಯದ ಸಚಿವರಾಗಿ, ದ.ಕ.ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ತೃತೀಯ ಪುತ್ರ ಡಾ. ಯು.ಟಿ.ಇಫ್ತಿಕಾರ್ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದಾರೆ. ಕಿರಿಯ ಪುತ್ರ ಯು.ಟಿ.ಝುಲ್ಫಿಕರ್ ಬೆಂಗಳೂರು ನಸೀಮಾ ಫರೀದ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ಸೈನ್ಸ್‌ನ ಅಧ್ಯಕ್ಷರಾಗಿದ್ದಾರೆ. ಏಕೈಕ ಪುತ್ರಿ ಝೀನತ್ ಸಹಿತ ನಾಲ್ವರು ಪುತ್ರರು "ಯು.ಟಿ.ಫರೀದ್ ಫರೀದ್ ಫೌಂಡೇಶನ್ ಮಂಗಳೂರು" ಮೂಲಕ ಸಮಾಜಸೇವೆ ಮಾಡುತ್ತಿದ್ದಾರೆ.

# ಅದ್ವಿತೀಯ ಮಾತುಗಾರ ಬಿ.ಎ. ಉಮರಬ್ಬ



1991ರ ನವೆಂಬರ್ 25ರ ಮುಂಜಾನೆ ನಾಡಿನ ಎಲ್ಲಾ ಪತ್ರಿಕೆಗಳು ತಮ್ಮ ಮುಖಪುಟಗಳಲ್ಲಿ ಹೊತ್ತು ತಂದ ಮಾಜಿ ಶಾಸಕ ಬಿ.ಎ.ಉಮರಬ್ಬರ ದುರಂತ ಮರಣ ವಾರ್ತೆಯನ್ನು ನೋಡಿ ಇಡೀ ರಾಜ್ಯ ಆಶ್ಚರ್ಯ, ದುಃಖ, ನೋವಿನಿಂದ ಒಂದು ಕ್ಷಣ ಸ್ತಬ್ಧವಾಗಿತ್ತು. ಜಿಲ್ಲೆಯ ರಾಜಕೀಯದಲ್ಲಿ ಇತಿಹಾಸ ನಿರ್ಮಿಸಿದ ಓರ್ವ ಅಪೂರ್ವ ವ್ಯಕ್ತಿ ಇಷ್ಟು ಬೇಗ ನಮ್ಮೆಲ್ಲರನ್ನು ಅಗಲಿ ಹೋಗುತ್ತಾರೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಎಲ್ಲವೂ ಆ ಸೃಷ್ಟಿಕರ್ತನ ತೀರ್ಮಾನ. ಉಮರಬ್ಬ ಕೇವಲ ಓರ್ವ ರಾಜಕಾರಣಿ ಆಗಿದ್ದವರಲ್ಲ. ಅವರು ಪ್ರತಿಭೆಗಳ ಆಗರವಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಸಮೀಪದ ಬೈಕಂಪಾಡಿಯಲ್ಲಿ ಬಿ.ಕೆ. ಅಬ್ದುಲ್ ಖಾದರ್–ಬೀಫಾತಿಮ ದಂಪತಿಯ ಪುತ್ರನಾಗಿ 1950ರ ಡಿಸೆಂಬರ್ 7ರಂದು ಬಿ.ಎ.ಉಮರಬ್ಬ ಜನಿಸಿದರು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕಮ್ಮರಡಿಯಲ್ಲಿ ಅಬ್ದುಲ್ ಖಾದರ್ ಉದ್ಯಮಿ ಮತ್ತು ಕೃಷಿಕರಾಗಿದ್ದರು. ಈಗಲೂ ಶಿವಮೊಗ್ಗದಲ್ಲಿರುವ 'ಮೋಡರ್ನ್ ಟಾಕೀಸ್‌ನ್ನು ಕಟ್ಟಿಸಿದ್ದು ಕೂಡ ಅಬ್ದಲ್ ಖಾದರ್. ಉಮರಬ್ಬರು ಬಾಲ್ಯವನ್ನು ಕಮ್ಮರಡಿಯಲ್ಲೇ ಕಳೆದಿದ್ದು, ಕಮ್ಮರಡಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢ ಶಾಲೆ, ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜು, ಶಿವಮೊಗ್ಗದ ದೇಶೀಯ ವಿದ್ಯಾ ಶಾಲೆ ಹಾಗೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕಲಿತು ಪದವೀಧರರಾಗಿದ್ದರು.

ವಿದ್ಯಾರ್ಥಿ ಜೀವನದಲ್ಲೇ ಉಮರಬ್ಬ ಸಾಹಿತ್ಯ, ಸಂಘಟನೆ ಮತ್ತು ಮಾತುಗಾರಿಕೆಯಿಂದಾಗಿ ಬಹಳ ಜನಪ್ರಿಯರಾಗಿದ್ದರು. ಸಮಾಜವಾದಿ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದ ಅವರು ಆಗಿನ ಸಮಾಜವಾದಿ ನೇತಾರರುಗಳಾಗಿದ್ದ ಶಾಂತವೇರಿ ಗೋಪಾಲ ಗೌಡ, ಕೋಣಂದೂರು ಲಿಂಗಪ್ಪರ ಆಪ್ತರಾಗಿದ್ದರು. ಡಾ. ರಾಮಮನೋಹರ ಲೋಹಿಯಾ ಅವರ ರಾಜಕೀಯದ ಆದರ್ಶ ವ್ಯಕ್ತಿಯಾಗಿದ್ದರು. ಆಗಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೂ ಬಹಳ ಆತ್ಮೀಯರಾಗಿದ್ದರು.

ಉಮರಬ್ಬ ಮೈಸೂರಿನಲ್ಲಿ ಕಲಿಯುತ್ತಿರುವಾಗ ಸಮಾನ ಮನಸ್ಕರ ಒಂದು ದೊಡ್ಡ ಗುಂಪಿತ್ತು. ಸಾಹಿತಿಗಳಾದ ಆಲನಹಳ್ಳಿ ಶ್ರೀಕೃಷ್ಣ, ದೇವನೂರ ಮಹದೇವ, ಮಾಜಿ ಸಚಿವ ಶ್ರೀನಿವಾಸ ಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ.. ಹೀಗೆ ಈ ಗುಂಪಿಗೆ ಪ್ರಖ್ಯಾತ ಪತ್ರಕರ್ತ ಪಿ. ಲಂಕೇಶ್ ಮಾರ್ಗದರ್ಶಕರಾಗಿದ್ದರು. ವಿದ್ಯಾರ್ಥಿಯಾಗಿದ್ದ ಉಮರಬ್ಬರ ಪ್ರತಿಭೆಯನ್ನು ಗುರುತಿಸಿದ ಆಗಿನ ರಾಜ್ಯ ಸರ್ಕಾರ 1970ರಲ್ಲಿ ಜಪಾನ್ ದೇಶದಲ್ಲಿ ನಡೆದ "ಎಕ್ಸ್‌ಪೋ–70' ಉತ್ಸವಕ್ಕೆ ಕರ್ನಾಟಕದ ವಿಶೇಷ ಪ್ರತಿನಿಧಿಯಾಗಿ ಆಯ್ಕೆ ಮಾಡಿ ಕಳುಹಿಸಿತ್ತು. ಆಗ ವೀರೇಂದ್ರ ಪಾಟೀಲರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ಬ್ಯಾರಿ ಮುಸ್ಲಿಮ್ ಕುಟುಂಬದಲ್ಲಿ ಹುಟ್ಟಿ ಬೆಳೆದ ಉಮರಬ್ಬರ ಬದುಕು ವೈವಿಧ್ಯಮಯವಾಗಿತ್ತು. ಬದುಕಲಿಕ್ಕಾಗಿ ಹೊಟೇಲ್‌ನಲ್ಲಿ ಕ್ಯಾಶಿಯರ್ ಆಗಿ, ಪ್ರೆಸ್ಸಿನಲ್ಲಿ ಪ್ರೂಫ್ ರೀಡರ್ ಆಗಿ, ಕಾಟಿಪಳ್ಳದ ಪ್ರೌಢಶಾಲೆಯಲ್ಲಿ ಅಧ್ಯಾಪಕನಾಗಿ, ನವ ಮಂಗಳೂರು ಬಂದರಿನಲ್ಲಿ ಗುಮಾಸ್ತನಾಗಿ ದುಡಿದವರು.

ಪ್ರಧಾನಿ ಇಂದಿರಾ ಗಾಂಧಿ 1975ರ ಜೂನ್ 25ರಂದು ಭಾರತಕ್ಕೆ ತುರ್ತುಪರಿಸ್ಥಿತಿ ಹೇರಿದಾಗ ಭುಗಿಲೆದ್ದ ವಿರೋಧಿ ಆಂದೋಲನದಲ್ಲಿ ಸೇರಿಕೊಳ್ಳುವುದರ ಮೂಲಕ ಉಮರಬ್ಬ ರಾಜಕೀಯ ಪ್ರವೇಶ ಮಾಡಿದ್ದರು. ಕೇಂದ್ರ ಸರ್ಕಾರದ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಮರಬ್ಬ ನಡೆಸಿದ ಗುಪ್ತ ಚಟುವಟಿಕೆಗಳು ಅನೇಕರಿಗೆ ತಿಳಿದಿಲ್ಲ. ಬಂಧನದಿಂದ ಸ್ವಲ್ಪದರಲ್ಲೇ ತಪ್ಪಿಸಿಕೊಂಡಿದ್ದ ಅವರು ತಮ್ಮ ಭಾಷಣ, ಸಂಘಟನಾ ಚಾತುರ್ಯದಿಂದಾಗಿ ರಾಜ್ಯದಲ್ಲೇ ಗುರುತಿಸಲ್ಪಟ್ಟಿದ್ದರು. ಜಯಪ್ರಕಾಶ ನಾರಾಯಣರ ಅಭಿಮಾನಿಯಾಗಿದ್ದ ಅವರು 1977ರ ಜನವರಿ 23ರಂದು ಎಲ್ಲಾ ವಿರೋಧ ಪಕ್ಷಗಳ ಒಗ್ಗೂಡುವಿಕೆಯೊಂದಿಗೆ ಉದಯವಾದ "ಜನತಾ ಪಕ್ಷದ' ಅಧಿಕೃತ ಸದಸ್ಯರಾದರು.

ಉಮರಬ್ಬರ ಕಾರ್ಯವೈಖರಿ ಮತ್ತು ಪ್ರತಿಭೆಯನ್ನು ಗುರುತಿಸಿ 1977ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪಕ್ಷ ಟಿಕೆಟ್ ನೀಡಿ "ವಿಟ್ಲ" ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕೊಟ್ಟಿತು. ಆಗ ಉಮರಬ್ಬ ಕೇವಲ 27 ವರ್ಷದ ಯುವಕ. ಆ ದಿನಗಳಲ್ಲಿ ಜಿಲ್ಲೆಯ ಮುಸ್ಲಿಮರಿಗೆ "ಜನತಾ ಪಕ್ಷ' ಒಂದು ಅಪರಿಚಿತ ಪಕ್ಷವಾಗಿತ್ತು. ರಾಜ್ಯದಲ್ಲಿ ದೇವರಾಜ ಅರಸು ಮತ್ತು ಇಂದಿರಾಗಾಂಧಿಯವರ ಪ್ರಭಾವ ಬಹಳ ಇತ್ತು. ಆದರೂ ಉಮರಬ್ಬರ ಸ್ಪರ್ಧೆ

ಜಿಲ್ಲೆಯಲ್ಲಿ ಸಂಚಲನ ಮೂಡಿಸಿತ್ತು. ಅವರ ಭಾಷಣ ಕೇಳಲು ಹಳ್ಳಿ ಹಳ್ಳಿಗಳಲ್ಲಿ ಸಾವಿರಾರು ಜನ ಸೇರುತ್ತಿದ್ದರು. ಉಮರಬ್ಬ ಮನೆ ಮಾತಾದರು. ಅವರ ಭಾಷಣದ ಧ್ವನಿ ಸುರುಳಿಗಳು ಜಿಲ್ಲೆಯಾದ್ಯಂತ ಪ್ರತಿಧ್ವನಿಸಿತು. ವಿಟ್ಲದಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಕಮ್ಯುನಿಸ್ಟ್ ಪಕ್ಷದ ಬಿ.ವಿ.ಕಕ್ಕಿಲ್ಲಾಯ ಸ್ಪರ್ಧಿಸಿದ್ದರು. ಬಹಳ ಕುತೂಹಲ ಕೆರಳಿಸಿದ್ದ ಈ ಚುನಾವಣೆಯಲ್ಲಿ ಸಣ್ಣ ಮತಗಳ ಅಂತರದಿಂದ ಪರಾಭವಗೊಂಡಿದ್ದರೂ ಎಲ್ಲಾ ವರ್ಗದ ಜನರ ಪ್ರೀತಿಗೆ ಉಮರಬ್ಬ ಪಾತ್ರರಾಗಿದ್ದರು.

ಜನತಾ ಪಕ್ಷದಲ್ಲಾದ ಬೆಳವಣಿಗೆಗಳಿಂದ ಉಮರಬ್ಬ ಬಹಳ ನಿರಾಶರಾದರು. ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಜನತಾ ಪಕ್ಷ ಸರ್ಕಾರ "ಮತಾಂತರ ನಿಷೇಧ ಕಾಯಿದೆ' ಜಾರಿಗೆ ತಂದಾಗ ಉಮರಬ್ಬ ಆ ಪಕ್ಷದಲ್ಲಿ ಇದ್ದೇ ಕೇಂದ್ರ ಸರ್ಕಾರದ ಧೋರಣೆಯನ್ನು ವಿರೋಧಿಸಿದರು. ಮಾತ್ರವಲ್ಲ ಆ ಕರಾಳ ಕಾಯಿದೆಯ ವಿರುದ್ಧ ಜನಾಂದೋಲನ ಸೃಷ್ಟಿಸಿದರು. ಕೆಲವೇ ಸಮಯದ ನಂತರ ಒಳಜಗಳ, ಕಚ್ಚಾಟದಿಂದ ಜನತಾ ಪಕ್ಷ ಒಡೆದು ಛಿದ್ರವಾಯಿತು. ಅದರೊಂದಿಗೆ ಉಮರಬ್ಬರ ರಾಜಕೀಯ ಕನಸುಗಳೂ ನುಚ್ಚು ನೂರಾಯಿತು. ಗೊಂದಲದಲ್ಲಿ ಮುಳುಗಿದ ಉಮರಬ್ಬರಿಗೆ ಜನಸೇವೆ ಮಾಡಲು ವೇದಿಕೆಯೇ ಇಲ್ಲದಂತಾದಾಗ ಕಾಂಗ್ರೆಸ್ ಪಕ್ಷ ಅವರನ್ನು ಕೈ ಬೀಸಿ ಕರೆಯಿತು. ಅದಾಗಲೇ ಉಮರಬ್ಬರ ರಾಜಕೀಯ ಗುರು ವೀರೇಂದ್ರ ಪಾಟೀಲ್ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ಜಿಲ್ಲೆಯಲ್ಲಿ ಆಸ್ಕರ್ ಫೆರ್ನಾಂಡಿಸ್, ವೀರಪ್ಪ ಮೊಯಿಲಿಯಂತಹ ನಾಯಕರ ಬೆಂಬಲವೂ ಇತ್ತು. ಅನೇಕ ಕನಸುಗಳನ್ನು ಹೊತ್ತು ಕಾಂಗ್ರೆಸ್ ಪಕ್ಷ ಸೇರಿದ ಉಮರಬ್ಬರಿಗೆ ಪಕ್ಷವು ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವ ಅವಕಾಶ ನೀಡಿತು. ನಿರೀಕ್ಷೆಯಂತೆ ಬಿ.ಎ.ಉಮರಬ್ಬ 1985ರಲ್ಲಿ ಶಾಸಕರಾಗಿ ಆಯ್ಕೆಯಾದರು.

ಉಮರಬ್ಬರ ಪ್ರತಿಭೆಗೆ ತಕ್ಕ ಅವಕಾಶ ದೊರೆಯಿತು. ಸದನದಲ್ಲಿ ವಿರೋಧ ಪಕ್ಷದ ಶಾಸಕರಾಗಿ ಉಮರಬ್ಬ ಮಿಂಚಿದರು. ನಾಲ್ಕು ವರ್ಷ ಶಾಸಕರಾಗಿದ್ದ ಉಮರಬ್ಬರ ಪ್ರತಿಭೆ ಮತ್ತು ಶಕ್ತಿಗೆ ವಿಧಾನ ಸೌಧ ಸಾಕ್ಷಿಯಾಯಿತು. ಉಮರಬ್ಬ ಮಾತಾಡುತ್ತಾರೆ ಎಂದಾಗ ಇಡೀ ಸದನ ಶಾಸಕರಿಂದ, ಪತ್ರಕರ್ತರಿಂದ ಮತ್ತು ಗ್ಯಾಲರಿಯಲ್ಲಿ ವೀಕ್ಷಕರಿಂದ ತುಂಬಿ ತುಳುಕುತ್ತಿತ್ತು.

ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದ ಬಗ್ಗೆ ಒಂದು ವಿಶೇಷ ಗ್ರಂಥವನ್ನು ಎಂ.ವಿ. ಕಾಮತ್‌ರಿಂದ ಬರೆಸಿದ್ದರು. 'ಚೆಲುವ ಕನ್ನಡ ನಾಡು' ಹೆಸರಿನ ಆ ಗ್ರಂಥದಲ್ಲಿ ಅನೇಕ ತಪ್ಪು ಮಾಹಿತಿಗಳು ಇದ್ದವು. ಆ ಗ್ರಂಥದ ಲೋಪ ದೋಷಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು ಉಮರಬ್ಬರು ಅಂದು ಮಾಡಿದ ಭಾಷಣ ಸದನದಲ್ಲಾದ ಅತ್ಯುತ್ತಮ ಭಾಷಣ ಎಂದು ದಾಖಲಾಯಿತು. ನಾಡಿನ ಎಲ್ಲಾ ಪತ್ರಿಕೆಗಳೂ ಉಮರಬ್ಬರ ಕನ್ನಡ ಭಾಷಾ ಜ್ಞಾನವನ್ನು ಹಾಡಿ ಹೊಗಳಿದವು.

ಉಮರಬ್ಬ "ಮಾತಿನ ಜಾದೂಗಾರ' ಎಂದರೂ ಅತಿಶಯೋಕ್ತಿಯಾಗಲಾರದು. ಯಾವುದೇ ಸಭೆ, ಸಮಾರಂಭ, ವಿಚಾರ ಗೋಷ್ಠಿಗಳಲ್ಲಿ ಉಮರಬ್ಬರ ಭಾಷಣ ಇದೆ ಎಂದು ಗೊತ್ತಾದರೆ ಜನ ಸಾಗರವೇ ಸೇರುತ್ತಿತ್ತು. ಅವರ ಮಾತುಗಳಲ್ಲಿ ಒಂದು ವಿಶೇಷ ಆಕರ್ಷಣೆ ಇತ್ತು. ವಿಷಯವನ್ನು ಜನರ ಮುಂದೆ ಮಂಡಿಸುವ ಅವರ ಶೈಲಿ ಅಪೂರ್ವವಾಗಿತ್ತು. 1989ರಲ್ಲಿ ಧರ್ಮಸ್ಥಳದಲ್ಲಿ ನೆರವೇರಿದ ಸರ್ವ ಧರ್ಮ ಸಮ್ಮೇಳನದಲ್ಲಿ ಇಸ್ಲಾಮ್ ಧರ್ಮದ ಬಗ್ಗೆ ಉಮರಬ್ಬ ನೀಡಿದ ಉಪನ್ಯಾಸ ಬಹಳ ಸುಂದರವಾಗಿತ್ತು. ಉಮರಬ್ಬರ ನಿಧನದ ಸಂದರ್ಭದಲ್ಲಿ ವೀರೇಂದ್ರ ಹೆಗ್ಗಡೆಯವರು ತಮ್ಮ ಶ್ರದ್ಧಾಂಜಲಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದರು.

ಜಾತಿ ಮತ, ಮೇಲು ಕೀಳು ಮತ್ತು ಇದ್ದವನು, ಇಲ್ಲದವನು, ಆ ಪಕ್ಷ, ಈ ಪಕ್ಷವೆಂಬ ಯಾವ ಭೇದ ಭಾವ, ತಾರತಮ್ಯವೂ ಇಲ್ಲದ ಉಮರಬ್ಬ ನೇರ ಸ್ವಭಾವದ, ಸ್ವಾಭಿಮಾನಿ ವ್ಯಕ್ತಿ. ಚಮಚಾಗಿರಿ, ದೊಗ್ಗು ಸಲಾಮ್ ಅವರಿಗೆ ಸಾಧ್ಯವೇ ಇಲ್ಲ. ಅವರ ರಾಜಕೀಯ ದುರಂತಕ್ಕೆ ಅವರ ಈ ಸ್ವಭಾವವೇ ಕಾರಣವಾದದ್ದು ಮಾತ್ರ ವಿಪರ್ಯಾಸ.

1989ರಲ್ಲಿ ವಿಧಾನ ಸಭೆಗೆ ಚುನಾವಣೆ ಘೋಷಣೆಯಾದಾಗ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಎಲ್ಲಾ ಹಾಲಿ ಶಾಸಕರಿಗೆ ಟಿಕೆಟ ಕೊಟ್ಟು ಉಮರಬ್ಬ ಒಬ್ಬರಿಗೆ ಮಾತ್ರ ಟಿಕೆಟ್ ನಿರಾಕರಿಸಿತು. ಉಮರಬ್ಬ ಎದೆ ಗುಂದಲಿಲ್ಲ. "ಸರ್ವಾಧಿಕಾರ ಬೇಡ–ಸ್ವಾಭಿಮಾನ ಬೇಕು" ಎಂಬ ಘೋಷಣೆಯೊಂದಿಗೆ "ಆನೆ' ಚಿಹ್ನೆಯಲ್ಲಿ ವಿಟ್ಲ ಕ್ಷೇತ್ರದಿಂದಲೇ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. "ಗೆಲ್ಲುವುದು ಮುಖ್ಯವಲ್ಲ. ನನ್ನ ವಿಚಾರ ಧಾರೆಗಳನ್ನು ಜನರಿಗೆ ಮುಟ್ಟಿಸುವುದು ಮುಖ್ಯ' ಎಂದು ಹೇಳಿದ ಉಮರಬ್ಬ ಚುನಾವಣೆಯಲ್ಲಿ ಸೋತರೂ ಬಲು ದೊಡ್ಡ ಅಭಿಮಾನಿ ಬಳಗವನ್ನು ಗೆದ್ದಿದ್ದರು. ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ಪ್ರಪ್ರಥಮವಾಗಿ ಅವರು ಬಿತ್ತಿದ ಸ್ವಾಭಿಮಾನದ ಬೀಜ

ಮೊಳಕೆಯೊಡೆಯಿತು. ಉಮರಬ್ಬ ಸೋತು ಗೆದ್ದರು. ಕಾಂಗ್ರೆಸ್ ಪಕ್ಷಕ್ಕೆ ಅವರ ಶಕ್ತಿಯ ಅರಿವಾಯಿತು. ಪುನಃ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಆ ನಂತರ ಅವರಿಗೆ ಪಕ್ಷದಲ್ಲಿ ವಿಶೇಷ ಸ್ಥಾನಮಾನ ನೀಡಲಾಯಿತು. ಇಂಟಕ್ ಕಾರ್ಮಿಕ ಸಂಘಟನೆಯ ರಾಜ್ಯ ಘಟಕದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಎನ್.ಎಂ. ಅಡ್ಯಂತಾಯ, ಬಿ. ರಮಾನಾಥ ರೈ, ವಿನಯ ಕುಮಾರ್ ಸೊರಕೆ, ವಿಜಯ ಕುಮಾರ ಶೆಟ್ಟಿ, ಅಭಯಚಂದ್ರ ಜೈನ್ ಮುಂತಾದವರ ಸಮಕಾಲೀನರಾಗಿದ್ದ ಬಿ.ಎ. ಉಮರಬ್ಬ ರಾಜಕೀಯದ ಅತ್ಯುನ್ನತ ಎತ್ತರದ ಹೊಸ್ತಿಲನ್ನು ತಲುಪುತ್ತಿರುವಾಗಲೇ ಅವರ ಆಯುಷ್ಯ ಮುಗಿಯಿತು. 1991 ನವೆಂಬರ್ 24ರಂದು ಬೆಂಗಳೂರಿನಲ್ಲಿ ತನ್ನ ಸ್ಕೂಟರ್‌ನಲ್ಲಿ ತೆರಳುತ್ತಿರುವಾಗ ಹಿಂದಿನಿಂದ ಬಂದ ಬಿಎಂಟಿಸಿ ಬಸ್ಸು ಢಿಕ್ಕಿ ಹೊಡೆದ ಅಪಘಾತದಲ್ಲಿ ಉಮರಬ್ಬ ಸ್ಥಳದಲ್ಲೇ ಅಸುನೀಗಿದರು. ಆಗ ಅವರಿಗೆ ಕೇವಲ 41 ವರ್ಷ ಪ್ರಾಯ.

ಉಮರಬ್ಬರ ವ್ಯಕ್ತಿತ್ವಕ್ಕೆ ಅವರ ಮರಣಾ ನಂತರ ಅವರಿಗೆ ಸಿಕ್ಕಿದ ಗೌರವವೇ ಸಾಕ್ಷಿ. ಓರ್ವ ಮಾಜಿ ಶಾಸಕನಾಗಿದ್ದರೂ ಸಹ ಅವರ ಮೃತದೇಹವನ್ನು ಬೆಂಗಳೂರಿನಿಂದ ಸುರತ್ಕಲ್ ಸಮೀಪದ ಕೃಷ್ಣಾಪುರಕ್ಕೆ ಸಕಲ ಪೊಲೀಸ್ ಗೌರವದೊಂದಿಗೆ ತರಲಾಯಿತು. ಪೊಲೀಸ್ ಗೌರವ ತೋಪಿನೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ರಾಜಕೀಯ, ಸಾಹಿತ್ಯ, ಧಾರ್ಮಿಕ, ಪತ್ರಿಕಾ ರಂಗ ಹೀಗೆ ಅವರ ನಿಧನಕ್ಕೆ ಸಂತಾಪದ ರಾಶಿಯೇ ಹರಿದು ಬಂತು. ಸಹಸ್ರಾರು ಜನರು ತುಂಬು ಹೃದಯದ ಶ್ರದ್ಧಾಂಜಲಿಯು ಉಮರಬ್ಬರ ನೆನಪನ್ನು ಇಂದಿಗೂ ಹಸಿರಾಗಿ ಉಳಿಸಿದೆ.

# ಬ್ಯಾರಿ ಸಮುದಾಯದ ಪ್ರಥಮ ಸಂಯುಕ್ತ ಖಾಝಿ ಬೇಕಲ್ ಉಸ್ತಾದ್



ಬ್ಯಾರಿ ಸಮಾಜದ ಧಾರ್ಮಿಕ ವಿದ್ವಾಂಸರ ಪೈಕಿ ನಾಡಿನ ಒಳಗೂ ಹೊರಗೂ ಅತ್ಯಂತ ಪ್ರಸಿದ್ಧಿ ಪಡೆದ ಪ್ರಖ್ಯಾತ ಉಲಮಾ ಅಂದರೆ ಬೇಕಲ್ ಉಸ್ತಾದ್ ಎಂದೇ ಖ್ಯಾತರಾದ ಅಲ್‌ಹಾಜ್ ಪಿ.ಎಂ. ಇಬ್ರಾಹೀಂ ಮುಸ್ಲಿಯಾರ್. ಪ್ರಕಾಂಡ ಪಂಡಿತ, ಅದ್ಭುತ ವಾಗ್ಮಿ, ಉತ್ತರ ಕೇರಳ ಹಾಗೂ ಕರಾವಳಿ ಕರ್ನಾಟಕ ಮತ್ತು ಮಲೆನಾಡಿನ ನೂರಾರು ಮೊಹಲ್ಲಾಗಳಲ್ಲಿ ಖಾಝಿ, ಸಂಘಟನಾ ನಾಯಕ ಸಹಿತ ಹತ್ತಾರು ಹಿರಿಮೆಗಳನ್ನು ಮುಡಿಗೇರಿಸಿಕೊಂಡು ಕನ್ನಡ ನಾಡಿಗೇ ಕೀರ್ತಿ ತಂದ ಅವರು ಮೇರು ವ್ಯಕ್ತಿತ್ವವುಳ್ಳವರಾಗಿದ್ದಾರೆ.

ಬಂಟ್ವಾಳ ತಾಲೂಕಿನ ನರಿಂಗಾನ ಗ್ರಾಮದ ಪೂಡಲ್ ಎಂಬ ಹಳ್ಳಿಯಲ್ಲಿ 1949ರಲ್ಲಿ ಮುಹಮ್ಮದ್–ಖದೀಜಮ್ಮ ದಂಪತಿಯ ಪುತ್ರನಾಗಿ ಜನಿಸಿದ ಇಬ್ರಾಹೀಂ ಮುಸ್ಲಿಯಾರ್ ತಂದೆ ಹೆಸರಿನ ಮುಂದಿದ್ದ ಹುಟ್ಟೂರು ಘೂಡಲ್ ಮತ್ತು ತಂದೆಯ ಹೆಸರು ಮುಹಮ್ಮದ್ ಎಂಬುದನ್ನು ಸಂಕ್ಷಿಪ್ತಗೊಳಿಸಿ ಪಿ.ಎಂ. ಎಂದು ನಮೂದಿಸುತ್ತಿದ್ದರು.

ಮೋಂಟುಗೋಳಿ ಸಮೀಪದ ಮರಿಕ್ಕಳ ಜುಮಾ ಮಸೀದಿ ಮತ್ತು ನರಿಂಗಾನ ಸಮೀಪದ ಡಿಜೆ ಕಟ್ಟೆ ಸರಕಾರಿ ಶಾಲೆಯಲ್ಲಿ 7ನೆ ತರಗತಿಯ ಶಿಕ್ಷಣ ಪಡೆದ ಬಳಿಕ ಮಂಗಳೂರು ತಾಲೂಕಿನ ಕಿನ್ಯಾ, ಕಾಸರಗೋಡಿನ ಕುಂಬೋಲ್ ಮತ್ತು ಆಲಂಬಾಡಿ ಹಾಗೂ ಉಳ್ಳಾಲದಲ್ಲಿ ಧಾರ್ಮಿಕ ಶಿಕ್ಷಣ ಪಡೆದರು. ನೀಲೇಶ್ವರಂ ಅಬ್ದುಲ್ ಖಾದಿರ್ ಮುಸ್ಲಿಯಾರ್, ಅಲಿಕುಂಞ ಮುಸ್ಲಿಯಾರ್ ಶಿರಿಯಾ, ಆಲಂಬಾಡಿ ಕುಂಞಬ್ದುಲ್ಲ ಮುಸ್ಲಿಯಾರ್, ಉಳ್ಳಾಲ ತಂಙಳ್‌ರ ಶಿಷ್ಯರಾಗಿರುವ ಬೇಕಲ್ ಉಸ್ತಾದ್ 11 ವರ್ಷಗಳ ದರ್ಸ್ ಶಿಕ್ಷಣದ ಬಳಿಕ ಉತ್ತರ ಪ್ರದೇಶದ ದೇವಬಂದ್ ಅರಬಿಕ್ ಕಾಲೇಜಿನಲ್ಲಿ ಎಂಎಫ್‌ಡಿ ಪದವಿ ಪಡೆದರು. 1972ರಲ್ಲಿ ವೃತ್ತಿಜೀವನಕ್ಕೆ ಪ್ರವೇಶ ಪಡೆದ ಅವರು ಮಂಗಳೂರು ಸಮೀಪದ ಸೂರಿಂಜೆ ಮತ್ತು ಬಂಟ್ವಾಳದಲ್ಲಿ ತಲಾ ಎರಡು ವರ್ಷ ಸೇವೆ ಸಲ್ಲಿಸಿದರು. ಬಳಿಕ ಕಾಸರಗೋಡಿನ ಬೇಕಲ ಜುಮಾ ಮಸೀದಿಯಲ್ಲಿ ಮುದರ್ರಿಸ್ ಆಗಿ ನೇಮಕಗೊಂಡರು. ಹಾಗೇ ಸುಮಾರು ನಾಲ್ಕು ದಶಕಗಳ ಕಾಲ ಅಲ್ಲಿ ಸೇವೆ ಸಲ್ಲಿಸುವ ಮೂಲಕ "ಬೇಕಲ್ ಉಸ್ತಾದ್' ಎಂದೇ ಜನಪ್ರಿಯರಾದರು.

ಕಾಸರಗೋಡಿನ ಪ್ರತಿಷ್ಠಿತ ಜಾಮಿಅ ಸಅದಿಯಾ ಅರಬಿಕ್ ಕಾಲೇಜಿನ ಪ್ರಾಚಾರ್ಯರಾಗಿ ನಿಯುಕ್ತರಾದ ಅವರು ಅರ್ಧ ಶತಮಾನ ಕಾಲ ದರ್ಸ್ ನಡೆಸುವ ಮೂಲಕ ಸಾವಿರಾರು ವಿದ್ವಾಂಸರನ್ನು ಸಮಾಜಕ್ಕೆ ಅರ್ಪಿಸಿದರು.

ಖುರ್‌ಆನ್, ಹದೀಸ್, ಫಿಕ್ಹ್, ಅಖೀದ, ಖಗೋಳ ವಿಜ್ಞಾನ, ಭಾಷಾಶಾಸ್ತ್ರ, ವ್ಯಾಕರಣ ಸೇರಿದಂತೆ ಧರ್ಮಜ್ಞಾನದ ಎಲ್ಲ ಪ್ರಕಾರಗಳಲ್ಲೂ ಅವರು ಪ್ರವೀಣರಾಗಿದ್ದರು.

ಕರ್ಮಶಾಸ್ತ್ರದ ಬಗ್ಗೆ ಅವರಿಗೆ ಅಗಾಧ ಜ್ಞಾನವಿತ್ತು. ಎಂತಹ ಸಂದಿಗ್ಧ ಕಾಲ ಮತ್ತು ಸಮಸ್ಯೆಗಳಿಗೂ ಅವರು ಅತ್ಯಂತ ನಿಖರ ಮತ್ತು ಸಮರ್ಥವಾಗಿ ಕರ್ಮಶಾಸ್ತ್ರದ ಬಗ್ಗೆ 'ವಿಧಿ' ನೀಡಬಲ್ಲವರಾಗಿದ್ದರು.

1997ರಲ್ಲಿ ಉಡುಪಿ ಜಿಲ್ಲಾ ಸಂಯುಕ್ತ ಖಾಝಿಯಾಗಿ ನೇಮಕಗೊಳ್ಳುವ ಮೂಲಕ ಈ ಉನ್ನತ ಹುದ್ದೆಗೇರಿದ ಮೊದಲ ಬ್ಯಾರಿ ಆಲಿಂ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು. ಮುಂದೆ ಉಡುಪಿ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳ ಇನ್ನೂರರಷ್ಟು ಮೊಹಲ್ಲಾಗಳಿಗೆ ಅವರು ಖಾಝಿಯಾದರು. ಬೇಕಲ್ ಉಸ್ತಾದರ ಪಾಂಡಿತ್ಯವನ್ನು ಪರಿಗಣಿಸಿ ದಕ್ಷಿಣ ಭಾರತದ ಉನ್ನತ ವಿದ್ವಾಂಸರ ಒಕ್ಕೂಟವಾದ ಸಮಸ್ತ ಕೇರಳ ಜಂಇಯತುಲ್ ಉಲಮಾ ಕೇಂದ್ರ ಮುಶಾವರದ ಸದಸ್ಯತ್ವವನ್ನು ಅವರಿಗೆ ನೀಡಲಾಯಿತು. ಅಲ್ಲದೆ "ತಾಜುಲ್ ಫುಖಹಾ' (ಮಹಾ ವಿದ್ವಾಂಸರ ಕಿರೀಟ) ಎಂಬ ಬಿರುದನ್ನು ಅವರಿಗೆ ಪ್ರದಾನ ಮಾಡಲಾಯಿತು.

ಅದ್ಭುತ ವಾಗ್ಮಿಯಾಗಿದ್ದ ಅವರು 1980–2000ರ ದಶಕಗಳಲ್ಲಿ ಕರಾವಳಿ ಮತ್ತು ಕಾಸರಗೋಡು ಜಿಲ್ಲೆಗಳ "ವಾಳ್' (ರಾತ್ರಿ ವೇಳೆ ನಡೆಯುವ ಧಾರ್ಮಿಕ ಉಪನ್ಯಾಸ)ಗಳ ವೇದಿಕೆಗಳಲ್ಲಿ ಪ್ರಮುಖ ಭಾಷಣಗಾರರಾಗಿದ್ದರು. ಅರಬಿ, ಮಲಯಾಳಂ, ಕನ್ನಡ, ಬ್ಯಾರಿ, ತುಳು ಹಾಗೂ ಉರ್ದು ಭಾಷೆಗಳಲ್ಲಿ ಅವರು ಮಾತನಾಡಬಲ್ಲವರಾಗಿದ್ದರು.

ಸಮಾಜ ಸುಧಾರಣೆಯ ಪ್ರಬಲ ಇಚ್ಛಾಶಕ್ತಿ ಬೇಕಲ್ ಉಸ್ತಾದರಿಗೆ ಇತ್ತು. ವರದಕ್ಷಿಣೆಯ ವಿರುದ್ಧ, ಮೂಢನಂಬಿಕೆಗಳ

ವಿರುದ್ಧ, ಅನಾಚಾರಗಳ ವಿರುದ್ಧ ಛಾಟಿ ಬೀಸುತ್ತಿದ್ದ ಅವರು ಪೌರತ್ವ ಕಾಯ್ದೆ, ಬೇಕಲ ಟೂರಿಸಂ ಯೋಜನೆಯಂತಹ ಸರ್ಕಾರದ ಜನ ವಿರೋಧಿ ನಿಲುವುಗಳ ವಿರುದ್ಧ ಧ್ವನಿಯೆತ್ತಿದ್ದರು. ಕೋಮು ಸೌಹಾರ್ದತೆಯ ಪ್ರಬಲ ಪ್ರತಿಪಾದಕರಾಗಿದ್ದರು.

ಉಮರಾ–ಉಲಮಾ ವರ್ಗವು ವಿಭಿನ್ನ ದಿಕ್ಕಿನಲ್ಲಿ ಸಾಗುತ್ತಿದ್ದುದನ್ನು ಮನಗಂಡಿದ್ದ ಅವರು ಒಂದೇ ವೇದಿಕೆಯಡಿ ಅವರನ್ನು ಒಗ್ಗೂಡಿಸಿದ ಕೀರ್ತಿಯೂ ಇದೆ. ಉಲಮಾ ಅಥವಾ ಧಾರ್ಮಿಕ ವಿದ್ವಾಂಸರ ಸೇವೆಯು ಮದ್ರಸ–ದರ್ಸ್ ಶಿಕ್ಷಣ, ಇಮಾಮ್, ಮದುವೆಯ ನಿಖಾಹ್, ಮತಪ್ರಸಂಗಕ್ಕೆ ಸೀಮಿತಗೊಳ್ಳದೆ ಸಮಾಜಮುಖಿಯಾಗಿರಬೇಕು ಎಂದು ಆಶಿಸಿದ್ದರು ಮತ್ತು ಅದರಂತೆ ನಡೆದಿದ್ದರು. ಅಲ್ಲದೆ ಪ್ರತೀ ಮೊಹಲ್ಲಾದಲ್ಲಿ ಎಲ್ಲಾ ಪ್ರೌಢ ವಯಸ್ಕರಿಗೂ ಧಾರ್ಮಿಕ ಶಿಕ್ಷಣ ನೀಡಬೇಕು ಎಂಬ ಹಂಬಲ ಹೊಂದಿದ್ದರು. ನ್ಯಾಯಕ್ಕಾಗಿ ಪೊಲೀಸ್ ಠಾಣೆ, ಕೋರ್ಟ್‌ಗೆ ಅಲೆಯುವ ಬದಲು ಮೊಹಲ್ಲಾದಲ್ಲೇ ತೀರ್ಪು ನೀಡುವ ವ್ಯವಸ್ಥೆ ಜಾರಿಯಾಗಬೇಕು ಎಂದು ಆಶಿಸಿದ್ದರು.

ಸಂಘಟನಾ ರಂಗದಲ್ಲೂ ತೊಡಗಿಸಿಕೊಂಡಿದ್ದ ಅವರು ಸುನ್ನಿ ಉಲಮಾ ಒಕ್ಕೂಟದ ರಾಜ್ಯಾಧ್ಯಕ್ಷ, ಕರ್ನಾಟಕ ಮುಸ್ಲಿಂ ಜಮಾಅತ್‌ನ ನಿರ್ದೇಶಕ, ಜಾಮಿಯಾ ಸಅದಿಯಾ ಅರಬಿಯಾ ಶರೀಅತ್ ಕಾಲೇಜು ಮತ್ತು ಬೇಕಲ ಇಮ್ದಾದಿಯಾ ಅರಬಿಕ್ ಕಾಲೇಜಿನ ಪ್ರಾಂಶುಪಾಲ, ಎಸ್ಸೆಸ್ಸೆಫ್ ಹಾಗೂ ಎಸ್‌ವೈಎಸ್ ಸಂಘಟನೆಯ ಮಾರ್ಗದರ್ಶಕ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಹಾಗೂ ಮೊಹಲ್ಲಾಗಳ ಪದಾಧಿಕಾರಿಯಾಗಿ, ಸಲಹೆಗಾರರಾಗಿ ಅವರು ಕಾರ್ಯನಿರ್ವಹಿಸಿದ್ದರು.

ತನ್ನೂರಾದ ಮರಿಕ್ಕಳ ಜುಮಾ ಮಸೀದಿಯ ಅಧ್ಯಕ್ಷರಾಗಿ ಸುಮಾರು 38 ವರ್ಷಗಳಿಂದ ಕಾರ್ಯನಿರ್ವಹಿಸಿದ್ದರು. ಕನ್ನಡದ ಜನಪ್ರಿಯ ಮುಸ್ಲಿಂ ವಾರಪತ್ರಿಕೆ ಅಲ್ ಅನ್ಸಾರ್‌ನ ಪ್ರಧಾನ ಸಂಪಾದಕರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಬಂಟ್ವಾಳ ತಾಲೂಕಿನ ಕೈರಂಗಳ ಗ್ರಾಮದ ಮೊಂಟುಗೋಳಿಯಲ್ಲಿ ಪತ್ನಿ ಆಸಿಯಾ ಹಾಜಿಮಾ, ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರೊಂದಿಗೆ ವಾಸಿಸುತ್ತಿದ್ದ ಅವರು 2020ರ ಸೆಪ್ಟೆಂಬರ್ 24ರಂದು ನಿಧನರಾಗಿದ್ದು, ಮನೆ ಸಮೀಪದ ಮರಿಕ್ಕಳ ಜುಮಾ ಮಸೀದಿಯ ಬಳಿ ದಫನ ಮಾಡಲಾಯಿತು.

# ಬ್ಯಾರಿ ಸಮುದಾಯಕ್ಕೆ ಕೀರ್ತಿ ತಂದ ಜಡ್ಜ್
# ಉಳ್ಳಾಲ ಹಮ್ಮಬ್ಬ



ಸಾವಿರಾರು ವರ್ಷಗಳ ಇತಿಹಾಸವಿರುವ ಬ್ಯಾರಿ ಮುಸ್ಲಿಂ ಸಮುದಾಯವು ಶಿಕ್ಷಣದಲ್ಲಿ ತೀರಾ ಹಿಂದುಳಿದಿತ್ತು ಎಂದು ಹೇಳಲಾಗುತ್ತಿದ್ದ ಕಾಲದಲ್ಲೇ ವಿದ್ಯೆ ಕಲಿತು ಸಮುದಾಯದ ಮೊದಲ ನ್ಯಾಯಾಧೀಶ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಯು. ಹಮ್ಮಬ್ಬ (ಉಳ್ಳಾಲ ಹಮ್ಮಬ್ಬ).

ಮಂಗಳೂರಿನ ತಹಶೀಲ್ದಾರ್ ಆಗಿದ್ದ ಯು. ಮಮ್ಮಾಲಿಯ ಪುತ್ರನಾಗಿ 1905ರಲ್ಲಿ ಉಳ್ಳಾಲ ಪೇಟೆಯಲ್ಲಿ ಹುಟ್ಟಿದ ಯು. ಹಮ್ಮಬ್ಬ ಬೆಳೆದದ್ದು ಮಂಗಳೂರಿನಲ್ಲಿ. ಹಾಗೇ ಮಂಗಳೂರಿನ ಮಿಶನ್ ಸ್ಕೂಲ್, ಅಂತ ಅಲೋಶಿಯಸ್ ಕಾಲೇಜಿನಲ್ಲಿ ಕಲಿತ ಅವರು ತಮಿಳ್ನಾಡಿನ ಮದ್ರಾಸ್ ಕಾನೂನು ಕಾಲೇಜಿನಲ್ಲಿ ಪದವಿ ಪಡೆದರು. ಆ ಬಳಿಕ ಸ್ನಾತಕೋತ್ತರ (ಎಂಎ, ಎಲ್‌ಎಲ್‌ಬಿ) ಪದವಿ ಪೂರೈಸಿ ಮಂಗಳೂರಿನಲ್ಲಿ ಎರಡ್ಮೂರು ವರ್ಷಗಳ ಕಾಲ ತರಬೇತಿ ಪಡೆದರು.

ಬ್ರಿಟಿಷ್ ಕಾಲದಲ್ಲಿ ತಹಶೀಲ್ದಾರ್ ಆಗಿದ್ದ ಮಮ್ಮಾಲಿಗೆ ಬ್ರಿಟಿಷರು ಕೋಟ್ ಧರಿಸಿ ಬರುವುದನ್ನು ಕಂಡು ತನ್ನ ಮಗ ಕೂಡ ಹೀಗೆ ದೊಡ್ಡ ನ್ಯಾಯವಾದಿ ಅಥವಾ ನ್ಯಾಯಾಧೀಶ ಆಗಬೇಕು ಎಂದು ಆಶಿಸುತ್ತಿದ್ದರೆಂದು ಹಮ್ಮಬ್ಬ ಅವರ ಪುತ್ರ ಮಂಗಳೂರಿನ ನ್ಯಾಯವಾದಿ ಮುಹಮ್ಮದ್ ಅಲಿ ತನ್ನ ತಂದೆ ಈ ಹಿಂದೆ ಹೇಳಿಕೊಂಡಿದ್ದನ್ನು ನೆನಪಿಸುತ್ತಾರೆ.

ಮಂಗಳೂರಿನಲ್ಲಿ ಕೆಲಕಾಲ ಪ್ರಾಕ್ಟಿಸ್ ಮಾಡಿದ ಬಳಿಕ ನ್ಯಾಯಾಧೀಶ ಹುದ್ದೆಗೆ ನಡೆದ ಪರೀಕ್ಷೆ ಬರೆದು ತೇರ್ಗಡೆ ಹೊಂದಿದರು. ಹಾಗೇ ಮದ್ರಾಸ್ ಸರಕಾರವಿದ್ದಾಗ ಕಾರ್ಕಳ, ಕುಂದಾಪುರದಲ್ಲಿ ಮುನ್ಸಿಫ್ ಆಗಿ, ತಲಶೇರಿ ಮತ್ತು ಮಂಗಳೂರಿನಲ್ಲಿ ಸಬ್ ಜಡ್ಜ್ ಆಗಿ, 1956ರಲ್ಲಿ ತಮಿಳ್ನಾಡಿನ ಮಧುರೈ ಮತ್ತು ಕೋಯಂಬತ್ತೂರಿನಲ್ಲಿ ಸಿವಿಲ್ ಜಡ್ಜ್, ತಂಜಾವೂರು, ಸೇಲಂ, ಮಧುರೈ, ಕಡಲೂರಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಆಗಿ ಸೇವೆ ಸಲ್ಲಿಸಿದರು. ಅಲ್ಲದೆ ಕರುಣಾನಿಧಿ ಮುಖ್ಯಮಂತ್ರಿ ಆಗಿದ್ದಾಗ ಆ್ಯಂಟಿ ಕರೆಪ್ಷನ್ ಟ್ರಿಬ್ಯೂನಲ್‌ನಲ್ಲಿ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಪಬ್ಲಿಕ್ ಸರ್ವಿಸ್ ಕಮಿಷನ್ (ಭಾರತೀಯ ಸೇವಾ ಆಯೋಗ)ನ ಎಕ್ಸಾಮಿನರ್ ಆಗಿದ್ದರು.

ಉಳ್ಳಾಲದಲ್ಲಿ ಹುಟ್ಟಿ ಮಂಗಳೂರಿನಲ್ಲಿ ಬೆಳೆದು ತನ್ನ ಸೇವಾವಧಿಯಲ್ಲಿ ಹೆಚ್ಚಿನ ಕಾಲ ತಮಿಳ್ನಾಡಿನಲ್ಲೇ ಕಳೆದ ಕಾರಣ ಅವರು ತಮಿಳು ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಕನ್ನಡ, ಇಂಗ್ಲಿಷ್‌ನಲ್ಲಿ ಹಿಡಿತವಿದ್ದರೂ ಕೂಡ ಮನೆಯಲ್ಲಿ ಬ್ಯಾರಿ ಭಾಷೆಯಲ್ಲೇ ಮಾತನಾಡುತ್ತಿದ್ದರು. ಮಿತ ಭಾಷಿ, ಸೌಮ್ಯ ಸ್ವಭಾವದವರಾದರೂ ಕೂಡ ಮಹತ್ವದ ಪ್ರಕರಣಗಳಿಗೆ ತೀರ್ಪು ನೀಡುವಾಗ ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಹಲವು ಮಹತ್ವದ ಪ್ರಕರಣಗಳಿಗೆ ನೀಡಿದ ತೀರ್ಪುಗಳ ಪೈಕಿ ಹಲವರಿಗೆ ಗಲ್ಲುಶಿಕ್ಷೆ ವಿಧಿಸಿದ್ದ ಇತಿಹಾಸವೂ ಇದೆ. ಆದರೆ ಎಂದೂ ಕೂಡ ಅವರು ನ್ಯಾಯಾಧೀಶ ಹುದ್ದೆಗೆ ಕುಂದುಂಟು ಮಾಡಿದ ಉದಾಹರಣೆಯಿಲ್ಲ. ಇಸ್ಲಾಂ ಧರ್ಮದ ಮೇಲೆ ಅಚಲ ನಂಬಿಕೆಯಿತ್ತು. ಕುರ್‌ಆನ್ ಪಠಣ ಅವರ ದೈನಂದಿನ ಬದುಕಿನ ಭಾಗವಾಗಿತ್ತು. ತಮಿಳುನಾಡಿನ ಮುತ್ತುಪೇಟೆ ಮತ್ತು ನಾಗೂರು ದರ್ಗಾದ ಅಧ್ಯಕ್ಷರಾಗಿ ಸರಕಾರದಿಂದ ನೇಮಕಗೊಂಡಿದ್ದರು.

ಮಂಗಳೂರಿನ ಸಿ. ಅಹ್ಮದ್ ಹಾಜಿಯ ಪುತ್ರಿ ಸಲ್ಮಾಬಿ ಅವರನ್ನು ವಿವಾಹವಾದ ಜಡ್ಜ್ ಹಮ್ಮಬ್ಬ ಅವರಿಗೆ ನಾಲ್ಕು ಮಂದಿ ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳ ಪೈಕಿ ಮುಹಮ್ಮದ್ ಅಲಿ ನ್ಯಾಯವಾದಿಯಾಗಿದ್ದಾರೆ. ತನ್ನ 65ನೆ ಹರೆಯದಲ್ಲಿ ಅಂದರೆ 1970ರಲ್ಲಿ ಅವರು ನಿವೃತ್ತರಾದರು.

ಉಳ್ಳಾಲದಲ್ಲಿ ಹುಟ್ಟಿದ ಯು. ಹಮ್ಮಬ್ಬ "ಜಡ್ಜ್ ಹಮ್ಮಬ್ಬ" ಎಂದೇ ಸ್ಥಳೀಯವಾಗಿ ಪ್ರಸಿದ್ಧರಾಗಿದ್ದರು. ಕೋಟೆಕಾರ್ ಬೀರಿಯಲ್ಲಿ ಜಮೀನು ಖರೀದಿಸಿ ಮನೆಯೊಂದನ್ನು ಕಟ್ಟಿಸಿದ್ದ ಅವರು ನಿವೃತ್ತಿಯ ಬಳಿಕ ಆ ಮನೆಯಲ್ಲಿ ವಾಸವಾಗಿದ್ದರು. ಈಗಲೂ ಆ ಮನೆಯನ್ನು "ಜಡ್ಜ್ ಕೋಟೇಜ್" ಎಂದು ಕರೆಯಲಾಗುತ್ತಿದೆ. ಕೋಟೆಕಾರ್ ಬೀರಿಯಲ್ಲಿ ನೆಲೆಸಿದ್ದ ಕಾರಣ ಕೋಟೆಕಾರ್ ಜುಮಾ ಮಸ್ಜಿದ್‌ನ ಅಧ್ಯಕ್ಷರಾಗಿಯೂ ಕೆಲಕಾಲ ಸೇವೆ ಸಲ್ಲಿಸಿದ್ದರು. 1975ರ ಎಪ್ರಿಲ್ 20ರಂದು ಅಂದರೆ ತನ್ನ 70ನೆ ಹರೆಯದಲ್ಲಿ "ಜಡ್ಜ್ ಹಮ್ಮಬ್ಬ" ನಿಧನರಾದರು.

# ಬ್ಯಾರಿ ಸಮುದಾಯದ ಹಿರಿಮೆ ಹೆಚ್ಚಿಸಿದ ಜಡ್ಜ್ ಅಬ್ದುರ್ರಹೀಂ ಅಹ್ಮದ್ ಮಂಗಳೂರು



ಮಂಗಳೂರಿನ ಕದ್ರಿ ನಿವಾಸಿ ಹಾಜಿ ಅಹ್ಮದ್ ಇಬ್ರಾಹೀಂ ಮೊಹಜಿರ್–ಮರಿಯಮ್ ದಂಪತಿಯ ಪುತ್ರನಾಗಿ 1912ರ ಮೇ 4ರಂದು ಅಬ್ದುರ್ರಹೀಂ ಅಹ್ಮದ್ ಜನಿಸಿದರು. ಮಂಗಳೂರಿನಲ್ಲಿ ಶಾಲೆ ಮತ್ತು ಕಾಲೇಜು ಕಲಿತ ಬಳಿಕ ತಮಿಳ್ನಾಡಿನ ಕಾನೂನು ಕಾಲೇಜಿನಲ್ಲಿ (ಬಿಎ ಬಿಎಲ್) ಪದವಿ ಪಡೆದರು. ಬಳಿಕ ಮಂಗಳೂರಿನಲ್ಲೇ ಸದಾನಂದ ಹೆಗ್ಡೆ ಅವರ ಬಳಿ ವಕೀಲಿಕೆಯ ತರಬೇತಿ ಪಡೆದರು. (ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ಸಂತೋಷ್ ಹೆಗ್ಡೆಯ ತಂದೆಯಾಗಿರುವ ಸದಾನಂದ ಹೆಗ್ಡೆ ಕೂಡ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿದ್ದರು) ಕೆಲ ಕಾಲದ ಬಳಿಕ ಸ್ವಂತ ಕಚೇರಿ ತೆರೆದು ಸ್ವತಂತ್ರವಾಗಿ ಪ್ರಕರಣ ಕೈಗೆತ್ತಿಕೊಂಡು ವಾದಿಸತೊಡಗಿದರು. ಕೆಲವು ವರ್ಷದ ನಂತರ ನ್ಯಾಯಾಧೀಶರ ಹುದ್ದೆಗೆ ನಡೆದ ಪರೀಕ್ಷೆ ಬರೆದು ತೇರ್ಗಡೆ ಹೊಂದಿದರು. ಈ ಮಧ್ಯೆ ಸುಡಾನ್‌ನಲ್ಲಿ ಜುಡಿಷಿಯಲ್ ಸರ್ವಿಸ್ ನೆಲೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಒದಗಿ ಬಂದರೂ ಕೂಡ ತನ್ನ ತಾಯಿಯ ಒತ್ತಾಯಕ್ಕೆ ಮಣಿದು ಸುಡಾನ್‌ಗೆ ತೆರಳುವುದನ್ನು ಕೈ ಬಿಟ್ಟರು.

ಮುನ್ಸಿಫ್ ನ್ಯಾಯಾಧೀಶರಾಗಿ ನೇಮಕಗೊಂಡು ಸಬ್ ಜಡ್ಜ್, ಡಿಸ್ಟ್ರಿಕ್ಟ್ ಜಡ್ಜ್, ಡಿಸ್ಟ್ರಿಕ್ಟ್ ಸೀನಿಯರ್ ಸಿವಿಲ್ ಜಡ್ಜ್ ಆಗಿ ನಿವೃತ್ತರಾದರು. ಕೇರಳದ ಪರಪ್ಪನಂಜಡಿ, ತಲಶೇರಿ, ಎರ್ನಾಕುಲಂ, ಕಾಸರಗೋಡು, ತಮಿಳ್ನಾಡಿನ ತಿರುಚುನಾಪಳ್ಳಿ, ಕರ್ನಾಟಕದ ಬೆಂಗಳೂರು, ಧಾರವಾಡ, ಬೀದರ್, ತುಮಕೂರು, ಮಂಗಳೂರಿನಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು.

ನ್ಯಾಯಾಧೀಶರಾಗಿ ನೇಮಕಗೊಳ್ಳುವ ಮುನ್ನ ಮಂಗಳೂರಿನಲ್ಲಿ ಸದಾ ಕ್ರಿಯಾಶೀಲರಾಗಿದ್ದರು. ಜಡ್ಜ್ ಆಗಿರುವಾಗ ಇತಿಮಿತಿಯೊಳಗೆ ಜನರೊಡನೆ ಬೆರೆತರೆ ನಿವೃತ್ತರಾದ ಬಳಿಕ ಜಡ್ಜ್ ಹುದ್ದೆಯ ಘನತೆಯನ್ನು ಕಾಪಾಡಿಕೊಳ್ಳುತ್ತಲೇ ಸಮಾಜ ಮುಖಿಯಾಗಿ ಬದುಕು ಸಾಗಿಸಿದರು. ನಿವೃತ್ತಿಯ ಬಳಿಕವೂ ವಕೀಲ ವೃತ್ತಿ ಮುಂದುವರಿಸಿದರು.

ವಿದ್ಯಾರ್ಥಿಯಾಗಿದ್ದಾಗಲೇ ನಾಯಕತ್ವದ ಗುಣ ಬೆಳೆಸಿಕೊಂಡಿದ್ದರು. ಸುಧಾರಣಾವಾದಿಯಾಗಿದ್ದ ಅವರು ಸಮಾಜ ಸೇವಕರಾಗಿದ್ದರು, ಮುಸ್ಲಿಂ ವಿದ್ಯಾರ್ಥಿಗಳು, ಸುಶಿಕ್ಷಿತರನ್ನು ಒಳಗೊಂಡಂತೆ 1930ರಲ್ಲಿ "ದಿ ಮುಸ್ಲಿಂ ಲಿಟರರಿ ಆ್ಯಂಡ್ ಡಿಬೆಟಿಂಗ್ ಸೊಸೈಟಿ'ಯನ್ನು ಸ್ಥಾಪಿಸಿದ್ದರು. ಮಂಗಳೂರು ಬಂದರ್‌ನ ಬದ್ರಿಯಾ ಶಾಲೆಯ ವಠಾರದಲ್ಲಿ ಈ ಸೊಸೈಟಿಯ ಚಟುವಟಿಕೆ ನಡೆಸಲಾಗುತ್ತಿತ್ತು. ಮುಸ್ಲಿಮರ ಶ್ರೇಯೋಭಿವೃದ್ಧಿಗಾಗಿ "ಮುಸ್ಲಿಂ ವೆಲ್ಫೇರ್ ಲೀಗ್" ಎಂಬ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಅಬ್ದುರ್ರಹೀಂ "ಮುಸ್ಲಿಂ ಸ್ವಯಂ ಸೇವಕ ಸಂಘ"ವನ್ನೂ ಸ್ಥಾಪಿಸಿದರು. ದಿ ಮುಸ್ಲಿಂ ಸೆಂಟ್ರಲ್ ಕಮಿಟಿಯಲ್ಲೂ ಸೇವೆ ಸಲ್ಲಿಸಿದ್ದರು.

ನ್ಯಾಯಾಧೀಶರಾಗಿ ನೇಮಕಗೊಳ್ಳುವ ಮುನ್ನ ಅಂದರೆ ವಕೀಲ ವೃತ್ತಿಯಲ್ಲಿರುವಾಗ ಯುವಕರು ದಾರಿತಪ್ಪದಂತೆ ಸಂಘಟನೆಯನ್ನು ಹುಟ್ಟು ಹಾಕಿದ್ದರು. ಸಮಾಜದ, ಸಮುದಾಯದ ಮುಖಂಡರಿಗೆ, ರಾಜಕಾರಣಿಗಳಿಗೆ ಹಿತವಚನ ನೀಡುತ್ತಿದ್ದರು. ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದರೂ ಕೂಡ ತನ್ನ ವಿದ್ವತ್, ವಾಕ್‌ಚಾತುರ್ಯದಿಂದ ಎಲ್ಲರಿಗೂ ಮಾದರಿಯಾಗಿದ್ದರು.

ತೀರಾ ಅನಕ್ಷರಸ್ಥ ಸಮುದಾಯ ಎಂಬ ಆರೋಪಕ್ಕೆ ತುತ್ತಾಗಿದ್ದ ಬ್ಯಾರಿ ಸಮುದಾಯದಲ್ಲಿ ಹುಟ್ಟಿ ಬೆಳೆದು ಉತ್ತಮ ಶಿಕ್ಷಣ ಪಡೆದು ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುವ ಮೂಲಕ ಬ್ಯಾರಿ ಸಮುದಾಯದ ಹಿರಿಮೆಯನ್ನು ಹೆಚ್ಚಿಸಿದ ಕೀರ್ತಿ ಜಡ್ಜ್ ಅಬ್ದುರ್ರಹೀಂ ಅಹ್ಮದ್ ಅವರಿಗೆ ಸಲ್ಲುತ್ತದೆ.

ಮಂಗಳೂರಿನ ಬೇಗಂ ಆಮಿನಾ ಅವರನ್ನು ವಿವಾಹವಾಗಿದ್ದ ಅಬ್ದುರ್ರಹೀಂ ಅಹ್ಮದ್‌ಗೆ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿಯರಿದ್ದರು. ನ್ಯಾಯಾಧೀಶ ಸ್ಥಾನದಿಂದ ನಿವೃತ್ತರಾದ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದ ಅವರು 3.9.1990ರಂದು ನಿಧನರಾದರು.

# ಸ್ವಾತಂತ್ರ್ಯ ಹೋರಾಟಗಾರ ಡಾ.ಎಫ್.ಎಚ್.ಒಡೆಯರ್



ಬಂಟ್ವಾಳ ತಾಲೂಕಿನ ಫರಂಗಿಪೇಟೆ ಸಮೀಪದ ಅರ್ಕುಳದ ಶ್ರೀಮಂತ ಕುಟುಂಬದ ಸಾಯಿರಬ್ಬ ಬ್ಯಾರಿಯ ಪುತ್ರನಾಗಿ 1903ರ ಮಾರ್ಚ್ 15ರಂದು ಮಂಗಳೂರಿನಲ್ಲಿ ಜನಿಸಿದ ಫರಂಗಿಪೇಟೆ ಹುಸೈನ್ ಒಡೆಯರ್ (ಎಫ್.ಎಚ್.ಒಡೆಯರ್) ಆರಂಭದಲ್ಲಿ ಮೇರಮಜಲು ಇಗರ್ಜಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದರು. ಬಳಿಕ ಮಂಗಳೂರಿನ ಬಂದರ್‌ನ "ಪೌನಾರಗ" ತರವಾಡು ಮನೆಯಲ್ಲಿದ್ದುಕೊಂಡು ಬಾಸೆಲ್ ಮಿಶನ್ ಶಾಲೆಯಲ್ಲಿ ಕಲಿತ ಅವರು 1920ರಲ್ಲಿ ಮಹಾತ್ಮಾ ಗಾಂಧೀಜಿ ಮತ್ತು ಶೌಕತ್ ಅಲಿ ಮಂಗಳೂರಿಗೆ ಬಂದಾಗ ಅವರನ್ನು ಭೇಟಿಯಾಗಿ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಧುಮುಕಿದರು.

ಸಣ್ಣ ಪ್ರಾಯದಲ್ಲೇ ದೇಶದ ಸ್ವಾತಂತ್ರ್ಯದ ಬಗ್ಗೆ, ಹಿಂದೂ-ಮುಸ್ಲಿಂ ಐಕ್ಯತೆಯ ಬಗ್ಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ನಾನಾ ಕಡೆ ಭಾಷಣ ಮಾಡುತ್ತಿದ್ದರು. ಅಸ್ಖಲಿತ ಕನ್ನಡ ಭಾಷೆ, ಸೊಗಸಾದ ಕಂಠಸಿರಿಗೆ ಹೆಸರಾದ ಎಫ್.ಎಚ್. ಒಡೆಯರ್ ತಾಳಮದ್ದಲೆ ಕೂಟಗಳಲ್ಲಿ ಅರ್ಥಧಾರಿಯಾಗಿದ್ದರು. ತನ್ನದೇ ಆದ "ಒಡೆಯರ ಬಳಗ" ಕಟ್ಟಿಕೊಂಡು ಮಂಗಳೂರಿನ ಉಮಾಮಹೇಶ್ವರಿ ದೇವಸ್ಥಾನ, ಮಹಮ್ಮಾಯಿ ದೇವಸ್ಥಾನ, ಕಾಳಿಕಾಂಬ ದೇವಸ್ಥಾನಗಳಲ್ಲಿ ಮತ್ತು ಸಾಹಿತ್ಯ, ಸಾಂಸ್ಕೃತಿಕ ವೇದಿಕೆಗಳಲ್ಲಿ ಯಕ್ಷಗಾನ ಆಡಿಸುತ್ತಿದ್ದರು.

ಅಂದಹಾಗೆ, ಇವರು ಆಸುಪಾಸಿನ ಹಲವು ಗ್ರಾಮಗಳಲ್ಲಿ ಸಾವಿರಾರು ಎಕರೆ ಭೂಮಿಯ ಒಡೆತನ ಹೊಂದಿದ್ದರು. ಹಾಗಾಗಿ ಸ್ಥಳೀಯರು ಅವರನ್ನು "ಒಡೆಯರು" ಎಂದು ಕರೆಯುತ್ತಿದ್ದರು. ಮುಂದೆ ಅದೇ ಅವರ ಹೆಸರಿನ ಮುಂದೆ ರಾರಾಜಿಸತೊಡಗಿತು,

ತುಂಗಭದ್ರಾದಲ್ಲಿರುವ ಪ್ರೇಮ ವಿದ್ಯಾಪೀಠದಲ್ಲಿ ಆಯುರ್ವೇದ ಪಂಡಿತ ತಾರನಾಥರ ಬಳಿ ಆಯುರ್ವೇದ ವೈದ್ಯಕೀಯ ವ್ಯಾಸಂಗ ಮಾಡಿ ವೈದ್ಯರಾಗಿಯೂ ಖ್ಯಾತಿ ಪಡೆದರು. ಹಾಸನ ಮತ್ತು ಮಂಗಳೂರಿನಲ್ಲಿ ಅವರ ಚಿಕಿತ್ಸಾಲಯವಿದ್ದವು.

ಕಾರ್ಮಿಕರ ಕನಿಷ್ಠ ವೇತನಕ್ಕಾಗಿ ಹೋರಾಡಿದವರಲ್ಲಿ ಒಬ್ಬರಾಗಿದ್ದ ಡಾ.ಎಫ್.ಎಚ್.ಒಡೆಯರ್ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ-ನಾಯಕರಾಗಿದ್ದರು. 1847ರಲ್ಲಿ ಹಾಸನದಲ್ಲಿ ವೈದ್ಯಕೀಯ ವೃತ್ತಿಯಲ್ಲಿದ್ದಾಗ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. ಅಲ್ಲದೆ ಹಾಸನದ ಪುರಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು. 1956ರಲ್ಲಿ ಹಾಸನ ಬಿಟ್ಟು ಮಂಗಳೂರಿನಲ್ಲೇ ಸಕ್ರಿಯರಾದರು.


ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಪತ್ರಕರ್ತರಾಗಿಯೂ ದುಡಿದಿದ್ದರು. "ಉದಯಚಂದ್ರ" ಎಂಬ ಪತ್ರಿಕೆಯನ್ನು ಹೊರತರುತ್ತಿದ್ದರು. ರಾಷ್ಟ್ರೀಯ ಹೆದ್ದಾರಿಯ ಪಕ್ಕ ಅಂದರೆ ಅರ್ಕುಳ ಬಳಿಯಿರುವ ಅವರ ಮನೆಯನ್ನು "ಒಡೆಯರ್ ಅಗ" (ಒಡೆಯರ ಮನೆ) ಎಂದು ಕರೆಯುತ್ತಾರೆ.

ಇದು ಅತ್ಯಂತ ಹಳೆಯ ಮತ್ತು ಸುಂದರ ವಿನ್ಯಾಸದಿಂದ ಕೂಡಿದ ಮಹಡಿ ಮನೆಯಾಗಿದೆ. ಇದನ್ನು ಈವರೆಗೂ ಕುಟುಂಬಸ್ಥರು ಕಾಪಾಡಿಕೊಂಡು ಬಂದಿದ್ದಾರೆ. ಆ ಕಾಲದ ಕೆಲವೊಂದು ವಸ್ತುಗಳನ್ನು ಈ ಮನೆಯಲ್ಲಿ ಸಂಗ್ರಹಿಸಿಡಲಾಗಿದೆ.

ಗುಂಗುರು ಕೂದಲಿನ ನೋಡಲು ಸುಂದರನಾಗಿದ್ದ ಯಕ್ಷಗಾನದ ಅರ್ಥಧಾರಿಯೂ, ಸ್ವಾತಂತ್ರ್ಯಯೋಧರೂ, ಭಾಷಣಗಾರರೂ, ವೈದ್ಯರೂ ಆಗಿದ್ದ ಡಾ.ಎಫ್.ಎಚ್. ಒಡೆಯರ್ ಸುಮಾರು 12 ವರ್ಷಗಳ ಕಾಲ ಅನಾರೋಗ್ಯದಿಂದ ಬಳಲಿದರು. ಅಂತೆಯೇ ಮಂಗಳೂರಿನ ಬಂದರ್ ಅನ್ಸಾರಿ ರಸ್ತೆಯಲ್ಲಿರುವ ತನ್ನ ಮನೆಯಲ್ಲಿ 1969ರ ಮಾರ್ಚ್ 10ರಂದು ನಿಧನರಾದರು.

ಡಾ..ಎಫ್.ಎಚ್. ಒಡೆಯರ್‌ಗೆ ಮಕ್ಕಳಿರಲಿಲ್ಲ. ಅವರೆಲ್ಲಾ ಕಾರ್ಯಚಟುವಟಿಕೆಗೆ ಪತ್ನಿ ಝುಲೇಖಾ ಪ್ರೇರಕ ಶಕ್ತಿಯಾಗಿದ್ದರು.

## ಶಿಕ್ಷಣಕ್ಕೆ ಬೆಳಕು ಬೀರಿದ ಸಿ. ಮಹ್ಮೂದ್ ಮಂಗಳೂರು



ಲಕ್ಷದ್ವೀಪದಿಂದ ವಲಸೆ ಬಂದು ಮಂಗಳೂರಿನ ಬಂದರ್‌ನಲ್ಲಿ ನೆಲೆಸಿ ಉದ್ಯಮ–ಜಮೀನುದಾರಿಕೆಯಲ್ಲಿ ಪ್ರಖ್ಯಾತಿಗಳಿಸಿದ್ದ ಸಿ. ಅಬ್ದುರ್ರಹ್ಮಾನ್ (ಬೆಂಡಿ ಹಾಜಾರ್) ಮತ್ತು ಐಸಮ್ಮ ದಂಪತಿಯ ಪುತ್ರನಾಗಿ ಸುಮಾರು 1874ರಲ್ಲಿ ಜನಿಸಿದ ಸಿ. ಮಹ್ಮೂದ್ ಅನಕ್ಷರಸ್ಥ. ಅಕ್ಷರದ ಬಗ್ಗೆ ಕಿಂಚಿತ್ತೂ ಮಾಹಿತಿ ಅಥವಾ ಕಾಳಜಿ, ಅದರ ಪ್ರಾಮುಖ್ಯತೆಯ ಬಗ್ಗೆ ಅರಿವಿಲ್ಲದ ಆ ಕಾಲದಲ್ಲಿ ಸ್ವತಃ ಅನಕ್ಷರಸ್ಥನಾಗಿದ್ದರೂ ಕೂಡ ಅವರು ಶಿಕ್ಷಣಕ್ಕೆ ಬೆಳಕು ಬೀರಿದರು.

ಸಾಕ್ಷರತೆಯಿಂದಲೇ ಎಲ್ಲವೂ ಸಾಧ್ಯ ಎಂದು ಮನಗಂಡು ಮುಸ್ಲಿಂ ಸಮುದಾಯವನ್ನು ಸಾಕ್ಷರರನ್ನಾಗಿಸಲು ಪಣತೊಟ್ಟರು. ಅದರ ಫಲವಾಗಿ ಇಂದು ಮಂಗಳೂರು ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯ ಸಾವಿರಾರು ಮಂದಿ ವಿದ್ಯೆ ಕಲಿಯುವಂತಾಯಿತು. ಅಂದರೆ 1924ರಲ್ಲಿ ಮಂಗಳೂರಿನ ಬಂದರ್ ಕಂದುಕದಲ್ಲಿ ತನ್ನ 80 ಸೆಂಟ್ಸ್ ಜಮೀನನ್ನು ದಾನ ಮಾಡಿ ಪ್ರಸ್ತುತ ತಲೆ ಎತ್ತಿನಿಂತಿರುವ ಬದ್ರಿಯಾ ಶಿಕ್ಷಣ ಸಂಸ್ಥೆಗೆ ನಾಂದಿ ಹಾಡಿದರು. ಆರಂಭದಲ್ಲಿ "ಮದ್ರಸತುಲ್ ಬದ್ರಿಯ್ಯೀನ್" ಎಂಬ ಸಂಸ್ಥೆಯನ್ನು ಹಾಜಿ ಎಂ. ಕುಂಞಾಮು, ಹಾಜಿ ಎಂ. ಮೊಯ್ದಿನಬ್ಬ, ಹಾಜಿ ಎಚ್.ಕೆ. ಅಬ್ದುಲ್ ಖಾದರ್ ಬಾವಾ, ಹಾಜಿ ಮೂಸಕುಂಞಿ ಮತ್ತಿತರರ ಜೊತೆಗೂಡಿ ಸ್ಥಾಪಿಸಿದರು. 1927ರಲ್ಲಿ ಮುಸ್ಲಿಂ ಎಜುಕೇಶನಲ್ ಅಸೋಸಿಯೇಶನ್ ಎಂಬ ಹೆಸರಿನಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಿದರು. ಅಲ್ಲದೆ ಈ ಸಂಸ್ಥೆಯ ಸ್ಥಾಪಕ ಅಧ್ಯಕ್ಷರೂ ಆದರು. ಲೌಕಿಕ ಶಿಕ್ಷಣ ಅದರಲ್ಲೂ ಇಂಗ್ಲಿಷ್ ಶಿಕ್ಷಣ ಮುಸ್ಲಿಮರನ್ನು ದಾರಿತಪ್ಪಿಸುತ್ತಿದೆ ಎಂದು ಬಲವಾಗಿ ನಂಬಿದ್ದ ಆ ಕಾಲದಲ್ಲಿ ಅವರು ಪ್ರಮುಖರ ವಿರೋಧದ ಮಧ್ಯೆಯೂ ಶಿಕ್ಷಣ ನೀಡಲು ತುದಿಗಾಲಲ್ಲಿ ನಿಂತರು.

1928ರಲ್ಲಿ ಬದ್ರಿಯಾ ಶಿಕ್ಷಣ ಸಂಸ್ಥೆಯಲ್ಲಿ 1ನೆ ತರಗತಿಯಿಂದ 5ನೆ ತರಗತಿ ಆರಂಭಗೊಂಡಿತು. ಸಿ. ಮಹ್ಮೂದ್ ಕಟ್ಟಿಸಿದ ಬದ್ರಿಯಾ ಶಿಕ್ಷಣ ಸಂಸ್ಥೆಯಲ್ಲಿ ಇಂದು ಎಲ್‌ಕೆಜಿಯಿಂದ ಹಿಡಿದು ಡಿಗ್ರಿವರೆಗೆ ಶಿಕ್ಷಣ ನೀಡಲಾಗುತ್ತಿದೆ. ಅಂದರೆ ಬದ್ರಿಯಾ ನರ್ಸರಿ ಶಾಲೆ, ಬದ್ರಿಯಾ ಬಾಲವಾಡಿ ಶಾಲೆ, ಬದ್ರಿಯಾ ಹಿ.ಪ್ರಾ. ಶಾಲೆ (ಕನ್ನಡ ಮಾಧ್ಯಮ), ಬದ್ರಿಯಾ ಪ್ರಾಥಮಿಕ ಶಾಲೆ (ಇಂಗ್ಲಿಷ್ ಮಾಧ್ಯಮ), ಬದ್ರಿಯಾ ಪ್ರೌಢಶಾಲೆ (ಕನ್ನಡ ಮಾಧ್ಯಮ), ಬದ್ರಿಯಾ ಪ್ರೌಢಶಾಲೆ (ಇಂಗ್ಲಿಷ್ ಮಾಧ್ಯಮ), ಬದ್ರಿಯಾ ಪದವಿಪೂರ್ವ ಕಾಲೇಜು, ಬದ್ರಿಯಾ ಪದವಿ ಪೂರ್ವ ಕಾಲೇಜು (ಮಹಿಳಾ ವಿಭಾಗ), ಬದ್ರಿಯಾ ಪ್ರಥಮ ದರ್ಜೆ ಕಾಲೇಜು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು (ಮಹಿಳಾ ವಿಭಾಗ), ಬದ್ರಿಯಾ ಕಂಪ್ಯೂಟರ್ ಸೆಂಟರ್ ತಲೆ ಎತ್ತಿ ನಿಂತಿವೆ.

ಅಲ್ಲದೆ ಬಂದರ್ ಕಂದುಕದಲ್ಲಿ ಬದ್ರಿಯಾ ಜುಮಾ ಮಸೀದಿ, ಪಾಂಡೇಶ್ವರ ಪೊಲೀಸ್ ಲೈನ್‌ನಲ್ಲಿ ಪೌಝಿ ಜುಮಾ ಮಸ್ಜಿದ್ ಸ್ಥಾಪನೆಗೊಂಡಿದೆ. ಮಂಗಳೂರಿನ ಪೊಲೀಸ್ ಲೈನ್‌ನಲ್ಲಿರುವ ಬದ್ರಿಯಾ ಮುಸ್ಲಿಂ ಹಾಸ್ಟೆಲ್ ಕೂಡಾ ಸಿ. ಮಹ್ಮೂದ್ ಅವರ ಶ್ರಮದ ಫಲವಾಗಿದೆ. ಸ್ಥಾಪಕರ ಆಶಯದಂತೆ ಆರ್ಥಿಕವಾಗಿ ಹಿಂದುಳಿದವರಿಗೆ ವಿನಾಯಿತಿ ನೀಡಲಾಗುತ್ತದೆ.

ಬದ್ರಿಯಾ ಶಿಕ್ಷಣ ಸಂಸ್ಥೆಯ ಕಟ್ಟಡಕ್ಕೆ ಅಂದಿನ ನಾಲ್ಕು ಸಾವಿರ ರೂಪಾಯಿಯನ್ನು ವ್ಯಯಿಸಲಾಗಿತ್ತು. ಅದನ್ನು ಸ್ವತಃ ಸಿ. ಮಹ್ಮೂದ್ ಭರಿಸಿದ್ದರು.

ಬ್ಯಾರಿ ಮುಸ್ಲಿಂ ಸಮುದಾಯದ ಮಕ್ಕಳಿಗೆ ಮೂರು ಹೊತ್ತು ಅನ್ನದ ಬದಲು ದಿನವಿಡೀ ಶಿಕ್ಷಣ ನೀಡಿ ಸುಶಿಕ್ಷಿತರನ್ನಾಗಿಸಬೇಕು ಎಂಬ ಹಂಬಲ ಅವರಿಗಿತ್ತು. ಯಾರಾದರು ಬಂದು ಹಸಿವಾಗುತ್ತಿದೆ, 5 ರೂ. ಕೊಡಿ ಎಂದರೆ ಒಂದಷ್ಟು ಯೋಚಿಸುತ್ತಿದ್ದ ಸಿ. ಮಹ್ಮೂದ್, ವಿದ್ಯೆ ಕಲಿಯಬೇಕು ಎಂದು ಯಾರಾದರು ಹೇಳಿದ ತಕ್ಷಣ ಏನನ್ನೂ ಯೋಚಿಸದೆ, ಪ್ರಶ್ನಿಸದೆ ತಟ್ಟನೆ 50 ರೂಪಾಯಿ ನೀಡುವ ಉದಾರಿಯಾಗಿದ್ದರು.

ಸಿ. ಮಹ್ಮೂದ್‌ಗೆ ಅಕ್ಷರ ಜ್ಞಾನವಿಲ್ಲದಿದ್ದರೂ ತಂದೆ ಸಿ.ಅಬ್ದುರ್ರಹ್ಮಾನ್ ಅವರಂತೆ ವ್ಯವಹಾರ ಜ್ಞಾನವಿತ್ತು. ವ್ಯಾಪಾರ, ಹೆಂಚು, ಮೀನು, ಅಡಿಕೆ ಸಹಿತ ಹತ್ತಾರು ವಹಿವಾಟು ಮಾಡುತ್ತಿದ್ದ ಅವರು ತಂದೆಯಂತೆ (ಸಿ. ಅಬ್ದುರ್ರಹ್ಮಾನ್–ಕೊರಗಪ್ಪ ಕಂಪೆನಿ) ಸ್ವತಃ ತಾನೂ ಕೂಡ ಪಾಲುದಾರಿಕೆಯ ವ್ಯಾಪಾರದಲ್ಲಿ ಹಿಡಿತ ಹೊಂದಿದ್ದರು. ಆ ಕಾಲದಲ್ಲಿ ಮಂಗಳೂರಿನಿಂದ ಅತ್ಯಧಿಕ ಮೊತ್ತದ ತೆರಿಗೆ ಕಟ್ಟುತ್ತಿದ್ದ ಹಿರಿಮೆಯೂ ಸಿ.ಮಹ್ಮೂದ್‌ರಿಗೆ ಇತ್ತು.

ಶಿಕ್ಷಣಕ್ಕಾಗಿ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಮಂಗಳೂರು ಪುರಸಭೆಯ (ಮುನ್ಸಿಪಲ್ ಕೌನ್ಸಿಲರ್) ಸದಸ್ಯರನ್ನಾಗಿ ನೇಮಿಸಲಾಗಿತ್ತು.

ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದರೂ, ದೊಡ್ಡ ಉದ್ಯಮಿಯಾಗಿದ್ದರೂ ಸಮಾಜ ಸೇವೆಯು ಅವರ ಆಸಕ್ತಿಯ ಕ್ಷೇತ್ರವಾಗಿತ್ತು. ರಾಜಕೀಯದಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಆದರೆ ಶೈಕ್ಷಣಿಕ ಸೇವೆಯು ಅವರ ಉಸಿರಾಗಿತ್ತು. ಕೊಡುಗೈ ದಾನಿಯಾಗಿದ್ದರು. ನಾಯಕತ್ವದ ಗುಣವೂ ಇತ್ತು.

ಸಿ. ಮಹ್ಮೂದ್ ಪತ್ನಿಯರಾದ ಬೀಪಾತುಮ್ಮ, ಆಶಿಯಮ್ಮ, ಅಲಿಮಮ್ಮ ಹಾಗೂ ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು 1954ರ ಮೇ 9ರಂದು ಬಿಟ್ಟಗಲಿದರು.

# ಖಾನ್ ಬಹದ್ದೂರ್ ಬಿರುದು ಪಡೆದ ಅಬೂಬಕರ್ ಹಾಜಿ ಯಾನೆ ಬಾವಾ ಹಾಜಿ

ಮಂಗಳೂರಿನ ಪ್ರತಿಷ್ಠಿತ "ಪೌನಾರಗ" ಮನೆತನದಲ್ಲಿ ಒಂದಾದ ಮೂಸಾರಿಕಾನ ಕುಟುಂಬದಲ್ಲಿ ಹುಟ್ಟಿ ಬೆಳೆದು ಮಂಗಳೂರಿನ ಮೇಲೆ ಬಲವಾದ ಹಿಡಿತ ಸಾಧಿಸಿದ್ದ ಮತ್ತು ಬ್ರಿಟಿಷರಿಂದ 1883ರಲ್ಲಿ ಖಾನ್ ಬಹದ್ದೂರ್ ಖಾನ್ ಎಂಬ ಬಿರುದು ಪಡೆದಿದ್ದ ಅಬೂಬಕರ್ ಹಾಜಿ ಯಾನೆ ಬಾವಾ ಹಾಜಿ ಮುಸ್ಲಿಂ ಸಮುದಾಯದ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿದ್ದರು. "ಮೂಸಾರಿಕಾನ ಅಗ"ದ ಯಜಮಾನರಾಗಿ ಮೆರೆದ ಅವರು ಬಂದರ್ ಪರಿಸರದಲ್ಲಿದ್ದರೂ ಕೂಡ ಚದುರಿ ಹೋಗಿದ್ದ "ಅಗ" ಮನೆತನವನ್ನು ಒಗ್ಗೂಡಿಸಿದ ಖ್ಯಾತಿಗೆ ಪಾತ್ರರಾಗಿದ್ದರು. ಮಂಗಳೂರಿನ ಪ್ರಭಾವಶಾಲಿ ವರ್ತಕರು, ಸಾಮಾಜಿಕ ಮುಖಂಡರೂ ಆಗಿದ್ದರು.

ವೈಭವಯುತ ಜೀವನಕ್ಕೆ ಹೆಸರುವಾಸಿಯಾಗಿದ್ದ ಅವರು ತನ್ನ ಮನೆಯಲ್ಲಿ ನಡೆಯುತ್ತಿದ್ದ ಔತಣ ಕೂಟಗಳಿಗೆ ವಿಶೇಷ ಅಹ್ವಾನಿತರಾಗಿ ಬ್ರಿಟಿಷರನ್ನು ಆಮಂತ್ರಿಸುತ್ತಿದ್ದರು. 1883ರಲ್ಲಿ ಬ್ರಿಟಿಷ್ ಆಡಳಿತವು ತನ್ನ ಸೇನಾ ತುಕಡಿಯನ್ನು ಮಂಗಳೂರಿನಲ್ಲಿ ನೆಲೆ ನಿಲ್ಲಿಸಲು ಮುಂದಾದಾಗ ಬಾವಾ ಹಾಜಿ ಮಂಗಳೂರಿನಲ್ಲಿ ಬ್ರಿಟಿಷ್ ಸೇನಾ ತುಕಡಿಯ ಅಗತ್ಯವಿಲ್ಲ. ಇಲ್ಲಿ ಏನಾದರು ದಂಗೆ ಅಥವಾ ಬಂಡಾಯವಾದರೆ ಅದನ್ನು ಹತ್ತಿಕ್ಕುವ ಸಾಮರ್ಥ್ಯ ತನಗಿದೆ ಎಂದು ಹೇಳಿಕೊಂಡು ಬ್ರಿಟಿಷ್ ತುಕಡಿ ಮಂಗಳೂರಿನಲ್ಲಿ ನೆಲೆ ನಿಲ್ಲದಂತೆ ನೋಡಿಕೊಂಡಿದ್ದರು. ಬಾವಾ ಹಾಜಿಯ ಸಾಮರ್ಥ್ಯವನ್ನು ಚೆನ್ನಾಗಿ ಅರಿತುಕೊಂಡಿದ್ದ ಬ್ರಿಟಿಷರು ಅವರ ಮಾತಿಗೆ, ಸಲಹೆ, ಸೂಚನೆಗೆ ಮನ್ನಣೆಯನ್ನೂ ನೀಡುತ್ತಿದ್ದರು.

1866ರಲ್ಲಿ ಮಂಗಳೂರು ಪುರಸಭೆ ರಚನೆಗೊಂಡಾಗ ಬಾವಾ ಹಾಜಿ ಕೌನ್ಸಿಲರ್ ಆಗಿದ್ದರು. ಅಲ್ಲದೆ ತನ್ನ ಸಹಪಾಠಿಗಳಾದ ಹಾಜಿ ಅಬ್ದುಲ್ಲಾ ಅಲಿ ಸೇಟ್ (1866), ಬೈಲ್ ಅಬ್ಬು ಬ್ಯಾರಿ (1875), ಅಯ್ಯೂಬ್ ನೂರ್ ಮುಹಮ್ಮದ್ (1877) ಅವರೆಲ್ಲಾ ಪುರಸಭೆಯ ಕೌನ್ಸಿಲರ್‌ಗಳಾಗಲು ಸಹಕರಿಸಿದ್ದರು.


ಮಂಗಳೂರಿನ ಶ್ರೀಮಂತ ವ್ಯಾಪಾರಿಯಾಗಿದ್ದ ಬಾವಾ ಹಾಜಿ ಬ್ರಿಟಿಷರ ಜೊತೆ ಒಡನಾಟ ಮಾತ್ರವಲ್ಲ ಅರಬರ ಜೊತೆಯೂ ನೇರ ಸಂಪರ್ಕ ಹೊಂದಿದ್ದರು. "ಪೌನಾರಗ" ಮನೆತನದ ಹಿರಿಮೆ ಹೆಚ್ಚಿಸಿದ್ದ ಬಾವಾ ಹಾಜಿ ಜೈನರು ಮತ್ತು ಬ್ರಾಹ್ಮಣರ ಜೊತೆಯೂ ಅನ್ಯೋನ್ಯರಾಗಿದ್ದರು. ವಿದೇಶಿ ವ್ಯಾಪಾರದಲ್ಲಿ ದಾಖಲೆ ನಿರ್ಮಿಸಿದ್ದರು. ಬ್ಯಾರಿ, ಕನ್ನಡ, ತುಳು, ಇಂಗ್ಲಿಷ್, ಅರಬಿಕ್ ಭಾಷೆಯಲ್ಲೂ ಹಿಡಿತ ಸಾಧಿಸಿದ್ದರು.

ಮಂಗಳೂರು ಬಂದರ್‌ನ ಝೀನತ್ ಬಕ್ಷ್ ಕೇಂದ್ರ ಜುಮಾ ಮಸ್ಜಿದ್‌ನ ಅಧ್ಯಕ್ಷರಾಗಿದ್ದ ಬಾವಾ ಹಾಜಿಯ ಪ್ರಭಾವವು ಮುಸ್ಲಿಮೇತರರ ಮೇಲೂ ಇತ್ತು. ಮಂಗಳೂರಿನ ಕದ್ರಿ ದೇವಸ್ಥಾನದ ಸುತ್ತಮುತ್ತಲಿನ 7 ಬಾವಿಗಳ ನೀರಿನ ಬಳಕೆಯ ಬಗ್ಗೆ ವಿವಾದ ಉಂಟಾದಾಗ ಬಾವಾ ಹಾಜಿ ಅದನ್ನು ಅತಿಬುದ್ಧಿವಂತಿಕೆಯಿಂದ ಬಗೆಹರಿಸಿದ್ದರು. ಅಂದರೆ ರಾತ್ರಿ ಬೆಳಗಾಗುವುದರೊಳಗೆ ಬಾವಿಗೆ ತಡೆಗೋಡೆ ನಿರ್ಮಿಸಿ ಹಿಂದೂ–ಮುಸ್ಲಿಮರು ಬಳಕೆ ಮಾಡುವಂತೆ ಮಾಡಿದ್ದರು.

ಬಾವಾ ಹಾಜಿಯ ನಿಕಟವರ್ತಿಗಳಾಗಿ ವಲ್ಲಿ ಮಾಮಾಕ, ಬೆಲ್ತ ಅಬ್ಬುಬ್ಯಾರಿ, ಕರ್ತ ಅಬ್ಬಾಕ, ಜೈನತಾನ್ ಮಾಯಬ್ಬಾಕ, ಹಸನ್ ಬಾವಾಕ, ಬೈಲು ಅಬ್ಬು ಬ್ಯಾರಿ ಮತ್ತಿತರರಿದ್ದರು. 1909ರಲ್ಲಿ ಖಾನ್ ಬಹದ್ದೂರ್ ಅಬೂಬಕರ್ ಹಾಜಿ ಯಾನೆ ಬಾವಾ ಹಾಜಿ ನಿಧನರಾದರು.

# ಸಾಮಾಜಿಕ ಧುರೀಣ

# ಮೊಹಿದ್ದಿನ್ ಕುಟ್ಟಿ ಹಾಜಿ ಮೂಡಿಗೆರೆ



ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಮೂಡಿಗೆರೆ ಪುರಸಭಾ ವ್ಯಾಪ್ತಿಯಲ್ಲಿ ನೆಲೆಸಿದ್ದ ಮೊಹಿದ್ದಿನ್ ಕುಟ್ಟಿ ಹಾಜಿ ಮೂಲತಃ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಹೊನ್ನಾವರದ ಕಾಸರಗೋಡು ಎಂಬ ಊರವರು. ಅವರ ಹಲವು ಪೂರ್ವಜ ಕುಟುಂಬವು ಕೇರಳದ ಕಾಸರಗೋಡಿನಿಂದ ಹೊನ್ನಾವರ ಸಮೀಪದ ಕುಗ್ರಾಮಕ್ಕೆ ತೆರಳಿ ನೆಲೆಸಿತ್ತು. ಕಾಸರಗೋಡಿನ ಒಂದು ಕುಟುಂಬದ ಹಲವು ಮಂದಿ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದ ಕಾರಣ ಸ್ಥಳೀಯರು ಆ ಕುಗ್ರಾಮದಲ್ಲಿ ನೆಲೆಸಿದ ಜನರನ್ನು ಕಾಸರಗೋಡಿನವರು ಎಂದು ಕರೆಯತೊಡಗಿದರಂತೆ. ಹಾಗೇ ಆ ಊರಿಗೆ ಕಾಸರಗೋಡು ಎಂಬ ಹೆಸರು ಪ್ರತೀತಿಯಲ್ಲಿ ಬಂತೆಂಬ ಮಾತು ಕೇಳಿ ಬರುತ್ತಿದೆ.

ಮೊಯ್ದಿನ್ ಸಾಬ್–ಬೀಫಾತಿಮಾ ದಂಪತಿಯ ಪುತ್ರನಾಗಿ ಹೊನ್ನಾವರದ ಕಾಸರಗೋಡು ಎಂಬಲ್ಲಿ 1888ರಲ್ಲಿ ಜನಿಸಿದ ಮೊಹಿದ್ದಿನ್ ಕುಟ್ಟಿ ಕೋಡಿ ಕುಂದಾಪುರದಲ್ಲಿ ಬೆಳೆದು, ಮಂಗಳೂರಿನಲ್ಲಿ ವಿದ್ಯಾಭ್ಯಾಸ ಪಡೆದರು ಎನ್ನಲಾಗಿದೆ. ಕೇವಲ ನಾಲ್ಕನೇ ತರಗತಿ ಕಲಿತರೂ ಕೂಡ ಬದುಕಿನಲ್ಲಿ ಕಲಿತ ಅಪಾರ ಅನುಭವ ಮತ್ತು ಬ್ರಿಟಿಷರ ಜೊತೆಗಿನ ಒಡನಾಟದಿಂದ ಸ್ಪಷ್ಟವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಲು ಬಲ್ಲವರಾಗಿದ್ದರು ಎಂದು ಅವರ ಕುಟುಂಬಸ್ಥರು ಮಾಹಿತಿ ನೀಡುತ್ತಾರೆ.

1910ರಲ್ಲಿ ಮೂಡಿಗೆರೆ ತಾಲೂಕಿನ ಕಮ್ಮರಗೋಡು ಎಸ್ಟೇಟ್‌ನ ಮಾಲಕ (ಅಂದಿನ ಡಿಸ್ಟ್ರಿಕ್ಟ್ ಕಲೆಕ್ಟರ್‌ಗಳ ಅಧೀನದಲ್ಲಿರುವ ಬ್ರಿಟಿಷ್ ಅಧಿಕಾರಿಗಳಾಗಿದ್ದ ಅವರನ್ನು ಸ್ಥಳೀಯರು ದೊರೆಗಳು ಎನ್ನುತ್ತಿದ್ದರು) ತನ್ನ ಕುಟುಂಬ ಸಮೇತ ಹೊನ್ನಾವರದಲ್ಲಿ ಕುದುರೆ ಸವಾರಿ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಹೊನ್ನಾವರ ರಸ್ತೆ ಪಕ್ಕದಲ್ಲಿರುವ ಕೆರೆಗೆ ಕುದುರೆಯು ಆಕಸ್ಮಿಕವಾಗಿ ಹಾರಿ ಬೀಳುತ್ತದೆ, ಬ್ರಿಟಿಷ್ ಅಧಿಕಾರಿಯು ನೀರಿನಲ್ಲಿ ಬಿದ್ದು ಒದ್ದಾಡುತ್ತಾರೆ. ಅವರ ಕಾವಲು ಪಡೆ ಇದ್ದರೂ ಕೂಡ ಅವರು ಕೆರೆಗೆ ಹಾರಿ ಅಧಿಕಾರಿಯನ್ನು ರಕ್ಷಿಸುವುದಿಲ್ಲ. ಆವಾಗ ಅಲ್ಲೇ ಇದ್ದ ಮೊಹಿದ್ದಿನ್ ಕುಟ್ಟಿ ಕೆರೆಗೆ ಹಾರಿ ದೊರೆಯನ್ನು ರಕ್ಷಿಸುತ್ತಾರೆ. ಇದರಿಂದ ಸಂತೋಷಗೊಂಡ ಆ ಬ್ರಿಟಿಷ್ ಅಧಿಕಾರಿಯು ಯುವಕ ಮೊಹಿದ್ದಿನ್ ಕುಟ್ಟಿಯನ್ನು ಕಮ್ಮರಗೋಡು ಎಸ್ಟೇಟ್‌ಗೆ ಬರುವಂತೆ ಆಹ್ವಾನ ನೀಡುತ್ತಾರೆ. ಅದರಂತೆ ಮೊಹಿದ್ದಿನ್ ಕುಟ್ಟಿ 1911ರಲ್ಲಿ ಮೂಡಿಗೆರೆ ತಾಲೂಕಿನ ಕಮ್ಮರಗೋಡಿಗೆ ಪತ್ನಿ ಖತೀಜಮ್ಮರೊಂದಿಗೆ ತೆರಳುತ್ತಾರೆ. ಅವರಿಗೆ ಅಧಿಕಾರಿಯು ಸಕಲ ಸೌಕರ್ಯಗಳನ್ನು ಮಾಡಿಕೊಡುತ್ತಾರೆ. ಅಲ್ಲದೆ ತನ್ನ ಬಳಿ ಇದ್ದ ಕೋವಿ ಮತ್ತು ಮದ್ದುಗುಂಡು ಹಾಗೂ ಅದಕ್ಕೆ ಬೇಕಾದ ಸಾಮಾಗ್ರಿ ತಯಾರಿಯ ಬಗ್ಗೆ ಕಲಿಸಿ ಕೊಡುತ್ತಾರೆ. ಹಾಗೇ ಬ್ರಿಟಿಷ್ ಸರಕಾರದಿಂದ ಮದ್ದುಗುಂಡಿನ ಪರವಾನಗಿಯನ್ನು ಪಡೆದು ಮೂಡಿಗೆರೆಯಲ್ಲಿಯೇ ತನ್ನದೇ ಆದ ಬಂದೂಕು ಅಂಗಡಿಯನ್ನು ತೆರೆದು ತನ್ನ ಕುಟುಂಬದೊಂದಿಗೆ ಜೀವನ ಸಾಗಿಸುತ್ತಾರೆ. ಈ ವೇಳೆ ಅಕ್ಕಪಕ್ಕದ ಬ್ರಿಟಿಷ್ ಅಧಿಕಾರಿಗಳು (ದೊರೆಗಳು) ಮೊಹಿದ್ದಿನ್ ಕುಟ್ಟಿಯ ಅಂಗಡಿಯಿಂದಲೇ ಮದ್ದುಗುಂಡುಗಳ ಖರೀದಿಗೆ ಬರುತ್ತಿದ್ದರು. ಅವರ ಪರಿಚಯದಿಂದ 1930ರಲ್ಲಿ ಮೈಸೂರು ಸರಕಾರದ ಆಡಳಿತಾವಧಿಯಲ್ಲಿ ರಸ್ತೆ, ಚರಂಡಿ, ಮೋರಿ ಹಾಗೂ ಪಿಡಬ್ಲ್ಯೂಡಿ ಕಾಮಗಾರಿಗಳನ್ನು ಮಾಡುತ್ತಾ ನಂ.1 ಗುತ್ತಿಗೆದಾರರ ಪರವಾನಗಿಯನ್ನು ಪಡೆದು ಮೂಡಿಗೆರೆ ಪಟ್ಟಣದ ಪ್ರವಾಸಿ ಮಂದಿರ, ಪಿಡಬ್ಲ್ಯೂಡಿ ಕಟ್ಟಡಗಳು, ಸರಕಾರಿ ಶಾಲೆಗಳ ಸಹಿತ ನೂರಾರು ಕಾಮಗಾರಿಗಳನ್ನು ಮಾಡಿ ಮೈಸೂರು ಅರಸರಿಂದ ಹಲವಾರು ಸನ್ಮಾನಗಳನ್ನು ಸ್ವೀಕರಿಸಿ ಅಂದಿನ ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್‌ರಿಂದ ಪದಕಗಳನ್ನು ಪಡೆದುಕೊಂಡು ಯಶಸ್ವಿ ಗುತ್ತಿಗೆದಾರರಾಗಿ ಮೆರೆಯುತ್ತಾರೆ.

ಅಂದಿನ ಶಾಂತಿ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದ ಮೊಹಿದ್ದಿನ್ ಕುಟ್ಟಿ ಹಾಜಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಗ್ರಜರಾಗಿ ಸೇವೆ ಸಲ್ಲಿಸಿದರು. ಮೂಡಿಗೆರೆ ಪುರಸಭೆಯ ಸದಸ್ಯ ಮತ್ತು ಉಪಾಧ್ಯಕ್ಷರಾಗಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಕ್ಕಾಗಿ ಮೂಡಿಗೆರೆಯ ಪ್ರಮುಖ ರಸ್ತೆಗೆ ಅವರ ಹೆಸರನ್ನು ನಾಮಕರಣ ಮಾಡಲಾಗಿದೆ.

ಮೊಹಿದ್ದಿನ್ ಕುಟ್ಟಿ ಹಾಜಿ ವಿಶಾಲ ಹೃದಯವಂತಿಕೆಯುಳ್ಳವರು. ಬಡ ಮತ್ತು ನಿರ್ಗತಿಕರನ್ನು ತನ್ನ ಮನೆಯಲ್ಲಿಯೇ ಕುಟುಂಬ ಸದಸ್ಯರೊಂದಿಗೆ ಸಾಕಿ–ಸಲಹಿ ಪ್ರಾಯಕ್ಕೆ ಬಂದ ಬಳಿಕ ಅವರಿಗೆ ಮದುವೆ ಮಾಡಿಸಿ ಅವರ ಜೀವನಕ್ಕೆ ದಾರಿ ಮಾಡಿಕೊಟ್ಟಿರುವುದೇ ಅದಕ್ಕೆ ಸಾಕ್ಷಿಯಾಗಿದೆ. ಶ್ರೀಮಂತರು, ಬಲಾಢ್ಯರಿಂದ ದೌರ್ಜನ್ಯಕ್ಕೆ ಒಳಗಾದವರಿಗೆ

ಮೊಹಿದ್ದಿನ್ ಕುಟ್ಟಿ ಹಾಜಿ ರಾಜಿ ಪಂಚಾಯಿತಿಗೆ ಮಾಡಿಸಿ ನ್ಯಾಯ ಕೊಡಿಸುವ ಮೂಲಕವೂ ಜನಾನುರಾಗಿಯಾಗಿದ್ದರು. ಅವರ ನ್ಯಾಯದ ತೀರ್ಪು ಗರ್ನಲ್‌ನಂತೆ ಸಿಡಿಯುತ್ತಿತ್ತು ಎಂಬ ಮಾತು ಈಗಲೂ ಮೂಡಿಗೆರೆಯಲ್ಲಿ ಕೇಳಿ ಬರುತ್ತಿದೆ.

ಅವರು ಸಮಾಜ ಸುಧಾರಕ ಮಾತ್ರವಲ್ಲ, ಜಾತ್ಯತೀತರೂ ಆಗಿದ್ದರು. ಅನ್ನದಾತರಾಗಿ ಜಾತಿ ಭೇದವಿಲ್ಲದೆ ಎಲ್ಲರೊಂದಿಗೆ ಒಂದಾಗಿ ಸಹಾಯ ಹಸ್ತ ನೀಡಿದ ಹೆಗ್ಗಳಿಕೆ ಕೂಡ ಅವರದ್ದಾಗಿದೆ. ಅನ್ಯಾಯಕ್ಕೆ ಒಳಗಾಗಿ ಬಡವರು ಮತ್ತು ಹಳ್ಳಿಗಳಿಂದ ಪಟ್ಟಣಕ್ಕೆ ಬರುವ ರೈತರು ತಮಗಾದ ಮೋಸ ವಂಚನೆಗಳ ಬಗ್ಗೆ ನೇರವಾಗಿ ಅವರ ಬಳಿ ಬಂದು ನ್ಯಾಯ ಕೇಳುವುದಿತ್ತು. ಪೊಲೀಸರಿಂದ ಸಿಗದಿದ್ದ ನ್ಯಾಯವು ಮೊಹಿದ್ದಿನ್ ಕುಟ್ಟಿ ಹಾಜಿಯವರಿಂದ ಪ್ರಾಮಾಣಿಕವಾಗಿ ಸಿಗುತ್ತಿತ್ತು ಎಂಬ ಮಾತು ಅವರಿಂದ ನ್ಯಾಯ ಪಡೆದ ಕುಟುಂಬಸ್ಥರು ಹೇಳುತ್ತಾರೆ.

ಮೊಹಿದ್ದಿನ್ ಕುಟ್ಟಿ ಹಾಜಿಯು 1942ರ ಕ್ವಿಟ್ ಇಂಟಿಯಾ ಚಳುವಳಿಯ ಸಹಪಾಠಿಗಳೊಂದಿಗೆ ಭಾಗಿಯಾದ ಕಾರಣ ಅವರ ಮದ್ದುಗುಂಡಿನ ಪರವಾನಗಿಯನ್ನು ಬ್ರಿಟಿಷ್ ಸರಕಾರ ರದ್ದುಪಡಿಸಿತ್ತು. ಸ್ವಾತಂತ್ರ್ಯದ ನಂತರ ಪುನಃ ಮದ್ದುಗುಂಡಿನ ಪರವಾನಗಿಯನ್ನು ಪಡೆದುಕೊಂಡರು. ಅವರು ನಿರ್ಮಿಸಿದ ಕೆರೆಗಳು, ಮೋರಿಗಳು, ರಸ್ತೆ ಕಾಮಗಾರಿಗಳು ಇಂದಿಗೂ ಶಾಶ್ವತವಾಗಿ ಉಳಿದುಕೊಂಡಿವೆ. ಅವರು ಸಮುದಾಯ, ಸಮಾಜದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತನ್ನ ಮನೆಯ ಮಾಳಿಗೆಯಲ್ಲೇ ತರಗತಿ ನಡೆಸಲು ಅವಕಾಶ ಕಲ್ಪಿಸಿದ್ದರು. ಅಲ್ಲದೆ 1940ರಲ್ಲಿ ಮದ್ರಸವನ್ನು ಪ್ರಾರಂಭಿಸಿ ಅದರ ಸಂಪೂರ್ಣ ಖರ್ಚುವೆಚ್ಚವನ್ನು ಸ್ವತಃ ತಾವೇ ಭರಿಸಿದ್ದರು. ಇದು ಚಿಕ್ಕಮಗಳೂರು ಜಿಲ್ಲೆಯ ಪ್ರಪ್ರಥಮ ಮದ್ರಸ ಎಂಬ ಖ್ಯಾತಿಗೆ ಒಳಗಾಗಿದೆ.

ಮೊಹಿದ್ದಿನ್ ಕುಟ್ಟಿ ಹಾಜಿ ಕೃಷಿ ವಲಯದಲ್ಲೂ ಕೂಡ ಕೆಲಸ ಕಾರ್ಯಗಳನ್ನು ಮಾಡಿದ್ದರು. ಸುಮಾರು 600 ಎಕರೆಗೂ ಹೆಚ್ಚಿನ ಕಾಫಿ, ಅಡಿಕೆ, ಏಲಕ್ಕಿಯಂತಹ ಬೆಳೆಗಳ ಕೃಷಿ ಮಾಡಿ ಯಶಸ್ವಿ ರೈತರಾಗಿದ್ದರು. ಮೂಡಿಗೆರೆಯ ಬದ್ರಿಯಾ ಮಸೀದಿಯ ಜಾಗದಲ್ಲಿ ಮದ್ರಸವನ್ನು ನಿರ್ಮಿಸಿ ಅಲ್ಲಿಯೇ ನಮಾಜು ಹಾಗೂ ಸ್ಥಳೀಯರಿಗೆ ಅನುಕೂಲವಾಗುವ "ದೀನಿ" ಕಾರ್ಯಕ್ರಮಗಳನ್ನು ಮಾಡಲು ಸಹಾಯ ಮಾಡಿದ್ದರು.


ಮೊಹಿದ್ದಿನ್ ಕುಟ್ಟಿ ಹಾಜಿಯವರು ಮೊದಲ ಪತ್ನಿ ಖತೀಜಮ್ಮ, ಎರಡನೇ ಪತ್ನಿ ಮಮ್ತಾಜ್ (ಮಮ್ಮುಟ್ಟಿ), ಮೂರನೇ ಪತ್ನಿ ಪುನ್ನಮ್ಮ (ಪುನ್ನುಟ್ಟಿ) ಅವರಿಂದ ಒಟ್ಟು 29 ಮಕ್ಕಳನ್ನು ಹೊಂದಿದ್ದರು. ಅವರಲ್ಲಿ 11 ಮಕ್ಕಳು ಬಾಲ್ಯದಲ್ಲೇ ತೀರಿಕೊಂಡಿದ್ದರು. ಉಳಿದಂತೆ 9 ಗಂಡು ಮತ್ತು 9 ಹೆಣ್ಣು ಸಹಿತ 18 ಮಕ್ಕಳಿದ್ದರು. ಮೂವರು ಹೆಂಡತಿಯರಲ್ಲಿ ತಲಾ ಮೂವರು ಗಂಡು ಮಕ್ಕಳಿದ್ದರು. ಒಂದೇ ಹೆಸರನ್ನು ಇಬ್ಬರು ಮಕ್ಕಳಿಗೆ ಇಟ್ಟ ಉದಾಹರಣೆಯೂ ಇದೆ. ಉದಾ: ಯೂಸುಫ್, ಹಾಮದ್ ಇತ್ಯಾದಿ.

1959ರಲ್ಲಿ ಮೊದಲ ಪತ್ನಿಯೊಂದಿಗೆ ಹಡಗಿನಲ್ಲಿ ದೀರ್ಘಾವಧಿ ಪ್ರಯಾಣಿಸಿ ಹಜ್ ಕರ್ಮವನ್ನು ನಿರ್ವಹಿಸಿದ್ದರು. ಮೊದಲ ಪತ್ನಿ ಖತೀಜಮ್ಮ ಮಕ್ಕಾದಲ್ಲಿಯೇ ಮರಣ ಹೊಂದಿದ ಬಳಿಕ ಊರಿಗೆ ಹಿಂದಿರುಗಿ ಬಂದ ನಂತರ ಆರೋಗ್ಯದಲ್ಲಿ ಏರುಪೇರು ಉಂಟಾಗಿ 1960ರಲ್ಲಿ ಮೃತಪಟ್ಟರು.

ಅವರ ಕುಟುಂಬದ ಸದಸ್ಯರು ಅಂದರೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಉನ್ನತ ವ್ಯಾಸಂಗ ಮಾಡಿ ಇಂದು ದೇಶ–ವಿದೇಶದಲ್ಲಿ ವೈದ್ಯರಾಗಿ, ವಕೀಲರು, ಬಿಲ್ಡರ್‌ಗಳಾಗಿ ತಾಂತ್ರಿಕ ಇನ್ನಿತರ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ.

ಮೊಹಿದ್ದಿನ್ ಕುಟ್ಟಿ ಹಾಜಿಯ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ 2007ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ನಾಲ್ಕನೇ ಬ್ಯಾರಿ ಸಾಹಿತ್ಯ ಸಮ್ಮೇಳನದ ವೇದಿಕೆಗೆ "ಕೋಡಿ ಮೊಹಿದ್ದಿನ್ ಕುಟ್ಟಿ ಹಾಜಿ (ಮೂಡಿಗೆರೆ)" ಎಂದು ಹೆಸರಿಡಲಾಗಿತ್ತು.

# ಸಮಾಜಮುಖಿಯಾಗಿದ್ದ ಚಕ್ಕಮಕ್ಕಿ ಹಾಜಿ ಕೆ.ಅಬ್ದುಲ್ ರೆಹಮಾನ್



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಫರಂಗಿಪೇಟೆಯಲ್ಲಿ ಇಜ್ಜಬ್ಬ ಬ್ಯಾರಿ–ಫಾತಿಮಾ ದಂಪತಿಯ ಪುತ್ರನಾಗಿ 1912ರಲ್ಲಿ ಜನಿಸಿದ ಕೆ. ಅಬ್ದುಲ್ ರೆಹಮಾನ್ ಕೆಲಸ ಅರಸಿಕೊಂಡು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಬಣಕಲ್ ಹೋಬಳಿಯ ಬಗ್ಗಸಗೋಡು ಗ್ರಾಮದ ಚಕ್ಕಮಕ್ಕಿಯಲ್ಲಿ ನೆಲೆಸಿ ಅಲ್ಲೇ ಕಠಿಣ ಪರಿಶ್ರಮಪಟ್ಟು ನಿರೀಕ್ಷೆಗೂ ಮೀರಿ ಸಾಧನೆಗೈದ ಚತುರ.

1930ರಲ್ಲಿ ವಾಹನ ಸಂಚಾರ ಇಲ್ಲದ ಸಮಯದಲ್ಲಿ ಮಂಗಳೂರಿನಿಂದ ಘಟ್ಟದ ಕಡೂರು, ಬಾಣಾವರ, ಜಾವಗಲ್‌ಗೆ ತರಕಾರಿ, ಕಾಳು ಪದಾರ್ಥಗಳು, ಸಾಂಬಾರ ಸಹಿತ ಹಲವು ಬಗೆಯ ಆಹಾರ ಪದಾರ್ಥಗಳನ್ನು ಎತ್ತಿನಗಾಡಿಗಳಲ್ಲಿ ಸಾಗಿಸಲಾಗುತ್ತಿತ್ತು. ಆವಾಗ 18 ವರ್ಷ ಪ್ರಾಯದ ಅಬ್ದುಲ್ ರೆಹಮಾನ್ ಎಂಬ ಯುವಕ ಎತ್ತಿನಗಾಡಿಯಲ್ಲಿ ಕುಳಿತು ಪ್ರಯಾಣ ಬೆಳೆಸಿದ. ಹಾಲುಮಕ್ಕಿ ಎಂಬಲ್ಲಿ ಎತ್ತಿನಗಾಡಿಗಳನ್ನು ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದಾಗ ಅಬ್ದುಲ್ ರೆಹಮಾನ್‌ಗೆ ನಿದ್ರೆ ಆವರಿಸಿತ್ತು. ಅದರ ಬಗ್ಗೆ ಅರವಿಲ್ಲದೆ ಎತ್ತಿನಗಾಡಿಗಳು ಪ್ರಯಾಣ ಮುಂದುವರೆಸಿದ್ದರೆ ನಿದ್ರೆಯಲ್ಲಿದ್ದ ಯುವಕ ಎಚ್ಚರಗೊಂಡಾಗ ತಾನು ಒಬ್ಬನೇ ಬಾಕಿಯಾಗಿರುವುದನ್ನು ಕಂಡು ದಿಕ್ಕು ತೋಚದೆ ಈ ನಿರ್ಜನ ಪ್ರದೇಶದಲ್ಲಿ ಭಯಭೀತರಾಗಿದ್ದಾಗ ಅಲ್ಲೇ ಸಮೀಪದಲ್ಲಿ ಮನೆಯೊಂದು ಕಾಣಿಸಿತ್ತು. ಆ ಮನೆಯ ಮಾಲಕ ಅರ್ಚಕರಾಗಿದ್ದರು. ಅಬ್ದುಲ್ ರೆಹಮಾನ್ ಅಲ್ಲಿ ಹೋಗಿ ತನ್ನ ಸಂಕಷ್ಟ ತಿಳಿಸಿದಾಗ ಅರ್ಚಕರು ಅಲ್ಲೇ ನೆಲೆಯೂರಲು ಅವಕಾಶ ಮಾಡಿಕೊಟ್ಟರು. ಬಳಿಕ ಅರ್ಚಕರ ಪರಿಚಯದಿಂದ ಸಣ್ಣ–ಪುಟ್ಟ ಗುತ್ತಿಗೆ ಕೆಲಸಗಳನ್ನು ಮಾಡುವ ಮೂಲಕ ಜೀವನ ಆರಂಭಿಸಿದರು. ಹೀಗೆ ಮುಂದುವರೆದ ಅವರು ಕೆಲವು ಸಮಯದ ನಂತರ ತನ್ನ ಊರಾದ ಫರಂಗಿಪೇಟೆಯಿಂದ ಕೆಲವು ಸ್ನೇಹಿತರನ್ನು ಕರೆಯಿಸಿಕೊಂಡು ತನ್ನ ಗುತ್ತಿಗೆ ವೃತ್ತಿಯನ್ನು ವೃದ್ಧಿಸಿಕೊಂಡರು. ಈ ಮಧ್ಯೆ ಆ ನಿರ್ಜನ ಪ್ರದೇಶದಲ್ಲಿ ಸ್ವಂತ ಮನೆಯನ್ನು ಕಟ್ಟಿಸಿಕೊಂಡರು. ಮುಂದೆ ಮೈಸೂರು ಸರ್ಕಾರದ (ರಾಜರ) ಆಡಳಿತದಲ್ಲಿ ರಸ್ತೆ ನಿರ್ಮಾಣ, ಮೋರಿ ಕೆರೆಗಳ ಅಭಿವೃದ್ಧಿ ಸಹಿತ ನಿರೀಕ್ಷೆಗೂ ಮೀರಿ ಗುತ್ತಿಗೆಯ ಕೆಲಸ ಮಾಡುತ್ತಾ ನಂಬರ್–1 ಕಂಟ್ರಾಕ್ಟ್‌ದಾರರಾಗಿ ಗುರುತಿಸಲ್ಪಟ್ಟರು. ಅವರ ಪ್ರಾಮಾಣಿಕ ಕೆಲಸ ಕಾರ್ಯಗಳನ್ನು ಗಮನಿಸಿದ ಮೈಸೂರು ಸರ್ಕಾರವು ಹಲವು ರೀತಿಯ ಸನ್ಮಾನಗಳನ್ನು ನೀಡಿ ಗೌರವಿಸಿದೆ. ಅವರು ಅಂದು ನಿರ್ಮಿಸಿದ ಹಲವು ಕೆರೆಗಳು, ಮೋರಿಗಳು ಇಂದೂ ಶಾಶ್ವತವಾಗಿದೆ. ಮೈಸೂರು ಸರ್ಕಾರದ ಅಂದಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರು ಅವರ ಕೆಲಸಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಮೂಡಿಗೆರೆಗೆ ಬಂದ ಸಂದರ್ಭದಲ್ಲಿ ಬೆಳ್ಳಿಯ "ಗಾರೆಕತ್ತಿ" ನೀಡಿ ಸನ್ಮಾನಿಸಿ ಗೌರವಿಸಿದ್ದರು. ಬ್ರಿಟಿಷರ ವಿರುದ್ಧದ ಹೋರಾಟಗಳಲ್ಲಿ ಕೂಡ ಅವರು ಹಲವು ಬಾರಿ ಪಾಲ್ಗೊಂಡಿದ್ದರು.

ಹಾಲುಮಕ್ಕಿ ಎಂಬ ಪ್ರದೇಶದಲ್ಲಿ ಪರವೂರ ಜನರನ್ನು ಕರೆತಂದು ನೆಲಸುವಂತೆ ಮಾಡಿ "ಚಕ್ಕಮಕ್ಕಿ" ಎಂದು ನಾಮಕರಣ ಮಾಡಿ ನೂರಾರು ಮಂದಿಗೆ ಮನೆ ನಿರ್ಮಿಸಲು ಸ್ಥಳ ದಾನಗೈದರು. ಮನೆಕಟ್ಟಲು ಹಣಕಾಸಿನ ಸಹಕಾರ ನೀಡಿದ್ದರು. ಆ ಬಳಿಕ ಚಕ್ಕಮಕ್ಕಿ ಬೃಹತ್ ಆಗಿ ಬೆಳೆಯಿತು. ಚಕ್ಕಮಕ್ಕಿಯಲ್ಲಿ ಹುಲ್ಲಿನ ಮನೆಯಲ್ಲಿ ಕನ್ನಡ ಮಾಧ್ಯಮದ ಶಾಲೆ ಮತ್ತು ಮದರಸ ಶಿಕ್ಷಣವನ್ನು ತನ್ನ ಸ್ವಂತ ಖರ್ಚಿನಲ್ಲಿ ಮಾಡಿ ಜನರಿಗೆ ಅಕ್ಷರ ಜ್ಞಾನ ಕೊಡಲು ವ್ಯವಸ್ಥೆ ಮಾಡಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅವಿದ್ಯಾವಂತ ಹಿರಿಯ ನಾಗರಿಕರಿಗೆ ರಾತ್ರಿ ವೇಳೆ ಅಕ್ಷರ ಕಲಿಸುವ ಸೇವೆಯನ್ನೂ ಮಾಡಿದ್ದರು.

ಘಟ್ಟಪ್ರದೇಶದಲ್ಲಿ ಮೊಟ್ಟಮೊದಲು ಶಾಫಿ ಮಸೀದಿ ನಿರ್ಮಾಣಕ್ಕೆ ಎರಡು ಎಕರೆ ಸ್ಥಳ ದಾನ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭ ಮಹಾತ್ಮಾ ಗಾಂಧೀಜಿಯ "ಹರಿಜನ ಕಾಲನಿ"ಯ ಕನಸನ್ನು ನನಸು ಮಾಡುವ ಸಲುವಾಗಿ ಐದು ಹರಿಜನ ಕಾಲನಿಗಳಲ್ಲಿ ಸರ್ಕಾರದ 750 ರೂ.ಗಳ ಅನುದಾನದೊಂದಿಗೆ ತನ್ನ ಕೈಯಿಂದಲೂ ಹಣ ವ್ಯಯಿಸಿ ಸ್ವಚ್ಛವಾದ ಮನೆ ನಿರ್ಮಿಸಿಕೊಟ್ಟಿದ್ದರು. ಎಲ್ಲಾ ಕಾಲನಿಗಳಿಗೆ ಕುಡಿಯುವ ನೀರಿಗಾಗಿ ಬಾವಿಗಳನ್ನು ನಿರ್ಮಿಸಿ ಶುದ್ಧ ಕುಡಿಯುವ ನೀರು ಸಿಗುವಂತೆ ಮಾಡಿಕೊಟ್ಟಿದ್ದರು. ಇಂದೂ ಕೂಡ ಈ ಕೆಲಸಗಳು ಶಾಶ್ವತವಾಗಿ ಉಳಿದುಕೊಂಡಿದೆ.

ಅವರ ಸಾಮಾಜಿಕ ಕಾಳಜಿ ಹೇಗಿತ್ತೆಂದರೆ ಕೆಲಸ ಅರಸಿಕೊಂಡು ಘಟ್ಟ ಪ್ರದೇಶಗಳಿಗೆ ಬರುವ ಬ್ಯಾರಿ ಯುವಕರಿಗೆ ನೆರವಾಗಲು "ಫಂಡ್"ವೊಂದನ್ನು ರಚಿಸಿ ಪ್ರತಿಯೊಬ್ಬರಿಂದ ದಿನಕ್ಕೆ ಎರಡು ರೂ.ಗಳಂತೆ ಸಂಗ್ರಹಿಸಿ ಹಣವನ್ನು ಯಾವ ಪ್ರತಿಫಲಕ್ಕೆ ಕಾಯದೆ ಬಡ್ಡಿರಹಿತವಾಗಿ ನೀಡುತ್ತಿದ್ದರು. ಇದರಿಂದ ಸಾಕಷ್ಟು ಮಂದಿ ತಮ್ಮ ವ್ಯಾಪಾರ

ವಹಿವಾಟುಗಳನ್ನು ಮುಂದುವರಿಸಲು ಸಾಧ್ಯವಾಯಿತು.

ಬರಡು ಭೂಮಿಯನ್ನು ಖರೀದಿಸಿ ಸ್ಥಳೀಯರೊಂದಿಗೆ ಸೇರಿ ಕೃಷಿಯಲ್ಲಿ ತೊಡಗಿಸಿಕೊಂಡು ಭೂಮಿ ಫಲವತ್ತಾಗುವಂತೆ ಮಾಡಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅವರ ಪ್ರಯತ್ನದ ಫಲವಾಗಿ 1955ರಲ್ಲಿ ಮೂಡಿಗೆರೆ ತಾಲೂಕು ಸಹಕಾರಿ ಅಭಿವೃದ್ಧಿ ಬ್ಯಾಂಕ್ ಸ್ಥಾಪನೆಗೊಂಡಿತ್ತು. ಚಿಕ್ಕಮಗಳೂರು–ಕೊಡಗು–ಹಾಸನ ಜಿಲ್ಲೆಗಳನ್ನು ಕೇಂದ್ರೀಕರಿಸಿ ಕಾಫಿ ಬೆಳೆಗಾರರ ಸಂಘ ನಿರ್ಮಿಸಿಕೊಂಡು ಆ ಮೂಲಕ ಪ್ಲಾಂಟರ್ಸ್ ಕೋ ಆಪರೇಟಿವ್ ಬ್ಯಾಂಕ್‌ನ್ನು ಹಾಸನದಲ್ಲಿ ಆರಂಭಿಸಿದ ಕೀರ್ತಿಯೂ ಅವರಿಗೆ ಸಂದಿವೆ. ಚಕ್ಕಮಕ್ಕಿಯಲ್ಲಿ ಆರಂಭಿಸಿದ ಶಾಲೆಯನ್ನು ಸರ್ಕಾರಿ ಶಾಲೆಯಾಗಿ ಪರಿವರ್ತಿಸಿ ಸ್ಥಳೀಯ ಮಕ್ಕಳಿಗೆ ಶಿಕ್ಷಣ ಮತ್ತು ವಿದೇಶಗಳಿಂದ ಸಿಗುತ್ತಿದ್ದ ಹಾಲು ಮತ್ತು ಪೌಷ್ಠಿಕ ಆಹಾರವನ್ನು ಆ ಕಾಲದಲ್ಲಿ ಇಂತಹ ಕುಗ್ರಾಮಕ್ಕೆ ತಲುಪಲು ಪ್ರಮುಖ ಪಾತ್ರವನ್ನು ವಹಿಸಿದ್ದರು. ಬಣಕಲ್ ಹೋಬಳಿ ಪೊಲೀಸ್ ಠಾಣೆಗೆ ಸ್ವಂತ ಸ್ಥಳವನ್ನು ಉಚಿತವಾಗಿ ಸರ್ಕಾರಕ್ಕೆ ನೀಡಿದ್ದರು. ಬಡಕಾರ್ಮಿಕರ ಸಮುದಾಯದ ನೂರಾರು ಹೆಣ್ಣುಮಕ್ಕಳ ಮದುವೆಯನ್ನು ಯಾವುದೇ ರೀತಿಯ ವರದಕ್ಷಿಣೆ ಮತ್ತು ಆಡಂಭರಗಳಿಲ್ಲದೆ ತನ್ನ ಅಂಗಡಿಯಲ್ಲಿದ್ದ ಅವಲಕ್ಕಿ, ಬಾಳೆಹಣ್ಣು, ಶರಬತ್ತು ನೀಡುವುದರ ಮೂಲಕ ಮದುವೆ ಮಾಡಿಸಿ ಯಾರಿಗೂ ಸಮಸ್ಯೆಯಾಗದಂತೆ ನೋಡಿಕೊಂಡ ಹೆಗ್ಗಳಿಕೆಯೂ ಅವರದ್ದಾಗಿದೆ.

ಸ್ಥಳೀಯರಿಗೆ ಅವರು ನಂಬಿಗಸ್ಥ ವ್ಯಕ್ತಿಯಾಗಿದ್ದರು ಎಂಬುದಕ್ಕೆ ಎಲ್ಲಾ ಧರ್ಮಿಯರು ತಮ್ಮ ಮಧ್ಯೆ ಇರುವ ವ್ಯವಹಾರಿಕ ಅಥವಾ ಕೌಟುಂಬಿಕ ಕಲಹಗಳ ವಿಚಾರ, ಅಭಿಪ್ರಾಯ ವ್ಯತ್ಯಾಸಗಳಿದ್ದಾಗ ಅವರಲ್ಲಿ ತೋಡಿಕೊಳ್ಳುತ್ತಿದ್ದರು. ಹಾಗೇ ಅವರೇ ಖುದ್ದು ನಿಂತು ಬಗೆಹರಿಸಿಕೊಡುತ್ತಿದ್ದುದು ಸಾಕ್ಷಿಯಾಗಿದೆ. ಇತರ ಧರ್ಮದ ಹಬ್ಬಹರಿದಿನಗಳಲ್ಲಿ ಪಾಲ್ಗೊಂಡು ಸೌಹಾರ್ದತೆಗೆ ಮೆರುಗು ನೀಡುತ್ತಿದ್ದರು. ಗಣೇಶ ಹಬ್ಬಕ್ಕೆ ಅವರೇ ತನ್ನ ಅಂಗಡಿಯಿಂದ ಪ್ರಸಾದಕ್ಕೆ ಅವಲಕ್ಕಿ ತಯಾರಿಸಿ ಕೊಡುತ್ತಿದ್ದರು. ವರ್ಷದಲ್ಲಿ ಒಂದು ದಿನ ಮಸೀದಿಯ ಆವರಣದಲ್ಲಿ ಎಲ್ಲಾ ಧರ್ಮದವರನ್ನು ಸಾಮೂಹಿಕವಾಗಿ ವಿಶೇಷ ಊಟಕ್ಕೆ ಆಹ್ವಾನಿಸಿ ಗೌರವಿಸುತ್ತಿದ್ದರು.

1947ರಲ್ಲಿ ಮಂಗಳೂರಿನ ಬಂದರ್‌ನ ಪ್ರತಿಷ್ಠಿತ ಕುಟುಂಬದ ಜೈನಾಬು ಎಂಬವರನ್ನು ಅವರು ವಿವಾಹವಾಗಿದ್ದರು. ಜೈನಾಬು ಎರಡು ಗಂಡು ಮಕ್ಕಳನ್ನು ಹೆತ್ತರೂ ಕೂಡ ಘಟ್ಟದ ಚಳಿ ವಾತಾವರಣದ ಕಾರಣ ಮಂಗಳೂರಿನ ತವರು ಮನೆಯಲ್ಲಿಯೇ ಉಳಿದುಕೊಂಡರು. 1955ರಲ್ಲಿ ಜೈನಾಬು ನಿಧನರಾದರು. ಆ ಬಳಿಕ ಅಬ್ದುಲ್ ರೆಹಮಾನ್‌ರ ಪ್ರಾಮಾಣಿಕತೆಯನ್ನು ಕಂಡು ಮೆಚ್ಚಿದ್ದ ಮೂಡಿಗೆರೆಯ ಪ್ರತಿಷ್ಠಿತ ವ್ಯಕ್ತಿ ಮೊಹಿದ್ದಿನ್ ಕುಟ್ಟಿ ಹಾಜಿ ತನ್ನ 2ನೇ ಪುತ್ರಿ ಆಯಿಶಾರನ್ನು 1952ರಲ್ಲಿ ಮದುವೆ ಮಾಡಿಕೊಟ್ಟಿದ್ದರು. ಈ ದಂಪತಿಗೆ 9 ಹೆಣ್ಣು ಮತ್ತು 7 ಗಂಡು ಮಕ್ಕಳು. ಹೀಗೆ ಫರಂಗಿಪೇಟೆಯಲ್ಲಿ ಹುಟ್ಟಿ ಚಕ್ಕಮಕ್ಕಿಯನ್ನು ಕರ್ಮಭೂಮಿಯನ್ನಾಗಿಸಿದ್ದ ಅಬ್ದುಲ್ ರೆಹಮಾನ್ ತನ್ನ 75ನೇ ವಯಸ್ಸಿನಲ್ಲಿ ಅಂದರೆ 1987ರಲ್ಲಿ ನಿಧನರಾದರು.



## ಸಾಮಾಜಿಕ ಮುಖಂಡ ಹಾಜಿ ಎಂ.ಎ.ಖಾದರ್ ಬೇಲೂರು

ಮಂಗಳೂರಿನ ಕುದ್ರೋಳಿಯಲ್ಲಿ ಅಹ್ಮದ್-ಬೀಫಾತುಮ್ಮ ದಂಪತಿಯ ಪುತ್ರನಾಗಿ 1915ರಲ್ಲಿ ಅತ್ಯಂತ ಬಡಕುಟುಂಬದಲ್ಲಿ ಜನಿಸಿದ ಎಂ.ಎ.ಖಾದರ್ ಹಾಸನ ಜಿಲ್ಲೆಯ ಬೇಲೂರಿನಲ್ಲಿ ಶ್ರೀಮಂತ ವ್ಯಕ್ತಿಯಾಗಿ ಕಾರುಬಾರು ನಡೆಸಿರುವುದರ ಹಿಂದೆ ಅವರ ಅವಿರತ ಶ್ರಮ ಅಡಗಿದೆ.

ಖಾದರ್ ಹುಟ್ಟುವಾಗ ತುತ್ತು ಅನ್ನಕ್ಕೂ ಪರದಾಡುವಂತಹ ಸ್ಥಿತಿ ಇತ್ತು. ಪಕ್ಕದ ಶಾಲೆಗೆ ತೆರಳಿದರೂ ಹೆಚ್ಚೇನೂ ಕಲಿಯಲು ಸಾಧ್ಯವಾಗಲಿಲ್ಲ. ಕುದ್ರೋಳಿಯ ಝೈನಬಾ ಅವರನ್ನು ಮದುವೆಯಾದರೂ ಬದುಕು ದುಸ್ತರವಾಗಿತ್ತು. ಉಪಾಯವಿಲ್ಲದೆ ಕೆಲಸ ಅರಸಿಕೊಂಡು ಘಟ್ಟಪ್ರದೇಶ ಹತ್ತಿದರು. ಅಂತೆಯೇ ಹಾಸನ ಜಿಲ್ಲೆಯ ಬೇಲೂರಿಗೆ ತೆರಳಿ ಸಣ್ಣಪುಟ್ಟ ಕೆಲಸ ಮಾಡಿಕೊಂಡರು. ಬಳಿಕ ಇದ್ದಿಲು ಮಾರಾಟದ ಪುಟ್ಟ ಅಂಗಡಿ ತೆರೆದರು. ಜೊತೆಗೆ ಗೂಡಂಗಡಿಯಂತಹ ಸಣ್ಣ ಕ್ಯಾಂಟೀನ್ ಹಾಕಿದರು. ಕೈಯಲ್ಲಿ ಸ್ವಲ್ಪ ಕಾಸು ಕೂಡುತ್ತಲೇ ಪತ್ನಿಯನ್ನು ಬೇಲೂರಿಗೆ ಕರೆಸಿಕೊಂಡರು. ಕ್ಯಾಂಟೀನ್‌ನೊಂದಿಗೆ ಕಟ್ಟಿಗೆ ವ್ಯಾಪಾರ ಆರಂಭಿಸಿದರು. ಅಲ್ಲದೆ ಮರದ (ಟಿಂಬರ್) ವ್ಯಾಪಾರದಲ್ಲೂ ಕೈಯಾಡಿಸಿದರು. ವ್ಯಾಪಾರ ವೃದ್ಧಿಸುತ್ತಲೇ ಬೇಲೂರಿನಲ್ಲೇ ಸುಮಾರು 7 ಎಕರೆಯಷ್ಟು ಜಮೀನು ಖರೀದಿಸಿ ಕಾಂಪ್ಲೆಕ್ಸ್‌ವೊಂದನ್ನು ತೆರೆದರು. ಹೀಗೆ ಒಂದಲ್ಲೊಂದು ವ್ಯವಹಾರ-ವ್ಯಾಪಾರದಲ್ಲಿ ಪಳಗಿದ ಎಂ.ಎ. ಖಾದರ್ ಬಾಲ್ಯದಲ್ಲಿ ತಾನು ತುತ್ತು ಅನ್ನಕ್ಕಾಗಿ ಪರದಾಡಿದ ದಿನವನ್ನು ಮರೆಯಲಿಲ್ಲ. ತನ್ನ ಸಂಪತ್ತಿನ ಒಂದು ಭಾಗವನ್ನು ಬಡವರಿಗೆ ಮೀಸಲಿಟ್ಟರು. ಅನೇಕ ಹೆಣ್ಮಕ್ಕಳಿಗೆ ತನ್ನ ಮನೆಯಲ್ಲೇ ಮದುವೆ ಮಾಡಿಸಿದರು. ಮದುವೆಯ ಸಂಪೂರ್ಣ ವೆಚ್ಚವನ್ನು ಸ್ವತಃ ಭರಿಸಿದರು. ನೂರಾರು ಮಂದಿಗೆ ಮನೆ ಕಟ್ಟಿಸಿಕೊಟ್ಟರು. ಹೀಗೆ ಮನೆ ಬಾಗಿಲಿಗೆ ಸಹಾಯ ಯಾಚಿಸಿಕೊಂಡು ಬಂದ ಯಾರನ್ನೂ ಕೂಡ ಬರಿಗೈಯಲ್ಲಿ ಕಳುಹಿಸಿಕೊಡದೆ ಅವರ ಕಷ್ಟಗಳನ್ನು ಅರಿತು ತನ್ನಿಂದಾದ ಸಹಾಯ ಮಾಡತೊಡಗಿದರು.

ಧಾರ್ಮಿಕ ವಿದ್ಯಾಭ್ಯಾಸ ಇಲ್ಲದ ಆ ಕಾಲದಲ್ಲಿ ಮಂಗಳೂರು-ಕೇರಳದ ಮೌಲವಿಗಳನ್ನು ಕರೆಸಿಕೊಂಡು ತನ್ನ ಮನೆಯಲ್ಲೇ ಆಸುಪಾಸಿನ ಮಕ್ಕಳಿಗೆ ಮದ್ರಸ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಕಲ್ಪಿಸಿದರು. ಸ್ಥಳೀಯ ಹಿಂದೂ ಮತ್ತು ಹನಫಿ ಮುಸ್ಲಿಂ ಬಾಂಧವರ ಜೊತೆ ಉತ್ತಮ ಸಂಬಂಧ ಹೊಂದಿದ್ದ ಅವರು ಸುನ್ನಿ ಮಸೀದಿ ಮಾತ್ರವಲ್ಲದೆ ಹನಫಿ ಮಸೀದಿಯ ನಿರ್ಮಾಣದಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಹನಫಿ ಜುಮಾ ಮಸೀದಿಯ ಉಪಾಧ್ಯಕ್ಷರೂ ಆಗಿದ್ದರು. ಬೇಲೂರು ಬದ್ರಿಯಾ ಜುಮಾ ಮಸೀದಿ ಮತ್ತು ಮದ್ರಸದ ಸ್ಥಾಪಕಾಧ್ಯಕ್ಷರೂ ಆಗಿದ್ದರು. ಮಸೀದಿ-ಮದ್ರಸದ ಸ್ಥಾಪನೆಗಾಗಿ ತನ್ನ ಸ್ವಂತ ಜಮೀನನ್ನು ವಕ್ಫ್ ಮಾಡಿದ್ದರು. ಅವರ ಅಭಿಲಾಷೆಯಂತೆ ಅವರ ನಿಧನದ ಬಳಿಕ ಮಕ್ಕಳೆಲ್ಲರು ಸೇರಿ "ಮದೀನಾ ಜುಮಾ ಮಸ್ಜಿದ್" ನಿರ್ಮಾಣಕ್ಕೆ ಜಮೀನು ದಾನ ಮಾಡಿದ್ದರು.

ಪವಿತ್ರ ಹಜ್ ಯಾತ್ರೆಗೈದ ಬಳಿಕ ಹಾಜಿ ಎಂ.ಎ.ಖಾದರ್ ಎಂದು ಆಸುಪಾಸಿನವರಿಂದ ಕರೆಸಿಕೊಂಡರೂ ಕೂಡ ಬ್ಯಾರಿಗಳು ಅವರನ್ನು ಬಾವಾಜಾರ್ ಎಂದರೆ, ತುಳುವರು ಬಾವಾ ಬ್ಯಾರಿ ಎಂದು ಕರೆಯುತ್ತಿದ್ದರು.

ರಮಝಾನ್ ತಿಂಗಳಲ್ಲಂತೂ ಅವರ ಮನೆಯ ಬಾಗಿಲು ಸದಾ ತೆರೆದಿಡುತ್ತಿತ್ತು. ಪ್ರತೀ ದಿನವೂ ಉಪವಾಸಿಗರಿಗೆ ಇಫ್ತಾರ್ ಕೂಟ ಆಯೋಜಿಸುತ್ತಿದ್ದರು. ರಮಝಾನ್ 27ರಂದು ಊರಿನ ಎಲ್ಲರಿಗೂ ಅಕ್ಕಿ, ಬಟ್ಟೆಬರೆ ಹಂಚುತ್ತಿದ್ದರು. ರಾಜಿ ಪಂಚಾಯತಿಕೆಗೆ ಹೆಸರುವಾಸಿಯಾಗಿದ್ದ ಅವರ ಮನೆಯು ಅಕ್ಷರಸಃ ನ್ಯಾಯಾಲಯದಂತಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥಗೊಳ್ಳದ ಪ್ರಕರಣಗಳು ಕೂಡ ತಂದೆಯ ನೇತೃತ್ವದಲ್ಲಿ ನಡೆದ ರಾಜಿ ಪಂಚಾಯತಿಗೆಯಲ್ಲಿ ಇತ್ಯರ್ಥವಾದದ್ದಿದೆ ಎಂದು ಅವರ ಮಕ್ಕಳು ಹೇಳಿಕೊಳ್ಳುತ್ತಾರೆ. ಕೌಟುಂಬಿಕ ಕಲಹ ಏರ್ಪಟ್ಟಾಗಲೂ ಅವರ ನೇತೃತ್ವದಲ್ಲಿ ರಾಜಿಪಂಚಾಯತಿಗೆ ನಡೆಯುತ್ತಿತ್ತು. ಆದರೆ ಎಂದೂ ಕೂಡ ಅವರು ಗಂಡ-ಹೆಂಡತಿಯನ್ನು ದೂರ ಮಾಡಿದ ಉದಾಹರಣೆ ಇಲ್ಲ. ಪರಸ್ಪರ ಮುನಿಸುಕೊಂಡು ಬೇರ್ಪಡಲು ಮನಸ್ಸು ಮಾಡಿದ್ದ ಗಂಡ-ಹೆಂಡತಿಯನ್ನು ಒಗ್ಗೂಡಿಸಿದ ಕೀರ್ತಿಯೂ ತಂದೆಗೆ ಸಲ್ಲುತ್ತದೆ ಎಂದು ಅವರ ಕಿರಿಯ ಪುತ್ರ ಅಬ್ದುಲ್ ರಹೀಂ ಅಭಿಪ್ರಾಯಪಡುತ್ತಾರೆ.

ಧಾರ್ಮಿಕ, ಸಾಮಾಜಿಕ ರಂಗದಲ್ಲಿ ಸಕ್ರಿಯರಾಗಿದ್ದ ಅವರು ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದರು. ರಾಜ್ಯ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಪದಾಧಿಕಾರಿಯಾಗಿದ್ದ ಅವರು ಬೇಲೂರು ಪುರಸಭೆಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಕಾಂಗ್ರೆಸ್‌ನ ಘಟಾನುಘಟಿ ರಾಜಕಾರಣಿಗಳು ಹಾಸನಕ್ಕೆ ಆಗಮಿಸಿದರೆ ಬೇಲೂರಿನ ಅವರ ಮನೆಯಲ್ಲೇ ಊಟೋಪಚಾರದ ವ್ಯವಸ್ಥೆಯಾಗುತ್ತಿತ್ತು.

ಹೀಗೆ ಮಂಗಳೂರಿನಲ್ಲಿ ಹುಟ್ಟಿ ಬೆಳೆದು ಹಾಸನ ಜಿಲ್ಲೆಯ ಬೇಲೂರಿನಲ್ಲಿ ನಿರೀಕ್ಷೆಗೂ ಮೀರಿ ಸಾಧನೆಗೈದ ಅವರು 5 ಮಂದಿ ಪುತ್ರರು ಮತ್ತು 3 ಮಂದಿ ಪುತ್ರಿಯರನ್ನು 1987ರ ಆಗಸ್ಟ್ 19ರಂದು ಬಿಟ್ಟಗಲಿದರು.

## ಆದರ್ಶ ಶಿಕ್ಷಕ
## ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಕೋಡಿ ಕುಂದಾಪುರ



ಉಡುಪಿ ಜಿಲ್ಲೆಯ ಕೋಡಿ ಕುಂದಾಪುರದ ಕೋಟೆ ಸೂಫಿ ಸಾಹೇಬ್–ಫಾಚುಮ್ಮ ದಂಪತಿಯ 7 ಗಂಡು ಹಾಗೂ 5 ಹೆಣ್ಣು ಮಕ್ಕಳ ಪೈಕಿ ದ್ವಿತೀಯ ಪುತ್ರನಾಗಿ ಮೈಸೂರಿನ ಹುಲಿ ಟಿಪ್ಪು ಸುಲ್ತಾನರ ಕೋಟೆ ಎಂದೇ ಕುಂದಾಪುರದ ಕೋಡಿಯಲ್ಲಿ ಪ್ರಸಿದ್ಧಿ ಪಡೆದಿರುವ "ಕೋಟೆ" ಮನೆಯಲ್ಲಿ 1915ರ ಜೂನ್ 15ರಂದು ಹುಟ್ಟಿ ಬೆಳೆದ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ತನ್ನ 65 ವರ್ಷದ ಜೀವಿತಾವಧಿಯಲ್ಲಿ ಮಾಡಿದ ಸಾಧನೆ ನಿರೀಕ್ಷೆಗೂ ಮೀರಿರುವಂತದ್ದು.

ಕೋಡಿಯಲ್ಲಿ ಶೈಕ್ಷಣಿಕ ಕ್ರಾಂತಿ ಪ್ರಾರಂಭವಾದದ್ದು ಹಾಜಿ ಕೆ.ಮೊಹಿದ್ದೀನ್ ಬ್ಯಾರಿಯವರ ಅಜ್ಜ ಅಬ್ದುಲ್ಲ ಅವರ ಕಾಲದಲ್ಲಿ. 1906ರಲ್ಲಿ ಟಿಪ್ಪು ಸುಲ್ತಾನರ ಕೆರೆಯ ಪಕ್ಕದಲ್ಲಿ ಒಂದು ಸಣ್ಣ ಗುಡಿಸಲಿನಲ್ಲಿ ಕೋಡಿಯ ಪ್ರಪ್ರಥಮ ಶಾಲೆಯನ್ನು ಕಟ್ಟಿಸಿದ ರೂವಾರಿ ಅವರಾಗಿದ್ದರು. ಅದೇ ಮುಂದಕ್ಕೆ ಕೋಡಿಯ ಶಿಕ್ಷಣ ಕ್ರಾಂತಿಗೆ ನಾಂದಿಯಾಯಿತು. ನಂತರದ ದಿನಗಳಲ್ಲಿ ಕೋಡಿಯ ಬಹುಸಂಖ್ಯಾತ ಮುಸಲ್ಮಾನ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಸರಕಾರ 1938ರಲ್ಲಿ ಅಲ್ಲೊಂದು ಉರ್ದು ಶಾಲೆಯನ್ನು ಪ್ರಾರಂಭಿಸಿತು. ಈ ಶಾಲೆ ಮಾಪಿಳ್ಳಾ ಶಾಲೆಯೆಂದೇ ಪ್ರಸಿದ್ಧಿ ಪಡೆದಿತ್ತು. ಅದಕ್ಕಾಗಿ ಮೊಹಿದ್ದೀನ್ ಬ್ಯಾರಿಯ ತಂದೆ ಸೂಫಿ ಸಾಹೇಬ್ ಹೆಂಚಿನ ಮಾಡಿನ ಶಾಲೆಯನ್ನು ಕಟ್ಟಿಸಿದರು. 1986ರ ವೇಳೆಗೆ ಈ ಶಾಲೆಯು ತುಂಬಾ ಶಿಥಿಲಗೊಂಡಿತ್ತು ಮತ್ತು ಒಂದು ಹಂತದಲ್ಲಿ ಕೇವಲ ನಾಲ್ಕು ಮಕ್ಕಳು ಮಾತ್ರ ಕಲಿಯುತ್ತಿದ್ದರು. ಈ ಸಂದರ್ಭ ಸರಕಾರವು ಶಾಲೆಯನ್ನು ಮುಚ್ಚಲು ನೋಟೀಸ್ ರವಾನಿಸಿತು. ಇದನ್ನು ತಿಳಿದುಕೊಂಡ ಹಾಜಿ ಕೆ.ಮೊಹಿದ್ದೀನ್ ಬ್ಯಾರಿಯ ಎಲ್ಲಾ ಮಕ್ಕಳು ಜೊತೆಗೂಡಿ "ತಂದೆ ದೀರ್ಘ ಕಾಲ ಸೇವೆ ಸಲ್ಲಿಸಿದ ಈ ಶಾಲೆ ಮುಂದೆಯೂ ಊರಿನ ಎಲ್ಲಾ ಮಕ್ಕಳಿಗೆ ವಿದ್ಯೆ ನೀಡುವಂತಾಗಲಿ" ಎಂದು ಆಶಿಸಿ ಹಿರಿಯ ಸಹೋದರ ಹಾಜಿ ಮಾಸ್ಟರ್ ಮಹ್ಮೂದ್ ಅವರ ನೇತೃತ್ವದಲ್ಲಿ ಶಾಲೆಗೆ ಸುಭದ್ರವಾದ ಕಟ್ಟಡವನ್ನು ಸ್ವಂತ ಖರ್ಚಿನಲ್ಲಿ ನಿರ್ಮಿಸಿ ಶಾಲೆಯನ್ನು ಮುನ್ನೆಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ವಹಿಸಿಕೊಂಡರು.

ಕುಂದಾಪುರ ಕೋಡಿಯಂತಹ ಸುಂದರ ಪರಿಸರದಲ್ಲಿ ಪ್ರಸಿದ್ಧಿಯಾದ "ಮಾಪಿಳ್ಳಾ ಶಾಲೆ"ಯನ್ನು ಉಳಿಸಿ ಬೆಳೆಸಿ ಮತ್ತು ಅಭಿವೃದ್ಧಿಗೊಳಿಸಿದ ಕೀರ್ತಿ ಸ್ವತಃ ಶಿಕ್ಷಕರಾಗಿದ್ದ ಹಾಜಿ ಕೆ.ಮೊಹಿದ್ದೀನ್ ಬ್ಯಾರಿ ಹಾಗೂ ಅವರ ಪುತ್ರರಿಗೆ ಸಲ್ಲುತ್ತದೆ. ತಂದೆಯ ಹೆಸರಿನಲ್ಲಿ ಹೈಸ್ಕೂಲ್ ಕಟ್ಟಿಸಿದ್ದ ಮಕ್ಕಳು ತಾಯಿಯ ಹೆಸರಿನಲ್ಲಿ ಮದ್ರಸವನ್ನೂ ಕಟ್ಟಿಸಿಕೊಡುವ ಮೂಲಕ ಹೆತ್ತವರ ಹೆಸರು ಶಾಶ್ವತವಾಗಿ ಉಳಿಯುವಂತಹ ಪ್ರಯತ್ನ ಮಾಡಿದರು. ಸ್ವತಃ ಬ್ಯಾರಿ ಸಮುದಾಯದವರೇ "ಬ್ಯಾರಿ" ಎಂದು ಹೇಳಿಕೊಳ್ಳಲು, ಕರೆಸಿಕೊಳ್ಳಲು, ಗುರುತಿಸಿಕೊಳ್ಳಲು ಇಷ್ಟಪಡದ ಆ ಕಾಲದಲ್ಲಿ ತಂದೆಯ ಹೆಸರಿನ ಮುಂದಿದ್ದ "ಬ್ಯಾರಿ"ಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಸಲುವಾಗಿ ಸೈಯದ್ ಮುಹಮ್ಮದ್ ಬ್ಯಾರಿ "ಬ್ಯಾರೀಸ್" ಸಂಸ್ಥೆಯನ್ನು ಹುಟ್ಟು ಹಾಕಿದರು. ಅಷ್ಟೇ ಅಲ್ಲ ಹಾಜಿ ಕೆ. ಮೊಹಿದಿನ್ ಬ್ಯಾರಿ ಎಜುಕೇಶನಲ್ ಟ್ರಸ್ಟ್ (ರಿ) ಸ್ಥಾಪಿಸಿದರು. ಇದೀಗ ಈ ಎಲ್ಲಾ ಶಿಕ್ಷಣ ಸಂಸ್ಥೆಯನ್ನು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಸೈಯದ್ ಮುಹಮ್ಮದ್ ಬ್ಯಾರಿ ಮುನ್ನಡೆಸುತ್ತಿದ್ದಾರೆ.

ಹೀಗೆ ಹಾಜಿ ಕೆ.ಮೊಹಿದ್ದೀನ್ ಬ್ಯಾರಿ ಅವರ ಮಕ್ಕಳಿಂದ ಪುನಶ್ಚೇತನಗೊಂಡ ಶಾಲೆಯು ಈಗ "ಬ್ಯಾರೀಸ್ ಗ್ರೂಫ್ ಆಫ್ ಇನ್ ಸ್ಟಿಟ್ಯೂಷನ್"ನ ಅಧೀನದಲ್ಲಿ 20ಕ್ಕಿಂತಲೂ ಹೆಚ್ಚು ಶಾಲಾ–ಕಾಲೇಜುಗಳಲ್ಲಿ ಸುಮಾರು 5000ಕ್ಕೂ ಅಧಿಕ ಮಕ್ಕಳು ಕಲಿಯುವುದರೊಂದಿಗೆ ಸಾವಿರಾರು ಕುಟುಂಬಕ್ಕೆ ಆಸರೆಯಾಗಿದೆ.

ಹಾಜಿ ಕೆ. ಮೊಹಿದ್ದೀನ್ ಬ್ಯಾರಿ 8ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಅಧ್ಯಾಪಕ ವೃತ್ತಿಗೆ ಸೇರಿ ಸುತ್ತಮುತ್ತಲಿನ ಹಲವು ಶಾಲೆಗಳಲ್ಲಿ ದುಡಿದು ಕೊನೆಗೆ ತಮ್ಮ ತಂದೆ ಕಟ್ಟಿಸಿದ ಶಾಲೆಯ ಅಧ್ಯಾಪಕರಾಗಿ ನಿಯುಕ್ತಿಗೊಂಡರು. ಅವರೊಂದಿಗೆ ಅದೇ ಶಾಲೆಯಲ್ಲಿ ತಿಮ್ಮಪ್ಪ ಮಾಸ್ತರ್, ಮಾರ್ಕಿ ಡಿಸೋಜಾ ಅಧ್ಯಾಪಕರಾಗಿದ್ದರು. ಹೀಗೆ ಮೂವರು ಶಿಕ್ಷಕರು ಊರಲ್ಲಿ ಅಮರ್–ಅಕ್ಬರ್–ಅಂತೋನಿ ಎಂದೇ ಪ್ರಸಿದ್ಧರಾದರು.

ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಊರಿನ ಮಕ್ಕಳಿಗೆ ವಿದ್ಯಾರ್ಜನೆ ನೀಡುವುದರೊಂದಿಗೆ ಕೋಟೆ ಬದ್ರಿಯಾ ಮಸೀದಿಯ ಅಧ್ಯಕ್ಷರಾಗಿ ಹಾಗೂ ಇಮಾಮ್–ಖತೀಬರಾಗಿ ತನ್ನ ಕೊನೆಯ ಉಸಿರಿನ ತನಕ ಸೇವೆ ಸಲ್ಲಿಸಿದರು. ಶುಕ್ರವಾರ ಜುಮಾ ನಮಾಝ್ ಬಳಿಕ ಅವರು ನೀಡುತ್ತಿದ್ದ ಸಂದೇಶಗಳಿಗೆ ಎಲ್ಲರೂ ಮೂಕಪ್ರೇಕ್ಷಕರಾಗುತ್ತಿದ್ದರು. ಉಪನ್ಯಾಸ–

ಸಂದೇಶಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿದ್ದ ವಿಷಯವೂ ಅತ್ಯಂತ ಸೂಕ್ಷ್ಮದ್ದಾಗಿತ್ತು. 1970ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದ್ದರೂ ಶಾಲಾಭಿವೃದ್ಧಿಗಾಗಿ ಅಪಾರವಾಗಿ ಶ್ರಮಿಸಿದ್ದರು.

ಅಂದಿನ ತಲೆಮಾರಿನವರು ಜಾತಿಭೇದವಿಲ್ಲದೆ ಹಾಜಿ ಕೆ. ಮೊಹಿದ್ದೀನ್ ಬ್ಯಾರಿಯವರ ಹೃದಯ ವೈಶ್ಯಾಲ್ಯತೆಗೆ ಮಾರುಹೋಗಿದ್ದರು. ಅಂತಹ ಅದ್ಭುತವಾದ ವ್ಯಕ್ತಿತ್ವ ಅವರದ್ದು. ಊರಿನ ಜನರು ಅವರನ್ನು "ಕೋಟೆಬಾಪ" ಎಂದೇ ಕರೆಯುತ್ತಿದ್ದರು. ಮೊಣಕಾಲಿನವರೆಗೆ ಮಾತ್ರ ಇಳಿದ ಬಿಳಿವಸ್ತ್ರದ ಮುಂಡು (ಪಂಚೆ), ಬಿಳಿ ದೊಗಲೆ ಅಂಗಿ, ಹೆಗಲಲ್ಲೊಂದು ಶಾಲು, ಕೈಯಲ್ಲೊಂದು ಮರದ ಜಲ್ಲಿನ ಕೊಡೆ, ಬಗಲಲ್ಲೊಂದು ಚೀಲ, ತಲೆಯ ಮೇಲೊಂದು ಟೋಪಿ, ಮುಖದಲ್ಲಿ ತೆಳ್ಳಗಿನ ಗಡ್ಡ. ಹಾಗೆಯೇ ಮುಖದಲ್ಲಿ ಸದಾಮಂದಹಾಸ ಮತ್ತು ಸ್ಥಿತಪ್ರಜ್ಞರು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ತಾಳ್ಮೆಯಿಂದ ಮಾತನಾಡುತ್ತಿದ್ದರು. ಅವರ ಈ ಉಡುಗೆ ಹಾಗೂ ಮುಖದ ಮಂದಹಾಸ ಮತ್ತು ತಾಳ್ಮೆಯು ಪ್ರತಿಯೊಬ್ಬರಲ್ಲೂ ಅವರ ಬಗ್ಗೆ ಗೌರವವನ್ನು ಮೂಡಿಸುತ್ತಿತ್ತು. ಓದು ಪ್ರಿಯರಾಗಿದ್ದ ಅವರು ದಿನಪತ್ರಿಕೆಯನ್ನು ಚಾಚೂ ತಪ್ಪದೆ ಓದುವ ಪರಿಪಾಠ ಬೆಳೆಸಿಕೊಂಡಿದ್ದರು. ಕತೆ ಹೇಳುವ ಅಭ್ಯಾಸ ಮತ್ತು ವಿಷಯವನ್ನು ಸವಿಸ್ತಾರವಾಗಿ ಚರ್ಚಿಸುವ ಗುಣ ಅವರದ್ದಾಗಿತ್ತು. ಶ್ರದ್ಧೆಯಿಂದ ಧಾರ್ಮಿಕ ಆಚರಣೆ ಮಾಡುತ್ತಿದ್ದರೂ ಪರಧರ್ಮ ಸಹಿಷ್ಣುಗಳಾಗಿದ್ದರು. ಮಸೀದಿಯಲ್ಲಿ ಮಂಡಿಯೂರಿ ಪ್ರಾರ್ಥನೆಗೆ ಕುಳಿತರೆಂದರೆ ಮನಸ್ಸು ವಿಚಲಿತಗೊಳ್ಳದ ಶ್ರದ್ದಾಭಕ್ತಿ ಹೊಂದಿದ್ದರು. ಶಾಂತಿಪ್ರಿಯರಾಗಿದ್ದ ಅವರು ಸಮಯೋಚಿತ ಸಮಸ್ಯೆಯ ಪರಿಹಾರಕರು. ಅಲ್ಲದೆ ಆಪದ್ಬಾಂಧವರು ಎನ್ನುವುದಕ್ಕೆ ಹಲವು ಘಟನೆ ಸಾಕ್ಷಿಯಾಗಿದೆ.

ಒಂದೊಮ್ಮೆ ಊರಿನ ಮದುವೆ ಮನೆಯಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ವಧು–ವರರ ಕಡೆಯವರಲ್ಲಿ ಮಾತಿಗೆ ಮಾತು ಬೆಳೆದು ಕೈ–ಕೈಮಿಲಾಯಿಸುವ ಸನ್ನಿವೇಶ ಎದುರಾದಾಗ ಕೆ. ಮೊಹಿದ್ದೀನ್ ಬ್ಯಾರಿ ಇದ್ದಕ್ಕಿದ್ದಂತೆ ಅಲ್ಲಿಯೇ ಬಾಂಗ್ (ಮಸೀದಿಯಲ್ಲಿ ಪ್ರಾರ್ಥನೆ ಸಮಯದಲ್ಲಿ ಕೊಡುವ ಕರೆ) ಆರಂಭಿಸಿದರು. ಎರಡೂ ಕಡೆಯ ಜನರು ಮೌನವಾಗಿ ಪುನಃ ತಾಳ್ಮೆಯನ್ನು ತಂದುಕೊಂಡು ಮದುವೆಯ ಕಾರ್ಯವನ್ನು ಶಾಂತವಾಗಿ ನೆರವೇರಿಸಿದರು. ಇದು ಅವರ ಸಮಯ ಪ್ರಜ್ಞೆಯನ್ನು ತೋರಿಸುತ್ತದೆ.

ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಕೂಡ ಶಿಕ್ಷಣದಿಂದ ಏನು ಬೇಕಾದರೂ ಸಾಧಿಸಬಹುದು ಎಂದು ಆ ಕಾಲದಲ್ಲಿ ತೋರಿಸಿಕೊಟ್ಟವರು. ಊರವರಿಂದ ಮಾತ್ರವಲ್ಲ ಸ್ವತಃ ತನ್ನ ತಂದೆಯಿಂದಲೇ "ಮಾಸ್ಟರ್" ಎಂದು ಕರೆಯಿಸಿಕೊಳ್ಳುವಂತಹ ವ್ಯಕ್ತಿತ್ವ ಅವರದ್ದಾಗಿತ್ತು.

ಕುರ್‌ಆನ್ ಅನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದ ಅವರು ರಾಮಾಯಣ, ಮಹಾಭಾರತವನ್ನು ಕೂಡ ಅಧ್ಯಯನ ಮಾಡಿದ್ದರು. ಕೋಟಿ ಚೆನ್ನಯ್ಯ, ಕನಕದಾಸ, ಸತ್ಯಹರಿಶ್ಚಂದ್ರರ ಕಥೆಯನ್ನೂ ಮನಮುಟ್ಟುವಂತೆ ಹೇಳುತ್ತಿದ್ದರು.

ಹೋಮಿಯೋಪಥಿ ವೈದ್ಯರಾಗಿದ್ದ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಪರಿಸರ ಪ್ರೇಮಿಯೂ ಆಗಿದ್ದರು. ಬಿಡುವಿನಲ್ಲಿ ಗಿಡನೆಡುವ ಹವ್ಯಾಸ ಬೆಳೆಸಿಕೊಂಡಿದ್ದರು.

ಕೋಡಿಯಲ್ಲಿ ಮೊತ್ತ ಮೊದಲ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂದರೆ ತನ್ನ ಮನೆ ಮತ್ತು ಮಸೀದಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದರು. ಅಲ್ಲದೆ ಪ್ರಪ್ರಥಮ ಪಂಪ್‌ಸೆಟ್ಟನ್ನೂ ಅಳವಡಿಸಿದ್ದರು. ಸೌಹಾರ್ದ ಬದುಕಿಗೂ ಮೊಹಿದ್ದೀನ್ ಬ್ಯಾರಿ ಮಾದರಿಯಾಗಿದ್ದರು. ಹಿರಿಯ, ಕಿರಿಯ, ಬಡವ–ಮಧ್ಯಮ ಹಿಂದೂ–ಮುಸ್ಲಿಂ–ಕ್ರೈಸ್ತ ಎಂಬ ಭೇದಭಾವವಿಲ್ಲದೆ ಎಲ್ಲರೊಡನೆ ಬೆರೆಯುತ್ತಿದ್ದರು. ಅವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ನೂರಾರು ಮಂದಿಗೆ ಅವರು ಮಾದರಿ/ಆದರ್ಶ ವ್ಯಕ್ತಿ (ರೋಲ್ ಮಾಡೆಲ್) ಆಗಿದ್ದರು.

ಆ ಕಾಲದಲ್ಲಿ ಮಕ್ಕಳನ್ನು ಶಾಲೆಯಲ್ಲಿ ಹಿಡಿದಿಟ್ಟುಕೊಳ್ಳುವುದು ಅಷ್ಟು ಸುಲಭದ ಸಂಗತಿಯಾಗಿರಲಿಲ್ಲ. ಮುರುಕಲು ಮಾಡು, ಕಿಟಕಿಗಳಿಲ್ಲದ, ಒಂದೇ ಉದ್ದದ ಕೋಣೆಯಲ್ಲಿ ನಾಲ್ಕು ತರಗತಿಗಳನ್ನು ನಡೆಸುವುದು ಅನಿವಾರ್ಯವಾಗಿತ್ತು.

ಅಲ್ಲಿ ಎಲ್ಲಾ ಜಾತಿ, ಸಮುದಾಯದ ವಿದ್ಯಾರ್ಥಿಗಳಿದ್ದರು. ಅವರನ್ನೆಲ್ಲಾ ಜಾತಿ, ಧರ್ಮ ನೋಡದೆ ಮನೆಬಾಗಿಲವರೆಗೂ ಹೋಗಿ ಹೆತ್ತವರ–ಮಕ್ಕಳ ಮನ ಒಲಿಸಿ ಶಾಲೆಗೆ ಸೇರಿಸುವುದರಲ್ಲಿ ಮೊಹಿದ್ದೀನ್ ಬ್ಯಾರಿ ನಿಸ್ಸೀಮರಾಗಿದ್ದರು. ಕುಲಕಸಬಿನತ್ತ ಆಕರ್ಷಿತರಾಗುತ್ತಿದ್ದ ಮಕ್ಕಳು ತರಗತಿ ನಡೆಯುವಾಗಲೇ ಓಡಿ ಹೋಗುವುದುಂಟು, ಮತ್ತೆ ಅವರನ್ನು ತರಗತಿಯೊಳಗೆ ಕರೆತರುವುದು ಹರಸಾಹಸದ ಕೆಲಸವಾಗಿತ್ತು. ಶಿಕ್ಷಣದಿಂದಲೇ ಬದಲಾವಣೆ ಸಾಧ್ಯ ಎಂದು ಬಲವಾಗಿ ನಂಬಿದ್ದ ಮೊಹಿದ್ದೀನ್ ಬ್ಯಾರಿ ಎಲ್ಲಾ ಮಕ್ಕಳನ್ನು ಪ್ರೀತಿಯಿಂದಲೇ ಶಾಲೆಗೆ ಕರೆತಂದು ಪಾಠ ಮಾಡುತ್ತಿದ್ದರು.

ಮೀನು ವ್ಯಾಪಾರಿ ಮತ್ತು ದೊಡ್ಡ ಜಮೀನುದಾರ ಹಾಗೂ ಕೃಷಿಕರಾಗಿದ್ದ ಸೂಫಿ ಸಾಹೇಬ್ ತನ್ನ ಪುತ್ರ ಕೆ. ಮೊಹಿದ್ದೀನ್ ಬ್ಯಾರಿ ಅವರನ್ನು ಚಿಕ್ಕಂದಿನಿಂದಲೇ ಶಾಲಾ ವಿದ್ಯಾಭ್ಯಾಸದೊಂದಿಗೆ ವ್ಯವಹಾರ ಹಾಗೂ ಕೃಷಿಯಲ್ಲಿ ಪಳಗಿಸಿದ್ದರು. ವಿದ್ಯಾಭ್ಯಾಸವನ್ನು ಮುಗಿಸಿ ಸರಕಾರಿ ಶಿಕ್ಷಕನಾಗಿ ಸೇವೆಗೆ ಸೇರಿದ ಕೋಡಿಯ ಮುಸ್ಲಿಂ ಸಮುದಾಯದ ಪ್ರಥಮ ವಿದ್ಯಾವಂತ ಹಾಗೂ ಸರಕಾರಿ ನೌಕರ ಎಂಬ ಹೆಗ್ಗಳಿಕೆಗೂ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಪಾತ್ರರಾಗಿದ್ದರು.

ಒಬ್ಬ ಸಾಧಕನ ಹಿಂದೆ ಪತ್ನಿಯ ಪಾತ್ರ ಇದೆ ಎಂಬುದು ಪ್ರತೀತಿ. ಮೊಹಿದ್ದೀನ್ ಬ್ಯಾರಿಯ ಎಲ್ಲಾ ಚಟುವಟಿಕೆ ಹಾಗೂ ಸಾಧನೆಗಳ ಹಿಂದೆ ಅವರ ಪತ್ನಿ ಬೀಬಿ ಫಾತಿಮಾರ ಕೊಡುಗೆ ಅಪಾರ. ಮೂಡಿಗೆರೆಯ ಪ್ರಸಿದ್ಧ ಬ್ಯಾರಿ ಮನೆತನದ ಸಂಪ್ರದಾಯಸ್ಥ ಕುಟುಂಬದ, ಕಾಫಿ ಎಸ್ಟೇಟ್‌ಗಳ ಒಡೆಯನಾದ ಹಾಜಿ ಮೊಹಿದ್ದೀನ್ ಕುಟ್ಟಿ ಬ್ಯಾರಿಯ ಮಗಳಾದ ಬೀಬಿ ಫಾತಿಮಾ ಮಲೆನಾಡಿನಿಂದ ಬಂದು ನಿಸರ್ಗ ರಮಣೀಯ ಕೋಡಿಯ ಕಡಲ ಕರಾವಳಿಯ ಕೋಟೆ ಮನೆತನದ ಹಾಜಿ ಕೆ. ಮೊಹಿದ್ದೀನ್ ಬ್ಯಾರಿಯ ಪತ್ನಿಯಾಗಿ ಮನೆ ಬೆಳಗಿಸಿದರು. ಸಿರಿತನ–ಬಡತನಗಳ ನೋವು ನಲಿವನ್ನು ತಿಳಿದು ದೀನ ದಲಿತರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದರು. ಹಂಚಿ ತಿನ್ನುವ ಉದಾತ್ತ ಗುಣವನ್ನು ಹೊಂದಿದ ಅವರು ಕೊಡುಗೈ ದಾನಿಗಳಾಗಿದ್ದರು. ಮಾನವೀಯ ಮೌಲ್ಯಗಳನ್ನು ಹೊಂದಿರುವ ಬೀಬಿ ಫಾತಿಮಾರ ದಾನ ಹಾಗೂ ಹಂಚಿ ತಿನ್ನುವ ಗುಣವನ್ನು ಇಂದು ಅವರ ಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವುದು ಗಮನಾರ್ಹ. ಈ ದಂಪತಿಯ ಪುತ್ರರು ಕೋಡಿಗೆ ಬಂದ ವಿಷಯ ತಿಳಿದರೆ ಅನೇಕರು ಸಹಾಯ ಕೇಳಲು ಬರುವುದುಂಟು. ಯಾರನ್ನೂ ಅವರು ಬರಿಗೈಯಲ್ಲಿ ಕಳುಹಿಸಿದ ಉದಾಹರಣೆ ಇಲ್ಲ. ಇದು ಹಿಂದಿನಿಂದ ಬೆಳೆದು ಬಂದ ಸಂಪ್ರದಾಯ. ಬೀಬಿ ಫಾತಿಮಾರ ಈ ಗುಣದಿಂದಲೇ ಊರ ಜನ ಅವರನ್ನು ಪ್ರೀತಿಯಿಂದ "ಕೋಟೆಡೆ ಉಮ್ಮ" ಅಂದರೆ ಕೋಟೆಯ ತಾಯಿ ಎಂದೇ ಕರೆಯುತ್ತಿದ್ದರು.

ಈ ಕೋಟೆಯ ತಾಯಿಗೆ ಕಥೆ ಕೇಳುವುದೆಂದರೆ ಎಲ್ಲಿಲ್ಲದ ಉತ್ಸಾಹ. ಆಗಾಗ ತನ್ನ ಶಿಕ್ಷಕ ಪತಿಯಿಂದ ಮನೆಯಲ್ಲಿ ಕಥೆ ಹೇಳಿಸಿ ಕೊಳ್ಳುತ್ತಿದ್ದರು. ಆ ಸಮಯದಲ್ಲಿ ಆಸಕ್ತ ಹಿಂದೂ ಮುಸ್ಲಿಂ ಹೆಂಗಸರನ್ನು ಮನೆಯಲ್ಲಿ ಸೇರಿಸಿಕೊಂಡು ಕಥೆ ಕೇಳಿ ಅದರ ಸಾರಾಂಶ ವಿವರಿಸುತ್ತಿದ್ದರು. ಪತಿ ಶಾಲೆಯಲ್ಲಿ ಪಾಠ ಮಾಡುತ್ತಿದ್ದರೆ ಬೀಬಿ ಫಾತಿಮಾ ಮನೆಯಲ್ಲಿ ಮಕ್ಕಳಿಗೆ ಬಿಸಿಬಿಸಿ ಉಪ್ಪಿಟ್ಟು ತಯಾರಿಸಿ ಶಾಲೆಗೆ ಕಳುಹಿಸುತ್ತಿದ್ದರು. ಎಲ್ಲರನ್ನು ಮಕ್ಕಳಂತೆ ಪ್ರೀತಿಸುವ ಗುಣ ವಿಶೇಷ ಅವರದ್ದಾಗಿತ್ತು.

ಟಿಪ್ಪುವಿನ ಕೋಟೆಯು ಕೋಡಿಯ ಇತಿಹಾಸ ಪ್ರಸಿದ್ದ ಸ್ಮಾರಕ. ಮೊಹಿದ್ದೀನ್ ಬ್ಯಾರಿಯ ಮನೆತನಕ್ಕೆ ಬಳುವಳಿಯಾಗಿ ಬಂದಿರುವುದೇ ಈ ಕೋಟೆಭಾಗ. ಇಲ್ಲೊಂದು ಪುರಾತನ ಕೆರೆ ಇದೆ. ಇದು ಟಿಪ್ಪು ಸುಲ್ತಾನರ ಕೆರೆ ಎಂದೇ ಪ್ರಸಿದ್ಧವಾಗಿದೆ. ಇದರ ದಡದಲ್ಲಿ ನಾಲ್ಕುಪಾದ ಹೈಗುಳಿ ದೈವಸ್ಥಾನ ಇದೆ. ಅಲ್ಲಿ ಊರ–ಪರವೂರ ಜನರು ಸೇರಿ ಜಾತಿ ಮತಭೇದವಿಲ್ಲದೆ ಉತ್ಸವ ನಡೆಯುವಾಗ ಭಾಗಿಯಾಗಿ ಸಂಭ್ರಮಿವುದರ ಹಿಂದೆ "ಬ್ಯಾರಿ ಕುಟುಂಬಸ್ಥ"ರ ಶ್ರಮವಿದೆ.

ಹೀಗೆ ಶಿಕ್ಷಣಕ್ಕಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ 1980ರ ನವೆಂಬರ್ 28ರಂದು ತನ್ನ ಪತ್ನಿ ಮತ್ತು 6 ಗಂಡು ಹಾಗೂ 7 ಹೆಣ್ಣುಮಕ್ಕಳ ಸಹಿತ ಅಪಾರ ಕುಟುಂಬಸ್ಥರನ್ನು ಬಿಟ್ಟಗಲಿದರು.

## ಪ್ರಖ್ಯಾತ ಬಿಲ್ಡರ್ ಐ. ಮುಹಮ್ಮದ್ ಹಾಜಿ (ಇಲಂತಿಲ) ಮೈಸೂರು



ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಇಲಂತಿಲ ಎಂಬಲ್ಲಿ ಸೈಯದ್ ಆಲಬಿ–ಐಸಮ್ಮ ದಂಪತಿಯ ಹಿರಿಯ ಮಗನಾಗಿ 1940ರರ ಮೇ 15ರಂದು ಜನಿಸಿದ ಮುಹಮ್ಮದ್ ಹಾಜಿ ಬಿಇ, ಎಂಐಇ, ಡಿಐಇ ವ್ಯಾಸಂಗ ಮಾಡಿದ್ದಾರೆ. ನೇತ್ರಾವತಿ ನದಿ ತೀರದಲ್ಲೇ ಇರುವ "ಇಲಂತಿಲ"ದಿಂದ ಒಂದುವರೆ ಕಿ.ಮೀ. ದೂರವಿರುವ ಉಪ್ಪಿನಂಗಡಿ ಪೇಟೆ ತಲುಪಲು ದೋಣಿಯೇ ಬೇಕು. ಊರಲ್ಲೊಂದು ಮಣ್ಣಿನ ರಸ್ತೆ ಬಿಟ್ಟರೆ ಸಂಪರ್ಕಕ್ಕೆ ಬೇರೇನೂ ಇಲ್ಲ. ಆ ಪುಟ್ಟ ಊರಲ್ಲಿ ಖಾಸಗಿ ಬಸ್ಸಿನಲ್ಲಿ ಸೈಯದ್ ಆಲಬಿ ಚಾಲಕರಾಗಿದ್ದರು. ತಾವು ಅನಕ್ಷರಸ್ಥರಾಗಿದ್ದರೂ ಕೂಡ ಬಡತನದ ಮಧ್ಯೆಯೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಹೆತ್ತವರು ನಿರ್ಧರಿಸಿದ್ದರು. ಹಾಗಾಗಿ ಊರಲ್ಲಿ ಶಾಲೆ ಇಲ್ಲದಿದ್ದರೂ ಕೂಡ ಉಪ್ಪಿನಂಗಡಿಗೆ ದೋಣಿ ದಾಟಿಸಿ ಮಕ್ಕಳನ್ನು ಶಾಲೆಗೆ ಕಳಿಸತೊಡಗಿದರು. ಮುಹಮ್ಮದ್ ಉತ್ತಮ ಅಂಕದೊಂದಿಗೆ ಪ್ರಾಥಮಿಕ ಶಿಕ್ಷಣ ಪೂರೈಸಿದರು. ಪುತ್ತೂರಿನಲ್ಲಿರುವ ಸೋದರ ಮಾವ ಪಿ. ಅಬ್ದುಲ್ಲಾರ ಮನೆಯಲ್ಲಿದ್ದುಕೊಂಡೇ ಎಸೆಸೆಲ್ಸಿ ಮುಗಿಸಿದರು. ಬಳಿಕ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಮಾಡಿದರು. ಹಾಗೇ ದಾವಣಗೆರೆಯ ಬಿಡಿಟಿ ಕಾಲೇಜಿಗೆ ಸೇರ್ಪಡೆಗೊಂಡರು. 1967ರಲ್ಲಿ ಬಿಇ (ಸಿವಿಲ್) ಇಂಜಿನಿಯರ್ ಮತ್ತು 1969ರಲ್ಲಿ ಎಂಐಇ ಸ್ನಾತಕ್ಕೋತ್ತರ ಪದವಿ ಪಡೆದರು. ಆ ಮೂಲಕ ಉಪ್ಪಿನಂಗಡಿ–ಪುತ್ತೂರು ಪರಿಸರದ ಪ್ರಪ್ರಥಮ ಸಿವಿಲ್ ಇಂಜಿನಿಯರ್ ಎಂಬ ಹೆಗ್ಗಳಿಕೆಗೆ ಮುಹಮ್ಮದ್ ಪಾತ್ರರಾದರು.

ಬೆಳಗಾವಿಯ ಶಂಕರ ನಾರಾಯಣ ಕಂಪೆನಿಯಲ್ಲಿ ಉದ್ಯೋಗ ದೊರೆತರೂ ಒಂದೇ ವರ್ಷದಲ್ಲಿ ರಾಜೀನಾಮೆ ಸಲ್ಲಿಸಿ ಹೊರ ಬಂದರಲ್ಲದೆ "ಐ.ಮುಹಮ್ಮದ್ ಕನ್ಸಟ್ರಕ್ಷನ್ ಕಂಪೆನಿ" ಎಂಬ ಗುತ್ತಿಗೆ ಸಂಸ್ಥೆಯನ್ನು ಸ್ಥಾಪಿಸಿದರು. ಆರಂಭದಲ್ಲಿ ಚಿಕ್ಕಪುಟ್ಟ ಗುತ್ತಿಗೆ ಕೆಲಸ ವಹಿಸಿಕೊಂಡ ಮುಹಮ್ಮದ್ ಬಳಿಕ ರಾಜ್ಯ ಸರಕಾರದಿಂದ ಹಿಡಕಲ್ ಅಣೆಕಟ್ಟು ನಿರ್ಮಾಣದ ಗುತ್ತಿಗೆ ಪಡೆದರು. ಆ ಬಳಿಕ ಗೋಕಾಕ್ ಪವರ್ ಹೌಸ್, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ಮೈಸೂರಿನ ವರುಣಾ ಮೇಲ್ಸಾಗುವೆ ನಿರ್ಮಾಣ, ಹಾಸನ ಜಿಲ್ಲೆಯ ಹೊಳೆನರಸಿಪುರದಲ್ಲಿ ಸೇತುವೆ ನಿರ್ಮಾಣ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಯಲ್ಲಿ 800ಕ್ಕೂ ಅಧಿಕ ಮನೆಗಳ ನಿರ್ಮಾಣ ಸಹಿತ ಹಲವು ಬೃಹತ್ ಗುತ್ತಿಗೆ ವಹಿಸಿಕೊಂಡರು. ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ, ಲೋಕಸಭೆಯ ಮಾಜಿ ಸ್ಪೀಕರ್ ಎಂ. ಸಯೀದ್ ಸಹಿತ ಪ್ರಮುಖ ರಾಜಕಾರಣಿಗಳ ಸಖ್ಯವನ್ನೂ ಹೊಂದಿದ್ದ ಅವರು ಮೈಸೂರಿನಲ್ಲಿ ನೆಲೆಸಿದ ಬಳಿಕ ತನ್ನ ವೃತ್ತಿಯೊಂದಿಗೆ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡು ಕೊಡುಗೈ ದಾನಿಯಾಗಿ ಪ್ರಸಿದ್ಧಿ ಪಡೆದರು. ಮನೆಬಾಗಿಲಿಗೆ ಬಂದ ಯಾರನ್ನೂ ಕೂಡ ಅವರು ಬರಿಗೈಯಲ್ಲಿ ಕಳುಹಿಸಿದ್ದಿಲ್ಲ ಎಂದು ಅವರ ಆಪ್ತರು ನೆನಪಿಸುತ್ತಾರೆ.

ಮೈಸೂರಿನಲ್ಲಿರುವ ಬ್ಯಾರಿ ಸಮುದಾಯದ ಎಲ್ಲರನ್ನು ಒಗ್ಗೂಡಿಸಿ "ಬ್ಯಾರಿ ಸಂಘ" ಸ್ಥಾಪಿಸಿ ಅದರ ಸ್ಥಾಪಕಾಧ್ಯಕ್ಷರಾಗಿ ಆಯ್ಕೆಗೊಂಡರು.

ಮೈಸೂರಿನ ಅಕ್ಬರ್ ರಸ್ತೆಯಲ್ಲಿರುವ ಕೇರಳದ ಮಸೀದಿಯ ಕಟ್ಟಡದ ವಿನ್ಯಾಸಕಾರರಾಗಿದ್ದ ಅವರು ಮೈಸೂರಿನ ಟಿಪ್ಪು ಮಸೀದಿಗೂ ವಿನ್ಯಾಸ ಮಾಡಿದ್ದರು.

1981ರಲ್ಲಿ "ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಇಂಡಿಯಾ" ಸಂಸ್ಥೆಯು ಅವರ ಸಾಧನೆ ಗುರುತಿಸಿ ಸನ್ಮಾನಿಸಿದೆ. ಅಖಿಲ ಭಾರತ ಬಿಲ್ಡರ್ಸ್ ಅಸೋಸಿಯೇಶನ್ ಸದಸ್ಯರಾಗಿದ್ದ ಅವರು ಮೈಸೂರಿನ ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು.

ಉಪ್ಪಿನಂಗಡಿ ಸಮೀಪದ ಇಲಂತಿಲದಲ್ಲಿ ಹುಟ್ಟಿ ಬೆಳೆದು ಮೈಸೂರಿನಲ್ಲಿ ನೆಲೆಸಿ ಮೈಸೂರಿನ ಜನತೆಯ ಪ್ರೀತಿಗೆ ಪಾತ್ರರಾಗಿದ್ದ ಅವರು ಪತ್ನಿ ಆಮಿನಾ ಬೇಗಂ ಮತ್ತು ಮೂವರು ಪುತ್ರರು ಹಾಗೂ ಒಬ್ಬ ಪುತ್ರಿಯನ್ನು 1995ರ ಫೆಬ್ರವರಿ 17ರಂದು ಬಿಟ್ಟಗಲಿದರು.

# ಉಳ್ಳಾಲದ ಶಿಲ್ಪಿ ಹಾಜಿ ಯು.ಕೆ. ಇಬ್ರಾಹೀಂ



ದಕ್ಷಿಣ ಭಾರತದ ಅಜ್ಮೀರ್ ಎಂದೇ ಪ್ರಖ್ಯಾತಿ ಪಡೆದಿರುವ ಉಳ್ಳಾಲದ ಸೈಯದ್ ಮದನಿ ದರ್ಗಾ ಮತ್ತು ಕೇಂದ್ರ ಜುಮ್ಮಾ ಮಸೀದಿ ಹಾಗೂ ಅದರ ಅಧೀನದಲ್ಲಿರುವ ಹಲವಾರು ಸಂಸ್ಥೆಗಳನ್ನು ಅಭಿವೃದ್ಧಿಯ ಪಥದಲ್ಲಿ ಸಾಗಿಸಿದ ಉಳ್ಳಾಲದ ಹಾಜಿ ಯು.ಕೆ. ಇಬ್ರಾಹೀಂ ಅವರನ್ನು ತಿಳಿಯದವರು ವಿರಳ ಎಂದರೆ ತಪ್ಪಾಗಲಾರದು. ಸುದೀರ್ಘ 35 ವರ್ಷಗಳ ಕಾಲ ಉಳ್ಳಾಲದ ಸೈಯದ್ ಮದನಿ ದರ್ಗಾದ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ್ದರು.

1929ರಲ್ಲಿ ಶೇಕಾಕ ಮತ್ತು ಪುತ್ತುಮ್ಮ (ನಫೀಸಾ) ದಂಪತಿಯ ಪುತ್ರನಾಗಿ ತೀರಾ ಬಡ ಕುಟುಂಬದಲ್ಲಿ ಉಳ್ಳಾಲದ ಕೋಟೆಪುರದಲ್ಲಿ ಯು.ಕೆ. ಇಬ್ರಾಹೀಂ ಜನಿಸಿದರು. ಗೋಣಿಚೀಲ ವ್ಯಾಪಾರದ ಮೂಲಕ ವೃತ್ತಿ ಜೀವನವನ್ನು ಆರಂಭಿಸಿದ ಅವರು ಬಡ ಮಕ್ಕಳ ಶಿಕ್ಷಣದ ಉನ್ನತಿಗಾಗಿ ಶ್ರಮಿಸಿದರು. ಉಳ್ಳಾಲದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಇತರ ಪ್ರದೇಶದ ವಿದ್ಯಾವಂತರೆದುರು ತನ್ನೂರಿನ ಮಕ್ಕಳಲ್ಲಿ ಅವಿದ್ಯಾವಂತರು ಎಂಬ ಕೊರಗು ಬರಬಾರದು ಎಂಬ ದೂರದೃಷ್ಟಿ ಅವರದ್ದಾಗಿತ್ತು. ವಿಶಾಲ ಮನಸ್ಸಿನ ವ್ಯಕ್ತಿತ್ವದ ಒಡೆಯರಾಗಿದ್ದ ಅವರ ಮಾತಿನಲ್ಲಿ ತಂತ್ರಗಾರಿಕೆ, ನಡವಳಿಕೆಯಲ್ಲಿ ಗಾಂಭೀರ್ಯತೆ ಇತ್ತು. ಅವರು ಎಲ್ಲಾ ಜಾತಿ, ಧರ್ಮಗಳ ಜನತೆಯೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಅವರ ಸ್ನೇಹ ತುಂಬಿದ ಸ್ವಭಾವದಿಂದಲೇ ಎಲ್ಲರೂ ಅವರನ್ನು ಇಷ್ಟಪಡುತ್ತಿದ್ದರು ಮತ್ತು ಗೌರವಿಸುತ್ತಿದ್ದರು. ಸಾಮುದಾಯಿಕ ಮತ್ತು ಸಾಮಾಜಿಕ ಸೇವೆಯ ಮೂಲಕ ಜನಮನ್ನಣೆ ಪಡೆದಿದ್ದ ಅವರು ಆರಂಭದಲ್ಲಿ ಉಳ್ಳಾಲ ಗ್ರಾಮ ಪಂಚಾಯತ್‌ನ ಸದಸ್ಯರಾಗಿದ್ದರು. ಬಳಿಕ ಉಳ್ಳಾಲ ಸೈಯದ್ ಮದನಿ ಜಮಾಅತಿನ ಸಮಿತಿ ಸದಸ್ಯರಾದರು. 1973ರಲ್ಲಿ ಸೈಯದ್ ಮದನಿ ಉಳ್ಳಾಲ ದರ್ಗಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಐದು ವರ್ಷಗಳಿಗೊಮ್ಮೆ ಅಧ್ಯಕ್ಷಗಾದಿಗೆ ನಡೆಯುವ ಚುನಾವಣೆಯಲ್ಲಿ ಸತತ ಏಳು ಬಾರಿ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಂದರೆ ತನ್ನ ಮರಣದವರೆಗೆ ಸತತ 35 ವರ್ಷಗಳ ಕಾಲ ಅಧಿಕಾರ ನಡೆಸಿದ್ದರು.

1982ರಿಂದ ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್, 1986ರಿಂದ ಸೈಯದ್ ಮದನಿ ಅರೆಬಿಕ್ ಎಜುಕೇಶನಲ್ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷರಾಗಿದ್ದರು. ಸೈಯದ್ ಮದನಿ ವಿವಿಧೋದ್ದೇಶ ಸಹಕಾರ ಸೊಸೈಟಿಯ ಅಧ್ಯಕ್ಷರಾಗಿದ್ದರು. ಉಳ್ಳಾಲದಲ್ಲಿ ಕೋಮು ಸೌಹಾರ್ದವನ್ನು ಎತ್ತಿ ಹಿಡಿಯಲು 1973ರಲ್ಲಿ ಸ್ಥಾಪನೆಗೊಂಡ ಉಳ್ಳಾಲ ಶಾಂತಿ ಸಮಿತಿಯ ಅಧ್ಯಕ್ಷರಾಗಿಯೂ, 1994ರಿಂದ ಕರ್ನಾಟಕ ರಾಜ್ಯ ಹಜ್ ಸಮಿತಿಯ ಸದಸ್ಯರಾಗಿಯೂ, ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಸದಸ್ಯರಾಗಿಯೂ ಕರ್ತವ್ಯ ನಿಭಾಯಿಸಿದ್ದರು.

ಸೈಯದ್ ಮದನಿ ಅರೆಬಿಕ್ ಎಜುಕೇಶನಲ್ ಟ್ರಸ್ಟ್‌ನ ಅಧೀನದಲ್ಲಿ 25ಕ್ಕಿಂತಲೂ ಹೆಚ್ಚು ಮಸೀದಿಗಳು, 30ಕ್ಕಿಂತಲೂ ಹೆಚ್ಚು ಮದ್ರಸಗಳು ಹಾಗು ಸೈಯದ್ ಮದನಿ ಅರೆಬಿಕ್ ಶರೀಅತ್ ಕಾಲೇಜು ಮತ್ತು ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್‌ನ ಅಧೀನದಲ್ಲಿ ವಿಮೆನ್ಸ್ ಕಾಲೇಜು, 1 ಡಿಗ್ರಿ ಕಾಲೇಜು, 1 ಐಟಿಐ ಸಹಿತ ಕನ್ನಡ, ಉರ್ದು ಇಂಗ್ಲಿಷ್ ಮಾಧ್ಯಮಗಳಲ್ಲಿ ಪ್ರೈಮರಿ ಹಾಗು ಹೈಸ್ಕೂಲ್ ಶಾಲೆಗಳನ್ನೊಳಗೊಂಡು ಹಲವು ಸಂಸ್ಥೆಗಳು ಯು.ಕೆ. ಇಬ್ರಾಹೀಂ ಹಾಜಿಯವರ ನೇತೃತ್ವದಲ್ಲಿ ಅಂದಿನ ಉಳ್ಳಾಲ ಖಾಝಿಯೂ, ಸೈಯದ್ ಮದನಿ ಅರೆಬಿಕ್ ಶರೀಅತ್ ಕಾಲೇಜಿನ ಪ್ರಾಂಶುಪಾಲರೂ ಆಗಿದ್ದ ತಾಜುಲ್ ಉಲಮಾ ಸೈಯದ್ ಅಬ್ದುರ್ರಹ್ಮಾನ್ ಅಲ್‌ಬುಖಾರಿ ಉಳ್ಳಾಲ ತಂಙಳ್ ಅವರ ಆಶೀರ್ವಾದದಲ್ಲಿ ನಡೆದು ಬರುತ್ತಿತ್ತು.

ಜನತೆಯ ಆರೋಗ್ಯದ ಹಿತದೃಷ್ಟಿಯಿಂದ ಉಳ್ಳಾಲದಲ್ಲಿ ಸೈಯದ್ ಮದನಿ ಸಂಸ್ಥೆಯ ವತಿಯಿಂದ ಆಸ್ಪತ್ರೆಯನ್ನು ಕಟ್ಟಿಸಿದರು.

ಅಧರ್ಮ, ಅರಾಜಕತೆ, ಅನೀತಿ, ಅಜ್ಞಾನದ ಇರುಳನ್ನು ತೊಲಗಿಸಿ ನ್ಯಾಯ-ನೀತಿ, ಸುಜ್ಞಾನದ ಪ್ರಭೆಯನ್ನು ಹರಡಿ ಇಸ್ಲಾಮಿನ ಸುಂದರ ಆಶಯ ಆದರ್ಶಗಳನ್ನು ಪಸರಿಸಿ, ಸರ್ವ ಧರ್ಮೀಯರ ಮಧ್ಯೆ ಶಾಂತಿ ಸೌಹಾರ್ದವನ್ನು ನೆಲೆ ನಿಲ್ಲಿಸಿ ಉಳ್ಳಾಲವನ್ನು ಬೆಳಗಿಸಿದ ಹಿರಿಯ ಸಾಮಾಜಿಕ, ಶೈಕ್ಷಣಿಕ ಕ್ರಾಂತಿಯ ಹರಿಕಾರರೂ, ಶಾಂತಿ ಸೌಹಾರ್ದತೆಯ ಪ್ರತಿಪಾದಕರಾಗಿ ಜನಮಾನಸದಲ್ಲಿ ಅಮರರಾದರು.

ಹಾಜಿ ಯು.ಕೆ. ಇಬ್ರಾಹಿಂ ಹಾಜಿಯ ಸಾಮಾಜಿಕ ಸೇವೆಯನ್ನು ಪರಿಗಣಿಸಿ 1996ರ ಗಣರಾಜ್ಯೋತ್ಸವ ದಿನದಂದು ಸನ್ಮಾನಿಸಿ, ಪುರಸ್ಕರಿಸಲಾಗಿತ್ತು. ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್ ವತಿಯಿಂದ 1997ರಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗಿತ್ತು. 1999ರಲ್ಲಿ ಕೋಟೆಕಾರ್ ಕೊಲ್ಯದ ರಾಮಾನಂದ ಆಶ್ರಮದ ಟ್ರಸ್ಟ್ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾನವೀಯತೆಗಾಗಿ ಮಾಡಿದ ಅಪಾರ ಸೇವೆಗಳನ್ನು ಗುರುತಿಸಿ "ಧರ್ಮ ಸೇವಾ ರತ್ನ" ಎಂಬ ಬಿರುದನ್ನು ನೀಡಿತ್ತು. ಹೀಗೆ ಅವರ ಸಾಮಾಜಿಕ, ಶೈಕ್ಷಣಿಕ, ಮಾನವೀಯ ಸೇವೆಗಳನ್ನು ಗುರುತಿಸಿ ಹಲವು ಸಂಘ ಸಂಸ್ಥೆಗಳಿಂದ ಅಪಾರ ಪ್ರಶಸ್ತಿ, ಬಿರುದುಗಳು ಪ್ರಾಪ್ತವಾಗಿತ್ತು.

ಇಚಿತಹ ನಿಷ್ಕಳಂಕ, ಮೃದು ಮಾತಿನ ಹಾಜಿ ಯು.ಕೆ. ಇಬ್ರಾಹೀಂ ಅವರದ್ದು ಪತ್ನಿ ಹಲಿಮಮ್ಮ ಮತ್ತು ಐವರು ಪುತ್ರರು ಹಾಗೂ ಐವರು ಪುತ್ರಿಯರನ್ನು ಒಳಗೊಂಡ ಸಂತೃಪ್ತ ಕುಟುಂಬ. 2007ರ ಅಕ್ಟೋಬರ್ 7ರಂದು ಉಳ್ಳಾಲ ಕೋಟೆಪುರದ ತನ್ನ ನಿವಾಸದಲ್ಲಿ ಅವರು ನಿಧನರಾದರು.

# ತುಂಬೆಯ ಬೆಳಕು ಬಿ.ಅಹ್ಮದ್ ಹಾಜಿ ಮುಹಿಯುದ್ದೀನ್



ಮಂಗಳೂರಿನ ಬಂದರ್‌ನಲ್ಲಿ ಅಲ್‌ಹಾಜ್ ಮುಹಿಯುದ್ದೀನ್ (ಮ್ಯೊದಿನ್) ಚೆಯ್ಯಬ್ಬ ಹಾಗೂ ಮರಿಯಮ್ಮ ದಂಪತಿಯ ಪುತ್ರನಾಗಿ 1933ರ ಜೂನ್ 18ರಂದು ಜನಿಸಿದ ಬಿ.ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಮಂಗಳೂರಿನ ಬದ್ರಿಯಾ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಗಣಪತಿ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣ ಹಾಗೂ ಸರಕಾರಿ ಕಾಲೇಜಿನಲ್ಲಿ ವಾಣಿಜ್ಯ ಪದವಿಯನ್ನು ಪಡೆದರು.

ಮಂಗಳೂರಿನ ಖ್ಯಾತ ಉದ್ಯಮಿ ಯೆನಪೊಯ ಮೊಯ್ದಿನ್ ಕುಂಞಿ ಅವರ ಹಿರಿಯ ಮಗಳು ಬೀಫಾತಿಮ್ಮ ಅವರನ್ನು ವಿವಾಹವಾದ ಅಹ್ಮದ್ ಹಾಜಿ ಮುಹಿಯುದ್ದೀನ್ ತನ್ನ ಮಾವ ಕಲಿಸಿಕೊಟ್ಟ ವ್ಯವಹಾರದ ಗರಡಿಯಲ್ಲಿ ಪಳಗಿ 1964ರಲ್ಲಿ ಮಂಗಳೂರಿನಿಂದ ಸುಮಾರು 20 ಕಿ.ಮೀ. ದೂರದ ತುಂಬೆಯಲ್ಲಿ ಟಿಂಬರ್ ಉದ್ಯಮವನ್ನು ಸ್ಥಾಪಿಸಿದರು. ಅತ್ಯಂತ ಶ್ರಮವಹಿಸಿ ಟಿಂಬರ್ ಉದ್ಯಮವನ್ನು ಅಭಿವೃದ್ಧಿಪಡಿಸಿ ವ್ಯವಹಾರದ ಒಂದೊಂದೇ ಮೆಟ್ಟಿಲು ಏರಿದರು. 1970ರಲ್ಲಿ ಮರದ ಮಿಲ್ಲನ್ನು ವಿಸ್ತರಿಸಿದರು. 1975ರಲ್ಲಿ ಫಾತಿಮಾ ಟಿಂಬರ್ಸ್, 1978ರಲ್ಲಿ ಹಾಜಿ ಟಿಂಬರ್ಸ್ ಕಾಂಪ್ಲೆಕ್ಸ್, 1984ರಲ್ಲಿ ಹಾಜಿ ಟಿಂಬರ್ಸ್ ಇಂಡಸ್ಟ್ರೀಸ್, 1986ರಲ್ಲಿ ಬಿ.ಎ. ಶಿಪ್ಪಿಂಗ್ ಸಾರಿಗೆ ಉದ್ಯಮ ಸ್ಥಾಪಿಸಿದರು.

ಅದರೊಂದಿಗೆ ಶೈಕ್ಷಣಿಕ ರಂಗಕ್ಕೂ ದಾಪುಗಾಲಿಟ್ಟರು. 1988ರಲ್ಲಿ ತುಂಬೆಯಲ್ಲಿ ಮುಹಿಯುದ್ದೀನ್ ಎಜುಕೇಶನಲ್ ಟ್ರಸ್ಟ್ ಸ್ಥಾಪಿಸಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. 12 ವಿದ್ಯಾರ್ಥಿಗಳು ಹಾಗೂ ಇಬ್ಬರು ಅಧ್ಯಾಪಕರಿಂದ ಪ್ರಾರಂಭಗೊಂಡ ಈ ಸಂಸ್ಥೆಯು ಬಳಿಕ ತುಂಬೆ ಪದವಿ ಪೂರ್ವ ಕಾಲೇಜು, ತುಂಬೆ ಆಂಗ್ಲ ಮಾಧ್ಯಮ ಪ್ರೌಢಶಾಲೆ, ತುಂಬೆ ಸೆಂಟ್ರಲ್ ಸ್ಕೂಲ್ ಆಗಿ ಮುನ್ನಡೆಯಿತು. ಪ್ರಸ್ತುತ ಈ ಸಂಸ್ಥೆಯಲ್ಲಿ 1300ಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

2004ರಲ್ಲಿ ತುಂಬೆಯಲ್ಲಿ ಬಿ.ಎ.ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಸ್ಥಾಪಿಸಿದರು. ಇದು ಬ್ಯಾರಿ ಮುಸ್ಲಿಮರೊಬ್ಬರು ಸ್ಥಾಪಿಸಿದ ಪ್ರಪ್ರಥಮ ವೃತ್ತಿ ತರಬೇತಿ ಸಂಸ್ಥೆಯಾಗಿದೆ. 2009ರಲ್ಲಿ ತುಂಬೆಯಲ್ಲಿ ಆರಂಭಿಸಿದ್ದ ಬಿ.ಎ.ಆಸ್ಪತ್ರೆಯನ್ನು 2013ರಿಂದ ಮಂಗಳೂರಿನ ಕಂಕನಾಡಿಯ ಫಾದರ್ ಮುಲ್ಲರ್ ಆಸ್ಪತ್ರೆಯ ಆಡಳಿತ ಮಂಡಳಿಯು ಮುನ್ನಡೆಸುತ್ತಿದೆ.

ಯಶಸ್ವಿ ಉದ್ಯಮಿಯಾಗಿ, ಶಿಕ್ಷಣ ಪ್ರೇಮಿಯಾಗಿ, ತಾನು ಗಳಿಸಿದ ಸಂಪತ್ತಿನ ಒಂದು ಅಂಶವನ್ನು ಸಮಾಜದ ಉನ್ನತಿಗಾಗಿ ಧಾರೆಯೆರೆದ ಅಹ್ಮದ್ ಹಾಜಿ ಜಿಲ್ಲೆಯ ಹಲವಾರು ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳ ಸಂಸ್ಥಾಪಕರಾಗಿ, ಅಧ್ಯಕ್ಷರಾಗಿ, ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿದ್ದರು. ಅಂದರೆ ಮಂಗಳೂರಿನ ಬಂದರ್ ಕಂದಕ್‌ನ ಬದ್ರಿಯಾ ಶಿಕ್ಷಣ ಸಂಸ್ಥೆ, ಕ್ರೆಸೆಂಟ್ ಶಿಕ್ಷಣ ಸಂಸ್ಥೆ, ನವಭಾರತ್ ರಾತ್ರಿ ಪ್ರೌಢಶಾಲೆ, ಕಸಬಾ ಬೆಂಗರೆಯ ಶಾಲಾಭಿವೃದ್ಧಿ ಸಮಿತಿ, ಮಂಗಳೂರು–ಬಂಟ್ವಾಳ–ಪುತ್ತೂರು–ಬೆಳ್ತಂಗಡಿ ತಾಲೂಕು ಸೀರತ್ ಕಮಿಟಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸೆಂಟ್ರಲ್ ಮುಸ್ಲಿಂ ಕಮಿಟಿ, ಇಸ್ಲಾಮಿಕ್ ಟ್ರಸ್ಟ್ ಮಂಗಳೂರು, ತುಂಬೆ ಮುಹಿಯುದ್ದೀನ್ ಜುಮಾ ಮಸ್ಜಿದ್, ತುಂಬೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಯೆನಪೊಯ ಮೆಡಿಕಲ್ ಕಾಲೇಜು ಮತ್ತು ಯೆನಪೊಯ ಡೆಂಟಲ್ ಕಾಲೇಜಿನ ಟ್ರಸ್ಟಿಯಾಗಿ, ಬೆಂಗಳೂರಿನ ಅಲ್ ಅಮೀನ್ ಎಜುಕೇಶನ್ ಸೊಸೈಟಿ, ಕನ್ನಡ ಜಾಗೃತ ಸಮಿತಿ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹಾಗೂ ಮಂಗಳೂರು ವಿವಿಯ ಸಿಂಡಿಕೇಟ್ ಸದಸ್ಯರಾಗಿ, ಮಣಿಪಾಲ್ ಇಂಡಸ್ಟ್ರೀಸ್‌ನ ನಿರ್ದೇಶಕರಾಗಿ, ಗಲ್ಫ್ ಮೆಡಿಕಲ್ ಯುನಿವರ್ಸಿಟಿಯ ಪೋಷಕರಾಗಿ ಸೇವೆ ಸಲ್ಲಿಸಿದ್ದರು.

*** ವಿದೇಶದಲ್ಲೂ ಛಾಪು**

ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲದೆ ಕರ್ನಾಟಕದಲ್ಲಿ ಮನೆ ಮಾತಾಗಿದ್ದರೆ ಅವರ ಪುತ್ರ ತುಂಬೆ ಮುಹಿಯ್ಯುದ್ದೀನ್ 1998ರಲ್ಲಿ ಯುಎಇ ದೇಶದ ಅಜ್‌ಮಾನ್‌ನಲ್ಲಿ ಗಲ್ಫ್ ಮೆಡಿಕಲ್ ಕಾಲೇಜನ್ನು ಸ್ಥಾಪಿಸುವ ಮೂಲಕ ವಿಶ್ವಾದ್ಯಂತ ಗಮನ ಸೆಳೆದರು. ಇದೀಗ ಈ ಕಾಲೇಜು ಗಲ್ಫ್ ಮೆಡಿಕಲ್ ಯುನಿವರ್ಸಿಟಿಯಾಗಿ ಗುರುತಿಸಲ್ಪಟ್ಟಿದೆ. ಬಿಎ ಸಮೂಹ ಸಂಸ್ಥೆಯ ಕಿರೀಟಕ್ಕೆ ಇದು ಗರಿಮೂಡಿಸಿದಂತಿದೆ. ಅಜ್‌ಮಾನ್‌ನಲ್ಲಿ ವೈದ್ಯಕೀಯ ಕಾಲೇಜು, ನರ್ಸಿಂಗ್ ಕಾಲೇಜು, ಫಿಸಿಯೋಥೆರಪಿ ಕಾಲೇಜು ಮತ್ತು ಹಲವು ರಿಟೇಲ್ ಮತ್ತು ಹೋಲ್‌ಸೇಲ್ ಮೆಡಿಕಲ್‌ಗಳನ್ನು ಸ್ಥಾಪಿಸಿದ್ದಾರೆ.

***ಪ್ರಶಸ್ತಿಗಳ ಗರಿ**

ಅಜ್‌ಮಾನ್‌ನ ಗಲ್ಫ್ ಮೆಡಿಕಲ್ ಯುನಿವರ್ಸಿಟಿಯು ಅಹ್ಮದ್ ಹಾಜಿ ಮುಹಿಯ್ಯುದ್ದೀನ್‌ಗೆ ಡಾಕ್ಟರೇಟ್ ಪದವಿಯನ್ನೂ ನೀಡಿ ಗೌರವಿಸಿತ್ತು. ಅಬುಧಾಬಿಯ ಬ್ಯಾರೀಸ್ ವೆಲ್ಫೇರ್ ಫೋರಂ ವತಿಯಿಂದ 2019ರಲ್ಲಿ ಜೀವಮಾನದ ಸಮುದಾಯ ಸೇವೆಗಾಗಿ ಸನ್ಮಾನಿಸಿ ಗೌರವಿಸಿತ್ತು. ತುಂಬೆ ಗ್ರಾಮಸ್ಥರ ಪರವಾಗಿ 'ತುಂಬೆಯ ಸುಲ್ತಾನ' ಬಿರುದು ಪ್ರದಾನ ಮಾಡಲಾಗಿತ್ತು. ಬೆಂಗಳೂರಿನ ಸಂಸ್ಥೆಯೊಂದರ 'ತೌಳವ' ಪ್ರಶಸ್ತಿಗೂ ಪಾತ್ರರಾಗಿದ್ದರು.

*** ತುಂಬೆ ಗ್ರಾಮೀಣ ಮಹಿಳಾ ವಿಕಾಸ ಸಂಸ್ಥೆ**

1999ರಲ್ಲಿ ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಅವರ ಪತ್ನಿ ಬೀಫಾತಿಮ್ಮಾ ಗ್ರಾಮೀಣ ಮಹಿಳಾ ವಿಕಾಸ ಸಂಸ್ಥೆಯನ್ನು ಪ್ರಾರಂಭಿಸಿದರು. ಇಲ್ಲಿ ಮಹಿಳೆಯರಿಗೆ ರೆಡಿಮೇಡ್ ಗಾರ್ಮೆಂಟ್ಸ್, ಫಿನಾಯಿಲ್ ಮುಂತಾದ ಸಾಮಗ್ರಿಗಳನ್ನು ಉತ್ಪಾದಿಸಲಾಗುತ್ತಿದೆ. ಮಹಿಳೆಯರ ಸ್ವ ಉದ್ಯೋಗಕ್ಕೆ ಸಹಾಯಹಸ್ತ ನೀಡುತ್ತಿದೆ.

*** 'ತುಂಬೆ'ಯ 'ಬೆಳಕು'**


ಅಹ್ಮದ್ ಹಾಜಿ ಅಥವಾ ತುಂಬೆ ಹಾಜಾರ್ ಎಂದೇ ಚಿರಪರಿಚಿತರಾಗಿದ್ದ ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಬಿ.ಎ.ಗ್ರೂಪ್‌ನ್ನು ದೇಶ ವಿದೇಶದಲ್ಲಿ ಕಟ್ಟಿ ಬೆಳೆಸುವಲ್ಲಿ ಅಪಾರವಾಗಿ ಶ್ರಮಿಸಿದ್ದರು. ಉದ್ಯಮದ ಜೊತೆಯೆ ಶಿಕ್ಷಣ ಮತ್ತು ಸಮಾಜ ಸೇವೆಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಜೊತೆಗೆ ಸಾಂಸ್ಕೃತಿಕ, ಧಾರ್ಮಿಕ, ವೈದ್ಯಕೀಯ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಆ ಮೂಲಕ ಸಮುದಾಯದ ಸಬಲೀಕರಣಕ್ಕೂ ಬಹುದೊಡ್ಡ ಕೊಡುಗೆ ನೀಡಿದರು. ಸುಮಾರು ಐದಾರು ವರ್ಷದಿಂದ ಅನಾರೋಗ್ಯದಿಂದ ಬಳಲುತ್ತಿದ್ದರೂ ಕೂಡ ಗಾಲಿಕುರ್ಚಿ ಬಳಸಿ ಸಮಾಜ ಸೇವೆಯನ್ನು ಮುಂದುವರಿಸಿದ್ದರು.

*** ಸಂತೃಪ್ತ ಕುಟುಂಬ**

ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಅವರ ಪುತ್ರರಾದ ತುಂಬೆ ಮುಹಿಯ್ಯುದ್ದೀನ್, ಅಬ್ದುಲ್ ಸಲಾಂ, ಬಿಎಂ ಅಶ್ರಫ್ ಮತ್ತು ಪುತ್ರಿ ಮರಿಯಂ ಹಾಗೂ ಅಳಿಯ ಕೆಇ ಫೈಝುಲ್ ಕೂಡ ಯಶಸ್ವಿ ಉದ್ಯಮಿಯಾಗಿದ್ದಾರೆ. ಬಿಎ ಗ್ರೂಪ್‌ನ ವ್ಯವಹಾರವು ಕಂಪ್ಯೂಟರ್ ಸಾಫ್ಟ್‌ವೇರ್‌ಗೂ ವಿಸ್ತರಿಸಿದೆ. ಇದನ್ನು ಅಹ್ಮದ್ ಹಾಜಿ ಮುಹಿಯ್ಯುದ್ದೀನ್ ಅವರ ಪುತ್ರರು ಮುನ್ನಡೆಸುತ್ತಿದ್ದಾರೆ. ತಂದೆಯ ಬಗ್ಗೆ ಈ ಮಕ್ಕಳು ಪ್ರಕಟಿಸಿದ 'ಅಬ್ಬ' ಪುಸ್ತಕವು 2019ರಲ್ಲಿ ಗಣ್ಯರ ಸಮ್ಮುಖ ಬಿಡುಗಡೆಗೊಂಡಿತ್ತು.

ಹಿರಿಯ ಯಶಸ್ವಿ ಉದ್ಯಮಿ, ಸಮಾಜ ಸೇವಕ, ಸಾಮಾಜಿಕ, ಧಾರ್ಮಿಕ ಧುರೀಣ, ಶೈಕ್ಷಣಿಕ ಕ್ಷೇತ್ರದ ಅದ್ವಿತೀಯ ಸಾಧಕ, ಪ್ರತಿಷ್ಠಿತ ಬಿ.ಎ. ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾಗಿದ್ದ ಬಿ. ಅಹ್ಮದ್ ಹಾಜಿ ಮುಹಿಯುದ್ದೀನ್ 2020ರ ಆಗಸ್ಟ್ 16ರಂದು ಅಲ್ಪಕಾಲದ ಅಸೌಖ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

## ಜನಪ್ರಿಯ ನಾಯಕ ಹಾಜಿ ಮುಹಮ್ಮದ್ ಕಮಾಲ್ ಮಂಗಳೂರು



ಮಂಗಳೂರಿನ "ಪದಿನಾರಗ" ಮನೆತನದಲ್ಲಿ ಒಂದಾದ "ಚೆಟ್ಟಿಯಾರ್ ಬಂಡಸಾಲೆ" ಕುಟುಂಬದಲ್ಲಿ ಅಬ್ದುಲ್ ರಹ್ಮಾನ್–ಐಸಮ್ಮ ದಂಪತಿಯ ಪುತ್ರನಾಗಿ 1922ರಲ್ಲಿ ಜನಿಸಿದ ಹಾಜಿ ಮುಹಮ್ಮದ್ ಕಮಾಲ್ ಬ್ಯಾರಿ ಮುಸ್ಲಿಮ್ ಸಮುದಾಯದ ಜನಪ್ರಿಯ ಜನನಾಯಕ ಎಂದೇ ಗೌರವಿಸಲ್ಪಟ್ಟವರು. ಅವರು ಇಹಲೋಕ ತ್ಯಜಿಸಿ ಮೂವತ್ತು ವರ್ಷ ಕಳೆದರೂ ಕೂಡ ಇಂದಿಗೂ ಅವರ ಹೆಸರು ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿರುವುದಕ್ಕೆ ಅವರ ನಿಸ್ವಾರ್ಥ ಸೇವೆ ಕಾರಣವಾಗಿದೆ.

ಪ್ರತಿಷ್ಠಿತ ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ ಕೂಡ ಅವರು ಎಂದಿಗೂ ಆಡಂಬರದ ಜೀವನ ನಡೆಸಿದವರಲ್ಲ. ಸದಾ ಬಡ ಜನರ ಏಳಿಗೆಗಾಗಿ ಬದುಕು ಸವೆಸಿದರು. ಅವರು ಬರೀ ಸಮಾಜ ಸೇವಕರಲ್ಲ, ನಿಸ್ವಾರ್ಥ ಸಮಾಜ ಸೇವಕ. ಬರೀ ರಾಜಕಾರಣಿ ಅಲ್ಲ, ಸಜ್ಜನ ರಾಜಕಾರಣಿ. ಅವರನ್ನು ಕೇವಲ ಸಮಾಜ ಸೇವಕ, ರಾಜಕಾರಣಿ, ಸಮುದಾಯದ ನಾಯಕ ಎಂದು ಗುರುತಿಸುವ ಬದಲು ಜನಪ್ರಿಯ ಜನನಾಯಕ ಎಂದರೆ ತಪ್ಪಾಗಲಾರದು.

ಮಂಗಳೂರಿನ ಕಾರ್‌ಸ್ಟ್ರೀಟ್‌ನ ಮಿಷನ್ ಶಾಲೆ ಮತ್ತು ಗಣಪತಿ ಪ್ರೌಢಶಾಲೆಯಲ್ಲಿ ಕಲಿತು ಹಂಪನಕಟ್ಟೆಯ ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ತೇರ್ಗಡೆಗೊಂಡು ರೆವೆನ್ಯೂ ಇನ್‌ಸ್ಪೆಕ್ಟರ್ ಆಗಿ ಉಡುಪಿಯಲ್ಲಿ ಕರ್ತವ್ಯಕ್ಕೆ ಹಾಜರಾದರು. ಆದರೆ ಬಾಲ್ಯದಿಂದಲೇ ಸಮಾಜ ಸೇವೆ ಮಾಡುವ ಮನೋಭಾವ ಹೊಂದಿದ್ದ ಅವರಿಗೆ ಸರಕಾರಿ ಸೇವೆ ಒಗ್ಗಲಿಲ್ಲ. ಸರಕಾರಿ ಸೇವೆಯಲ್ಲಿದ್ದುಕೊಂಡು ಸಮಾಜ ಸೇವೆ ಮಾಡಲು ಸಾಧ್ಯವಿದೆ. ಆದರೆ ಅನ್ಯಾಯದ ವಿರುದ್ಧ ಹೋರಾಟ ಮಾಡಲು ಅಸಾಧ್ಯ ಎಂದು ಮನಗಂಡ ಅವರು ಸರಕಾರಿ ಸೇವೆಗೆ ರಾಜೀನಾಮೆ ನೀಡಿದರು. ಈ ಮಧ್ಯೆ ಸರಕಾರಿ ಸೇವೆಯಲ್ಲಿರುವಾಗಲೇ ಬಿಎ/ ಎಲ್‌ಎಲ್‌ಬಿ ಪದವಿ ಪಡೆದರು. ಸರಕಾರಿ ಸೇವೆಗೆ ರಾಜೀನಾಮೆ ನೀಡಿದೊಡನೆ ಮಂಗಳೂರಿನ ಮಿಲಾಗ್ರಿಸ್ ಮೆನ್ಶನ್‌ನಲ್ಲಿ ತನ್ನ ಕಚೇರಿಯನ್ನು ತೆರೆದು ವಕೀಲರಾಗಿ ವೃತ್ತಿ ಆರಂಭಿಸಿದರು. ಅದು ಕೇವಲ ವಕೀಲರ ಕಚೇರಿ ಮಾತ್ರವಾಗಿರಲಿಲ್ಲ, ಅದೊಂದು ಸಮಾಜ ಸೇವಕನ ಕಚೇರಿಯಂತಿತ್ತು.

ವಕೀಲ ವೃತ್ತಿಯ ಮಧ್ಯೆ ಸಮಾಜ ಸೇವೆಯನ್ನು ಮಾಡತೊಡಗಿದರು. ಹಾಗೇ ಮಂಗಳೂರು ನಗರ ಮುಸ್ಲಿಮ್ ಲೀಗ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತೊಡಗಿದರು. ಆವಾಗಲೂ ಅವರ ಮನಸ್ಸು ಜನಪರವಾಗಿತ್ತು. ಬ್ಯಾರಿ, ತುಳು, ಕನ್ನಡ, ಉರ್ದು, ಮಲಯಾಳಂ, ಇಂಗ್ಲಿಷ್ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಅವರ ಸಾಮರ್ಥ್ಯ ಮತ್ತು ನಿಸ್ವಾರ್ಥ ಸೇವೆಯನ್ನು ಮನಗಂಡ ಕಾಂಗ್ರೆಸ್ ಮುಖಂಡ ಕೆ.ಕೆ.ಶೆಟ್ಟಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುವಂತೆ ಮಾಡಿದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡು ಪೋಲೀಸರ ಲಾಠಿ ಏಟಿಗೊಳಗಾಗಿ ಸ್ವಾತಂತ್ರ್ಯಹೋರಾಟದಲ್ಲಿ ಪಾಲ್ಗೊಂಡ ಹಿರಿಮೆಗೂ ಅವರು ಪಾತ್ರರಾದರು. 1965 ಮತ್ತು 1971ರಲ್ಲಿ ಭಾರತ–ಪಾಕಿಸ್ತಾನದ ಮಧ್ಯೆ ನಡೆದ ಯುದ್ಧದ ವೇಳೆ ನಿಧಿ ಸಂಗ್ರಹಿಸಿ ಅಪಾರ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಿದ ಕೀರ್ತಿಯೂ ಅವರಿಗೆ ಇದೆ.

ವಕಾಲತು, ಸಮಾಜಸೇವೆ, ರಾಜಕಾರಣದ ಮಧ್ಯೆ ಅಂದರೆ 1953ರಲ್ಲಿ "ನವಶಕ್ತಿ" ಎಂಬ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. "ಮುಸಲ್ಮಾನ್" ಪತ್ರಿಕೆಯ ಸಲಹಾ ಸಮಿತಿಯ ಸದಸ್ಯರಾಗಿ, ಬರಹಗಾರರಾಗಿ, ಕವಿಯಾಗಿ ಗುರುತಿಸಿದರು. ಮುಂಗೋಪಿಯಾದರೂ ವಿಶಾಲಹೃದಯಿ ಎಂಬ ಮನ್ನಣೆ ಪಡೆದರು.

ಸರಕಾರಿ ಸೇವೆಯಲ್ಲಿರುವಾಗ ನಾನ್ ಗಜೆಟೆಡ್ ಸರಕಾರಿ ಅಧಿಕಾರಿಗಳ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾಗಿ, ರಾಜ್ಯ ಸರಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ, ಅಖಿಲ ಭಾರತ ಸರಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಕರ್ನಾಟಕ ಸರಕಾರದ ಸಿಬ್ಬಂದಿ ಪರಿಷತ್ ಸದಸ್ಯರಾಗಿದ್ದ ಅವರು ಸರಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ಬಳಿಕ ಮಂಗಳೂರು ನಗರ ಮುಸ್ಲಿಮ್ ಲೀಗ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಬಳಿಕ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯನಾಗಿ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

ಈ ಮಧ್ಯೆ ಮಂಗಳೂರು ಬಂದರು ಮಂಡಳಿಯ ಸದಸ್ಯನಾಗಿ, ಕರ್ನಾಟಕ ರಾಜ್ಯ ಯೋಜನಾ ಮಂಡಳಿಯ ಸದಸ್ಯರಾಗಿ, ಮಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಮಂಗಳೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ, ನ್ಯಾಯಾಲಯದ ನೇಮಕಾತಿ ಸಮಿತಿಯ ಸದಸ್ಯರಾಗಿ, ಜಿಲ್ಲಾ ಸಮನ್ವಯ ಮಂಡಳಿಯ ಸದಸ್ಯರಾಗಿ, ಮಂಗಳೂರಿನ ವೆನ್ಲಾಕ್ ಸರಕಾರಿ ಆಸ್ಪತ್ರೆಯ ಸಂದರ್ಶಕರ ಸಮಿತಿಯ ಸದಸ್ಯರಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಲಹಾ ಸಮಿತಿಯ ಸದಸ್ಯನಾಗಿ, ದೂರವಾಣಿ ಸಲಹಾ ಸಮಿತಿಯ ಸದಸ್ಯರಾಗಿ, ಜಿಲ್ಲಾ ಏಕೀಕರಣ ಸಮಿತಿಯ ಸದಸ್ಯರಾಗಿ, ಐಟಿಐ ನೇಮಕಾತಿ ಸಮಿತಿಯ ಸದಸ್ಯರಾಗಿ, ಜನತಾ ಬಜಾರ್‌ನ ನಿರ್ದೇಶಕರಾಗಿ, ರಾಷ್ಟ್ರೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿಯ ಸದಸ್ಯರಾಗಿ, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯರಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ, ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯರಾಗಿ, ಗಣಪತಿ ಪ್ರೌಢಶಾಲೆಯ ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಯಾಗಿ, ರಾಜ್ಯ ಸರಕಾರದ ಆಡಳಿತ ತಜ್ಞರ ಸಲಹಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಮುಸ್ಲಿಂ ಎಜುಕೇಶನಲ್ ಸೊಸೈಟಿಯ ಸಲಹೆಗಾರನಾಗಿ, ಕ್ರೆಸೆಂಟ್ ವೆಲ್ಫೇರ್ ಸೆಂಟರ್‌ನ ಕಾರ್ಯದರ್ಶಿಯಾಗಿ, ಬೆಂಗಳೂರಿನ ಕೇಂದ್ರೀಯ ಮುಸ್ಲಿಂ ಸಂಸ್ಥೆಯ ಸದಸ್ಯರಾಗಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮುಸ್ಲಿಂ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾಗಿ, ಸೀರತ್ ಕಮಿಟಿಯ ಅಧ್ಯಕ್ಷರಾಗಿ, ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷರಾಗಿ, ಉಳ್ಳಾಲ ದರ್ಗಾದ ಅಧೀನದ ವಿವಿಧ ಸಂಸ್ಥೆಗಳ ಸಲಹೆಗಾರನಾಗಿ ಸೇವೆ ಸಲ್ಲಿಸಿದ ಹಿರಿಮೆಗೂ ಅವರು ಪಾತ್ರರಾಗಿದ್ದರು.

ರಾಜಿ ಪಂಚಾಯತಿಗೆಯಲ್ಲಿ ಎತ್ತಿದ ಕೈಯಾಗಿದ್ದ ಅವರು ರಾಜ್ಯದ ಕಿರಿಯ ಸರಕಾರಿ  ನೌಕರನಿಂದ ಹಿಡಿದು ಹಿರಿಯ ಅಧಿಕಾರಿಯ ಮೂಲಕ ಕ್ಷಣಾರ್ಧದಲ್ಲಿ ಜನರ ಕೆಲಸ ಮಾಡಿಸಿ ಕೊಡುವ ಸಾಮರ್ಥ್ಯ ಹೊಂದಿದ್ದರು. ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದ ವೇಳೆ ಅನೇಕ ಮಸೀದಿಯೊಳಗಿನ ಒಳಜಗಳವನ್ನು ಅತ್ಯಂತ ಜಾಣ್ಮೆಯಿಂದ ಪರಿಹರಿಸುವ ಚಾಕುಚಕ್ಯತೆ ಮೆರೆದಿದ್ದರು. ಮಂಗಳೂರಿನ ಹಂಪನಕಟ್ಟೆಯ ಬಳಿಯಿರುವ "ಮಸ್ಜಿದುನ್ನೂರ್"ನ ಸ್ಥಾಪಕರಲ್ಲಿ ಓರ್ವರಾಗಿ ಮತ್ತು ಅದರ ಟ್ರಸ್ಟಿಯಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಮಂಗಳೂರು ಬಂದರ್‌ನ ಗುಜರಿ ವ್ಯಾಪಾರಿಗಳ ಒಕ್ಕೂಟ ರಚಿಸಿ ಅವರ ಬದುಕಿಗೊಂದು ಬುನಾದಿ ಹಾಕಿದ್ದರು.

1974ರಲ್ಲಿ ಟಿಪ್ಪು ಸುಲ್ತಾನ್ ನೆನಪಿನಾಚರಣೆಯ ಪ್ರಯುಕ್ತ ಅಂದಿನ ಕೇಂದ್ರ ಸಚಿವರಾಗಿದ್ದ ಎಚ್.ಎನ್.ಬಹುಗುಣ ಅವರ ಮೂಲಕ ಟಿಪ್ಪು ಸುಲ್ತಾನ್‌ರ ಅಂಚೆ ಚೀಟಿ ಹೊರತಂದ ಕೀರ್ತಿಯೂ ಮುಹಮ್ಮದ್ ಕಮಾಲ್‌ಗೆ ಸಲ್ಲುತ್ತದೆ. ಕಾಂಗ್ರೆಸ್ ಪಕ್ಷದಲ್ಲಿರುವಾಗ ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಅವರ ಜೊತೆ ನಿಕಟ ಸಂಪರ್ಕದಲ್ಲಿದ್ದರು. ಅವರು ಬಯಸಿದ್ದರೆ ದೊಡ್ಡ ಹುದ್ದೆಗೇರುವ ಅವಕಾಶವಿತ್ತು. ಆದರೆ ಅವರೆಂದೂ ತನ್ನ ಸ್ವಂತಕ್ಕೆ ಏನನ್ನೂ ಮಾಡಿರಲಿಲ್ಲ ಎಂಬುದಕ್ಕೆ ಅವರು ಕೊನೆಯುಸಿರೆಳೆಯುವವರೆಗೆ ಬಾಡಿಗೆ ಮನೆಯಲ್ಲಿದ್ದುದು ಸಾಕ್ಷಿ.

ಪತ್ನಿ ಆಯಿಶಾ ಮತ್ತು ಮೂವರು ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಅವರು 1990ರ ಆಗಸ್ಟ 24ರಂದು ಬಿಟ್ಟಗಲಿದರು.

# ಕೃಷಿ ಜಮೀನ್ದಾರ ಬಜಪೆ ಜಕ್ರಿ ಬ್ಯಾರಿ



ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಬಜಪೆ ಗ್ರಾಮದ ಕೊಂಚಾರ್ ಎಂಬಲ್ಲಿ ತಾಬಾಕ-ಪಾಪಮ್ಮ ದಂಪತಿಯ ಪುತ್ರನಾಗಿ 1886ರ ನವೆಂಬರ್ 10ರಂದು ಜನಿಸಿದ ಬಜಪೆ ಜಕ್ರಿ ಬ್ಯಾರಿ 62 ತೋಕೂರು, ಕುಳಾಯಿ, ಬೈಕಂಪಾಡಿಯಲ್ಲಿ 1500ಕ್ಕೂ ಅಧಿಕ ಎಕರೆ ಕೃಷಿ-ಜಮೀನು ಹೊಂದುವ ಮೂಲಕ ಖ್ಯಾತ ಜಮೀನ್ದಾರ ಎನಿಸಿಕೊಂಡಿದ್ದರು.

ಬಾಲ್ಯದಲ್ಲೇ ದೊಡ್ಡ ಜಮೀನ್ದಾರರಾಗುವ ಕನಸು ಜಕ್ರಿ ಬ್ಯಾರಿಗಿತ್ತು. ಅದಕ್ಕಾಗಿ ಕಠಿಣ ಪರಿಶ್ರಮಪಟ್ಟಿದ್ದರು. ಗುತ್ತಿಗೆ ಕೆಲಸ ಮಾಡಲು ಚಿಕ್ಕಮಗಳೂರಿಗೆ ಪ್ರಯಾಣ ಬೆಳೆಸಿ ಅಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದರು. ಅಂದು ಚಿಕ್ಕಮಗಳೂರಿಗೆ ಕಾಲ್ನಡಿಗೆಯಲ್ಲೇ ಹೋಗಬೇಕಿತ್ತು. ಬಜಪೆ ಗ್ರಾಮದಿಂದ ತನ್ನ ಹತ್ತಿರದ ಸಂಬಂಧಿಕರ ಜೊತೆಗೂಡಿ ಚಿಕ್ಕಮಗಳೂರಿಗೆ ಕಾಲ್ನಡಿಗೆಯಲ್ಲೇ ದಿನಗಟ್ಟಲೆ ಕಳೆದ ಬಳಿಕ ಆ ಊರನ್ನು ಅವರು ತಲುಪಿದ್ದರು. ಪ್ರಾರಂಭದಲ್ಲಿ ಅಲ್ಲಿರುವ ಕಾಫಿ ತೋಟದಲ್ಲಿ ಕೆಲಸ ಮಾಡಿ, ಸಮಯ ಸಿಕ್ಕಾಗ ಪಿಡಬ್ಲ್ಯುಡಿ ಗುತ್ತಿಗೆ ಕೆಲಸ ಮಾಡುತ್ತಿದ್ದರು.

ಬಡ ಕುಟುಂಬದಲ್ಲಿ ಜನಿಸಿ ಹೆಚ್ಚಿನ ವಿದ್ಯೆಯನ್ನು ಕೂಡಾ ಕಲಿಯಲಾಗದೆ ಸಣ್ಣ ಪ್ರಾಯದಲ್ಲೇ ಜೀವನ ಸಾಗಿಸಲು ವ್ಯಾಪಾರವನ್ನು ತನ್ನ ವೃತ್ತಿಯಾಗಿ ಆಯ್ಕೆ ಮಾಡಿದ ಅವರು ಬೀಪಾತುಮ್ಮ ಎಂಬವರನ್ನು ವಿವಾಹವಾದರು. ಆರಂಭದಲ್ಲಿ ಅವರು ಬಜಪೆ ಗ್ರಾಮದ ಕೊಂಚಾರ್ ಗುತ್ತಯ ಕೋಡಿನಲ್ಲಿ ನೆಲೆಸಿದರು. ವ್ಯಾಪಾರದ ಜೊತೆಗೆ ಕೃಷಿಗಾಗಿ ಹೆಚ್ಚಿನ ಆದ್ಯತೆಯನ್ನು ಕೊಟ್ಟರು. "ಗುತ್ತಯ ಕೋಡಿ"ಯಲ್ಲಿರುವ ಸುತ್ತಮುತ್ತಲಿನ ಜಾಗವನ್ನು ತನ್ನದಾಗಿಸಿಕೊಂಡು ಅಲ್ಲಿ ಎಲ್ಲಾ ರೀತಿಯ ಕೃಷಿ ಉತ್ಪನ್ನವನ್ನು ಅಂದರೆ ಹಣ್ಣು ಹಂಪಲು ಮುಖ್ಯವಾಗಿ ಎಲ್ಲಾ ತರದ ಕಸಿ ಮಾವಿನ ಹಣ್ಣಿನ ಗಿಡ, ಅನಾನಾಸಿನ ಗಿಡ ಜನರ ಮನ ಸೆಳೆಯುವಂತಿತ್ತು. ಅಲ್ಲದೆ ಎಲ್ಲಾ ತರದ ತರಕಾರಿ ಕೂಡಾ ಬೆಳೆಯುತ್ತಿದ್ದರು. ಜೊತೆಗೆ ಕಾಫಿ ತೋಟವೂ ಇತ್ತು. ಮನೆ ಸುತ್ತಲೂ ತೆಂಗಿನ ಮರಗಳು ಕಂಗೊಳಿಸುತ್ತಿದ್ದವು.

ಅವಿಭಕ್ತ ಕಾಲವಾಗಿದ್ದ ಕಾರಣ ಅವರ ಮನೆಯಲ್ಲಿ ಎಲ್ಲರೂ ಒಟ್ಟಿಗೆ ವಾಸಿಸುತ್ತಿದ್ದರು. ಗುತ್ತಯಕೋಡಿಯ ಮನೆ ಅರಮನೆಯಂತ್ತಿತ್ತು. ಅಲ್ಲದೆ ಅದರ ಸುತ್ತಲು ಸುಮಾರು 100 ಎಕ್ರೆ ಜಾಗ ಕೃಷಿ ಹಾಗೂ ಪುಂಜ ಸ್ಥಳವಾಗಿತ್ತು. ಮುಖ್ಯ ರಸ್ತೆಯಿಂದ ಗೇಟಿನ ಮೂಲಕ ಒಳಗೆ ಹೋದರೆ ಹೊಸ ಪ್ರಪಂಚಕ್ಕೆ ಹೋದಂತೆ ಭಾಸವಾಗುತ್ತಿತ್ತು.

ಆ ವಠಾರದಲ್ಲಿ ನಮಾಝ್ ಮಾಡಲು ಮಸೀದಿಯ ಅವಶ್ಯಕತೆಯನ್ನು ಮನಗಂಡು ತನ್ನ ಜಾಗದಲ್ಲಿ ಬಜಪೆ ಜಕ್ರಿ ಬ್ಯಾರಿ ಬದ್ರ್ ಮಸೀದಿಯನ್ನು ಕಟ್ಟಿಸಿದರು. ಅಲ್ಲದೆ ಈ ಮಸೀದಿಗೆ 5 ಎಕ್ರೆ ಜಮೀನನ್ನು ದಾನ ಮಾಡಿದ್ದರು. ಲೌಕಿಕ ವಿದ್ಯಾಭ್ಯಾಸದ ಜೊತೆಗೆ ದೀನಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದ್ದರು.

ಬಡತನದಲ್ಲಿ ಹುಟ್ಟಿ ಬೆಳೆದರೂ ಕೂಡ ಘಟ್ಟಪ್ರದೇಶದಲ್ಲಿ ಕೃಷಿ, ವ್ಯಾಪಾರ, ಗುತ್ತಿಗೆಯ ಮೂಲಕ ಸಂಪಾದಿಸಿದ ಹಣದೊಂದಿಗೆ ಊರಿಗೆ ಮರಳಿದ ಅವರು ಬಜ್ಪೆ, 62ನೇ ತೋಕೂರು, ಕುಳಾಯಿ, ಬೈಕಂಪಾಡಿ ಗ್ರಾಮದಲ್ಲಿ 1500ಕ್ಕೂ ಅಧಿಕ ಕೃಷಿ ಭೂಮಿಯನ್ನು ಖರೀದಿಸಿ ಅದರ ಒಡೆಯರಾಗಿದ್ದರು. ದ.ಕ.ಜಿಲ್ಲೆಯಲ್ಲಿಯೇ ಅಂದಿನ ಅತಿದೊಡ್ಡ ಭೂಮಾಲಿಕ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದರು. ಬಂಟ ಸಮುದಾಯಕ್ಕೆ ಬಹುದೊಡ್ಡ ಸವಾಲಾಗಿದ್ದ ಅವರ ಜೀವನ ಶೈಲಿ ತುಂಬಾ ಸರಳವಾಗಿತ್ತು. ಅಂಗಿ-ಲುಂಗಿ-ಮುಂಡಾಸ್ ಮತ್ತು ಒಂದು ಕೋಟು ಸದಾ ಧರಿಸುತ್ತಿದ್ದರು. ಕೈಯಲ್ಲಿ ಒಂದು ರಿವಲ್ವಾರ್ ಇರುತ್ತಿತ್ತು. ಅಂದಿನ ಕಾಲದಲ್ಲಿ ಬಜಪೆ ಪರಿಸರದಲ್ಲಿ ಕಾರು ಇದ್ದದ್ದು ಬಜಪೆ ಜಕ್ರಿ ಬ್ಯಾರಿಯವರ ಹತ್ತಿರ ಮಾತ್ರ ಎಂದು ಹೇಳಲಾಗುತ್ತಿದೆ.

ಬಜಪೆ ವಿಮಾನ ನಿಲ್ದಾಣ ನಿರ್ಮಿಸುವ ಸಂದರ್ಭ ಅದಕ್ಕೆ ತನ್ನ ಜಾಗವನ್ನು ಉಚಿತವಾಗಿ ಕೊಟ್ಟಿದ್ದರು. ಬೈಕಂಪಾಡಿ, ತೋಕೂರು ಗ್ರಾಮದಲ್ಲಿ ರೈಲ್ವೆ ನಿಲ್ದಾಣ ಕಾರ್ಯ ಆರಂಭವಾದಾಗ ಉಚಿತವಾಗಿ ಜಾಗವನ್ನು ಬಿಟ್ಟು ಕೊಟ್ಟಿದ್ದರು.

ಬಜಪೆ ಜಕ್ರಿ ಬ್ಯಾರಿ ಕೇವಲ ಜಮೀನ್ದಾರ ಮಾತ್ರವಲ್ಲ ಕಾಫಿ ಪ್ಲಾಂಟರ್ ಕೂಡಾ ಆಗಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 100 ಎಕರೆಯ ಗಿರಿವತ್ತಿಕಾನ್ ಎಸ್ಟೇಟ್ ಕಾಫಿ ತೋಟ ಇತ್ತು.

ಬಜಪೆ ಜಕ್ರಿ ಬ್ಯಾರಿ ಶ್ರಮಜೀವಿ. ಸಾಗುವಳಿ ಮಾಡುವಾಗ ಸ್ವತಃ ಅವರೇ ಉಳುತ್ತಿದ್ದರು. ಒಂದು ದಿನ ಅವರು ಗದ್ದೆಯನ್ನು ಉಳುತ್ತಿರುವಾಗ ಓರ್ವ ಸರಕಾರಿ ಅಧಿಕಾರಿ ಬಂದು ಅವರಲ್ಲಿ ಬಜಪೆ ಜಕ್ರಿ ಬ್ಯಾರಿ ಎಲ್ಲಿದ್ದಾರೆ? ಅವರನ್ನು ಭೇಟಿ ಮಾಡಬೇಕಿತ್ತು ಎಂದರಂತೆ.

"ನೀವು ಓ... ಆ... ಮನೆಯಲ್ಲಿರಿ. ಅವರು ಈಗ ಬರುತ್ತಾರೆ" ಎಂದು ಹೇಳಿ ಆ ಅಧಿಕಾರಿಯನ್ನು ತನ್ನ ಮನೆಯತ್ತ ಕಳಿಸಿ ತಾನು ಗದ್ದೆಯಿಂದ ಮೇಲೇರಿ ಸ್ನಾನ ಮಾಡಿದ ಬಳಿಕ ಅಧಿಕಾರಿಯನ್ನು ಭೇಟಿ ಮಾಡಿದಾಗ ಅಧಿಕಾರಿಗೆ ಆಶ್ಚರ್ಯವಾಗಿತ್ತಂತೆ. ಆಗರ್ಭ ಶ್ರೀಮಂತ ಹಾಗೂ ಭೂಮಾಲಕರಾದರೂ ಈ ರೀತಿ ಗದ್ದೆಯಲ್ಲಿ ಉಳುವ ಕೆಲಸ ಮಾಡುತ್ತಾರಲ್ಲ ಎಂದು ಆ ಅಧಿಕಾರಿ ಕೊಂಡಾಡಿದ್ದಾರಂತೆ.

ಬಜಪೆ ಜಕ್ರಿ ಬ್ಯಾರಿ ಕೋರ್ಟಿನ ವ್ಯವಹಾರದಲ್ಲಿ ತುಂಬಾ ನಿಪುಣರಾಗಿದ್ದರು. ಅವರ ಪರವಾಗಿ ಅಂದಿನ ಪ್ರಖ್ಯಾತ ವಕೀಲರಾದ ಶಂಕರ್ ಆಳ್ವ, ಸೋಮಶೇಖರ್ ರಾವ್ ವಕಾಲತ್ತು ಮಾಡುತ್ತಿದ್ದರು. ಬ್ರಿಟಿಷ್ ಆಡಳಿತದ ಕಾಲದಲ್ಲಿ ಕೋರ್ಟಿನಲ್ಲಿ ಸಿಗುವ ಮರ್ಯಾದೆ ಒಂದು ವಿಶೇಷವಾಗಿತ್ತು. ಅಂದು ಜಿಲ್ಲೆಯಿಂದ ಅತ್ಯಧಿಕ ರೆವೆನ್ಯೂ ತೆರಿಗೆ ಸರಕಾರಕ್ಕೆ ಕೊಡುವವರ ಪಟ್ಟಿಯಲ್ಲಿ ಬಜಪೆ ಜಕ್ರಿ ಬ್ಯಾರಿ ಪ್ರಥಮರಾಗಿದ್ದರು. ಆ ಕಾರಣಕ್ಕಾಗಿ ಕೋರ್ಟಿನಲ್ಲಿ ಅವರಿಗೆ ಒಂದು ಪ್ರತ್ಯೇಕ ಕುರ್ಚಿ ನೀಡಿ ಗೌರವಿಸುವ ಪರಿಪಾಠ ಇತ್ತೆಂದು ಅವರ ಸಂಬಂಧಿಕರು ಹೇಳುತ್ತಾರೆ.

ಅಂದು ಬಂಟ ಸಮುದಾಯದಲ್ಲಿ ಮಾತ್ರ ಗುತ್ತು ಮನೆ ಇತ್ತು. ಆದರೆ ಜೋಕಟ್ಟೆಯಲ್ಲಿದ್ದ ಅವರ ಮನೆಗೆ ಇದ್ದ "ಗುತ್ತು ಹೌಸ್" ಎಂಬ ಹೆಸರು ಮುಸ್ಲಿಮರು ಇಡಬಾರದು ಎಂದು ಬಂಟ ಸಮುದಾಯದವರು ತಕರಾರು ಮಾಡಿದ್ದರು. ಅದರ ವಿರುದ್ಧ ಕೋರ್ಟಿನಲ್ಲಿ ಹೋರಾಟ ನಡೆಸಿ "ಗುತ್ತು ಮನೆ"ಯನ್ನು ಶಾಶ್ವತವಾಗಿ ಉಳಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ.


62ನೇ ತೋಕುರು ಗ್ರಾಮದ ಜೋಕಟ್ಟೆ ಎಂಬಲ್ಲಿರುವ ಈ ಗುತ್ತು ಮನೆ ಮೂಲತಃ ಜೈನರು ವಾಸಿಸುವ ಮನೆಯಾಗಿತ್ತು ಅದನ್ನು ಅವರ ಮಾವ ಅಬ್ಬುಂಞಿ ಬ್ಯಾರಿ ಖರೀದಿಸಿದ್ದರಂತೆ. ಬಳಿಕ ಅದನ್ನು ಬಜಪೆ ಜಕ್ರಿ ಬ್ಯಾರಿ ಖರೀದಿಸಿದ್ದರು. ಅದು ಇಂದಿಗೂ ಗುತ್ತು ಮನೆಯಾಗಿ ಉಳಿದಿದೆ.

ಬಜಪೆ ಜಕ್ರಿ ಬ್ಯಾರಿ ಬದ್ರ್ ಮಸೀದಿಗೆ 5 ಎಕ್ರೆ ಜಾಗವನ್ನು ವಕ್ಫ್ ಮಾಡಿ ದಾನಗೈದಿದ್ದರು. ಅಲ್ಲದೆ ಮನೆ ಮತ್ತು ಆಸುಪಾಸಿನ 50 ಎಕ್ರೆಯನ್ನು ಕೂಡಾ ವಕ್ಫ್‌ನಾಮೆ ಮಾಡಿದ್ದರು. ವಕ್ಫ್‌ನಾಮೆಯಲ್ಲಿ ಹಲವಾರು ಕಡ್ಡಾಯದ ಕೆಲಸವನ್ನು ನಮೂದಿಸಿದ್ದರು. ಅಂದರೆ ಪ್ರತಿವರ್ಷ ರಬಿವುಲ್ ಅವ್ವಲ್ ತಿಂಗಳಲ್ಲಿ ತನ್ನ ಕುಟುಂಬದ ಎಲ್ಲಾ ಸದಸ್ಯರು ಮತ್ತು ಊರವರನ್ನು ಕರೆದು ಮೌಲೂದು ಮಾಡಿಸಬೇಕು. ಬಡಬಗ್ಗರಿಗೆ ದಾನ ಮಾಡಬೇಕು. ರಮ್ಜಾನ್ ತಿಂಗಳಲ್ಲಿ ಅಕ್ಕಿ ಮತ್ತು ಬಟ್ಟೆ ವಿತರಣೆ ಮಾಡಬೇಕು. ಈ ಜಾಗವನ್ನು ಎಂದಿಗೂ ಪರಭಾರೆ ಮಾಡಬಾರದು ಎಂದು ನಮೂದಿಸಿದ್ದರು.

ಬಜಪೆ ಜಕ್ರಿ ಬ್ಯಾರಿ ಅವಿದ್ಯಾವಂತರಾಗಿದ್ದರೂ ಕೂಡ ಸಂಪತ್ತನ್ನು ಹೇಗೆ ವಿನಿಯೋಗಿಸಬೇಕು ಎಂದು ಚೆನ್ನಾಗಿ ತಿಳಿದಿದ್ದರು. ಕೊಡುಗೈ ದಾನಿಯೂ ಆಗಿದ್ದ ಅವರು ಮಸೀದಿಗೆ ಕೊಟ್ಟ 5 ಎಕ್ರೆ ಜಾಗವನ್ನು "ಬಜಪೆ ಜಕ್ರಿ ಬ್ಯಾರಿ ಬಡಾವಣೆ"ಯಾಗಿ ಇತ್ತೀಚೆಗೆ ಪರಿವರ್ತಿಸಲಾಗಿದ್ದು, ಅಲ್ಲೀಗ ಸುಮಾರು 75ಕ್ಕೂ ಹೆಚ್ಚು ಬಡವರು ಮನೆ ನಿರ್ಮಿಸಿಕೊಂಡಿದ್ದಾರೆ.

ಬಜಪೆ ಜಕ್ರಿ ಬ್ಯಾರಿಯವರಿಗೆ ಮೂವರು ಪತ್ನಿಯರು. ಎರಡು ಬಾರಿ ಹಜ್ ಯಾತ್ರೆಕೈಗೊಂಡಿದ್ದ ಅವರ ಮೊದಲ ಯಾತ್ರೆಯು ಹಡಗಿನಲ್ಲಾಗಿತ್ತು. ಬಳಿಕ ತನ್ನ ಮೂರನೇ ಪತ್ನಿಯೊಂದಿಗೆ ವಿಮಾನದಲ್ಲಿ ಯಾತ್ರೆಗೈದಿದ್ದರು. ಮೂವರು ಪತ್ನಿಯರಲ್ಲಿ 18 ಮಕ್ಕಳಿದ್ದರು. ಅದರಲ್ಲಿ ಹೆಚ್ಚಿನವರೆಲ್ಲ ತೀರಿಕೊಂಡಿರುವರು. ಅವರ ಕಿರಿಯ ಮಗ ಬಿ. ಇಬ್ರಾಹೀಂ ಅತ್ಯಂತ ಸಣ್ಣ (33 ವರ್ಷ) ಪ್ರಾಯದಲ್ಲೇ ರಾಜ್ಯಸಭಾ ಸದಸ್ಯರಾಗಿದ್ದರು. ಹೀಗೆ ಬಡತನದಲ್ಲಿ ಹುಟ್ಟಿ ಬೆಳೆದು ದೊಡ್ಡ ಜಮೀನ್ದಾರರಾಗಿ ಮೆರೆದ ಬಜಪೆ ಜಕ್ರಿ ಬ್ಯಾರಿ 1964ರ ಮಾರ್ಚ್ 6ರಂದು ನಿಧನರಾದರು.

## ಜನಮನದಲ್ಲಿ ಅಚ್ಚಳಿಯದೆ ಉಳಿದ ಸಾಲ್ಮರ ಅಬ್ಬು ಹಾಜಿ



ಪುತ್ತೂರಿನ ಇತಿಹಾಸವನ್ನು ಕೆದಕಿದರೆ ಜನಮನದಲ್ಲಿ ಇಂದಿಗೂ ಹಸಿರಾಗಿರುವ ಹೆಸರು ಸಾಲ್ಮರ ಅಬ್ಬು ಹಾಜಿ. ಹೆಸರು ಸೂಚಿಸುವಂತೆ ಅವರು ಪುತ್ತೂರಿನ ಸಾಲ್ಮರದಲ್ಲಿ ಹುಟ್ಟಿ ಬೆಳೆದವರು. ಬಾಲ್ಯದಲ್ಲೇ ಹೋರಾಟದ ಮನೋಭಾವ ಬೆಳೆಸಿಕೊಂಡಿದ್ದ ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ಭಾಗವಹಿಸಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಈಗಿನ ಕಾಸರಗೋಡು ಜಿಲ್ಲೆಯು ಅಂದಿನ ಕರ್ನಾಟಕಕ್ಕೆ ಸೇರಿತ್ತು. ಅಲ್ಲದೆ ಈ ಎಲ್ಲಾ ಪ್ರಾಂತ್ಯಗಳು "ಮದ್ರಾಸ್" ಸರಕಾರದ ಅಧೀನಕ್ಕೆ ಒಳಪಟ್ಟಿತ್ತು ಈಗಿನ ಕಾಸರಗೋಡು ಜಿಲ್ಲೆಯ ಬದಿಯಡ್ಕ ಸಮೀಪದ ನೆಕ್ಕರೆ ಎಂಬಲ್ಲಿಂದ ಹಲವು ಕುಟುಂಬಗಳು ವ್ಯಾಪಾರಕ್ಕಾಗಿ ಪುತ್ತೂರಿಗೆ ಬಂದು ನೆಲೆಸಿತ್ತು. ಅದರಲ್ಲಿ ಎರ್ಮುಂಞಿ ಯಾನೆ ರಮ್ಲಾ ಬ್ಯಾರಿ ಪ್ರಮುಖರಾಗಿದ್ದರು. ರಮ್ಲಾ ಬ್ಯಾರಿ ಪುತ್ತೂರಿನ ಈಗಿನ ಎಪಿಎಂಸಿ ರೈಲ್ವೆ ಗೇಟ್ ಪಕ್ಕ ವಾಸಮಾಡುತ್ತಿದ್ದರು. ಅವರ ಪತ್ನಿ ಬೀಪಾತುಮ್ಮ. ಐದು ಗಂಡು ಮತ್ತು ಮೂರು ಹೆಣ್ಣು ಮಕ್ಕಳ ತುಂಬು ಕುಟುಂಬ. ಸಾಲ್ಮರ ಅಬ್ಬು ಹಾಜಿ ಈ ದಂಪತಿಯ  ಪ್ರಥಮ ಪುತ್ರರಾಗಿ 1908ರಲ್ಲಿ ಜನಿಸಿದರು.

1934ರಲ್ಲಿ ಮಡಿಕೇರಿಯಿಂದ ಕಾರವಾರಕ್ಕೆ ತೆರಳುವ ಹಾದಿಯಲ್ಲಿ ಮಹಾತ್ಮ ಗಾಂಧೀಜಿಯು ಪುತ್ತೂರಿನ ಬಸ್ ನಿಲ್ದಾಣದ ಬಳಿಯ ಮರದ ಕೆಳಗೆ (ಈಗಿನ ಗಾಂಧಿಕಟ್ಟೆ) ವಿಶ್ರಾಂತಿ ಪಡೆದಿದ್ದರು. ಮಹಾತ್ಮ ಗಾಂಧೀಜಿಯ ಮೇಲೆ ಅಪಾರ ಗೌರವ ಹೊಂದಿದ್ದ ಸಾಲ್ಮರ ಅಬ್ಬು ಹಾಜಿ ಕೂಡ ಅಂದೇ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಗಾಂಧೀಜಿಯ ಮಾತಿನಿಂದ ಪ್ರಭಾವಿತರಾದ ಅಬ್ಬು ಹಾಜಿ ಸಭೆಯಿಂದ ಹಿಂತಿರುಗುವ ವೇಳೆ ಚಪ್ಪಲಿ ತೊರೆದು ಬರಿಗಾಲಿನಲ್ಲಿ ಮನೆಗಳಿಗೆ ತೆರಳಿದ್ದರು. ಬಳಿಕ ಅವರು ಧರಿಸುತ್ತಿದ್ದ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ತ್ಯಜಿಸಿ "ಖಾದಿ' ಧರಿಸಲು ಆರಂಭಿಸಿದರು. ಅವರ ಸ್ನೇಹಿತರ ಬಳಗದಲ್ಲಿ ಯೆಳ್ತಿಮಾರ್ ಶೆಣೈ, ಕಲ್ಲಾರೆ ಕುಡ್ವ, ಕಲ್ಲಡ್ಕ ಮಾಧವ ಪಡಿಯಾರ್, ಕಲ್ಲಡ್ಕ ಉಪ್ಪಣ್ಣ ನಾಯಕ್, ಉಪ್ಪಿನಂಗಡಿಯ ಹಕೀಂ ಹಾಜಿ ಪ್ರಮುಖರಾಗಿದ್ದರು. ಆವಾಗ ಸಾಲ್ಮರ ಅಬ್ಬು ಹಾಜಿಗೆ 25 ವರ್ಷ ವಯಸ್ಸಾಗಿತ್ತು. ಬಳಿಕ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾದರು.

ಉಪ್ಪಿನಂಗಡಿಯ ಕವಿ ಬಿ.ಎಂ. ಇದಿನಬ್ಬ, ಮಂಗಳೂರಿನ ಸಮಾಜ ಸೇವಕ ಸಿ. ಕುಂಞಿಪಕ್ಕಿ ಹಾಜಿ, ಶಿಕ್ಷಣ ಪ್ರೇಮಿ ಯೆನಪೊಯ ಮೊಯಿದಿನ್ ಕುಂಞಿ ಹಾಜಿ, ಅಬ್ದುಲ್ ಖಾದರ್, ಶಿವರಾಮ್ ಕೂಡ ಅವರ ಒಡನಾಡಿಯಾಗಿದ್ದರು. ಅಲಿಯಾರ್ ಇಬ್ರಾಹೀಂ ಹಾಜಿ, ಮಠ ಯೂಸುಫ್ ಹಾಜಿ, ಪುತ್ತೂರು ಉಸ್ಮಾನ್ ಹಾಜಿ ಕೂರ್ನಡ್ಕ, ಎಲ್‌ಟಿ ಇಬ್ರಾಹಿಂ ಹಾಜಿ ಅವರ ಆಪ್ತ ಸ್ನೇಹಿತರಾಗಿದ್ದರು.

ಸ್ವಾತಂತ್ರ್ಯ ನಂತರ ಅವರು ಆಗಿನ ಮದ್ರಾಸ್ ಸರಕಾರದ ಅಧೀನದಲ್ಲಿ ಗುತ್ತಿಗೆ ವಹಿಸಿ ಅನೇಕ ರಸ್ತೆ, ಸೇತುವೆ ಕಾಮಗಾರಿ ಮಾಡಿಸಿದರು. ಅಂದು ಅವರು ನಿರ್ಮಿಸಿದ ರಸ್ತೆ, ಸೇತುವೆಗಳು ಇಂದು ಪುತ್ತೂರು ಮತ್ತು ಸುಳ್ಯ ತಾಲೂಕುಗಳಲ್ಲಿ ಕಾಣಲು ಸಿಗುತ್ತಿವೆ.

ಪುತ್ತೂರು–ಕಾಣಿಯೂರು–ಸುಬ್ರಹ್ಮಣ್ಯ ರಸ್ತೆಯ, ಕಾಣಿಯೂರು ರೈಲ್ವೆ ನಿಲ್ದಾಣದ ಪಕ್ಕದಲ್ಲಿರುವ ಸೇತುವೆಯನ್ನು 1961ರಲ್ಲಿ ಕೇವಲ ಮೂರು ತಿಂಗಳ ಅವಧಿಯಲ್ಲಿ ಪೂರೈಸಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಯಾವುದೇ ಅತ್ಯಾಧುನಿಕ ತಂತ್ರಜ್ಞಾನ ಇಲ್ಲದ ಆ ಕಾಲದಲ್ಲಿ ಅಂದರೆ 1965ರಲ್ಲಿ ಅವರು ಸುಬ್ರಹ್ಮಣ್ಯ ಸಮೀಪದ ಕಲ್ಲಾಜೆ ಎಂಬಲ್ಲಿ ಸೇತುವೆ ನಿರ್ಮಿಸುವ ಸಂದರ್ಭ ಯಾವುದೋ ಕಾರಣಕ್ಕೆ ಸ್ಥಳೀಯ ವ್ಯಕ್ತಿಯೊಂದಿಗೆ ಉಂಟಾದ ಮನಸ್ತಾಪವು ಅವರ ಹತ್ಯೆಗೆ ಸಿದ್ಧತೆ ನಡೆದಿತ್ತು. ಅವರನ್ನು ಕೊಲ್ಲಲು ಪ್ರಯತ್ನಿಸಿದ ಆಗಂತುಕನ ಗುಂಡಿಗೆ ಅವರ ಸಹೋದರ ಇಬ್ರಾಹೀಂ ಬಲಿಯಾದರು. ನಂತರ ಅವರು ಸ್ಥಳೀಯ ಗುತ್ತಿಗೆ ಕಾಮಗಾರಿಯನ್ನು ಬಿಟ್ಟು ರೈಲ್ವೆ ಕಾಮಗಾರಿಯನ್ನು ವಹಿಸಿಕೊಂಡರು. ಹಾಸನದ ಮೀಟರ್ ಗೇಜ್ ರೈಲ್ವೆ, ಕಟ್ಟಡ ಕಾಮಗಾರಿ ನಿರ್ವಹಿಸುವ ವೇಳೆ ಭಾರತದ ಮಾಜಿ ಪ್ರಧಾನಿ ದೇವೇಗೌಡರ ಪರಿಚಯವಾಗಿತ್ತು. ಮುಂದೆ ಐ. ಮಹಮ್ಮದ್ ಇಂಜಿನಿಯರ್‌ರ ನೇತೃತ್ವದಲ್ಲಿ ಗೋಕಾಕ್ ಸಮೀಪದ ಇಳಕಲ್ ಡ್ಯಾಮ್ ನಿರ್ಮಿಸಿದ್ದರು.

ಅಪ್ಪಟ ಶಿಕ್ಷಣ ಪ್ರೇಮಿಯಾಗಿದ್ದ ಅವರು ತನ್ನ ಮನೆಯ ಕಾರು ಶೆಡ್ಡಿನಲ್ಲಿ ಶಾಲೆ ಮತ್ತು ಮದರಸವನ್ನು ಆರಂಭಿಸಿದರು. ಆ ಶಾಲೆ ಇಂದು ಸಾಲ್ಮರದಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಕಾರ್ಯನಿರ್ವಹಿಸುತ್ತಿದೆ. ಅವರು ಅಂದು ಆರಂಭಿಸಿದ ಮದರಸವು ಮುಂದೆ ಹಿಟ್ಲರ್ ಅಬ್ಬುಚರ ಮನೆಯಲ್ಲಿ ಪೂರ್ಣರೂಪದಲ್ಲಿ ಮುಂದುವರಿಯಿತು.

ಅದೇ ಮದರಸ ಇಂದು ಸೈಯದ್ ಮಲೆಯಲ್ಲಿ ಕಾರ್ಯಚರಿಸುತ್ತಿದೆ.

ಸಮಾಜದ ಮತ್ತು ಸಮುದಾಯದ ಒಳಗಿನ ಭಿನ್ನಾಭಿಪ್ರಾಯಗಳು ಅವರ ನೇತೃತ್ವದಲ್ಲಿ ಬಹಳ ಸುಲಭವಾಗಿ ಬಗೆ ಹರಿಯುತ್ತಿತ್ತು. ಅವರ ನ್ಯಾಯಯುತ ಹಾಗೂ ಗಂಭೀರ ಮಾತುಗಳಿಗೆ ಎಲ್ಲರೂ ಸಹಮತ ಸೂಚಿಸುತ್ತಿದ್ದರು.

ತನ್ನ ಇಳಿವಯಸ್ಸಿನಲ್ಲೂ ಅತ್ಯಂತ ಧಾರ್ಮಿಕ ಶ್ರದ್ಧೆಯಿಂದಿದ್ದ ಅವರು ಮಸೀದಿಯಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದರು. 1996ರಲ್ಲಿ ಇವರು ಇಹಲೋಕವನ್ನು ತ್ಯಜಿಸುವಾಗ ಇವರಿಗೆ 88 ವರ್ಷ ವಯಸ್ಸಾಗಿತ್ತು. ಪತ್ನಿ ಅವ್ವಮ್ಮ ಮತ್ತು ಐದು ಮಂದಿ ಹೆಣ್ಣುಮಕ್ಕಳನ್ನು ಅಗಲಿರುವ ಅವರ ಮೂಲ ಹೆಸರು ಸುಲೇಮಾನ್ ಪಿ. ಎಂದಾಗಿದ್ದರೂ "ಸಾಲ್ಮರ ಅಬ್ಬು ಹಾಜಿ" ಎಂದೇ ಪ್ರಸಿದ್ಧರಾಗಿದ್ದರು.

ಇದೀಗ ಅವರ ಕುಟುಂಬಸ್ಥರು "ಸಾಲ್ಮರದ ಅಬ್ಬು ಹಾಜಿ ಚಾರಿಟೇಬಲ್ ಟ್ರಸ್ಟ್" ರೂಪಿಸಿ ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ.

# ಸಮುದಾಯಕ್ಕೆ ಜೀವ ತುಂಬಿದ
# ಸಿ.ಅಬ್ದುಲ್ ಹಮೀದ್ ಮಂಗಳೂರು



ಮಂಗಳೂರಿನ ಪ್ರತಿಷ್ಠಿತ ಮತ್ತು ಅಗರ್ಭ ಶ್ರೀಮಂತ ಕುಟುಂಬದ ಸಿ.ಮಹ್ಮೂದ್-ಖತೀಜಾ ದಂಪತಿಯ ಪುತ್ರನಾಗಿ 1922ರ ನವೆಂಬರ್ 30ರಂದು ಹುಟ್ಟಿ ಬೆಳೆದ ಸಿ.ಅಬ್ದುಲ್ ಹಮೀದ್ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಸಿ.ಅಬ್ದುಲ್ ಹಮೀದ್ ಅವರನ್ನು ಕಾಲೇಜಿನಿಂದ ಅಮಾನತು ಮಾಡಲಾಗಿತ್ತು.

ಆ ಬಳಿಕ ಮಂಗಳೂರು ಮತ್ತು ಕಾಸರಗೋಡಿನಲ್ಲಿ ಹೆಂಚಿನ ಕಾರ್ಖಾನೆ ವ್ಯವಹಾರ ನೋಡಿಕೊಳ್ಳತೊಡಗಿದರು. ಅದರೊಂದಿಗೆ ಅಡಿಕೆ ಮತ್ತು ಕಾಡುತ್ಪತ್ತಿ ವ್ಯಾಪಾರದಲ್ಲೂ ತೊಡಗಿಸಿಕೊಂಡರು.

1947ರಲ್ಲಿ ಮಂಗಳೂರು ನಗರ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಮಂಗಳೂರು ನಗರ ಮುಸ್ಲಿಂ ಲೀಗ್ ಉಪಾಧ್ಯಕ್ಷರಾಗಿ, 1957ರಲ್ಲಿ ಮಂಗಳೂರು ನಗರ ಮುಸ್ಲಿಂ ಲೀಗ್ ಅಧ್ಯಕ್ಷರಾಗಿ, ದ.ಕ.ಜಿಲ್ಲಾ ಮುಸ್ಲಿಂ ಲೀಗ್ ಅಧ್ಯಕ್ಷರಾಗಿ, ಮದ್ರಾಸ್ ಪ್ರಾಂತ್ಯದ ಮೈಸೂರು ರಾಜ್ಯ ಮುಸ್ಲಿಂ ಲೀಗ್ ಉಪಾಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. 1977ರಲ್ಲಿ ಕರ್ನಾಟಕ ರಾಜ್ಯ ಮುಸ್ಲಿಂ ಲೀಗ್ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಅವರು ತನ್ನ ನಿಧನದವರೆಗೂ ಆ ಹುದ್ದೆಯ ಜವಾಬ್ದಾರಿ ನಿರ್ವಹಿಸಿದ್ದರು.

ಜನಸಾಮಾನ್ಯರ ಮಧ್ಯೆ ಆತ್ಮೀಯ ಒಡನಾಟವಿಟ್ಟುಕೊಂಡಿದ್ದರ ಫಲವಾಗಿಯೇ ಅವರು ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮ್ ಸಮಾಜದ ನಾಯಕರಲ್ಲಿ ಅಗ್ರಗಣ್ಯರಾಗಿದ್ದರು.

ಮುಸ್ಲಿಂ ಲೀಗ್ ಪಕ್ಷದ ರಾಷ್ಟ್ರೀಯ ನಾಯಕರಾಗಿದ್ದರೂ ಕೂಡ ಇತರ ಪಕ್ಷೀಯರನ್ನೂ ಅವರು ಗೌರವದಿಂದ ಕಾಣುತ್ತಿದ್ದರು. ಸದಾ ಸಮಾಜದ, ಸಮುದಾಯದ ಹಿತಚಿಂತಕರಾಗಿದ್ದ ಅವರು ನಿಷ್ಕಳಂಕ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದರು. ರಾಜಕಾರಣವನ್ನು ಎಂದೂ ಕೂಡ ಅವರು ವೃತ್ತಿಯನ್ನಾಗಿಸಿಕೊಂಡಿರಲಿಲ್ಲ. ಅವರಲ್ಲಿ ಕಪಟತನವಿರಲಿಲ್ಲ. ನೇರ ನಡೆನುಡಿ ಅವರ ಬದುಕಿನ ಧ್ಯೇಯವಾಗಿತ್ತು. ಹಾಗಾಗಿ ಅವರ ಎದುರಾಳಿ ರಾಜಕೀಯ ಪಕ್ಷೀಯರು ಕೂಡ ಅವರನ್ನು ಗೌರವದಿಂದ ಕಾಣುತ್ತಿದ್ದರು.

1968ರಲ್ಲಿ ಮಂಗಳೂರು ನಗರಸಭಾ ಸದಸ್ಯರಾಗಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಅವರು ನಗರಸಭೆಯ ಸ್ಥಾಯಿ ಸಮಿತಿಯ ಸದಸ್ಯರೂ ಆಗಿದ್ದರು. ಪೌರ ಸಮಿತಿಯ ಮೂಲಕ ಆಧುನಿಕ ಮಂಗಳೂರು ನಗರ ನಿರ್ಮಾಣಕ್ಕೆ ಪಣತೊಟ್ಟಿದ್ದರು.

ಬ್ಯಾರಿ ಭಾಷೆಯ ನುರಿತ ವಾಗ್ಮಿಯಾಗಿದ್ದ ಅವರು 18 ವರ್ಷಗಳ ಕಾಲ ಮಂಗಳೂರು ಝೀನತ್ ಬಕ್ಷ್ ಜುಮ್ಮಾ ಮಸ್ಜಿದ್ ಟ್ರಸ್ಟ್‌ನ ಅಧ್ಯಕ್ಷರಾಗಿ, ಅಲ್ ಮದ್ರಸತುಲ್ ಅಝ್‌ಹರಿಯಾದ ಅಧ್ಯಕ್ಷರಾಗಿ, ಬಾವುಟಗುಡ್ಡೆಯ ಈದ್ಗಾ ಮಸ್ಜಿದ್‌ನ ಅಧ್ಯಕ್ಷರಾಗಿ, ಪಾಂಡೇಶ್ವರದ ಪೊಲೀಸ್ ಲೈನ್‌ನ ಮಸೀದಿಯ ಅಧ್ಯಕ್ಷರಾಗಿ, ಬದ್ರಿಯಾ ಶಿಕ್ಷಣ ಸಂಸ್ಥೆಗಳ ಸ್ಥಾಪಕ ಸದಸ್ಯರಾಗಿ, ಸೀರತ್ ಕಮಿಟಿಯ ಉಪಾಧ್ಯಕ್ಷರಾಗಿ, ಮುಸ್ಲಿಮ್ ಹಾಸ್ಟೆಲ್‌ನ ಮೇಲ್ವಿಚಾರಕರಾಗಿ, ವಕ್ಫ್ ಬೋರ್ಡ್‌ನ ಸದಸ್ಯರಾಗಿ, ಸೆಂಟ್ರಲ್ ಮುಸ್ಲಿಂ ಕಮಿಟಿಯ ಉಪಾಧ್ಯಕ್ಷರಾಗಿ ಮತ್ತು ಸಲಹೆಗಾರರಾಗಿ, ಕರ್ನಾಟಕ ಜಂಇಯ್ಯತುಲ್ ಉಲಮಾ-ಉಮರಾದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

1978 ಮತ್ತು 1983ರಲ್ಲಿ ವಿಟ್ಲ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಲೀಗ್‌ನಿಂದ ಸ್ಪರ್ಧಿಸಿ ಸೋತಿದ್ದರೂ ಮತ ಗಳಿಕೆಯಲ್ಲಿ ಅಚ್ಚರಿ ಹುಟ್ಟಿಸಿ ಎಲ್ಲರ ಗಮನ ಸೆಳೆದಿದ್ದರು.

ಮತೀಯ ಸೌಹಾರ್ದಕ್ಕೆ ಸದಾ ಒತ್ತು ನೀಡುತ್ತಿದ್ದ ಅವರನ್ನು ಸರಕಾರವು ರಾಷ್ಟ್ರೀಯ ಭಾವೈಕ್ಯತಾ ಮಂಡಳಿಯ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರನ್ನಾಗಿ ನೇಮಿಸಿತ್ತು. ಸಮಾಜದಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಲು ಅವರ ಮನೆಯು ನ್ಯಾಯಾಲಯದಂತಿತ್ತು.

ಪತ್ನಿ ಆಯಿಶಾ, ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನೊಳಗೊಂಡ ಸಂತೃಪ್ತ ಕುಟುಂಬ ಅವರದ್ದಾಗಿತ್ತು. 1994ರ ಫೆಬ್ರವರಿ 14ರಂದು ದೆಹಲಿಯಲ್ಲಿ ನಿಧನರಾದ ಅವರ ಅಂತ್ಯಕ್ರಿಯೆಯು ಮಂಗಳೂರಿನಲ್ಲಿ ನೆರವೇರಿತು.



## ಮಡಿಕೇರಿಯ ಚಿತ್ರಣ ಬದಲಿಸಿದ್ದ ಪಿ.ಎ.ಮೊಹಿದಿನ್ ಮಡಿಕೇರಿ

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಹುಟ್ಟಿ ಬೆಳೆದು ನಿರೀಕ್ಷೆಗೂ ಮೀರಿದ ಸಾಧನೆಗೈದ ಪಿ.ಎ.ಮೊಹಿದಿನ್ ಅವರ ಹಿರಿಯರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು–ವಿಟ್ಲ ಸಮೀಪದ ಮಲ್ಲಿಪ್ಪಾಡಿಯವರು. ಅಂದರೆ ಮಲ್ಲಿಪ್ಪಾಡಿಯ ಅಬ್ದುಲ್ ಖಾದರ್ ಬಾಲ್ಯದಲ್ಲೇ ಮಡಿಕೇರಿಗೆ ಬಂದು ನೆಲೆಸಿದರು. 1910ರ ಜುಲೈ 11ರಂದು ಮಡಿಕೇರಿಯಲ್ಲಿ ಹುಟ್ಟಿದ ಪಿ.ಎ.ಮೊಹಿದಿನ್ ಅಲ್ಲಿನ ಸೆಂಟ್ರಲ್ ಹೈಸ್ಕೂಲಿನಲ್ಲಿ ಅಂದಿನ ಮೆಟ್ರಿಕ್ಯುಲೇಶನ್ (ಇಂದಿನ ಎಸೆಸೆಲ್ಸಿ) ಉತ್ತೀರ್ಣರಾದರು, ಆ ಮೂಲಕ ಮೆಟ್ರಿಕ್ಯುಲೇಶನ್ ತೇರ್ಗಡೆ ಹೊಂದಿದ ಕೊಡಗಿನ ಮೊದಲ ಬ್ಯಾರಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

ಮಡಿಕೇರಿ ಪುರಸಭೆಯ ಉಪಾಧ್ಯಕ್ಷರಾಗಿದ್ದ ಮೊಹಿದಿನ್ 1953–57ರಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಮಡಿಕೇರಿ ಪುರಸಭೆಯ (ಈಗ ನಗರಸಭೆ) ಪ್ರಥಮ ಮತ್ತು ಏಕೈಕ ಬ್ಯಾರಿ ಮುಸ್ಲಿಮ್ ಅಧ್ಯಕ್ಷ ಎಂಬ ಹೆಗ್ಗಳಿಕೆ ಅವರು ಪಾತ್ರರಾಗಿದ್ದಾರೆ. ಮಡಿಕೇರಿ ಪುರಸಭೆಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಅವರು ಮಾಡಿದ ಕೆಲಸವನ್ನು ಇಂದಿಗೂ ಜನರು ನೆನಪಿಸಿಕೊಳ್ಳುತ್ತಾರೆ. ಪ್ರತೀದಿನ ಬೆಳಗ್ಗೆಯೇ ಎದ್ದು ಇಡೀ ನಗರ ಸುತ್ತು ಹಾಕಿ ಕುಂದು ಕೊರತೆಗಳನ್ನು ಗುರುತಿಸಿ ಕೆಲಸ ಮಾಡಿಸುತ್ತಿದ್ದುದನ್ನು ಜನರು ತುಂಬಾ ಮೆಚ್ಚಿಕೊಂಡಿದ್ದರು. ಅಧ್ಯಕ್ಷರಾಗಿ ಆಯ್ಕೆಗೊಂಡರೂ ತನ್ನ ನಡೆಯನ್ನು ಅವರು ಮುಂದುವರಿಸಿಕೊಂಡಿದ್ದರು. ಅವರ ಅಧಿಕಾರಾವಧಿಯಲ್ಲಿ ರಸ್ತೆ, ಕುಡಿಯುವ ನೀರು ಹಾಗೂ ವಿದ್ಯುತ್ ವ್ಯವಸ್ಥೆಯಲ್ಲಿ ಯಾವುದೇ ಲೋಪಗಳು ಇದ್ದಿರಲಿಲ್ಲ ಎಂಬುದು ಅವರ ಕೆಲಸ–ಕಾರ್ಯವೈಖರಿಗೆ ಹಿಡಿದ ಕೈಗನ್ನಡಿ ಎನ್ನಬಹುದು.

ಮಡಿಕೇರಿ ಪುರಸಭಾ ಭವನಕ್ಕೆ ಹೊಸ ರೂಪ ನೀಡಿದ್ದು, ಮಡಿಕೇರಿ ಮಹದೇವಪೇಟೆಯಲ್ಲಿರುವ ಪುರಸಭಾ ಆಸ್ಪತ್ರೆಯನ್ನು ನವೀಕರಿಸಿದ್ದು, ಎಲ್ಲಕ್ಕಿಂತ ಮುಖ್ಯವಾಗಿ ರಾಜಾಸೀಟ್ ಬಳಿ ಇರುವ ಗಾಂಧೀಜಿಯ ಸ್ಮಾರಕ ಗಾಂಧಿ ಮಂಟಪವನ್ನು ಕಟ್ಟಿದ್ದು ಕೂಡ ಅವರ ಅಧ್ಯಕ್ಷಾವಧಿಯಲ್ಲೇ. ಗಾಂಧೀಜಿ ಮಡಿಕೇರಿಗೆ ಭೇಟಿ ನೀಡಿದ್ದ ಸಂದರ್ಭ ಜನರನ್ನುದ್ದೇಶಿಸಿ ಮಾತನಾಡಿದ ಸ್ಥಳದಲ್ಲಿ ಈ ಸ್ಮಾರಕ ನಿರ್ಮಾಣವಾಗಿದೆ.

ಮಡಿಕೇರಿಗೆ ಪ್ರಧಾನಿ ಜವಹರಲಾಲ್ ನೆಹರೂ ಭೇಟಿ ನೀಡಿದಾಗ ಮಡಿಕೇರಿಯ ಕೇಂದ್ರ ಭಾಗದಲ್ಲಿರುವ ಇಕ್ಕಟ್ಟಾದ ಚೌಕವನ್ನು ಅಗಲಗೊಳಿಸಿದ್ದು ಕೂಡ ಅವರ ಅಧ್ಯಕ್ಷ ಅವಧಿಯಲ್ಲಿ. ಮದ್ರಾಸ್ ರಾಜ್ಯದ (ತಮಿಳುನಾಡು) ಮುಖ್ಯಮಂತ್ರಿಯಾಗಿದ್ದ ಕಾಮರಾಜ್ ನಾಡಾರ್ ಮಡಿಕೇರಿಗೆ ಭೇಟಿ ನೀಡಿದಾಗ ಮೊಹಿದಿನ್ ಮಡಿಕೇರಿ ಪುರಸಭೆಯ ಅಧ್ಯಕ್ಷರಾಗಿದ್ದರು, ಕಾಮರಾಜ್ ಅವರನ್ನು ಸ್ವಾಗತಿಸಿದ ಗಣ್ಯ ವ್ಯಕ್ತಿಗಳಲ್ಲಿ ಮೊಯ್ದಿನ್ ಕೂಡ ಇದ್ದರು. ಮೊಯ್ದಿನ್ ಎಷ್ಟೊಂದು ಪ್ರಭಾವಶಾಲಿಯಾಗಿದ್ದರೆಂದರೆ ಅವರ ಅಧ್ಯಕ್ಷಾವಧಿ ಮುಗಿದ ನಂತರ ಕೂಡ ಗಣ್ಯರು ಅವರ ನಿಕಟ ಸಂಪರ್ಕದಲ್ಲಿದ್ದರು.

ಭಾರತದ ಕಮಾಂಡರ್ ಇನ್ ಚೀಫ್ ಆಗಿದ್ದ ಫೀ.ಮಾ. ಕೆ.ಎಂ. ಕಾರ್ಯಪ್ಪ ಹಾಗೂ ಹೈದರಾಬಾದ್ ನಿಜಾಮ ಬಸಲತ್ ಝಾ ಬಹದೂರ್ ಮುಂತಾದ ಗಣ್ಯರು ಮಡಿಕೇರಿ ಗಣಪತಿ ಬೀದಿಯಲ್ಲಿದ್ದ ಮೊಯ್ದಿನ್‌ರ ಮನೆಯಲ್ಲೇ ನಡೆದ ಅವರ ಹಿರಿಯ ಮಗ ಯಾಹ್ಯಾರ ಮದುವೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದೇ ಇದಕ್ಕೆ ಸಾಕ್ಷಿ.

ಪಿ.ಎ.ಮೊಹಿದಿನ್ ಅವರ ಪತ್ನಿಯ ಹೆಸರು ಖದೀಜಾಬಿ. ಈ ದಂಪತಿಗೆ ಇಬ್ಬರು ಗಂಡು ಮಕ್ಕಳು. ಹಿರಿಯ ಮಗ ಯಾಹ್ಯಾ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಶಾಖಾ ಮ್ಯಾನೇಜರ್ ಮತ್ತು ಕಿರಿಯ ಮಗ ಝಕರಿಯಾ ವಕೀಲರಾಗಿದ್ದರು.

ಮೊಯ್ದಿನ್ ಮಡಿಕೇರಿಯ ಸಗಟು ಮಾರಾಟ ಮಳಿಗೆ ಮುರ್ತುಜ಼ಾ ಬೇಗ್ ಅ್ಯಂಡ್ ಕೋ. ಅಂಗಡಿಯಲ್ಲಿ ಲೆಕ್ಕಪತ್ರ ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದ ವೇಳೆ ಕಾಸರಗೋಡು ಜಿಲ್ಲೆಯಿಂದ ಪುಟ್ಟ ಬಾಲಕನೊಬ್ಬನ ಜೊತೆಯಲ್ಲಿ ಬಂದ ಮಹಿಳೆಯೊಬ್ಬಳಿಗೆ ಆಶ್ರಯವಿತ್ತು ಸಲಹುತ್ತಾರೆ. ಆ ಬಾಲಕನನ್ನು ತಮ್ಮ ಮಕ್ಕಳ ಜೊತೆಗೆ ಶಾಲೆಗೆ ಸೇರಿಸಿ ಆತನನ್ನು ಪದವೀಧರನನ್ನಾಗಿ ಮಾಡುತ್ತಾರೆ. ಈ ಬಾಲಕನೇ ಮುಂದೆ ಸುಂಟಿಕೊಪ್ಪ ಪುರಸಭೇಯ ಅಧ್ಯಕ್ಷರಾಗಿ, ಕೊಡಗು ಜಿಲ್ಲಾ ಪರಿಷತ್ತಿನ ಪ್ರಥಮ ಬ್ಯಾರಿ ಸದಸ್ಯನಾಗಿ ಆಗಿನ ಮುಖ್ಯಮಂತ್ರಿಯಾಗಿದ್ದ ಗುಂಡೂರಾಯರ ಅತ್ಯಂತ ಆಪ್ತನಾಗಿ, ಬಂಟ್ವಾಳದ ಶಾಸಕನಾಗಿ ಆಯ್ಕೆಯಾಗಿದ್ದ ಕೆ.ಎಂ.ಇಬ್ರಾಹೀಮ್.

ಇಬ್ರಾಹೀಮ್ ಅವರಲ್ಲದೆ ಇನ್ನೂ ಇಬ್ಬರು ಬಾಲಕರನ್ನು (ಎಚ್ಎಂ ಮುಹಮ್ಮದ್ ಹಾಗೂ ಹುಸೇನ್) ಕೂಡ

ಮೊಯ್ದಿನ್ ಪೋಷಿಸಿ ವಿದ್ಯಾಭ್ಯಾಸ ನೀಡಿ ಬೆಳೆಸಿದ್ದರು. ಈ ಹುಡುಗರ ಪೈಕಿ ಮುಹಮ್ಮದ್ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಮಡಿಕೇರಿಯ ಮುಸ್ಲಿಮ್ ಜಮಾತ್‌ನ ಸ್ಥಾಪಕರಾಗಿದ್ದ ಅವರು 25 ಬಡ ಜೋಡಿಗಳ ಸಾಮೂಹಿಕ ವಿವಾಹವನ್ನು ತಮ್ಮ ಖರ್ಚಿನಲ್ಲಿ ತಮ್ಮ ಮನೆಯಲ್ಲಿಯೇ ನಡೆಸಿಕೊಟ್ಟಿದ್ದು ಅವರ ಸಾಮಾಜಿಕ ಕಾಳಜಿಗೆ ಸಾಕ್ಷಿ. ವಧುವಿಗೆ ಒಡವೆ, ಬಟ್ಟೆ ಎಲ್ಲವನ್ನೂ ತಮ್ಮ ಸ್ವಂತ ಹಣದಲ್ಲಿ ಭರಿಸಲಾಗಿತ್ತು. ಇದೇ ಸಂದರ್ಭದಲ್ಲಿ ಅವರ ಸಾಕುಮಗ ಕೆ.ಎಂ. ಇಬ್ರಾಹೀಮ್‌ರ ಮದುವೆಯೂ ನಡೆದಿತ್ತು ಎಂಬುದು ಉಲ್ಲೇಖಾರ್ಹ.

ಕುಳ್ಳಗಿನ ದೇಹವಾದರೂ ವಿಶಾಲ ಹೃದಯಿಯಾಗಿದ್ದ ಅವರು ಜನರ ಕಷ್ಟಗಳಿಗೆ ಸ್ಪಂದಿಸುವ ಮಾನವೀಯ ಗುಣಗಳಿಂದಾಗಿ ಕೊಡಗಿನ ಎಲ್ಲ ವರ್ಗ, ಜಾತಿ, ಧರ್ಮಗಳ ಜನರ ಗೌರವಕ್ಕೆ ಪಾತ್ರರಾಗಿದ್ದರು. ಹೀಗೆ ಧಾರ್ಮಿಕ, ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ್ದ ಮೊಹಿದಿನ್ 1975ರ ಜನವರಿ 13ರಂದು ನಿಧನರಾದರು.

# ದಕ್ಷಿಣ ಕನ್ನಡದಲ್ಲಿ ಹುಟ್ಟಿ ಕೊಡಗಿನಲ್ಲಿ ಮೆರೆದ ಸಾಯಿರಾಕ ಮಡಿಕೇರಿ

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆ ಸಮೀಪದ ಕಜೆ ಕೊಳಂಬೆ ಗ್ರಾಮದ ಹಮ್ಮಬ್ಬ–ಬೀಫಾತಿಮಾ ದಂಪತಿಯ ಪುತ್ರನಾಗಿ 1900ರಲ್ಲಿ ಹುಟ್ಟಿದ ಸಾಯಿರಾಕ ಬಾವಿ ತೋಡಿಸುವ ಕೆಲಸ ಮಾಡಿಸುತ್ತಿದ್ದರು. ಕೊಡಗಿನಲ್ಲಿ ಬಾವಿ ತೋಡಿಸುವ ಕೆಲಸಕ್ಕೆ ಹೆಚ್ಚಿನ ಅವಕಾಶ ಇರಬಹುದೆಂದು 1920ಕ್ಕೆ ಮಡಿಕೇರಿಗೆ ಬಂದ ಸಾಯಿರಾಕ ನೂರಾರು ಬಾವಿ ತೋಡುವ ಗುತ್ತಿಗೆ ಪಡೆದು, ಮುಂದೆ ನಂಬರ್ ಒನ್ ಗುತ್ತಿಗೆದಾರರಾಗಿ ಸರಕಾರಿ ರಸ್ತೆ ನಿರ್ಮಾಣ ಕೆಲಸದಲ್ಲಿ ತೊಡಗಿಸಿಕೊಂಡರು.

ಆ ಕಾಲದಲ್ಲಿ ಅತ್ಯಂತ ಶ್ರೀಮಂತರು ಮಾತ್ರ ಸ್ವಂತ ಕಾರು ಹೊಂದಿರುತ್ತಿದ್ದರು. ಸಾಯಿರಾಕ ಆಗಲೇ ಬೆಲೆಬಾಳುವ ಕಾರು ಹೊಂದಿದ್ದು, ಬ್ಯಾರಿಗಳ ಪೈಕಿ ಮೊದಲು ಕಾರು ಖರೀದಿಸಿದ್ದು ಅವರು ಎಂದು ಹೇಳಲಾಗುತ್ತಿದೆ. ಕಜೆ ಕೊಳಂಬೆ ಗ್ರಾಮದಲ್ಲಿ ಅವರಿದ್ದ ಮನೆ ವರ್ಣಮಯ ಕನ್ನಡಿಗಳಿಂದ ಕೂಡಿದ್ದು, ಹಾಗಾಗಿ ಊರವರು "ಕನ್ನಾಟ್ಟಿರಗ' (ಕನ್ನಡಿ ಮನೆ) ಎಂದು ಕರೆಯುತ್ತಿದ್ದರಂತೆ.

ಸಾಯಿರಾಕ ಕೊಡಗಿನಲ್ಲಿ ಬಡಜನರಿಗೆ ಸಹಾಯ ಮಾಡುವಲ್ಲಿ ಧಾರಾಳಿಯಾಗಿದ್ದರು. ಅವರ ಬಳಿ ಸಹಾಯ ಕೋರಿ ಬರುತ್ತಿದ್ದವರಲ್ಲಿ ಸಹೋದರ ಧರ್ಮೀಯರು ಅಧಿಕ ಸಂಖ್ಯೆಯಲ್ಲಿದ್ದರು. ಹಲವಾರು ಮುಸ್ಲಿಮ್ ಹೆಣ್ಣುಮಕ್ಕಳ ಮದುವೆಗೆ ಧನಸಹಾಯ ಮಾಡಿದ್ದರಲ್ಲದೆ ಮದುಮಗಳಿಗೆ ಬೇಕಾದ ಚಿನ್ನದ ಒಡವೆಗಳನ್ನು ಕೂಡ ನೀಡುತ್ತಿದ್ದರು. ಅವರ ಗೆಳೆಯರ ಬಳಗದಲ್ಲಿ ಸಹೋದರ ಧರ್ಮೀಯರು ಹೆಚ್ಚಿಗಿದ್ದರು. ಎಲ್ಲರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಿದ್ದ ಅವರು ಮಳೆಗಾಲ ಹತ್ತಿರವಾದಾಗ 3–4 ಎತ್ತಿನಗಾಡಿಗಳಲ್ಲಿ ಸಾಮಾನುಗಳನ್ನು ತುಂಬಿಸಿಕೊಂಡು ಊರಿಗೆ ತೆರಳುತ್ತಿದ್ದರಂತೆ. ಅಲ್ಲಿ ತಾವು ತಂದಿದ್ದ ದಿನಸಿ ಸಾಮಾನುಗಳನ್ನು ಊರ ಬಡವರಿಗೆ ಹಂಚುತ್ತಿದ್ದರಂತೆ. ಮಳೆಗಾಲ ಮುಗಿಯುವವರೆಗೂ ಊರಿನಲ್ಲಿಯೇ ಇರುತ್ತಿದ್ದ ಅವರು ಆ ನಂತರ ಮತ್ತೆ ಮಡಿಕೇರಿಗೆ ವಾಪಸ್ ಆಗುತ್ತಿದ್ದರಂತೆ.

ಒಮ್ಮೆ ಅವರ ಬಳಿ ಸಹಾಯ ಕೋರಿ ಸೋಮವಾರಪೇಟೆ ತಾಲೂಕಿನ ಲಿಂಗಾಯತರೊಬ್ಬರು ಬಂದಿದ್ದರಂತೆ. ಅವರ ಮಗಳ ಮದುವೆ ಮಾಡಿಸಲು ಆ ವ್ಯಕ್ತಿಯ ಬಳಿ ಹಣವಿರಲಿಲ್ಲ. ವಿವಾಹದ ದಿನ ಹತ್ತಿರವಾಗುತ್ತಿದ್ದಂತೆ ಅವರು ಹಣಕ್ಕಾಗಿ ಚಡಪಡಿಸತೊಡಗಿದರು. ಕೊನೆಗೆ ಸಾಯಿರಾಕರ ಕೊಡುಗೈ ದಾನದ ಬಗ್ಗೆ ತಿಳಿದುಕೊಂಡಿದ್ದ ಗೆಳೆಯರೊಬ್ಬರ ಸೂಚನೆಯಂತೆ ಆ ಲಿಂಗಾಯತ ವ್ಯಕ್ತಿ ಸಾಯಿರಾಕರ ಬಳಿ ಬಂದು 2 ಸಾವಿರ ರೂಪಾಯಿ ಸಾಲ ಕೇಳಿದರಂತೆ. ಸಾಯಿರಾಕ ತಟ್ಟನೆ 2 ಸಾವಿರ ರೂಪಾಯಿ ನೀಡಿ ಅದನ್ನು ಮರುಪಾವತಿಸುವ ಅಗತ್ಯವಿಲ್ಲವೆಂದು ಹೇಳಿದರಂತೆ. ಆಗಿನ ಕಾಲದಲ್ಲಿ 2 ಸಾವಿರ ರೂಪಾಯಿ ಅಂದರೆ ದೊಡ್ಡ ಮೊತ್ತವಾಗಿತ್ತು. ಅವರ ಧಾರಾಳತನಕ್ಕೆ ತಲೆಬಾಗಿದ ಆ ವ್ಯಕ್ತಿ ಮುಂದೆ ಹೇಗೋ ಹಣ ಹೊಂದಿಸಿ ತಂದು ಕೊಟ್ಟಾಗ ಅದನ್ನು ತೆಗೆದುಕೊಳ್ಳದೆ ಬೇರೆ ಯಾವುದಾದರೂ ಬಡ ಹೆಣ್ಣುಮಗಳ ಮದುವೆಗೆ ಸಹಾಯ ಮಾಡುವಂತೆ ಹೇಳಿ ಕಳುಹಿಸಿದರಂತೆ. ಮುಂದೆ ಆ ಲಿಂಗಾಯತ ವ್ಯಕ್ತಿಯು ಒಬ್ಬ ಮುಸ್ಲಿಮ್ ಹೆಣ್ಣುಮಗಳ ಮದುವೆಗೆ ಹಣ ನೀಡಿ "ಸಾಯಿರಾಕ ಕೊಟ್ಟಿದ್ದು" ಎಂದು ಆ ಹೆಣ್ಣುಮಗಳ ತಂದೆಯ ಬಳಿ ಹೇಳಿದ್ದರಂತೆ. ಹೀಗೆ ಹೆಣ್ಣುಮಕ್ಕಳ ಮದುವೆಗೆ ಸಹಾಯ ಕೇಳಿಕೊಂಡು ಯಾರೇ ಬಂದು ಕೇಳಿದರೂ ಕೂಡ ಸಾಯಿರಾಕ ಯಾವತ್ತೂ ಇಲ್ಲವೆನ್ನುತ್ತಿರಲಿಲ್ಲ ಎನ್ನಲಾಗಿದೆ.

ಅವರಿಗೆ ಕೊಡಗಿನಲ್ಲಿ ಕಾಫಿ ಎಸ್ಟೇಟ್ ಕೂಡ ಇತ್ತು. ಮಡಿಕೇರಿಯ ಮ್ಯಾನ್ಸ್ ಕಾಂಪೌಂಡ್ ರಸ್ತೆಯಲ್ಲಿ ಅವರು ಕಟ್ಟಿಸಿ ವಾಸವಿದ್ದ ಮನೆ ಈಗಲೂ ಇದೆ. ಮುಂದೆ ಅವರಿಗೆ ದೃಷ್ಟಿ ಮಂದವಾಗುತ್ತಾ ಬಂದು ಕೊನೆಗೆ ಕಣ್ಣೇ ಕಾಣಿಸದಾದಾಗ ಕೊಡಗಿನಲ್ಲಿ ಇದ್ದುದೆಲ್ಲವನ್ನೂ ಮಾರಿ ಸ್ವಂತ ಊರಿಗೆ ಹೋಗಿ ನೆಲೆಸಿದರಂತೆ.

ಸಾಯಿರಾಕರಿಗೆ ಮೂವರು ಹೆಂಡತಿಯರ ಪೈಕಿ ನಾಲ್ಕು ಗಂಡು ಮತ್ತು ಮೂವರು ಹೆಣ್ಣುಮಕ್ಕಳಿದ್ದರು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ 2020ರ ಗೌರವ ಪುರಸ್ಕೃತರಾದ ಅಬ್ದುಲ್ ಮಜೀದ್ ಸುರಲ್ಪಾಡಿ, ಕೇಂದ್ರ ಸರಕಾರದ ಭವಿಷ್ಯನಿಧಿ ಅಧಿಕಾರಿಯಾಗಿ ನಿವೃತ್ತರಾಗಿರುವ ಅಮೀರ್ ಬಜ್ಪೆ ಸಾಯಿರಾಕರ ಮೊಮ್ಮಕ್ಕಳು.

ಒಟ್ಟಿನಲ್ಲಿ ಬಜ್ಪೆ ಸಮೀಪ ಹುಟ್ಟಿ ಮಡಿಕೇರಿಯಲ್ಲಿ ಕಾರುಬಾರು ತೋರಿಸಿದ ಸಾಯಿರಾಕ 1950ರಲ್ಲಿ ತವರೂರಲ್ಲೇ ಕೊನೆಯುಸಿರೆಳೆದರು.

# ರಾಜಮನೆತನದ ಹಿರಿಮೆ ಹೆಚ್ಚಿಸಿದ್ದ ಮಮ್ಮಾಲಿ ಪಟೇಲ್ ಐವತ್ತೊಕ್ಲು



ತುಳುನಾಡು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದ ಕಾಲವದು. ವಿಜಯನಗರ ಅರಸರಿಗೂ ಬಹುಮನಿ ಸುಲ್ತಾನರಿಗೂ "ತಾಳಿಕೋಟೆ" ಕದನದ ಕಾವು ಹೆಚ್ಚಿತ್ತು. ಮಾಗಣೆಯ ಸಾಮಂತ ಹೆಗ್ಡೆಯ ಕಡೆಯಿಂದ ಮುಸ್ಲಿಂ ಸೇನಾಧಿಪತಿಯ ನೇತೃತ್ವದ ತಂಡವೊಂದು ಯುದ್ಧಕ್ಕೆ ಹೊರಡಲು ಸಿದ್ಧತೆ ನಡೆಸಿತು. ಈ ಸೇನಾಧಿಪತಿಯು ಪುತ್ತೂರಿನ ಪರ್ಪುಂಜದ ಏಲ್ನಾಡುಗುತ್ತು ಪರಿಸರದವರು. ಯುದ್ಧಕ್ಕೆ ಹೊರಡುವಾಗ ಸೇನಾಧಿಪತಿಯ ಪತ್ನಿ ತುಂಬು ಗರ್ಭಿಣಿ. ಆವಾಗ ಸೇನಾಧಿಪತಿಯು ಸಾಮಂತ ಹೆಗ್ಡೆಯ ಪತ್ನಿಯ ಬಳಿ ತನ್ನ ಹೆಂಡತಿ ಮತ್ತು ಮಗುವನ್ನು ನೋಡಿಕೊಳ್ಳಬೇಕು ಎಂಬ ಭಿನ್ನವಿಸಿಕೊಂಡರು.

ಯುದ್ಧದಲ್ಲಿ ವಿಜಯನಗರ ಅರಸರಿಗೆ ಸೋಲಾಯಿತು. ಮುಸ್ಲಿಂ ಸೇನಾಧಿಪತಿ ಕೂಡ ವೀರ ಮರಣವನ್ನಪಿದರು. ವಿಷಯ ತಿಳಿದ ತುಂಬು ಗರ್ಭಿಣಿಯು ಆಘಾತದಿಂದ ಗಂಡು ಮಗುವಿಗೆ (ಸುಮಾರು 1565ನೆ ಇಸವಿ) ಜನ್ಮ ನೀಡಿ ಇಹಲೋಕ ತ್ಯಜಿಸಿದರು. ಹೀಗೆ ಕಣ್ತೆರೆಯುವ ಮುನ್ನವೇ ತಾಯಿ–ತಂದೆಯನ್ನು ಮಗು ಕಳೆದುಕೊಂಡಿತ್ತು.

ಯುದ್ಧಕ್ಕೆ ಹೋಗುವಾಗ ಸಾಮಂತ ಹೆಗ್ಡೆಯ ಪತ್ನಿಯು ಮುಸ್ಲಿಂ ಸೇನಾಧಿಪತಿಗೆ ಕೊಟ್ಟ ಭರವಸೆಯಂತೆ ಇಸ್ಲಾಂ ಪದ್ಧತಿಯ ಪ್ರಕಾರ ಮಗುವಿಗೆ ಮುಂಜಿ ಮಾಡಿಸಿ ಮುಹಮ್ಮದ್ ಎಂಬ ಹೆಸರನ್ನಿಟ್ಟು ಸಾಕಿ ಸಲಹಿದರು. ಗುತ್ತುಗಾರ್ತಿಯು ಈ ಮಗುವನ್ನು ಪ್ರೀತಿಯಿಂದ ಕುಂಞಿ ಎಂದು ಕರೆಯುತ್ತಿದ್ದರು. ಸಾಮಂತ ಹೆಗ್ಡೆಯ ಗರಡಿಯಲ್ಲಿ ಪಳಗಿದ ಕುಂಞಿ ಎಂಬ ಈ ಮುಹಮ್ಮದ್ ಆ ಬಳಿಕ ಸುಳ್ಯ ತಾಲೂಕಿನ ಐವತ್ತೊಕ್ಲು ರಾಜಮನೆತನದ ಮೂಲಪುರುಷನಾಗಿ "ಮಮ್ಮಾಲಿ ಪಟೇಲ್" ಎಂದು ಇತಿಹಾಸದ ಪುಟಗಳಲ್ಲಿ ದಾಖಲಾದರು.

ಈ ಮಮ್ಮಾಲಿ ಪಟೇಲ್ ಕಾರಣಿಕ ಪುರುಷ ಎಂಬ ನಂಬಿಕೆ ಪರಿಸರದಲ್ಲಿ ಬಲವಾಗಿತ್ತು. ಅದಕ್ಕೆ ಅವರ ಪರಾಕ್ರಮವೂ ಕಾರಣವಾಗಿದ್ದಿರಬಹುದು. ಅಜಾನುಬಾಹಿಯಾಗಿದ್ದ ಮಮ್ಮಾಲಿ ಪಟೇಲರ ಪರಾಕ್ರಮವು ಅವರನ್ನು ಎಣ್ಮೂರು ಬೀಡಿನ ಪಟ್ಟ ಏರುವಂತೆ ಮಾಡಿತ್ತು. ಅಂದರೆ ತನ್ನ 25ನೆ ಪ್ರಾಯದಲ್ಲಿ ಎಣ್ಮೂರು ಬೀಡಿನ ದಂಡಾಧಿಕಾರಿಯಾಗಿ ನೇಮಕಗೊಂಡಿದ್ದ ಮಮ್ಮಾಲಿ ಪಟೇಲ್ ತನ್ನ 35ನೆ ಪ್ರಾಯದಲ್ಲಿ ಎಣ್ಮೂರು ಬೀಡಿನ ಪಟ್ಟವೇರಿದರು. ಸುಮಾರು 1650ರ ವೇಳೆಗೆ ಅವರು ಇಹಲೋಕ ತ್ಯಜಿಸಿದರು. ಅವರೇ ಕಟ್ಟಿಸಿದ ಮಸೀದಿಯ ಬಳಿಯೇ ಅವರನ್ನು ದಫನ ಮಾಡಲಾಗಿದೆ. 85 ವರ್ಷಗಳ ಕಾಲ ಬದುಕಿದ್ದ ಅವರ ಪರಾಕ್ರಮವೇ ಇಂದು ಐವತ್ತೊಕ್ಲು ಬೀಡಿನ ಹಿರಿಮೆ ಹೆಚ್ಚಿಸಿದೆ.

ಎಣ್ಮೂರಿನ ಪಟ್ಟವನ್ನು ರುಕ್ಮ ಬಲ್ಲಾಳ ಕಬಳಿಸಲು ಮುಂದಾದಾಗ ಮಮ್ಮಾಲಿ ಪಟೇಲ್ ಅದನ್ನು ಉಳಿಸಿದ್ದರು. ಮಮ್ಮಾಲಿ ಪಟೇಲರು ಎಣ್ಮೂರಿನಿಂದ 15 ಕಿ.ಮೀ. ದೂರವಿರುವ ಕಡಬದ ಮಸೀದಿಗೆ ಶುಕ್ರವಾರದ ನಮಾಝ್‌ಗೆ ಹೋಗುತ್ತಿದ್ದರು. ಎಣ್ಮೂರು ಬೀಡಿನ ಗೌರವವನ್ನು ಉಳಿಸಿದ್ದ ನೆನಪಿಗೆ ಮತ್ತು 15 ಕಿ.ಮೀ.ದೂರದ ಕಡಬದ ಮಸೀದಿಗೆ ನಡೆದುಕೊಂಡು ಹೋಗುವ ಬದಲು ಎಣ್ಮೂರಿನಲ್ಲೊಂದು ಮಸೀದಿ ಕಟ್ಟಿ ನಮಾಜ್ ಮಾಡು ಎಂದು ಗುರು ದೇರಣ್ಣ ಬಲ್ಲಾಳರು ತನ್ನ ಶಿಷ್ಯ ಮಮ್ಮಾಲಿ ಪಟೇಲರಿಗೆ ಸೂಚಿಸಿದರು. ಅದರಂತೆ ಮಮ್ಮಾಲಿ ಪಟೇಲ್ ಎಣ್ಮೂರಿನಲ್ಲೇ ಮಸೀದಿಯೊಂದನ್ನು ಕಟ್ಟಿಸಿದರು. ಈ ಎಣ್ಮೂರು–ಐವತ್ತೊಕ್ಲು ಜುಮಾ ಮಸೀದಿಗೆ ಸುಮಾರು 400 ವರ್ಷಗಳ ಇತಿಹಾಸವಿದೆ. ಈ ಮಸೀದಿಯು ಕ್ರಿ.ಶ.1600ರಿಂದ 1800ರವರೆಗೆ ಅಂದರೆ 200 ವರ್ಷಗಳ ಕಾಲ ಮಮ್ಮಾಲಿ ಪಟೇಲ್ ಮತ್ತವರ ವಂಶಸ್ಥರ ಆಡಳಿತಕ್ಕೊಳಪಟ್ಟಿತ್ತು. 1800 ರಿಂದ 1972ರವರೆಗೆ ಈ ಮಸೀದಿಯನ್ನು ಐವತ್ತೊಕ್ಲು ಪಟೇಲ್ ಮನೆತನದ ಮೊಕ್ತೇಸರರು ನೋಡಿಕೊಳ್ಳುತ್ತಿದ್ದರು. ಮಮ್ಮಾಲಿ ಪಟೇಲರ ವಂಶಸ್ಥರೇ ಆಗಿದ್ದ ಮಮ್ಮಾಲಿ ಪಟೇಲ್ ಎಂಬ ಹೆಸರಿನ ಮತ್ತೋರ್ವ ಮಮ್ಮಾಲಿ ಪಟೇಲ್ ಈ ಮಸೀದಿಯ ಕೊನೆಯ ಮೊಕ್ತೇಸರರಾಗಿರು. ಆ ಬಳಿಕ ಈ ಮಸೀದಿಯ ನಿರ್ವಹಣೆಗೆ ಆಡಳಿತ ಕಮಿಟಿಯನ್ನು ರಚಿಸಲಾಗಿತ್ತು.

ಕ್ರಿ.ಶ. 1800ರವರೆಗೂ ಎಣ್ಮೂರು ಪ್ರದೇಶ ರಾಜರ ಆಡಳಿತದಲ್ಲಿತ್ತು. ಆ ನಂತರ ಅಧಿಕಾರಕ್ಕೆ ಬಂದ ಬ್ರಿಟಿಷರು ರಾಜರ ಆಡಳಿತದ ಪ್ರದೇಶವನ್ನು ಗ್ರಾಮಗಳಾಗಿ ವಿಂಗಡಿಸಿ ಗ್ರಾಮಕ್ಕೊಬ್ಬ ಪಟೇಲರು, ಶ್ಯಾನುಭಾಗ, ಉಗ್ರಾಣಿಗಳನ್ನು ನೇಮಿಸಿ ಆಡಳಿತ ನಡೆಸುತ್ತಿದ್ದರು. 1977ರರಲ್ಲಿ ಕರ್ನಾಟಕ ರಾಜ್ಯ ಸರಕಾರವು ಈ ಎಲ್ಲಾ ಹುದ್ದೆಗಳನ್ನು ರದ್ದುಪಡಿಸಿ ಗ್ರಾಮಕರಣಿಕರನ್ನು ನೇಮಿಸಿತ್ತು.

ಸಾವಿರಾರು ಎಕರೆ ಭೂಮಿಯನ್ನು ಹೊಂದಿದ್ದ ಈ ಐವತ್ತೊಕ್ಲು ಮನೆತನವು ಪ್ರಧಾನಿ ಇಂದಿರಾ ಗಾಂಧಿಯ ಭೂ

ಮಸೂದೆ ಕಾಯ್ದೆ ಜಾರಿಗೊಂಡಾಗ ಸಾಕಷ್ಟು ಭೂಮಿಯನ್ನು ಕಳೆದುಕೊಂಡಿತ್ತು. ಕಾಕತಾಳೀಯ ಎಂಬಂತೆ ಆವಾಗ ಇದ್ದುದು ಕೂಡ ಮಮ್ಮಾಲಿ ಪಟೇಲರ ವಂಶಸ್ಥರಾಗಿದ್ದ ಮತ್ತೊಬ್ಬ ಮಮ್ಮಾಲಿ ಪಟೇಲ್ ಎಂಬವರು.

ಈ ಮಮ್ಮಾಲಿ ಪಟೇಲ್ 1897ರಲ್ಲಿ ಐವತ್ತೊಕ್ಲು ಕುಂಞಿಪಳ್ಳಿ-ಬೀಪಾತುಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ಅದಲ್ಲದೆ ಅಹ್ಮದ್ ಪಟೇಲ್, ಶೇಖಬ್ಬ ಯಾನೆ ಪುತ್ತು ಪಟೇಲ್ ಎಂಬ ಸಹೋದರರು ಕೂಡ ಮಮ್ಮಾಲಿ ಪಟೇಲರಿಗಿದ್ದರು. ಬಾಲ್ಯದಲ್ಲೇ ಮಮ್ಮಾಲಿ ಪಟೇಲ್ ಬಹಳ ಧೈರ್ಯಶಾಲಿ. ಎಂತಹ ಸಮಸ್ಯೆಯನ್ನೂ ಕ್ಲಿಷ್ಟಕರವಾಗಿ ಪರಿಹರಿಸಬಲ್ಲ ಚಾಣ್ಮೆ ಇತ್ತು. ತಾತ-ಮುತ್ತಾತರಂತೆ ಮಮ್ಮಾಲಿ ಪಟೇಲ್ ಪರಿಸರದಲ್ಲಿ ರಾಜನಾಗಿಯೇ ಮೆರೆದರು. ಐವತ್ತೊಕ್ಲು ಚಾವಡಿ ಅಥವಾ ಐವತ್ತೊಕ್ಲು ಬೀಡು ಸುತ್ತಮುತ್ತಲಿನ ಜನರ ಗೌರವಕ್ಕೆ ಪಾತ್ರವಾಗಿತ್ತು.

ಊರಲ್ಲಿ ಅಥವಾ ಪರಿಸರದಲ್ಲಿ ಏನಾದರು ಸಮಸ್ಯೆ ಎದುರಾದಾಗ ಎಣ್ಮೂರಿನ ಐವತ್ತೊಕ್ಲು ಬೀಡಿಗೆ ಬಂದು ಮಮ್ಮಾಲಿ ಪಟೇಲರ ಬಳಿ ದೂರು ನೀಡುತ್ತಿದ್ದರು. ಮಮ್ಮಾಲಿ ಪಟೇಲರ ಮುಂದೆ ಯಾರೂ ಕೂಡ ಕುಳಿತುಕೊಂಡದ್ದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಪ್ರಜಾಪ್ರಭುತ್ವ ಸರಕಾರ ಬಂದು ರಾಜರ ಆಡಳಿತ ಕೊನೆಗೊಂಡರೂ ಕೂಡ ಐವತ್ತೊಕ್ಲು ಬೀಡಿನ ಗೌರವಕ್ಕೆ ಕಿಂಚಿತ್ತೂ ಚ್ಯುತಿ ಬಾರಲಿಲ್ಲ. ಕಾರ್ಯನಿಮಿತ್ತ ಅವರ ಬಳಿ ಬಂದ ಯಾವೊಬ್ಬ ಸರಕಾರಿ ಅಧಿಕಾರಿ ಕೂಡ ಕೂತ ಉದಾಹರಣೆ ಇಲ್ಲ ಎಂದು ಅವರ ಕುಟುಂಬಸ್ಥರು ಹೇಳುತ್ತಾರೆ.

ಮುತ್ತಾತರಂತೆ ಮಮ್ಮಾಲಿ ಪಟೇಲ್ ರಾಜಗಾಂಭೀರ್ಯವನ್ನು ಉಳಿಸಿಕೊಂಡಿದ್ದರು. ತನ್ನ ಬಳಿ ಅಹವಾಲು ತೋಡಿಕೊಂಡು ಬಂದವರ ಸಮಸ್ಯೆ ಆಲಿಸಿ ನಿಷ್ಪಕ್ಷಪಾತದಿಂದ ಕೂಡಿದ ತೀರ್ಪು ನೀಡುತ್ತಿದ್ದರು. ಎಲ್ಲರನ್ನೂ ಸಮಾನರಾಗಿ ಕಾಣುವ ಅವರು ಧಾರ್ಮಿಕ ಮತ್ತು ಸಾಮಾಜಿಕ ರಂಗದಲ್ಲೂ ತೊಡಗಿಸಿಕೊಂಡಿದ್ದರು.

ಎಣ್ಮೂರು ಮಸೀದಿಯ ಸಮೀಪದಲ್ಲೇ ಇರುವ ಮದ್ರಸದಲ್ಲಿ ಎಲ್ಲಾ ಧರ್ಮದವರಿಗೂ ಮಧ್ಯಾಹ್ನದ ಗಂಜಿ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಅದಕ್ಕೆ ಬೇಕಾದಷ್ಟು ಅಕ್ಕಿಯನ್ನು ಎಣ್ಮೂರು ಐವತ್ತೊಕ್ಲು ಬೀಡಿನಿಂದಲೇ ಸರಬರಾಜು ಆಗುತ್ತಿತ್ತು. ಅಕ್ಕಪಕ್ಕದ ಊರಿನಲ್ಲಿ ಮಸೀದಿ, ದರ್ಗಾ, ಚರ್ಚ್, ದೇವಸ್ಥಾನ, ದೈವಸ್ಥಾನಗಳ ಕಾರ್ಯಕ್ರಮಗಳಿಗೆ ಐವತ್ತೊಕ್ಲು ಬೀಡಿನಿಂದ ಒಬ್ಬರನ್ನು ಮೆರವಣಿಗೆಯಲ್ಲಿ ಕರೆದೊಯ್ದು ಹೋಗುವ ಪದ್ಧತಿ ಇತ್ತು. ಬಹುಷಃ ಒಂದು ರಾಜಮನೆತನಕ್ಕೆ ಇಂತಹ ಗೌರವ ಸಿಗುತ್ತಿದ್ದ ವ್ಯವಸ್ಥೆ ತುಳುನಾಡಿನ ಬೇರೆಲ್ಲೂ ಇಲ್ಲ ಎನ್ನಬಹುದು.

1925ರಲ್ಲಿ ಎಣ್ಮೂರು-ಐವತ್ತೊಕ್ಲು ಬೀಡು ಮನೆಯಲ್ಲಿ ಅಗ್ನಿ ಅನಾಹುತ ಸಂಭವಿಸಿತು. ಇದರಿಂದ ಅಮೂಲ್ಯ ಸೊತ್ತುಗಳಲ್ಲದೆ ದಾಖಲೆಪತ್ರಗಳು ಕೂಡ ನಾಶವಾಗಿದ್ದು ವಿಪರ್ಯಾಸ. ಬಳಿಕ ಬೀಡಿನ ಮನೆ ಬಿಟ್ಟು ಚಾವಡಿಯಲ್ಲಿ ಮತ್ತೊಂದು ಮನೆ ನಿರ್ಮಿಸಿ ವಾಸಿಸತೊಡಗಿದರು. ಎಣ್ಮೂರು-ಐವತ್ತೊಕ್ಲು ಬೀಡಿನ ಮನೆ ಕೇವಲ ಪಟೇಲರ ಮನೆಯಲ್ಲ. ಅದೊಂದು ಸತ್ಯ ಪ್ರಮಾಣ ಮಾಡುವ ಸ್ಥಳವೂ ಹೌದು. ಅಲ್ಲಿ ಸುಳ್ಳು ಹೇಳಿದರೆ ಪ್ರಾಣಾಪಾಯದಿಂದ ಪಾರಾಗಿ ಬರುವ ಸಾಧ್ಯತೆ ಇಲ್ಲ ಎಂಬ ನಂಬಿಕೆ ಸಾರ್ವತ್ರಿಕವಾಗಿತ್ತು. ಹಾಗಾಗಿಯೇ ಅಲ್ಲಿ ಹಿಂದೂ ಮುಸ್ಲಿಮರು ಸೌಹಾರ್ದತೆಯಿಂದ ಈಗಲೂ ಬದುಕುತ್ತಿದ್ದಾರೆ.

ಮಮ್ಮಾಲಿ ಪಟೇಲ್ ಅವರ ಪತ್ನಿ ಉಮ್ಮಾಲಿಮ್ಮ ಕೂಡ ಪ್ರತಿಷ್ಠಿತ ಮನೆತನದವರು. ಈ ದಂಪತಿಯ ಮಕ್ಕಳಾದ ಆಸಿಯಮ್ಮ, ಅಹ್ಮದ್, ಕುಂಞಿಪಳ್ಳಿ, ಅಬ್ದುಲ್ ರಹ್ಮಾನ್ (ಪುತ್ತು ಪಟೇಲ್) ಅಬ್ದುಲ್ ಖಾದರ್, ಹಸೈನಾರ್ ಹೀಗೆ ಎಲ್ಲರೂ ಕೂಡ "ಮಮ್ಮಾಲಿ ಪಟೇಲ್" ಮನೆತನದ ಹಿರಿಮೆ ಉಳಿಸಿಕೊಂಡು ಬಂದಿರುವುದಕ್ಕೆ ಸಮಾಜದಲ್ಲಿ ಅವರಿಗೆ ಈಗಲೂ ಸಿಗುತ್ತಿರುವ ಗೌರವ ಸಾಕ್ಷಿಯಾಗಿದೆ. ಕುಂಞಿಪಳ್ಳಿ ಸುಳ್ಯದಲ್ಲಿ ಮತ್ತು ಅಬ್ದುಲ್ ಖಾದರ್ ಪುತ್ತೂರಿನಲ್ಲಿ ಪ್ರಸಿದ್ಧ ನ್ಯಾಯವಾದಿಗಳಾಗಿದ್ದಾರೆ.

ಸುಮಾರು 400 ವರ್ಷಗಳ ಹಿಂದೆ ಮುತ್ತಾತರಿಂದ ಸ್ಥಾಪಿಸಲ್ಪಟ್ಟಿದ್ದ ಎಣ್ಮೂರು-ಐವತ್ತೊಕ್ಲು ಮಸೀದಿಯನ್ನು ಮಮ್ಮಾಲಿ ಪಟೇಲರ ಮಕ್ಕಳು 1983ರಲ್ಲಿ ವಕ್ಫ್ ಮಾಡಿ ಮಸೀದಿಯ ಆಡಳಿತ ಕಮಿಟಿಗೆ ಒಪ್ಪಿಸಿದರು. ಅಲ್ಲದೆ ಐವತ್ತೊಕ್ಲು ಕುಟುಂಬದ ಹಿರಿಯರಾದ ಹಜ್ಜುಮ್ಮ, ಕುಂಞಿಲಿಮಮ್ಮ ಕೂಡ ತೋಟಮಜಲಿನ ಅಡಿಕೆ ತೋಟವನ್ನು ಮಸೀದಿಗೆ ಬಿಟ್ಟುಕೊಟ್ಟಿದ್ದಾರೆ.

ಸುಮಾರು 75 ವರ್ಷಗಳ ಕಾಲ ಬದುಕಿದ್ದ, ರಾಜನಾಗಿ ಮೆರೆದಿದ್ದ ಮಮ್ಮಾಲಿ ಪಟೇಲ್ 1972ರಲ್ಲಿ ಪತ್ನಿ ಮತ್ತು 6 ಮಕ್ಕಳನ್ನು ಬಿಟ್ಟು ಇಹಲೋಕ ತ್ಯಜಿಸಿದರು.

# ಮಂಗಳೂರಿನ ಪ್ರಮುಖ ವರ್ತಕ

# ಬಿ. ಮುಹಿಯ್ಯುದ್ದೀನ್ (ಮೊಯ್ದಿನ್) ಹಾಜಿ



ಮಂಗಳೂರಿನ ಬೋಳಾರ ಚೈಯಬ್ಬ–ಪಾಚುಮ್ಮ ದಂಪತಿಯ ಪುತ್ರನಾಗಿ 1881ರಲ್ಲಿ ಬೋಳಾರದಲ್ಲಿ ಹುಟ್ಟಿದ ಬಿ. ಮುಹಿಯ್ಯುದ್ದೀನ್ (ಮೊಯ್ದಿನ್) ಹಾಜಿ ಬ್ಯಾರಿ ಸಮುದಾಯದ ಪ್ರಮುಖ ವರ್ತಕರಲ್ಲಿ ಒಬ್ಬರು. ಮೊಯ್ದಿನ್ ಹಾಜಿಗೆ ಅಷ್ಟೇನೂ ಅಕ್ಷರಜ್ಞಾನವಿರಲಿಲ್ಲ. ಅಗರ್ಭ ಶ್ರೀಮಂತರೂ ಅಲ್ಲ. ಆದರೆ, ತನ್ನ ಚಾಕುಚಕ್ಯತೆಯಿಂದ ವ್ಯಾಪಾರ–ಉದ್ಯಮದಲ್ಲಿ ಯಶಸ್ಸು ಸಾಧಿಸಿದರು. ಅಷ್ಟೇ ಅಲ್ಲ ಮಂಗಳೂರಿನ ಪ್ರಮುಖ ವರ್ತಕರಾಗಿ ಗಮನ ಸೆಳೆದರು. ಹಂತ ಹಂತವಾಗಿ ಉದ್ಯಮದಲ್ಲಿ ಮುನ್ನಡೆ ಸಾಧಿಸಿದ್ದ ಅವರು ಆ ಕಾಲದಲ್ಲೇ ಸುಮಾರು 20ಕ್ಕೂ ಅಧಿಕ (ಮಂಜಿ) ಹಡಗುಗಳನ್ನು ಹೊಂದಿದ್ದರು. ಅಷ್ಟೇ ಅಲ್ಲ ಮಂಗಳೂರಿನಿಂದ ಮುಂಬೈ, ಲಕ್ಷದ್ವೀಪ ಹಾಗೂ ಅಫ್ಘಾನಿಸ್ತಾನ ಸಹಿತ ಬೇರೆ ಬೇರೆ ರಾಷ್ಟ್ರಗಳಿಗೆ ಸರಕು–ಸಾಮಗ್ರಿಗಳನ್ನು ರಫ್ತು ಮಾಡುತ್ತಿದ್ದರು. ಅಲ್ಲಿನ ಸಾಮಗ್ರಿಗಳನ್ನು ಆಮದು ಮಾಡಿಸಿಕೊಳ್ಳುವ ಮೂಲಕ ಪ್ರಮುಖ ವರ್ತಕರಾಗಿ ಗಮನ ಸೆಳೆದಿದ್ದರು.

ಬೋಳಾರದಲ್ಲಿ ಹುಟ್ಟಿದರೂ ಕೂಡ ಅವರ ಹೆತ್ತವರು ಮಂಗಳೂರಿನ ಬಂದರ್‌ಗೆ ಸ್ಥಳಾಂತರಗೊಂಡಿದ್ದರು. ಹಾಗಾಗಿ ಮೊಯ್ದಿನ್ ಹಾಜಿಯ ಕರ್ಮಭೂಮಿ ಬಂದರ್ ಆಗಿತ್ತು. ಅಂದರೆ ಬಂದರ್‌ನಲ್ಲೇ ತನ್ನ ವ್ಯಾಪಾರ ವೃದ್ಧಿಸಿಕೊಂಡರು. ಮಂಗಳೂರು ಹೊರವಲಯದ ತಣ್ಣೀರುಬಾವಿಯ ಬೀಪಾತುಮ್ಮ ಅವರನ್ನು ಮೊಯ್ದಿನ್ ಹಾಜಿ ಮದುವೆಯಾದರು. ಮೊದಲ ಪತ್ನಿಯ ನಿಧನರಾದ ಬಳಿಕ ಮೂಲತಃ ಮಂಜೇಶ್ವರ ಸಮೀಪದ ಉದ್ಯಾವರದ ಮರಿಯಮ್ಮ ಅವರನ್ನು ಮದುವೆಯಾದರು. ಹಾಗೇ ದ್ವೀಪ ಪ್ರದೇಶವಾದ ಬೆಂಗರೆಯಲ್ಲಿ ನೆಲೆಸಿದರು. ಮೊದಲ ಪತ್ನಿಗೆ ಇಬ್ಬರು ಮಕ್ಕಳಿದ್ದರೆ, ಎರಡನೆ ಪತ್ನಿಯಲ್ಲಿ ಏಳು ಮಕ್ಕಳಿದ್ದರು. ಇಬ್ಬರು ಪತ್ನಿಯರಲ್ಲಿ ಹುಟ್ಟಿದ ಒಂಭತ್ತು ಮಕ್ಕಳ ಪೈಕಿ ಬಿ.ಎಂ. ಹಸನ್ ಹಾಜಿ, ಬಿ. ಅಹ್ಮದ್ ಹಾಜಿ ಮುಹಿಯ್ಯುದ್ದೀನ್, ಬಿ. ಅಬ್ದುಲ್ ಖಾದರ್ ಹಾಜಿ ಪ್ರಮುಖರಾಗಿದ್ದಾರೆ. ಈ ಮೂವರು ಬೇರೆ ಬೇರೆ ಕ್ಷೇತ್ರದಲ್ಲಿ ಉತ್ತಮ ಸಾಧನೆಗೈದಿದ್ದಾರೆ.

ಮೊಯ್ದಿನ್ ಹಾಜಿ ಪ್ರಮುಖ ವರ್ತಕರು ಮತ್ತು ಅಗರ್ಭ ಶ್ರೀಮಂತರಾಗಿದ್ದರೂ ಕೂಡ ಯಾವುದೇ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡವರಲ್ಲ. ಆದರೆ ಸಾಮಾಜಿಕ ಕಳಕಳಿ ಇತ್ತು. ಕೊಡುಗೈದಾನಿಯಾಗಿದ್ದರು. ತನಗೆ ಹೆಚ್ಚೇನೂ ವಿದ್ಯೆ ಇಲ್ಲದಿದ್ದರೂ ಕೂಡ ಇತರರು ವಿದ್ಯೆ ಕಲಿಯಲು ಪ್ರೋತ್ಸಾಹ ನೀಡುತ್ತಿದ್ದರು. ಸಮಸ್ಯೆ ಹೇಳಿಕೊಂಡು ಬಂದವರಿಗೆ ಕೈಲಾದ ಸಹಾಯ ಮಾಡುತ್ತಿದ್ದರು. ಬಂದರ್, ಕಂದುಕದಲ್ಲಿ ಜಮೀನು, ಕಟ್ಟಡ ಹೊಂದಿದ್ದರು.

ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದು ಸ್ವಪರಿಶ್ರಮದಿಂದ ವ್ಯಾಪಾರ–ಉದ್ಯಮದಲ್ಲಿ ನಿರೀಕ್ಷೆಗೂ ಮೀರಿ ಯಶಸ್ಸು ಸಾಧಿಸಿದ್ದ ಮೊಯ್ದಿನ್ ಹಾಜಿ ಅವರು ಸದಾ ಶ್ವೇತವಸ್ತ್ರಧಾರಿಯಾಗಿದ್ದರು. ಬಿಳಿಗಡ್ಡ ಸಹಿತ ಆಕರ್ಷಕ ದೇಹ ಹೊಂದಿದ್ದರು. ಸದಾ ತಲೆಎತ್ತಿ ನಡೆಯುವ ಅವರ ನಡಿಗೆಯೇ ಅವರ ಬಗ್ಗೆ ಇತರರಿಗೆ ಗೌರವ ಹುಟ್ಟಿಸುತ್ತಿತ್ತು ಎಂಬ ಮಾತು ಅವರ ಒಡನಾಡಿಗಳಿಂದ ಕೇಳಿ ಬರುತ್ತಿದೆ.

ಸುಮಾರು 86 ವರ್ಷಗಳ ಕಾಲ ಬಾಳಿ ಬದುಕಿದ್ದ ಅವರು ಉದ್ಯಮದಲ್ಲಿ ಸಾಧಿಸಿದ್ದ ಯಶಸ್ಸು ಇತರರಿಗೆ ಮಾದರಿ ಮತ್ತು ಪ್ರೇರಣೆಯಾಗಿತ್ತು. 1967ರಲ್ಲಿ ಅವರು ಇಹಲೋಕ ತ್ಯಜಿಸಿದರು.



## ಪ್ರಮುಖ ವರ್ತಕ

## ಹಾಜಿ ಕೆ. ಅಬ್ದುಲ್ ಖಾದರ್ ಬಾವಾ ಮಂಗಳೂರು

ಮಂಗಳೂರಿನ ಬಂದರ್ ಸಮೀಪದ ಕಂದಕ್ ಬಾವಾ ಅವರ ಪುತ್ರನಾಗಿ 1900ರಲ್ಲಿ ಹುಟ್ಟಿ ಬೆಳೆದ ಅಬ್ದುಲ್ ಖಾದರ್ ಬಾವಾ ಪ್ರಮುಖ ವರ್ತಕರಾಗಿ ಖ್ಯಾತಿ ಪಡೆಯಬಹುದು ಎಂದು ಯಾರೂ ನಿರೀಕ್ಷಿಸಿರಲಿಲ್ಲ.

ಯಾಕೆಂದರೆ ಮಧ್ಯಮ ವರ್ಗದ ಸುಸಂಸ್ಕೃತ ಕುಟುಂಬದಲ್ಲಿ ಹುಟ್ಟಿ ಅಂದಿನ ಮೆಟ್ರಿಕ್ಯುಲೇಶನ್ ತೇರ್ಗಡೆ ಹೊಂದಿದ ಅವರು ಐದು ವರ್ಷಗಳ ಕಾಲ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡಿದರು. ಆವಾಗಲೇ ಅವರು ಇನ್ನೊಬ್ಬರ ಕೈಕೆಳಗೆ ದುಡಿಯುವ ಬದಲು ತಾನು ದೊಡ್ಡ ಉದ್ಯಮಿಯಾಗಬೇಕು ಮತ್ತು ನೂರಾರು ಮಂದಿಗೆ ಕೆಲಸ ಕೊಡಬೇಕು ಎಂಬ ಕನಸು ಕಂಡರು. ಅದಕ್ಕಾಗಿ ಖಾಸಗಿ ಸಂಸ್ಥೆಯ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ ಅವರು 1925ರಲ್ಲಿ ಬಂದರ್ ಗೋಳಿಕಟ್ಟೆ ಬಝಾರ್‌ನಲ್ಲಿ ಪಿ. ಹುಸೈನಬ್ಬ ಎಂಬವರ ಪಾಲುದಾರಿಕೆಯಿಂದಿಗೆ ಗೋಣಿಚೀಲ ವ್ಯಾಪಾರ ಆರಂಭಿಸಿದರು. ಅದು ವೃದ್ಧಿಸುತ್ತಲೇ ಒಣಮೀನು ವ್ಯಾಪಾರಕ್ಕೆ ಕೈ ಹಾಕಿದರು. ಅತ್ತ ಬೈಕಂಪಾಡಿಯಿಂದ ಕಾರವಾರದವರೆಗೆ ಮತ್ತು ಇತ್ತ ಕೇರಳದ ಕಣ್ಣೂರುವರೆಗೆ ಒಣಮೀನು ವ್ಯಾಪಾರದಲ್ಲಿ ತೊಡಗಿಸಿಕೊಂಡರು. ವ್ಯಾಪಾರ ಕೈ ಹಿಡಿಯುತ್ತಲೇ ಗೂಡ್ಸ್‌ಶೆಡ್‌ನಲ್ಲಿ ಗೋದಾಮು ತೆರೆದರು. ಅದರೊಂದಿಗೆ ಮೀನಿನ ಎಣ್ಣೆ. ಮೀನಿನ ಉತ್ಪನ್ನ, ಮೀನಿನ ಗೊಬ್ಬರ, ಪ್ರಾಣಿಗಳ ಎಲುಬಿನಿಂದ ತಯಾರಿಸಿದ ಹುಡಿಯನ್ನು ಸಾವಯವ ಗೊಬ್ಬರವಾಗಿ ಬಳಕೆ, ಕರಕುಶಲ ವಸ್ತು, ಚಾಹುಡಿ, ಕಾಫಿಹುಡಿ, ಏಲಕ್ಕಿ, ಅರಸಿನ ಹುಡಿ, ಒಣಶೂಂಠಿ, ತೆಂಗಿನ ಎಣ್ಣೆ, ನೆಲಕಡಲೆ, ಸೀಗೆಕಾಯಿ ಹುಡಿ, ಕರಿಮೆಣಸು, ಕಾಫಿ ಎಸ್ಟೇಟ್‌ಗಳಿಗೆ ಬಳಸುವ ಕೀಟನಾಶಕ ಕಚ್ಚಾ ಪದಾರ್ಥ, ಮರಗೆಣಸು ಹೀಗೆ ಹತ್ತ ಹಲವು ಉದ್ಯಮಗಳಲ್ಲಿ ತೊಡಗಿಸಿಕೊಂಡರು. ಶ್ರೀಲಂಕಾ, ಹೋಲಾಂಡ್, ವೆಸ್ಟ್ ಜರ್ಮನಿ, ಇಟಲಿ, ಗಲ್ಫ್ ರಾಷ್ಟ್ರಗಳೊಂದಿಗೆ ಆಹಾರ ಸಹಿತ ಸರಕು ಸಾಗಣೆಯ ಆಮದು-ರಫ್ತು ವ್ಯವಹಾರದಲ್ಲಿ ಪಳಗಿದರು. ಅದಕ್ಕೆ ಪೂರಕವಾಗಿ ಹಡಗುಗಳನ್ನು ಖರೀದಿಸಿದ್ದರು.

"ಮುಬಾರಕ್ ಟೀ" ಎಂಬ ಹೆಸರಿನ ಟ್ರೇಡ್ ಮಾರ್ಕ್‌ನೊಂದಿಗೆ ಚಾಹುಡಿ ವ್ಯಾಪಾರ ಆರಂಭಿಸಿದ ಅವರು ಕಾಫಿಹುಡಿ ವ್ಯವಹಾರದಲ್ಲೂ ಕೈಯಾಡಿಸಿದರು. ಪ್ರತಿನಿತ್ಯ ಕನಿಷ್ಟ 300ಕ್ಕೂ ಅಧಿಕ ಮಹಿಳಾ ಕಾರ್ಮಿಕರು ಕಾಫಿ ಹುಡಿ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದರು. ಈ ಮಧ್ಯೆ ಮರದ ಮಿಲ್ ಮತ್ತು ಮಂಜುಗಡ್ಡೆ ಸ್ಥಾವರವನ್ನು ಕೂಡ ಸ್ಥಾಪಿಸಿದರು.

ಮುಟ್ಟಿದ್ದೆಲ್ಲವೂ ಚಿನ್ನ ಎಂಬಂತೆ ಅವರು ವ್ಯಾಪಾರ-ಉದ್ಯಮದಲ್ಲಿ ನಿರೀಕ್ಷೆಗೂ ಮೀರಿ ಬೆಳೆದರಲ್ಲದೆ ಮಂಗಳೂರಿನ ಪ್ರಮುಖ ವರ್ತಕರಾಗಿ ಗುರುತಿಸಿಕೊಂಡರು. ಮಧ್ಯಮ ವರ್ಗದ ಕುಟುಂಬದ ಒಬ್ಬ ಸಾಮಾನ್ಯ ವ್ಯಕ್ತಿ ಸ್ವಪರಿಶ್ರಮದಿಂದ ಪ್ರಮುಖ ವರ್ತಕರಾಗಿ ಬೆಳೆಯಲು ಅವರ ಅವಿರತ ಶ್ರಮವೇ ಕಾರಣ ಎಂದು ಅವರ ಕುಟುಂಬಸ್ಥರು ಅಭಿಪ್ರಾಯಪಡುತ್ತಾರೆ. ಕಾಯಕವೇ ಕೈಲಾಸ ಎಂಬಂತೆ ಉದ್ಯಮದ ಬೆಳವಣಿಗೆಗಾಗಿ ಹಗಲಿರುಳು ಶ್ರಮಿಸಿದರು. ಅಷ್ಟೇ ಅಲ್ಲ ತನ್ನ ಕುಟುಂಬದ ಎಲ್ಲರಿಗೂ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟು ಅವರ ಆರ್ಥಿಕವಾಗಿ ಪುನಶ್ಚೇತನಗೊಳ್ಳುವಂತೆ ಮಾಡಿದರು. ಕುಟುಂಬದ ಯಾವೊಬ್ಬ ಸದಸ್ಯನೂ ಉದ್ಯೋಗವಿಲ್ಲದೆ ಕಾಲಕಳೆಯದಂತೆ ನೋಡಿಕೊಂಡರು.

1930ರಲ್ಲಿ ಹಡಗಿನ ಮೂಲಕ ಮಂಗಳೂರಿನಿಂದ ಹಜ್ ಯಾತ್ರೆ ಹೊರಟ ಅವರು ಜೆದ್ದಾದಿಂದ ಮಕ್ಕಾಕ್ಕೆ ಒಂಟೆ ಮೂಲಕ ಪ್ರಯಾಣಿಸಿ ಗಮನ ಸೆಳೆದರು. ಆರು ತಿಂಗಳ ಬಳಿಕ ಹಜ್ ಯಾತ್ರೆಯಿಂದ ಮರಳಿದರು. ಪರೋಪಕಾರಿಯಾಗಿದ್ದ ಅವರು ಸಮಾಜಕ್ಕೆ, ಸಮುದಾಯಕ್ಕೆ ಏನಾದರೊಂದು ಕೊಡುಗೆ ನೀಡಬೇಕು ಎಂದು ಸದಾ ಆಶಿಸುತ್ತಿದ್ದರು. ಹಾಗೆ ಹಲವು ಮಸೀದಿ, ಮದ್ರಸಗಳ ನಿರ್ಮಾಣ, ಪುನ ನಿರ್ಮಾಣಕ್ಕೆ ಸಹಾಯ ನೀಡಿದರು. ಬಡಕುಟುಂಬಗಳ ಹೆಣ್ಮಕ್ಕಳ ಮದುವೆ, ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ ಕೊಡುಗೈ ದಾನಿಯಾದರು.

ಮಂಗಳೂರಿನ ಪಾಂಡೇಶ್ವರ ಮತ್ತು ರೊಝಾರಿಯೋದಲ್ಲಿ ಎರಡು ಬಂಗಲೆಯನ್ನು ಖರೀದಿಸಿದರು. ಅದಲ್ಲದೆ ಮಂಗಳೂರಿನ ಬಂದರ್, ಜೆಪ್ಪು, ಗೂಡ್ಸ್‌ಶೆಡ್, ಬೋಳಾರ ಮತ್ತಿತರ ಕಡೆ ಜಮೀನು, ಕಟ್ಟಡಗಳನ್ನು ಹೊಂದಿದ್ದರು.

ಮೂಲತಃ ಕೇರಳದ ತಲಶ್ಶೇರಿಯ ಕಂಡನಗತ್ ಕಲಂದನ್-ಬೀಫಾತಿಮಾ ದಂಪತಿಯ ಪುತ್ರಿ ಹಲೀಮಾ ಅವರನ್ನು

ವಿವಾಹವಾಗಿದ್ದ ಅಬ್ದುಲ್ ಖಾದರ್ ಬಾವಾ ಅವರಿಗೆ ನಾಲ್ಕು ಮಂದಿ ಪುತ್ರರು ಮತ್ತು ಒಬ್ಬರು ಪುತ್ರಿಯಿದ್ದರು. 1947ರಲ್ಲಿ ಅವರ ತೀರಾ ಆರೋಗ್ಯ ಹದಗೆಟ್ಟಿತ್ತು. ಆದಾಗ್ಯೂ ಅವರು ವ್ಯಾಪಾರ–ವಹಿವಾಟು ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸಿದರು. ತೀರಾ ಅಸಾಧ್ಯ ಎಂದು ಮನವರಿಕೆಯಾಗುತ್ತಲೇ ಮಕ್ಕಳಿಗೆ ವ್ಯಾಪಾರದ ಬಗ್ಗೆ ಮಾಹಿತಿ, ತರಬೇತಿ ನೀಡಿದರು. ಸುಮಾರು 8 ವರ್ಷಗಳ ಕಾಲ ಅವರ ಆರೋಗ್ಯ ಹದಗೆಟ್ಟಿತ್ತು. 1955ರ ಫೆಬ್ರವರಿ 15ರಂದು ಅಂದರೆ ತನ್ನ 55ರ ಹರೆಯದಲ್ಲಿ ಅವರು ನಿಧನರಾದರು. ಆ ಬಳಿಕ ಅವರ ಮಕ್ಕಳಾದ ಕೆ. ಮೊಯ್ದಿನ್ ಬಾವಾ, ಕೆ. ಖಾಲಿದ್ ಬಾವಾ, ಕೆ. ಹಂಝ ಬಾವಾ. ಕೆ. ಕಾಸಿಮ್ ಬಾವಾ ಅವರು ತಂದೆ ಸ್ಥಾಪಿಸಿದ್ದ ಉದ್ಯಮನ್ನು ಮುಂದುವರಿಸಿದರು. ಅಷ್ಟೇ ಅಲ್ಲ, 1960ರಲ್ಲಿ ತಂದೆಯ ನೆನಪಿಗಾಗಿ "ಬಾವಾ ಟೈಲ್ಸ್" ಎಂಬ ಹೆಸರಿನ ಹೆಂಚಿನ ಕಾರ್ಖಾನೆಯನ್ನೂ ಸ್ಥಾಪಿಸಿದರು. ಇದು ಬ್ಯಾರಿ ಸಮುದಾಯದವರು ಸ್ಥಾಪಿಸಿದ ಪ್ರಪ್ರಥಮ ಹೆಂಚಿನ ಕಾರ್ಖಾನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹೀಗೆ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದು ಉದ್ಯಮಿಯಾಗಬೇಕು ಎಂಬ ಕನಸು ಕಂಡು ತನ್ನ 25ರ ಹರೆಯದಲ್ಲಿ ವ್ಯಾಪಾರ–ಉದ್ಯಮದಲ್ಲಿ ತೊಡಗಿಸಿಕೊಂಡು ಅತ್ಯಲ್ಪ ಅವಧಿಯಲ್ಲಿ ಮಂಗಳೂರಿನ ಪ್ರಮುಖ ವರ್ತಕರಲ್ಲಿ ಒಬ್ಬರಾಗಿ ಅವರು ಮೆರೆದರು.

## ಮಂಗಳೂರಿನ ಪ್ರಮುಖ ವರ್ತಕ ದಿಲ್ ದಲ್ಲಾಳ್ ಮಮ್ಮುಂಞಾಕ



ಕಾಸರಗೋಡು ಜಿಲ್ಲೆಯ ಮಂಜೇಶ್ವರದ ಸೈಯದ್ ಅಲಿಯ ಪುತ್ರನಾಗಿ 1912ರಲ್ಲಿ ಶ್ರೀಮಂತ ಕುಟುಂಬದಲ್ಲಿ ಜನಿಸಿದ ಎಂ. ಮುಹಮ್ಮದ್ ಯಾನೆ ಮಮ್ಮುಂಞಿ ಮಂಗಳೂರಿನ ಬಂದರ್‌ನಲ್ಲಿ ಪ್ರಮುಖ ವರ್ತಕರಾಗಿ ಖ್ಯಾತರಾದವರು. ಲಕ್ಷದ್ವೀಪ, ಸಿಲೋನ್ (ಶ್ರೀಲಂಕಾ), ಗಲ್ಫ್ ರಾಷ್ಟ್ರಗಳಲ್ಲಿ ಅವರು ವ್ಯಾಪಾರ-ವಹಿವಾಟು ನಡೆಸುತ್ತಿದ್ದರು. ಸರಕು ಸಾಮಗ್ರಿಗಳನ್ನು ಶೇಖರಿಸಿಡಲು ಬಂದರ್‌ನಲ್ಲಿ ಅವರದ್ದೊಂದು ದೊಡ್ಡ ಬಂಡಸಾಲೆಯೇ ಇತ್ತು.

ಆ ಕಾಲದ 10ನೆ ತರಗತಿ ಕಲಿತ ಅವರಿಗೆ ಸರಕಾರಿ ಉದ್ಯೋಗಕ್ಕೆ ಸೇರ್ಪಡೆಗೊಳ್ಳುವ ಎಲ್ಲಾ ಅವಕಾಶಗಳೂ ಇತ್ತು. ಆದರೆ ಅವರು ಅತ್ತ ಆಸಕ್ತಿ ವಹಿಸದೆ ತನ್ನ ತಂದೆಯಂತೆ ವ್ಯಾಪಾರ-ವಹಿವಾಟಿನಲ್ಲಿ ಮುಂದುವರಿದರು. ಅವರಿಗೆ ಇಂಗ್ಲಿಷ್ ಭಾಷೆಯ ಮೇಲೆ ತುಂಬಾ ಹಿಡಿತವಿತ್ತು. ಅದು ಕೂಡ ಬ್ರಿಟಿಷ್ ಸರಕಾರದ ಅಧಿಕಾರಿಗಳ ಜೊತೆ ವ್ಯವಹರಿಸಲು ಅವರಿಗೆ ಸಹಕಾರಿಯಾಗಿತ್ತು. ವ್ಯವಹಾರ ನಿಮಿತ್ತ ಲಕ್ಷದ್ವೀಪ ಮತ್ತು ಶ್ರೀಲಂಕಾಕ್ಕೆ ಆಗಾಗ ತೆರಳುತ್ತಿದ್ದರು. ಅಲ್ಲಿನ ಭಾಷೆಯನ್ನೂ ಕಲಿತು ಅವರ ಪ್ರೀತಿಯನ್ನು ಸಂಪಾದಿಸಿದ್ದರು.

ಮಂಜೇಶ್ವರದಲ್ಲಿ ಹುಟ್ಟಿ ಬೆಳೆದು ಮಂಗಳೂರಿನಲ್ಲಿ ವ್ಯಾಪಾರ-ವಹಿವಾಟು ನಡೆಸುತ್ತಿದ್ದ ಅವರು ಪಣಂಬೂರು ಸಮೀಪದ ತಣ್ಣೀರುಬಾವಿಯ ಬೀಫಾತಿಮಾ ಅವರನ್ನು ಮದುವೆಯಾಗಿದ್ದರು ಮತ್ತು ತಣ್ಣೀರುಬಾವಿಯಲ್ಲೇ ಮನೆ ಮಾಡಿಕೊಂಡಿದ್ದರು. ಆದರೆ ವ್ಯಾಪಾರ-ವಹಿವಾಟಿನ ನಿಟ್ಟಿನಲ್ಲಿ ಮಂಗಳೂರಿನ ಬಜಿಲಕೇರಿಯ ಸಂಬಂಧಿಕರ ಮನೆಯಲ್ಲಿ ದಿನದೂಡುತ್ತಿದ್ದ ಅವರು ವಾರಕ್ಕೊಮ್ಮೆ ತಣ್ಣೀರುಬಾವಿಯಲ್ಲಿರುವ ಮನೆಗೆ ತೆರಳುತ್ತಿದ್ದರು.

ಹೆಸರು ಮುಹಮ್ಮದ್ ಆಗಿದ್ದರೂ ಅವರನ್ನು ಬಾಲ್ಯದಲ್ಲಿ ಎಲ್ಲರೂ ಮಮ್ಮುಂಞಿ ಎಂದು ಎಲ್ಲರೂ ಕರೆಯುತ್ತಿದ್ದರು. ಆದರೆ ವ್ಯಾಪಾರ-ವಹಿವಾಟಿನಲ್ಲಿ ಅವರ ಕಾರುಬಾರು ಕಂಡ ಜನರು ಅವರನ್ನು ದಿಲ್‌ದಾರ್ ಮಮ್ಮುಂಞಾಕ ಎಂದೇ ಕರೆಯುತ್ತಿದ್ದರು.

ಸಪೂರ ದೇಹದ ಅವರು ಸದಾ ಶ್ವೇತಧಾರಿಯಾಗಿದ್ದರು. ಹೆಚ್ಚೇನು ಮಾತನಾಡುತ್ತಿರಲಿಲ್ಲ. ಮಾತನಾಡಿದರೆ ಅದಕ್ಕೊಂದು ತೂಕವಿತ್ತು. ಎಂತಹವರನ್ನೂ ತನ್ನ ಮಾತಿನಲ್ಲೇ ಮಣಿಸುತ್ತಿದ್ದರು. ತಣ್ಣೀರುಬಾವಿಯ ಮನೆಗೆ ವಾರಕ್ಕೊಮ್ಮೆ ಬರುತ್ತಿದ್ದರೂ ಕೂಡ ಅವರಿಗೆ ವಿಶ್ರಾಂತಿ ಎಂಬುದಿರಲಿಲ್ಲ. ಜನರು ಒಂದಲ್ಲೊಂದು ಸಮಸ್ಯೆ ಹೇಳಿಕೊಂಡು ಅವರ ಬಳಿಗೆ ಬರುತ್ತಿದ್ದರು. ಕೊಡುಗೈ ದಾನಿಯಾಗಿದ್ದ ಅವರು ಬಡಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದರು. ರಾಜಿ ಪಂಚಾಯತಿಗೆಯ ಮೂಲಕ ಊರಿಡೀ ಪ್ರಸಿದ್ಧರಾಗಿದ್ದರು ಎಂದು ಅವರ ಪುತ್ರ, ಕಲಾವಿದ ಇಸ್ಮಾಯೀಲ್ ತಣ್ಣೀರುಬಾವಿ ಹೇಳುತ್ತಾರೆ.

ಬಂದರ್‌ನ ಮಸೀದಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಅವರು ಕೇವಲ ತನ್ನ 45ರ ಹರೆಯದಲ್ಲಿ ಪತ್ನಿ ಮತ್ತು ಐದು ಗಂಡು ಹಾಗೂ ಐದು ಹೆಣ್ಣು ಮಕ್ಕಳನ್ನು 1957ರಲ್ಲಿ ಬಿಟ್ಟಗಲಿದರು.

# ಪ್ರಖ್ಯಾತ ಕಾರ್ಮಿಕ ನೇತಾರ: ಸಿ.ಕುಂಞಿಪಕ್ಕಿ ಹಾಜಿ ಮಂಗಳೂರು



ಎತ್ತರವೂ ಅಲ್ಲ, ಗಿಡ್ಡವೂ ಅಲ್ಲದ ದೇಹ, ಬಿಳಿ ಡಬಲ್ ವೇಷ್ಟಿ, ತುಂಬು ತೋಳಿನ ಬಿಳಿ ಅಂಗಿ. ಅಂಗಿಯ ಮೇಲೊಂದು ಕಪ್ಪು ಕೋಟು. ಚರ್ಮದ ಬೂಟು. ಬಂಗಾರದ ಬಣ್ಣದ ಫ್ರೇಮಿನ ಕನ್ನಡಕ. ತನ್ನ ವೇಷ್ಟಿಯ ಕೆಳಗಿನ ತುದಿಯನ್ನು ಕೈಯಲ್ಲಿ ಹಿಡಿದುಕೊಂಡು ರಾಜ ಠೀವಿಯಲ್ಲಿ ಮಂಗಳೂರಿನ ಬೀದಿಯಲ್ಲಿ ನಡೆದುಕೊಂಡು ಬರುತ್ತಿದ್ದರೆ, ಎಂತಹವರೂ ಒಮ್ಮೆ ಎದ್ದು ನಿಲ್ಲಲೇ ಬೇಕು, ಕೈ ಎತ್ತಿ ಸಲಾಮ್ ಹೇಳಲೇ ಬೇಕು. ಅಂತಹ ವ್ಯಕ್ತಿತ್ವ. ಅಷ್ಟೊಂದು ಗಾಂಭೀರ್ಯ. ಅವರು ನಡೆಯುವಾಗ ಬೂಟಿನಿಂದ ಏಳುವ ಟಕ್... ಟಕ್.... ಶಬ್ದವು ಸುತ್ತಮುತ್ತಲ ಎಲ್ಲರಿಗೂ ಅವರ ಬರುವಿಕೆಯನ್ನು ಸೂಚಿಸುತ್ತಿತ್ತು. ಅಂತಹ ರಾಜ ಹೆಜ್ಜೆ. ಅವರು ಬೇರೆ ಯಾರೂ ಅಲ್ಲ, ಈ ಜಿಲ್ಲೆ ಕಂಡ ಪ್ರಖ್ಯಾತ ಕಾರ್ಮಿಕ ನೇತಾರ ಸಿ. ಕುಂಞಿ ಪಕ್ಕಿ ಹಾಜಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಬ್ಯಾರಿ ಮುಖಂಡರು ತಮ್ಮದೇ ಆದ ಕಾರಣಗಳಿಂದ ಎಂದಿಗೂ ಮರೆಯಲಾಗದವರು. ಅನೇಕರು ಧಾರ್ಮಿಕ, ಸಾಮಾಜಿಕ, ಸಂಘಟಕ, ಶೈಕ್ಷಣಿಕ, ವಾಣಿಜ್ಯ, ಉದ್ಯಮ, ರಾಜಕೀಯ, ಆರ್ಥಿಕ ಕ್ಷೇತ್ರದಲ್ಲಿ ಅಪೂರ್ವ ಸೇವೆ, ಸಾಧನೆ ಮಾಡಿದವರಾಗಿದ್ದಾರೆ. ಆದರೆ "ಕಾರ್ಮಿಕ ಕ್ಷೇತ್ರ"ದಲ್ಲಿ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಬದುಕನ್ನು ಸವೆಸಿದ ಬ್ಯಾರಿ ಮಹನೀಯರ ಪೈಕಿ ಸಿ. ಕುಂಞಿಪಕ್ಕಿ ಹಾಜಿ ಮೊದಲಿಗರಾಗಿದ್ದಾರೆ.

1960ರಲ್ಲಿ ಮಂಗಳೂರು ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ವಾಣಿಜ್ಯ ಕೇಂದ್ರವಾಗಿತ್ತು. ಮಂಗಳೂರಿನ ಹಳೆ ಬಂದರು ಪ್ರದೇಶ ವಾಣಿಜ್ಯ ಚಟುವಟಿಕೆಗಳ ಕೇಂದ್ರ ಬಿಂಧುವಾಗಿತ್ತು. ಸಹಸ್ರಾರು ಕಾರ್ಮಿಕರು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಹೆಂಚಿನ ಕಾರ್ಖಾನೆಗೆ ಮಂಗಳೂರು ಪ್ರಸಿದ್ದವಾಗಿತ್ತು. ಮೀನುಗಾರಿಕೆ ಇಲ್ಲಿನ ಪ್ರಮುಖ ಉದ್ಯೋಗವಾಗಿತ್ತು. ಆಮದು ರಫ್ತಿನ ವ್ಯವಹಾರವೂ ಭರದಿಂದ ಸಾಗುತ್ತಿತ್ತು. ಬಂಡವಾಳ ಶಾಹಿಗಳು ಕಾರ್ಮಿಕರನ್ನು ಶೋಷಿಸುತ್ತಿದ್ದರು. ಸಂಘಟನಾ ಶಕ್ತಿ ಇಲ್ಲದ ಕಾರ್ಮಿಕರು ಜೀತದಾಳುಗಳಂತೆ ದುಡಿಯುತ್ತಿದ್ದರು. ಆಗ ಇಲ್ಲಿದ್ದ ಒಂದು ಅನಿಷ್ಠ ಪದ್ದತಿ ಎಂದರೆ "ಮೂಪ ಪದ್ಧತಿ". ಒಂದು ಗುಂಪು ಕಾರ್ಮಿಕರಿಗೆ ಒಬ್ಬ "ಮೂಪ" ಇರುತ್ತಿದ್ದ ಅಥವಾ ಒಬ್ಬನೇ "ಮೂಪ'ನಿಗೆ ಅನೇಕ ಗುಂಪು ಕಾರ್ಮಿಕರಿರುತ್ತಿದ್ದರು. ಕಾರ್ಮಿಕರ ದುಡಿಮೆಯ ನಾಲ್ಕು ಪಾಲನ್ನು ಈ ಮೂಪನಿಗೆ ಕೊಡಬೇಕಾಗಿತ್ತು. ಅಂದರೆ ಹತ್ತು ಕಾರ್ಮಿಕರು ದುಡಿದ ದುಡಿಮೆಯನ್ನು ಹದಿನಾಲ್ಕು ಪಾಲು ಮಾಡಿ ಅದರಲ್ಲಿ ನಾಲ್ಕು ಪಾಲನ್ನು ಈ ಮೂಪ ಕಬಳಿಸುತ್ತಿದ್ದ. ಅದಲ್ಲದೆ ಮಾಲಕರೊಂದಿಗೆ ಕೈಜೋಡಿಸಿ ಈ "ಮೂಪ" ಕೂಲಿ ನಿರ್ಧರಿಸುವಾಗಲೂ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದ್ದ. ಕಾರ್ಮಿಕರನ್ನು ಈ ಶೋಷಣೆಯಿಂದ ಮುಕ್ತಗೊಳಿಸಬೇಕು ಎಂದು ಪಣತೊಟ್ಟ ಸಿ. ಕುಂಞಿ ಪಕ್ಕಿ ಹಾಜಿಯವರು 1962ರಲ್ಲಿ "ಸ್ವತಂತ್ರ ತೊಯ್‌ಲಾಲಿ ಯೂನಿಯನ್" (ಎಸ್‌ಟಿಯು) ಸ್ಥಾಪಿಸಿ ಕಾರ್ಮಿಕರನ್ನು ಸಂಘಟಿಸಿದರು. ಮಂಗಳೂರಿನ ಉದ್ಯಮಿಗಳೆಲ್ಲಾ ಈ ಕಾರ್ಮಿಕ ಸಂಘಟನೆಗೆ ತಿರುಗಿ ಬಿದ್ದರು. ಹೋರಾಟ ಪ್ರಾರಂಭವಾಯಿತು, ಮುಷ್ಕರಗಳು ನಡೆದವು, ಲಾಠಿಚಾರ್ಜ್ ನಡೆಯಿತು. ಸಿ. ಕುಂಞಿಪಕ್ಕಿ ಹಾಜಿಯ ಮೇಲೆ ಹತ್ತಾರು ಪೊಲೀಸ್ ಕೇಸುಗಳು ದಾಖಲಾಯಿತು. ಆದರೂ ಎದೆಗುಂದದೆ ಅವರ ಹೋರಾಟಕ್ಕೆ ವಿಜಯವಾಯಿತು. "ಮೂಪ ಪದ್ಧತಿ" ಕೊನೆಗೊಂಡಿತು. 1964ರಲ್ಲಿ ಇದೊಂದು ಕಾರ್ಮಿಕರ ಐತಿಹಾಸಿಕ ವಿಜಯವಾಗಿತ್ತು.

ಮುಂದಿನ ದಿನಗಳಲ್ಲಿ ಕಾರ್ಮಿಕರಿಗೆ ಬೋನಸ್ ನೀಡಬೇಕು ಎಂಬ ಬೇಡಿಕೆ ಮುಂದಿಡಲಾಯಿತು. ಅಲ್ಲಿಯವರೆಗೂ ಕಾರ್ಮಿಕರಿಗೆ ಮಾತನಾಡಲು ಬಿಡದಿದ್ದ ಉದ್ಯಮಿಗಳೂ ಕೊನೆಗೂ ಕಾರ್ಮಿಕ ಸಂಘಟನೆಯ ಎದುರು ತಲೆಬಾಗಿದರು. ಸಿ. ಕುಂಞಿ ಪಕ್ಕಿ ಹಾಜಿ ಅಧ್ಯಕ್ಷರಾಗಿದ್ದ "ಎಸ್.ಟಿ.ಯು" ಉದ್ಯಮಿಗಳೊಂದಿಗೆ ಐತಿಹಾಸಿಕ ಒಪ್ಪಂದ ಮಾಡಿ "ಬೋನಸ್' ಬದಲು "ಎಕ್ಸ್ ಗ್ರೇಷಿಯ" ಕೊಡಿಸುವುದರ ಮೂಲಕ ಕಾರ್ಮಿಕರ ಬಹುದಿನದ ಕನಸನ್ನು ನನಸಾಗಿಸಿದರು.

1974ರಲ್ಲಿ ಮಂಗಳೂರಿನ ಪುರಭವನದಲ್ಲಿ ಎಸ್‌ಟಿಯು ಕಾರ್ಮಿಕ ಸಂಘಟನೆ ಐಎನ್‌ಟಿಯುಸಿ (ಇಂಟಕ್) ಸಂಘಟನೆಯ ಸಹಯೋಗದೊಂದಿಗೆ ನಡೆಸಿದ ರಾಜ್ಯ ಮಟ್ಟದ ಕಾರ್ಮಿಕ ಸಮಾವೇಶ ಒಂದು ಐತಿಹಾಸಿಕ ಕ್ಷಣವಾಗಿತ್ತು. ಆಗಿನ ಕಾರ್ಮಿಕ ಸಚಿವ ಹೆಚ್. ರಂಗನಾಥ್ ಆ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆನಂತರದ ದಿನಗಳಲ್ಲಿ ಎಸ್‌ಟಿಯು ಸಂಘಟನೆಯನ್ನು ಐಎನ್‌ಟಿಯುಸಿ ಕಾರ್ಮಿಕ ಸಂಘಟನೆಗೆ ಸಂಯೋಜಿಸಲಾಯಿತು.

ಮಂಗಳೂರಿನ ಅಗರ್ಭ ಶ್ರೀಮಂತ ಸಿ.ಮಹ್ಮೂದ್-ಆಶಿಯಮ್ಮ ದಂಪತಿಯ ಪುತ್ರನಾಗಿ 1920ರ ಜನವರಿ 2ರಂದು ಮಂಗಳೂರಿನ ಕಂದುಕದಲ್ಲಿ ಸಿ. ಕುಂಞಿಪಕ್ಕಿ ಹಾಜಿ ಜನಿಸಿದರು. ಅವರಿಗೆ ಬಂಟ್ವಾಳ ತಾಲೂಕಿನ ಅರ್ಲಪದವಿನಲ್ಲಿ 100 ಎಕರೆ ಕೃಷಿ ಭೂಮಿ ಇತ್ತು. ಅದರಲ್ಲಿ ಬೆಳೆದ ಅಕ್ಕಿಯನ್ನು ಮನೆಯಲ್ಲಿ ಶೇಖರಿಸಿಟ್ಟು, ವರ್ಷಪೂರ್ತಿ ತಮ್ಮ ನೆರೆಹೊರೆಯ ಬಡವರಿಗೆ ಇವರು ಉಚಿತವಾಗಿ ಹಂಚುತ್ತಿದ್ದರು. ಅರ್ಲ ಪದವಿನ ತಮ್ಮ ಜಮೀನಿನಲ್ಲೇ ಒಂದುವರೆ ಎಕರೆ ಭೂಮಿಯನ್ನು ವಕ್ಫ್ ಮಾಡಿ ಅದರಲ್ಲಿ ಮಸೀದಿ, ಮದ್ರಸ, ಖಬರಸ್ಥಾನ ಸ್ಥಾಪಿಸಿ ಆ ಮಸೀದಿಯ ಸ್ಥಾಪಕಾಧ್ಯಕ್ಷರಾಗಿ ಕೊನೆಯ ತನಕ ಸೇವೆ ಸಲ್ಲಿಸಿದ್ದರು. ಪೂಂಜಾಲಕಟ್ಟೆ ಮಸೀದಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

1968ರಲ್ಲಿ ಮಂಗಳೂರು ಭೀಕರ ಕೋಮುಗಲಭೆಗೆ ಸಾಕ್ಷಿಯಾಗಿತ್ತು. ಅಪಾರ ಸ್ವತ್ತು ನಷ್ಟವಾಗಿತ್ತು. ಜೀವಹಾನಿಯೂ ಸಂಭವಿಸಿತ್ತು. ಸಂತ್ರಸ್ಥರಿಗೆ ಜಾತಿ ಮತ ಭೇಧವಿಲ್ಲದೆ ಪರಿಹಾರ ನೀಡಲು ಹಾಗೂ ಶಾಂತಿ ಮತ್ತು ಸೌಹಾರ್ದತೆಯನ್ನು ಪುನಃ ಸ್ಥಾಪಿಸಲು 6 ಮಂದಿ "ಫೌಂಡರ್ ಮೆಂಬರ್ಸ್" ಒಳಗೊಂಡ ಒಂದು "ದಿ ಸೆಂಟ್ರಲ್ ಮುಸ್ಲಿಂ ಕಮಿಟಿ" ಸ್ಥಾಪಿಸಲಾಯಿತು. ಈ ಸಮಿತಿಯಲ್ಲಿ ಅಂದಿನ ಪ್ರಖ್ಯಾತ ನ್ಯಾಯವಾದಿಗಳಾದ ಮುಹಮ್ಮದ್ ಕಮಾಲ್, ಎಂ.ಸಿ. ಅಹ್ಮದ್, ಕಾರ್ಮಿಕ ನೇತಾರ ಸಿ. ಕುಂಞಿಪಕ್ಕಿ ಹಾಜಿ, ಶಿಕ್ಷಣ ತಜ್ಞರಾಗಿದ್ದ ಅಬ್ದುಲ್ ರಝಾಕ್ ಹಾಜಿ, ಉದ್ಯಮಿ ಟಿ.ಎ.ಕೆ.ಎ. ಅಸ್ಸಾದಿಯವರೊಂದಿಗೆ ಸಮಿತಿಯ ಸ್ಥಾಪನೆಗೆ ಮೂಲಧನವಾದ ಅಂದಿನ ಹತ್ತು ಸಾವಿರ ರೂಪಾಯಿ ದೇಣಿಗೆ ನೀಡಿದ ಯೆನೆಪೊಯ ಮೊಯಿದಿನ್ ಕುಂಞಿಯವರೂ ಇದ್ದರು. ಸಿ. ಕುಂಞಿಪಕ್ಕಿ ಹಾಜಿಯವರು ಸೆಂಟ್ರಲ್ ಮುಸ್ಲಿಂ ಕಮಿಟಿಯ ಉಪಾಧ್ಯಕ್ಷರಾಗಿ ಬಹಳಷ್ಟು ವರ್ಷ ಸೇವೆ ಸಲ್ಲಿಸಿದ್ದರು. ಬದ್ರಿಯಾ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಸಮಾಜದ ಆಪತ್ಕಾಲದಲ್ಲಿ ಮಧ್ಯ ರಾತ್ರಿಯಲ್ಲಾದರೂ ನಡೆಯುವ ಸಭೆಗೆ ಹೋಗುವ ವಿಶಿಷ್ಟ ವ್ಯಕ್ತಿಯಾಗಿದ್ದರು.

ಅತಿ ಸಣ್ಣ ಪ್ರಾಯದಲ್ಲೆ ಮಂಗಳೂರು ನಗರ ಸಭಾ ಸದಸ್ಯರಾಗಿದ್ದ ಸಿ. ಕುಂಞಿಪಕ್ಕಿಯವರು ರಾಜಕೀಯ ರಂಗದಲ್ಲೂ ಹೆಸರು ಗಳಿಸಿದ್ದರು. ಮುಸ್ಲಿಂ ಲೀಗ್ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಅವರು ಮದ್ರಾಸ್ ರಾಜ್ಯ ಮುಸ್ಲಿಂ ಲೀಗ್‌ನ ಉಪಾಧ್ಯಕ್ಷರಾಗಿದ್ದರು. 1964ರಲ್ಲಿ ಮಂಗಳೂರಿನ ನೆಹರೂ ಮೈದಾನಿನಲ್ಲಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಮುಸ್ಲೀಂ ಲೀಗ್ ಪಕ್ಷದ ರಾಜ್ಯ ಸಮ್ಮೇಳನ ಒಂದು ಐತಿಹಾಸಿಕ ಘಟನೆಯಾಗಿತ್ತು.

ಬಳಿಕ ಕಾಂಗ್ರೆಸ್ ಪಕ್ಷ ಸೇರಿದ ಅವರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರಾಗಿದ್ದರು. ಅವರ ಮತ್ತೊಂದು ವಿಶೇಷತೆ ಎಂದರೆ ರಾಜಿ ಪಂಚಾಯತಿಗೆ. ಜಿಲ್ಲೆಯ ಅನೇಕ ಸಂಕೀರ್ಣ ವಿವಾದಗಳನ್ನು ರಾಜಿ ಪಂಚಾಯಿತಿ ಮೂಲಕ ಸೌಹಾರ್ದಯುತವಾಗಿ ಪರಿಹರಿಸಿದ ಖ್ಯಾತಿಯು ಅವರಿಗೆ ಸಲ್ಲುತ್ತದೆ. ಹೀಗೆ ತನ್ನ ಬದುಕಿನ 86 ವರ್ಷದ ಜೀವಿತಾವಧಿಯಲ್ಲಿ ಸಮುದಾಯ, ಸಮಾಜದ ಏಳಿಗೆಗಾಗಿ ಶ್ರಮಿಸಿದ ಸಿ. ಕುಂಞಿಪಕ್ಕಿ ಹಾಜಿಯವರು 2006ರ ಮೇ 2ರಂದು ಪತ್ನಿ ಬೀಪಾತುಮ್ಮ ಮತ್ತು 5 ಗಂಡು ಹಾಗೂ 4 ಹೆಣ್ಣು ಮಕ್ಕಳನ್ನು ಬಿಟ್ಟಗಲಿದರು.

ಅವರ ಹಿರಿಯ ಮಗ ಹಾಜಿ ಸಿ. ಮುಹಮ್ಮದ್ (ಪುತ್ತುಬಾವ ಹಾಜಿ) ಉದ್ಯಮಿ ಹಾಗೂ ಜನಪ್ರಿಯ ಸಮಾಜ ಸೇವಕರಾಗಿದ್ದು, ಪ್ರಸ್ತುತ "ಮುಸ್ಲಿಂ ಸೆಂಟ್ರಲ್ ಕಮಿಟಿ'ಯ ಉಪಾಧ್ಯಕ್ಷರಾಗಿದ್ದಾರೆ. ಮತ್ತೋರ್ವ ಪುತ್ರ ಹಾಜಿ. ಸಿ.ಎ. ರಹೀಮ್ ಜನಪ್ರಿಯ ಕಾರ್ಮಿಕ ಮತ್ತು ಸಾಮಾಜಿಕ ನೇತಾರರಾಗಿದ್ದು, "ಇಂಟಕ್' ಕಾರ್ಮಿಕ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷರಾಗಿದ್ದು, "ಮಂಗಳೂರು ಮರ್ಚಂಟ್ಸ್ ಅಸೋಸಿಯೇಶನ್"ನ ಸ್ಥಾಪಕಾಧ್ಯಕ್ಷರಾಗಿ, ಈಗ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.

## ಜಾಗೀದಾರಿಕೆ ವಿರುದ್ಧ ಧ್ವನಿ ಎತ್ತಿದ್ದ ಹಾಜಿ ಎಂ.ಕುಂಞಾಮು



ಬಂಟ್ವಾಳ ತಾಲೂಕಿನ ಸಜಿಪ ಗ್ರಾಮದ ಶ್ರೀಮಂತ ಕುಟುಂಬದ ಹಮ್ಮಬ್ಬ–ಐಸಮ್ಮ ದಂಪತಿಯ ಪುತ್ರನಾಗಿ 1880ರಲ್ಲಿ ಹುಟ್ಟಿ ಬೆಳೆದ ಹಾಜಿ ಎಂ.ಕುಂಞಾಮು ತನ್ನ ವ್ಯಾಪಾರವನ್ನು ಮಂಗಳೂರಿನ ಬಂದರ್ ಕಂದಕ್‌ನಲ್ಲಿ ಆರಂಭಿಸಿದರು. ಬಳಿಕ ಅಲ್ಲೇ ನೆಲೆಸತೊಡಗಿದರು.

ಮಂಗಳೂರಿನ ಪ್ರತಿಷ್ಠಿತ "ಪೌನಾರಗ" ಮನೆತನದ ಜಾಗೀದಾರಿಕೆಯ ವಿರುದ್ಧ ಧ್ವನಿ ಎತ್ತಿದವರಲ್ಲಿ ಮೊದಲಿಗರಾಗಿದ್ದ ಅವರು ಆ ಮೂಲಕ ಜನಸಾಮಾನ್ಯರಿಗೆ ತೀರಾ ಹತ್ತಿರವಾದರು. ಅಷ್ಟೇ ಅಲ್ಲ ಕಂದಕದ ಹುಲಿ ಎಂಬ ಖ್ಯಾತಿಗೂ ಪಾತ್ರರಾಗಿದ್ದರು.

ಮಂಗಳೂರನ್ನು ನಡುಗಿಸಿದ 1905ರ ಮಹಾಪ್ಲೇಗ್ ವೇಳೆ ಜನಸೇವೆಗೆ ಇಳಿದು ಜನರ ಪ್ರೀತಿಗೆ ಪಾತ್ರರಾದರು. ಪ್ಲೇಗ್ ರೋಗದ ವೇಳೆ ಕುಂಞಾಮು ಹಾಜಿಯ ಸೇವೆಯನ್ನು ಅಂದಿನ ಜಿಲ್ಲಾಧಿಕಾರಿಯಾಗಿದ್ದ ಅಝೀಝುದ್ದೀನ್ ಅಪಾರವಾಗಿ ಮೆಚ್ಚಿದ್ದರು. 1930ರಲ್ಲಿ ಉಂಟಾದ ಬರಗಾಲದಲ್ಲೂ ಅವರು ಬಡವರಿಗೆ ನೆರವು ನೀಡಿದ್ದರು. 1939ರಲ್ಲಿ ಮಂಗಳೂರಿಗೆ ಬಂದ ಮೈಸೂರಿನ ದಿವಾನ ಸರ್ ಮಿರ್ಜಾ ಇಸ್ಮಾಯೀಲ್‌ರನ್ನು ಬರಮಾಡಿಕೊಂಡ ಪ್ರಮುಖರಲ್ಲಿ ಅವರೂ ಒಬ್ಬರು.


ಮಂಗಳೂರು ನಗರಸಭೆಯ ಕೌನ್ಸಿಲರ್ ಆಗಿದ್ದ ಅವರು ಬೆಂಚ್ ಮೆಜಿಸ್ಟ್ರೇಟ್ ಕೂಡ ಆಗಿದ್ದರು. ಜನಪ್ರಿಯ ವರ್ತಕರೂ ಆಗಿದ್ದರು.

ಗಟ್ಟಿಮುಟ್ಟಾದ ದೇಹ ಹೊಂದಿದ್ದ ಅವರು ಕುಸ್ತಿಪಟುವಾಗಿದ್ದರು. ಅವರ ದೈಹಿಕ ಶಕ್ತಿ ಎಷ್ಟಿತ್ತೆಂದರೆ ಸರ್ಕಸ್‌ವೊಂದರಲ್ಲಿ ಕಬ್ಬಿಣದ ರಾಡ್‌ವೊಂದನ್ನು ಬಗ್ಗಿಸಿ ತೋರಿಸಿದ್ದ ಖ್ಯಾತಿಗೆ ಪಾತ್ರರಾಗಿದ್ದರು.

1924ರಲ್ಲಿ ಸ್ಥಾಪನೆಗೊಂಡ ಮಂಗಳೂರು ಮುಸ್ಲಿಂ ಎಜುಕೇಶನ್ ಸಂಸ್ಥೆಯ (ಬದ್ರಿಯಾ ಶಿಕ್ಷಣ ಸಂಸ್ಥೆ) ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಆಧುನಿಕ ಶಿಕ್ಷಣಕ್ಕೆ ಹೆಚ್ಚು ಒಲವು ತೋರಿ ಮುಸ್ಲಿಂ ಯುವ ಸಮೂಹವನ್ನು ಅದರತ್ತ ಆಕರ್ಷಿಸುವಂತೆ ಮಾಡಿದ್ದ ಅವರು ವಯಸ್ಕರ ಶಿಕ್ಷಣ ಶಾಲೆಯನ್ನೂ ತೆರೆದಿದ್ದರು. ಬಂದರ್‌ನಲ್ಲಿ ಗ್ರಂಥಾಲಯವನ್ನೂ ಸ್ಥಾಪಿಸಿದ್ದರು. ಹಲವು ಕಡೆ ಸನ್ಮಾನಿತರಾಗಿದ್ದ ಅವರು 1905ರಲ್ಲಿ "ದಿ ಬೋರ್ಡಿಂಗ್ ಸೊಸೈಟಿ"ಯ ಸ್ಥಾಪನೆಯಲ್ಲೂ ಮುತುವರ್ಜಿ ವಹಿಸಿದ್ದರು.

1966ರ ನವೆಂಬರ್ 23ರಂದು ಪತ್ನಿ ಫಾತಿಮಾ ಮತ್ತು ಮೂವರು ಹೆಣ್ಮಕ್ಕಳನ್ನು ಬಿಟ್ಟಗಲಿದರು.

# ಸಮಾಜ ಸೇವಕ ಬಿ.ಎಂ. ಹಸನ್ ಹಾಜಿ ಮಂಗಳೂರು



ಮಂಗಳೂರಿನ ಬೋಳಾರದಲ್ಲಿ ಬಿ.ಮುಹಿಯ್ಯುದ್ದೀನ್ (ಮ್ಯೊದಿನ್) ಹಾಜಿ–ಬೀಫಾತಿಮಾ ದಂಪತಿಯ ಪುತ್ರನಾಗಿ 1927ರ ಮೇ 10ರಂದು ಜನಿಸಿದ ಬಿ. ಮುಹಮ್ಮದ್ ಹಸನ್ ಹಾಜಿ ಮಂಗಳೂರಿನಲ್ಲೇ ಇಂಟರ್‌ಮೀಡಿಯೆಟ್ ಶಿಕ್ಷಣ ಪಡೆದರು.

ಅಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಮಂಗಳೂರಿನ ಕಂಕನಾಡಿಯಲ್ಲಿ ನೆಲೆಸಿದ್ದ ಅವರಿಗೆ ಸಹಜವಾಗಿ ಉದ್ಯಮ ಕ್ಷೇತ್ರದಲ್ಲಿ ಆಸಕ್ತಿ ಹುಟ್ಟಿತು. ಹಾಗೇ ಯಶಸ್ವಿ ಉದ್ಯಮಿ, ಸಮಾಜ ಸೇವಕ, ಸಮುದಾಯದ ನಾಯಕರಾಗಿ ಮೆರೆದ ಅವರು ಜೀವನಾನುಭವದಿಂದ ಅಪಾರ ಜ್ಞಾನ ಸಂಪಾದಿಸಿದ್ದರು. ಧರ್ಮದ ಆಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದವರ ಉನ್ನತಿಗಾಗಿ ಶ್ರಮಿಸಿದ್ದ ಅವರಿಗೆ ಬ್ಯಾರಿ, ತುಳು, ಕನ್ನಡ ಭಾಷೆಯಲ್ಲದೆ ಇಂಗ್ಲಿಷ್‌ನಲ್ಲೂ ಹಿಡಿತವಿತ್ತು. ಕಾನೂನು ಜ್ಞಾನವೂ ಇತ್ತು.

1940ರಲ್ಲಿ "ಮೊಹಿಯುದ್ದೀನ್ ಹಾಜಿ ಆ್ಯಂಡ್ ಸನ್ಸ್' ಎಂಬ ಹೆಸರಿನ ಸಂಸ್ಥೆಯನ್ನು ಹುಟ್ಟು ಹಾಕಿದ ಅವರು ಹಂತ ಹಂತವಾಗಿ ಉದ್ಯಮದ ಒಂದೊಂದೇ ಮೆಟ್ಟಿಲು ಏರಿದರು. 1957ರಲ್ಲಿ ಹಳೆ ಮಂಗಳೂರು ಬಂದರಿನಲ್ಲಿ ಕಬ್ಬಿಣದ ಅದಿರಿನ ಬೃಹತ್ ಸಾಗಣೆಯನ್ನು ಈ ಸಂಸ್ಥೆ ನಿರ್ವಹಿಸಿತು. 1950–60ರ ದಶಕದವರೆಗೆ ಹಳೆಯ ಮಂಗಳೂರು ಬಂದರಿನಿಂದ ಬೃಹತ್ ತೈಲ ಸಾಗಣೆಯನ್ನು ತೆರೆದ ರಸ್ತೆಬದಿಯಲ್ಲಿ ಸಡಿಲ ರೂಪದಲ್ಲಿ ನಿರ್ವಹಿಸುವ ಏಕೈಕ ಸಂಸ್ಥೆಯಾಗಿ ಅದು ಮೂಡಿ ಬಂದಿತ್ತು. ಅಲ್ಲದೆ ಹಡಗುಗಳಲ್ಲಿ ಗೋಡಂಬಿ ಮತ್ತಿತರ ಸಾಮಗ್ರಿಗಳ ರಫ್ತಿನಲ್ಲೂ ಈ ಸಂಸ್ಥೆ ಮುಂಚೂಣಿಯ ಸ್ಥಾನ ಪಡೆಯಿತು.

ಹೊಸ ಮಂಗಳೂರು ಬಂದರುನಲ್ಲಿ ಕಂಟೇನರ್ ಹಡಗುಗಳ ನಿರ್ವಹಣೆಯ ಜವಾಬ್ದಾರಿಯನ್ನೂ ಈ ಸಂಸ್ಥೆ ವಹಿಸಿತ್ತು. 1983ರಲ್ಲಿ ಈ ಸಂಸ್ಥೆಯ ಹೆಸರನ್ನು "ಹಸನ್ ಹಾಜಿ ಆ್ಯಂಡ್ ಕೋ" ಎಂದು ಬದಲಾಯಿಸಲಾಯಿತು. ಸುಮಾರು 80 ವರ್ಷಗಳ ಇತಿಹಾಸದೊಂದಿಗೆ ಮಂಗಳೂರು ಶಿಪ್ಪಿಂಗ್ ಉದ್ಯಮದಲ್ಲಿ ಈ ಸಂಸ್ಥೆಯು ಅತ್ಯಂತ ಪ್ರಸಿದ್ಧಿ ಪಡೆದಿರುವುದರ ಹಿಂದೆ ಹಸನ್ ಹಾಜಿಯ ಅಪಾರ ಶ್ರಮವಿತ್ತು.

ಒಂದೇ ದಿನದಲ್ಲಿ ಹೆಚ್ಚಿನ ಪ್ರಮಾಣದ ಕಬ್ಬಿಣವನ್ನು ನಿರ್ವಹಿಸಿದ್ದಕ್ಕಾಗಿ 1998ರಲ್ಲಿ ರಾಜೀವ್ ಗಾಂಧಿ ಸ್ಮಾರಕ ಶಿಪ್ಪಿಂಗ್ ಪ್ರದರ್ಶನ ಪ್ರಶಸ್ತಿ ವಿಜೇತ ಸಂಸ್ಥೆಯಾಗಿಯೂ ಇದು ಹೊರಹೊಮ್ಮಿತು. ದುಬೈ, ಚೀನಾ, ಜರ್ಮನಿ, ಯುಎಸ್‌ಎ, ಹಾಂಗ್‌ಕಾಂಗ್, ಯುರೋಪ್, ಕೊಲ್ಲಿ, ಆಫ್ರಿಕನ್ ದೇಶಗಳಲ್ಲದೆ ನವದೆಹಲಿ. ಚೆನ್ನೈ, ಕಲ್ಲಿಕೋಟೆ ಮುಂಬೈಯಲ್ಲೂ ಈ ಸಂಸ್ಥೆಯ ಕಚೇರಿಗಳಿವೆ.

ಮಂಗಳೂರು ಹಳೆ ಬಂದರ್ ಮತ್ತು ನವಮಂಗಳೂರು ಬಂದರು ಮಂಡಳಿಯ ಟ್ರಸ್ಟಿಯಾಗಿದ್ದ ಅವರು ದ.ಕ.ಜಿಲ್ಲಾ ಕೆನರಾ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಮತ್ತು ಕರ್ನಾಟಕ ರಾಜ್ಯ ಬಂದರು ಮಂಡಳಿಯ ಸಲಹಾ ಸಮಿತಿ ಹಾಗೂ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯ ನೇತೃತ್ವದಲ್ಲಿ ರಚಿಸಲ್ಪಟ್ಟ ಬಂದರು ಒಳನಾಡು ಅಭಿವೃದ್ಧಿ ಮಂಡಳಿಯ ಸಲಹಾ ಸಮಿತಿಯ ಸದಸ್ಯರೂ ಆಗಿದ್ದರು.

ಅವರು ಟ್ರಸ್ಟಿಯಾಗಿದ್ದ ಅವಧಿಯಲ್ಲಿ ಮಂಗಳೂರು ಬಂದರು ಸುವರ್ಣ ಅವಧಿಗೆ ಸಾಕ್ಷಿಯಾಗಿದ್ದವು. ರಫ್ತು ಮತ್ತು ಆಮದಿನಲ್ಲಿ ಬಂದರು ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವಾಗಿ ಗುರುತಿಸಲ್ಪಟ್ಟಿತ್ತು. ಅವರ ಅಪ್ರತಿಮ ಸೇವೆಯನ್ನು ಗುರುತಿಸಿ ಕೇಂದ್ರ ಮತ್ತು ರಾಜ್ಯ ಸರಕಾರವು ಅವರಿಗೆ ವಿವಿಧ ಮಂಡಳಿಗೆ ಸದಸ್ಯರನ್ನಾಗಿ ನೇಮಿಸಿತ್ತು.

ಮಂಗಳೂರಿನ ಬದ್ರಿಯಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದ ಅವರು 1994–98ರ ಅವಧಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮುಸ್ಲಿಮ್ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾಗಿದ್ದರು. ರಾಜಕೀಯದಲ್ಲಿ ಸಕ್ರಿಯರಲ್ಲದಿದ್ದರೂ ಕೂಡ ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದರು.

ಸಭೆ ಸಮಾರಂಭಗಳಲ್ಲಿ ವಿಚಾರಯುಕ್ತ ಮಾತುಗಳನ್ನು ಆಡುವ ಮೂಲಕ ಚಿಂತಕರಾಗಿಯೂ ಗುರುತಿಸಿದ್ದರು. ಅವರ ಭಾಷಣದ ಶೈಲಿ ಕೂಡ ಅಮೋಘವಾಗಿತ್ತು. ಸಮಾಜ, ಸಮುದಾಯದ ಬಗ್ಗೆ ವಿಶೇಷ ಕಾಳಜಿ ಇತ್ತು. ಮಂಗಳೂರು ನಗರಸಭೆಯ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಪತ್ನಿ ಖದೀಜಾ, 7 ಗಂಡು ಮತ್ತು 4 ಹೆಣ್ಣುಮಕ್ಕಳನ್ನು 2004ರ ಅಕ್ಟೋಬರ್ 29ರಂದು ಬಿಟ್ಟಗಲಿದರು. ಅವರ ಮೊಮ್ಮಗ ಮುಹಮ್ಮದ್ ಅಮೀನ್ "ಹಸನ್ ಹಾಜಿ ಆ್ಯಂಡ್ ಕಂಪೆನಿ"ಯ ಪಾಲುದಾರರಾಗಿದ್ದು, ಕೆನರಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

# ಅಸಾಧಾರಣ ವ್ಯಕ್ತಿತ್ವದ ಕೆ.ಎಂ.ಬ್ಯಾರಿ ಬೆಂಗಳೂರು



ಕೆ.ಎಂ. ಬ್ಯಾರಿ ಎಂದೇ ಗುರುತಿಸಲ್ಪಟ್ಟು ಜನಪ್ರಿಯರಾಗಿದ್ದ ಕೆ.ಮುಹಮ್ಮದ್ ಬ್ಯಾರಿ ಅಪರೂಪದ ಆಡಳಿತಗಾರ. ಅವರು ಅತ್ಯಂತ ಸರಳತೆಯ ಮತ್ತು ನ್ಯಾಯಕ್ಕಾಗಿ ಪ್ರಶ್ನಿಸುವ ಗುಣಗಳೊಂದಿಗೆ ಬ್ಯಾರಿ ಸಮುದಾಯಕ್ಕೆ ಪ್ರೋತ್ಸಾಹ ತುಂಬಿದವರು. ಕೊನೆಯ ಉಸಿರಿನವರೆಗೆ ತನ್ನ ನಂಬಿಕೆಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಜೀವನ ನಡೆಸಿದ ಅಸಾಧಾರಣ ಹಾಗೂ ಹೃದಯವಂತಿಕೆಯ ವ್ಯಕ್ತಿಯಾಗಿದ್ದರು.

ಅಂದಿನ ಮದ್ರಾಸ್ ಸರಕಾರದ ಅಧೀನದಲ್ಲಿದ್ದ ಕಾಸರಗೋಡಿನಲ್ಲಿ ವ್ಯಾಪಾರಿ ಅಬ್ದುಲ್ ಖಾದರ್–ಹಲೀಮಾ ದಂಪತಿಯ ಪುತ್ರನಾಗಿ 1916ರ ಡಿಸೆಂಬರ್ 20ರಂದು ಜನಿಸಿದ ಮುಹಮ್ಮದ್ ತಮ್ಮ ಕಾಲಾವಧಿಯಲ್ಲಿ ಬ್ಯಾರಿ ಸಮುದಾಯದಲ್ಲಿ ಅಸಾಮಾನ್ಯವಾಗಿದ್ದ ಶಿಕ್ಷಣವನ್ನು ಉತ್ಸಾಹದಿಂದಲೇ ಪಡೆದರು. ಅಂದಿನ ಮದ್ರಾಸ್‌ನಲ್ಲಿ ಪದವಿ ಮುಗಿಸಿದ ಬಳಿಕ ಸರಕಾರಿ ಸೇವೆಗೆ ಮುಂದಾದರು. ಎರಡನೆ ಮಹಾಯುದ್ಧದ ಸಂದರ್ಭ ಸರಕಾರದ ಕರೆಯ ಮೇರೆಗೆ ನೇರವಾಗಿ ಸೇನೆಗೆ ಸೇರಿಕೊಂಡ ಉತ್ಸಾಹಿ.

1950ರಲ್ಲಿ ಬೆಂಗಳೂರಿನಲ್ಲಿ ನೆಲೆಸಿದ ಪ್ರಪ್ರಥಮ ಬ್ಯಾರಿ ಕುಟುಂಬ ಎಂಬ ಹೆಗ್ಗಳಿಕೆ ಕೆ.ಎಂ.ಬ್ಯಾರಿಯವರದ್ದು. ಉಡುಪಿಯಲ್ಲಿ ತಹಶೀಲ್ದಾರ್ ಆಗಿ, ಹಣಕಾಸು ಇಲಾಖೆಯಲ್ಲಿ ಉಪ ಕಾರ್ಯದರ್ಶಿ ಸಹಿತ ಪ್ರಮುಖ ಹುದ್ದೆಗಳನ್ನು ಅವರು ನಿಭಾಯಿಸಿದರು.

ಕರ್ನಾಟಕದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿದ್ದ ಕರ್ನಾಟಕ ಲಾಟರಿ ವಿಭಾಗದ ಪ್ರಥಮ ನಿರ್ದೇಶಕರಾಗಿ ನೇಮಕಗೊಂಡ ಗೌರವಕ್ಕೂ ಅವರು ಪಾತ್ರರಾಗಿದ್ದಾರೆ.

ನಾಡಿನ ಪ್ರಮುಖ ರಾಜಕಾರಣಿಗಳಾದ ಬಿ.ಡಿ. ಜತ್ತಿ, ರಾಮಕೃಷ್ಣ ಹೆಗಡೆ, ಎಸ್.ಎಂ. ಯಹ್ಯಾ, ಐಪಿಎಸ್ ಅಧಿಕಾರಿ ಬೀರಾ ಮೊಯ್ದೀನ್ ಹಾಗೂ ಶಿಕ್ಷಣ ತಜ್ಞ ಟಿಎಂಎ ಪೈ ಅವರೊಂದಿಗೆ ನಿಕಟವಾಗಿದ್ದರು. ಸುಮಾರು ನಾಲ್ಕು ದಶಕಗಳ ವೃತ್ತಿ ಜೀವನದ ಮೂಲಕ ಅವರು ಉತ್ತಮ ಹೆಸರನ್ನು ಗಳಿಸಿದ್ದರು. ಅವರ ಜತೆ ಕಾರ್ಯನಿರ್ವಹಿಸಿದ್ದ ಬಹುತೇಕ ಅಧಿಕಾರಿಗಳು ಅವರಲ್ಲಿ ಸಮಾಜದ ಏಳಿಗೆಗಾಗಿ ನಿಸ್ವಾರ್ಥ ಮನೋಭಾವದಿಂದ ಸೇವೆ ಸಲ್ಲಿಸುವ ವ್ಯಕ್ತಿತ್ವವನ್ನು ಕಂಡಿದ್ದರು. ಸಾರ್ವಜನಿಕ ಸೇವೆಯಲ್ಲಿ ನೈತಿಕತೆ ಮತ್ತು ಮೌಲ್ಯಗಳನ್ನು ಅವರು ಪ್ರತಿಪಾದಿಸಿದ್ದರು. ಅವರು ಜಾತ್ಯತೀತ ಮನೋಭಾವ, ಸಹನಾಶೀಲತೆ, ಸದೃಢ, ನಿರ್ಣಾಯಕ ಸಮಾಲೋಚಕ, ಚಿಂತನಾಶೀಲ ಮತ್ತು ಕಾರ್ಯಾಧರಿತ ಗುಣಗಳನ್ನು ಹೊಂದಿದ್ದರು ಎಂದು ಸಮಕಾಲೀನ ಮತ್ತು ಕಿರಿಯ ಅಧಿಕಾರಿಗಳು ನೆನಪಿಸಿಕೊಳ್ಳುತ್ತಾರೆ.

ತನ್ನ ಅಧಿಕಾರವನ್ನು ಶೋಷಿತರಿಗೆ ನೆರವಾಗುವ ನಿಟ್ಟಿನಲ್ಲಿ ಬಳಕೆ ಮಾಡಿದ್ದರು. ನಿವೃತ್ತಿಯ ಬಳಿಕ ಅವರು ಬೆಂಗಳೂರಿನಲ್ಲಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಬೆಂಗಳೂರಿನ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್‌ನ ಸ್ಥಾಪಕ ಅಧ್ಯಕ್ಷರಾಗಿದ್ದರು. ಸಮುದಾಯದಲ್ಲಿ ಸಹಭಾಗಿತ್ವವನ್ನು ಉತ್ತೇಜಿಸುವ ದೃಷ್ಟಿಯಿಂದ 1989ರಲ್ಲಿ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ಅವರು ಆರಂಭಿಸಿದ್ದರು.

ಸಾರ್ವಜನಿಕ ವಲಯದಲ್ಲಿ "ಬ್ಯಾರಿ" ಎಂಬುದಾಗಿ ಕರೆಸಿಕೊಂಡ ಪ್ರಮುಖರಲ್ಲಿ ಅವರು ಕೂಡ ಒಬ್ಬರು. ಸಮುದಾಯವು ಅನಕ್ಷರತೆ ಮತ್ತು ಹಿಂದುಳಿಯುವಿಕೆಯ ಸಂಕೋಲೆಯಿಂದ ಮುಕ್ತರಾಗಿ ಮುಖ್ಯವಾಹಿನಿಗೆ ಬರಬೇಕೆಂದು ಬಯಸಿದ್ದರು. ಹೆಜಮಾಡಿ ಮೂಲದ ಹವ್ವಾಬಿ ಅವರನ್ನು ವಿವಾಹವಾಗಿದ್ದ ಅವರು ಮೂವರು ಪುತ್ರರು ಮತ್ತು ನಾಲ್ಕು ಮಂದಿ ಪುತ್ರಿಯರನ್ನು 1991ರ ಜನವರಿ 17ರಂದು ಬಿಟ್ಟಗಲಿದರು.

# ಪ್ರಖ್ಯಾತ ಕ್ರಿಮಿನಲ್ ನ್ಯಾಯವಾದಿ ಯೂಸುಫ್ ಹೈದರ್



ಬಂಟ್ವಾಳ ತಾಲೂಕಿನ ತುಂಬೆಯಲ್ಲಿ ಹೈದರ್–ಬೀಫಾತುಮ್ಮ ದಂಪತಿಯ ಪುತ್ರನಾಗಿ 1922ರ ಫೆಬ್ರವರಿ 8ರಂದು ಜನಿಸಿದ ಯೂಸುಫ್ ಕ್ರಿಮಿನಲ್ ಲಾಯರ್ ಎಂದೇ ಸಮಾಜದಲ್ಲಿ ಗುರುತಿಸಿಕೊಂಡವರು. ಫರಂಗಿಪೇಟೆ ಸಮೀಪದ ಪುದು ಶಾಲೆ ಹಾಗೂ ಮಂಗಳೂರು ಸರಕಾರಿ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಬಳಿಕ ಮದ್ರಾಸ್‌ನ ಕಾನೂನು ಕಾಲೇಜಿನಲ್ಲಿ ಬಿಎ/ ಎಲ್‌ಎಲ್‌ಬಿ ಪದವಿ ಪಡೆದರು.

ತದನಂತರ ಮಂಗಳೂರಿನಲ್ಲಿ ಹಿರಿಯ ನ್ಯಾಯವಾದಿ ಎಲ್‌ಎನ್ ಪೂಜಾರಿ ಅವರ ಬಳಿ ಸುಮಾರು 3 ವರ್ಷಗಳ ಕಾಲ ತರಬೇತಿ ಪಡೆದು ಮಿಲಾಗ್ರಿಸ್ ಬಳಿ ಸ್ವಂತ ಕಚೇರಿ ತೆರೆದರು. ಆರಂಭದಲ್ಲೇ 15ಕ್ಕೂ ಅಧಿಕ ಸಹಾಯಕ ವಕೀಲರನ್ನು ನೇಮಿಸಿದ್ದ ಟಿ.(ತುಂಬೆ) ಯೂಸುಫ್ ತನ್ನ ಹೆಸರಿನೊಂದಿಗೆ ತಂದೆಯ ಹೆಸರನ್ನೂ ಜೋಡಿಸಿದ್ದರು. ಹಾಗಾಗಿ ಅವರನ್ನು ಎಲ್ಲರೂ "ಲಾಯರ್ ಯೂಸುಫ್ ಹೈದರ್" ಎಂದೇ ಗುರುತಿಸುತ್ತಿದ್ದರು.

ಕ್ರಿಮಿನಲ್ ವಕೀಲರಾಗಿದ್ದ ಅವರು ತನ್ನ ಬಳಿ ಬಂದ ಪ್ರಕರಣಗಳ ವಾಸ್ತವಾಂಶವನ್ನು ಮೊದಲು ಅರಿತುಕೊಳ್ಳುತ್ತಾರೆ. ಕಕ್ಷಿದಾರರ ಹೇಳಿಕೆಯಲ್ಲಿ ಸತ್ಯ ಅಡಗಿದೆ ಎಂದು ಮನವರಿಕೆಯಾದರೆ ಎಂತಹ ಬಲಾಢ್ಯರ ವಿರೋಧ ಬಂದರೂ ಕೂಡ ಲೆಕ್ಕಿಸದೆ ವಾದಿಸಿ ನ್ಯಾಯ ಒದಗಿಸಿಕೊಡುತ್ತಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ತಂದೆ ತಿಮ್ಮಪ್ಪ ಹೆಗ್ಗಡೆಗೆ ಸಂಬಂಧಿಸಿದ ಪ್ರಕರಣವನ್ನೂ ಕೈಗೆತ್ತಿಕೊಂಡು ನ್ಯಾಯ ಒದಗಿಸಿಕೊಟ್ಟಿದ್ದ ಯೂಸುಫ್ ಹೈದರ್ ರಾಜ್ಯಾದ್ಯಂತ ಭಾರೀ ಸುದ್ದಿಯಾಗಿದ್ದ ಬಜ್ಪೆ ಸಮೀಪದ ಪಡುಪೆರಾರು ಗ್ರಾಮ ಪಂಚಾಯತ್ ಅಧ್ಯಕ್ಷ ಭಾಸ್ಕರ ಸೇಮಿತ ಕೊಲೆ ಪ್ರಕರಣದಲ್ಲೂ ನ್ಯಾಯ ಒದಗಿಸಿಕೊಟ್ಟಿದ್ದರು. ಈ ಪ್ರಕರಣದಲ್ಲಿ ಒಬ್ಬ ಎಸ್‌ಐ ಮತ್ತು ಮೂವರು ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಕೂಡ ಆರೋಪಿಗಳು ಎಂದು ಗುರುತಿಸಲಾಗಿತ್ತು. ಆದರೆ ತನ್ನ ವಾದದಿಂದ ಪೊಲೀಸರು ಸಹಿತ ಎಲ್ಲಾ ಆರೋಪಿಗಳನ್ನು ದೋಷಮುಕ್ತಿಗೊಳಿಸುವ ಮೂಲಕ ಯೂಸುಫ್ ಹೈದರ್ ಪ್ರಸಿದ್ಧಿಗೆ ಬಂದಿದ್ದರು.

ನೂರಾರು ಕ್ರಿಮಿನಲ್ ಪ್ರಕರಣಗಳನ್ನು ಕೈಗೆತ್ತಿಕೊಂಡಿದ್ದ ಅವರು "ಕ್ರಿಮಿನಲ್ ಲಾಯರ್" ಎಂದು ಎಲ್ಲೆಡೆ ಭಾರೀ ಪ್ರಸಿದ್ಧಿಗೆ ಬಂದಿರುವುದಕ್ಕೆ ಬೆಂಗಳೂರು, ಬೆಳಗಾವಿ, ಗುಲ್ಬರ್ಗ, ತಲಶ್ಶೇರಿ, ಕಣ್ಣೂರು ಭಾಗದ ಜನರೂ ಕೂಡ ಅವರನ್ನು ವಾದ ಮಾಡುವುದಕ್ಕಾಗಿ ಹುಡುಕಿಕೊಂಡು ಬರುತ್ತಿದ್ದುದು ಸಾಕ್ಷಿಯಾಗಿದೆ. ರಾಜ್ಯದ ಪ್ರಮುಖ ರಾಜಕಾರಣಿಗಳು ಕೂಡ ಯೂಸುಫ್ ಹೈದರ್‌ರಿಂದ ಅನೇಕ ಸಲಹೆ ಪಡೆದು ಮುಂದುವರಿಯುತ್ತಿದ್ದರು. ಬೆಳಗ್ಗೆ ಎದ್ದು ಕಚೇರಿಗೆ ಹೊರಟರೆ ರಾತ್ರಿ 12 ಗಂ1ಟೆಯವರೆಗೂ ಪ್ರಕರಣಕ್ಕೆ ಸಂಬಂಧಿಸಿ ವಾದ_ಓದು–ಅಧ್ಯಯನದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅವರಿಗೆ ವಿಶ್ರಾಂತಿ ಎಂಬುದಿರಲಿಲ್ಲ. ಆಕರ್ಷಕ ದೇಹದ ಅವರು ಸದಾ ಬಾಯಲ್ಲಿ ಅಡಕೆ ಜಗಿಯುತ್ತಾ ಇರುತ್ತಿದ್ದರು. ಅವರಿಗೆ ಅಗಾಧ ನೆನಪಿನ ಶಕ್ತಿಯೂ ಇತ್ತು. ಇಂಗ್ಲಿಷ್‌ನಲ್ಲಿ ಸಾಕಷ್ಟು ಹಿಡಿತವಿತ್ತು.

ಯೂಸುಫ್ ಹೈದರ್ ಪ್ರಕರಣ ಕೈಗೆತ್ತಿಕೊಂಡರೆ ಅದರ ಕಥೆ ಮುಗಿಯುತ್ತದೆ, ಅವರು ಒಂದೇ ಒಂದು ಪ್ರಕರಣದಲ್ಲೂ ಸೋಲುಂಡ ಅನುಭವವಿಲ್ಲ ಎಂಬ ಮಾತು ಆ ದಿನಗಳಲ್ಲಿ ಚಾಲ್ತಿಯಲ್ಲಿತ್ತು. ಎಷ್ಟೇ ಕರಾರುವಕ್ಕಾದ ಚಾರ್ಜ್‌ಶೀಟ್ ಸಲ್ಲಿಸಿದರೂ ಕೂಡ ಯೂಸುಫ್ ಹೈದರ್ ಆ ಪ್ರಕರಣ ಕೈಗೆತ್ತಿಕೊಂಡರೆ ಅದು ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ, ಬದಲಾಗಿ ಕೆಲವೇ ತಿಂಗಳಲ್ಲಿ ಬಿದ್ದು ಹೋಗುತ್ತದೆ ಎಂಬ ಮಾತು ಪೊಲೀಸ್ ವಲಯದಲ್ಲೂ ಕೇಳಿ ಬರುತ್ತಿತ್ತು. ಸ್ವತಃ ಪೊಲೀಸರು, ಹಿರಿಯ ವಕೀಲರನ್ನೂ ಮಣಿಸಿದ ಕೀರ್ತಿಯೂ ಅವರಿಗಿತ್ತು.

ಯೂಸುಫ್ ಹೈದರ್ ಸಮಾಜಮುಖಿಯಾಗಿದ್ದರು. ವಕಾಲತ್ತಿನ ಶುಲ್ಕ ಪಾವತಿಸಲು ಸಾಧ್ಯವಿಲ್ಲದವರಿಗೂ ನ್ಯಾಯ ಒದಗಿಸಿ ಕೊಡುತ್ತಿದ್ದರು. ಬಂಟ್ವಾಳ ತಾಲೂಕಿನ ವಳವೂರು ಜುಮಾ ಮಸೀದಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಅಲ್ಲೂ ನ್ಯಾಯಕ್ಕೆ ಆದ್ಯತೆ ನೀಡುತ್ತಿದ್ದರು. ಯಾರಿಗೂ ಅನ್ಯಾಯವಾಗಲು ಬಿಡುತ್ತಿರಲಿಲ್ಲ. ಮಂಗಳೂರು ಬಾರ್ ಅಸೋಸಿಯೇಶನ್‌ನ ಸದಸ್ಯರಾಗಿದ್ದ ಅವರ ಫೋಟೋ ಮಂಗಳೂರು ನ್ಯಾಯಾಲಯದ ಕಟ್ಟಡದಲ್ಲಿ ಈಗಲೂ ರಾರಾಜಿಸುತ್ತಿವೆ. ಕೇಂದ್ರದ ಮಾಜಿ ಸಚಿವ ಜನಾರ್ದನ ಪೂಜಾರಿ ಕೂಡ ತನ್ನ ಆತ್ಮಕಥೆಯಲ್ಲಿ ಯೂಸುಫ್ ಹೈದರ್‌ರ ಖ್ಯಾತಿಯ ಬಗ್ಗೆ ಉಲ್ಲೇಖಿಸುತ್ತಾರೆ.

ಅವರು ಎಂದೂ ಕೂಡ ಹಣದ ಹಿಂದೆ ಬೀಳಿರಲಿಲ್ಲ. ಹಣದಾಸೆ ಅಥವಾ ಸಂಪತ್ತು ಕೂಡಿಡಬೇಕು ಎಂಬ

ವ್ಯಾಮೋಹವೂ ಅವರಿಗೆ ಇರಲಿಲ್ಲ. ತನ್ನ ಮೇಲೆ ವಿಶ್ವಾಸವಿರಿಸಿ ಬಂದ ಕಕ್ಷಿದಾರರಿಗೆ ಎಂದೂ ಅವರು ಅನ್ಯಾಯ ಎಸಗಿದವರಲ್ಲ. ತನಗೆಂದು ಸ್ವಂತದ್ದೊಂದು ಮನೆಯನ್ನೂ ಅವರು ಕಟ್ಟಿಸಿಕೊಂಡವರಲ್ಲ. ಕೊನೆಯ ಉಸಿರು ಇರುವವರೆಗೂ ಅವರು ಬಾಡಿಗೆ ಮನೆಯಲ್ಲೇ ವಾಸವಾಗಿದ್ದರು. ನ್ಯಾಯಾಧೀಶ ಹುದ್ದೆಯ ಪರೀಕ್ಷೆ ಬರೆಯಲು ಅವರು ಎಲ್ಲಾ ರೀತಿಯ ಸಿದ್ಧತೆ ನಡೆಸಿದ್ದರು. ಆದರೆ ಅನಾರೋಗ್ಯ ಕಾಡಿದ ಕಾರಣ ಅವರು ಆ ಅವಕಾಶದಿಂದ ವಂಚಿತರಾದರು ಎಂದು ಅವರ ಶಿಷ್ಯರಲ್ಲಿ ಒಬ್ಬರಾಗಿದ್ದ ನ್ಯಾಯವಾದಿ ಸಾದುದ್ದೀನ್ ಸಾಲಿಹ್ ಅಭಿಪ್ರಾಯಪಡುತ್ತಾರೆ.

ಮಂಗಳೂರಿನ ಖ್ಯಾತ ಉದ್ಯಮಿ ಮತ್ತು ಧರ್ಮಪಂಡಿತ ಗುಲ್ ಮುಹಮ್ಮದ್ ಎಂಬವರ ಪುತ್ರಿ ನಫೀಸಾ ಅವರನ್ನು ವಿವಾಹವಾಗಿದ್ದ ಯೂಸುಫ್‌ರಿಗೆ ಮಕ್ಕಳಿರಲಿಲ್ಲ. ಸುಮಾರು 30 ವರ್ಷಗಳ ಕಾಲ ಪ್ರಖ್ಯಾತ ಕ್ರಿಮಿನಲ್ ಲಾಯರ್ ಎಂಬ ಹೆಗ್ಗಳಿಕೆಯೊಂದಿಗೆ ಪ್ರಸಿದ್ಧರಾಗಿದ್ದ ಯೂಸುಫ್ ಹೈದರ್ 1975ರ ಸೆಪ್ಟಂಬರ್ 5ರಂದು ನಿಧನರಾದರು.


## ರಾಜಿ ಪಂಚಾಯತಿಗೆಗೆ ಹೆಸರಾಗಿದ್ದ ಸಜಿಪ ಕಾಟು ಬಾವ

ಬಂಟ್ವಾಳ ತಾಲೂಕಿನ ಸಜಿಪ ಗ್ರಾಮದ ಉಂಞಾಕ-ಫಾತಿಮಾ ದಂಪತಿಯ ಪುತ್ರನಾಗಿ 1890ರಲ್ಲಿ ಕಾಟು ಬಾವ ಜನಿಸಿದರು.

ಆ ಕಾಲದಲ್ಲೇ ಅವರ ಮನೆಯು ಅಹವಾಲು ಸಲ್ಲಿಕೆ/ರಾಜಿಪಂಚಾಯತಿಗೆಗೆ ಹೆಸರುವಾಸಿಯಾಗಿತ್ತು. ಆಸುಪಾಸಿನ ನೂರಾರು ಮಂದಿ ದಿನನಿತ್ಯ ಅವರ ಬಳಿ ತೆರಳಿ ದೂರು-ದು:ಖ-ದುಮ್ಮಾನ ಹೇಳುತ್ತಿದ್ದರು. ಎಲ್ಲವನ್ನೂ ಶಾಂತಚಿತ್ತದಿಂದ ಆಲಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ಊರು ಮಾತ್ರವಲ್ಲ ಪರವೂರಿಗೂ ಪಂಚಾಯತಿ ಮಾಡಲು ಹೋಗುತ್ತಿದ್ದರು.

ಜನಪ್ರಿಯ ನಾಯಕರಾಗಿದ್ದ ಅವರು ಸಾಮಾಜಿಕ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಅವರ ಬಳಿ ಬಂದವರು ಮತ್ತೆಂದೂ ಪೊಲೀಸ್ ಠಾಣೆಯ ಮೆಟ್ಟಲು ಹತ್ತಿದ ಉದಾಹರಣೆ ಇಲ್ಲ ಎಂದು ಅವರ ಕುಟುಂಬಸ್ಥರು ಅಭಿಪ್ರಾಯಪಡುತ್ತಾರೆ. ಎಲ್ಲರಿಗೂ ನ್ಯಾಯೋಚಿತ ತೀರ್ಪು ನೀಡುತ್ತಿದ್ದ ಅವರು ಜಾತ್ಯತೀತ ಮನೋಭಾವ ಹೊಂದಿದ್ದರು. ಸಜಿಪ ಜುಮಾ ಮಸೀದಿಯ ಅಧ್ಯಕ್ಷರಾಗಿದ್ದ ಅವರು ಮೂವರು ಪತ್ನಿಯರು ಮತ್ತು 11 ಮಕ್ಕಳನ್ನು 1950ರಲ್ಲಿ ಬಿಟ್ಟಗಲಿದರು.

## ಉಳುವವರಿಗೆ ಒಡೆಯರಾಗಲು ಸಹಕರಿಸಿದ್ದ ಕೆ.ಕೆ. ಅಬ್ದುಲ್ಲ



ಬೆಳ್ತಂಗಡಿ ತಾಲೂಕಿನ ಕರಾಯದಲ್ಲಿ ಅಬೂಬಕ್ಕರ್ ಬ್ಯಾರಿ ಕರಾಯ ಕೊಲ್ಲಿ–ಅವ್ವಮ್ಮ ದಂಪತಿಯ ಪುತ್ರನಾಗಿ 1937ರಲ್ಲಿ ಹುಟ್ಟಿದ ಕೆ.ಕೆ.ಅಬ್ದುಲ್ಲ (ಕರಾಯ ಕೊಲ್ಲಿ) ಕರಾಯ ಕೇವಲ 3ನೇ ತರಗತಿ ಕಲಿತಿದ್ದರೂ ಕೂಡ ಅವರು ಪರಿಸರದಲ್ಲಿ ಪಡೆದ ಖ್ಯಾತಿ ಮಾತ್ರ ಗಮನಾರ್ಹ.

ಕನ್ನಡ, ಹಿಂದಿ, ಇಂಗ್ಲಿಷ್, ತುಳು, ಮಲಯಾಳ, ಬ್ಯಾರಿ, ಕೊಂಕಣಿ ಭಾಷೆಗಳಲ್ಲಿ ಅಪಾರ ಹಿಡಿತವನ್ನು ಅವರು ಹೊಂದಿದ್ದರು. ಓದು ಬರಹ ಅಪರೂಪವಾಗಿದ್ದ ಆ ದಿನಗಳಲ್ಲಿ ಕೋರ್ಟು, ಕಚೇರಿ, ಪೊಲೀಸ್ ಠಾಣೆ–ಕೇಸು ಮುಂತಾದ ಸಮಸ್ಯೆ ಬಂದಾಗ ತಾಲೂಕಿನಾದ್ಯಂತ ಹಲವಾರು ಮಂದಿ ಅರ್ಜಿ ಬರೆಸಲೋ, ಇತರ ಮಾಹಿತಿಗಾಗಿಯೋ ಕೆ.ಕೆ. ಅಬ್ದುಲ್ಲರನ್ನು ಹುಡುಕಿಕೊಂಡು ಬರುವುದು ಸಾಮಾನ್ಯಗಿತ್ತು.

ಅಂತಹ ಚತುರತೆ ಹೊಂದಿದ ಕೆ.ಕೆ.ಅಬ್ದುಲ್ಲ ಕಲೆ, ಸಾಹಿತ್ಯದಲ್ಲೂ ಪಳಗಿದವರಾಗಿದ್ದರು. ಅಕ್ಕ ಪಕ್ಕದ ಊರಿನಲ್ಲಿ ನಡೆಯುತ್ತಿದ್ದ ತಾಳಮದ್ದಳೆ, ಯಕ್ಷಗಾನ ಕೂಟಗಳಲ್ಲಿ ಸ್ವತಃ ಅರ್ಥದಾರಿಯಾಗಿ ಭಾಗವಹಿಸುತ್ತಿದ್ದರು. ಪೌರಾಣಿಕ ಅಥವಾ ಸಾಮಾಜಿಕ ಪ್ರಸಂಗದಲ್ಲಿ ತಮ್ಮ ಅದ್ಭುತವಾದ ಮಾತುಗಳಿಂದ ಆ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಸಹಾಬಿಗಳ ಚರಿತ್ರೆಯನ್ನು ರಾಗ ಸಂಯೋಜಿಸಿ ಹಾಡುತ್ತಿದ್ದ ಕೆ.ಕೆ.ಅಬ್ದುಲ್ಲ ಬೈತ್, ಗಾಯನ, ವಿವಿಧ ರೀತಿಯ ಕೀರ್ತನಾ ಮಾಲೆಗಳ ಪಠಣದ ಹವ್ಯಾಸವನ್ನು ಹೊಂದಿದ್ದರು. ಜಾನಪದ, ತುಳು ಪಾಡ್ದನಗಳ ಬಗ್ಗೆಯೂ ಅವರು ವಿಶೇಷ ಆಸಕ್ತಿಯನ್ನು ಹೊಂದಿದ್ದರು.

ಅಪ್ರತಿಮ ವಾಗ್ಮಿಗಳಾಗಿದ್ದ ಅವರ ಚುನಾವಣಾ ಭಾಷಣವು ಚಿಕ್ಕಮಗಳೂರುವರೆಗೂ ಪಸರಿಸಿತ್ತು. ಹಳೆಗನ್ನಡ, ಸಂಸ್ಕೃತ, ಕುರ್‌ಆನ್‌ನ ಶ್ಲೋಕಗಳೊಂದಿಗೆ, ಚಾಟೂಕ್ತಿ, ವ್ಯಂಗ್ಯೋಕ್ತಿ, ಗಾದೆಗಳಿಂದ ಕೂಡಿದ ಅವರ ನಿರರ್ಗಳ ವಾಗ್ಮಿತೆಗೆ ಶ್ರೋತೃಗಳು ತಲೆದೂಗುತ್ತಿದ್ದರು. ಸ್ವರಚಿತ ಹಾಡುಗಳನ್ನು ರಚಿಸಿ ಚುನಾವಣಾ ಪ್ರಚಾರ ರಂಗೇರಿಸುವ ಕಲೆ ಅವರಿಗೆ ಕರಗತವಾಗಿತ್ತು. ಹಾಗಾಗಿ ಮೂಡಿಗೆರೆ, ಚಿಕ್ಕಮಗಳೂರು ಭಾಗದ ನಾಯಕರು ಒತ್ತಾಯಪೂರ್ವಕವಾಗಿ ಅವರನ್ನು ತಮ್ಮ ಸಭೆಗಳಿಗೆ ಕರೆಸಿಕೊಳ್ಳುತ್ತಿದ್ದರು.


1977ರಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮಾಜಿ ಪ್ರಧಾನಿ ಇಂದಿರಾ ಗಾಂಧಿಯ ಚುನಾವಣಾ ಭಾಷಣವನ್ನು ತುಳುವಿಗೆ ಅನುವಾದ ಮಾಡಿದ ಹಿರಿಮೆ ಅವರದಾಗಿತ್ತು. ಬೆಳ್ತಂಗಡಿ ತಾಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದ ಅವರು ಎಂಭತ್ತರ ದಶಕದಲ್ಲಿ ಕರ್ನಾಟಕ ರಾಜ್ಯ ತೂಕ ಮತ್ತು ಅಳತೆ ಇಲಾಖೆಯ ನಾಮನಿರ್ದೇಶಿತ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

1976ರಲ್ಲಿ ಬಂದ ಕ್ರಾಂತಿಕಾರಿ ಭೂಸುಧಾರಣೆ ಚಳುವಳಿಯ ಅಂಗವಾದ "ಉಳುವವನೇ ಹೊಲದೊಡೆಯ" ಕಾನೂನಿನ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕಿನ ಭೂ ನ್ಯಾಯ ಮಂಡಳಿಯ ಕ್ರಿಯಾಶೀಲ ಸದಸ್ಯರಾಗಿದ್ದರು. ಸುಮಾರು 2 ಅವಧಿ (ಹತ್ತು ವರ್ಷ)ಯಲ್ಲಿ ಕಾರ್ಯನಿರ್ವಹಿಸಿದ್ದ ಅವರು ಬೆಳ್ತಂಗಡಿ ತಾಲೂಕಿನ ಸುಮಾರು 13,000 ಬಡಗೇಣಿದಾರರು ತಮ್ಮ ತಮ್ಮ ಭೂಮಿಯ ಒಡೆಯರಾಗಲು ಕಾರಣಕರ್ತರಾಗಿದ್ದರು. ಇಂದಿಗೂ ಅವರ ಭೂದಾಖಲೆಗಳಲ್ಲಿ ಕೆ.ಕೆ.ಅಬ್ದುಲ್ಲಾರ ಸಹಿಯನ್ನು ಕಾಣಬಹುದಾಗಿದೆ. ರಾತ್ರಿ ವೇಳೆಯಲ್ಲಿ ಲಾಟೀನಿನ ಬೆಳಕಿನಲ್ಲಿ ಸ್ಥಳ ಪರಿಶೀಲನೆಗೆ ಬರುತ್ತಿದ್ದ ಭೂನ್ಯಾಯ ಮಂಡಳಿಯ ಅಂದಿನ ಸದಸ್ಯರ ಕಾರ್ಯತತ್ಪರತೆಯನ್ನು ಹಲವು ಹಿರಿಯರು ಬಲು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಈ ಕಾರಣಕ್ಕಾಗಿ ಭೂ ಮಾಲಕರಿಂದ 2 ಬಾರಿ ಕೆ.ಕೆ ಅಬ್ದುಲ್ಲರ ಹತ್ಯೆಗೆ ಪ್ರಯತ್ನಗಳಾಗಿದ್ದವು. ಒಂದೊಮ್ಮೆ ಗಾಯಗೊಂಡು ಮೂರ್ಛೆ ಹೋದ ಸ್ಥಿತಿಯಲ್ಲಿ ರಸ್ತೆ ಬದಿಯಲ್ಲಿ ಬಿದ್ದಿದ್ದರು. ನಂತರ ಅದು ಭೂಮಾಲಿಕರ ಕೃತ್ಯ ಎಂದು ಬಯಲಾಗಿತ್ತು.

ಇಷ್ಟೆಲ್ಲ ಅಪಾಯಗಳನ್ನು ಹೊತ್ತುಕೊಂಡು ಸಾವಿರಾರು ಎಕ್ರೆ ಭೂ ದಾಖಲೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದ ಕೆ.ಕೆ.ಅಬ್ದುಲ್ಲ ತನಗೆಂದು ಸ್ವಂತ ಆಸ್ತಿಯನ್ನೂ ಸಂಪಾದಿಸಿರಲಿಲ್ಲ.

1993ರ ಮೇ 3ರಂದು ಇಹಲೋಕ ತ್ಯಜಿಸಿದ ಅವರು ಪತ್ನಿ ಮರಿಯಮ್ಮ ಮತ್ತು ಐವರು ಪುತ್ರಿಯರು ಹಾಗೂ ಮೂವರು ಪುತ್ರರಿಗೆ ಬಿಟ್ಟು ಹೋದದ್ದು ಕೇವಲ 19 ಸೆಂಟ್ಸ್ ಜಮೀನಿನಲ್ಲಿರುವ ಮುರುಕಲು ಮನೆಯಾಗಿತ್ತು. ಅದು ಅವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

# ನಿಷ್ಕಳಂಕ ರಾಜಕಾರಣಿ ಕೆ.ಪಿ. ಅಬ್ದುಲ್ಲಾ ಪುತ್ತೂರು



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಆರ್ಯಾಪು ಗ್ರಾಮದ ಕುಂಜೂರು ಪಂಜ ಎಂಬಲ್ಲಿನ ಜಮೀನ್ದಾರ ಸಣ್ಣಪಳ್ಳಿ ಬ್ಯಾರಿ–ಹಲೀಮಾ ದಂಪತಿಯ ಪುತ್ರನಾಗಿ 1933ರ ಡಿಸೆಂಬರ್ 30ರಂದು ಕೆ.ಪಿ. ಅಬ್ದುಲ್ಲಾ ಜನಿಸಿದರು. ಕುಂಜೂರು ಪಂಜದಲ್ಲಿ ಪ್ರಾಥಮಿಕ, ಪುತ್ತೂರು ಬೋರ್ಡ್ ಹೈಸ್ಕೂಲ್‌ನಲ್ಲಿ ಪಿಯುಸಿ, ಮಂಗಳೂರು ಸರಕಾರಿ ಕಾಲೇಜಿನಲ್ಲಿ ಬಿಎ ಪದವಿ ಪಡೆದ ಕೆ.ಪಿ. ಅಬ್ದುಲ್ಲಾ ಮುಂಬೈಯ ಸರಕಾರಿ ಲಾ ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು.

ಆ ಕಾಲದಲ್ಲಿ ಪುತ್ತೂರು, ಬೆಳ್ತಂಗಡಿ, ಸುಳ್ಯ ತಾಲೂಕಿನಲ್ಲೇ ಕಾನೂನು ಪದವಿಯನ್ನು ಗಳಿಸಿ ವಕೀಲ ವೃತ್ತಿ ಆರಂಭಿಸಿದ ಪ್ರಪ್ರಥಮ ಬ್ಯಾರಿ ಎಂಬ ಹೆಗ್ಗಳಿಕೆಗೂ ಕೆ.ಪಿ. ಅಬ್ದುಲ್ಲಾ ಪಾತ್ರರಾಗಿದ್ದಾರೆ. 1963ರಲ್ಲಿ ಪುತ್ತೂರಿನಲ್ಲೇ ಕಚೇರಿ ತೆರೆದು ನ್ಯಾಯವಾದಿಯಾಗಿ ಕರ್ತವ್ಯ ನಿರ್ವಹಿಸಲು ಆರಂಭಿಸಿದ ಅವರು ಸಿವಿಲ್ ಮತ್ತು ಕ್ರಿಮಿನಲ್‌ನಲ್ಲೂ ಪ್ರಖ್ಯಾತರಾದರು. ಜನರೊಡನೆ ಹೆಚ್ಚು ಬೆರೆಯುತ್ತಿದ್ದ ಕಾರಣ ಅವರ ಸಮಸ್ಯೆಗೂ ಸ್ಪಂದಿಸತೊಡಗಿದರು. ಸದ್ದಿಲ್ಲದೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು. ಹಾಗೇ ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡರು. ಕಾಂಗ್ರೆಸ್ ಪಕ್ಷವನ್ನು ಸೇರಿದ ಕೆ.ಪಿ. ಅಬ್ದುಲ್ಲಾ 1975ರಿಂದ 1997ರವರೆಗೆ ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಸುಧೀರ್ಘ ಕಾಲ ಸೇವೆ ಸಲ್ಲಿಸಿದರು. ಆ ಸಂದರ್ಭ ಸಚಿವರಾಗಿದ್ದ ಜನಾರ್ದನ ಪೂಜಾರಿ, ವೀರಪ್ಪ ಮೊಯ್ಲಿ, ಎಸ್‌ಎಂ ಯಹ್ಯಾ, ಶಾಸಕರಾಗಿದ್ದ ಯುಟಿ ಫರೀದ್, ಬಿಎಂ ಇದಿನಬ್ಬ, ಕೆಎಸ್ ಮುಹಮ್ಮದ್ ಮಸೂದ್ ಮತ್ತಿತರ ರಾಜಕಾರಣಿಗಳ ಜೊತೆ ನಿಕಟ ಸಂಪರ್ಕ ಬೆಳೆಸಿದ್ದರು. ಈ ಮಧ್ಯೆ ಎರಡು ಬಾರಿ ಕೆಪಿಸಿಸಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.


1983ರಲ್ಲಿ ಬಂಟ್ವಾಳ ಮತ್ತು 1987ರಲ್ಲಿ ವಿಟ್ಲ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿದ್ದ ಅವರು ಎರಡೂ ಅವಧಿಯಲ್ಲಿ ಅಲ್ಪಮತಗಳ ಅಂತರದಿಂದ ಸೋಲನುಭವಿಸಿದ್ದರು.

ಸಾಮಾಜಿಕ, ರಾಜಕೀಯದ ಜೊತೆಗೆ ಧಾರ್ಮಿಕ ಕ್ಷೇತ್ರದಲ್ಲೂ ಅವರು ಸಕ್ರಿಯರಾಗಿದ್ದರು. ರಾಜಕಾರಣ–ವಕೀಲಗಾರಿಕೆಯ ಸಂದರ್ಭ ಹಲವು ಜಮಾಅತ್‌ಗಳ ಜನರು ತಮ್ಮೊಳಗಿನ ಭಿನ್ನಮತದ ಪರಿಹಾರಕ್ಕೆ ಅವರ ಬಳಿ ತೆರಳಿ ಮಧ್ಯಸ್ಥಿಕೆ ವಹಿಸಲು ವಿನಂತಿಸುವುದಿತ್ತು. ಆವಾಗಲೆಲ್ಲಾ ಅವರು ಅಲ್ಲಿಗೆ ತೆರಳಿ ಸಮಸ್ಯೆಯನ್ನು ಬಗೆಹರಿಸುವುದಿತ್ತು. ಕೆಲವೊಮ್ಮೆ ಆ ಜಮಾಅತ್‌ನ ಸರ್ವ ಸದಸ್ಯರ ಆಗ್ರಹಕ್ಕೆ ಮಣಿದು ಮಸೀದಿಯ ಅಧ್ಯಕ್ಷರಾದ ಉದಾಹರಣೆಯೂ ಇದೆ.

ಅಂದರೆ ಬೈತಡ್ಕ ಜುಮ್ಮಾ ಮಸೀದಿ, ಬನ್ನೂರು ಜುಮಾ ಮಸ್ಜಿದ್, ಸುಳ್ಯ ತಾಲೂಕಿನ ಅಜ್ಜಾವರ ಇರುವಂಬುಳ್ಳ ದರ್ಗಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಸುಮಾರು 40 ವರ್ಷಗಳ ಕಾಲ ವಕೀಲ ವೃತ್ತಿ ಮತ್ತು ಸಾರ್ವಜನಿಕ ಜೀವನ ನಡೆಸಿ ನಿಷ್ಕಳಂಕ ರಾಜಕಾರಣಿ ಎಂದೇ ಗುರುತಿಸಲ್ಪಟ್ಟಿದ್ದ ಅವರು ಪತ್ನಿ ಉಮ್ಮಲಿಮಮ್ಮ ಮತ್ತು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು 2003ರ ಆಗಸ್ಟ್ 6ರಂದು ಅಗಲಿದರು.ಲಿಮಮ್ಮ ಮತ್ತು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು 2003ರ ಆಗಸ್ಟ್ 6ರಂದು ಅಗಲಿದರು.

## ರಾಜಕಾರಣದಲ್ಲಿ ಮಿಂಚಿದ್ದ ಕಲ್ಲಡ್ಕ ಇಸ್ಮಾಯಿಲ್




ಬಂಟ್ವಾಳ ತಾಲೂಕಿನ ಕಲ್ಲಡ್ಕದ ಮೊಯ್ದಿನಬ್ಬ ಯಾನೆ ಮೊಯ್ದಿನ್ ಬ್ಯಾರಿ–ಉಂಞಿಮೋಳು ಯಾನೆ ಇನ್ನಮ್ಮ ದಂಪತಿಯ ನಾಲ್ಕು ಗಂಡು ಮಕ್ಕಳ ಪೈಕಿ ಕಿರಿಯವನಾಗಿ 1938ರಲ್ಲಿ ಹುಟ್ಟಿದ ಮುಹಮ್ಮದ್ ಇಸ್ಮಾಯೀಲ್ ಹೇಳಿಕೊಳ್ಳಲು ಒಬ್ಬ ಸಾಮಾನ್ಯ ಪತ್ರಿಕಾ ಏಜೆಂಟ್. ಜೊತೆಗೆ ಅಂಗಡಿಯೊಂದಿತ್ತು. ಈ ಅಂಗಡಿಯಲ್ಲಿ ಸಿಮೆಂಟ್, ಸಾವಯವ ಗೊಬ್ಬರ, ಕ್ರಿಮಿಕೀಟ ನಾಶಕ ಔಷಧ ಇತ್ಯಾದಿಯನ್ನೂ ಮಾರಾಟ ಮಾಡುತ್ತಿದ್ದರು. ಆದರೆ ತನ್ನ ಸಂಘಟನಾ ಶಕ್ತಿಯಿಂದಾಗಿ ರಾಜಕಾರಣದಲ್ಲಿ ಮಿಂಚಿದ್ದ ಅವರು ಕಲ್ಲಡ್ಕ ಇಸ್ಮಾಯೀಲ್ ಎಂದೇ ಖ್ಯಾತರಾಗಿದ್ದರು.

ಕಾಂಗ್ರೆಸ್‌ನ ಸೇವಾದಳದ ಮೂಲಕ ಸಕ್ರಿಯರಾಗಿದ್ದ ಅವರು ಜಿಲ್ಲೆ–ರಾಜ್ಯ ಮಾತ್ರವಲ್ಲ ರಾಷ್ಟ್ರ ರಾಜಕಾರಣದಲ್ಲೂ ಗುರುತಿಸಲ್ಪಟ್ಟಿದ್ದರು. ಇಂದಿರಾಗಾಂಧಿಯ ಜೊತೆ ಅವರು ನಿಕಟ ಸಂಪರ್ಕ ಹೊಂದಿದ್ದರು ಎಂಬುದಕ್ಕೆ ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ಮಂಗಳೂರಿಗೆ ಬಂದ ವೇಳೆ ತೆರೆದ ಜೀಪಿನಲ್ಲಿ ಕಲ್ಲಡ್ಕಕ್ಕೂ ಆಗಮಿಸಿ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡಿರುವುದೇ ಸಾಕ್ಷಿಯಾಗಿತ್ತು. ಕಲ್ಲಡ್ಕ ಇಸ್ಮಾಯೀಲ್‌ರ ಮನವಿಯ ಮೇರೆಗೆ ಇಂದಿರಾ ಗಾಂಧಿಯು ಕಲ್ಲಡ್ಕಕ್ಕೆ ಬಂದಿದ್ದರು ಎಂಬುದನ್ನು ಅವರ ನಿಕಟವರ್ತಿಗಳು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.

ರಾಜಕಾರಣದಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಲೇ ಅವರು ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದರು. ರಾಜಿ ಪಂಚಾಯತಿಗೆ ಮೂಲಕ ಮನೆ ಮಾತಾಗಿದ್ದರು. ಸರಕಾರದ ವಿವಿಧ ಇಲಾಖೆಯ ಮೇಲೆ ಪ್ರಭಾವ ಬೀರುವಷ್ಟು ಅವರು ಖ್ಯಾತರಾಗಿದ್ದರು. ಅವರ ಅಂಗಡಿಯಲ್ಲಿ ಸದಾ ಜನರು ಗಿಜಿಗುಟ್ಟುತ್ತಿದ್ದರು. ಜನರು ಒಂದಲ್ಲೊಂದು ಸಮಸ್ಯೆಯನ್ನು ಹೇಳಿಕೊಂಡು ಬಂದು ಪರಿಹಾರ ಕಂಡುಕೊಳ್ಳುತ್ತಿದ್ದರು. ಇಂದಿರಾಗಾಂಧಿ ಮತ್ತು ದೇವರಾಜು ಅರಸು ಹಾಗೂ ಗುಂಡೂರಾವ್‌ರ ಕಟ್ಟಾ ಅಭಿಮಾನಿಯಾಗಿದ್ದ ಅವರು ಭೂ ಮಸೂದೆ ಕಾಯ್ದೆಯನ್ನು ಜಾರಿಗೊಳಿಸಲು ಅವಿರತವಾಗಿ ಶ್ರಮಿಸಿದ್ದರು. ಅನೇಕರಿಂದ ಅರ್ಜಿ ಹಾಕಿಸಿ ಫಲಾನುಭಾವಿಗಳಾಗುವಂತೆ ನೋಡಿಕೊಂಡಿದ್ದರು. 1972ರಲ್ಲಿ ಹಲವು ಮಂದಿಗೆ ಕಲ್ಲಡ್ಕದಲ್ಲಿ 5 ಸೆಂಟ್ಸ್ ಜಮೀನಿನಲ್ಲಿ ಮನೆ ನಿರ್ಮಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇಲ್ಲಿನ ಫಲಾನುಭಾವಿಗಳು ಕಲ್ಲಡ್ಕ ಇಸ್ಮಾಯೀಲ್‌ರ ಸಹಕಾರವನ್ನು ಸ್ಮರಿಸುವ ಸಲುವಾಗಿ ಈ ಪ್ರದೇಶಕ್ಕೆ "ಇಸ್ಮಾಯೀಲ್ ನಗರ" ಎಂದು ಹೆಸರಿಸಿಕೊಂಡಿದ್ದರು.

ಮಂಗಳೂರಿನ ಫಾತಿಮಾ ಅವರನ್ನು ವಿವಾಹವಾದ ಅವರಿಗೆ ಒಬ್ಬ ಪುತ್ರಿ ಮತ್ತು ಒಬ್ಬ ಪುತ್ರಿ ಇದ್ದರು. ಪ್ರಬಲ ರಾಜಕಾರಣಿಯಾಗಿದ್ದ ಅವರನ್ನು 1976ರ ಅಕ್ಟೋಬರ್ 4ರಂದು ಹತ್ಯೆಗೈಯ್ಯಲಾಗಿತ್ತು. ಆವಾಗ ಅವರಿಗೆ ಕೇವಲ 38 ವರ್ಷ ಪ್ರಾಯ. ಕಲ್ಲಡ್ಕ ಇಸ್ಮಾಯೀಲ್‌ರ ಮೃತದೇಹ ವೀಕ್ಷಿಸಿ ಸಂತಾಪ ಸೂಚಿಸಲು ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಆಗಮಿಸಿರುವುದು ಕೂಡ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

# ಸಮಾಜ ಸೇವಕ ಮುಹಮ್ಮದ್ ಹುಸೈನ್ ಮಂಗಳೂರು



ಮಂಗಳೂರು ತಾಲೂಕಿನ ಅಂಬ್ಲಮೊಗರು ಗ್ರಾಮದ ಪರಿಕ್ಕಳದಲ್ಲಿ ಹುಟ್ಟಿ ಕುದ್ರೋಳಿಯ ಕಂಡತ್‌ಪಳ್ಳಿ ಎಂಬಲ್ಲಿ ಬದುಕು ಕಟ್ಟಿಕೊಂಡ ಇಸ್ಮಾಯೀಲ್–ಆಯಿಶಾ ದಂಪತಿಯ ಪುತ್ರನಾಗಿ 1940ರಲ್ಲಿ ಕಂಡತ್‌ಪಳ್ಳಿಯಲ್ಲಿ ಜನಿಸಿದ ಮುಹಮ್ಮದ್ ಹುಸೈನ್ ಊರಲ್ಲೇ ಪ್ರಾಥಮಿಕ ಶಿಕ್ಷಣ ಪಡೆದರು. ಬಳಿಕ ಮಂಗಳೂರಿನ ಕೆಪಿಟಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಹೊರಹೊಮ್ಮಿದ ಮುಹಮ್ಮದ್ ಹುಸೈನ್ ಮಂಗಳೂರಿನ ಮೀನುಗಾರಿಕಾ ಇಲಾಖೆಯಲ್ಲಿ ಸೂಪರ್‌ವೈಸರ್ ಆಗಿ ಸೇವೆ ಆರಂಭಿಸಿದರು.

ಬಾಲ್ಯದಲ್ಲೇ ಸಮಾಜಮುಖಿ ಚಿಂತಕರಾಗಿದ್ದ ಮುಹಮ್ಮದ್ ಹುಸೈನ್‌ಗೆ ಸರಕಾರಿ ಕೆಲಸ ಒಗ್ಗಿಕೊಂಡಿಲ್ಲವೋ ಏನೋ? ಸರಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಸಮಾಜ ಸೇವೆಗೆ ಮುಂದಾದರು. ಅಷ್ಟರಲ್ಲಿ ಅವರನ್ನು ರಾಜಕೀಯ ಪಕ್ಷವೊಂದು ಕೈ ಬೀಸಿ ಕರೆಯಿತು.

ಈ ಮಧ್ಯೆ ರಾಜಕಾರಣ ಕಸುಬು ಆಗಬಾರದು ಎಂದು ನಿರ್ಧರಿಸಿದ್ದ ಮುಹಮ್ಮದ್ ಹುಸೈನ್ ಹಾಸನ ಮತ್ತು ಪಾಣೆಮಂಗಳೂರಿನಲ್ಲಿ "ಎಂಎಚ್ ಟಿಂಬರ್ಸ್" ಸಂಸ್ಥೆಯನ್ನು ಹುಟ್ಟುಹಾಕಿದರು. 1970ರಿಂದ 1985ರವರೆಗೆ ಟಿಂಬರ್ ವ್ಯಾಪಾರದಲ್ಲಿ ತೊಡಗಿಸಿಕೊಂಡರು.

ವ್ಯಾಪಾರ–ವಹಿವಾಟಿನ ಮಧ್ಯೆ ಸಮಾಜ ಸೇವೆ ಮಾಡುತ್ತಲೇ ಜನತಾ ಪಕ್ಷದಲ್ಲಿ ಗುರುತಿಸಿಕೊಂಡರು. ಹಾಗೇ 1975ರಲ್ಲಿ ಅಧಿಕೃತವಾಗಿ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡರು. ಜನತಾ ಪಕ್ಷದ ಅಲ್ಪಸಂಖ್ಯಾತರ ವಿಭಾಗದ ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. ಜನತಾ ಪಕ್ಷ ಇಬ್ಭಾಗವಾಗುತ್ತಾ ಜನತಾ ದಳ ಆಗಿ ಪರಿವರ್ತನೆಗೊಂಡ ಬಳಿಕವೂ ಅವರು ರಾಜಕೀಯದಲ್ಲಿ ಸಕ್ರಿಯರಾದರು. 1985–88ರರೆಗೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

1988ರಲ್ಲಿ ಮಂಗಳೂರು ಲೋಕಸಭೆಗೆ ಜನತಾ ದಳದ ಅಧಿಕೃತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಜನತಾ ದಳ ಆಗಿನ್ನೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೂರಿರಲಿಲ್ಲ. ಆದರೆ ಮುಹಮ್ಮದ್ ಹುಸೈನ್ ಅವರ ನಾಯಕತ್ವವನ್ನು ಮೆಚ್ಚಿ ಜನತಾ ದಳಕ್ಕೆ ಸಾವಿರಾರು ಮಂದಿ ಮತ ಚಲಾಯಿಸಿದ್ದರು. ಕಾಂಗ್ರೆಸ್ ಹಿರಿಯ ನಾಯಕ ಜನಾರ್ದನ ಪೂಜಾರಿ ವಿರುದ್ಧ ಸ್ಪರ್ಧಿಸಿದ್ದ ಮುಹಮ್ಮದ್ ಹುಸೈನ್ 1,33,533 ಮತಗಳನ್ನು ಪಡೆದಿರುವುದು ಅವರ ವೈಯಕ್ತಿಕ ವರ್ಚಸ್ಸಿಗೆ ಸಾಕ್ಷಿಯಾಗಿತ್ತು.

ಮುಹಮ್ಮದ್ ಹುಸೈನ್‌ಗೆ ಬಡವರ ಬಗ್ಗೆ ಅಪಾರ ಕಾಳಜಿ ಇತ್ತು. ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಅವರು ಶಕ್ತಿ ಮೀರಿ ಶ್ರಮಿಸಿದ್ದರು. ಮುಸ್ಲಿಮರ ಶೈಕ್ಷಣಿಕ ಪ್ರಗತಿಯ ಕನಸು ಕಂಡಿದ್ದ ಅವರು ಬದ್ರಿಯಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎಸ್. ಅಬ್ದುಲ್ ಖಾದರ್ ಅವರೊಂದಿಗೆ ಸೇರಿಕೊಂಡು ಜಮೀಯ್ಯತುಲ್ ಫಲಾಹ್ ಎಂಬ ಸಂಸ್ಥೆಯ ಹುಟ್ಟಿಗೆ ಕಾರಣರಾಗಿದ್ದರು. ಅಷ್ಟೇ ಅಲ್ಲ, ಅದರ ಸ್ಥಾಪಕ ಅಧ್ಯಕ್ಷರೂ ಆದರು. ಅಲ್ಲದೆ ಮಿಲ್ಲತ್ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಸ್ಥಾಪಕ ಅಧ್ಯಕ್ಷರೂ ಆಗಿದ್ದರು.

ಹೀಗೆ ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದು ಸಮಾಜ ಸೇವೆ ಮಾಡುವ ತುಡಿತದೊಂದಿಗೆ ಸರಕಾರಿ ಹುದ್ದೆಯನ್ನು ಕೈ ಬಿಟ್ಟು ಸಾರ್ವಜನಿಕ ರಂಗಕ್ಕಿಳಿದ ಮುಹಮ್ಮದ್ ಹುಸೈನ್ ತನ್ನ ವಿಶಿಷ್ಟ ಸೇವೆ ಮತ್ತು ಕಪ್ಪುಚುಕ್ಕೆಯಿಲ್ಲದ ಬದುಕಿನಿಂದಾಗಿ ಇಂದಿಗೂ ಅಜರಾಮರಾಗಿದ್ದಾರೆ. ತನ್ನ ಬದುಕಿನ ಅತ್ಯಲ್ಪ ಅವಧಿಯಲ್ಲಿ ನಿರೀಕ್ಷೆಗೂ ಮೀರಿ ಸಮಾಜದ/ಸಮುದಾಯದ ಒಡನಾಡಿಯಾಗಿದ್ದ ಮುಹಮ್ಮದ್ ಹುಸೈನ್ ಪತ್ನಿ ಹಲೀಮಾ ಮತ್ತು ನಾಲ್ಕು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು 1992ರ ಆಗಸ್ಟ್ 30ರಂದು ಬಿಟ್ಟಗಲಿದರು.

## ಶಿಕ್ಷಕ–ಸಾಹಿತಿ–ಪತ್ರಕರ್ತ–ವಿದ್ವಾಂಸ ಅಹ್ಮದ್ ನೂರಿ



ಮಂಗಳೂರಿನ ಎಂ.ಕೆ. ಅಬ್ದುಲ್ ಖಾದರ್–ಬೀಫಾತಿಮಾ ದಂಪತಿಯ ಪುತ್ರನಾಗಿ 1920ರ ಜೂನ್ 10ರಂದು ಜನಿಸಿದ ಅಹ್ಮದ್ ನೂರಿ ಮಂಗಳೂರಿನ ಹೆಸರಾಂತ ವಿದ್ವಾಂಸ ಹಾಫಿಝ್ ಸೈಯದ್ ಯೂಸುಫ್ ಅವರಿಂದ ಅರಬಿಕ್ ಶಿಕ್ಷಣ ಪಡೆದರು. 1956ರಲ್ಲಿ ಆಲಿಘಡ್ ವಿವಿಯಲ್ಲಿ "ಅದೀಬ್ ಮಾಹಿರ್" ಎಂಬ ಉರ್ದು ಪದವಿ ಪೂರೈಸಿದರು. ಬಳಿಕ ಹಿಂದಿಯ "ರಾಷ್ಟ್ರ ಭಾಷಾ ವಿಶಾರದ" ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಶಿಕ್ಷಣ ಕಲಿಯುತ್ತಿರುವಾಗಲೇ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಅಹ್ಮದ್ ನೂರಿ ಖಿಲಾಫತ್ ಚಳುವಳಿಯಲ್ಲೂ ಸಕ್ರಿಯರಾಗಿದ್ದರು. ಶಿಕ್ಷಕರಾಗಿದ್ದರೂ ಕೂಡ ಅವರು "ಶಿಕ್ಷಕ, ಸಾಹಿತಿ, ಪತ್ರಕರ್ತ, ಅನುವಾದಕ, ಬಹುಭಾಷಾ ವಿದ್ವಾಂಸ, ಸಂಶೋಧಕ, ಭಾಷಾ ವಿಜ್ಞಾನಿ, ಸುಧಾರಣಾವಾದಿ, ಸಮಾಜ ಸೇವಕ' ಎಂದೇ ನಾಡಿಗೆ ಪರಿಚಯಿಸಲ್ಪಟ್ಟಿದ್ದರು.

ಸಾಹಿತ್ಯದ ಒಲವಿದ್ದ ಕಾರಣ ಅನೇಕ ಇಂಗ್ಲಿಷ್, ಹಿಂದಿ, ಉರ್ದು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಮಂಗಳೂರಿನ ಬ್ಯಾರಿ ಮುಸ್ಲಿಮರ ಬಗ್ಗೆ ನಡೆಸಿದ್ದ ಅಧ್ಯಯನದ ಫಲವಾಗಿ 1960ರಲ್ಲಿ ಅವರ "ಮೈಕಾಲ" ಎಂಬ ಕೃತಿ ಪ್ರಕಟಗೊಂಡಿತು. ಅಲ್ಲದೆ 1997ರಲ್ಲಿ ಅದು ದ್ವಿತೀಯ ಮುದ್ರಣವನ್ನೂ ಕಂಡಿದೆ. 1978ರಲ್ಲಿ ಕುರಾನ್ ಗ್ರಂಥವನ್ನು ಕನ್ನಡಕ್ಕೆ ಅನುವಾದಗೊಳ್ಳುವಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು. "ಅಬೂ ರೈಹಾನ್" ಎಂಬ ಕಾವ್ಯನಾಮದಲ್ಲೂ ಅವರು ಬರೆಯುತ್ತಿದ್ದರು.

ಬ್ಯಾರಿ, ತುಳು, ಕನ್ನಡ, ಉರ್ದು, ತಮಿಳು, ಮಲಯಾಳಂ, ಹಿಂದಿ, ಇಂಗ್ಲಿಷ್, ಅರಬಿಕ್, ಪರ್ಶಿಯನ್ ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಮ್‌ದರ್ದ್, ಸದಾಕತ್ ಪೋಸ್ಟ್, ಉದಯಚಂದ್ರ, ಪ್ರಭಾತ, ಕಂಠೀರವ, ಸ್ವದೇಶಾಭಿಮಾನಿ, ಜೀವನ, ಬಡವರ ಬಂಧು, ಶಾಂತಿ ಸಂದೇಶ, ನವಶಕ್ತಿ, ಅಮಾನತ್, ಕಿತಾಬ್, ದಿ ಮೆಸೇಜ್ ಹೀಗೆ ವಾರ, ಪಾಕ್ಷಿಕ, ಮಾಸಪತ್ರಿಕೆಗಳನ್ನು ಹೊರತಂದಿದ್ದರು. ಡಾ. ಫಾದರ್ ಮುಲ್ಲರ್‌ರ "ದಿ ಗೈಡ್ ಟು ಹೆಲ್ತ್" ಗ್ರಂಥವನ್ನು ಉರ್ದುವಿಗೆ ಅನುವಾದಿಸಿದ್ದರು.

ಮಂಗಳೂರಿನ ಹೆಸರಾಂತ ನ್ಯಾಯಾಧೀಶ ಅಬ್ದುರ್ರಹೀಂ ಅಹ್ಮದ್ ಅವರು ಸ್ಥಾಪಿಸಿದ್ದ "ಮುಸ್ಲಿಂ ಸ್ವಯಂ ಸೇವಕ ದಳ" ಮತ್ತು "ಮುಸ್ಲಿಂ ವೆಲ್ಫೇರ್ ಲೀಗ್" ಹಾಗೂ ಸ್ವತಃ ತಾನೇ ಸ್ಥಾಪಿಸಿದ "ಯಂಗ್‌ಮೆನ್ಸ್ ಮುಸ್ಲಿಂ ಅಸೋಸಿಯೇಶನ್" ಮೂಲಕ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದರು.

ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್‌ನ ಸ್ಥಾಪಕ ಸದಸ್ಯರಾಗಿದ್ದ ಅವರನ್ನು 1997ರಲ್ಲಿ ಮಂಗಳೂರಿನ ಮುಸ್ಲಿಂ ಲೇಖಕರ ಸಂಘವು "ಹಿರಿಯ ಮುಸ್ಲಿಂ ಸಾಹಿತಿ" ಎಂದು ಗುರುತಿಸಿ ಸನ್ಮಾನಿಸಿದೆ. ಅಲ್ಲದೆ ಅದೇ ವರ್ಷ ಬೆಂಗಳೂರಿನಲ್ಲಿ ನಡೆದ ಬ್ಯಾರಿ ಸಮ್ಮೇಳನದಲ್ಲೂ ಅವರನ್ನು ಸನ್ಮಾನಿಸಲಾಗಿತ್ತು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯು 2009ನೆ ಸಾಲಿನ ಗೌರವ ಪ್ರಶಸ್ತಿಯನ್ನು ಅವರಿಗೆ ನೀಡಿದೆ. ಸುಮಾರು 50 ವರ್ಷಗಳ ಸಾಹಿತ್ಯ ಸೇವೆಯಲ್ಲಿ ಹಲವಾರು ಜನಪ್ರಿಯ ಹಾಡುಗಳನ್ನು ರಚಿಸಿದ್ದಾರೆ. ಅವುಗಳಿಗೆ ಸಂಗೀತ ಸಂಯೋಜನೆ ನೀಡಿದ್ದಾರೆ. "ಕೇಲಂಡ ಮಕ್ಕಲೇ... ಕೇಲಂಡ" ಮತ್ತು "ಎತ್ತರೆತೋಲೋ ವರಕ್‌ರೆ ಮಸ್ತ್" ಧ್ವನಿ ಸುರುಳಿಯನ್ನೂ ಹೊರತಂದಿದ್ದ ಅವರು 2012ರ ಸೆಪ್ಟಂಬರ್ 2ರಂದು ಬೆಂಗಳೂರಿನಲ್ಲಿ ನಿಧನರಾದರು. ಪತ್ನಿ ಅಲಿಮಮ್ಮ, ಮೂವರು ಪುತ್ರಿಯರು ಮತ್ತು ಇಬ್ಬರು ಪುತ್ರರನ್ನು ಅವರು ಅಗಲಿದ್ದಾರೆ.

# ಬ್ಯಾರಿ ಸಂಶೋಧಕ ಡಾ.ಎ.ವಹಾಬ್ ದೊಡ್ಡಮನೆ



ಮಂಗಳೂರಿನ ಬಂದರ್‌ನಲ್ಲಿರುವ "ಪೌನಾರಗ"ದಲ್ಲಿ ಒಂದಾಗಿರುವ ಬೆಲಿಯಗ (ದೊಡ್ಡಮನೆ) ಮನೆತನದಲ್ಲಿ ಡಾ. ಮುಹಮ್ಮದ್ ಅಬ್ದುಲ್ ಖಾದರ್ ಅಲ್ ಖಾಝಿ–ಬೀಫಾತಿಮಾ ದಂಪತಿಯ ಪುತ್ರನಾಗಿ 1943ರಲ್ಲಿ ಹುಟ್ಟಿ ಬೆಳೆದ ಡಾ. ಎ. ವಹಾಬ್ ದೊಡ್ಡಮನೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಪದವಿ ಪಡೆದರು. ಆ ಬಳಿಕ ಮದ್ರಾಸ್‌ನಲ್ಲಿ ಡಿಪ್ಲೊಮಾ ಇನ್ ಮೆಡಿಸಿನ್ ಮಾಡಿದರು. ಸುಮಾರು 25 ವರ್ಷಗಳ ಕಾಲ ಬಂದರ್‌ನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದರು. ತನ್ನ ಮನೆಯಲ್ಲೇ ಕ್ಲಿನಿಕ್ ತೆರೆದು ಜನರ ಅನಾರೋಗ್ಯಕ್ಕೆ ಚಿಕಿತ್ಸೆ ನೀಡಿದರೂ ಅವರ ತುಡಿತ ಇದ್ದುದು ಭಾಷೆ, ಕಲೆ, ಸಾಹಿತ್ಯ, ಇತಿಹಾಸ, ಸಂಶೋಧನೆಯತ್ತ ಆಗಿತ್ತು. ಅದರಂತೆ ಅವರು ವೈದ್ಯಕೀಯ ವೃತ್ತಿಯ ಮಧ್ಯೆ ಬ್ಯಾರಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸಂಶೋಧನೆಗೆ ಮುಂದಾದರು. ಅದರ ಫಲವಾಗಿ 1993ರಲ್ಲಿ "ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ" ಎಂಬ ಇಂಗ್ಲಿಷ್ ಅಧ್ಯಯನ ಗ್ರಂಥವು ಹೊರಬಂತು. ಇದು ದೇಶ–ವಿದೇಶದಲ್ಲಿ ಪ್ರಸಿದ್ಧಿ ಪಡೆದಿದೆ. ಅನೇಕ ವಿದ್ಯಾರ್ಥಿಗಳಿಗೆ ಈ ಗ್ರಂಥವು ಅಧ್ಯಯನಕ್ಕೆ ಸಹಕಾರಿಯಾಗಿದೆ. ವಿಶ್ವವಿದ್ಯಾನಿಲಯ ಮಟ್ಟದಲ್ಲೂ ಸಾಕಷ್ಟು ಚರ್ಚೆಯಾಗಿದೆ. 2008ರಲ್ಲಿ ಅದರ ಪರಿಷ್ಕೃತ ಕನ್ನಡ ಆವೃತ್ತಿ "ತುಳುನಾಡಿನ ಮುಸ್ಲಿಮರು" ಗ್ರಂಥ ಬಿಡುಗಡೆಗೊಂಡಿತು. 1997ರಲ್ಲಿ ರಚಿಸಿದ್ದ ಇಂಗ್ಲಿಷ್–ಕನ್ನಡ–ಬ್ಯಾರಿ ಭಾಷೆಯ ಅರ್ಥಕೋಶವನ್ನು ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್ ಪ್ರಕಟಿಸಿದೆ. ಸುಮಾರು 15 ಸಾವಿರ ಶಬ್ದಗಳ ಅರ್ಥಕೋಶ ರಚಿಸಿದ್ದರೂ ಮುದ್ರಣದ ಇತಿಮಿತಿಯ ಹಿನ್ನೆಲೆಯಲ್ಲಿ ಅದನ್ನು 8 ಸಾವಿರಕ್ಕೆ ಸೀಮಿತಗೊಳಿಸಲಾಗಿತ್ತು. ಈ ಮಧ್ಯೆ 1998ರಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಇತಿಹಾಸವನ್ನು ಪರಿಚಯಿಸುವ ಹಾಗೂ ಪ್ರವಾಸಿಗಳಿಗೆ ಅನುಕೂಲಕರವಾಗಿರುವ "ವಹಾಬ್ಸ್ ತುಳುನಾಡು" ಕೃತಿಯು ಹೊರಬಂದಿದೆ. ಬ್ಯಾರಿ ಭಾಷೆಯ ಪ್ರಪ್ರಥಮ ಮಕ್ಕಳ ಸಾಹಿತ್ಯ ಕೃತಿ "ಓದು ಕಿಡಾವು ಓದು"ವನ್ನು ರಚಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. 2006ರಲ್ಲಿ ಬ್ಯಾರಿ ಅಧ್ಯಯನ ಕೇಂದ್ರವು ಈ ಕೃತಿಯನ್ನು ಹೊರತಂದಿದೆ.

1996ರಲ್ಲಿ "ಅಪ್ಸರಾ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ "ಹಜ್ ಯಾತ್ರೆ", "ಸಮಾಜ ಸಂಸ್ಕಾರ", "ರಮೇಶ ಕೊಲೆ ಮಾಡಲ್ಪಟ್ಟ" ಕೃತಿಯನ್ನು ಕೂಡ ಹೊರತಂದಿದ್ದರು. ಅದರೊಂದಿಗೆ ಕತೆ, ಕವನ, ಲೇಖನವನ್ನೂ ಬರೆಯುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲಾಡಳಿತವು ಹೊರತಂದ "ಪೊಲಿ" ಕೃತಿಯ ಸಂಪಾದಕರಲ್ಲಿ ಒಬ್ಬರಾಗಿದ್ದ ಅವರು ಬ್ಯಾರಿ, ಕನ್ನಡ, ಇಂಗ್ಲಿಷ್ ಮಾತ್ರವಲ್ಲ ತುಳುವಿನಲ್ಲೂ ಬರೆದಿದ್ದಾರೆ. ಅದರಲ್ಲಿ ಕಲಾವಿದೆ, ಸೈತಿ ಬೊಕ್ಕ, ಲೈಪುಡೊಂಜಿ ಚುಕ್ಕೆ ಇತ್ಯಾದಿ ಸೇರಿದೆ. ಕಾಲೇಜು ವಿದ್ಯಾರ್ಥಿಯಾಗಿರುವಾಗಲೇ ಅವರೊಬ್ಬ ಅದ್ಭುತ ಭಾಷಣಕಾರರಾಗಿದ್ದರು. ನಾಟಕಗಳಲ್ಲಿ ನಟಿಸುತ್ತಿದ್ದರು. ಮಂಗಳೂರು ಸರಕಾರಿ ಕಾಲೇಜಿನ ಕನ್ನಡ ಸಂಘದ ಕಾರ್ಯದರ್ಶಿಯೂ ಆಗಿದ್ದರು. ಹಿಂದಿ ವಿರೋಧಿ ಚಳವಳಿಯ ಅಧ್ಯಕ್ಷರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಆಲ್ ಕಾಲೇಜ್ ಸ್ಟೂಡೆಂಟ್ಸ್ ಯೂನಿಯನ್‌ನ ಪ್ರಪ್ರಥಮ ಅಧ್ಯಕ್ಷ ಎಂಬ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಯೂತ್ ಸರ್ವಿಸ್ ಕೌನ್ಸಿಲ್‌ನ ಸ್ಥಾಪಕರೂ ಆಗಿದ್ದ ಅವರು ಆಲ್ ಇಂಡಿಯಾ ಯೂತ್ ಫೆಡರೇಶನ್‌ನ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರೂ ಆಗಿದ್ದರು. 1968ರಲ್ಲಿ ಇಂದಿಗಾ ಕಾಂಗ್ರೆಸ್‌ನ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಅವರು 1972ರಲ್ಲಿ ನೆರೆಹಾವಳಿಗೆ ತುತ್ತಾದ ಪ್ರದೇಶಕ್ಕೆ ತೆರಳಿ ಸ್ವಯಂ ಸೇವಕರಾಗಿ ದುಡಿದಿದ್ದರು. 1976ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ 20 ಅಂಶ ಕಾರ್ಯಕ್ರಮ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿದ್ದರು.

ಮಂಗಳೂರು ಆಕಾಶವಾಣಿ, ಉಡುಪಿಯ ಗೋವಿಂದ ಪೈ ಅಧ್ಯಯನ ಕೇಂದ್ರ, ರಾಣಿ ಅಬ್ಬಕ್ಕ ಉತ್ಸವ, ಸಮನ್ವಯ ಸಮ್ಮೇಳನ, ಭಾವೈಕ್ಯ ಸಮ್ಮೇಳನದಲ್ಲಿ ಭಾಗವಹಿಸಿ ಹಲವು ವಿಚಾರಗಳ ಬಗ್ಗೆ ಪ್ರಬಂಧ ಮಂಡಿಸಿದ್ದಾರೆ. ಹೀಗೆ ಎಳೆಯ ಹರೆಯದಲ್ಲೇ ಸಂಶೋಧನೆಯಲ್ಲಿ ನಿರತರಾಗಿದ್ದ ಅವರು ತನ್ನ ಬದುಕನ್ನು ಅಧ್ಯಯನಕ್ಕಾಗಿ ಮುಡಿಪಾಗಿಟ್ಟರು. ಅವರು ಮೂರು ಮದುವೆಯಾಗಿದ್ದರು. ಆ ಪೈಕಿ ಮೊದಲ ಪತ್ನಿಯಲ್ಲಿ ಜನ್ಮತಾಳಿದ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅವರು ಅಗಲಿದ್ದಾರೆ. 2010ರ ಅಕ್ಟೋಬರ್ 1ರಂದು ಅವರು ನಿಧನರಾದರು.

ಡಾ.ಎ.ವಹಾಬ್ ದೊಡ್ಡಮನೆ ಬ್ಯಾರಿ ಕ್ಷೇತ್ರಕ್ಕೆ ಸಂಬಂಧಿಸಿ ನಡೆಸಿದ ಸಂಶೋಧನೆಯನ್ನು ಪರಿಗಣಿಸಿ ಅಖಿಲ ಭಾರತ ಬ್ಯಾರಿ ಪರಿಷತ್‌ನ ಅಧ್ಯಕ್ಷರಾಗಿದ್ದ ಬಿ.ಎ.ಮುಹಮ್ಮದ್ ಹನೀಫ್ ತಾನು ಸ್ಥಾಪಿಸಿದ್ದ "ಬ್ಯಾರಿ ಅಧ್ಯಯನ ಕೇಂದ್ರ"ಕ್ಕೆ ಡಾ.ಎ.ವಹಾಬ್ ದೊಡ್ಡಮನೆ ಅವರ ಹೆಸರನ್ನಿಟ್ಟಿದ್ದರು.



## ಶಿಕ್ಷಣ ತಜ್ಞ ಪಿ.ಎ.ಖಾದರ್ ಕುಕ್ಕಾಡಿ

ಜಿನಸು ವ್ಯಾಪಾರಿ ಮತ್ತು ಬೈಕಂಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷರೂ ಆಗಿದ್ದ ಹಸನಬ್ಬ ಬ್ಯಾರಿ–ಅಲಿಮಮ್ಮ ದಂಪತಿಯ ಪಣಂಬೂರಿನ "ಕುಕ್ಕಾಡಿ ಹೌಸ್" ಮನೆಯಲ್ಲಿ 1929ರ ಡಿಸೆಂಬರ್ 4ರಂದು ಹುಟ್ಟಿದ ಪಣಂಬೂರು ಅಬ್ದುಲ್ ಖಾದರ್ ಕುಕ್ಕಾಡಿ (ಪಿ.ಎ.ಖಾದರ್ ಕುಕ್ಕಾಡಿ) ಬೆಳೆದದ್ದು ಬೈಕಂಪಾಡಿಯಲ್ಲಿ.

ಪಣಂಬೂರಿನ ಎಲಿಮೆಂಟರಿ ಶಾಲೆ, ಸುರತ್ಕಲ್‌ನ ವಿದ್ಯಾದಾಯಿನಿ ಪ್ರೌಢಶಾಲೆಯಲ್ಲಿ ಕಲಿತ ಬಳಿಕ ಕೂಳೂರು ನದಿಯನ್ನು ದೋಣಿ ಮೂಲಕ ದಾಟಿ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಕಲಿತರು. ಬಳಿಕ ಬಿಎ, ಅರ್ಥಶಾಸ್ತ್ರದಲ್ಲಿ ಎಂಎ, ಎಲ್‌ಎಲ್‌ಬಿ ಮಾಡಿದರು. ಎಸೆಸೆಲ್ಸಿಯಲ್ಲಿ ಪ್ರಥಮ ರ್‍ಯಾಂಕ್, ಮದ್ರಾಸ್ ವಿವಿಯಲ್ಲಿ ಬಿಎ ಪದವಿಗೆ ದ್ವಿತೀಯ ರ್‍ಯಾಂಕ್, ಎಂಎ ಪದವಿಯಲ್ಲಿ ಪ್ರಥಮ ರ್‍ಯಾಂಕ್, ಎಲ್‌ಎಲ್‌ಬಿಯಲ್ಲೂ ದ್ವಿತೀಯ ರ್‍ಯಾಂಕ್ ಗಳಿಸಿದ್ದರು. ಹಿರಿಯ ನ್ಯಾಯವಾದಿ ಪುರುಷೋತ್ತಮ ಪೂಜಾರಿಯ ಗರಡಿಯಲ್ಲಿ ಪಳಗಿದ ಪಿ.ಎ.ಖಾದರ್ ಕುಕ್ಕಾಡಿ ಅವರನ್ನು ಊರವರೆಲ್ಲಾ "ವಕೀಲಾಕ" ಎಂದೇ ಕರೆಯುತ್ತಿದ್ದರು.

ಮೈಸೂರಿನ ಶಾರದಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಂಡ ಅವರು ಬಳಿಕ ಕೇಂದ್ರ ಸರಕಾರದ ಕಾರ್ಮಿಕ ಇಲಾಖೆಗೆ ಅಧಿಕಾರಿಯಾಗಿ ಸೇರ್ಪಡೆಗೊಂಡು ಕಾರ್ಮಿಕರ ಕಲ್ಯಾಣಕ್ಕೆ ಪಣತೊಟ್ಟರು. ಹಾಗೇ ವರ್ಕರ್ಸ್ ಎಜುಕೇಶನ್ ಸ್ಕೀಂ ಆರಂಭಿಸಿದರು. ಬೆಂಗಳೂರಿನಲ್ಲಿ ಅಧಿಕಾರಿಯಾಗಿದ್ದಾಗಲೇ ಇಂಟರ್‌ನ್ಯಾಶನಲ್ ಲೇಬರ್ ಆರ್ಗನೈಸೇಶನ್‌ನ ಸ್ಕಾಲರ್‌ಶಿಪ್ ಪಡೆದು ಸ್ಟಡಿ ಟು ಬಾಬುವರ್ ಎಜುಕೇಶನ್ ಡೆನ್ಮಾರ್ಕ್, ಸ್ವೀಡನ್, ಫ್ರಾನ್ಸ್, ಇಂಗ್ಲೆಂಡ್ ದೇಶದಲ್ಲಿ ಮೂರು ತಿಂಗಳ ಅಧ್ಯಯನ ನಡೆಸಿದರು. 1964ರಲ್ಲಿ ಮಂಗಳೂರಿನಲ್ಲಿ ಕಾರ್ಮಿಕ ಇಲಾಖೆಯ ರೀಜನಲ್ ಡೈರಕ್ಟರ್ ಆಗಿ ನೇಮಕಗೊಂಡರು. ನಂತರ ಡೆಪ್ಯುಟಿ ಡೈರಕ್ಟರ್ ಆಗಿ ಭಡ್ತಿಪಡೆದು ನಾಗಪುರಕ್ಕೆ ವರ್ಗಾವಣೆಗೊಂಡರು.

ಸರಕಾರಿ ಸೇವೆಯ ನಿವೃತ್ತಿಯ ಬಳಿಕ ಬೈಕಂಪಾಡಿಯಲ್ಲಿ ಬರ್ಟ್ರಂಡ್ ರಸೆಲ್ ಆಂಗ್ಲಮಾಧ್ಯಮ ಶಾಲೆ ತೆರೆದರು. ಬೈಕಂಪಾಡಿಯ ಜವಾಹರ್ ಎಜುಕೇಶನಲ್ ಅಸೋಸಿಯೇಶನ್ ಮತ್ತು ಬರ್ಟ್ರಂಡ್ ರಸೆಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ಅಧ್ಯಕ್ಷರೂ ಆಗಿದ್ದ ಅವರು ಸಮುದಾಯಕ್ಕೆ ಶಿಕ್ಷಣದ ಅಗತ್ಯತೆಯನ್ನು ಮನಗಂಡಿದ್ದರು. ಅಲ್ಲದೆ ಶಿಕ್ಷಣಕ್ಕೆ ವಿಶೇಷ ಒತ್ತು ನೀಡುತ್ತಿದ್ದರು. ಒಬ್ಬ ನುರಿತ ಶಿಕ್ಷಣ ತಜ್ಞ ಮತ್ತು ಚಿಂತಕರೂ ಆಗಿದ್ದ ಅವರು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಮುಸ್ಲಿಂ ಶಿಕ್ಷಣ ಸಂಸ್ಥೆಯನ್ನು ಒಗ್ಗೂಡಿಸಿದ್ದರು. ಅಲ್ಲದೆ ಮುಸ್ಲಿಮ್ಸ್ ಎಜುಕೇಶನ್ ಇನ್‌ಸ್ಟಿಟ್ಯೂಟ್ ಆಫ್ ಫೆಡರೇಶನ್ ಸಂಸ್ಥೆಯ ಸ್ಥಾಪಕ ಅಧ್ಯಕ್ಷರೂ ಆಗಿದ್ದರು. ಶಿಕ್ಷಣಕ್ಕೆ ಸಂಬಂಧಿಸಿ ಬೇರೆ ಬೇರೆ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದು ಗಮನ ಸೆಳೆದಿದ್ದರು.

ಹಿರಿಯ ಜಮೀನ್ದಾರ ಬಜ್ಪೆ ಜಕ್ರಿ ಬ್ಯಾರಿಯ ಮಗಳು ಪಾಪಮ್ಮ ಯಾನೆ ಆಮಿನಮ್ಮರನ್ನು 1954ರಲ್ಲಿ ವಿವಾಹವಾದ ಅವರಿಗೆ ನಾಲ್ಕು ಮಂದಿ ಪುತ್ರರು, ಒಬ್ಬ ಪುತ್ರಿಯರಿದ್ದಾರೆ. ಬೈಕಂಪಾಡಿಯ "ಕುಕ್ಕಾಡಿ" ಕುಟುಂಬದ ಹಿರಿಯ ಸದಸ್ಯರಾಗಿದ್ದ ಅವರು 2017ರ ಎಪ್ರಿಲ್ 23ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

# ಕವಿ, ವಿದ್ವಾಂಸ, ತತ್ವಜ್ಞಾನಿ ಖಾಝಿ
# ತಲಪಾಡಿ ಬಾಪಕುಂಞಿ ಮುಸ್ಲಿಯಾರ್




ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾರಿ ಮುಸ್ಲಿಂ ಸಮಾಜ ಆಗಿನ್ನೂ ಶಿಕ್ಷಣಕ್ಕೆ ತೆರೆದುಕೊಂಡಿರದ ಕಾಲ. ಲೌಕಿಕ ಶಿಕ್ಷಣವನ್ನಂತೂ ಮುಸ್ಲಿಮೇತರರ ಶಿಕ್ಷಣ ಎಂದು ಭಾವಿಸುತ್ತಿದ್ದ ದಿನಗಳವು. ಇಸ್ಲಾಮಿಕ್ ಶಿಕ್ಷಣವು ಅಷ್ಟಕಷ್ಟೆ. ಅದಕ್ಕೆ ಕಾರಣ ಈಗಿನಂತೆ ಮನೆಗಳೂ ಅಕ್ಕಪಕ್ಕ ಇರಲಿಲ್ಲ. ಗಲ್ಲಿಗೊಂದರಂತೆ ಮಸೀದಿ, ಮದ್ರಸಗಳಿರಲಿಲ್ಲ. ಒಂದು ಮಸೀದಿ, ಮದ್ರಸಕ್ಕೆ ಮೂರ್‍ನಾಲ್ಕು ಕಿ.ಮೀ. ದೂರ ಕ್ರಮಿಸಬೇಕಾದ ಅನಿವಾರ್ಯತೆ. ಇಂತಹ ಸ್ಥಿತಿಯಲ್ಲೂ ಧಾರ್ಮಿಕ ಶಿಕ್ಷಣ ಪಡೆದು ಪ್ರಮುಖ ವಿದ್ವಾಂಸ ಎಂಬ ಹೆಗ್ಗಳಿಕೆಗೆ ಪಾತ್ರರಾದವರಲ್ಲಿ ತಲಪಾಡಿ ಬಾಪಕುಂಞಿ ಮುಸ್ಲಿಯಾರ್ ಅಗ್ರಗಣ್ಯರು.

ಕರ್ನಾಟಕದ ತಲಪಾಡಿ, ಅರ್ಕಾಣ, ಪಾತೂರು ಮತ್ತು ಕೇರಳದ ಕಾಂಞಂಗಾಡ್ ಮತ್ತಿತರ ಆಸುಪಾಸಿನ ಹಲವು ಜಮಾಅತ್‌ಗಳ ಖಾಝಿಯಾಗಿದ್ದ ಅವರು "ಖಾಝಿ ತಲಪಾಡಿ ಬಾಪಕುಂಞಿ ಮುಸ್ಲಿಯಾರ್" ಎಂದೇ ಪ್ರಸಿದ್ಧರು.

ಕೇರಳ ಮೂಲದ ಮೊಯ್ದಿನ್ ಕುಂಞಿ ಮುಸ್ಲಿಯಾರ್ ಮತ್ತು ಸೋಮೇಶ್ವರ ಉಚ್ಚಿಲದ ಬೀಫಾತಿಮಾ ದಂಪತಿಯ ಪುತ್ರನಾಗಿ 1860ರಲ್ಲಿ ತಲಪಾಡಿಯಲ್ಲಿ ಹುಟ್ಟಿ ಬೆಳೆದ ಬಾಪಕುಂಞಿ ಮುಸ್ಲಿಯಾರ್ ತನ್ನ ತಂದೆಯಿಂದಲೇ ಪ್ರಾಥಮಿಕ ಶಿಕ್ಷಣ ಪಡೆದರು. ಬಳಿಕ ಪೊನ್ನಾನಿಗೆ ತೆರಳಿ ಹೆಚ್ಚಿನ ವಿದ್ಯಾಭ್ಯಾಸ ಪಡೆದರು.

ಆ ಬಳಿಕ ತಲಪಾಡಿಯಲ್ಲೇ ಸೇವೆಯನ್ನು ಆರಂಭಿಸಿದ ಬಾಪಕುಂಞಿ ಮುಸ್ಲಿಯಾರ್ ತನ್ನ ಪಾಂಡಿತ್ಯದಿಂದಾಗಿ ಪರಿಸರದಾದ್ಯಂತ ಖ್ಯಾತರಾದರು. ಕರ್ಮಶಾಸ್ತ್ರಕ್ಕೆ ಸಂಬಂಧಿಸಿ ಯಾವುದೇ ಸಂಶಯ ಎದುರಾದಾಗ ಅಥವಾ ಮಸೀದಿಯಲ್ಲಿ ಯಾವುದೇ ಸಮಸ್ಯೆ ಅಥವಾ ತಕರಾರು ಆದಾಗಲೂ ತಟ್ಟನೆ ನೆನಪಾಗುತ್ತಿದ್ದ ಹೆಸರು ಬಾಪಕುಂಞಿ ಮುಸ್ಲಿಯಾರ್ ಅವರದ್ದು. ಸಂಶಯ ನಿವಾರಣೆ, ಸಮಸ್ಯೆಯ ಪರಿಹಾರಕ್ಕೆ ಜನರು ಬಾಪಕುಂಞಿ ಮುಸ್ಲಿಯಾರ್‌ರ ಬಳಿ ಧಾವಿಸುತ್ತಿದ್ದರು. ಹೆಚ್ಚಾಗಿ ತಾನಿದ್ದಲ್ಲೇ ಪರಿಹಾರ ಸೂಚಿಸುತ್ತಿದ್ದ ಅವರು ಕೆಲವೊಮ್ಮೆ ಘಟನಾ ಸ್ಥಳಕ್ಕೆ ತೆರಳಿ ಪರಿಹಾರ ನೀಡುತ್ತಿದ್ದರು. ಬಾಪಕುಂಞಿ ಮುಸ್ಲಿಯಾರ್ ಪರಿಹಾರ ನೀಡಿದ ಬಳಿಕ ಅದನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇರುತ್ತಿರಲಿಲ್ಲ. ಅನಿವಾರ್ಯ ಸಂದರ್ಭ ನ್ಯಾಯಾಲಯಕ್ಕೆ ತೆರಳಿ ಸಾಕ್ಷಿ ನುಡಿಯಲೂ ಅವರು ಹಿಂದೇಟು ಹಾಕುತ್ತಿರಲಿಲ್ಲ ಎಂಬ ಮಾತು ಸ್ಥಳೀಯವಾಗಿ ಕೇಳಿ ಬರುತ್ತಿದೆ.


ಬಾಪಕುಂಞಿ ಮುಸ್ಲಿಯಾರ್ ಇಸ್ಲಾಮಿಕ್ ಪಂಡಿತ ಮಾತ್ರವಲ್ಲ, ಹಾಸ್ಯಪ್ರವೃತ್ತಿಯನ್ನೂ ಹೊಂದಿದ್ದರು. ಹಾಗಾಗಿ ಎಂತಹ ಜಟಿಲ ಸಮಸ್ಯೆಯನ್ನು ಕೂಡ ಹಾಸ್ಯಮಯವಾಗಿ ಪರಿಹರಿಸಿಕೊಳ್ಳುವ ಚಾಕಚಕ್ಯತೆಯನ್ನೂ ಅವರು ಬೆಳೆಸಿಕೊಂಡಿದ್ದರು.

ಯಾವುದೇ ವಿಷಯದ ಬಗ್ಗೆಯೂ ಅಗಾಧ ಜ್ಞಾನವುಳ್ಳವರಾಗಿದ್ದ ಅವರು ತತ್ವಜ್ಞಾನಿಯೂ ಆಗಿದ್ದರು. ಆವಾಗ ಈಗಿನಂತೆ ಒಬ್ಬರಿಂದ ಒಂದೊಂದು ದಿನದ ಪ್ರವಚನದ ಕಾರ್ಯಕ್ರಮವಲ್ಲ. ಒಬ್ಬರಿಂದಲೇ ಹತ್ತು-ಇಪ್ಪತ್ತು ದಿನಗಳ ಮತಪ್ರವಚನ ನಡೆಸಲಾಗುತ್ತಿತ್ತು. ಹಾಗೇ ಬಾಪಕುಂಞಿ ಮುಸ್ಲಿಯಾರ್ ಪರಿಸರದಾದ್ಯಂತ ಪ್ರಮುಖ ಮತಪ್ರವಚಕರಾಗಿ ಗುರುತಿಸಲ್ಪಟ್ಟಿದ್ದರು.

ಕಾವ್ಯವನ್ನು ಉಸಿರನ್ನಾಗಿಸಿಕೊಂಡಿದ್ದ ಅವರು ಅರಬಿ-ಮಲಯಾಳಂ ಲಿಪಿಯಲ್ಲಿ ನೂರಾರು ಕಾವ್ಯಗಳನ್ನು ಸೃಷ್ಟಿಸಿದ್ದರು. ಅದರಲ್ಲಿ ಆದಿ ಅಮ್ಮೈತೆ ಮತ್ತು ಮದನಿ ಮಾಲೆ ಪ್ರಮುಖವಾದುದು. ಅದಲ್ಲದೆ ಸೋಮೇಶ್ವರ ಉಚ್ಚಿಲ ದರ್ಗಾಕ್ಕೆ ಸಂಬಂಧಿಸಿ ಮಾಲೆಯನ್ನೂ ಬರೆದಿದ್ದರು. ಅವರ ಕೈಬರಹವು ಸುಂದರ ಮತ್ತು ಸ್ಫುಟವಾಗಿತ್ತು. ಒಮ್ಮೊಮ್ಮೆ ನಿದ್ದೆಯಿಂದ ಎದ್ದು ಬರೆಯುವ ರೂಢಿಯೂ ಅವರಿಗೆ ಇತ್ತೆನ್ನಲಾಗಿದೆ.

ದೇರಳಕಟ್ಟೆ ಸಮೀಪದ ಬೆಳ್ಮದ ಖತೀಜಮ್ಮ ಅವರನ್ನು ಮದುವೆಯಾದ ಖಾಝಿ ತಲಪಾಡಿ ಬಾಪಕುಂಞಿ ಮುಸ್ಲಿಯಾರ್‌ಗೆ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದರು. ಇದೀಗ ಅವರ 5-6ನೆ ತಲೆಮಾರಿನವರು ತಲಪಾಡಿ, ಕೆ.ಸಿ.ರೋಡ್ ಆಸುಪಾಸಿನಲ್ಲಿ ನೆಲೆಸಿದ್ದರೂ ಕೂಡ ಹೆಚ್ಚಿನವರಿಗೆ ಬಾಪಕುಂಞಿ ಮುಸ್ಲಿಯಾರ್‌ರ ಬಗ್ಗೆ ಮಾಹಿತಿ ಇಲ್ಲ. ಬಾಪಕುಂಞಿ ಮುಸ್ಲಿಯಾರ್ ವಾಸಿಸುತ್ತಿದ್ದ ಮನೆ ಈಗಲೂ ತಲಪಾಡಿಯಲ್ಲಿದೆ. 1947ರಲ್ಲಿ ನಿಧನರಾದ ಬಾಪಕುಂಞಿ ಮುಸ್ಲಿಯಾರ್‌ರ ಕಬರ್ ತಲಪಾಡಿಯ ಬಿಲಾಲ್ ಜುಮಾ ಮಸೀದಿಯ ಆವರಣದ ದಫನ ಭೂಮಿಯಲ್ಲಿದೆ.

# ಧಾರ್ಮಿಕ ವಿದ್ವಾಂಸ ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ



ಬ್ಯಾರಿ ಸಮಾಜದಲ್ಲಿ ಹಿಂದೆ ಧರ್ಮ ವಿದ್ವಾಂಸರ ಕೊರತೆ ತೀವ್ರವಾಗಿತ್ತು. ಎಲ್ಲದಕ್ಕೂ ಕೇರಳೀಯ ವಿದ್ವಾಂಸರನ್ನೇ ಅವಲಂಬಿಸಬೇಕಾಗಿತ್ತು. ಬೆರಳೆಣಿಕೆಯ ಉಲಮಾಗಳಷ್ಟೇ ಬ್ಯಾರಿಗಳಲ್ಲಿದ್ದರು. ಆ ಪೈಕಿ ಎದ್ದುಕಾಣುವ ಹೆಸರೆಂದರೆ ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ.

ಬಂಟ್ವಾಳ ತಾಲೂಕಿನ ಒಕ್ಕೆತ್ತೂರು ಮಸೀದಿಯಲ್ಲಿ ಖತೀಬರಾಗಿದ್ದ ಇಸ್ಮಾಈಲ್ ಮುಸ್ಲಿಯಾರ್–ಬಾಯಾರಿನ ಖದೀಜಾ ದಂಪತಿಯ ಪುತ್ರನಾಗಿ 1916ರಲ್ಲಿ ವಿಟ್ಲದಲ್ಲಿ ಮುಹಮ್ಮದ್ ಹಾಜಿ ಜನಿಸಿದರು.

ಊರಿನಲ್ಲೇ 5ನೇ ತರಗತಿ ಶಾಲೆ ಮತ್ತು ದೊಡ್ಡಪ್ಪ ಅಹ್ಮದ್ ಮುಸ್ಲಿಯಾರ್ ಬಳಿ ಖುರ್‌ಆನ್ ಕಲಿತರು. ಈ ಮಧ್ಯೆ ತನ್ನ ಮಗನಿಗೆ ಆಶೀರ್ವಾದ ಮಾಡಿಸಲು ಮಂಜೇಶ್ವರ ಸಮೀಪದ ಉದ್ಯಾವರದಲ್ಲಿದ್ದ ಸೈಯದ್ ಆಟಕೋಯ ತಂಙಳ್ ಅವರ ಬಳಿ ಇಸ್ಮಾಈಲ್ ಮುಸ್ಲಿಯಾರ್ ಕರೆದೊಯ್ದಿದ್ದರು. "ಹುಡುಗನಿಗೆ ಒಳ್ಳೆಯ ಭವಿಷ್ಯವಿದೆ. ಧಾರ್ಮಿಕ ವಿದ್ಯಾಭ್ಯಾಸಕ್ಕೆ ಸೇರಿಸಿ' ಎಂದು ತಂಙಳ್ ನೀಡಿದ ಸಲಹೆಯ ಮೇರೆಗೆ "ಪಯ್ಯಕ್ಕಿ ಉಸ್ತಾದ್" ಎಂದು ಜನಪ್ರಿಯರಾಗಿದ್ದ ಪಯ್ಯಕ್ಕಿ ಅಬ್ದುರ್ರಹ್ಮಾನ್ ಮುಸ್ಲಿಯಾರ್‌ರ ದರ್ಸ್ (ಗುರುಕುಲ ವ್ಯವಸ್ಥೆಯ ಪಾಠಶಾಲೆ)ಗೆ ಸೇರಿಸಲಾಯಿತು. ಆವಾಗ ಅವರ ಪ್ರಾಯ ಕೇವಲ 13 ವರ್ಷ. ಬಳಿಕ ದೇರಳಕಟ್ಟೆ ಸಮೀಪದ ಕಿನ್ಯಾ, ಕಾಸರಗೋಡು ಸಮೂಪದ ತಳಂಗೆರೆಯಲ್ಲಿ ದರ್ಸ್ ಕಲಿತು ಮುಹಮ್ಮದ್ ಮುಸ್ಲಿಯಾರ್ ಆಗಿ ಹೊರ ಹೊಮ್ಮಿದರು.

ಒಂದಷ್ಟು ಉಲಮಾಗಳನ್ನು ಸಮಾಜಕ್ಕೆ ಸಮರ್ಪಿಸಬೇಕು ಎಂಬ ಹಂಬಲದೊಂದಿಗೆ ಅಡ್ಯಾರ್ ಕಣ್ಣೂರಿನ ಮಸೀದಿಯಲ್ಲಿ ದರ್ಸ್ ಆರಂಭಿಸಿದ ಮುಹಮ್ಮದ್ ಮುಸ್ಲಿಯಾರ್ 40 ಮುತಅಲ್ಲಿಂ (ಧಾರ್ಮಿಕ ವಿದ್ಯಾರ್ಥಿ)ಗಳನ್ನು ಸೇರಿಸಿಕೊಂಡಿದ್ದರು. ಆ ಪೈಕಿ 12 ಮಕ್ಕಳಿಗೆ ಬೆಳಗ್ಗಿನ ಗಂಜಿಯನ್ನು ತಾವೇ ಕೊಡುತ್ತಿದ್ದರು. ಜಾಣ ವಿದ್ಯಾರ್ಥಿಯೊಬ್ಬ ಆರ್ಥಿಕ ಮುಗ್ಗಟ್ಟಿನಿಂದಾಗಿ ಕಲಿಕೆಯನ್ನು ನಿಲ್ಲಿಸಲು ನಿರ್ಧರಿಸಿದಾಗ ದಿನಕ್ಕೆ ಎಂಟಾಣೆಯಂತೆ ಅವನಿಗೆ ಶಿಷ್ಯವೇತನವನ್ನು ತನ್ನ ಕೈಯಿಂದಲೇ ಮುಹಮ್ಮದ್ ಮುಸ್ಲಿಯಾರ್ ಕೊಟ್ಟಿದ್ದರು. ಉಸ್ತಾದರ ಸಂಬಳ ಈವತ್ತು ಕೂಡ ತೀರಾ ಕಡಿಮೆ ಇದೆ. ಹಾಗಾಗಿ ಆವಾಗ ಎಷ್ಟಿದ್ದೀತೆಂದು ಊಹಿಸಬಹುದು. ಈ ಮಧ್ಯೆ ತಮ್ಮ ಕುಟುಂಬವನ್ನು ವಿಟ್ಲದಿಂದ ಅಡ್ಯಾರ್ ಕಣ್ಣೂರಿಗೆ ವರ್ಗಾಯಿಸಿದ್ದರಿಂದ ಅವರ ಹೆಸರಿನೊಂದಿಗೆ "ಅಡ್ಯಾರ್ ಕಣ್ಣೂರು' ಶಾಶ್ವತವಾಗಿ ಅಂಟಿಕೊಂಡಿತು.

14 ವರ್ಷಗಳ ಸೇವೆಯ ಬಳಿಕ ಕುಂಬಳೆ ಬಳಿ ಕಂಬ್ಳೋಲ್‌ಗೆ ದರ್ಸನ್ನು ಸ್ಥಳಾಂತರಿಸಿದರು. ಕೆಲವು ವರ್ಷಗಳ ಬಳಿಕ ಮತ್ತೆ ಅಡ್ಯಾರ್ ಕಣ್ಣೂರಿಗೆ ಮರಳಿದರು. ಈ ನಡುವೆ ಕೆಲಕಾಲ ಕಾಸರಗೋಡಿನ ಮೊಗ್ರಾಲ್ ಪುತ್ತೂರು, ಬಂಟ್ವಾಳ ತಾಲೂಕಿನ ಅಮ್ಮೆಂಬಳ ಹಾಗೂ ಮೊಂಟೆಪದವು ಸಮೀಪದ ಪಟ್ಟೋರಿ ಮತ್ತಿತರ ಕಡೆ ಖತೀಬರಾಗಿ ಸೇವೆ ಸಲ್ಲಿಸಿದ್ದರು. ಈ ಮಧ್ಯೆ ಹಜ್ ಯಾತ್ರೆಯನ್ನೂ ಪೂರೈಸಿದ ಬಳಿಕ ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ ಎಂದು ಖ್ಯಾತರಾದರು.

ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕ ಪ್ರಭಾವ ಹೊಂದಿದ್ದ ಅವರು ಪ್ರಖಂಡ ವಿದ್ವಾಂಸರಾಗಿದ್ದರು. ಜನಪ್ರಿಯ ವಾಗ್ಮಿಗಳಾಗಿದ್ದರು. ಅಂದಿನ ಕಾಲದಲ್ಲಿ ಜನಸಾಮಾನ್ಯರು ಧಾರ್ಮಿಕ ವಿದ್ಯೆ ಕಲಿಯಲು "ವಾಳ್' (ರಾತ್ರಿ ವೇಳೆ ನಡೆಯುತ್ತಿದ್ದ ಧಾರ್ಮಿಕ ಉಪನ್ಯಾಸ) ಗಳನ್ನೇ ಅವಲಂಭಿಸಬೇಕಿತ್ತು. ಒಂದೆರಡು ದಿನವಲ್ಲ. ಒಬ್ಬರೇ ಗುರುಗಳು 10, 20, 40 ದಿನಗಳವರೆಗೂ ವಾಳ್ ಮಾಡಬೇಕಾಗಿತ್ತು. ಹಾಗೇ ವಾಳ್ ಮಾಡುವುದರಲ್ಲಿ ಅವರು ನಿಸ್ಸೀಮರಾಗಿದ್ದರು. ತನ್ನ ಹದಿನೆಂಟನೆ ವಯಸ್ಸಿನಲ್ಲಿ ಒಂದು ಕಡೆ 18 ದಿನಗಳ ಕಾಲ ಉಪನ್ಯಾಸ ನೀಡಿ "ಅದ್ಭುತ ಬಾಲಕ' ಎನಿಸಿಕೊಂಡಿದ್ದರು. ಅವರ ವಾಳ್ ಎಂದರೆ ಜನರು ಮುಗಿಬೀಳುತ್ತಿದ್ದರು. ಕರ್ಮಶಾಸ್ತ್ರವನ್ನು ಅತ್ಯಂತ ಮನಮುಟ್ಟುವಂತೆ ವಿವರಿಸಿ ಕೊಡುತ್ತಿದ್ದರು. ಅವರ ಜ್ಞಾನ ಭಂಡಾರದಿಂದ ಪಾಲು ಪಡೆಯದವರು ಆ ಕಾಲದಲ್ಲಿ ಯಾರೂ ಇರಲಿಲ್ಲ ಎಂಬ ಮಾತನ್ನು ಅವರ ಸಮಕಾಲೀನರು ಹೇಳುತ್ತಾರೆ.

ಸೂಫಿ ಜೀವನ ಶೈಲಿಗೆ ಹೊಂದಿಕೊಂಡಿದ್ದ ಅವರು ಬದುಕನ್ನು ಜ್ಞಾನದ ವಿತರಣೆಗೂ, ಆರಾಧನಾ ಕರ್ಮಗಳಿಗೂ ಮುಡಿಪಾಗಿಟ್ಟಿದ್ದರು. ತುಂಬ ಸರಳ ಬದುಕು ಸಾಗಿಸಿದರು. ಅಲ್ಲಾಹನ ಮೇಲಿನ ಭಕ್ತಿ, ಮಿತ ಆಹಾರ, ಬಹುತೇಕ ಕಾಲ್ನಡಿಗೆಯಲ್ಲೇ ಸಂಚಾರ, ಎಲ್ಲರಲ್ಲೂ ಬೆರೆಯುವ ಗುಣ ಅವರದ್ದಾಗಿತ್ತು. ಆಧ್ಯಾತ್ಮಿಕ ಸಾಧಕರಾಗಿದ್ದ ಅವರು

ಮಕ್ಕಾದ ಮಹಾ ವಿದ್ವಾಂಸರಾಗಿದ್ದ ಸೈಯದ್ ಮುಹಮ್ಮದ್ ಮಾಲಿಕಿ ಸಹಿತ ಹಲವು ಉನ್ನತರಿಂದ ಆಧ್ಯಾತ್ಮಿಕ ದೀಕ್ಷೆಯನ್ನು ಪಡೆದು ಕೊಂಡಿದ್ದರು.

ತಮ್ಮ 25ನೇ ವಯಸ್ಸಿನಲ್ಲಿ ಕುತ್ತಾರು ಪದವಿನ ಸೂಫಿಯಾಕರ ಪುತ್ರಿ ಸಾರಾ ಅವರನ್ನು ಮದುವೆಯಾಗುವ ಮೂಲಕ ಮುಹಮ್ಮದ್ ಹಾಜಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಪ್ರಸ್ತುತ ಮಣಿಪಾಲದ ಆತ್ರಾಡಿ ಖಾಝಿಯಾಗಿರುವ ಅಲ್ಹಾಜ್ ವಿ.ಕೆ. ಅಬೂಬಕರ್ ಮುಸ್ಲಿಯಾರ್ ಸೇರಿದಂತೆ ಆರು ಮಕ್ಕಳು ಆ ದಾಂಪತ್ಯದಲ್ಲಿ ಹುಟ್ಟಿದ್ದರು. ಮೊದಲ ಪತ್ನಿ ನಿಧನರಾದ ನಂತರ ಕಾಸರಗೋಡಿನ ನೆಲ್ಲಿಕ್ಕುನ್ನು ದರ್ಗಾ ಶರೀಫ್‌ನಲ್ಲಿ ಸಮಾಧಿಸ್ಥರಾಗಿರುವ ವಲಿಯ್ಯುಲ್ಲಾಹಿ ನೆಲ್ಲಿಕ್ಕುನ್ನು ಉಪ್ಪಾಪ ಅವರ ಪುತ್ರಿ ಆಮಿನಾ ಅವರನ್ನು ವರಿಸಿದರು. ಆಮಿನಾರಿಂದ ಮೂರು ಮಕ್ಕಳಾದವು. ಬಳಿಕ ಕುತ್ತಾರು ಸಮೀಪದ ಪರಿಯಕ್ಕಳದ ಬೀಫಾತಿಮಾರನ್ನು ವರಿಸಿದರು. ಈ ಪತ್ನಿಯಿಂದ ಮಕ್ಕಳಾಗಲಿಲ್ಲ. ನಂತರ ಮಂಗಳೂರು ಸಮೀಪದ ಪಕ್ಕಲಡ್ಕದ ಬೀಫಾತಿಮಾರನ್ನು ಮದುವೆಯಾದರು. ಅದರಲ್ಲಿ ಎಂಟು ಮಕ್ಕಳಾದವು.

1947ರಲ್ಲಿ ಅವರು ಮೊದಲ ಬಾರಿ ಪವಿತ್ರ ಹಜ್ ನಿರ್ವಹಿಸಿದ್ದರು. ಅದೊಂದು ಪವಾಡಸದೃಶ ಹಜ್ ಆಗಿತ್ತು. ಕೇವಲ ಎರಡು ರೂಪಾಯಿ ಕೈಯಲ್ಲಿಟ್ಟುಕೊಂಡು ಮನೆಯಿಂದ ಹೊರಟವರು ಮುಂಬೈ, ಅಜ್ಮೀರ್, ಹಾಜ್ ಮಲಂಗ್, ಮತ್ತೆ ಮುಂಬೈಗೆ ಬಂದು ಅಲ್ಲಿಂದ ಹಜ್ ಯಾತ್ರೆಗೆ ತೆರಳಿದ ಅವರು ಒಂದು ವರ್ಷ ಮೂರು ತಿಂಗಳ ಬಳಿಕ ಮನೆಗೆ ಮರಳಿದ್ದರು. ಆಗ ಅವರ ಪ್ರಾಯ 37 ವರ್ಷ. 1947, 1961, 1974 ಮತ್ತು ಕೊನೆಯದಾಗಿ 1989ರಲ್ಲಿ ಮರಣ ಹೊಂದುವ ವರ್ಷ ಅವರು ಹಜ್ ನಿರ್ವಹಿಸಿದರು.

ಕೊನೆಯ ಹಜ್ ನಿರ್ವಹಿಸಿ ಮರಳಿದ ಉಸ್ತಾದರನ್ನು ಮಧುಮೇಹ ಬಹಳ ಕಾಡಿತ್ತು. ತನ್ನ ಅಳಿಯ (ಮಗಳ ಗಂಡ) ಮಿತ್ತಬೈಲು ಅಬ್ದುಲ್ಲ ಹಾಜಿಯ ಮನೆಯಲ್ಲಿ ಅವರು ತಂಗುತ್ತಿದ್ದರು. ಅಲ್ಲೇ ಅವರು 1989ರ ಮಾರ್ಚ್ 31ರಂದು ಇಹಲೋಕ ತ್ಯಜಿಸಿದರು. ಆ ಮೂಲಕ ನಾಡು ಕಂಡ ಶ್ರೇಷ್ಠ ವಿದ್ವತ್ ಪ್ರತಿಭೆಯೊಂದು ಅಸ್ತಮಿಸಿತು.

# ಧಾರ್ಮಿಕ ವಿದ್ವಾಂಸ ಪಿ.ಎ. ಅಹ್ಮದ್ ಮುಸ್ಲಿಯಾರ್ ಪರಿಯಕ್ಕಳ



ಬ್ಯಾರಿ ಸಮಾಜದ ಅಪರೂಪದ ವಿದ್ವಾಂಸರಲ್ಲಿ ಪ್ರಮುಖರಾಗಿದ್ದ ಅಡ್ಯಾರ್ ಕಣ್ಣೂರು ಮುಹಮ್ಮದ್ ಹಾಜಿ ಈ ಸಮಾಜಕ್ಕೆ ನೀಡಿದ ಮುಖ್ಯ ಕೊಡುಗೆಗಳಲ್ಲಿ ಪಿ.ಎ. ಅಹ್ಮದ್ ಮುಸ್ಲಿಯಾರ್ ಪರಿಯಕ್ಕಳ ಕೂಡ ಒಬ್ಬರು. "ಅಬುಲ್ ಬುಶ್ರಾ' ಮತ್ತು "ಕುಂಬೋಲ್ ಉಸ್ತಾದ್' ಎಂದು ಗುರುತಿಸಲ್ಪಟ್ಟಿದ್ದ ಪಿ.ಎ. ಅಹ್ಮದ್ ಮುಸ್ಲಿಯಾರ್ ಮಂಗಳೂರು ತಾಲೂಕಿನ ಕುತ್ತಾರು ಪದವು ಸಮೀಪದ ಅಂಬ್ಲಮೊಗರು ಗ್ರಾಮದ ಪರಿಯಕ್ಕಳ (ಬ್ಯಾರಿ ಭಾಷೆಯಲ್ಲಿ ಪರೆಗಾಲ) ಎಂಬ ಪುಟ್ಟ ಹಳ್ಳಿಯಲ್ಲಿ ಅಹ್ಮದ್– ಆಯಿಶಾ ದಂಪತಿಯ ಮಗನಾಗಿ 1937ರಲ್ಲಿ ಜನಿಸಿದರು. ಅಜ್ಜಿ ಖದೀಜಮ್ಮ ಇಟ್ಟ ಹೆಸರು "ಅಮ್ಮಬ್ಬ'. ಪ್ರಾಥಮಿಕ ವಿದ್ಯಾಭ್ಯಾಸ ಊರಿನಲ್ಲೇ ಆಯಿತು, ಬದುಕಿನ ಬಂಡಿ ಮುನ್ನಡೆಸಲು ದೋಣಿ ಹಾಯಿಸುವ ವೃತ್ತಿ ಕೈಗೊಂಡಿದ್ದ ತಂದೆಯ ಜತೆ "ಅಮ್ಮಬ್ಬ" ಕೂಡ ಕೆಲವೊಮ್ಮೆ ಹುಟ್ಟು ಹಿಡಿಯಲು ಹೋಗುತ್ತಿದ್ದರು. ತುಂಬಾ ಬಡ ಕುಟುಂಬ. ಆದರೂ ತಂದೆ ಶಿಕ್ಷಣ ಪ್ರೇಮಿ. ಪರಿಯಕ್ಕಳದಲ್ಲಿ ಅಡ್ಯಾರ್ ಕಣ್ಣೂರ್ ಮುಹಮ್ಮದ್ ಹಾಜಿ ಉಸ್ತಾದರ ದೀರ್ಘ ದಿನಗಳ ಸರಣಿ ವಾಳ್ ಕಾರ್ಯಕ್ರಮವಿತ್ತು. ಒಂದು ದಿನದ ವಾಳ್ ಧಾರ್ಮಿಕ ವಿದ್ಯೆಯ ಕುರಿತಾಗಿತ್ತು. ಅದನ್ನು ಕೇಳಿಸಿಕೊಂಡಿದ್ದ ತಂದೆಯಲ್ಲಿ  ಬಹಳ ಪ್ರಭಾವ ಮೂಡಿಸಿತು. ಹನ್ನೆರಡು ವಯಸ್ಸಿನ ಹುಡುಗನನ್ನು ಕರೆದುಕೊಂಡು ಹೋಗಿ ಅಡ್ಯಾರ್ ಕಣ್ಣೂರ್ ಉಸ್ತಾದರ ಕೈಗೆ ಮಗನನ್ನು ಕೊಟ್ಟು, ಇವನನ್ನು ಒಳ್ಳೆಯ ಆಲಿಂ ಮಾಡಿಕೊಡಿ ಎಂದಿದ್ದರು. ಹಾಗೆ ಅಡ್ಯಾರ್ ಕಣ್ಣೂರಿನ ದರ್ಸಿಗೆ ಅಮ್ಮಬ್ಬ ಸೇರಿಕೊಂಡರು. "ದರ್ಸ್" ಎಂಬ ಗುರುಕುಲ ವ್ಯವಸ್ಥೆಯ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಊಟಕ್ಕೆ ಊರಿನ ಒಂದು ಮನೆಯನ್ನು ಗೊತ್ತುಪಡಿಸಲಾಗುತ್ತದೆ. ಅಮ್ಮಬ್ಬರಿಗೆ ಹೈದ್ರೋಸಾಕ ಎಂಬವರ ಮನೆಯಲ್ಲಿ ಊಟ. ಆ ಮನೆಯವರು ಹುಡುಗನನ್ನು ಬಹಳ ಇಷ್ಟಪಟ್ಟಿದ್ದರು. ಮುಂದೆ ಹೈದ್ರೋಸಾಕ ತನ್ನ ಮಗಳನ್ನು ಅಮ್ಮಬ್ಬರಿಗೆ ಮದುವೆ ಮಾಡಿಕೊಟ್ಟಿದ್ದರು.

ಅಡ್ಯಾರ್ ಕಣ್ಣೂರಿನ ಬಳಿಕ ಮಂಜೇಶ್ವರ ಪಾಂಡಿಯಲ್ಲಿ ದಸ್ ಕಲಿತ ಅಮ್ಮಬ್ಬ ನಂತರ ಪ್ರತಿಷ್ಠಿತ ಉಳ್ಳಾಲ ದರ್ಗಾ ಮಸೀದಿಯಲ್ಲಿ ಉಳ್ಳಾಲ ತಂಙಳ್ ನಡೆಸುತ್ತಿದ್ದ ಕಂಝುಲ್ ಉಲೂಂ ದರ್ಸ್ (ಆಗಿನ್ನೂ ಉಳ್ಳಾಲದಲ್ಲಿ ಅರಬಿಕ್ ಕಾಲೇಜ್ ಆರಂಭವಾಗಿರಲಿಲ್ಲ)ಗೆ ಸೇರಿದರು.  ಆವರೆಗೆ ಅಮ್ಮಬ್ಬ ಆಗಿದ್ದ ಅವರ ಹೆಸರನ್ನು ಉಳ್ಳಾಲ ತಂಙಳ್ "ಅಹ್ಮದ್' ಎಂದು ಬದಲಾಯಿಸಿದರು. ಹಾಗೇ ಅಮ್ಮಬ್ಬ "ಪಿ.ಎ.ಅಹ್ಮದ್ ಮುಸ್ಲಿಯಾರ್" ಆಗಿ ಜನಪ್ರಿಯರಾದರು. ನಾಲ್ಕು ವರ್ಷಗಳ ಕಾಲ ಉಳ್ಳಾಲದಲ್ಲಿ ಕಲಿತ ಅವರು ಕಲಿಕೆಯಲ್ಲಿ ಬಹಳ ನಿಪುಣರಾಗಿದ್ದರು. ಆಳ ಚರ್ಚೆಗಿಳಿದು ವಿಷಯವನ್ನು ಸಮಗ್ರವಾಗಿ ತಿಳಿದುಕೊಳ್ಳುತ್ತಿದ್ದರು. 1963ರಲ್ಲಿ ಉನ್ನತ ಶಿಕ್ಷಣಕ್ಕಾಗಿ ತಮಿಳುನಾಡಿನ ಪ್ರತಿಷ್ಠಿತ ಬಾಖಿಯಾತುಸ್ಸಾಲಿಹಾತ್ ಅರಬಿಕ್ ಕಾಲೇಜಿಗೆ ಸೇರಿದರು. ಮಿತಭಾಷಿಯಾಗಿ ತನ್ನಷ್ಟಕ್ಕೆ ತಾನಿದ್ದು ಕಲಿಕೆಗಷ್ಟೇ ಆಸಕ್ತಿ ಕೊಟ್ಟಿದ್ದರಿಂದ ಯಾರೂ ಅವರನ್ನು ಗುರುತಿಸಿರಲಿಲ್ಲ. ಅಂತಹ ಅಹ್ಮದ್ ಮುಸ್ಲಿಯಾರ್ ಏಕಾಏಕಿ ಕಾಲೇಜಿನಲ್ಲಿ ಪ್ರಚಾರಕ್ಕೆ ಬಂದಿದ್ದು ಮೊದಲ ವರ್ಷದ ಅಂತಿಮ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದಾಗಲೇ. ಎ.ಪಿ. ಅಬೂಬಕರ್ ಮುಸ್ಲಿಯಾರ್ ಕಾಂತಪುರಂ ಈ ಕಾಲೇಜಿನಲ್ಲಿ ಅಹ್ಮದ್ ಮುಸ್ಲಿಯಾರ್‌ರ ಸಹಪಾಠಿಗಳಾಗಿದ್ದರು.

ಅಹ್ಮದ್ ಮುಸ್ಲಿಯಾರ್ ಕಡುಬಡತನದಲ್ಲಿ ಬೆಳೆದವರು. ಕಲಿಕೆಗೆ ಬೇಕಾದ ಕಿತಾಬುಗಳನ್ನು ಖರೀದಿಸಲು ಕೂಡ ಅವರಿಗೆ ಸಾಧ್ಯವಿರಲಿಲ್ಲ. ದರ್ಸ್ ಕಲಿಯುವ ಕಾಲದಲ್ಲಿ ಹತ್ತಿರದ ಮನೆಗಳಲ್ಲಿ ಮಕ್ಕಳಿಗೆ ಟ್ಯೂಶನ್ ಕೊಟ್ಟು, ರಮಝಾನ್‌ನಲ್ಲಿ ಮಸೀದಿಗಳಿಗೆ ತೆರಳಿ ಭಾಷಣ ಮಾಡಿ ಹಣ ಸಂಗ್ರಹಿಸಿ ಖರ್ಚಿಗೆ ಬಳಸುತ್ತಿದ್ದರು. ಕಷ್ಟವೆಷ್ಟಿದ್ದರೂ ಕಲಿಕೆಯಿಂದ ಅವರು ಹಿಂದೆ ಸರಿಯದೆ ಓದಿನಲ್ಲಿ ಗಮನವಿಟ್ಟ ಕಾರಣ 1965ರ ಡಿಸೆಂಬರ್ 6ರಂದು ಎಂಎಫ್‌ಬಿ (ಮೌಲವಿ ಫಾಝಿಲ್ ಬಾಖವಿ) ಪದವೀಧರರಾಗಿ ಅವರು ಹೊರಹೊಮ್ಮಿದರು. ಊರಿಗೆ ಮರಳುವ ಸಿದ್ಧತೆಯಲ್ಲಿರುವಾಗ ತಂದೆಯ ವಾರ್ತೆ ತಲುಪಿತು.

ಊರಿನ ಪ್ರಥಮ ಪದವೀಧರ ವಿದ್ವಾಂಸರಾಗಿ ಹೊರಹೊಮ್ಮಿದ ಉಸ್ತಾದರನ್ನು ಊರಿಗೆ ಊರೇ ಸ್ವಾಗತಿಸಿತು. ಅವರನ್ನು ಮನೆಯಿಂದ ಬೈತಾರ್ ಮಸೀದಿ ತನಕ ಮೆರವಣಿಗೆಯಲ್ಲಿ ಕರೆದೊಯ್ದು ಸನ್ಮಾನಿಸಲಾಯಿತು. ಅಂದು ತಂದೆ ಜೊತೆ ದೋಣಿಗೆ ಹುಟ್ಟು ಹುಟ್ಟುಹಾಕುತ್ತಾ ಬರುತ್ತಿದ್ದ ಅಮ್ಮಬ್ಬ ಎಂಬ ಹುಡುಗ ಇಂದು ಶ್ವೇತವಸ್ತ್ರಧಾರಿಯಾಗಿ, ಅಹ್ಮದ್ ಬಾಖವಿ ಎಂಬ ಬಿರುದುಧಾರಿ ಆಲಿಂ ಆಗಿ ಬರುವುದನ್ನು ಕಂಡು ಸರ್ವರೂ ಸಂಭ್ರಮಪಟ್ಟಿದ್ದರು.

ಸೇವಾರಂಗಕ್ಕಿಳಿದ ಅಹ್ಮದ್ ಮುಸ್ಲಿಯಾರ್ ಮೊದಲೆರಡು ವರ್ಷ ಕಣ್ಣಾನೂರು ಜಿಲ್ಲೆಯ ಮಾಂಗಡವ್, ನಂತರ ಏಳು

ವರ್ಷ ಅದೇ ಜಿಲ್ಲೆಯ ತಳಿಪರಂಬ ಖುವ್ವತುಲ್ ಇಸ್ಲಾಮ್‌ನಲ್ಲಿ ಮುದರ್ರಿಸ್ ಆಗಿ ಸೇವೆ ಸಲ್ಲಿಸಿದರು. ನಂತರ ಕುಂಬಳೆ ಸಮೀಪದ ಕುಂಬೋಳ್‌ನಲ್ಲಿ ಸೇವೆಗೆ ಸೇರಿ ಹತ್ತು ವರ್ಷ ಅಲ್ಲಿದ್ದರು. ಅದರೊಂದಿಗೆ "ಕುಂಬೋಲ್ ಉಸ್ತಾದ್" ಆಗಿ ಜನಪ್ರಿಯರಾದರು. ಅರವತ್ತಕ್ಕೂ ಅಧಿಕ ವಿದ್ಯಾರ್ಥಿಗಳಿದ್ದ ದೊಡ್ಡ ದರ್ಸ್ ಅವರದ್ದಾಗಿತ್ತು. ಎಲ್ಲ ಪ್ರಕಾರಗಳ ಧಾರ್ಮಿಕ ಶಿಕ್ಷಣದ ಜತೆ ಸಾಮಾನ್ಯ ಜ್ಞಾನಕ್ಕೂ ಒತ್ತು ಕೊಡುತ್ತಿದ್ದರು. ಪತ್ರಿಕೆ ಓದುವುದಕ್ಕೂ ಪಠ್ಯೇತರ ಜ್ಞಾನ ಕರಗತಗೊಳಿಸುವುದಕ್ಕೂ ಪ್ರೋತ್ಸಾಹ  ನೀಡುತ್ತಿದ್ದರು.

ಅತ್ಯಂತ ವಿನಯಾನ್ವಿತರಾಗಿದ್ದ, ಸರಳ ಗುಣನಡತೆಯ ಸಾತ್ವಿಕ ವಿದ್ವಾಂಸರಾಗಿದ್ದ ಅವರು ಜ್ಞಾನದ ಗಳಿಕೆ ಮತ್ತು ಹಂಚಿಕೆಯಲ್ಲಿ ಅತೀವ ಉತ್ಸಾಹ ಹೊಂದಿದ್ದರು. ಅವರ ಪಾಂಡಿತ್ಯಕ್ಕೆ ತಲೆದೂಗಿದ ಕೇರಳೀಯ ವಿದ್ವಾಂಸರು ಸಮಸ್ತ ಕೇರಳ ಜಂಇಯತುಲ್ ಉಲಮಾ ಎಂಬ ದಕ್ಷಿಣ ಭಾರತದ ಪ್ರತಿಷ್ಠಿತ ಉಲಮಾ ಒಕ್ಕೂಟದ ಕೇಂದ್ರ ಮುಶಾವರಕ್ಕೆ ಆಯ್ಕೆ ಮಾಡಿದ್ದರು. ಆ ಮೂಲಕ ಈ ಹುದ್ದೆಗೇರಿದ ಮೊದಲ ಕನ್ನಡಿಗ ಎಂಬ ಖ್ಯಾತಿಗೂ ಪಾತ್ರರಾದರು. ಕೇರಳದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಾದ ಪಟ್ಟಿಕ್ಕಾಡ್ ಜಾಮಿಯಾ ಮತ್ತು ಕಾಸರಗೋಡು ಜಾಮಿಯಾ ಸಅದಿಯಾ ಅರಬಿಕ್ ಕಾಲೇಜುಗಳ ಪ್ರಾಧ್ಯಾಪಕರಾಗಿಯೂ ಅವರನ್ನು ಆಹ್ವಾನಿಸಲಾಗಿತ್ತು. ನಯವಾಗಿಯೇ ಅವರು ಅದನ್ನೆಲ್ಲ ತಿರಸ್ಕರಿಸಿ ಸಾಂಪ್ರದಾಯಿಕ ಪಳ್ಳಿ ದರ್ಸ್‌ನಲ್ಲೇ ಮುಂದುವರಿದರು. ಯಾರ ಮುಂದೆಯೂ ಸತ್ಯವನ್ನು ನಿರ್ಭೀತವಾಗಿ ಹೇಳುವ ಸಾತ್ವಿಕ ಗುಣ ಅವರದ್ದಾಗಿತ್ತು.

1973ರಲ್ಲಿ ಹಜ್ ನಿರ್ವಹಿಸಿದ ಅವರು ಅಡ್ಯಾರ್ ಕಣ್ಣೂರಿನ ಹಫ್ಸಾ ಎಂಬವರನ್ನು ಮದುವೆಯಾಗಿದ್ದರು. ಈ ದಂಪತಿಗೆ ಒಬ್ಬ ಪುತ್ರ ಮತ್ತು ನಾಲ್ಕು ಹೆಣ್ಣು ಮಕ್ಕಳು. ಇದೀಗ ಆ ಕುಟುಂಬವು ಕುಂಬಳೆ ಬಳಿಯ ಶಿರಿಯದಲ್ಲಿ ವಾಸ ಮಾಡುತ್ತಿದೆ.

ನೂರಾರು ಪ್ರಗಲ್ಭ ವಿದ್ವಾಂಸರನ್ನು ಸಮಾಜಕ್ಕೆ ಸಮರ್ಪಿಸಿದ್ದ ಬಹುದೊಡ್ಡ ವಿದ್ವತ್ ಪ್ರತಿಭೆಯಾಗಿದ್ದ ಪಿ.ಎ.ಅಹ್ಮದ್ ಮುಸ್ಲಿಯಾರ್ 1986ರ ಜುಲೈ 4ರಂದು ಮುಂಜಾನೆ ಎಂದಿನಂತೆ ಸುಬಹಿ ಬಾಂಗ್‌ಗಿಂದ ಮುಂಚೆಯೇ ಎದ್ದು ತಹಜ್ಜುದ್ ನಿರ್ವಹಿಸಿದ್ದರು. ಆರೋಗ್ಯವಾಗಿಯೇ ಇದ್ದ ಅವರು ಮುನ್ನಾದಿನ ಶುಕ್ರವಾರ ಮುಡಿಪು ಸಮೀಪದ ಅರ್ಕಾಣ ಎಂಬಲ್ಲಿ ಶಿಷ್ಯರೊಬ್ಬರ ದರ್ಸ್‌ನ ಉದ್ಘಾಟನೆಗಾಗಿ ಹೋಗಿ ಬಂದಿದ್ದರು. ಸಾಮಾನ್ಯವಾಗಿ ಜಮಾಅತ್ ಆಗಿಯೇ ನಮಾಝ್ ನಿರ್ವಹಿಸುವ ಅವರು ಅಂದು ಮಾತ್ರ ಸುಬಹಿ ಬಾಂಗ್ ಆದ ಕೂಡಲೇ ನಮಾಝ್‌ಗೆ ನಿಂತಿದ್ದರು. ಸ್ವಲ್ಪ ಹೊತ್ತಿನ ಬಳಿಕ ಅವರು ಮಲಗಿರುವುದು ಕಂಡುಬಂತು. ನಮಾಝ್‌ನಲ್ಲಿರುವಾಗಲೇ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಐವತ್ತರ ಹರೆಯ ತಲುಪುವ ಮುನ್ನವೇ ಅವರು ಐಹಿಕ ಜೀವನಕ್ಕೆ ವಿದಾಯ ಕೋರಿದ್ದರು.ತ್ತರ ಹರೆಯ ತಲುಪುವ ಮುನ್ನವೇ ಅವರು ಐಹಿಕ ಜೀವನಕ್ಕೆ ವಿದಾಯ ಕೋರಿದ್ದರು.

# ಅನಾಥರ ಪಾಲಕ:
# ಶೈಖುನಾ ಪಿ.ಎಂ. ಅಬ್ಬಾಸ್ ಮುಸ್ಲಿಯಾರ್ ಮಂಜನಾಡಿ



ಕೊಡಗು ಜಿಲ್ಲೆಯ ಮಡಿಕೇರಿ ಸಮೀಪದ ಹಾಕತ್ತೂರು ಎಂಬಲ್ಲಿ ಮುಹಮ್ಮದ್ ಕುಂಞಿ–ಬೀಫಾತಿಮಾ ಹಜ್ಜುಮ್ಮ ದಂಪತಿಯ ಪುತ್ರನಾಗಿ 1946ರ ಜನವರಿ 1ರಂದು ಜನಿಸಿದ ಪಿ.ಎಂ. ಅಬ್ಬಾಸ್ ಮುಸ್ಲಿಯಾರ್ ಧಾರ್ಮಿಕ ಮತ್ತು ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದ ಪ್ರಮುಖ ಹಿರಿಯ ವಿದ್ವಾಂಸ. ಕೊಡಗಿನಲ್ಲಿ ಹುಟ್ಟಿದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಮಂಜನಾಡಿಯನ್ನು ತನ್ನ ಕರ್ಮಭೂಮಿಯನ್ನಾಗಿಸಿಕೊಂಡು ಕರ್ನಾಟಕ ಮತ್ತು ಕೇರಳ ಹಾಗೂ ಗಲ್ಫ್ ರಾಷ್ಟ್ರಗಳಲ್ಲಿ ಮನೆ ಮಾತಾದರು.

ಕೊಡಗಿನ ಹಾಕತ್ತೂರಿನ ಓತುಪಳ್ಳಿಯಲ್ಲಿ ಪ್ರಾಥಮಿಕ ದೀನೀ ಶಿಕ್ಷಣವನ್ನು ಅಹ್ಮದ್ ಮುಸ್ಲಿಯಾರ್ ಅವರಿಂದ ಪಡೆದ ಅವರು ಬಳಿಕ ಕೊಡಗಿನ ಕೊಂಡಂಗೇರಿ ಎಂಬಲ್ಲಿ ಕೆ.ಸಿ. ಅಬ್ದುಲ್ಲಾ ಕುಟ್ಟಿ ಮುಸ್ಲಿಯಾರ್‌ರ ಬಳಿ ಐದು ವರ್ಷ ದರ್ಸ್ ಕಲಿತರು. ನಂತರ ಕೇರಳದ ಕಣ್ಣೂರ್ ಜಿಲ್ಲೆಯ ತಳಿಪರಂಬ ಬಳಿಯ ತಿರುವಟ್ಟೂರ್‌ನಲ್ಲಿ ದರ್ಸಿಗೆ ಸೇರಿದರು. "ತಿರುವಟ್ಟೂರ್ ಉಸ್ತಾದ್" ಎಂದೇ ಪ್ರಸಿದ್ಧರಾಗಿದ್ದ ಹಿರಿಯ ವಿದ್ವಾಂಸ, ಸೂಫಿವರ್ಯ ಸಿ.ಪಿ. ಮುಹಮ್ಮದ್ ಕುಟ್ಟಿ ಮುಸ್ಲಿಯಾರ್ ಅವರಿಂದ ಶಿಕ್ಷಣ ಪಡೆದ ನಂತರ ಉಳ್ಳಾಲ ತಂಙಳ್‌ರ ದರ್ಸಿಗೆ ಸೇರಿ ಮೂರು ವರ್ಷ ಕಲಿತರು. ಉನ್ನತ ಶಿಕ್ಷಣಕ್ಕಾಗಿ ಉತ್ತರ ಪ್ರದೇಶದ ದೇವ್‌ಬಂದ್‌ಗೆ ತೆರಳಿ 1968ರಲ್ಲಿ ದೌರತುಲ್ ಹದೀಸ್‌ನಲ್ಲಿ ಪದವಿ ಪಡೆದರು.

ಅಧ್ಯಾಪನ ಕ್ಷೇತ್ರಕ್ಕಿಳಿದ ಅಬ್ಬಾಸ್ ಉಸ್ತಾದ್ ಕಾಸರಗೋಡು ಜಿಲ್ಲೆಯ ದೇಲಂಪಾಡಿಯಲ್ಲಿ ಐದು ವರ್ಷ ಮುದರ್ರಿಸ್ ಆಗಿ ಸೇವೆ ಸಲ್ಲಿಸಿದರು. ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಸಮೀಪದ ಉಜಿರೆಯಲ್ಲಿ ಎರಡು ವರ್ಷ ಮುದರ್ರಿಸ್ ಆಗಿ, ನಂತರ ಮಂಜನಾಡಿಗೆ ಕಾಲಿಟ್ಟರು. ಉಳ್ಳಾಲದಲ್ಲಿ ಕಲಿಯುತ್ತಿದ್ದಾಗಲೇ ಉಸ್ತಾದರಿಗೆ ಮಂಜನಾಡಿಯ ಜೊತೆ ಸಂಬಂಧ ಬೆಳೆದಿತ್ತು. ಮಂಜನಾಡಿಯಲ್ಲಿ ವ್ಯವಸ್ಥಿತವಾಗಿ ದರ್ಸ್ ಆರಂಭಿಸಿ ಮಂಜನಾಡಿ ಉಸ್ತಾದ್ ಎಂದೇ ಖ್ಯಾತರಾಗಿದ್ದ ಸಿ.ಪಿ.ಮುಹಮ್ಮದ್ ಕುಂಞಿ ಮುಸ್ಲಿಯಾರ್‌ರೊಂದಿಗೆ ನಿಕಟ ಸಂಪರ್ಕ ಬೆಳೆಸಿದ್ದರು. ಅವರನ್ನು ಆತ್ಮೀಯ ಗುರುವಾಗಿ ಕಂಡಿದ್ದರು. ಉಳ್ಳಾಲ ತಂಙಳ್‌ರ ಮಧ್ಯಸ್ಥಿಕೆಯಲ್ಲಿ ಸಿ.ಪಿ.ಉಸ್ತಾದ್ ಮಧ್ಯೆ ಮಾವ – ಅಳಿಯ ಸಂಬಂಧ ಕೂಡಾ ಕುದುರಿತ್ತು.

ಮಂಜನಾಡಿ ಉಸ್ತಾದರು ಸುದೀರ್ಘ 25 ವರ್ಷಗಳ ಸೇವೆಯ ಬಳಿಕ ಮಂಜನಾಡಿಯಿಂದ ವಿರಮಿಸಿದಾಗ ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡ ಅಬ್ಬಾಸ್ ಉಸ್ತಾದ್ ಅವರು ಮಂಜನಾಡಿ ಉಸ್ತಾದರು ಬೆಳೆಸಿದ ಧರ್ಮ ಪ್ರಕಾಶವನ್ನು ಬೆಳಗಿಸಿದರು. ಸುಮಾರು 21 ವರ್ಷಗಳ ಕಾಲ ದರ್ಸ್ ಸೇವೆ ನಡೆಸಿದ ಅವರು 1994ರಲ್ಲಿ ಅಲ್ ಮದೀನಾ ಯತೀಂ ಖಾನ ಸಂಸ್ಥೆಯನ್ನು ಪ್ರಾರಂಭಿಸಿದರು. ಹಾಗೇ ಮಂಜನಾಡಿಯಲ್ಲಿ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ ಇಟ್ಟ ಅವರು ತನ್ನ ಮರಣದ ತನಕ ಅಲ್ಲಿ ದರ್ಸ್ ಮುಂದುವರೆಸಿದರು. ಸುಮಾರು ಐದು ದಶಕಗಳಿಗೂ ಹೆಚ್ಚು ಕಾಲ ಮುದರ್ರಿಸ್ ಆಗಿ ನೂರಾರು ವಿದ್ಯಾರ್ಥಿಗಳಿಗೆ ಜ್ಞಾನ ದಾನ ಮಾಡಿದ ಅಬ್ಬಾಸ್ ಉಸ್ತಾದ್ ಹಲವಾರು ವಿದ್ವಾಂಸರನ್ನು ರೂಪಿಸಿದರು.

ಶಿಕ್ಷಣದ ಮಹತ್ವ ಅರಿಯದೆ ಅಥವಾ ಆರ್ಥಿಕ ಸಂಕಷ್ಟದಿಂದ ಬಹುತೇಕ ಬಡ, ಮಧ್ಯಮ ವರ್ಗದವರು ಶಿಕ್ಷಣದಿಂದ ವಂಚಿತರಾಗುತ್ತಿದ್ದ ಕಾಲದಲ್ಲಿ ವಿದ್ಯೆಯ ಜಾಗೃತಿ ಮೂಡಿಸಿ ಅನಾಥ ಬಡ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ವಾಸ್ತವ್ಯ, ಆಹಾರ, ಬಟ್ಟೆ–ಬರೆ ಒದಗಿಸಿ ಶಿಕ್ಷಣವನ್ನು ನೀಡಿರುವುದು ಅವರ ಹೆಗ್ಗಳಿಕೆಯಾಗಿದೆ. ಇಂಗ್ಲಿಷ್ ಶಿಕ್ಷಣವು ನಗರ ಪ್ರದೇಶಗಳಿಗೆ ಹಾಗೂ ಶ್ರೀಮಂತ ವರ್ಗಕ್ಕೆ ಮಾತ್ರ ದಕ್ಕುತ್ತಿದ್ದ ಕಾಲವದು. ಉಸ್ತಾದರು ಗ್ರಾಮೀಣ ಪ್ರದೇಶದ ಬಡ ಮಕ್ಕಳು ದೀನೀ ವಿದ್ಯಾಭ್ಯಾಸದ ಜೊತೆಗೆ ಮಿತ ದರದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪಡೆಯುವಂತಾಗಲು ಹಾಗೂ ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿ ಪ್ರತ್ಯೇಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ಅವರ ನಿರಂತರ ಶ್ರಮ ಮತ್ತು ದೂರದರ್ಶಿತ್ವದ ಕಾರಣದಿಂದ ಇಂದು ಮಂಜನಾಡಿಯ ಅಲ್ ಮದೀನಾ ಸಂಸ್ಥೆಯ 25 ಎಕರೆಯಷ್ಟು ಹರಡಿಕೊಂಡಿರುವ ವಿಶಾಲ ಸುಂದರ ಜಮೀನಿನಲ್ಲಿ ಮತ–ಲೌಕಿಕ ಶಿಕ್ಷಣ ಸಂಸ್ಥೆಗಳು ರಾರಾಜಿಸುತ್ತಿವೆ. ಯತೀಂ ಖಾನ, ನಿರ್ಗತಿಕ ಮಂದಿರ, ನಾರ್ತ್ ಕರ್ನಾಟಕ ಹೋಂ, ಹಿಫ್ಳುಲ್ ಖುರ್‌ಆನ್ ಕಾಲೇಜು, ಜೂನಿಯರ್ ಮತ್ತು ಸೀನಿಯರ್ ದಅವಾ ಕಾಲೇಜು, ಕನ್ನಡ ಮೀಡಿಯಂ ಹೈಸ್ಕೂಲ್, ಇಂಗ್ಲಿಷ್ ಮೀಡಿಯಂ ಹೈಸ್ಕೂಲ್, ವಿಮೆನ್ಸ್

ಕಾಲೇಜು, ವಿಮೆನ್ಸ್ ಶರೀಅತ್ ಕಾಲೇಜು, ಪ್ರಿ–ಇಸ್ಲಾಮಿಕ್ ಸ್ಕೂಲ್ ಇತ್ಯಾದಿಗಳು ಕಾರ್ಯಾಚರಿಸುತ್ತಿವೆ. ಸುಮಾರು 3,000 ವಿದ್ಯಾರ್ಥಿಗಳಿಗೆ ಅಲ್ ಮದೀನಾ ಕ್ಯಾಂಪಸ್ ಕಲಿಕಾ ಕೇಂದ್ರವಾಗಿದೆ. ಧಾರ್ಮಿಕ ವಿದ್ಯಾಭ್ಯಾಸ ಪೂರೈಸಿ ಆಲಿಮುಗಳಾಗುವವರಿಗೆ ಮರ್ಝೂಖಿ ಬಿರುದು ಪ್ರದಾನ ಮಾಡಲಾಗುತ್ತಿದೆ.


ಸಮಾಜದ ಸರಳ ಸಾಮೂಹಿಕ ವಿವಾಹಕ್ಕೆ ಉತ್ತೇಜನ ನೀಡಿ ದಾನಿಗಳ ಸಹಕಾರದಿಂದ ಸುಮಾರು 500ಕ್ಕೂ ಹೆಚ್ಚು ಅನಾಥ–ಬಡ ಹೆಣ್ಣು ಮಕ್ಕಳ ಸಾಮೂಹಿಕ ವಿವಾಹ ನಡೆಸಿಕೊಟ್ಟ ಖ್ಯಾತಿ ಉಸ್ತಾದರಿಗಿದೆ. ಅರಬಿಗಳ ನೆರವನ್ನು ಪಡೆದು ವಿವಿಧ ಮೊಹಲ್ಲಾಗಳಲ್ಲಿ ಹತ್ತಾರು ಮಸ್ಜಿದ್‌ಗಳನ್ನೂ ನಿರ್ಮಿಸಲು ಉಸ್ತಾದರು ಕಾರಣರಾಗಿದ್ದಾರೆ. ಆಧ್ಯಾತ್ಮ ವಲಯದ ಹತ್ತಾರು ಉಲಮಾ, ಸೂಫಿ, ಸಾದಾತುಗಳಿಂದ ಅಧ್ಯಾತ್ಮಿಕ ದೀಕ್ಷೆಯನ್ನು ಪಡೆದಿರುವ ಅಬ್ಬಾಸ್ ಉಸ್ತಾದ್ ದೇಶ ವಿದೇಶಗಳಲ್ಲೂ ಹಲವಾರು ಮಕ್‌ಬರಗಳಲ್ಲಿ ಝಿಯಾರತ್ ಮಾಡಿದ್ದಾರೆ.

ಉತ್ತಮ ವಾಗ್ಮಿ ಬರಹಾಸಕ್ತಿಯನ್ನೂ ಮೈಗೂಡಿಸಿಕೊಂಡಿದ್ದ ಉಸ್ತಾದ್  ಅರಬ್ಬಿ ಮಲಯಾಳದಲ್ಲಿ ಪ್ರಸಿದ್ಧ ನಬಿ ಕೀರ್ತನೆ "ಮಂಖೂಸ್ ಮೌಲಿದ್" ರಚಿಸಿ ಕನ್ನಡಕ್ಕೂ ಅನುವಾದಿಸಿದ್ದಾರೆ. "ಅಲ್ ಬುನ್ಯಾನುಲ್ ಮರ್ಸೂಸ್ ಫೀ ಮೌಲಿದಿಲ್ ಮಂಖೂಸ್" ಎನ್ನುವ ಅರಬ್ಬಿ ಕೃತಿಯನ್ನು ತುರ್ಕಿಯ ಜಗತ್ಪ್ರಸಿದ್ಧ "ಇಸಿಕ್ ಕಿತಾಬೇವಿ" ಪ್ರಕಾಶನ ಸಂಸ್ಥೆಯು ಮುದ್ರಿಸಿ ಉಚಿತವಾಗಿ ವಿತರಿಸುತ್ತಿರುವುದು ಕೃತಿಯ ಹಿರಿಮೆಗೆ ಸಾಕ್ಷಿ. ಕನ್ನಡದಲ್ಲಿ ಉಸ್ತಾದರ "ಅಜ್ಮೀರ್ ಖ್ವಾಜಾ ಚರಿತ್ರೆ" ಪ್ರಕಟಗೊಂಡಿದೆ. 2013ರಲ್ಲಿ ಉಸ್ತಾದರ ಇನ್ನೊಂದು ಕಿರು ಅರಬ್ಬೀ ಗ್ರಂಥ " ಅತ್ತವಸ್ಸುಲ್" ಪ್ರಕಾಶನಗೊಂಡಿದೆ.

ನಾಡಿನ ಮುಂಚೂಣಿ ಉಲಾಮಾಗಳಲ್ಲಿ ಒಬ್ಬರಾಗಿದ್ದ ಅಬ್ಬಾಸ್ ಉಸ್ತಾದ್ ಪ್ರತಿಷ್ಠಿತ ಸಮಸ್ತ ಕೇರಳ ಜಂ ಇಯ್ಯತುಲ್ ಉಲಮಾದ ಮುಶಾವರ ಸದಸ್ಯರಾಗಿದ್ದರು. ಕರ್ನಾಟಕದ ಉಲಮಾ ಒಕ್ಕೂಟವಾದ ಸುನ್ನೀ ಜಂ ಇಯ್ಯತುಲ್ ಉಲಮಾದ ಕೋಶಾಧಿಕಾರಿ ಹಾಗೂ ಕರ್ನಾಟಕ ಸುನ್ನೀ ಕೋ ಓರ್ಡಿನೇಷನ್ ಕಮಿಟಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಮೊಹಲ್ಲಾಗಳಿಗೆ ಉಪ ಖಾಝಿಯಾಗಿ ಸೇವೆ ಸಲ್ಲಿಸಿದ್ದಾರೆ.

1997ರಲ್ಲಿ ಮೊದಲ ಬಾರಿ ಮತ್ತು ಆ ಬಳಿಕ ಹಲವು ಬಾರಿ ಹಜ್ಜ್ ನಿರ್ವಹಿಸಿದ್ದ ಉಸ್ತಾದರು ಸೌದಿ, ಯುಎಇ, ಕುವೈಟ್, ಕತರ್, ಬಹರೈನ್, ಮಲೇಷ್ಯಾ ಸೇರಿದಂತೆ ವಿವಿಧ ಕೊಲ್ಲಿ ರಾಷ್ಟ್ರಗಳನ್ನು ಸಂದರ್ಶಿಸಿದ್ದಾರೆ. ಉಸ್ತಾದರ ವಿದ್ವತ್, ಪ್ರಭೋದನೆ ಮತ್ತು ಶೈಕ್ಷಣಿಕ, ಸಾಮಾಜಿಕ ಸೇವೆ ಚಟುವಟಿಕೆಗಳನ್ನು ಗುರುತಿಸಿ ಇಂಡಿಯನ್ ಗ್ರಾಂಡ್ ಮುಫ್ತಿ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಅವರು "ಶರಫುಲ್ ಉಲಮಾ" (ಉಲಮಾ ಶ್ರೇಷ್ಠ) ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. 2019 ಜುಲೈ 29ರಂದು ಪತ್ನಿ ಆಸಿಯಾ, 5 ಮಂದಿ ಪುತ್ರರು ಹಾಗೂ 3 ಮಂದಿ ಪುತ್ರಿಯರ ಸಹಿತ ಅಪಾರ ಬಂಧುಬಳಗವನ್ನು ಬಿಟ್ಟಗಲಿದರು.

## "ಬೈತಾರ್ ಉಸ್ತಾದ್" ಖ್ಯಾತಿಯ ಬಿ.ಮುಹಮ್ಮದ್ ಮುಸ್ಲಿಯಾರ್



ಮಂಗಳೂರು ತಾಲೂಕಿನ ಹರೇಕಳ ಗ್ರಾಮದ ನೇತ್ರಾವತಿ ನದಿ ತೀರದ ಬೈತಾರ್ ಎಂಬಲ್ಲಿ 1945ರ ಜನವರಿ 10ರಂದು ಬಿ. ಅಬ್ದುಲ್ ಖಾದರ್-ಫಾತಿಮಾ ದಂಪತಿಯ ದ್ವಿತೀಯ ಪುತ್ರನಾಗಿ ಜನಿಸಿದ ಬಿ.ಮುಹಮ್ಮದ್ "ಬೈತಾರ್ ಉಸ್ತಾದ್" ಎಂದೇ ಖ್ಯಾತರಾಗಿದ್ದಾರೆ.

ಬೈತಾರ್‌ನ ಮುಹಿಯ್ಯುದ್ದೀನ್ ಮಸೀದಿಯ ಅಧೀನದಲ್ಲಿದ್ದ ಮದ್ರಸದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಅವರು ಹರೇಕಳ-ಪಾವೂರಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೆ ತರಗತಿ ಕಲಿತರು. ಅದೇ ವೇಳೆ ಬಜ್ಪೆ ಸಮೀಪದ ಪೇರ ಎಂಬಲ್ಲಿನ ಮಸೀದಿಯಲ್ಲಿ ಖತೀಬ್ ಆಗಿದ್ದ ತನ್ನ ದೊಡ್ಡಪ್ಪ ಅರಬಿ ಮುಸ್ಲಿಯಾರ್‌ರ ಆಹ್ವಾನದ ಮೇರೆಗೆ ಧಾರ್ಮಿಕ ಶಿಕ್ಷಣ ಪಡೆಯಲು ತೆರಳಿದರು. ಆವಾಗ ಅವರಿಗೆ ಕೇವಲ 12ರ ಹರೆಯ. ದೊಡ್ಡಪ್ಪರ ಕಣ್ತಪ್ಪಿಸಿ ಆಟವಾಡುತ್ತಿದ್ದ ಅವರು ತೆಂಗಿನ ಮರವೇರಿ ಬಿದ್ದು ಗಾಯಮಾಡಿಕೊಂಡರು. ಅಲ್ಲದೆ ತನ್ನ ಒಂದು ಕೈಯನ್ನು ಕಳೆದುಕೊಂಡರು. ಈಗಿನಂತೆ ಸಕಾಲಕ್ಕೆ ಚಿಕಿತ್ಸೆ ಲಭ್ಯವಾಗದ ಕಾರಣ ಸತತ ಐದಾರು ವರ್ಷಗಳ ಕಾಲ ಯಾತನೆ ಅನುಭವಿಸಿದರು. ತನ್ನ 18ನೆ ವರ್ಷದಲ್ಲಿ ಕೃತಕ ಕೈ ಜೋಡಿಸಿದರು.

ದೊಡ್ಡಪ್ಪ ಅರಬಿ ಮುಸ್ಲಿಯಾರ್‌ರ ಬಳಿ ಶಿಕ್ಷಣ ಪಡೆದ ಬಳಿಕ ನೇರ ಉಳ್ಳಾಲ ತಂಙಳ್‌ರ ಬಳಿ ದರ್ಸ್‌ಗೆ ಸೇರಿದರು. ನಂತರ ವೆಲ್ಲೂರಿನ ಅರಬಿಕ್ ಕಾಲೇಜು ಸೇರಿ ಮೌಲಾನಾ ಫಾಝಿಲ್ ಬಾಕಿಯಾತುಸ್ಸಾಲಿಹಾತ್ (ಎಂಎಫ್‌ಬಿ) ಬಿರುದು ಪಡೆದು ಬಂದರು. ಹಾಗೇ ಉಳ್ಳಾಲ ತಂಙಳ್ ನಡೆಸುತ್ತಿದ್ದ ದರ್ಸ್‌ನಲ್ಲಿ ಸಹಾಯಕ ಮುದರ್ರಿಸ್ ಆಗಿ ಸೇವೆ ಆರಂಭಿಸಿದರು. ಕರ್ಮಶಾಸ್ತ್ರದಲ್ಲಿ ಅವರಿಗೆ ಅಗಾಧ ಪಾಂಡಿತ್ಯವಿತ್ತು. ಉತ್ತಮ ವಾಗ್ಮಿಯೂ ಆಗಿದ್ದ ಅವರು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಯ ಮಸೀದಿಗಳಲ್ಲಿ ನಿರಂತರವಾಗಿ 10-20 ದಿನಗಳ ಕಾಲ ನಡೆಯುತ್ತಿದ್ದ ಮತಪ್ರಸಂಗ ಕಾರ್ಯಕ್ರಮದಲ್ಲಿ ಪ್ರವಚನ ನೀಡಿದರು. ಊರವರು ಅವರನ್ನು "ಒರು ಕೈಡೆ ಮೊಯ್ಲಾರ್" ಎಂದು ಗುರುತು ಪರಿಚಯಕ್ಕಾಗಿ ಕರೆಯುವುದೂ ಇತ್ತು. ಆದರೆ ಅವರು "ಬೈತಾರ್ ಉಸ್ತಾದ್" ಎಂದೇ ಖ್ಯಾತರಾದರು.

ಉಳ್ಳಾಲ ತಂಙಳ್ ನಡೆಸುತ್ತಿದ್ದ ದರ್ಸ್ ಸೈಯದ್ ಮದನಿ ಅರಬಿಕ್ ಕಾಲೇಜ್ ಆಗಿ ರೂಪುಗೊಂಡಾಗ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ ಬೈತಾರ್ ಉಸ್ತಾದ್ ತನ್ನ ಅಂಗವೈಕಲ್ಯವನ್ನು ಮೆಟ್ಟಿ ನಿಂತು ಹಿರಿಯ ವಿದ್ವಾಂಸರಾಗಿ ಗಮನ ಸೆಳೆದರು. ಬ್ಯಾರಿ ಭಾಷೆಯಲ್ಲಿ ನಿರರ್ಗಳವಾಗಿ ಮತ ಪ್ರವಚನ ನೀಡುತ್ತಿದ್ದರೂ ಕೂಡ ಕೇರಳದ ವಿದ್ಯಾರ್ಥಿಗಳಿಗೆ ಅರಬಿಕ್-ಮಲಯಾಳಂನಲ್ಲೂ ಬೋಧಿಸುವ ಚಾಕಚಕ್ಯತೆ ಹೊಂದಿದ್ದರು.

ತನ್ನ 30ನೆ ವರ್ಷದಲ್ಲಿ ಹರೇಕಳದ ಕೊಜಪಾಡಿ-ದೆಬ್ಬೇಲಿಯ ಮೊಯ್ದಿನಬ್ಬರ ಪುತ್ರಿ ಆಯಿಶಮ್ಮ ಅವರನ್ನು ವಿವಾಹವಾದ ಅವರು ಬೈತಾರ್‌ನಲ್ಲಿರುವ ತನ್ನ ಮನೆಯನ್ನು ಪಾವೂರು ಹರೇಕಳಕ್ಕೆ ಸ್ಥಳಾಂತರಿಸಿದರು. ಬಳಿಕ ಮುನ್ನೂರು ಗ್ರಾಮದ ಮದನಿ ನಗರದಲ್ಲಿ ನೆಲೆಸಿದರು. 1984ರಲ್ಲಿ ಪವಿತ್ರ ಹಜ್ ಯಾತ್ರೆ ಪೂರೈಸಿದರು. ತನ್ನ 40 ವರ್ಷದ ಸಾರ್ಥಕ ಅಧ್ಯಾಪನ ಸೇವೆಯಲ್ಲಿ ಸಾವಿರಾರು ಉಲಮಾಗಳನ್ನು ಸಮಾಜಕ್ಕೆ ಅರ್ಪಿಸಿದ್ದ ಅವರು 2005ರ ಜುಲೈ 3ರಂದು ಪತ್ನಿ ಮತ್ತು 6 ಮಂದಿ ಪುತ್ರರು ಹಾಗೂ 4 ಮಂದಿ ಪುತ್ರಿಯರನ್ನು ಬಿಟ್ಟಗಲಿದರು.

# ವಿದ್ವತ್ ಲೋಕದ ನಕ್ಷತ್ರ:
# ಅಹ್ಮದ್ ಬಾವ ಮುಸ್ಲಿಯಾರ್ ಉಳ್ಳಾಲ



ಉಳ್ಳಾಲದ ಇದಿನಬ್ಬ–ಖದೀಜಾ ದಂಪತಿಯ ಐದನೇ ಪುತ್ರನಾಗಿ 1942ರಂದು ಉಳ್ಳಾಲದಲ್ಲಿ ಜನಿಸಿದ ಯು.ಎಂ.ಅಹ್ಮದ್ ಬಾವ ಮುಸ್ಲಿಯಾರ್ ಪ್ರಾಥಮಿಕ ಶಿಕ್ಷಣದ ಬಳಿಕ ಉಳ್ಳಾಲ ಕೇಂದ್ರ ಜುಮಾ ಮಸ್ಜಿದ್‌ನಲ್ಲಿ ತಾಜುಲ್ ಉಲಮಾ ಉಳ್ಳಾಲ ತಂಙಳ್‌ರ ದರ್ಸ್ (ಧಾರ್ಮಿಕ ಪ್ರೌಢ ಶಿಕ್ಷಣ)ಗೆ ಸೇರಿದರು.

ವಿದ್ಯಾರ್ಥಿಯಾಗಿರುವಾಗಲೇ ಕಲಿಕೆಯಲ್ಲಿ ಮುಂದಿದ್ದು ಇಸ್ಲಾಂ ಧರ್ಮದ ವಿವಿಧ ವಿಷಯಗಳಲ್ಲಿ ಅಪಾರ ಜ್ಞಾನವಿರುವ ಒಬ್ಬ ಪ್ರಖ್ಯಾತ ಆಲಿಂ ಆಗಿ ಹೊರ ಹೊಮ್ಮುವ ಲಕ್ಷಣಗಳು ಅವರಲ್ಲಿ ಕಂಡು ಬಂದಿತ್ತು. ಉಳ್ಳಾಲ ದರ್ಸ್‌ನಲ್ಲಿ ಕಲಿತು ಉನ್ನತ ಶಿಕ್ಷಣಕ್ಕಾಗಿ ದೇವ್‌ಬಂದ್ ದಾರುಲ್ ಉಲೂಂ ಶಿಕ್ಷಣ ಸಂಸ್ಥೆಗೆ ಸೇರಿ ಮೌಲವಿ ಫಾಝಿಲ್ ಖಾಸಿಮಿ ಮತ್ತು ವೆಲ್ಲೂರು ಬಾಖಿಯಾತು ಸ್ವಾಲಿಹಾತ್ ಅರಬಿಕ್ ಕಾಲೇಜ್‌ಗೆ ಸೇರಿ ಉನ್ನತ ಅಂಕದೊಂದಿಗೆ ಮೌಲವಿ ಫಾಝಿಲ್ ಬಾಖವಿ ಬಿರುದು ಪಡೆದರು.

ಅಲ್ಲಿಂದ ಉಳ್ಳಾಲ ಸೈಯದ್ ಮದನಿ ಅರಬಿಕ್ ಕಾಲೇಜ್‌ನ ಪ್ರೊಫೆಸರ್ ಆಗಿ ಧಾರ್ಮಿಕ ಸೇವಾ ರಂಗಕ್ಕಿಳಿದರು. ಕೆಲವು ವರ್ಷಗಳ ಕಾಲ ಉಳ್ಳಾಲದಲ್ಲಿ ಧಾರ್ಮಿಕ ಸೇವೆ ಸಲ್ಲಿಸಿ ಕನ್ನಂಗಾರ್, ಬಜ್ಪೆ, ಉರುವಾಲು ಪದವು, ಮೊಗ್ರಾಲ್ ಪುತ್ತೂರು ಮತ್ತಿತರ ಕಡೆ ಮುದರ್ರಿಸ್ ಆಗಿ ಸೇವೆ ಸಲ್ಲಿಸಿ ಸಾವಿರಾರು ವಿದ್ವಾಂಸರನ್ನು ಸಮಾಜಕ್ಕೆ ಸಮರ್ಪಿಸಿದರು. ನಂತರ ಪುನಃ ಉಳ್ಳಾಲ ಸೈಯದ್ ಮದನಿ ಅರಬಿಕ್ ಕಾಲೇಜ್‌ನ ಪ್ರೊಫೆಸರ್ ಆಗಿ 56 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಉಳ್ಳಾಲದಲ್ಲಿ ಇಸ್ಲಾಮಿನ ಕಂಪು ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶೈಖುನಾ ಅಹ್ಮದ್ ಬಾವ ಉಸ್ತಾದ್ ಜೀವನದಲ್ಲಿ ಬಹಳ ಸೂಕ್ಷ್ಮತೆ ಪಾಲಿಸುತ್ತಿದ್ದ ಉದಾತ್ತ ವಿದ್ವಾಂಸರಾಗಿದ್ದರು. ಉಳ್ಳಾಲ ದಲ್ಲಿ ಸೇವೆ ಸಲ್ಲಿಸಿದ ಸಂದರ್ಭ ಒಮ್ಮೆಯೂ ಜಮಾಅತ್ ಆಡಳಿತ ಸಮಿತಿಯೊಂದಿಗೆ ಇಂತಿಷ್ಟು ವೇತನ ನೀಡಬೇಕು ಎಂದು ಹೇಳಿರಲಿಲ್ಲ. ಉಳ್ಳಾಲ ದರ್ಗಾ ಸಮಿತಿ ನೀಡುವ ವೇತನವನ್ನು ಸಂತೋಷ ಪೂರ್ವಕವಾಗಿ ಅವರು ಸ್ವೀಕರಿಸುತ್ತಿದ್ದರು.

ಉಳ್ಳಾಲ ಪರಿಸರದ ವಿವಿಧ ಕಡೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಅವರ ಉಪಸ್ಥಿತಿಯು ಮನೆ ಮಂದಿಗೆ ಅದೇನೋ ಧನ್ಯತಾ ಭಾವ. ಆ ಕಾರಣಕ್ಕಾಗಿ ದೂರದೂರುಗಳಿಗೆ ಅವರನ್ನು ತಮ್ಮ ಮನೆಯ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಿದ್ದರು. ಅವರ ದುಆದೊಂದಿಗೆ ಉದ್ಘಾಟಿಸಿದ ವಿವಿಧ ವ್ಯಾಪಾರ ಮಳಿಗೆಗಳು, ಮನೆಗಳು ವಿಶೇಷ ಸಮೃದ್ಧಿ ಪಡೆದದ್ದನ್ನು ಹಲವರು ಸ್ಮರಿಸುತ್ತಾರೆ. ಉಳ್ಳಾಲ ತಂಙಳ್‌ರೊಂದಿಗೆ ಅಪಾರ ಪ್ರೀತಿ ಮತ್ತು ವಿಶ್ವಾಸದಿಂದಿದ್ದರು. ತಂಙಳ್‌ರ ಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರು. ಅವರ ನಿಲುವನ್ನು ಸಮರ್ಥಿಸುತ್ತಿದ್ದರು.

ಪವಿತ್ರ ಖುರ್‌ಆನ್‌ನ ವಿವಿಧ ತಫ್ಸೀರ್ (ವ್ಯಾಖ್ಯಾನ)ಗಳಲ್ಲಿ ಅಪಾರ ಪರಿಣತಿ, ಕರ್ಮಶಾಸ್ತ್ರದಲ್ಲಿ (ಫಿಖ್ಹ್) ಆಳ ಅಧ್ಯಯನ ನಡೆಸಿ ಇಸ್ಲಾಂ ಧರ್ಮದ ಯಾವುದೇ ಶರೀಅತ್ ನಿಯಮಗಳನ್ನು ಕೂಡ ಕ್ಷಣ ಮಾತ್ರದಲ್ಲಿ ಹೇಳಿ ಮನದಟ್ಟು ಮಾಡುವ ಸಾಮರ್ಥ್ಯ ಉಸ್ತಾದ್ ಅವರಿಗಿತ್ತು. ಸತ್ಯನಿಷ್ಠೆ, ಪ್ರಾಮಾಣಿಕತೆ, ಸರಳ ಸಜ್ಜನಿಕೆಯ ಪ್ರತಿರೂಪವಾಗಿ ತಾನು ಕಲಿತ ವಿದ್ಯೆಯನ್ನು ಸ್ವತಃ ಅನುಸರಿಸಿ ಇತರರಿಗೆ ಬೋಧಿಸುವ ಯಶಸ್ವಿ ವಿದ್ವಾಂಸರ ಗಣದಲ್ಲಿ ಅವರು ಅಗ್ರಗಣ್ಯರಾಗಿದ್ದರು. ಅದೆಷ್ಟು ಕಹಿಯಾದರೂ ಸರಿ ಸತ್ಯವನ್ನು ಅವರು ಮುಲಾಜಿಲ್ಲದೆ ಹೇಳುತ್ತಿದ್ದರು.

ಕರ್ನಾಟಕ ಸುನ್ನೀ ಜಂಇಯ್ಯತುಲ್ ಉಲಮಾ ಸ್ಥಾಪಕಾಧ್ಯಕ್ಷರಾಗಿ ಕರ್ನಾಟಕದಲ್ಲಿ ಪ್ರಪ್ರಥಮ ಉಲಮಾ ಸಂಘಟನೆಯ ಬೆಳವಣಿಗೆಯ ರೂವಾರಿಯಾದರು, ನಂತರ ಅದರ ಗೌರವಾಧ್ಯಕ್ಷರೂ ಆಗಿದ್ದರು. 2015ರಲ್ಲಿ ನಡೆದ ಐತಿಹಾಸಿಕ ಉಳ್ಳಾಲ ಉರೂಸ್ ಸಮಾರಂಭದಲ್ಲಿ ಭಾರತದ ಗ್ರ್ಯಾಂಡ್ ಮುಫ್ತಿ ಸುಲ್ತಾನುಲ್ ಉಲಮಾ ಎ.ಪಿ.ಅಬೂಬಕರ್ ಮುಸ್ಲಿಯಾರ್ ಕಾಂತಾಪುರಂ ಅವರಿಂದ "ತಾಜುಲ್ ಉಲಮಾ ಮೆಮೋರಿಯಲ್ ಅವಾರ್ಡ್" ಮತ್ತು ಮೇಲಂಗಡಿ ಎಸೆಸ್ಸೆಫ್ ವತಿಯಿಂದ ಐವತ್ತು ವರ್ಷಗಳ ಧಾರ್ಮಿಕ ಸೇವೆಗಾಗಿ "ತಾಜುಲ್ ಉಲಮಾ ಅವಾರ್ಡ್"ಗೆ ಪಾತ್ರರಾಗಿದ್ದರು.

ಮರಣದ ಒಂದು ವರ್ಷದ ಮೊದಲು ತನ್ನ ಪ್ರೊಫೆಸರ್ ಹುದ್ದೆಗೆ ರಾಜೀನಾಮೆ ನೀಡಿ ತನ್ನ ಎಲ್ಲಾ ಮಕ್ಕಳಿಗೂ ತನ್ನ ಸೊತ್ತನ್ನು ಶರೀಅತ್ ಪ್ರಕಾರ ಪಾಲು ಮಾಡಿ ಕೊಟ್ಟಿದ್ದರು. ಅವರಿಗೆ ಇಬ್ಬರು ಪತ್ನಿಯರಲ್ಲಿ ಆರು ಹೆಣ್ಣು ಮತ್ತು ಎಂಟು ಗಂಡು ಸಹಿತ ಹದಿನಾಲ್ಕು ಮಕ್ಕಳಿದ್ದರು. ಆರು ಹೆಣ್ಣು ಮಕ್ಕಳನ್ನು ಕೂಡ ಪದವೀಧರ ವಿದ್ವಾಂಸರಿಗೆ ವಿವಾಹ ಮಾಡಿ ಕೊಟ್ಟಿದ್ದರು. ಎಂಟು ಗಂಡು ಮಕ್ಕಳ ಪೈಕಿ ನಾಲ್ಕು ಮಂದಿ ಆಲಿಂಗಳಾಗಿದ್ದಾರೆ. ಮಾದರಿ ಹಾಗೂ ಸಾರ್ಥಕ ಜೀವನ ನಡೆಸಿದ್ದ ಅವರು 2019ರ ಮೇ 7ರಂದು ನಿಧನರಾದರು.

# ಇಸ್ಲಾಮೀ ಜ್ಞಾನ ಪ್ರಚಾರಕ: ಡಾ.ಕೆ.ಎಂ.ಶಾಹ್ ಮುಸ್ಲಿಯಾರ್



ಕಾಸರಗೋಡು ಜಿಲ್ಲೆಯ ಕುಂಬಳೆಯ ಕುಂಬೋಲ್ ಎಂಬಲ್ಲಿ ಅಲ್‌ಹಾಜ್ ಕೆ.ಅಬ್ದುಲ್ಲಾ ಮುಸ್ಲಿಯಾರ್-ಆಸಿಯಾ ಬೀಬಿ ದಂಪತಿಯ ಪುತ್ರನಾಗಿ 1935ರಲ್ಲಿ ಕೆ.ಎಂ.ಶಾಹ್ ಮುಸ್ಲಿಯಾರ್ ಜನಿಸಿದರು. ಅಬ್ದುಲ್ಲಾ ಮುಸ್ಲಿಯಾರ್ ಉದ್ಯೋಗ ಅರಸಿಕೊಂಡು ಕುಂಬೋಲ್‌ನಿಂದ ಆತೂರಿಗೆ ಬಂದು ನೆಲೆ ನಿಂತರು. ಆತೂರಿನಲ್ಲಿ ಸುಪ್ರಸಿದ್ಧರಾಗಿದ್ದ ಅಲಿಯಾರ್ ಇಬ್ರಾಹೀಂ ಹಾಜಿಯ ನೆರವು ಮತ್ತು ಪ್ರೋತ್ಸಾಹದಿಂದ ಕೊಯ್ಲ ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ತನ್ನ ತಂದೆಯಿಂದಲೇ ಧಾರ್ಮಿಕ ಶಿಕ್ಷಣ ಪಡೆದ ಅವರು ಬಳಿಕ ಕಾಸರಗೋಡು ಜಿಲ್ಲೆಯ ಪಯ್ಯಕ್ಕಿ, ತಲಪರಂಬು ಮತ್ತಿತರ ಕಡೆ ಪ್ರಸಿದ್ಧ ವಿದ್ವಾಂಸರ ಬಳಿ ಧಾರ್ಮಿಕ ಶಿಕ್ಷಣ ಪಡೆದರು.

ಹಿಂದೆ ಮುಸ್ಲಿಂ ಮಹಿಳೆಯರು ಶಾಲೆಯ ಮೆಟ್ಟಿಲು ತುಳಿಯುವುದೇ ಅಪರಾಧವೆಂದು ಭಾವಿಸಲಾಗಿತ್ತು. ಅಂತಹ ಕಾಲದಲ್ಲೇ ಶಾಹ್ ಮುಸ್ಲಿಯಾರ್ ಮಹಿಳೆಯರ ಶಿಕ್ಷಣದ ಬಗ್ಗೆ ತುಂಬಾ ಒಲವು ತೋರಿದ್ದರು. ಅದನ್ನು ಕೇವಲ ಮಾತಿನಲ್ಲೇ ಹೇಳಿ ತಿರುಗಾಡದೆ ಕೃತಿಯಲ್ಲೂ ಸಾಧಿಸಿ ತೋರಿಸಿದರು. ಅಂದರೆ ತನ್ನ ಹೆಣ್ಮಕ್ಕಳನ್ನು ಎಸೆಸ್ಸೆಲ್ಸಿವರೆಗೆ ಓದಿಸಿದ್ದರು. ಆ ಕಾಲದ ಉಲಮಾಗಳೆಂದರೆ ಕೇವಲ ಧಾರ್ಮಿಕ ಶಿಕ್ಷಣ ಮಾತ್ರ ಪಡೆದವರಾಗಿದ್ದರು. ಆದರೆ ಶಾಹ್ ಮುಸ್ಲಿಯಾರ್ ಅದಕ್ಕೆ ಹೊರತಾಗಿದ್ದರು.

ಅಗಾಧ ನೆನಪಿನ ಶಕ್ತಿಯೊಂದಿಗೆ ಜ್ಞಾನದಾಹಿಯೂ ಆಗಿದ್ದ ಅವರು ವೈದ್ಯಕೀಯ ವಿಜ್ಞಾನದ ಬಗ್ಗೆಯೂ ತೀವ್ರ ಆಸಕ್ತಿ ಹೊಂದಿದ್ದರು. ಅದರ ಫಲವಾಗಿ ಹೋಮಿಯೋಪತಿ ವೈದ್ಯಕೀಯದ ತರಬೇತಿ ಪಡೆದು ಡಿಪ್ಲೊಮಾ ಪದವಿ ಗಳಿಸಿ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಶನರ್ ಎಂಬ ವೈದ್ಯ ವೃತ್ತಿ ನಿರ್ವಹಿಸುವ ಪರವಾನಿಗೆಯನ್ನೂ ಪಡೆದಿದ್ದರು. ಕನ್ನಡ ಭಾಷೆಯಲ್ಲೂ ಒಳ್ಳೆಯ ಹಿಡಿತ ಹೊಂದಿದ್ದ ಅವರು ಕನ್ನಡದಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ಇಸ್ಲಾಮೀ ಜ್ಞಾನ ಪ್ರಸಾರಕ್ಕೆ ಕನ್ನಡ ಭಾಷೆಯನ್ನು ಬಳಸಿದ ಉಲಮಾಗಳಲ್ಲಿ ಅವರು ಮುಂಚೂಣಿಯಲ್ಲಿದ್ದರು. ಕನ್ನಡದಲ್ಲಿ ಅಗ್ರ ಲೇಖನಗಳನ್ನು ಬರೆಯುತ್ತಿದ್ದ ಅವರು "ಸತ್ಯವಾಣಿ" ಎಂಬ ಪತ್ರಿಕೆಯನ್ನು ಕರ್ನಾಟಕ ಸುನ್ನಿ ಜಮೀಯತುಲ್ ಉಲಮಾ ಸಂಘಟನೆಯ ಅಧೀನದಲ್ಲಿ 1982ರಲ್ಲಿ ಪ್ರಾರಂಭಿಸಿದ್ದರು. 1983ರಲ್ಲಿ ತನ್ನದೇ ಆದ "ಸರಳಪಥ" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ 1990ರವರೆಗೆ ಅದನ್ನು ಮುನ್ನಡೆಸಿದ್ದರು. ಆ ಬಳಿಕ "ಅಲಮುಲ್ ಹುದಾ" ಎಂಬ ಪತ್ರಿಕೆಯನ್ನು ಏಳು ವರ್ಷಗಳ ಕಾಲ ನಡೆಸಿದರು. ದಕ್ಷಿಣ ಕರ್ನಾಟಕ ಸುನ್ನೀ ಸೆಂಟರ್ ಹೊರತರುತ್ತಿದ್ದ "ಹಸನಾತ್" ಎಂಬ ವಿಶೇಷ ವಾರ್ಷಿಕ ಸಂಚಿಕೆಯ ಸಂಪಾದಕರಾಗಿ ಹಲವು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದರು. ಅವರ ಧಾರ್ಮಿಕ ಸಾಹಿತ್ಯ ಸೇವೆಗಾಗಿ "ಮದರಂಗಿ" ಪತ್ರಿಕಾ ಬಳಗವು "ಮದರಂಗಿ ಸಾಹಿತ್ಯ ಪ್ರಶಸ್ತಿ"ಯನ್ನೂ ನೀಡಿ ಗೌರವಿಸಿತ್ತು.

ಸುಳ್ಯ ಸಮೀಪದ ಅರಂತೋಡು ಎಂಬ ಒಂದೇ ಮೊಹಲ್ಲಾದಲ್ಲಿ ಸುದೀರ್ಘ 37 ವರ್ಷಗಳ ಕಾಲ ಖತೀಬ್ ಮತ್ತು ಮುದರ್‌ರಿಸ್ ಆಗಿದ್ದರಿಂದ ಅವರನ್ನು "ಅರಂತೋಡ್ ಉಸ್ತಾದ್" ಎಂದೇ ಕರೆಯುತ್ತಿದ್ದರು.

ಬಹುಮುಖ ಪ್ರತಿಭೆಯ ಡಾ. ಶಾಹ್ ಮುಸ್ಲಿಯಾರ್ ಹಲವು ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳಿಗೆ ನೇತೃತ್ವ ನೀಡಿದ್ದರು. ಮುಸ್ಲಿಯಾರರು ಮಸೀದಿ-ಮದ್ರಸಾಗಳಿಗೆ ಮಾತ್ರ ಸೀಮಿತ ಎಂದು ಭಾವಿಸಲಾಗಿದ್ದ ಆ ಕಾಲದಲ್ಲಿ ಅಂದರೆ 1966ರಲ್ಲಿ ಅವರು ಕೊಯ್ಲ ಸಹಕಾರಿ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸಹಕಾರಿಯೂ ಆಗಿದ್ದರು. ಅವರ ಅರಬಿಕ್ ಕೈ ಬರಹವು ಆಕರ್ಷಕವಾಗಿತ್ತು. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ಕಲಿಸಿದ್ದ ಅವರ ಜ್ಞಾನದಾಹವು ಬತ್ತಿರಲಿಲ್ಲ ಎಂಬುದಕ್ಕೆ ಇಳಿವಯಸ್ಸಿನಲ್ಲೂ ಅವರು ಅಧ್ಯಯನ ನಿರತರಾಗಿದ್ದುದು ಸಾಕ್ಷಿಯಾಗಿತ್ತು.

ಪತ್ನಿ ಹಲೀಮಾ, ಒಬ್ಬ ಗಂಡು ಮತ್ತು 6 ಮಂದಿ ಹೆಣ್ಮಕ್ಕಳನ್ನು 2019ರ ಮೇ 29ರಂದು ಅಗಲಿದ ಅವರನ್ನು ಕೆಮ್ಮಾರದ ಗಂಡಿಬಾಗಿಲಿನಲ್ಲಿ ದಫನ ಮಾಡಲಾಯಿತು.



# ರಾತ್ರಿ ಶಾಲೆಯ ಪ್ರೇರಕ ಶಕ್ತಿ
# ಹಾಜಿ ಖಾಲಿದ್ ಮುಹಮ್ಮದ್ ಮಂಗಳೂರು

ಮಂಗಳೂರಿನ ಹಾಜಿ ಫಕೀರ್ ಸಾಹೇಬ್ ಮತ್ತು ಆಮಿನಾ ದಂಪತಿಯ ಪುತ್ರನಾಗಿ 1924ರ ಮಾರ್ಚ್ 15ರಂದು ಖಾಲಿದ್ ಮುಹಮ್ಮದ್ ಜನಿಸಿದರು. ಪತ್ನಿ ಫಾತಿಮಾ ಮತ್ತು ಐವರು ಪುತ್ರರು ಹಾಗೂ ಒಬ್ಬ ಪುತ್ರಿಯನ್ನು ಒಳಗೊಂಡ ಮಧ್ಯಮ ವರ್ಗದ ಕುಟುಂಬ ಅವರದ್ದಾಗಿತ್ತು,

ಮಂಗಳೂರಿನ ಬಂದರ್‌ನ ಬದ್ರಿಯಾ ಪ್ರಾಥಮಿಕ ಶಾಲೆ ಮತ್ತು ಕೆನರಾ ಪ್ರೌಢ ಶಾಲೆಯಲ್ಲಿ ಶಿಕ್ಷಣ ಮುಗಿಸಿ ಖಾಸಗಿ ಕಾಲೇಜಿನಲ್ಲಿ ಬಿಎ ಪದವಿ ಮತ್ತು ಮಹಾವಿದ್ಯಾನಿಲಯದಲ್ಲಿ ಬಿಎಡ್ ಪದವಿ ಪಡೆದರು.

1943ನೇ ಮಾರ್ಚ್ 15ರಂದು ಶಾಲೆಗೆ ಹೋಗಲಾಗದೆ ಪರಿತಪಿಸುತ್ತಿದ್ದ ಅನಕ್ಷರಸ್ಥ ಕೆಲಸಗಾರರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಬ್ಯಾರಿ ಮುಸ್ಲಿಮೇತರ ಐದು ಮಂದಿ ಹುಡುಗರನ್ನು ಸೇರಿಸಿಕೊಂಡು ಎಣ್ಣೆ ದ್ವೀಪದ ಬೆಳಕಿನ ಆಸರೆಯಲ್ಲಿ ಮಂಗಳೂರಿನ ಪ್ರಥಮ ರಾತ್ರಿ ಶಾಲೆಯನ್ನು "ನವ ಬಹಾರ್" ಎಂಬ ಹೆಸರಿನಲ್ಲಿ ಪ್ರಾರಂಭಿಸಿದ ಕೀರ್ತಿ ಖಾಲಿದ್ ಮುಹಮ್ಮದ್ ಅವರಿಗೆ ಸಲ್ಲುತ್ತದೆ.

ಖಾಲಿದ್ ಮುಹಮ್ಮದ್ ಆರಂಭಿಸಿದ ರಾತ್ರಿ ಶಾಲೆಯು ನಗರದ ಮೊಟ್ಟ ಮೊದಲ ರಾತ್ರಿ ಶಾಲೆಯಾಗಿ ಮಾನ್ಯತೆ ಪಡೆದು ಹೆಸರುವಾಸಿಯಾಗಿ 77 (2020ಕ್ಕೆ) ವರ್ಷಗಳ ಸಾರ್ಥಕ ಸೇವೆಯನ್ನು ನೀಡಿ "ನವಭಾರತ ರಾತ್ರಿ ಶಾಲೆ" ಎಂಬ ಹೆಸರಿನಿಂದ ಜನಮನದಲ್ಲಿ ಅಚ್ಚೊತ್ತಿದೆ.

ಖಾಲಿದ್ ಮುಹಮ್ಮದ್ ಈ ಶಾಲೆ ತೆರೆಯಲು ಕಾರಣವಿತ್ತು. ಅವರು ತನ್ನ 16ನೇ ವಯಸ್ಸಿನಲ್ಲಿ ಅಂದರೆ ಒಂಬತ್ತನೇ ತರಗತಿಯಲ್ಲಿ ಕಲಿಯುತ್ತಿರುವಾಗ ಪ್ರತೀ ದಿನ ಶಾಲೆಗೆ ಹೋಗಿ ಬರುವ ದಾರಿಯಲ್ಲಿ ಟಿನ್ ಮೇಕರ್ ಮುಹಮ್ಮದ್ ಎಂಬವರು ತನ್ನ ಮಗನಿಂದ ಬಂದ ಪತ್ರವನ್ನು ಹಿಡಿದು ಓದಿಸಿ ಅದಕ್ಕೆ ಉತ್ತರ ಬರೆಸಲಿಕ್ಕಾಗಿ ಖಾಲಿದ್ ಮುಹಮ್ಮದ್ ಅವರನ್ನು ಕಾದು ಕುಳಿತುಕೊಳ್ಳುತ್ತಿದ್ದರು. ಖಾಲಿದರು ಆ ಪತ್ರವನ್ನು ಓದಿ ಉತ್ತರವನ್ನು ಬರೆದು ಕೊಡುತ್ತಿದ್ದರು.

ಹೀಗೆ ಅನೇಕ ಸಲ ಪುನರಾವರ್ತನೆಯಾದಾಗ ಒಂದು ದಿನ ಖಾಲಿದ್ ಮುಹಮ್ಮದ್ ಅವರು ಟಿನ್ ಮೇಕರ್‌ನೊಂದಿಗೆ "ನೀವು ಹೀಗೆ ನನ್ನಿಂದ ಕಾಗದ ಓದಿಸಿ ಬರೆಸುವುದಕ್ಕಿಂತ ನೀವೇ ಸ್ವಂತ ಕಲಿತು ಓದಿ ಬರೆಯಬಹುದಲ್ಲಾ?" ಎಂದು ಕೇಳಿದರು. "ಈ ವಯಸ್ಸಿನಲ್ಲಿ ಶಾಲೆ ಕಲಿಯುವುದು ನನ್ನಿಂದ ಸಾಧ್ಯವಿಲ್ಲ" ಎಂದು ಟಿನ್ ಮೇಕರ್ ಹೇಳಿದಾಗ ಖಾಲಿದ್ ಮುಹಮ್ಮದ್ ಸ್ವತಃ ತಾನು ಖುದ್ದಾಗಿ ಅವರಿಗೆ ಅಕ್ಷರ ವಿದ್ಯಾಭ್ಯಾಸ ಕಲಿಸಲು ಮುಂದಾದರು.

ನಂತರ ಪ್ರತೀ ದಿನ ಸಂಜೆ ಶಾಲೆ ಮುಗಿದ ನಂತರ ಅಲ್ಲಿಯೇ ಇದ್ದ ಅವರ ಡಬ್ಬದ ಅಂಗಡಿಯ ಕತ್ತಲೆ ಕೋಣೆಯಲ್ಲಿ ಚಿಮಿಣಿ ದೀಪದ ಆಸರೆಯಲ್ಲಿ ಸ್ಲೇಟ್ ಕಡ್ಡಿ ಹಿಡಿದುಕೊಂಡು ಅಕ್ಷರಗಳನ್ನು ಕಲಿಸಲು ತೊಡಗುತ್ತಾರೆ. ಹೀಗೆ ಓದಲು– ಬರೆಯಲು ಬಾರದ ಅಲ್ಲಿಯ ಹೊಟೇಲ್ ನೌಕರ ಕೂಡ ಅವರ ಜೊತೆ ಕಲಿಯಲು ಸೇರುತ್ತಾನೆ. ನಂತರ ಅದೇ ಬೀದಿಯ ಮೆಟ್ಟು ರಿಪೇರಿಯವರ ಮಗ ಕೂಡ ಬರುತ್ತಾನೆ. ಹೀಗೆ ದಿನದಿಂದ ದಿನಕ್ಕೆ ಕಲಿಯುವ ಹುಮ್ಮಸ್ಸಿನಿಂದ ಅನೇಕ ಅನಕ್ಷರಸ್ಥ ಹುಡುಗರು ಒಬ್ಬೊಬ್ಬರಾಗಿ ಕಲಿಯಲು ಮುಂದೆ ಬರುತ್ತಾರೆ. ಮಕ್ಕಳ ವಿದ್ಯೆ ಕಲಿಯುವ ಆಸಕ್ತಿ ನೋಡಿ ಅಲ್ಲಿದ್ದ ಹಿರಿಯರೊಬ್ಬರು ಮಕ್ಕಳಿಗೆ ಕಲಿಯಲು ಅನುಕೂಲವಾಗುವಂತೆ ಕೊಠಡಿ, ಬೆಂಚು, ಮೇಜು ಮತ್ತು ಇತರ ವ್ಯವಸ್ಥೆಯನ್ನು ಮಾಡಿ ಕೊಡುತ್ತಾರೆ. ಹೀಗೆ ಕತ್ತಲೆ ಕೋಣೆಯಲ್ಲಿ ತೊಡಗಿದ ಖಾಲಿದ್ ಮುಹಮ್ಮದ್‌ರ ಶಾಲೆಯು ಬಡತನದಿಂದ ಶಾಲೆ ಮೊಟುಕುಗೊಳಿಸಿದ ವಿದ್ಯಾರ್ಥಿಗಳಿಗೆ ದಾರಿದೀಪವಾಯಿತು. ಬಳಿಕ ಅದು ನವಭಾರತ ರಾತ್ರಿ ಶಾಲೆಯಾಗಿ ಪ್ರಸಿದ್ಧಿ ಪಡೆಯಿತು.

ಶಾಲೆಯ ಅಭಿವೃದ್ಧಿಗಾಗಿ ಡಾ.ಕೆ.ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಕಮಿಟಿ ರಚಿಸಿ ಅದರಲ್ಲಿ ಯು.ಕೇಶವ ರಾವ್, ಕಲ್ಯಾಣಿ ಶೆಟ್ಟಿ, ರಾಧಾ ಎಲ್.ರಾವ್, ಶದ್ ತಲ್ವಾರ್, ಪಿ.ಎಸ್. ವೆಂಕಟೇಶ್ ಕೃಷ್ಣ ಅವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು. ಹಾಗೇ 1983ರಲ್ಲಿ ಸ್ವಂತ ಕಟ್ಟಡ ಖರೀದಿಸಿ ನವಭಾರತ ಶಾಲೆಯನ್ನು ಮುಂದುವರಿಸಲಾಯಿತು. ಬಡತನದಿಂದ

ಅರ್ಥದಲ್ಲಿ ಶಾಲೆಯನ್ನು ಮೊಟುಕುಗೊಳಿಸಿದ ವಿದ್ಯಾರ್ಥಿಗಳಿಗೆ ಈ ಶಾಲೆ ದಾರಿದೀಪವಾಯಿತು.

ವರ್ಷಗಳು ಉರುಳುತ್ತಲೇ ಈ ಶಾಲೆಯ ಅಭಿವೃದ್ಧಿಗೆ "ನವಭಾರತ ಎಜುಕೇಶನ್ ಸೊಸೈಟಿ" ಸ್ಥಾಪಿಸಿದರು. ಈ ಸೊಸೈಟಿಯ ಅಧ್ಯಕ್ಷರಾಗಿ ಅಹ್ಮದ್ ಹಾಜಿ ಮೊಹಿಯದ್ದೀನ್ ತುಂಬೆ, ಗೌರವ ಕಾರ್ಯದರ್ಶಿಯಾಗಿ ಡಾ.ಸಿ.ವಾಮನ ಶೆಣೈ, ಸಂಚಾಲಕರಾಗಿ ರಾಮಚಂದ್ರ ಮಾಸ್ಟರ್ ಕಾರ್ಯನಿರ್ವಹಿಸತೊಡಗಿದರು.

ಖಾಲಿದ್ ಮುಹಮ್ಮದ್ ನವಭಾರತ ರಾತ್ರಿ ಶಾಲೆಯಲ್ಲಿ ಅಧ್ಯಾಪಕ ಮತ್ತು ಹಗಲು ಹೊತ್ತು ಮಂಗಳೂರಿನ ಬದ್ರಿಯಾ ಶಾಲೆಯಲ್ಲಿ ಹೆಡ್‌ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಖಾಲಿದ್ ಮುಹಮ್ಮದ್‌ರ ಪತ್ನಿ ಫಾತಿಮಾ ಕೂಡ ಹೆಣ್ಮಕ್ಕಳ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರು.

ಖಾಲಿದ್ ಮುಹಮ್ಮದ್ ಆರಂಭಿಸಿದ ರಾತ್ರಿ ಶಾಲೆಯು ವಯಸ್ಕರ ಶಿಕ್ಷಣಕ್ಕೆ ಪಣತೊಟ್ಟಿದ್ದಲ್ಲದೆ ಕನ್ನಡ, ಹಿಂದಿ, ಆಂಗ್ಲ ಭಾಷೆಗಳ ಕಲಿಕೆಗೆ ವಿಶೇಷ ಒತ್ತು ನೀಡಿದೆ. 1953ರಲ್ಲಿ ಮದ್ರಾಸ್ ವಿವಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ನಡೆಸಲ್ಪಡುವ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಿದ ಕೀರ್ತಿಯೂ ನವಭಾರತ್ ಶಾಲೆಗಿದೆ. 1955ರಲ್ಲಿ ಈ ವಿದ್ಯಾರ್ಥಿಗಳು ಪರೀಕ್ಷೆ ಬರೆದು ಉತ್ತಮ ಫಲಿತಾಂಶ ದಾಖಲಿಸಿದ್ದರು. ಇಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ವೈದ್ಯರು, ವಕೀಲರು, ಶಿಕ್ಷಕರು, ಬ್ಯಾಂಕ್ ಅಧಿಕಾರಿಗಳಾಗಿ, ಹಲವು ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗಳನ್ನು ಮಾಡಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಖಾಲಿದ್ ಮುಹಮ್ಮದ್ ಅವರ ಸೇವೆಯನ್ನು ಪರಿಗಣಿಸಿ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಸನ್ಮಾನಿಸಿದ್ದಾರೆ. ಮಂಗಳೂರಿನ ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್, ಇನ್‌ಲ್ಯಾಂಡ್ ಬಿಲ್ಡರ್ಸ್, ಮಂಗಳೂರಿನ ಪಾಲ್ಸ್ ಕಂಪ್ಯೂಟರ್ಸ್, ಸಂತೋಷ್ ಎರೇಂಜರ್ಸ್, ಲಯನ್ಸ್ ಕ್ಲಬ್ ಹೀಗೆ ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ಸಂಸ್ಥೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟುಕೊಂಡಿದ್ದ ಖಾಲಿದ್ ಮುಹಮ್ಮದ್ 2005ರ ಡಿಸೆಂಬರ್ 16ರಂದು ತನ್ನ 81ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

## ಕಾಟಿಪಳ್ಳದ ಹಿರಿಮೆ ಹೆಚ್ಚಿಸಿದ್ದ ಹಾಜಿ ಪಿ.ಹಸನಬ್ಬ ಮಾಸ್ಟರ್



ಮಂಗಳೂರು ತಾಲೂಕಿನ ಪಣಂಬೂರು ಎಂಬಲ್ಲಿ ಇದ್ದಿನಬ್ಬ ಮಾಸ್ಟರ್ ಮತ್ತು ರಾಬಿಯಮ್ಮ ದಂಪತಿಯ ಪುತ್ರನಾಗಿ 1921ರಂದು ಜುಲೈ 15ರಂದು ಜನಿಸಿದ ಹಸನಬ್ಬ ಮಾಸ್ಟರ್ ಕಾಟಿಪಳ್ಳದಲ್ಲಿ ತನ್ನ ಕರ್ಮಭೂಮಿಯನ್ನಾಗಿಸಿದ ಪರಿಣಾಮ ಕಾಟಿಪಳ್ಳದ ಮುತ್ತಾಗಿ ಗುರುತಿಸಲ್ಪಟ್ಟರು.

1941ರ ಮಾರ್ಚ್ 20ರಿಂದ ಪಣಂಬೂರಿನ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಆರಂಭಿಸಿ 1976ರ ಜುಲೈ 31ರವರೆಗೆ ಕಾಟಿಪಳ್ಳ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆಯಿಂದ ನಿವೃತ್ತಿ ಹೊಂದಿದರು. ಬಳಿಕ ಅದೇ ಶಾಲೆಯ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಕಾಟಿಪಳ್ಳದ ಸರಕಾರಿ ಪ್ರೌಢಶಾಲೆ ಮತ್ತು ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸೇವೆಯಲ್ಲಿರುವಾಗಲೇ ಮಂಗಳೂರು ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷನಾಗಿ ಬಳಿಕ ದಕ್ಷಿಣ ಕನ್ನಡ ಜಿಲ್ಲಾ ನಿವೃತ್ತ ಸರಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ವಯಸ್ಕರ ಶಿಕ್ಷಣ, ನವಸಾಕ್ಷರರ ಸಂಘದ ಪ್ರವರ್ತಕರಾಗಿ, ಕಾಟಿಪಳ್ಳದ ನೂರುಲ್ ಹುದಾ ಶಿಕ್ಷಣ ಸಂಸ್ಥೆಯ ಮುಖ್ಯ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು.

ನವಮಂಗಳೂರು ಬಂದರು ಯೋಜನೆಗಾಗಿ ಪಣಂಬೂರು, ತಣ್ಣೀರುಬಾವಿ ಮತ್ತು ಪಡುಕೋಡಿ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಜನರನ್ನು ಕಾಟಿಪಳ್ಳದಲ್ಲಿ ಗುರುತಿಸಿರುವ ಪುನರ್ವಸತಿ ಪ್ರದೇಶದಲ್ಲಿ ದೇಶದ ಹಿತಕ್ಕಾಗಿ ಬಂದು ನೆಲೆಸಲು ಜನರ ಮನವೊಲಿಸುವುದರಲ್ಲಿ ಸಂಘಟಿತ ಪ್ರಯತ್ನ ಮಾಡಿ ಯಶಸ್ಸು ಕಂಡರು.

ನಿರ್ವಸಿತರ ಅಭಿವೃದ್ಧಿ ಸಮಿತಿಯನ್ನು ಸ್ಥಾಪಿಸಿ ಅದರ ಪ್ರಧಾನ ಕಾರ್ಯದರ್ಶಿಯಾಗಿ ಸರಕಾರದಿಂದ ನಿರ್ವಸತಿ ಕುಟುಂಬಗಳಿಗೆ ಯೋಗ್ಯ ಪರಿಹಾರ, ಸರಕು ಸಾಗಾಟಕ್ಕೆ ಉಚಿತ ವ್ಯವಸ್ಥೆ, ಪ್ರತಿ ಕುಟುಂಬಗಳಿಗೆ 12.50 ಸೆಂಟ್ಸ್ ಜಮೀನು, ಮನೆ ಕಟ್ಟಲು ತಲಾ 3 ಸಾವಿರ ರೂಪಾಯಿ ದೀರ್ಘಾವಧಿಯ ಸಾಲ ಸೌಲಭ್ಯಗಳನ್ನು ಒದಗಿಸಿಕೊಡಲು ಶಕ್ತಿಮೀರಿ ಶ್ರಮಿಸಿದ್ದರು.

ಆ ನಂತರದ ದಿನಗಳಲ್ಲಿ ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿದ್ದಾಗ ನಿರ್ವಸಿತರ ತ್ಯಾಗವನ್ನು ಪರಿಗಣಿಸಿ ತಲಾ ಮೂರು ಸಾವಿರ ಸಾಲದ ಬೃಹತ್ ಮೊತ್ತ 70 ಲಕ್ಷ ರೂಪಾಯಿಯನ್ನು ಮನ್ನಾ ಮಾಡಿಸಲು ಯಶಸ್ವಿಯಾಗಿ ಜನರನ್ನು ಋಣ ಮುಕ್ತರಾಗಲು ಸಹಕಾರಿಯಾದರು.

ಕಾಟಿಪಳ್ಳ ಪುನರ್ವಸತಿ ಪ್ರದೇಶದ ಕುಡಿಯುವ ನೀರು, ರಸ್ತೆ, ಶಾಲೆ, ಆರೋಗ್ಯ ಕೇಂದ್ರ, ಪಡಿತರ ಆಹಾರ ವ್ಯವಸ್ಥೆ, ಅಂಚೆ ಕಚೇರಿ, ಸಾರಿಗೆ ವ್ಯವಸ್ಥೆ, ದೂರವಾಣಿ ಸೌಲಭ್ಯ ಮುಂತಾದ ವ್ಯವಸ್ಥೆಗಳನ್ನು ಒದಗಿಸಲು ಅಹರ್ನಿಶಿ ಪ್ರಯತ್ನ ಮಾಡಿದ್ದರು.

ಕಾಟಿಪಳ್ಳದ 10 ವಿಭಾಗಗಳನ್ನು ಒಂದಾಗಿ ಸೇರಿಸಿ ಕಾಟಿಪಳ್ಳ ಕಂದಾಯ ಗ್ರಾಮವನ್ನಾಗಿ ಮಂಜೂರು ಮಾಡಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದ್ದರು.

ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ಬಳಿಕ ಸಮಾಜದ ಬಡಜನತೆಯ ಸೇವೆಯನ್ನು ಮುಂದುವರಿಸಲು ರಾಜಕೀಯ ಕ್ಷೇತ್ರವನ್ನು ನೆಚ್ಚಿಕೊಂಡರು. 1979ರಲ್ಲಿ ಸುರತ್ಕಲ್–ಗುರುಪುರ ವಲಯ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡರು. ಈ ಹುದ್ದೆಯಲ್ಲಿ ಸುದೀರ್ಘ 18 ವರ್ಷಗಳ ಸೇವೆ ಸಲ್ಲಿಸಿದರು.

ಈ ಅವಧಿಯಲ್ಲಿ ಪಕ್ಷಕ್ಕಾಗಿ ತಳಮಟ್ಟದಿಂದ ದುಡಿದು ಪಕ್ಷದ ಜನಹಿತ ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸಿ ಪಕ್ಷವನ್ನು ಬಲಪಡಿಸಿದರು. 1980ರ ಲೋಕಸಭಾ ಚುನಾವಣೆಯಲ್ಲಿ ಪ್ರಥಮ ಬಾರಿ ಸ್ಪರ್ಧಿಸಿದ್ದ ಆಸ್ಕರ್ ಫೆರ್ನಾಂಡೀಸ್ ಅವರ ಗೆಲುವಿಗೆ ಕಾಟಿಪಳ್ಳದ ಯುವ ತಂಡವನ್ನು ಸಜ್ಜುಗೊಳಿಸಿ ಉಡುಪಿ ಕ್ಷೇತ್ರದಾದ್ಯಂತ ಜೀಪೊಂದರಲ್ಲಿ ಸಂಚರಿಸಲು ವ್ಯವಸ್ಥೆ ಮಾಡಿಸಿ ಭಾಷಣ, ಹಾಡು, ಇತ್ಯಾದಿಗಳಿಂದ ಜನರನ್ನು ಆಕರ್ಷಿಸಿ ಪಕ್ಷದ ಪ್ರಚಂಡ ಗೆಲುವಿಗೆ ಸಹಕಾರ ನೀಡಿದರು. ಈ ವಿದ್ಯಮಾನವನ್ನು ಆಸ್ಕರ್ ಫೆರ್ನಾಂಡೀಸ್ ಈಗಲೂ ಸ್ಮರಿಸುತ್ತಾರೆ.

1997–98ರಲ್ಲಿ ದ.ಕ.ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾಗಿ, 1998–2001ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರಾಗಿ ನೇಮಕಗೊಂಡರು. ಆಶ್ರಯ ಯೇಜನೆ, ಅಕ್ರಮ ಸಕ್ರಮ, ನೆರಳಿನ ಯೋಜನೆ, ಗಂಗಾ ಕಲ್ಯಾಣ, ವಸತಿಹೀನರಿಗೆ ವಸತಿ, ವಿಧವಾ, ವೃದ್ಧಾಪ್ಯ ವೇತನ, ಅಂಗವಿಕಲ ಮಾಸಿಕ ವೇತನಗಳ ಪ್ರಯೋಜನಗಳನ್ನು ಜನತೆಗೆ ದೊರಕಿಸಿಕೊಡಲು ಶ್ರಮಿಸಿದರು. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ನಿಗಮ ಮಂಡಳಿಗಳಿಂದ ವ್ಯಾಪಾರ, ಉದ್ಯೋಗ, ಉದ್ಯಮ ಹಾಗೂ ಇತರ ಸಹಾಯ ಪಡೆಯುವಲ್ಲಿ ಮಾರ್ಗದರ್ಶನ ನೀಡುತ್ತಿದ್ದರು.

ಉತ್ತಮ ವಾಗ್ಮಿಯೂ ಆಗಿದ್ದ ಅವರು ಸುರತ್ಕಲ್ ಕ್ಷೇತ್ರದ ರಾಜಕಾರಣಿಗಳಲ್ಲಿ ಅಗ್ರಗಣ್ಯರಾಗಿದ್ದರು. ಅವರ ನಿವಾಸದೆದುರು ಪ್ರತಿನಿತ್ಯ ಅಹವಾಲುಗಳನ್ನು ತೋಡಿಕೊಳ್ಳಲು ಬರುವ ಜನರ ಗುಂಪು ಅದಕ್ಕೆ ಸಾಕ್ಷಿಯಾಗಿತ್ತು. ಹಲವಾರು ಶಾಲೆಗಳ ಶಿಕ್ಷಕ ಸಮುದಾಯದವರು ಕೂಡ ತಮ್ಮ ಸಮಸ್ಯೆಗಳಿಗೆ ಅವರ ಬಳಿ ಬಂದು ಪರಿಹಾರ ಕಂಡುಕೊಳ್ಳುತ್ತಿದ್ದರು. ಊರಿನಲ್ಲಿ ಯಾವುದಾದರು ಕುಟುಂಬ ಕಲಹ, ಹಣಕಾಸಿನ ತಕರಾರು ಅಥವಾ ಇನ್ಯಾವುದೇ ಸಮಸ್ಯೆ ಎದುರಾದರೆ ಅವರ ಬಳಿಗೆ ಬಂದು ಪಂಚಾಯತಿಗೆ ಮೂಲಕ ರಾಜಿ ಮಾಡಿಸಿಕೊಳ್ಳುತ್ತಿದ್ದರು.

ರಾಜಕೀಯವಾಗಿ ತುಂಬಾ ಪ್ರಬಲರಾಗಿದ್ದರೂ ಅವರು ತಮ್ಮ ಸ್ವಂತಕ್ಕಾಗಿ ಅಥವಾ ಸ್ವಾರ್ಥಕ್ಕಾಗಿ ಏನನ್ನೂ ಮಾಡಿರಲಿಲ್ಲ ಎಂಬುದು ಅವರ ವಾಸದ ಮನೆಯನ್ನು ನೋಡಿದಾಗ ಸ್ಪಷ್ಟವಾಗುತ್ತದೆ.

ಕೇಂದ್ರ ಸರಕಾರವು 1993ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ದೂರಸಂಪರ್ಕ ಇಲಾಖೆಯ ಸಲಹಾ ಸಮಿತಿಯ ಸದಸ್ಯರಾಗಿ ಅವರನ್ನು ನೇಮಿಸಿತ್ತು.

1992ರ ಡಿಸೆಂಬರ್ 6ರ ನಂತರ ಭುಗಿಲೆದ್ದ ಕೋಮುಗಲಭೆಯಲ್ಲಿ ಕಾಟಿಪಳ್ಳ–ಕೃಷ್ಣಾಪುರ ಪ್ರದೇಶವು ಬಹಳವಾಗಿ ತತ್ತರಿಸಿತ್ತು. ಆವಾಗಿನ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಯ ಜೊತೆ ನಿಕಟ ಸಂಪರ್ಕವಿರಿಸಿಕೊಂಡು ಪರಿಸ್ಥಿತಿಯನ್ನು ತಹಬಂದಿಗೆ ತರಲು ಆಹೋರಾತ್ರಿ ಶ್ರಮಿಸಿದ್ದರು. ಶಾಂತಿ–ಸಾಮರಸ್ಯ ಪುನಃ ಸ್ಥಾಪಿಸಲು ವಿವಿಧ ಆಯಾಮಗಳಲ್ಲಿ ಪ್ರಯತ್ನಿಸಿ ಜಿಲ್ಲಾಡಳಿತದ ಮೆಚ್ಚುಗೆಗೆ ಪಾತ್ರರಾದರು.

ಶಾಂತಿಯ ಪ್ರತಿಪಾದಕರಾಗಿ ಕಾರ್ಯನಿರ್ವಹಿಸಿದ ಅವರನ್ನು ರಾಜ್ಯ ಸರಕಾರವು 1994ರಲ್ಲಿ ರಾಜ್ಯ ಕೋಮು ಸೌಹಾರ್ದತಾ ಪ್ರಶಸ್ತಿ ನೀಡಿ ಗೌರವಿಸಿತ್ತು. ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಕೇಂದ್ರದ ಆಂತರಿಕ ಭದ್ರತಾ ಖಾತೆ ಸಚಿವ ರಾಜೇಶ್ ಪೈಲಟ್ ಅವರು ಹಸನಬ್ಬ ಮಾಸ್ಟರ್ ಅವರನ್ನು ಸನ್ಮಾನಿಸಿದ್ದರು.

ಪಣಂಬೂರು ಜುಮ್ಮಾ ಮಸೀದಿ ಜಮಾಅತ್‌ನ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷರಾಗಿ ಮತ್ತು ಕಾಟಿಪಳ್ಳಕ್ಕೆ ಬಂದ ನಂತರವೂ ಜಮಾಅತಿನ ಪ್ರಮುಖ ಹುದ್ದೆಯಲ್ಲಿದ್ದು ಜಮಾಅತಿನ ಪ್ರತೀ ಕುಟುಂಬದ ಹಿರಿಯನಂತೆ ಸೇವೆಗೈದಿದ್ದರು. ಬಂದರು ಯೋಜನೆಯಿಂದ ಪಣಂಬೂರಿನಿಂದ ಕಾಟಿಪಳ್ಳಕ್ಕೆ ಬಂದು ನೆಲೆಸಿದಾಗ ನ್ಯಾಯೋಚಿತವಾಗಿ ಸಿಗಬೇಕಾದ ಧಾರ್ಮಿಕ ಕೇಂದ್ರಗಳನ್ನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಕ್ಕೆ ಕಲ್ಪಿಸಿಕೊಡಲು ಶ್ರಮಿಸಿದ್ದರು.

ಪಣಂಬೂರಿನಲ್ಲಿದ್ದ ಮುಸಾಫಿರ್ ಖಾನಾದ ಬದಲಿಗೆ ಕಾಟಿಪಳ್ಳ ಮಸೀದಿಯ ಪಕ್ಕದಲ್ಲಿಯೇ ಸರಕಾರಿ ಜಮೀನನ್ನು ಮಂಜೂರು ಮಾಡಿಸಿ ದೂರಗಾಮಿ ಪ್ರಯೋಜನ ಬೀರುವ ಸೇವೆಗೈದಿದ್ದರು. ಈಗ ಆ ಜಮೀನಿನಲ್ಲಿ ಶಾದಿಮಹಲ್ ಮತ್ತು ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಾಣಗೊಂಡಿವೆ.

ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಹಾಜಿ ಪಿ.ಹಸನಬ್ಬ ಮಾಸ್ಟರ್ ತನ್ನ 81ನೇ ವರ್ಷ ಪ್ರಾಯದಲ್ಲಿ ಅಂದರೆ 2002ರ ಆಗಸ್ಟ್ 14ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರು ಪತ್ನಿ ಬೀಬಿ ಫಾತಿಮಾ ಮತ್ತು ಎಂಟು ಪುತ್ರಿಯರು ಹಾಗೂ ನಾಲ್ಕು ಮಂದಿ ಗಂಡು ಮಕ್ಕಳ ತುಂಬು ಸಂಸಾರವನ್ನು ಹೊಂದಿದ್ದರು. ಆ ಪೈಕಿ ಅವಳಿ ಗಂಡು ಮಕ್ಕಳು ಶೈಶವಾಸ್ಥೆಯಲ್ಲೇ ಅಸುನೀಗಿತ್ತು.

ಹಸನಬ್ಬ ಮಾಸ್ಟರ್‌ರ ನಿಧನದ ನಂತರ ಅವರ ಸ್ಮಾರಕವಾಗಿ ಕಾಟಿಪಳ್ಳದ ಆರ್ಶಾದ್ ಯೂತ್ ಕೌನ್ಸಿಲ್ ಎಂಬ ಸಂಘವು ಸಮಾಜದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಜನಸೇವೆ ಮಾಡುತ್ತಿರುವವರನ್ನು ಗುರುತಿಸಿ ಪ್ರತೀ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು "ಹಸನಬ್ಬ ಮಾಸ್ಟರ್ ಪ್ರಶಸ್ತಿ"ಯನ್ನು ನೀಡುತ್ತಾ ಬಂದಿದೆ. ಅಲ್ಲದೆ ಕಾಟಿಪಳ್ಳದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ "ನೂರುಲ್ ಹುದಾ ಎಜುಕೇಶನ್ ಟ್ರಸ್ಟ್" 2009ರಲ್ಲಿ ಆರಂಭಿಸಿದ ಪದವಿ ಪೂರ್ವ ಕಾಲೇಜಿಗೆ ಹಸನಬ್ಬ ಮಾಸ್ಟರ್‌ರ ಹೆಸರನ್ನಿಟ್ಟು ಸದಾ ನೆನಪಿನಲ್ಲಿರುವಂತೆ ಮಾಡಿದೆ.

# ಸಮಾಜ ಸೇವಕ ಕೌನ್ಸಿಲರ್
# ಕೆ.ಎಂ.ಮುಹಮ್ಮದ್ ಕೋಡಿ ಕುಂದಾಪುರ



ಕುಂದಾಪುರ ಕೋಡಿಯ ಕೆ.ಎಂ. ಫಾರೂಕ್–ಫಾತಿಮಾಬಿ ದಂಪತಿಯ ಪುತ್ರನಾಗಿ 1947ರಲ್ಲಿ ಜನಿಸಿದ ಕೋಡಿಮುಲ್ಲಾ (ಕೆ.ಎಂ) ಮುಹಮ್ಮದ್ ಅವರು ಕೌನ್ಸಿಲರ್ ಮುಹಮ್ಮದ್ ಎಂದೇ ಖ್ಯಾತರಾಗಿರುವರು.

ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು 10ನೇ ತರಗತಿ ಕಲಿತಿದ್ದಾರೆ. ಮಸೀದಿಯ ಮುಅದ್ದಿನ್ (ಮುಕ್ರಿಕ) ಮಾಡಬೇಕಾದ ಏನೆಲ್ಲಾ ಕೆಲಸವಿದೆಯೋ ಅದೆಲ್ಲವನ್ನೂ ಸತತ 38 ವರ್ಷಗಳ ಕಾಲ ಯಾವುದೇ ಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಮಾಡುವ ಮೂಲಕ ಊರವರ ಪ್ರೀತಿಗೆ ಪಾತ್ರರಾಗಿದ್ದರು. ಮಸೀದಿಯಲ್ಲಿ ಬಾಂಗ್ ಕರೆ ಕೊಡುವುದು, ಮಸೀದಿಯನ್ನು ಶುಚಿಗೊಳಿಸುವುದನ್ನು "ಖಿದ್ಮತ್" ಎಂದು ಭಾವಿಸಿದರು. ಅಷ್ಟೇ ಅಲ್ಲ, ಆರಂಭದಲ್ಲಿ ತನ್ನ ಮನೆಯಲ್ಲೇ ಮಕ್ಕಳಿಗೆ ಧಾರ್ಮಿಕ ವಿದ್ಯಾಭ್ಯಾಸವನ್ನೂ ಉಚಿತವಾಗಿ ನೀಡತೊಡಗಿದರು. ಧಾರ್ಮಿಕ ಕ್ಷೇತ್ರದಲ್ಲಿ ಸೇವೆಗೈಯುತ್ತಲೇ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡರು. ಈ ಮಧ್ಯೆ ಊರವರ ಪ್ರೀತಿಯ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ರಂಗದಲ್ಲೂ ಸಕ್ರಿಯರಾದರು. 1987ರಲ್ಲಿ ಕುಂದಾಪುರ ಪುರಸಭೆಯ ಸದಸ್ಯರಾಗಿ ಆಯ್ಕೆಗೊಂಡ ಅವರು ಪುರಸಭೆಯ ಸ್ಥಾಯಿಸಮಿತಿಯ ಅಧ್ಯಕ್ಷರೂ ಆದರು. ಬಳಿಕ ಸತತ ಎರಡು ಅವಧಿಗೆ ಪುರಸಭೆಯ ಕೌನ್ಸಿಲರ್ ಆಗಿ ಆಯ್ಕೆಗೊಂಡರು. ಆ ಮೂಲಕ ಕೌನ್ಸಿಲರ್ ಮುಹಮ್ಮದ್ ಎಂದೇ ಗುರುತಿಸಲ್ಪಟ್ಟರು. ಜನಪ್ರತಿನಿಧಿಯಾಗಿದ್ದರೂ ಕೂಡ ಅವರು ಮಸೀದಿಯ "ಖಿದ್ಮತ್"ನಿಂದ ದೂರ ಸರಿಯಲಿಲ್ಲ. ಅಷ್ಟೇ ಅಲ್ಲ ಮುಹಿಯ್ಯುದ್ದೀನ್ ಜುಮಾ ಮಸೀದಿಯ ಅಧ್ಯಕ್ಷರಾಗಿ ಎರಡು ಅವಧಿಗೆ ಆಯ್ಕೆಗೊಂಡಿದ್ದರು. ಅವರ ಧಾರ್ಮಿಕ, ಸಾಮಾಜಿಕ, ರಾಜಕೀಯ ರಂಗದ ಸೇವೆಯನ್ನು ಪರಿಗಣಿಸಿ ಊರಿನ ಮತ್ತು ಆಸುಪಾಸಿನ ಹಲವು ಸಂಘಟನೆಗಳು ಅವರನ್ನು ಸನ್ಮಾನಿಸಿವೆ.

2011ರ ಡಿಸೆಂಬರ್ 15ರಂದು ಪತ್ನಿ ಜುಬೇದಾ, 8 ಮಂದಿ ಪುತ್ರರು ಹಾಗೂ 4 ಮಂದಿ ಪುತ್ರಿಯರನ್ನು ಬಿಟ್ಟಗಲಿದ್ದಾರೆ.

## ಬ್ರಿಟಿಷ್ ಸರಕಾರದ ಉನ್ನತ ಅಧಿಕಾರಿ ವಿ. ರಮ್ಲಾನ್ ಹಾಜಿ



ಒಬ್ಬ ಬ್ಯಾರಿ–ಮುಸ್ಲಿಂ ಕುಟುಂಬದಲ್ಲಿ ಹುಟ್ಟಿ ಬೆಳೆದ ವ್ಯಕ್ತಿ ಬ್ರಿಟಿಷ್ ಸರಕಾರದಲ್ಲಿ ಉನ್ನತ ಅಧಿಕಾರಿಯಾಗಿ ಮೆರೆಯುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೆ ಆಗಿನ ಮೆಟ್ರಿಕ್ಯುಲೇಶನ್ ಶಿಕ್ಷಣ ಪಡೆದು ಕಂದಾಯ ಇಲಾಖೆಗೆ ಸೇರ್ಪಡೆಗೊಂಡ ರಮ್ಲಾನ್ ಹಾಜಿ ಹಂತ ಹಂತವಾಗಿ ಭಡ್ತಿಗೊಂಡು ಉನ್ನತ ಅಧಿಕಾರಿಯಾಗಿ ಗಮನ ಸೆಳೆದರು.


1910ರಲ್ಲಿ ರಮಝಾನ್ ತಿಂಗಳಲ್ಲಿ ಅಹ್ಮದ್ ಕುಂಞಿ–ಐಸಮ್ಮ ದಂಪತಿಯ ಪುತ್ರನಾಗಿ ವಿಟ್ಲದಲ್ಲಿ ಜನಿಸಿದ ವಿ. ರಮ್ಲಾನ್ ಹಾಜಿ ಮಂಗಳೂರಿನಲ್ಲಿ ಮೆಟ್ರಿಕ್ಯುಲೇಶನ್ ಶಿಕ್ಷಣ ಪೂರ್ತಿಗೊಳಿಸಿದರು. ಹಾಗೇ ಬ್ರಿಟಿಷ್ ಆಡಳಿತದ ಸರಕಾರಿ ಸೇವೆಗೆ ಸೇರ್ಪಡೆಗೊಂಡ ರಮ್ಲಾನ್ ಹಾಜಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ (ಬಿಡಿಒ), ಮಂಗಳೂರು, ಕುಂದಾಪುರ, ಕಾರ್ಕಳ, ಕುಂಬಳೆಯ ತಹಶೀಲ್ದಾರ್, ಲಕ್ಷದ್ವೀಪದ ಆಡಳಿತಾಧಿಕಾರಿ ಮತ್ತು ದಂಡಾಧಿಕಾರಿ, ಮಂಗಳೂರು ಮತ್ತ ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತ, ವಿಶೇಷ ಭೂ ಸ್ವಾಧೀನ ಅಧಿಕಾರಿ, ಸೌತ್ ಕೆನರಾ ಹೆಚ್ಚುವರಿ ದಂಡಾಧಿಕಾರಿ, ಶಿವಮೊಗ್ಗ ವಿಭಾಗದ ಸಾರಿಗೆ ಇಲಾಖೆಯ ಅಧಿಕಾರಿ... ಹೀಗೆ ಕಂದಾಯ, ನ್ಯಾಯಾಂಗ, ಸಾರಿಗೆ ಇಲಾಖೆಗಳ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು.

ಸರಕಾರಿ ಸೇವೆಯಿಂದ ನಿವೃತ್ತರಾದ ಬಳಿಕವೂ ರಮ್ಲಾನ್ ಹಾಜಿ ಸುಮ್ಮನೆ ಕೂರಲಿಲ್ಲ. ಹಲವು ಖಾಸಗಿ ಸಂಸ್ಥೆಗಳ ಮಾರ್ಗದರ್ಶಕ, ಸಲಹೆಗಾರರಾಗಿ ಕಾರ್ಯನಿರ್ವಹಿಸಿದರು. ಬ್ಯಾರಿ, ತುಳು, ಮಲಯಾಳಂ, ಕನ್ನಡ, ಹಿಂದಿ, ಉರ್ದು, ಇಂಗ್ಲಿಷ್ ಭಾಷೆಯ ಮೇಲೆ ಹಿಡಿತವಿದ್ದ ಅವರು ಪ್ರಾಮಾಣಿಕ ಸೇವೆಗೆ ಹೆಸರುವಾಸಿಯಾಗಿದ್ದರು. ಧಾರ್ಮಿಕ ಪ್ರಜ್ಞೆಯನ್ನೂ ಬೆಳೆಸಿಕೊಂಡಿದ್ದರು. ಸಂದರ್ಭಕ್ಕೆ ಅನುಸಾರವಾಗಿ ಅವರು ಆಡಿದ ಮಾತುಗಳನ್ನು ಅವರ ಅಳಿಯ, ಹಿರಿಯ ಸಂಶೋಧಕ ಪ್ರೊ.ಬಿ.ಎಂ. ಇಚ್ಲಂಗೋಡು ಸಂಗ್ರಹಿಸಿ "ರಮ್ಲಾನ್ ಹಾಜಿಯ ಹಿತವಚನಗಳು' ಎಂಬ ಹೆಸರಿನಲ್ಲಿ 2002ರಲ್ಲಿ ಕೃತಿರೂಪದಲ್ಲಿ ಹೊರತಂದಿದ್ದರು. ಈ ಕೃತಿಯನ್ನು 2015ರಲ್ಲಿ ರಮ್ಲಾನ್ ಹಾಜಿಯ ಮೊಮ್ಮಗ ಜೀಶಾನ್ ರಮ್ಲಾನ್ ಇಂಗ್ಲಿಷ್‌ಗೆ ಅನುವಾದಿಸಿದ್ದರು.

ರಮ್ಲಾನ್ ಹಾಜಿ ನಿಧನರಾಗಿ 40 ವರ್ಷಗಳ ಬಳಿಕ ಅಂದರೆ 2013ರಲ್ಲಿ ತನ್ನ ಅಜ್ಜನ ಹೆಸರು ಮುಂದಿನ ಪೀಳಿಗೆಯೂ ನೆನಪಿಸಿಕೊಳ್ಳಬೇಕು ಎಂಬ ಆಸೆಯೊಂದಿಗೆ ಜೀಶಾನ್ ರಮ್ಲಾನ್ ಅವರು "ರಮ್ಲಾನ್ ಚಾರಿಟೇಬಲ್ ಟ್ರಸ್ಟ್"ನ್ನು ಸ್ಥಾಪಿಸಿದ್ದರು. ಬಳಿಕ ಅದನ್ನು "ರಮ್ಲಾನ್ ಫೌಂಡೇಶನ್" ಎಂಬ ಹೆಸರಿನಲ್ಲಿ ನೋಂದಾಯಿಸಿದ್ದರು. ಈ ಸಂಸ್ಥೆಯ ಮೂಲಕ ಸುಮಾರು 70ಕ್ಕೂ ಅಧಿಕ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿ 10 ಸಾವಿರಕ್ಕೂ ಅಧಿಕ ಮಂದಿ ಪ್ರಯೋಜನ ಪಡೆಯುವಂತೆ ಜೀಶಾನ್ ರಮ್ಲಾನ್ ಮಾಡಿದ್ದರು.

ರಾಜಿ ಪಂಚಾಯತಿಗೆ ನಡೆಸುವ ಮೂಲಕ ಬಂಟ್ವಾಳ ತಾಲೂಕಿನಾದ್ಯಂತ ಮನೆಮಾತಾಗಿದ್ದ ಕಾಟುಬಾವ ಅವರ ಪುತ್ರಿ ಫಾತಿಮಾ ಅವರನ್ನು ಮದುವೆಯಾದ ರಮ್ಲಾನ್ ಹಾಜಿಗೆ ನಾಲ್ಕು ಗಂಡು ಮತ್ತು ಆರು ಹೆಣ್ಣು ಮಕ್ಕಳಿದ್ದರು. 1973ರ ಮಾರ್ಚ್ 17ರಂದು ಅವರು ನಿಧನರಾದರು.

# ಪರಿಸರವಾದಿ–ನಾಟಿವೈದ್ಯ ಹರೇಕಳ ಮೊಯ್ದಿನ್



ಹರೇಕಳ ಎಂದ ಕೂಡಲೇ ನೆನಪಿಗೆ ಬರುವುದು ಅಕ್ಷರ ಸಂತ ಬಿರುದಾಂಕಿತ ಹಾಜಬ್ಬ ಅವರ ಹೆಸರು. ಆದರೆ ಹಾಜಬ್ಬ ಅವರಿಗಿಂತಲೂ ಮೊದಲೇ ಇಲ್ಲೊಬ್ಬ ಹಿರಿಯ ಜೀವಿ ಪರಿಸರ ಕ್ರಾಂತಿ ಮಾಡಿದ್ದರು. ಜನಪ್ರತಿನಿಧಿಗಳ ನಿರ್ಲಕ್ಷ್ಯದ ಪರಿಣಾಮವೋ, ಪ್ರಚಾರದ ಹಂಗಿಲ್ಲದಿರುವ ಕಾರಣವೋ ಏನೋ ಅವರ ಹೆಸರು ಜನತೆಯ ಮುಂದೆ ಬೆಳಕಿಗೆ ಬಂದೇ ಇಲ್ಲ ಎನ್ನುವುದು ದುರಂತ ಸತ್ಯ! ಅಂದಹಾಗೆ, ಆ ವ್ಯಕ್ತಿ ಬೇರೆ ಯಾರೂ ಅಲ್ಲ ಪರಿಸರವಾದಿ ಹರೇಕಳ ಮೊಯ್ದಿನ್.

ಹರೇಕಳ ಹಾಜಬ್ಬ ಶಿಕ್ಷಣ ಮೂಲಕ ಕ್ರಾಂತಿ ಮಾಡಿದ್ದರೆ, ಮೊಯ್ದಿನ್ ಹಸಿರು ಕ್ರಾಂತಿಯ ಮೂಲಕ ಪರಿಸರದ ಜನತೆಗೆ ಚಿರಪರಿಚಿತರಾಗಿದ್ದರು. ಅವರು ಇಹಲೋಕ ತ್ಯಜಿಸಿ ಹಲವು ವರ್ಷಗಳು ಸಂದಿವೆ. ಅವರ ಹೆಸರು ಮಾತ್ರ ಇಂದು ಕೆಲವು ಪರಿಸರ ಪ್ರೇಮಿಗಳು, ಆಯುರ್ವೇದ ಪಂಡಿತರು, ವೈದ್ಯರ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿರುವುದು ಒಂದಷ್ಟು ನೆಮ್ಮದಿಯ ವಿಚಾರ.

ಆಯುರ್ವೇದ ಪಂಡಿತರ ಕುಟುಂಬದ ಅಬ್ದುಲ್ ರಹ್ಮಾನ್–ಖತೀಜಮ್ಮ ದಂಪತಿಯ ಪುತ್ರನಾಗಿ 1934ರಲ್ಲಿ ಹರೇಕಳದ ಕಿಸಾನ್ ನಗರದಲ್ಲಿ ಜನಿಸಿದ ಮೊಯ್ದಿನ್ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ಜನರಲ್ ಮೆಕ್ಯಾನಿಕ್ ಪದವಿ ಪಡೆದು ತಮಿಳ್ನಾಡಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು. ಕಾರ್ಮಿಕರ ಪರವಾಗಿ ಧ್ವನಿ ಎತ್ತಿ ಕೆಲಸ ಕಳೆದುಕೊಂಡರು. ಬಳಿಕ ಆಂಧ್ರಪ್ರದೇಶಕ್ಕೆ ತೆರಳಿ ಎಂಜಿಆರ್ ಜೊತೆ ಅಣ್ಣಾ ಡಿಎಂಕೆ ಪಕ್ಷ ಕಟ್ಟುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಅಲ್ಲಿ ಪ್ರಭಾವಿ ನಾಯಕನಾಗುವ ಎಲ್ಲಾ ಅರ್ಹತೆಯಿದ್ದರೂ ಕುತಂತ್ರಿಗಳ ಕೃತ್ಯದಿಂದ ಬೇಸತ್ತು ಊರಿಗೆ ಮರಳಿ ಭೂಮಾಲಕ ಪದ್ಧತಿಯ ವಿರುದ್ಧ ಹೋರಾಟ ಆರಂಭಿಸಿದರು.

1974ರಲ್ಲಿ ಪ್ರವಾಹದಲ್ಲಿ ನಿರ್ಗತಿಕರಾದ ಕುಟುಂಬದ ಪುನರ್ವಸತಿಗಾಗಿ ಹೋರಾಡಿ 154 ಮಂದಿ ಪೈಕಿ 94 ಮಂದಿಗೆ ತಲಾ ಒಂದು ಎಕರೆಯಂತೆ ಸರಕಾರಿ ಜಮೀನು ಹಕ್ಕು ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿ ಉಳಿದವರ ಹಕ್ಕುಗಳಿಗಾಗಿ ಕೊನೆಯವರೆಗೂ ಹೋರಾಡಿದ್ದರು. ನಿರ್ಗತಿಕರ ಅಭಿವೃದ್ಧಿ ದೃಷ್ಟಿಯಲ್ಲಿ ಮಲ್ಲಿಗೆ ಕೃಷಿ, ತೋಟಗಾರಿಕೆ, ನರ್ಸರಿ, ಕೋಳಿ ಸಾಕಣೆ ಮುಂತಾದ ಕಾರ್ಯಕ್ರಮ ಹಮ್ಮಿಕೊಂಡು ಮನೆಯಲ್ಲೇ ತರಬೇತಿ ನೀಡಿದರು. ಮಿಲಿಯ ವೃಕ್ಷ ಕ್ರಾಂತಿಯ ಹರಿಕಾರ ಬೇನ್ ಸೋನ್ಸ್‌ರಿಂದ ಪ್ರೇರಣೆ ಪಡೆದು ಹಸಿರು ಕ್ರಾಂತಿಗೆ ಧುಮುಕಿದರು.

ಅಲ್ಲಿಂದ ಹಿಂದಿರುಗಿ ನೋಡದ ಅವರು ಸರ್ಕಾರದ ಅರಣ್ಯ ಇಲಾಖೆಯಿಂದ ದೊರಕುವ ಅನುದಾನ ಬಳಸಿ ಬಂಜರು ಭೂಮಿಯಲ್ಲಿ ಸಸಿ ನೆಡಲು ಆರಂಭಿಸಿದರು. ಕಾರ್ಮಿಕರ ಜೊತೆ ಪಾವೂರು, ಹರೇಕಳ, ಬೋಳಿಯಾರು, ಕೊಣಾಜೆ, ಪಜೀರು, ಅಂಬ್ಲಮೊಗರು, ಕುರ್ನಾಡು, ಪೆರ್ಮನ್ನೂರು ಮುಂತಾದ 8 ಗ್ರಾಮಗಳಲ್ಲದೆ ಕುದುರೆಮುಖ ಹಾಗೂ ರಾಜ್ಯಾದ್ಯಂತ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಂಡು ಹಸಿರು ಕ್ರಾಂತಿಯನ್ನೇ ಸೃಷ್ಟಿಸಿದರು. ಔಷಧೀಯ ಸಸಿಗಳನ್ನು ಪರಿಸರದ ಜನತೆಗೆ ಪರಿಚಯಿಸಿದ್ದರು.

ಇಂದು ಈ ಪ್ರದೇಶಗಳ ರಸ್ತೆಗಳ ಇಕ್ಕೆಲಗಳಲ್ಲಿ ಕಾಣುವ ಸುಮಾರು 25 ಲಕ್ಷಕ್ಕೂ ಅಧಿಕ ಬೃಹತ್ ಮರಗಳು ಹರೇಕಳ ಮೊಯ್ದಿನ್ ಅವರ ಶ್ರಮದಾನದ ಫಲವಾಗಿದೆ ಎಂದು ಜನರು ನೆನಪಿಸಿಕೊಳ್ಳುತ್ತಿದ್ದಾರೆ. ಕೊಣಾಜೆಯ ಮಂಗಳೂರು ವಿಶ್ವವಿದ್ಯಾನಿಲಯ ಪರಿಸರದಲ್ಲಿ ಕಾಣಲು ಸಿಗುವ ಅತ್ತಿಮರ ನೆಟ್ಟವರು ಕೂಡ ಅವರೇ. ಹರೇಕಳದಲ್ಲಿ ಈಗಲೂ ಮೊಯ್ದಿನ್ ನೆಟ್ಟ ಹಲವಾರು ಅಮೂಲ್ಯ ಔಷಧೀಯ ಮರಗಳು ಇವೆ. ಅವರ ಮನೆಯಂಗಳದಲ್ಲಿ ಸಿಂಗಾಪೂರ್ ಅಡಕೆ ಸಹಿತ ಇತರ ಸಸಿಗಳು ಕಾಣಲು ಸಿಗುತ್ತದೆ. ಅವರು ನೆಟ್ಟ ಮರಗಳು ಜನರು ಕದ್ದುಮುಚ್ಚಿ ಕಡಿದು ಮಾರಾಟ ಮಾಡಲು ಶುರುವಿಟ್ಟಾಗ ಅದನ್ನು ಉಳಿಸುವುದು ಅಸಾಧ್ಯವಾದ ಹಿನ್ನೆಲೆಯಲ್ಲಿ ಗ್ರಾಪಂ ಸುಪರ್ದಿಗೆ ಬಿಟ್ಟುಕೊಟ್ಟಿದ್ದರು.

ಗಿಡಮೂಲಿಕೆ ಸಸಿಗಳ ಬಗ್ಗೆ ಅವರು ಮೂರು ಪುಸ್ತಕಗಳನ್ನು ಬರೆದಿದ್ದು ದೇಶೀಯ ಔಷಧೋಪಚಾರ ಪುಸ್ತಕ ಅವರ ನಿಧನದ ಬಳಿಕ 2002ರಲ್ಲಿ ಮಂಗಳೂರು ವಿವಿಯಲ್ಲಿ ನಡೆದ ಸಂಸ್ಮರಣಾ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಗಿತ್ತು. ಹರೇಕಳ ಕಿಸಾನ್ ನಗರದಲ್ಲಿ ಅವರ ನೆನಪಿಗಾಗಿ ಹರೇಕಳ ಭೂರಹಿತ ಬಡವರ, ಸಣ್ಣ ರೈತರ ಅಭಿವೃದ್ಧಿ ಸಂಘವು 2002ರಲ್ಲಿ ಬಸ್ ತಂಗುದಾಣ ಸ್ಥಾಪಿಸಿ ಸಂಸ್ಮರಣಾ ದಿನದಂದು ಲೋಕಾರ್ಪಣೆ ಮಾಡಿದೆ. ಲಕ್ಷಗಟ್ಟಲೆ ಸಸಿಗಳನ್ನು ನೆಟ್ಟು ಹಸಿರು ಕ್ರಾಂತಿ ಮಾಡಿದ ಮೊಯ್ದಿನ್ ಅವರಿಗೆ 1987ರಲ್ಲಿ "ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ" ಪ್ರಶಸ್ತಿ, ನೈರೋಬಿಯ ಯುಎನ್‌ಇಪಿ 'ದಿ ಗ್ಲೋಬಲ್ 500' ಪ್ರಶಸ್ತಿ ನೀಡಿ ಗೌರವಿಸಿದ್ದರೂ ಕರ್ನಾಟಕ ಸರ್ಕಾರ ಮಾತ್ರ ಅವರ ಸಾಧನೆ ಪರಿಗಣಿಸಿರಲಿಲ್ಲ.

2002ರ ಮೇ 1ರಂದು ನಿಧನರಾದ ಅವರು ಪತ್ನಿ ಮತ್ತು ಮೂವರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ.

# ಗ್ರಾಮೀಣ ಭಾಗದ ಶಿಕ್ಷಣ ಪ್ರೇಮಿ
# ಹಾಜಿ ಎಂ.ಪಿ. ಇಸ್ಮಾಯಿಲಬ್ಬ ಪಾರೆ



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮಂಜನಾಡಿ ಸಮೀಪದ ಪಾರೆ ಆಲಿಕುಂಞಿ ಬ್ಯಾರಿ–ಕಿನ್ಯ ಕುರಿಯ ಫಾತಿಮಾ ದಂಪತಿಯ ಪುತ್ರನಾಗಿ 1922ರಲ್ಲಿ ಜನಿಸಿದ ಹಾಜಿ ಎಂ.ಪಿ. ಇಸ್ಮಾಯಿಲಬ್ಬ ಪಾರೆ ಇಂಟರ್ ಮೀಡಿಯಟ್ ಕಲಿತರು. ತನ್ನ ತಂದೆಯ ನಿಧನದ ಬಳಿಕ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಕೃಷಿಯಲ್ಲಿ ನಿರತರಾದರು. ಅಂದರೆ ಸುಳ್ಯ ತಾಲೂಕಿನ ಕೊಲ್ಲಮೊಗರು ಗ್ರಾಮದ ಇಡ್ನೂರ್‌ನಲ್ಲಿ ತಂದೆಯಿಂದ ಬಳುವಳಿಯಾಗಿ ಬಂದ 24 ಎಕರೆ ಭೂಮಿಯಲ್ಲಿ ಅಡಿಕೆ, ತೆಂಗು ಸಹಿತ ಗದ್ದೆ ಬೇಸಾಯದಲ್ಲಿ ತೊಡಗಿಸಿಕೊಂಡರು. ಜೊತೆಗೆ ಮಂಜನಾಡಿ ಮತ್ತು ನರಿಂಗಾನ ಗ್ರಾಮದಲ್ಲಿ ಕೃಷಿ ಚಟುವಟಿಕೆ ಮುಂದುವರಿಸಿದರು. ಸುಧಾರಿತ ಭತ್ತ ಕೃಷಿಗಾಗಿ ಪ್ರಶಸ್ತಿಯನ್ನೂ ಅವರು ಪಡೆದಿದ್ದಾರೆ.

ಮಂಜನಾಡಿ ಕೇಂದ್ರ ಜುಮಾ ಮಸ್ಜಿದ್‌ನಲ್ಲಿ 35 ವರ್ಷಗಳ ಕಾಲ ಪ್ರಧಾನ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಕೊಲ್ಲಮೊಗರು ಗ್ರಾಮದ ಇಡ್ನೂರು ಬದ್ರಿಯಾ ಜುಮಾ ಮಸೀದಿಯ ಸ್ಥಾಪಕರಾಗಿ 39 ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

1956ರಲ್ಲಿ ಮದ್ರಾಸ್ ಸರಕಾರದ ಅವಧಿಯಲ್ಲಿ ಸುಳ್ಯ ತಾಲೂಕಿನ ಕೊಲ್ಲಮೊಗರು ಹರಿಹರ ಗ್ರಾಮ ಪಂಚಾಯತ್ ಬೋರ್ಡ್ ಸದಸ್ಯರಾಗಿ ಆಯ್ಕೆಗೊಂಡರು. 1958ರಲ್ಲಿ ಅಂದರೆ ತನ್ನ 28ರ ಹರೆಯದಲ್ಲಿ ಪತ್ನಿ ನಫೀಸಾರೊಂದಿಗೆ ಪ್ರಥಮ ಹಜ್ ಯಾತ್ರೆಗೈದರು.

ಬಂಟ್ವಾಳ ತಾಲೂಕಿನ ನರಿಂಗಾನ ಗ್ರಾಮದ ಕಲ್ಲರಕೋಡಿ, ಚೌಕ, ಮೀನಂಗೋಡಿ, ಕುಡುಂಬಳೆಗುರಿ, ನೆತ್ತಿಲ ಪ್ರದೇಶದ "ಹೊನ್ನೆಯಡಿ" ಎಂಬ ಎತ್ತರವಾದ ನಿರ್ಜನ ಮತ್ತು ಬೋಳುಗುಡ್ಡೆ ಪ್ರದೇಶದಲ್ಲಿ ದ.ಕ.ಜಿ.ಪಂ.ಹಿ.ಪ್ರಾ. ಶಾಲೆಯನ್ನು 1963ರಲ್ಲಿ ಸ್ಥಾಪಿಸಿದರು. ಆರಂಭದಲ್ಲಿ ತನ್ನ ಮನೆಯಲ್ಲೇ ಬೆರಳೆಣಿಕೆಯ ಮಕ್ಕಳನ್ನು ಸೇರಿಸಿಕೊಂಡು ಶಾಲೆ ಆರಂಭಿಸಿದರು. ತನ್ನ ಮನೆಯಲ್ಲಿದ್ದ ಬೆಂಚು, ಕುರ್ಚಿಯನ್ನು ತರಗತಿಗೆ ಬಳಸಿದರು. ಬಳಿಕ ಮನೆ ಸಮೀಪದ ಸ್ವಂತ ಜಮೀನಿನಲ್ಲಿ ಸೋಗೆ ಮಾಡಿನ ಶಾಲೆ ಕಟ್ಟಿಸಿದರು. ನಾಲ್ಕು ವರ್ಷದ ಬಳಿಕ ಸರಕಾರಿ ಜಮೀನಿನಲ್ಲಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದರು. ಅಂದರೆ ಸರಕಾರಿ ಅನುದಾನದ ಎರಡು ಪಟ್ಟು ಹಣವನ್ನು ತನ್ನ ಕೈಯಿಂದ ವ್ಯಯಿಸಿದರು. ಅಲ್ಲದೆ ಸುಮಾರು 40 ವರ್ಷಗಳ ಕಾಲ ತನ್ನ ಕೈಯಿಂದಲೇ ಹಣ ವ್ಯಯಿಸಿ ಶಾಲೆಯನ್ನು ಮುನ್ನಡೆಸಿದರು. ಈ ಶಾಲೆಯ ಸುವರ್ಣ ಮಹೋತ್ಸವ ಸಂದರ್ಭ ಅಂದರೆ 2014ರ ಜನವರಿ 25ರಂದು ಶಾಲಾಭಿವೃದ್ಧಿ ಸಮಿತಿಯು ಸ್ಥಾಪಕರಿಗೆ ನೀಡಿದ ಗೌರವಾರ್ಪಣಾ ಪತ್ರವನ್ನು ಸ್ಥಾಪಕರ ಹಿರಿಯ ಪುತ್ರ ಹಾಜಿ ಅಬೂಸಾಲಿಹ್ ಪಾರೆ ಸ್ವೀಕರಿಸಿದರು.

1968ರಿಂದ 1978ರ ತನಕ ನರಿಂಗಾನ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದ ಇಸ್ಮಾಯಿಲಬ್ಬ ಪಾರೆ ಗ್ರಾಮದ ಅಭಿವೃದ್ಧಿಗೆ ಶ್ರಮಿಸಿದರು. ಸಾರ್ವಜನಿಕ ಜೀವನದಲ್ಲಿ ನಿಷ್ಕಳಂಕ ವ್ಯಕ್ತಿಯಾಗಿ ಮೆರೆದ ಅವರು ಜಾತಿ, ಧರ್ಮ, ಭಾಷೆಗಳ ವ್ಯತ್ಯಾಸವಿಲ್ಲದೆ, ಎಂದೂ ಅನ್ಯಾಯವನ್ನು ಸಹಿಸದೆ ತಾನು ನೆಚ್ಚಿಕೊಂಡ ತತ್ವ ಸಿದ್ಧಾಂತ ಪಾಲಿಸಿದರು. 89 ವರ್ಷಗಳ ಸಾರ್ಥಕ ಬದುಕು ಕಂಡ ಅವರು ಪತ್ನಿ ಮತ್ತು 7 ಮಂದಿ ಪುತ್ರರು ಹಾಗೂ 3 ಪುತ್ರಿಯರನ್ನು 2009ರ ಜೂನ್ 29ರಂದು ಬಿಟ್ಟಗಲಿದರು.

# ರಾಷ್ಟ್ರಮಟ್ಟದಲ್ಲಿ ಮಿಂಚಿದ ಪ್ರಥಮ ಬ್ಯಾರಿ ಕ್ರಿಕೆಟಿಗ
# ಅಬ್ದುಲ್ ರಶೀದ್ ಮಂಗಳೂರು



ಬ್ಯಾರಿ ಸಮುದಾಯದ ಪ್ರಥಮ ನ್ಯಾಯವಾದಿ ಎಂದು ಗುರುತಿಸಲ್ಪಟ್ಟ ಮೂಸಬ್ಬ ಯಾನೆ ಮುಸ್ತಫಾ ಮತ್ತು ಖದೀಜಾ ದಂಪತಿಯ ಪುತ್ರನಾಗಿ 1933ರಲ್ಲಿ ಮಂಗಳೂರಿನ ಮಿಶನ್ ಕಾಂಪೌಂಡ್‌ನಲ್ಲಿ ಜನಿಸಿದ ಅಬ್ದುಲ್ ರಶೀದ್ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮಿಂಚಿದ ಪ್ರಥಮ ಬ್ಯಾರಿ ಕ್ರಿಕೆಟಿಗ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಮಂಗಳೂರಿನಲ್ಲೇ ಇಂಟರ್‌ಮೀಡಿಯೆಟ್ ವಿದ್ಯಾಭ್ಯಾಸ ಪೂರೈಸಿದ ಅಬ್ದುಲ್ ರಶೀದ್ ಮಂಗಳೂರಿನ ನೆಹರೂ ಮೈದಾನದಲ್ಲಿ ಎಂಯುಸಿ ತಂಡದಲ್ಲಿ ಕ್ರಿಕೆಟ್ ಅಟವಾಡಲು ಆರಂಭಿಸಿದರು. ಅತ್ಯುತ್ತಮ ಬ್ಯಾಟ್ಸ್‌ಮೆನ್, ಬೌಲರ್, ಫೀಲ್ಡರ್ ಆಗಿದ್ದ ಅವರು ಮಂಗಳೂರಿನಲ್ಲಿ ಎಂಯುಸಿ ತಂಡದ ಪರವಾಗಿ ಆಟವಾಡುತ್ತಲೇ ಗಮನ ಸೆಳೆದರು.

ಮೂಸಬ್ಬ-ಖತೀಜಾ ಕುಟುಂಬವು 1955ರಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಸ್ಥಳಾಂತರಗೊಂಡಿತ್ತು. ಹಾಗಾಗಿ ಮದ್ರಾಸ್ ಪ್ರಾಂತ (ರಾಜ್ಯ)ದ ಪರವಾಗಿ ಆಟವಾಡಬೇಕಿದ್ದ ಅಬ್ದುಲ್ ರಶೀದ್ ಮೈಸೂರು ಪ್ರಾಂತದ ಪರವಾಗಿ ಆಟವಾಗತೊಡಗಿದರು. ಹಾಗೇ ರಣಜಿ ಅಲ್ಲದೆ ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲೂ ಕ್ರಿಕೆಟ್ ಆಟವಾಡಿ ಮಿಂಚಿದರು.


ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ಅಬ್ದುಲ್ ರಶೀದ್ ಕ್ರೀಡೆಯಲ್ಲಿ ಮಿಂಚಿದರೂ ಕೂಡ ಮಾತೃಭಾಷೆ ಬ್ಯಾರಿಯನ್ನು ಮರೆತಿರಲಿಲ್ಲ ಎಂಬುದು ಗಮನಾರ್ಹ. ಕನ್ನಡ, ತುಳು, ಮಲಯಾಳಂ, ಉರ್ದು ಹಾಗೂ ಬ್ಯಾರಿ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದ ಅವರ ಕೈ ಬರಹವು ಸ್ಫುಟವಾಗಿತ್ತು ಮತ್ತು ಆಕರ್ಷಕವಾಗಿತ್ತು ಎಂದು ಅವರ ಕುಟುಂಬಸ್ಥರು ಮಾಹಿತಿ ನೀಡುತ್ತಾರೆ.

ಕ್ರಿಕೆಟ್‌ನಲ್ಲಿ ಅದ್ಭುತ ಸಾಧನೆಗೈದಿದ್ದರೂ ಕೂಡ ಅವರು ಎಂದೂ ಪ್ರಚಾರಕ್ಕೆ ಹಾತೊರೆಯಲಿಲ್ಲ. ಕ್ರಿಕೆಟ್ ಪಂದ್ಯವನ್ನು ವೃತ್ತಿ ಮತ್ತು ಹವ್ಯಾಸವನ್ನಾಗಿಸಿಕೊಂಡಿದ್ದರು.

ಕ್ರೀಡೆಯ ಜೊತೆಗೆ ಶಿಕ್ಷಣದ ಮಹತ್ವದ ಬಗ್ಗೆ ಅರಿತಿದ್ದ ಅವರು ಸುಮಾರು 1960ರ ದಶಕದಲ್ಲಿ ಬೆಂಗಳೂರಿನಲ್ಲಿದ್ದ ಸೈಂಟ್ ಮಿರಾಸ್ ಶಿಕ್ಷಣ ಸಂಸ್ಥೆಯನ್ನು ಮುನ್ನೆಡೆಸುವ ಜವಾಬ್ದಾರಿ ವಹಿಸಿಕೊಂಡಿದ್ದರು. ಅದೀಗಲೂ ಕಾರ್ಯನಿರತವಾಗಿದೆ.

ಮಂಗಳೂರಿನಲ್ಲಿ ಹುಟ್ಟಿ ಬೆಳೆದು, ಬೆಂಗಳೂರಿನಲ್ಲಿ ಸಾಧನೆ ಮೆರೆದ ಅಬ್ದುಲ್ ರಶೀದ್ 2009ರಲ್ಲಿ ಪತ್ನಿ ರಾಹತ್ ಮತ್ತು ಇಬ್ಬರು ಪುತ್ರರು ಹಾಗೂ ಒಬ್ಬರು ಪುತ್ರಿಯನ್ನು ಬಿಟ್ಟಗಲಿದ್ದಾರೆ.

# ಅನಾಥ ಮಕ್ಕಳ ಪರಿಚಾರಕ ಎಸ್. ಮಮ್ಮುಂಞಿ ಹಾಜಿ ಕುಂಬ್ರ



ಕುಂಬ್ರ ಅಂದ ತಕ್ಷಣ ನೆನಪಿಗೆ ಬರುವ ಹೆಸರು ಮಮ್ಮುಂಞಿ ಹಾಜಿ. ಕುಂಬ್ರ ಬಿಟ್ಟು ಮಮ್ಮುಂಞಿ ಹಾಜಿ ಇಲ್ಲ, ಮಮ್ಮುಂಞಿ ಹಾಜಿಯನ್ನು ಬಿಟ್ಟು ಕುಂಬ್ರವಿಲ್ಲ ಎಂಬಂತೆ ಬದುಕಿದ ಅವರು ತನ್ನ ಸೇವೆ, ನಯ, ವಿನಯ, ಬದ್ಧತೆ, ಪರಿಶ್ರಮದ ಮೂಲಕ ಜೀವನದ ಬಹುಪಾಲು ಸಮಯವನ್ನು ಸಮಾಜಕ್ಕಾಗಿ ಅದರಲ್ಲೂ ಅನಾಥ ಮಕ್ಕಳಿಗಾಗಿ ಮುಡಿಪಾಗಿಟ್ಟ ಮಾದರಿನಾಯಕರಾಗಿದ್ದರು.

ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಅನಾಥ ಮಕ್ಕಳ ಸಂರಕ್ಷಣೆಗೆ ಅಹೋರಾತ್ರಿ ತನ್ನನ್ನು ತೊಡಗಿಸಿಕೊಂಡ ಅವರು ಕೊನೆಯುಸಿರೆಳೆಯುವವರೆಗೂ ಧಾರ್ಮಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿದ್ದರು. ಶಿಕ್ಷಣದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಮೂಲತಃ ಮಂಜೇಶ್ವರ ಸಮೀಪದ ಉದ್ಯಾವರದ ಅಹ್ಮದ್ ಕುಂಞಿ ಮತ್ತು ಕುಂಬ್ರ ಶೇಖ್‌ಮಲೆಯ ಹಜ್ಜುಮ್ಮ ದಂಪತಿಯ ಹಿರಿಯ ಪುತ್ರನಾಗಿ 1927ರ ಎಪ್ರಿಲ್ 15ರಂದು ಉದ್ಯಾವರದಲ್ಲಿ ಜನಿಸಿದರು. ಆದರೆ ಬಾಲ್ಯದಿಂದಲೇ ನೆಲೆಸಿದ್ದು ಶೇಖ್‌ಮಲೆಯಲ್ಲಿ. ಎಸೆಸೆಲ್ಸಿವರೆಗೆ ಕಲಿತ ಬಳಿಕ ಕೇಂದ್ರ ಸರಕಾರಿ (ಅಂಚೆ ಇಲಾಖೆಯಲ್ಲಿ ಪೋಸ್ಟ್‌ಮಾಸ್ಟರ್) ಸೇವೆಗೆ ಸೇರಿದ ಅವರು ಕೆಲವು ವರ್ಷದ ನಂತರ ಸ್ವಯಂ ನಿವೃತ್ತಿ ಪಡೆದು ಸ್ವಂತ ವ್ಯಾಪಾರಕ್ಕೆ ಮುಂದಾದರು. ಜವುಳಿ ವ್ಯಾಪಾರ ಮಾಡುತ್ತಲೇ ಅಡಿಕೆ ಮತ್ತು ರಬ್ಬರ್ ತೋಟದ ಕೃಷಿಯಲ್ಲಿ ತೊಡಗಿಸಿಕೊಂಡರು. ಕುಂಬದಲ್ಲಿ ಜವುಳಿ, ಪುತ್ತೂರಿನಲ್ಲಿ ಅಡಿಕೆ ವ್ಯಾಪಾರ ಮಾಡುತ್ತಲೇ ಸಮಾಜ ಸೇವೆಯಲ್ಲಿ ಸಕ್ರಿಯರಾದರು.

ಮಮ್ಮುಂಞಿ ಹಾಜಿಯ ಅಜ್ಜ (ತಾಯಿಯ ತಂದೆ) ಮುಹಿಯ್ಯದ್ದೀನ್ ಕುಂಬ್ರ ಶೇಖ್‌ಮಲೆಯ ಮುಹಿಯ್ಯುದ್ದೀನ್ ಜುಮಾ ಮಸೀದಿಯ ನಿರ್ಮಾತೃರು. ಹಾಗಾಗಿ ಅವರೇ ಮಸೀದಿಯ ಮೊಕ್ತೇಸರರಾಗಿದ್ದರು. ಅವರ ನಿಧನದ ಬಳಿಕ ಅಳಿಯ ಅಹ್ಮದ್ ಕುಂಞಿ ಶೇಖ್‌ಮಲೆ ಮಸೀದಿಯ ಮೊಕ್ತೇಸರರಾದರು. ಅಹ್ಮದ್ ಕುಂಞಿಯ ನಿಧನದ ಬಳಿಕ ಪುತ್ರ ಎಸ್. ಮಮ್ಮುಂಞಿ ಹಾಜಿ ಶೇಖ್‌ಮಲೆ ಮಸೀದಿಯ ಅಧ್ಯಕ್ಷರಾದರು. ಹೀಗೆ ಒಂದು ಮಸೀದಿಯ ಅಧ್ಯಕ್ಷರಾಗಿ ಅಜ್ಜ, ತಂದೆ, ಮೊಮ್ಮಗ ಕಾರ್ಯನಿರ್ವಹಿಸಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ವಿಶೇಷ.

ಪುತ್ತೂರಿನಲ್ಲಿ ಅನ್ಸಾರುದ್ದೀನ್ ಯತೀಂಖಾನವನ್ನು ಸ್ಥಾಪಿಸಿ ಸಮುದಾಯದ ಅನಾಥ, ದುರ್ಬಲ ವರ್ಗದ ಜನರ ಏಳಿಗೆಗೆ ರಾತ್ರಿ ಹಗಲೆನ್ನದೆ ಶ್ರಮಿಸಿದ ಮತ್ತು ಸಮಾಜದ ಶೈಕ್ಷಣಿಕ ಪ್ರಗತಿಯ ಆಂದೋಲನದ ರೂವಾರಿಯಾಗಿ ಮೆರೆದ ಮಮ್ಮುಂಞಿ ಹಾಜಿ ತೀರಾ ಸರಳ, ಸಾದಾ ವ್ಯಕ್ತಿಯಾಗಿದ್ದರು ಎಂಬುದಕ್ಕೆ ಅವರು ಬದುಕಿದ ರೀತಿಯೇ ಸಾಕ್ಷಿ.

ಸುಸಂಸ್ಕೃತ ಮತ್ತು ಧಾರ್ಮಿಕ ಪ್ರಜ್ಞೆಯುಳ್ಳ ಕುಟುಂಬದಲ್ಲಿ ಬೆಳೆದ ಮಮ್ಮುಂಞಿ ಹಾಜಿ ಸ್ವಪರಿಶ್ರಮದಿಂದ ದೂರದ ಊರಿಗೆ ಕಾಲ್ನಡಿಗೆಯಲ್ಲಿಯೇ ತೆರಳಿ ವಿದ್ಯಾರ್ಜನೆಗೈದು ಹಂತ ಹಂತವಾಗಿ ಬದುಕಿನಲ್ಲಿ ಮೇಲೇರಿದರೂ ಸಮಾಜ, ಸಮುದಾಯವನ್ನು ಮರೆಯಲಿಲ್ಲ.

ಕುಂಬ್ರ ಮರ್ಕಝ್ ಕರ್ನಾಟಕ ಇಸ್ಲಾಮಿಕ್ ಸೆಂಟರ್ ಸ್ಥಾಪನೆಗೆ ಜಮೀನು ನೀಡಿದ್ದರೂ ಯಾವುದೇ ಜವಾಬ್ದಾರಿ ವಹಿಸಿರಲಿಲ್ಲ. ಹಲವು ವರ್ಷಗಳ ಕಾಲ ಶೇಖ್‌ಮಲೆ ಮಸೀದಿಯ ಅಧ್ಯಕ್ಷರಾಗಿ ಸುತ್ತುಮುತ್ತಲಿನ ಹಲವಾರು ಮಸೀದಿಗಳ, ಸಂಘಟನೆಗಳ ಗೌರವ ಸಲಹೆಗಾರರಾಗಿ, ಪೋಷಕರಾಗಿ ಸೇವೆ ಸಲ್ಲಿಸಿದ್ದ ಅವರು ಎಂದೂ ತನ್ನನ್ನು ಸಾರ್ವಜನಿಕವಾಗಿ ಗುರುತಿಸಿಕೊಳ್ಳಲು ಇಷ್ಟಪಟ್ಟವರಲ್ಲ. ಹಾಗಾಗಿಯೇ ಅವರು ಪ್ರಶ್ನಾತೀತ ನಾಯಕರಾಗಿ ಪುತ್ತೂರು ಪರಿಸರದಲ್ಲಿ ಮನೆ ಮಾತಾದರು. ಸಾಂದರ್ಭಿಕವಾಗಿ ಅವರು ನೀಡುತ್ತಿದ್ದ ಪ್ರತಿಯೊಂದು ತೀರ್ಮಾನಗಳೂ ಮುಂದಾಲೋಚನೆಯಿಂದ ಕೂಡಿತ್ತು ಎಂದು ಅವರ ಹಿತೈಷಿಗಳು ನೆನಪಿಸಿಕೊಳ್ಳುತ್ತಾರೆ.

ವೃತ್ತಿಯಲ್ಲಿ ಅಡಿಕೆ ವ್ಯಾಪಾರಿಯಾಗಿದ್ದ ಅವರು ಪ್ರವೃತ್ತಿಯಲ್ಲಿ ಕೊಡುಗೈ ದಾನಿ, ಸಮಾಜ ಸೇವಕ, ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿದ್ದರು.

ನ್ಯಾಯಕೋರಿ ಬಂದವರಿಗೆ ರಕ್ಷಣೆ ನೀಡುವುದರಲ್ಲಿ ಮುಂಚೂಣಿಯಲ್ಲಿದ್ದರು. ಸಹಾಯ ಯಾಚಿಸಿದವರಿಗೆ ನೆರವಿನ ಅಭಯ ಹಸ್ತ ನೀಡುತ್ತಿದ್ದರು. ಅನಾರೋಗ್ಯ ಪೀಡಿತರಿಗೆ ಗೌರವ ಧನ ನೀಡುವ ಮೂಲಕ ಸಾಂತ್ವನ ನೀಡುತ್ತಿದ್ದರು. ಸಮಕಾಲೀನರೊಂದಿಗೆ ವಿವೇಕಪೂರ್ಣ ಮಿತ್ರತ್ವ ಹೊಂದಿದ್ದರು. ಉಲಮಾ ಮತ್ತು ಉಮರಾರಿಗೆ ಅತಿಯಾದ ವಿಧೇಯತೆ ತೋರುತ್ತಿದ್ದರು.

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅಪಾರ ಕಾಳಜಿ ವಹಿಸಿದ್ದ ಅವರು ಕುಂಬ್ರ ಮರ್ಕಝುಲ್ ಹುದಾ ವಿಮೆನ್ಸ್ ಕಾಲೇಜಿಗೆ ಒಂದು ಎಕ್ರೆ ಜಮೀನನ್ನು ದಾನ ಮಾಡಿದ್ದರು. ಕುಂಬ್ರದ ಮತ್ತೊಂದು ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ಕರ್ನಾಟಕ ಇಸ್ಲಾಮಿಕ್ ಸೆಂಟರ್‌ಗೂ ಅವರು ಸ್ಥಳ ದಾನ ಮಾಡಿದ್ದರು.

ಎರಡು ಬಾರಿ ಪತ್ನಿ ಸಮೇತರಾಗಿ ಮತ್ತು ಒಂದು ಬಾರಿ ಏಕಾಂಗಿಯಾಗಿ ಪವಿತ್ರ ಹಜ್ ಯಾತ್ರೆ ಕೈಗೊಂಡಿದ್ದ ಅವರು

ಎಲ್ಲೇ ಇದ್ದರೂ ಕೂಡ ಬಾಂಗ್ ಆದ ತಕ್ಷಣ ಇಮಾಮ್ ಜಮಾಅತ್‌ಗೆ ತಪ್ಪದೆ ಹಾಜರಾಗುತ್ತಿದ್ದರು.

ಮೂವತ್ತು ವರ್ಷದ ಹಿಂದೆಯೇ ಊರಿನ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಭೇದವಿಲ್ಲದೆ ಆರ್ಥಿಕವಾಗಿ ಹಿಂದುಳಿದ ಸುಮಾರು 60 ವರ್ಷ ಪ್ರಾಯ ಮೀರಿದ ಹಿರಿಯ ನಾಗರಿಕರಿಗೆ ಮಾಸಿಕ ತಲಾ 30 ರೂಪಾಯಿಯ ಪಿಂಚಣಿಯನ್ನು ನೀಡುವ ಯೋಜನೆಯೊಂದನ್ನು ರೂಪಿಸಿ ಹಿರಿಯ ನಾಗರಿಕರ ಮುಖದಲ್ಲಿ ಸಂತೃಪ್ತಿಯ ನಗೆ ಮೂಡುವಂತೆ ಮಾಡಿದ್ದರು.

ರಮಳಾನಿನ ಇಪ್ಪತ್ತು ರಾತ್ರಿಗಳಲ್ಲಿಯೂ ತರಾವೀಹ್‌ನಲ್ಲಿ ಭಾಗವಹಿಸಿ ಶೇಖ್‌ಮಲೆ ಮಸೀದಿಯಲ್ಲಿ ಪ್ರಥಮ ಸಫ್ಫ್‌ನ ತನ್ನ ಮಾಮೂಲಿ ಸ್ಥಳವಾದ ಮಿಂಬರ್ ಮತ್ತು ಮಿಹ್‌ರಾಬ್‌ನ ಮಧ್ಯದಲ್ಲಿ ನಿಂತೋ, ಕುಳಿತೋ ನಮಾಝ್ ನಿರ್ವಹಿಸಿ ಬಳಿಕ ನಡೆಯುವ ಹತ್ತು ನಿಮಿಷಗಳ ಮತಪ್ರವಚನ ಆಲಿಸಿದ ಬಳಿಕವಷ್ಟೇ ಅವರು ಮನೆಗೆ ತೆರಳುತ್ತಿದ್ದುದು ವಾಡಿಕೆಯಾಗಿತ್ತು.

ಅದು 2001ರ ಡಿಸೆಂಬರ್ 5. ಅಂದರೆ ರಮಳಾನ್‌ನ 21ನೆಯ ರಾತ್ರಿ. ಎಂದಿನಂತೆ ಮತಪ್ರವಚನ ಆಲಿಸಿದ ಬಳಿಕ ಮುಸಲ್ಲಾಕ್ಕೆ ಹಾಕಬೇಕಾದ ಹಣ ತರಲು ಮರೆತದ್ದರಿಂದ ಅಂದು ಶೇಕಮಲೆ ಜಮಾಅತ್ ಕಾರ್ಯದರ್ಶಿಯಾಗಿದ್ದ ಶೇಖ್‌ಮಲೆ ಮಹಮ್ಮದ್ ಬಳಿ 10 ರೂಪಾಯಿ ಕೇಳಿದ್ದರು. ಮಹಮ್ಮದ್ ತನ್ನ ಜೇಬಿನಿಂದ 10 ರೂಪಾಯಿ ಕೊಟ್ಟಾಗ ಅದನ್ನು ಹಾಜಿಯವರಿಗೆ ಮಸೀದಿಯಿಂದ ಕೊಡಲಿಕ್ಕಿರುವ ಹಣದಿಂದ ಕಳೆಯಲು ಸೂಚಿಸಿದರು.


ಪರವಾಗಿಲ್ಲ. ಹತ್ತು ರೂಪಾಯಿ ಅಲ್ಲವೇ? ನನ್ನ ಲೆಕ್ಕದಲ್ಲಿ ಕೊಡುತ್ತೇನೆ. ನಾಳೆ ನನಗೆ ವಾಪಸ್ ಕೊಡಿ ಎಂದು ಕಾರ್ಯದರ್ಶಿ ಹೇಳಿದಾಗ "ಬೇಡ... ಬೇಡ. ಒಂದು ವೇಳೆ ಬೆಳಗಾಗುವುದರೊಳಗೆ ನಾನು ತೀರಿಕೊಂಡರೆ ಸಾಲಗಾರನಾಗಿ ಮರಣ ಹೊಂದುವುದಿಲ್ಲವೆ?" ಎಂದು ಕೇಳಿ ತನಗೆ ಬರಲಿಕ್ಕಿರುವ ಹಣದಿಂದಲೇ ಹತ್ತು ರೂಪಾಯಿ ಪಡೆದುಕೊಂಡಿದ್ದರು.

ಬಳಿಕ ಉಸ್ತಾದರ ಮತಪ್ರವಚನ ಆಲಿಸಿ ಮನೆಗೆ ಮರಳಿ ಉಪಹಾರ ಸೇವಿಸಿ ಮಲಗುವವರೆಗೂ ಅವರ ಆರೋಗ್ಯ ಎಂದಿನಂತೆ ಇತ್ತು. ಅತ್ಯಂತ ಲವಲವಿಕೆಯಲ್ಲೇ ಇದ್ದ ಅವರು ಕೆಲವೇ ನಿಮಿಷಗಳಲ್ಲಿ ಇನ್ನಿಲ್ಲವಾಗಿ ದೀನಿಪ್ರೇಮಿಗಳನ್ನು ಆಶ್ಚರ್ಯಚಕಿತರಾಗುವಂತೆ ಮಾಡಿದರು.

ಆ ಕ್ಷಣದಿಂದಲೇ ಜನಪ್ರವಾಹ ಶೇಖ್‌ಮಲೆಗೆ ಹರಿಯತೊಡಗಿತ್ತು. ಸ್ವತಃ ಹಾಜಿಯವರೇ ತಂದು ಇಟ್ಟಿದ್ದ ಬಿಳಿ ವಸ್ತ್ರದಲ್ಲಿ ಕಫನ್ ಮಾಡಿ ಶೇಖ್‌ಮಲೆ ಮದ್ರಸದ ಮಗ್ಗುಲಲ್ಲಿರುವ ಹಾಜಿಯವರ ಸ್ವಂತ ನಿವೇಶನದಲ್ಲಿ ದಫನ ಮಾಡಲಾಯಿತು.

ಕುಂಬ್ರ ಮರ್ಕಝುಲ್ ಹುದಾ ಕಾಲೇಜಿನ ಕೋಶಾಧಿಕಾರಿ ಎಸ್‌ಎಂ ಅಹ್ಮದ್ ಬಶೀರ್ ಹಾಜಿ, ಶೇಖ್‌ಮಲೆ ಜಮಾಅತ್ ಅಧ್ಯಕ್ಷ ಎಸ್‌ಎಂ ಸಿದ್ದೀಕ್ ಹಾಜಿ, ಜಮಾಅತ್ ಉಪಾಧ್ಯಕ್ಷ ಎಸ್.ಎಂ. ಸುಲೈಮಾನ್ ಹಾಜಿ, ಇಂಜಿನಿಯರ್‌ರಾದ ಎಸ್‌ಎಂ ಫಾರೂಕ್ ಬಹರೈನ್ ಮತ್ತು ಇಂಜಿನಿಯರ್ ಶೈಕ್ ಅಬ್ದುಲ್ಲಾಹ್ ಹಾಜಿ ಸಹಿತ ಐವರು ಪುತ್ರರು ಮತ್ತು ಏಳು ಹೆಣ್ಣು ಮಕ್ಕಳ ಜವಾಬ್ದಾರಿಯುತ ತಂದೆಯಾಗಿದ್ದ ಮಮ್ಮುಂಞಿ ಹಾಜಿಯ ಅಗಲಿಕೆಯು ಸಮುದಾಯಕ್ಕೆ ನಷ್ಟವಾಗಿರುವುದರಲ್ಲಿ ಎರಡು ಮಾತಿಲ್ಲ.

# ಉಲಮಾಗಳ ಮನಗೆದ್ದಿದ್ದ ಉಸ್ಮಾನ್ ಹಾಜಿ ಮಿತ್ತೂರು



ಬಂಟ್ವಾಳ ತಾಲೂಕಿನ ಮಿತ್ತೂರು ಸಮೀಪದ ಕುಕ್ಕರಬೆಟ್ಟು ಎಂಬಲ್ಲಿ ಇಬ್ರಾಹೀಂ–ಸಾರಮ್ಮ ಹಜ್ಜುಮ್ಮ ದಂಪತಿಯ ಪುತ್ರನಾಗಿ 1951ರ ಆಗಸ್ಟ್ 15ರಂದು ಜನಿಸಿದ ಉಸ್ಮಾನ್ ಹಾಜಿ ಮಿತ್ತೂರು ಸರಕಾರಿ ಪ್ರಾಥಮಿಕ ಶಾಲೆ ಮತ್ತು ಮಾಣಿ ಸರಕಾರಿ ಪ್ರೌಢಶಾಲೆ ಹಾಗೂ ಮಂಗಳೂರಿನ ಗಣಪತಿ ಶಾಲೆಯಲ್ಲಿ ಎಸೆಸೆಲ್ಸಿ ಪೂರೈಸಿದರು. ಬಳಿಕ ನಾಲ್ಕು ವರ್ಷಗಳ ಕಾಲ ಭಾರತದ ಸೈನ್ಯದಲ್ಲಿ ಸೇವೆ ಸಲ್ಲಿಸಿದರು. ಅಂದರೆ 1967ರಿಂದ 1971ರವರೆಗೆ ಮದ್ರಾಸ್ ರೆಜಿಮೆಂಟಲ್ ಸೆಂಟರ್‌ನಲ್ಲಿ ಇನ್‌ಫೆಂಟ್ರಿ ಸೋಲ್ಜರ್ ಆಗಿ ಕರ್ತವ್ಯ ನಿರ್ವಹಿಸಿದ್ದ ಅವರು ಭಾರತ–ಬಾಂಗ್ಲಾದೇಶದ ಮಧ್ಯೆ ನಡೆದ ಯುದ್ಧದಲ್ಲಿ ಪಾಲ್ಗೊಂಡಿದ್ದರು.


ಸೈನ್ಯದಿಂದ ಸ್ವಯಂ ನಿವೃತ್ತಿ ಪಡೆದು ಊರಿಗೆ ಮರಳಿದ ಬಳಿಕ ಕೆಲವು ವ್ಯಾಪಾರದಲ್ಲಿ ತೊಡಗಿಸಿಕೊಂಡು ಉದ್ಯಮ ರಂಗಕ್ಕಿಳಿದರು. ಉದ್ಯಮದಲ್ಲಿ ದಕ್ಕಿದ ಸಂಪತ್ತನ್ನು ಸಮಾಜಕ್ಕೆ ಅರ್ಪಿಸಿದರು. ಅಂದರೆ ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸಿದರು. ನೂರಾರು ಅನಾಥ ಮತ್ತು ಬಡ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಸಾಮೂಹಿಕ ಮದುವೆ ಕಾರ್ಯಕ್ರಮ ಹಮ್ಮಿಕೊಂಡ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಮುಸ್ಲಿಂ ಹೆಣ್ಮಕ್ಕಳಿಗೆ ಸುರಕ್ಷಿತ ಸ್ಥಳದಲ್ಲಿ ಆಧುನಿಕ ಶಿಕ್ಷಣದ ಜೊತೆ ಧಾರ್ಮಿಕ ಶಿಕ್ಷಣವೂ ದೊರಕಬೇಕು ಎಂಬ ನಿಟ್ಟಿನಲ್ಲಿ ಕುಂಬ್ರ ಮಮ್ಮುಂಞಿ ಹಾಜಿ ತಾನು ದಾನಗೈದ ಜಮೀನಿನಲ್ಲಿ "ಮರ್ಕಝುಲ್ ಹುದಾ" ಎಂಬ ಶಿಕ್ಷಣ ಸಂಸ್ಥೆ ಕಟ್ಟಿ ಅದರ ಸ್ಥಾಪಕ ಅಧ್ಯಕ್ಷರಾದರು. ಸಾಲ್ಮರದಲ್ಲಿ ಮೌಂಟನ್ ವ್ಯೂವ್ ಶಾಲೆಯ ಸ್ಥಾಪಕ ಸದಸ್ಯರಾಗಿದ್ದ ಅವರು ಪುತ್ತೂರು ಅನ್ಸಾರುದ್ದೀನ್ ಸೆಂಟರ್‌ನ ಅಧ್ಯಕ್ಷರಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಸಮಸ್ತ ಕೇರಳ ಸುನ್ನಿ ವಿದ್ಯಾಭ್ಯಾಸ ಮಂಡಳಿಯ ಕೇಂದ್ರ ಸಮಿತಿಯ ಸದಸ್ಯರಾಗಿ, ಕರ್ನಾಟಕ ಮುಸ್ಲಿಂ ಜಮಾಅತ್ ಕೌನ್ಸಿಲ್‌ನ ರಾಜ್ಯ ಉಪಾಧ್ಯಕ್ಷರಾಗಿ, ಸುನ್ನಿ ಮ್ಯಾನೇಜ್‌ಮೆಂಟ್ ಅಸೋಸಿಯೇಶನ್‌ನ ದ.ಕ. ಜಿಲ್ಲಾ ಕೋಶಾಧಿಕಾರಿಯಾಗಿ, ಕುಂಬಳೆಯ ಮುಹಿಮ್ಮಾತು ವಿದ್ಯಾ ಸಮುಚ್ಚಯಗಳ ಉಪಾಧ್ಯಕ್ಷರಾಗಿ, ಮಂಗಳೂರಿನ ಇಸ್ಲಾಮಿಕ್ ಕಲ್ಚರಲ್ ಸೆಂಟರ್ (ಮಸ್ಜಿದುತ್ತಖ್ವಾ)ನ ಕೋಶಾಧಿಕಾರಿಯಾಗಿ, ಪುತ್ತೂರು ತಾಲೂಕು ಸಂಯುಕ್ತ ಮುಸ್ಲಿಂ ಜಮಾಅತ್‌ನ ಉಪಾಧ್ಯಕ್ಷರಾಗಿ, ಪುತ್ತೂರು ಸೀರತ್ ಕಮಿಟಿಯ ಉಪಾಧ್ಯಕ್ಷರಾಗಿ, ಮಿತ್ತೂರಿನ ಸಿರಾಜುಲ್ ಹುದಾ ಜುಮಾ ಮಸ್ಜಿದ್ ಮತ್ತು ಪಾಣಾಜೆ ಸಮೀಪದ ಆರ್ಲಪದವಿನ ಮಸ್ಜಿದುಲ್ ಅಫ್‌ರಾದ ಅಧ್ಯಕ್ಷರಾಗಿ, ಪಾಣಾಜೆಯ ಕಂಝುಲ್ ಹುದಾ ಅಸೋಸಿಯೇಶನ್‌ನ ಅಧ್ಯಕ್ಷರಾಗಿ, ಬೆಟ್ಟಂಪಾಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಅವರು ಪುತ್ತೂರು ರೋಟರಿ ಕ್ಲಬ್‌ನ ಸಿಟಿ ಚಾರ್ಟರ್ ಅಧ್ಯಕ್ಷರಾಗಿ ಮತ್ತು ಪೌಲ್ ಹ್ಯಾರಿಸ್ ಫೆಲೋ ಆಗಿ ಕಾರ್ಯನಿರ್ವಹಿಸಿದ್ದರು. ಪುತ್ತೂರು ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್‌ನ ಪ್ರಥಮ ಅಧ್ಯಕ್ಷರೂ ಆಗಿದ್ದರು.

ಅವರು ಮಾಡಿದ ಅಪ್ರತಿಮ ಸೇವೆಗಾಗಿ 2004ರಲ್ಲಿ ಕನ್ನಡ ರಾಜ್ಯೋತ್ಸವ ಸಂದರ್ಭ "ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಪ್ರಶಸ್ತಿ'ಯು ಲಭಿಸಿದೆ. ಅಲ್ಲದೆ 2012ರಲ್ಲಿ ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್‌ನ "ವರ್ಷದ ಬ್ಯಾರಿ" ಪ್ರಶಸ್ತಿಗೂ ಅವರು ಪಾತ್ರರಾಗಿದ್ದರು. ಶಿಕ್ಷಣ ಕ್ಷೇತ್ರದ ಅಪ್ರತಿಮ ಸಾಧನೆಗೆ ದಕ್ಷಿಣ ಕನ್ನಡ ಜಿಲ್ಲಾ ಕಾನೂನು ಪ್ರಾಧಿಕಾರದ  ಪ್ರಶಸ್ತಿ ಪಡೆದಿದ್ದರು.

ಪಾಣಾಜೆಯ ಮುಂಡಕೊಚ್ಚಿ ಅಬ್ದುಲ್ಲಾ ಹಾಜಿಯ ಪುತ್ರಿ ಝುಬೈದಾ ಹಾಜಿಮಾ ಅವರನ್ನು ವಿವಾಹವಾದ ಅವರಿಗೆ ನಾಲ್ಕು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳಿವೆ. ಉಲಮಾ, ಅಹ್ಲ್‌ಬೈತ್‌ನವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಮತ್ತು ಅವರ ಪ್ರೀತಿ, ವಿಶ್ವಾಸ, ಗೌರವಕ್ಕೆ ಪಾತ್ರರಾಗಿದ್ದ ಮಿತ್ತೂರು ಉಸ್ಮಾನ್ ಹಾಜಿ 2015ರ ಜೂನ್ 23ರಂದು ನಿಧನರಾದರು.

ಮುಸ್ಲಿಂ ಸಮುದಾಯದ ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಣೆಗಾಗಿ ದುಡಿದ ಕೆಲವೇ ವ್ಯಕ್ತಿಗಳ ಪೈಕಿ ಉಸ್ಮಾನ್ ಹಾಜಿ ಮಿತ್ತೂರು ಅವರ ಹೆಸರು ಸದಾ ಅಮರವಾಗಿರುತ್ತದೆ ಎಂದರೆ ತಪ್ಪಾಗಲಾರದು. ಪುತ್ತೂರು ತಾಲೂಕಿನ ಮುಸ್ಲಿಂ ತಲೆಮಾರಿನ ಭವಿಷ್ಯವನ್ನು ರೂಪಿಸಲು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಟ್ಟ ಅವರು ಹಲವು ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದೂರದೃಷ್ಟಿಯ ಚಿಂತನೆಯ ಜೊತೆ ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚು ದುಡಿದ ಅವರು ಆಲಿಮ್‌ಗಳ ಮೂಲಕ ನಡೆಯುವ ಸಮಾಜಮುಖಿ ಕಾರ್ಯದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಭವಿಷ್ಯದಲ್ಲಿ ಸಮುದಾಯದ ಬೇಡಿಕೆ ಮತ್ತು ಆತಂಕವನ್ನು ಹಲವು ದಶಕಗಳ ಹಿಂದೆಯೇ ಅರ್ಥ ಮಾಡಿಕೊಂಡು ಕಾರ್ಯಾಚರಿಸಿದ್ದ ಮಮ್ಮುಂಞಿ ಹಾಜಿ ಮತ್ತು ಶಾಫಿ ಹಾಜಿ ಪುತ್ತೂರು ಅವರ ಸಾಲಿನಲ್ಲಿ ಮಿತ್ತೂರು ಉಸ್ಮಾನ್ ಹಾಜಿಯವರದೂ ಮೇರು ವ್ಯಕ್ತಿತ್ವವಾಗಿದೆ. ಸದಾ ಹುರುಪು ಮತ್ತು ಉತ್ಸಾಹದಿಂದ ಸಮಾಜದ ಒಳಿತಿನ ಕಾರ್ಯದಲ್ಲಿ ದುಡಿಯುವ ಅವರ ನಿಧನದ ಸುದ್ದಿ ಕೇಳಿ ಸಮುದಾಯವು ಕಣ್ಣೀರು ಮಿಡಿದದ್ದೇ ಅದಕ್ಕೆ ಸಾಕ್ಷಿಯಾಗಿದೆ.ಲ್ಲಿ ದುಡಿಯುವ ಅವರ ನಿಧನದ ಸುದ್ದಿ ಕೇಳಿ ಸಮುದಾಯವು ಕಣ್ಣೀರು ಮಿಡಿದದ್ದೇ ಅದಕ್ಕೆ ಸಾಕ್ಷಿಯಾಗಿದೆ.

# ಸಮಾಜ ಸೇವಕ ಎಸ್. ಉಮ್ಮರ್ ಶಾಫಿ ಹಾಜಿ ಪುತ್ತೂರು



ಪುತ್ತೂರು ಎಂದಾಕ್ಷಣ ಎಲ್ಲರಿಗೂ ಮೊದಲು ಕೇಳಿ ಬರುತ್ತಿರುವ ಹೆಸರು ಎಸ್. ಉಮ್ಮರ್ ಶಾಫಿ ಹಾಜಿ ಅವರದ್ದು. ಮಸೀದಿ, ಇಬಾದತ್‌ನೊಂದಿಗೆ ಜೀವನ ಪರ್ಯಂತ ಅವಿನಾಭಾವ ಸಂಬಂದ ಹೊಂದಿದ್ದ ಅವರು ತನ್ನ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳನ್ನು ಶೂನ್ಯ ಬಂಡವಾಳದಿಂದ ಆರಂಭಿಸಿ ತುಂಬಾ ಎತ್ತರಕ್ಕೇರಿಸಿದವರು. ಮೃದುಮಾತು, ನಯವಿನಯ, ಎದ್ದು ಕಾಣುವ ಗಂಭೀರ ಸ್ವಭಾವ ಅವರದ್ದು.

ಸದಾ ಶ್ವೇತವಸ್ತ್ರಧಾರಿ, ತಲೆಗೆ ತನ್ನದೇ ಶೈಲಿಯಲ್ಲಿ ಕಟ್ಟಿದ ಬಿಳಿ ರುಮಾಲು, ಆ ರುಮಾಲಿನ ಒಂದು ತುದಿಯನ್ನು ಹಿಂದಲೆಗೆ ಇಳಿಬಿಟ್ಟು ನಡೆದಾಡುತ್ತಿದ್ದ ಉಮ್ಮರ್ ಶಾಫಿ ಹಾಜಿಯ ವ್ಯಕ್ತಿತ್ವ ಚಿತ್ತಾಕರ್ಷಕವಾದುದು. ಒಮ್ಮೆ ನೋಡಿದರೆ ಸದಾ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದು ಬಿಡುತ್ತಿದ್ದ ಉಮ್ಮರ್ ಶಾಫಿ ಹಾಜಿ ಶಿಸ್ತುಬದ್ಧ ಜೀವನಕ್ಕೆ ಹೆಸರುವಾಸಿಯಾಗಿದ್ದರು.

ಪುತ್ತೂರು ಮತ್ತು ಆಸುಪಾಸಿನಲ್ಲಿ ದಶಕಗಳ ಕಾಲ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಮೂಲಕ ಮುಂಚೂಣಿಯ ನಾಯಕರಾಗಿದ್ದ ಅವರದ್ದು ಮರೆಯಲಾಗದ ವ್ಯಕ್ತಿತ್ವ.

ಬಂಟ್ವಾಳ ತಾಲೂಕಿನ ಮಾಣಿ ಸಮೀಪದ ಪಾರ್ಪಕಜೆಯ ಸಾಲುಮರ ಎಂಬಲ್ಲಿ ಗೇಣಿದಾರರಾಗಿದ್ದ ಅಹ್ಮದ್ ಬ್ಯಾರಿ–ಹವ್ವಾ ದಂಪತಿಯ ಪುತ್ರನಾಗಿ 1928ರ ಸೆಪ್ಟಂಬರ್ 15ರಂದು ಉಮ್ಮರ್ ಶಾಫಿ ಹಾಜಿ ಜನಿಸಿದರು. ಸಾಲುಮರದಲ್ಲಿ ಜನಿಸಿ ಪುತ್ತೂರಿನಲ್ಲಿ ಸಾಧನೆಗೈದರೂ ಕೂಡ ಸಾಲುಮರ ಎಂಬ ಊರಿನ ಪ್ರಥಮ ಅಕ್ಷರ "ಎಸ್" ಎಂಬುದು ಅವರ ಹೆಸರಿನೊಂದಿಗೆ ಶಾಶ್ವತವಾಗಿ ಸೇರಿ ಹೋಯಿತು.

ಬಂಟ್ವಾಳ ತಾಲೂಕಿನ ಬರಿಮಾರು ಸರಕಾರಿ ಶಾಲೆಯಲ್ಲಿ 6ನೇ ತರಗತಿ, ಕೊಡಾಜೆಯ ಬದ್ರಿಯಾ ಜುಮಾ ಮಸೀದಿಯ ಅಧೀನದಲ್ಲಿದ್ದ ಮದ್ರಸದಲ್ಲಿ ಧಾರ್ಮಿಕ ಶಿಕ್ಷಣ ಪಡೆದರು.

ಅಜ್ಜನ ಕಾಲದಿಂದಲೇ ಗೇಣಿದಾರರಾಗಿದ್ದ ಅವರ ಕುಟುಂಬವು ಭತ್ತ, ಅಡಕೆ ಕೃಷಿಯನ್ನೇ ನೆಚ್ಚಿಕೊಂಡಿತ್ತು. ಸುಮಾರು 20 ಎಕರೆಯಷ್ಟು ವಿಶಾಲವಾದ ಕೃಷಿ–ಕೃಷಿಯೇತರ ಜಮೀನಿನನ್ನು ಗೇಣಿರೂಪದಲ್ಲಿ ಹೊಂದಿದ್ದ ಅಹ್ಮದ್ ಬ್ಯಾರಿಯ 6ನೇ ಪುತ್ರ ಉಮ್ಮರ್ ಶಾಫಿ ವ್ಯಾಪಾರದಲ್ಲಿ ಅಪಾರ ಅಸಕ್ತಿ ಹೊಂದಿದ್ದರು. ತನ್ನ ಕುಗ್ರಾಮದಲ್ಲಿ ವ್ಯಾಪಾರಕ್ಕೆ ಒಳ್ಳೆಯ ಅವಕಾಶ ಸಿಗದ ಕಾರಣ 18ನೇ ಹರೆಯದಲ್ಲಿ ಸಾಲುಮರದಿಂದ ಪುತ್ತೂರಿಗೆ ಸ್ಥಳಾಂತರಗೊಂಡರು. ಹಾಗೇ ಪುತ್ತೂರಿನ ಹಳೆಯ ಪೊಲೀಸ್ ಠಾಣೆಯ ಬಳಿ ಒಣಮೀನು ವ್ಯಾಪಾರ ಆರಂಭಿಸಿದರು. ಬಳಿಕ ತೆಂಗಿನಕಾಯಿ ಕೊಪ್ಪರ, ಬಾಳೆಕಾಯಿ ಖರೀದಿಯ ವ್ಯವಹಾರಕ್ಕೆ ಇಳಿದರು. ಆರಂಭದಲ್ಲೇ ವ್ಯಾಪಾರದಲ್ಲಿ ನಿಷ್ಠೆ–ಪ್ರಾಮಾಣಿಕತೆಯನ್ನು ರೂಢಿಸಿಕೊಂಡಿದ್ದ ಅವರು ಜೀನಸು, ಕಾಡುತ್ಪತ್ತಿ ವ್ಯಾಪಾರವನ್ನೂ ಆರಂಭಿಸಿದರು. ತನ್ನ ವ್ಯವಹಾರದಿಂದ ಬಹುತೇಕ ಮಂದಿಯ ವಿಶ್ವಾಸಕ್ಕೆ ಪಾತ್ರರಾದ ಅವರು 1970ರಲ್ಲಿ ತನ್ನೆಲ್ಲಾ ವ್ಯವಹಾರದ ಜವಾಬ್ದಾರಿಯನ್ನು ಸೋದರಳಿಯನಿಗೆ ವಹಿಸಿಕೊಟ್ಟು ಪುತ್ತೂರು ಬಸ್ ನಿಲ್ದಾಣದ ಬಳಿ ಸ್ವಂತ ಕಟ್ಟಡ ನಿರ್ಮಿಸಿ ಹೊಸದಾಗಿ ವ್ಯಾಪಾರ ಅರಂಭಿಸಿದರು.

ರಖಂ, ಚಿಲ್ಲರೆ ಜೀನಸು ವ್ಯಾಪಾರಸ್ಥನಾಗಿ ಅಡಿಕೆ, ಕಾಡುತ್ಪತ್ತಿಗಳ ಖರೀದಿದಾರನಾಗಿ ಬಹುಬೇಗ ಜನಪ್ರಿಯತೆಯನ್ನು ಪಡೆದರು. ಹಾಗೇ ತನ್ನ ಹುಟ್ಟೂರಾದ ಸಾಲುಮರದಲ್ಲಿ ಗೇಣಿಭೂಮಿಯನ್ನು ಅದರ ಮಾಲಕರಿಂದ ಖರೀದಿಸಿ ತನ್ನ ಸಹೋದರರಿಗೆ ಉದಾರವಾಗಿ ಹಂಚಿದರು. ತಾನು ಪುತ್ತೂರಿನಲ್ಲೇ ನೆಲೆನಿಂತು ಶೂನ್ಯ ಬಂಡವಾಳದಿಂದ ಆರಂಭಿಸಿದ ವ್ಯಾಪಾರ–ವ್ಯವಹಾರ ಚಟುವಟಿಕೆಯನ್ನು ವಿಸ್ತರಿಸಿದರು. ಅಂದರೆ "ಉಮ್ಮರ್ ಶಾಫಿ ಆ್ಯಂಡ್ ಸನ್ಸ್ ಟ್ರೇಡರ್ಸ್" ಎಂಬ ಹೆಸರಿನಲ್ಲಿ ವಾಣಿಜ್ಯ ಚಟುವಟಿಕೆ ಮುಂದುವರಿಸಿದ ಅವರು ಶಾಲಿಮಾರ್ ಚಹಾ ಹುಡಿ, ಶಾಫಿ ಟ್ರಾನ್ಸ್‌ಪೋರ್ಟ್ ಎಂಬ ವಾಣಿಜ್ಯ ಚಟುವಟಿಕೆಯನ್ನು ಆರಂಭಿಸಿ ಅದರಲ್ಲೂ ಯಶಸ್ಸು ಸಾಧಿಸಿದರು. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೂರಾರು ಮಂದಿಗೆ ಉದ್ಯೋಗ ನೀಡಿದರು. ಮೂರು ದಶಕಗಳ ಕಾಲ ಪುತ್ತೂರು–ಸುಳ್ಯ ತಾಲೂಕಿನಲ್ಲಿ ಮನೆಮಾತಾದರು.

ವಿಟ್ಲ ಸಮೀಪದ ಕಾಂತಡ್ಕ ಮೂಲದ ಆಯಿಶಾರನ್ನು ಮದುವೆಯಾದ ಬಳಿಕ ಪುತ್ತೂರು ಪೇಟೆ ಸಮೀಪದ ಕಬಕ ಗ್ರಾಮದ ಮಂಜಲ್ಪಡ್ಪು ಎಂಬಲ್ಲಿನ ಕಾರ್ಜಾಲ್‌ನಲ್ಲಿ ಸ್ವಂತ ಮನೆ ನಿರ್ಮಿಸಿಕೊಂಡರು. ಕಾರ್ಜಾಲ್‌ನಲ್ಲಿ 30 ಸೆಂಟ್ಸ್ ಜಮೀನು ಖರೀದಿಸಿ ಖಿಳ್‌ರಿಯಾ ಜುಮಾ ಮಸೀದಿ ಕಟ್ಟಿಸಿ ವಕ್ಫ್ ಮಾಡಿದರು. ಪುತ್ತೂರು ಕೇಂದ್ರ ಜುಮಾ ಮಸೀದಿಯ ಅಧ್ಯಕ್ಷರಾಗಿ ಸುಮಾರು 37 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಕೇಂದ್ರ ಜುಮಾ ಮಸೀದಿಯ ಅಧೀನದಲ್ಲಿದ್ದ ಮಸೀದಿ–ಮದ್ರಸಗಳ ಅಭಿವೃದ್ಧಿಗೂ ಸಹಕಾರ ನೀಡಿದರು.

ಪುತ್ತೂರಿನ ಸಾಲ್ಮರದಲ್ಲಿ 12 ಎಕರೆ ಜಮೀನು ಖರೀದಿಸಿ ಮಸೀದಿ ಮತ್ತು ಯತೀಂ ಖಾನಾ ನಿರ್ಮಿಸಿ ನೂರಾರು ಯತೀಂ ಮಕ್ಕಳ ಪಾಲನೆ, ಪೋಷಣೆ, ಶಿಕ್ಷಣಕ್ಕೆ ತನ್ನ ಸಹವರ್ತಿ ಕುಂಬ್ರ ಮಮ್ಮುಂಞಿ ಹಾಜಿಯೊಂದಿಗೆ ಕೈಜೋಡಿಸಿ


ಭಧ್ರ ಬುನಾದಿ ಹಾಕಿದರು.

ನೂರಾರು ವರ್ಷಗಳ ಇತಿಹಾಸವಿರುವ ಪುತ್ತೂರಿನ ಕಲ್ಲೇಗ ಜುಮಾ ಮಸೀದಿಯ ಅಧ್ಯಕ್ಷರಾಗಿ ಎರಡು ದಶಕಗಳ ಕಾಲ ಸೇವೆ ಸಲ್ಲಿಸಿದ ಉಮ್ಮರ್ ಶಾಫಿ ಹಾಜಿ ಹಳೆಯ ಮಸೀದಿಯನ್ನು ಪುನಃ ನಿರ್ಮಿಸಿದರು. ಅನ್ಸಾರುದ್ದೀನ್ ಯತೀಂ ಖಾನಾ ಮತ್ತು ಅನ್ಸಾರುದ್ದೀನ್ ಜಮಾಅತ್ ಸಮಿತಿಗಳಲ್ಲಿ ಮುಂಚೂಣಿಯಲ್ಲಿದ್ದುಕೊಂಡು ಸೇವೆ ಸಲ್ಲಿಸಿದ್ದರು. ಪುತ್ತೂರಿನ ಸೀರತ್ ಕಮಿಟಿಯನ್ನೂ ಹಲವು ವರ್ಷಗಳ ಕಾಲ ಮುನ್ನಡೆಸಿದ್ದರು. ಪುತ್ತೂರು ವರ್ತಕರ ಸಂಘದ ಅಧ್ಯಕ್ಷರಾಗಿಯೂ ಗಮನಾರ್ಹ ಸೇವೆ ಸಲ್ಲಿಸಿದ್ದರು.

ನಾಲ್ಕು ಬಾರಿ ಹಜ್ ಯಾತ್ರೆಗೈದಿದ್ದ ಉಮ್ಮರ್ ಶಾಫಿ ಹಾಜಿಗೆ ಮೂವರು ಗಂಡು ಮತ್ತು ಐವರು ಹೆಣ್ಮಕ್ಕಳು. ತಂದೆ ಹುಟ್ಟು ಹಾಕಿದ ವ್ಯಾಪಾರ–ವಾಣಿಜ್ಯ ಚಟುವಟಿಕೆಯನ್ನು ಗಂಡು ಮಕ್ಕಳು ಮುನ್ನಡೆಸುತ್ತಿದ್ದಾರೆ. ಹೀಗೆ ಸಾಮಾನ್ಯ ಕೃಷಿ ಕುಟುಂಬದಲ್ಲಿ ಹುಟ್ಟಿ ಬೆಳೆದು ವ್ಯಾಪಾರ–ವಾಣಿಜ್ಯದಲ್ಲಿ ನಿರೀಕ್ಷೆಗೂ ಮೀರಿ ಸಾಧನೆಗೈದ ಧಾರ್ಮಿಕ–ಸಾಮಾಜಿಕ ಕ್ಷೇತ್ರದಲ್ಲಿ ಇಳಿವಯಸ್ಸಿನಲ್ಲೂ ತೊಡಗಿಸಿಕೊಂಡಿದ್ದ ಉಮ್ಮರ್ ಶಾಫಿ ಹಾಜಿ ತನ್ನ 84ನೆ ವಯಸ್ಸಿನಲ್ಲಿ ಅಂದರೆ 2012ರ ಮೇ 6ರಂದು ಇಹಲೋಕ ತ್ಯಜಿಸಿದರು.ಡಿದ್ದ ಉಮ್ಮರ್ ಶಾಫಿ ಹಾಜಿ ತನ್ನ 84ನೆ ವಯಸ್ಸಿನಲ್ಲಿ ಅಂದರೆ 2012ರ ಮೇ 6ರಂದು ಇಹಲೋಕ ತ್ಯಜಿಸಿದರು.

## ಸಾಹಿತ್ಯ ಪೋಷಕ

## ಹಾಜಿ ಜಿ. ಅಬ್ದುಲ್ ಖಾದರ್ ಗೋಳ್ತಮಜಲು



ಬಂಟ್ವಾಳ ತಾಲೂಕಿನ ಗೋಳ್ತಮಜಲಿನ ಇಸುಬು ಬ್ಯಾರಿ–ಪಾಣೆಮಂಗಳೂರು ಮೂಲದ ಬೀಫಾತಿಮಾ ದಂಪತಿಯ ಪುತ್ರನಾಗಿ 1932ರ ಜನವರಿ 22ರಂದು ಪಾಣೆಮಂಗಳೂರು ಸಮೀಪದ ಆಲಡ್ಕದಲ್ಲಿ ಹುಟ್ಟಿ ಬೆಳೆದ ಅಬ್ದುಲ್ ಖಾದರ್ ಗೋಳ್ತಮಜಲು "ಅಬ್ಬೋನು ಹಾಜಿ" ಎಂದೇ ಪ್ರಸಿದ್ಧರು. ತನ್ನ ಪ್ರಾಥಮಿಕ ಶಿಕ್ಷಣವನ್ನು ಕಲ್ಲಡ್ಕ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಪೂರೈಸಿದರು. ಬಳಿಕ ಎಸ್‌ವಿಎಸ್ ಪ್ರೌಢಶಾಲೆಯಲ್ಲಿ ಮೆಟ್ರಿಕ್‌ವರೆಗೆ ಕಲಿತರು. ಸ್ವಾತಂತ್ರ್ಯಪೂರ್ವದಲ್ಲೇ ಅಂದಿನ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೃಷಿ ಮತ್ತು ಉದ್ಯಮದಲ್ಲಿ ಪ್ರಗತಿ ಸಾಧಿಸಿದ ಅವರು ಸಾಹಿತಿ ಮಾತ್ರವಲ್ಲ ಸಾಹಿತ್ಯದ ಪರಿಚಾರಕರೂ ಹೌದು. ಬಾಲಕನಾಗಿದ್ದಾಗಲೇ ಅವರಿಗೆ ಭಾರತೀಯ ಸೇನೆಗೆ ಅದರಲ್ಲೂ ವಾಯುಪಡೆಗೆ ಸೇರಬೇಕು ಎಂಬ ಆಸೆ ಇತ್ತು. ಮುಸ್ಲಿಂ ಸಮುದಾಯದ ಮಕ್ಕಳು ಪ್ರಾಥಮಿಕ ಶಾಲೆಯ ಮೆಟ್ಟಿಲನ್ನೇ ಹತ್ತುವುದು ದುಸ್ತರವಾಗಿದ್ದ ಆ ಕಾಲದಲ್ಲಿ ಅಂದರೆ 1940ರಲ್ಲಿ ಮೆಟ್ರಿಕ್ ಶಿಕ್ಷಣ ಕಲಿತಿರುವುದು ಅವರ ಜ್ಞಾನದಾಹವನ್ನು ಬಿಂಬಿಸುತ್ತದೆ. ಮೆಟ್ರಿಕ್ ನಂತರ ತನ್ನ 20ನೆ ಹರೆಯದಲ್ಲಿ ವಾಯುಪಡೆಗೆ ಸೇರುವ ತವಕದಲ್ಲಿದ್ದ ಅವರು ಮಂಗಳೂರಿಗೆ ತೆರಳಿ ವಾಯುಸೇನೆಯ ಅಧಿಕಾರಿಯಿಂದ ಸೇನೆಗೆ ಸೇರಲು ಸಮ್ಮತಿಯ ಮುದ್ರೆಯನ್ನು ಪಡೆದುಕೊಂಡು ಮನೆಗೆ ಮರಳಿದರು. ಅದೇ ವೇಳೆ ಕೃಷಿಕರಾಗಿದ್ದ ತಂದೆಯು ನಿಧನರಾದ ಕಾರಣ ಕೃಷಿಯ ಜವಾಬ್ದಾರಿ ಹಿರಿಮಗ ಅಬ್ದುಲ್ ಖಾದರ್‌ರ ಹೆಗಲ ಮೇಲೆ ಬಿತ್ತು. ಸೇನೆಗೆ ಸೇರುವ ಕನಸು ನನಸಾಗಲೇ ಇಲ್ಲ.

1942ರ ಕ್ವಿಟ್ ಇಂಡಿಯಾ ಚಳುವಳಿಯ ಕಾವು ಹಳ್ಳಿಹಳ್ಳಿಗೂ ಹರಡಿತ್ತು. ಬಾಲಕ ಅಬ್ದುಲ್ ಖಾದರ್ ಕಲ್ಲಡ್ಕದ ಬೋರ್ಡ್ ಹಿರಿಯ ಪ್ರಾಥಮಿಕ ಶಾಲೆಯ ಮೂರನೇ ತರಗತಿಯ ವಿದ್ಯಾರ್ಥಿ. ಸಂಜೆ ಶಾಲೆಯಿಂದ ಮನೆಗೆ ಮರಳುವಾಗ ಶಾಲೆ ಸಮೀಪದ ಅಶ್ವಥ ಮರದ ಕಟ್ಟೆಯಲ್ಲಿ ಮಾಧವ ಪಡಿಯಾರ್ ಮತ್ತು ಉಪ್ಪಣ್ಣ ನಾಯಕ್ ಎಂಬಿಬ್ಬರು ಹೋರಾಟಗಾರರು ಬಿರುಸಿನ ಭಾಷಣ ಮಾಡಿ ಸ್ವಾತಂತ್ರ್ಯದ ಹೋರಾಟದ ಕಿಡಿ ಹಚ್ಚುತ್ತಿದ್ದರು. ಭಾಷಣ ಕೇಳಿದ ಅಬ್ದುಲ್ ಖಾದರ್ ಮತ್ತಿತರ ವಿದ್ಯಾರ್ಥಿಗಳ ಸಹಿತ ಅಲ್ಲಿ ಜಮಾಯಿಸಿದ್ದವರು ದೇಶದ ಪರ ಘೋಷಣೆ ಕೂಗಿದರು. ಅಷ್ಟರಲ್ಲಿ ಧಾವಿಸಿ ಬಂದ ಪೊಲೀಸರು ಲಾಠಿ ಬೀಸಿ ಜನರನ್ನು ಚದುರಿಸಿದರು. ಈ ಘಟನೆಯನ್ನು ಅಬ್ದುಲ್ ಖಾದರ್ ಹಾಜಿ ತನ್ನ ಇಳಿವಯಸ್ಸಿನಲ್ಲಿ ಅಗಾಗ ನೆನಪಿಸಿಕೊಳ್ಳುತ್ತಿದ್ದರು.

ಮೂಲತಃ ಕೃಷಿಕರಾಗಿದ್ದ ಅಬ್ದುಲ್ ಖಾದರ್ ಗೋಳ್ತಮಜಲು ಭತ್ತ ಮತ್ತು ಅಡಿಕೆ ಬೆಳೆಗಾರರು. ಕೃಷಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅವರು ತನ್ನ ಉದ್ಯಮದ ಯಶಸ್ಸಿನ ನಂತರವೂ ಕೃಷಿಯಿಂದ ವಿಮುಖರಾಗಿರಲಿಲ್ಲ. 1968ರಲ್ಲಿ ಹಡಗಿನ ಮೂಲಕ ಹಜ್ ಯಾತ್ರೆ ಪೂರೈಸಿದರು. ಭಾರತ್ ಬೀಡಿ, ಗಣೇಶ್ ಬೀಡಿಯ ಗುತ್ತಿಗೆದಾರರಾಗಿದ್ದ ಅವರು 1969ರಲ್ಲಿ ತನ್ನ ಕಿರಿಯ ಸಹೋದರ ಅಬೂಬಕರ್ ಅವರೊಂದಿಗೆ "ಹಜಾಜ್" ಎಂಬ ಹೆಸರಿನಲ್ಲಿ ಸ್ವತಂತ್ರವಾದ ಬೀಡಿ ಕಂಪೆನಿಯೊಂದನ್ನು ಹುಟ್ಟು ಹಾಕಿದರು. ಹಾಗೇ "ಹಜಾಜ್" ಹೆಸರಿನಲ್ಲಿ ಅವರು ಮನೆಮಾತಾದರು. 1985ರಲ್ಲಿ ಹಜಾಜ್ ಸಾಬೂನು, 1990ರಲ್ಲಿ ಹಜಾಜ್ ಪ್ಲಾಸ್ಟಿಕ್ಸ್ ಕೈಗಾರಿಕೆಯನ್ನು ಸ್ಥಾಪಿಸಿದರು. ಆ ಮೂಲಕ ಹಜಾಜ್ ಸಮೂಹ ಸಂಸ್ಥೆಯ ಮುಖ್ಯಸ್ಥರಾಗಿ ನೂರಾರು ಕಾರ್ಮಿಕರಿಗೆ ಉದ್ಯೋಗದಾತರಾದರು.

ತನ್ನ ಬದುಕಿನ 50 ವರ್ಷಗಳ ಕಾಲ ಮಸೀದಿಯ ಸೇವೆಗೈದ ಹಿರಿಮೆ ಅಬ್ದುಲ್ ಖಾದರ್ ಅವರದ್ದು. ನಿರಂತರ 35 ವರ್ಷಗಳ ಕಾಲ ಕಲ್ಲಡ್ಕದ ಮುಹಿಯ್ಯುದ್ದೀನ್ ಜುಮಾ ಮಸೀದಿಯ ಪ್ರಧಾನ ಕಾರ್ಯದರ್ಶಿ ಮತ್ತು 15 ವರ್ಷಗಳ ಕಾಲ ಅಧ್ಯಕ್ಷರಾಗಿದ್ದರು. ಗೋಳ್ತಮಜಲಿನ ರಹ್ಮಾನಿಯಾ ಜುಮಾ ಮಸೀದಿಯ ಗೌರವಾಧ್ಯಕ್ಷರಾಗಿ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಎರ್ಮೆಮಜಲು ಎಂಬಲ್ಲಿನ ಮಕ್ಕಳಿಗೆ ಮದ್ರಸಕ್ಕೆ ಬರಲು ಕಷ್ಟವಾಗುತ್ತದೆ ಎಂಬುದನ್ನು ಮನಗಂಡ ಅವರು ಮದ್ರಸ ನಿರ್ಮಾಣಕ್ಕಾಗಿ ತನ್ನ ಸ್ಥಳವನ್ನೇ ದಾನಗೈದಿದ್ದರು.

ಗೋಳ್ತಮಜಲಿನ ಸರಕಾರಿ ಪ್ರೌಢಶಾಲೆ ಬೇಕೆಂಬ ಸ್ಥಳೀಯರ ಬೇಡಿಕೆಯನ್ನು ಈಡೇರಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅಂದರೆ 1.05 ಎಕರೆ ಸ್ವಂತ ಜಮೀನನ್ನು ಪ್ರೌಢಶಾಲೆಗಾಗಿ ದಾನಗೈದರು. ಸುಮಾರು 2 ದಶಕಗಳ ಕಾಲ ಗೋಳ್ತಮಜಲು ಸರಕಾರಿ ಪ್ರೌಢಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದರು. ಗೋಳ್ತಮಜಲು ಸರಕಾರಿ ಹಿ.ಪ್ರಾ. ಶಾಲೆಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಕಲ್ಲಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದರು.

1999ರಲ್ಲಿ ತನ್ನ ನೇತೃತ್ವದಲ್ಲಿ ಕುಟುಂಬದ ಟ್ರಸ್ಟ್‌ವೊಂದನ್ನು ಸ್ಥಾಪಿಸಿ ಜೆಮ್ ಆಂಗ್ಲಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಸ್ವಂತ ನಿವೇಶನದಲ್ಲಿ ನಿರ್ಮಿಸಿದ್ದರು.

ಕನ್ನಡ ಮತ್ತು ಬ್ಯಾರಿ ಭಾಷೆಯಲ್ಲಿ ಕವನ, ಲೇಖನಗಳನ್ನು ಬರೆಯುವ ಮೂಲಕ ಸಾಹಿತ್ಯದಲ್ಲೂ ತನ್ನ ಛಾಪನ್ನು ಮೂಡಿಸಿದ್ದ ಅವರು ಬಂಟ್ವಾಳ ತಾಲೂಕಿನ ನೇರಳಕಟ್ಟೆಯಲ್ಲಿ 21.11.1999ರಲ್ಲಿ ನಡೆದ ಎರಡನೆ ಬ್ಯಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್‌ನ ಅಧ್ಯಕ್ಷರೂ ಆಗಿದ್ದರು. ಕನ್ನಡ ಸಾಹಿತ್ಯ ಪರಿಷತ್‌ನ ಅಜೀವ ಸದಸ್ಯರಾಗಿದ್ದರು. ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ತಮ್ಮ ಹೆಸರಿನಲ್ಲಿ ದತ್ತಿನಿಧಿ ಆರಂಭಿಸಿದ್ದರು.

ಲಯನ್ಸ್ ಕ್ಲಬ್ ಬಂಟ್ವಾಳ ಇದರ ಸದಸ್ಯರಾಗಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಮೀಯ್ಯತುಲ್ ಫಲಾಹ್‌ನ ಅಜೀವ ಸದಸ್ಯರಾಗಿ, ಸೀರತ್ ಕಮಿಟಿಯ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಕ್ರೀಡೆಯ ಬಗ್ಗೆಯೂ ಅಪಾರ ಆಸಕ್ತಿ ಹೊಂದಿದ್ದ ಅವರು ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಮನೆ ಮಾತಾಗಿದ್ದ ಹಜಾಜ್ ಸ್ಪೋರ್ಟ್ಸ್ ಕ್ಲಬ್ ಮತ್ತು ಹಜಾಜ್ ಕಬಡ್ಡಿ ತಂಡದ ಪೋಷಕರಾಗಿದ್ದರು. ಹೈನುಗಾರಿಕೆಯ ಹವ್ಯಾಸವನ್ನೂ ಬೆಳೆಸಿಕೊಂಡಿದ್ದ ಅವರು ಉತ್ತಮ ತಳಿಯ ದನಕರುಗಳನ್ನೂ ಸಾಕುತ್ತಿದ್ದರು. ಕಂಬಳದ ಕೋಣಗಳನ್ನು ಸಾಕುತ್ತಿದ್ದರು. ಪರಿಸರ ಪ್ರೇಮಿಯೂ ಆಗಿದ್ದರು.

ಅಸಂಖ್ಯಾತ ಸನ್ಮಾನ, ಅಭಿನಂದನೆ, ಪುರಸ್ಕಾರಗಳಿಗೆ ಪಾತ್ರರಾಗಿದ್ದ ಅವರು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ಸನ್ಮಾನಕ್ಕೂ ಭಾಜನರಾಗಿದ್ದರು.

ಪತ್ನಿ ಬೀಫಾತಿಮಾ ಮತ್ತು 6 ಗಂಡು ಹಾಗೂ 5 ಹೆಣ್ಣು ಮಕ್ಕಳನ್ನು ಹೊಂದಿದ ಸಂತೃಪ್ತ ಕುಟುಂಬವನ್ನು 2019ರ ಎಪ್ರಿಲ್ 22ರಂದು ಬಿಟ್ಟಗಲಿದರು. ಅವರ ಮೊಮ್ಮಕ್ಕಳ ಪೈಕಿ ವೈದ್ಯರು, ಲೆಕ್ಕಪರಿಶೋಧಕರು, ಇಂಜಿನಿಯರ್, ಹಾಫಿಲ್‌ಗಳಾಗಿರುವುದು ಗಮನಾರ್ಹ.

# ಕೊಡುಗೈದಾನಿ ಹಾಜಿ ಬಿ.ಹುಸೈನ್ ಕೊಡಾಜೆ



ಹುಸೈನ್ ಹಾಜಿ, ಸುಲ್ತಾನ್ ಹಾಜಿ, ಕೊಡಾಜೆ ಹಾಜಿ ಎಂದೆಲ್ಲಾ ಊರ-ಪರವೂರ ಜನರಿಂದ ಕರೆಯಲ್ಪಡುತ್ತಿದ್ದ ಹಾಜಿ ಬಿ. ಹುಸೈನ್ ಕೊಡಾಜೆ ತನ್ನ ಸರಳತೆ, ಉದಾರತೆ, ನಿರಾಡಂಬರದ ಗುಣಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡು ಬ್ಯಾರಿ ಮುಸ್ಲಿಂ ಸಮುದಾಯ ಮತ್ತು ಸರ್ವಧರ್ಮೀಯರ ಪ್ರೀತಿ, ವಿಶ್ವಾಸ ಗಳಿಸಿದವರು. ಕಠಿಣ ಪರಿಶ್ರಮದಿಂದ ವ್ಯಾಪಾರ-ಉದ್ಯಮದಲ್ಲಿ ಹಂತ ಹಂತವಾಗಿ ಮೇಲೇರಿದ ಹುಸೈನ್ ಹಾಜಿ ತಾನು ಹತ್ತಿ ಬಂದ ಮೆಟ್ಟಿಲನ್ನು ಮರೆಯದೆ ಕೊನೆಯ ಉಸಿರು ಇರುವವರೆಗೂ ಜನರ ಸಂಕಷ್ಟಗಳಿಗೆ ಸ್ಪಂದಿಸಿದವರು.

ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ ಉಡುಪಿ, ಕೊಡಗು, ಮೈಸೂರು, ಮಂಡ್ಯ, ಹಾಸನ ಮತ್ತಿತರ ಜಿಲ್ಲೆಗಳಲ್ಲಿ ಚಿರಪರಿಚಿತರಾಗಿದ್ದ ಅವರು ಈ ಎಲ್ಲಾ ಜಿಲ್ಲೆಗಳ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಅನನ್ಯ. ಶ್ರೀಮಂತಿಕೆ ಇದ್ದರೂ ಕೂಡ ಆಡಂಬರದ ಬದುಕಿಗೆ ಒಗ್ಗದ ಅವರು ಸರಳವಾಗಿ ಬದುಕಿ ತೋರಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಸಾಕಷ್ಟು ಜನಪ್ರಿಯತೆ, ಪ್ರಸಿದ್ಧಿ ಪಡೆದಿದ್ದರೂ ಕೂಡ ಎಂದೂ ಅವರಲ್ಲಿ ಅಹಂ ಎದ್ದು ಕಾಣಲಿಲ್ಲ. ತನ್ನನ್ನು ಗುಣಗಾನ ಮಾಡುವ ಸಾವಿರಾರು ಮಂದಿ ತನ್ನ ಸುತ್ತಮುತ್ತವಿದ್ದರೂ ಕೂಡ ಎಲ್ಲೂ ಒಂದಷ್ಟು ಸ್ವಪ್ರತಿಷ್ಠೆ ಮೆರೆದವರಲ್ಲ. ಸಮಾಜಕ್ಕೆ ಕೈಲಾದಷ್ಟು ಕೊಡುಗೆ ನೀಡುತ್ತಲೇ ಕೊಡುಗೈ ದಾನಿ ಎಂದೇ ಗುರುತಿಸಲ್ಪಟ್ಟಿದ್ದರು.

ಉಪ್ಪಿನಂಗಡಿ ಸಮೀಪದ ಮುಹಮ್ಮದ್ ಹಾಜಿ ಮತ್ತು ಬುಡೋಳಿ ಮೂಲದ ಝೈನಬಾ ದಂಪತಿಯ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರ ಪೈಕಿ ಹಿರಿಯವರಾದ ಬಿ.ಹುಸೈನ್ 1953ರ ಅಕ್ಟೋಬರ್ 1ರಂದು ಬಂಟ್ವಾಳ ತಾಲೂಕಿನ ಮಾಣಿ ಸಮೀಪದ ಪೆರಾಜೆ ಗ್ರಾಮದ ಬುಡೋಳಿ ಎಂಬಲ್ಲಿ ಜನಿಸಿದರು. ಬಂಟ್ವಾಳ ತಾಲೂಕಿನ ಪೆರಾಜೆ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 5ನೆ ತರಗತಿ ಕಲಿತ ಅವರು ಗಡಿಯಾರದ ಜುಮಾ ಮಸೀದಿಯ ಅಧೀನದಲ್ಲಿರುವ ಮದ್ರಸದಲ್ಲಿ ಧಾರ್ಮಿಕ ಶಿಕ್ಷಣ ಪಡೆದರು.

ಕಡುಬಡತನಲ್ಲೇ ಬೆಳೆದ ಅವರು ತನ್ನ ಹುಟ್ಟೂರು "ಬುಡೋಳಿ"ಗೆ ಬದಲಾಗಿ ಮೊದಲ ಅಕ್ಷರ "ಬಿ"ಯನ್ನು ತನ್ನ ಹೆಸರಿನ ಮುಂದೆ ಸೇರಿಸಿಕೊಂಡರು. ಯೌವ್ವನಕ್ಕೆ ಕಾಲಿಡುತ್ತಲೇ ಬಂಟ್ವಾಳ ತಾಲೂಕಿನ ಕೋಡಪದವು ಎಂಬಲ್ಲಿ ಸಣ್ಣ ಹೊಟೇಲ್ ವ್ಯವಹಾರವನ್ನು ಆರಂಭಿಸಿದರು. ಅದರೊಂದಿಗೆ ಬೀಡಿ ಫೋರ್‌ಮೆನ್ ಆಗಿ ಕೆಲಸ ನಿರ್ವಹಿಸಿದರು. ಬಳಿಕ ಅಲ್ಲೇ ಬೀಡಿಯ ಗುತ್ತಿಗೆ ವಹಿಸಿಕೊಂಡರು. ಕಠಿಣ ಪರಿಶ್ರಮದಿಂದ ವ್ಯಾಪಾರ-ಉದ್ಯಮದಲ್ಲಿ ಹಿಡಿತ ಸಾಧಿಸಿದರು.

ತನ್ನ 24ನೆ ಹರೆಯದಲ್ಲಿ ಪುತ್ತೂರು ತಾಲೂಕಿನ ಬನ್ನೂರು ಮೂಲದ ರುಖಿಯಾ ಅವರನ್ನು ಮದುವೆಯಾದರು.

ನಂತರದ ದಿನಗಳಲ್ಲಿ ತನ್ನ ಸೋದರಮಾವನ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು.

1974ರಲ್ಲಿ ಕೋಡಪದವಿನಿಂದ ಕೊಡಾಜೆಗೆ ತೆರಳಿ ಸ್ವಂತ ಲೇಬಲ್‌ನ ಬೀಡಿ ಉದ್ಯಮ ಆರಂಭಿಸಿದರು. ಹಾಗೇ ಸ್ವತಃ ತಾನೇ ಅದನ್ನು ಮಾರಾಟ ಮಾಡುವ ದೃಢ ನಿರ್ಧಾರ ಕೈಗೊಂಡರು. ಈ ಮಧ್ಯೆ ದಿನಪತ್ರಿಕೆಯಲ್ಲಿ ಕಂಡು ಬಂದ "ಸುಲ್ತಾನ್" ಎಂಬ ಹೆಸರನ್ನು ಕಂಡು ಅದನ್ನೇ ತನ್ನ ಸ್ವಂತ ಬೀಡಿಗೆ ಇಟ್ಟರು. ಆರಂಭದಲ್ಲಿ ಸಾಕಷ್ಟು ಕಷ್ಟಪಟ್ಟರು. 1975ರಲ್ಲಿ ನಿಯಮಾನುಸಾರವಾಗಿ "ಸುಲ್ತಾನ್ ಬೀಡಿ"ಯನ್ನು 4 ಸಂಖ್ಯೆಯ ಟ್ರೇಡ್‌ಮಾರ್ಕ್‌ನೊಂದಿಗೆ ನೋಂದಾಯಿಸಿಕೊಂಡರು. ಗ್ರಾಮೀಣ ಭಾಗದ ಮಹಿಳೆ-ಪುರುಷರಿಗೆ ಕೆಲಸವಿಲ್ಲದ ದಿನಗಳವು. ಎಲ್ಲರೂ ಬೀಡಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಸಹಜವಾಗಿ "ಸುಲ್ತಾನ್" ಬ್ರಾಂಚ್‌ಗೆ ಬೀಡಿ ಹರಿದುಬರತೊಡಗಿತು. ಸುಲ್ತಾನ್ ಬೀಡಿಯು ಊರು-ಪರವೂರಿನಲ್ಲಿ ಮಾರಾಟವಾಗತೊಡಗಿತು. ಕರಾವಳಿ-ಮಲೆನಾಡು ದಾಟಿ ಹಳೆಯ ಮೈಸೂರು ಭಾಗದಲ್ಲೂ ವ್ಯವಹಾರ ವಿಸ್ತರಿಸಿತು. ಹಲವರಿಗೆ ತನ್ನ ಕಂಪೆನಿಯೊಳಗೆ ಉದ್ಯೋಗವನ್ನೂ ನೀಡಿದರು. ಸುಮಾರು 4 ಸಾವಿರ ಕುಟುಂಬಗಳಿಗೆ ನಿತ್ಯ ಬೀಡಿ ಕಟ್ಟುವ ಕೆಲಸ ನೀಡಿದರೆ, 15 ಸಾವಿರದಷ್ಟು ಜನರ ಜೀವನಾಧಾರಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾರಣರಾದರು. ಹಾಗೇ ತನ್ನ ವಾಸ್ತವ್ಯವನ್ನು ಕುಟುಂಬ ಸಮೇತವಾಗಿ ಕೊಡಾಜೆಗೆ ಸ್ಥಳಾಂತರಿಸಿದರು.

ತಾನು ಗಳಿಸಿದ ಸಂಪತ್ತಿನ ಬಹುಪಾಲನ್ನು ಸಹಾಯ ಯಾಚಿಸಿಕೊಂಡು ಬಂದವರಿಗೆ ನೀಡತೊಡಗಿದರು. ಎಂದೂ ಅವರು ಯಾರನ್ನೂ ಬರಿಗೈಯಲ್ಲಿ ಕಳುಹಿಸಿದ ಉದಾಹರಣೆಯಿಲ್ಲ. ಪ್ರತಿ ನಿತ್ಯವೂ ದಾನ ಮಾಡುವ ಪರಿಪಾಠ ಬೆಳೆಸಿಕೊಂಡರು. ಅಷ್ಟೇ ಅಲ್ಲ ಮಸೀದಿ, ಮದ್ರಸ, ಶಾಲೆ, ಯತೀಂ ಖಾನಾ, ದರ್ಗಾ, ದೇವಸ್ಥಾನ, ದೈವಸ್ಥಾನ

ಇತ್ಯಾದಿಗೆ ಹಣ ಅಥವಾ ಸಾಮಗ್ರಿಗಳನ್ನು ನೀಡುವ ಮೂಲಕ ನೆರವು ನೀಡಿದರು. ಬಡ ಹೆಣ್ಣು ಮಕ್ಕಳ ಮದುವೆಗೆ ಧನಸಹಾಯ ನೀಡಿದರು. ಅವರು ಎಂದೂ ತೋರ್ಪಡಿಕೆಗಾಗಿ ಧನಸಹಾಯ ಮಾಡಲಿಲ್ಲ. ಇಂತಿಷ್ಟು ಕೊಟ್ಟೆ ಎಂದು ಯಾರಲ್ಲೂ ಹೇಳಿಕೊಳ್ಳಲಿಲ್ಲ. ಆ ಮೂಲಕ ಜನರ ಪ್ರೀತಿ–ವಿಶ್ವಾಸ ಗಳಿಸಿದರು.


ಉದ್ಯಮದಲ್ಲಿ ಯಶಸ್ಸನ್ನು ಕಾಣುತ್ತಲೇ ಕೊಡಾಜೆಯಲ್ಲಿ ಮನೆಮಾಡಿಕೊಂಡ ಅವರು 1988–89ರಲ್ಲಿ ಮೊದಲ ಹಜ್ ಯಾತ್ರೆ ಪೂರೈಸಿದರು. ಬಳಿಕ ತನ್ನ ಜೀವಿತಾವಧಿಯಲ್ಲಿ 10 ಬಾರಿ ಹಜ್ ಯಾತ್ರೆಗೈದರು. ಹಾಗೇ ಎಲ್ಲರಿಂದಲೂ ಹುಸೈನ್ ಹಾಜಿ ಅಥವಾ ಸುಲ್ತಾನ್ ಹಾಜಿ ಎಂದು ಪ್ರೀತಿಯಿಂದ ಗೌರವಿಸಲ್ಪಟ್ಟರು.

ಸುಮಾರು 1 ದಶಕಗಳಿಗೂ ಅಧಿಕ ಕಾಲ ಕೊಡಾಜೆಯ ಬದ್ರಿಯಾ ಜುಮಾ ಮಸೀದಿಯ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು 1999ರಲ್ಲಿ ನೇರಳಕಟ್ಟೆಯಲ್ಲಿ ಇಂಡಿಯನ್ ಆಡಿಟೋರಿಯಂ ಎಂಬ ಸಭಾಭವನ ನಿರ್ಮಿಸಿದರು.

ಅಪಾರ ಸಿರಿವಂತಿಕೆ ಹೊಂದಿದ್ದರೂ ಅನಗತ್ಯವಾಗಿ ದುಂದುವೆಚ್ಚ ಮಾಡಿದವರಲ್ಲ. ಆಡಂಬರದ ಜೀವನ ಮಾಡಿದವರಲ್ಲ. ಸರಳವಾಗಿ ಬದುಕಿ ತೋರಿಸಿದರು.

ಪತ್ನಿ ರುಖಿಯಾ ಮತ್ತು 6 ಗಂಡು, 2 ಹೆಣ್ಣು ಸಹಿತ 8 ಮಕ್ಕಳನ್ನು 2017ರ ಜುಲೈ 20ರಂದು ಅವರು ಬಿಟ್ಟಗಲಿದರು. ಅವರು ಅದೆಷ್ಟು ಮಂದಿಯ ಪ್ರೀತಿ ಗಳಿಸಿದ್ದರು ಎಂಬುದಕ್ಕೆ ನಿಧನರಾದ ದಿನ ಅಲ್ಲಿ ಸೇರಿದ ಜನಸಾಗರವೇ ಸಾಕ್ಷಿಯಾಗಿತ್ತು. ಅವರು ನಿಧನರಾದ ನಂತರ ತಿಂಗಳುಗಳ ಕಾಲ ಅವರ ಮನೆಗೆ ಜನರು ಭೇಟಿ ನೀಡಿ ಸಾಂತ್ವನ ಹೇಳಿದ್ದೂ ಕೂಡ ಅವರು ಜನರ ಮನಸ್ಸಲ್ಲಿ ಅಚ್ಚಳಿಯದೆ ಉಳಿದಿರುವುದಕ್ಕೆ ಉದಾಹರಣೆಯಾಗಿದೆ. ಇದೀಗ ಅವರ ಮಕ್ಕಳು "ಸುಲ್ತಾನ್" ಬೀಡಿ ಉದ್ಯಮವನ್ನು ಮುನ್ನೆಡೆಸುತ್ತಿದ್ದಾರೆ.

# ಬ್ಯಾರಿ ಸಮುದಾಯದ ಪ್ರಥಮ ಮೇಯರ್
# ಬಿ. ಅಬ್ದುಲ್ ಖಾದರ್ ಹಾಜಿ ಮಂಗಳೂರು



ಮಂಗಳೂರಿನ ಬಂದರ್ ಕಂದಕ್‌ನಲ್ಲಿ ಬಿ. ಮುಹಿಯ್ಯುದ್ದೀನ್ (ಮೊಯ್ದಿನ್) ಹಾಜಿ–ಮರಿಯಮ್ಮ ದಂಪತಿಯ ಪುತ್ರನಾಗಿ 1935ರ ಎಪ್ರಿಲ್ 25ರಂದು ಬಿ. ಅಬ್ದುಲ್ ಖಾದರ್ ಹಾಜಿ ಮಂಗಳೂರಿನ ರೊಝಾರಿಯಾ ಪ್ರೌಢಶಾಲೆಯಲ್ಲಿ ಎಸೆಸೆಲ್ಸಿ ಹಾಗೂ ಸರಕಾರಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪೂರೈಸಿದರು. ಆ ಬಳಿಕ ಹಡಗು ಸಾರಿಗೆ ಉದ್ಯಮದಲ್ಲಿ ತೊಡಗಿಸಿಕೊಂಡರು. ಹಸನ್ ಹಾಜಿ ಆ್ಯಂಡ್ ಕಂಪೆನಿಯಲ್ಲಿ ಪಾಲುದಾರರಾಗಿ ಸೇರ್ಪಡೆಗೊಂಡ ಖಾದರ್ ಹಾಜಿ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡರು. ಅದರೊಂದಿಗೆ ರಾಜಕೀಯದಲ್ಲೂ ಸಕ್ರಿಯರಾದರು. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರ ಜೊತೆ ನಿಕಟ ಸಂಪರ್ಕ ಹೊಂದಿದರು. ಹಾಗೇ ಮಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದು ಸ್ಪರ್ಧೆಗೆ ಇಳಿದರು. ಅಂದರೆ ಮಂಗಳೂರು ಮಹಾನಗರ ಪಾಲಿಕೆಗೆ ನಡೆದ ಪ್ರಥಮ ಚುನಾವಣೆಯಲ್ಲಿ (1983–88) ಗೆದ್ದು ಕಾರ್ಪೊರೇಟರ್ ಆಗಿ ಚುನಾಯಿತರಾದರು. ಅಷ್ಟೇ ಅಲ್ಲ 1984–85ನೆ ಅವಧಿಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ (28.1.1985ರಿಂದ 12.1.1986) ಆಗಿ ಆಯ್ಕೆಗೊಂಡರು. ಆ ಮೂಲಕ ಬ್ಯಾರಿ ಸಮುದಾಯದ ಪ್ರಪ್ರಥಮ ಮೇಯರ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಮೇಯರ್ ಅವಧಿ ಮುಗಿದು ಮಾಜಿಯಾದರೂ ಕೂಡ ಇಂದಿಗೂ ಅವರು ಮೇಯರ್ ಖಾದರ್ ಹಾಜಿ ಎಂದೇ ಪ್ರಸಿದ್ಧರಾಗಿದ್ದಾರೆ. ಖಾದರ್ ಹಾಜಿ ಅಂದರೆ ಯಾರಿಗೂ ಗೊತ್ತಾಗದು. ಆದರೆ ಮೇಯರ್ ಖಾದ್ರಾಜಾರ್ ಅಂದರೆ ಎಲ್ಲರಿಗೂ ಕ್ಷಣಾರ್ಧದಲ್ಲಿ ಗೊತ್ತಾಗಲಿರುವುದು ಅದಕ್ಕೆ ಸಾಕ್ಷಿಯಾಗಿದೆ.

ಅದಲ್ಲದೆ ಎರಡು ಬಾರಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (12.8.1993–29.12.1994 ಮತ್ತು 31.10.2003 ರಿಂದ 22.7.2005ರವರೆಗೆ) ಅಧ್ಯಕ್ಷರಾಗಿದ್ದರು.

ಇಳಿವಯಸ್ಸಿನಲ್ಲೂ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯರಾಗಿದ್ದರು. ದಿ ಸೆಂಟ್ರಲ್ ಮುಸ್ಲಿಂ ಕಮಿಟಿಯ ಉಪಾಧ್ಯಕ್ಷರಾಗಿ, ಬದ್ರಿಯಾ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದ ಅವರು ಫುಟ್‌ಬಾಲ್ ಆಟಗಾರರೂ ಹೌದು. ಮಂಗಳೂರಿನ ಕೆಪಿಕೆ ತಂಡದ ಸಕ್ರಿಯ ಸದಸ್ಯರಾಗಿದ್ದರು.

ಪತ್ನಿ ಮರಿಯಮ್ಮ ಮತ್ತು ಮೂವರು ಗಂಡು ಹಾಗೂ ಐದು ಹೆಣ್ಣುಮಕ್ಕಳನ್ನು 2013ರ ಡಿಸೆಂಬರ್ 14ರಂದು ಅವರು ಬಿಟ್ಟಗಲಿದರು.

## ಬ್ಯಾರಿ ಸಮುದಾಯದ ಪ್ರಥಮ ಜಿಲ್ಲಾ ಪಂಚಾಯತ್ ಅಧ್ಯಕ್ಷ ಅಹ್ಮದ್ ಕುಂಞಿ ಮಂಜೇಶ್ವರ



ದೇಶಾದ್ಯಂತ ಪಂಚಾಯತ್ ಕಾಯ್ದೆ ರೂಪುಗೊಂಡ ಬಳಿಕ ಬ್ಯಾರಿ ಸಮುದಾಯದಿಂದ ಜಿಲ್ಲಾ ಪಂಚಾಯತ್‌ನ ಪ್ರಪ್ರಥಮ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಕೀರ್ತಿ ಮಂಜೇಶ್ವರದಲ್ಲಿ ಹುಟ್ಟಿ ಬೆಳೆದ ಸಿ. ಅಹ್ಮದ್ ಕುಂಞಿ ಅವರಿಗೆ ಸಲ್ಲುತ್ತದೆ.

ಮಂಜೇಶ್ವರ ಬೀಚ್ ರಸ್ತೆಯ ಪಾಂಡ್ಯಾಲ್ ಎಂಬಲ್ಲಿನ ಹಾಜಿ ಅಬ್ದುಲ್ ಖಾದರ್–ಆಯಿಶಾ ದಂಪತಿಯ ಪುತ್ರನಾಗಿ 1942ರಲ್ಲಿ ಹುಟ್ಟಿ ಬೆಳೆದು ಊರಲ್ಲೇ ವಿದ್ಯಾಭ್ಯಾಸ ಪಡೆದ ಬಳಿಕ ಅವರು ಸಕಲೇಶಪುರದಲ್ಲಿ ತನ್ನ ತಂದೆಯೊಂದಿಗೆ ಜಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಬಳಿಕ ಅಲ್ಲಿಂದ ಮರಳಿ ಊರಲ್ಲೇ ಕೆಲಸ ಮಾಡುತ್ತಲೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು.

ಮಂಜೇಶ್ವರವು ಎಡಪಕ್ಷಗಳ ಭದ್ರಕೋಟೆಯಾಗಿತ್ತು. ಅಲ್ಲಿ ಇತರ ಪಕ್ಷಗಳು ನಗಣ್ಯ ಎಂಬಂತಿತ್ತು. ಆದರೆ ಸದಾ ಸಮಾಜ ಸೇವೆಯಲ್ಲಿದ್ದುಕೊಂಡು ಬಡಜನರ ಹಿತ ಕಾಪಾಡುವುದರಲ್ಲಿ ಮುಂಚೂಣಿಯಲ್ಲಿದ್ದ ಅವರು ಮಂಜೇಶ್ವರದಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಪಕ್ಷ ಕಟ್ಟುವಲ್ಲಿ ವಹಿಸಿದ ಪಾತ್ರ ಅಮೋಘ. ಎಡಪಕ್ಷಗಳ ಕಪಿಮುಷ್ಠಿಯಲ್ಲಿದ್ದ ಮಂಜೇಶ್ವರದಲ್ಲಿ ಮುಸ್ಲಿಂ ಲೀಗ್‌ನ ವಿಜಯದ ಪತಾಕೆ ಹಾರಿಸುವಲ್ಲಿ ಸಿ. ಅಹ್ಮದ್ ಕುಂಞಿಯ ಶ್ರಮ ಅಪಾರ.

ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು ಹಂತ ಹಂತವಾಗಿ ರಾಜಕೀಯದ ಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸಿದರು.. ಮಂಜೇಶ್ವರ ಗ್ರಾಮ ಪಂಚಾಯತ್ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು 19950–2000ರ ಅವಧಿಯಲ್ಲಿ ಯುಡಿಎಫ್ ನೆರವಿನಿಂದ ಕಾಸರಗೋಡು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾಗಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದರು.

ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಅಧ್ಯಯನ ನಡೆಸಲು ಕೇರಳ ರಾಜ್ಯ ಸರಕಾರ ನೇಮಿಸಿದ್ದ ಪಾಲೋಳಿ ಮುಹಮ್ಮದ್ ಕುಟ್ಟಿ ಆಯೋಗದ ಸದಸ್ಯರೂ ಆಗಿದ್ದರು.

ಈ ಮಧ್ಯೆ ಮುಸ್ಲಿಂ ಲೀಗ್‌ನ ಮಂಜೇಶ್ವರ ಮಂಡಲ ಅಧ್ಯಕ್ಷರಾಗಿ ಸುಧೀರ್ಘ ಕಾಲ ಸೇವೆ ಸಲ್ಲಿಸಿದ್ದರು. ಅಲ್ಲದೆ ಕಾಸರಗೋಡು ಜಿಲ್ಲಾ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ರಾಜ್ಯ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.


ಬ್ಯಾರಿ, ಮಲಯಾಳಂ, ಕನ್ನಡ, ತುಳು, ಕೊಂಕಣಿ, ಉರ್ದು, ಇಂಗ್ಲಿಷ್ ಭಾಷೆಗಳಲ್ಲಿ ಹಿಡಿತ ಸಾಧಿಸಿದ್ದ ಅವರು ನುರಿತ ರಾಜಕಾರಣಿಯಾದರೂ ಪಕ್ಷಭೇದ ಮಾಡದೆ, ಜಾತಿಮತ ನೋಡದೆ ಜನರ ಸೇವೆಗೈದರು. ಅಷ್ಟೇ ಅಲ್ಲ, ಭ್ರಷ್ಟಾಚಾರ ರಹಿತ ರಾಜಕಾರಣಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ರಾಜಕೀಯದಲ್ಲಿ ಸುದೀರ್ಘ ಕಾಲ ಸಕ್ರಿಯರಾಗಿದ್ದರೂ ಕೂಡ ಅವರಿಗೆ ಸ್ವಂತದ್ದೊಂದು ಸೂರು ಮಾಡಲಾಗಲಿಲ್ಲ. ಬಾಡಿಗೆಯ ಮನೆಯಲ್ಲೇ ವಾಸವಾಗಿದ್ದರು. ಅವರ ಈ ಸ್ಥಿತಿಯನ್ನು ಕಂಡ ಮುಸ್ಲಿಂ ಲೀಗ್ ಪಕ್ಷದ ನಾಯಕರು ಮತ್ತು ಅಭಿಮಾನಿಗಳು ಅವರಿಗೊಂದು ಸ್ವಂತ ಮನೆ ನಿರ್ಮಿಸಿಕೊಟ್ಟಿದ್ದರು.

ಎರಡು ಬಾರಿ ಮಂಜೇಶ್ವರ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಮುಸ್ಲಿಂ ಲೀಗ್ ಟಿಕೆಟ್ ನೀಡಿದರೂ ಕೂಡ ಅದನ್ನು ನಯವಾಗಿ ತಿರಸ್ಕರಿಸಿ ಪಕ್ಷದ ಅಧಿಕೃತ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದರು. ಕಾರಣಾಂತರದಿಂದ ಮುಸ್ಲಿಂ ಲೀಗ್ ತೊರೆದು ಸಿಪಿಐಎಂ ಮತ್ತು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪಕ್ಷದೊಂದಿಗೆ ಗುರುತಿಸಿಕೊಂಡರೂ ಕೂಡ ಇಳಿವಯಸ್ಸಿನಲ್ಲಿ ಮತ್ತೆ ಮಾತೃಪಕ್ಷಕ್ಕೆ ಸೇರ್ಪಡೆಗೊಂಡಿದ್ದರು.

ಹೊಸಂಗಡಿಯಲ್ಲಿ ಕಟ್ಟಿಗೆ ಡಿಪೋ ಮತ್ತು ಮನೆ ಸಮೀಪ ಜಿನಸಿ ಅಂಗಡಿ ಹೊಂದಿದ್ದರು. ಅದೇ ಅಂಗಡಿಯಲ್ಲಿ ಆಯುರ್ವೇದಿಕ್ ಔಷಧವನ್ನೂ ಅವರು ನೀಡುತ್ತಿದ್ದರು.

ವಯೋ ಸಹಜ ಕಾಯಿಲೆಯಿಂದ ಪತ್ನಿ ಆಮಿನಾ ಮತ್ತು ಒಬ್ಬ ಸಾಕು ಮಗನನ್ನು 2020ರ ಮೇ 22ರಂದು ತನ್ನ 78ನೆ ಪ್ರಾಯದಲ್ಲಿ ಅವರು ಬಿಟ್ಟಗಲಿದರು.

# ಬ್ಯಾರಿ ಸಮುದಾಯದ ಪ್ರಥಮ ತಾಲೂಕು ಪಂಚಾಯತ್ ಅಧ್ಯಕ್ಷ ಎಂ.ಎಸ್. ಅಬೂಬಕರ್ ತೋಡಾರ್



ಮಂಗಳೂರು ತಾಲೂಕಿನ (ಈಗ ಮೂಡುಬಿದಿರೆ ತಾಲೂಕು) ಮೂಡುಬಿದಿರೆ ಸಮೀಪದ ತೋಡಾರು ಬಳಿಯ ಮಿಜಾರು ಎಂಬಲ್ಲಿ ಶೇಖಬ್ಬ-ಫಾತಿಮಾ ದಂಪತಿಯ ಪುತ್ರನಾಗಿ 1957ರ ಫೆಬ್ರವರಿ 17ರಂದು ಅಬೂಬಕರ್ ತೋಡಾರ್ ಜನಿಸಿದರು.

ಕೃಷಿ, ವ್ಯಾಪಾರ, ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ಅವರು ಸಹಜವಾಗಿ ರಾಜಿ ಪಂಚಾಯತಿಗೆಯ ಮೂಲಕ ಪರಿಸರದಲ್ಲಿ ಮನೆಮಾತಾದರು. ಅದೇ ಅವರನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. ಎಸೆಸೆಲ್ಸಿವರೆಗೆ ಕಲಿತಿದ್ದ ಅವರು ರಾಜಿಪಂಚಾಯತಿಗೆ-ಸಮಾಜಸೇವೆಯ ಮೂಲಕ ಜನರಿಗೆ ಮತ್ತಷ್ಟು ಹತ್ತಿರವಾದರು. ಸಹಜವಾಗಿ ರಾಜಕೀಯವೂ ಅವರನ್ನು ಕೈ ಬೀಸಿ ಕರೆಯಿತು,

ಹಾಗೇ ಜನತಾ ದಳ ಪಕ್ಷದೊಂದಿಗೆ ಗುರುತಿಸಿಕೊಂಡ ಅವರು ತೆಂಕಮಿಜಾರು ಕ್ಷೇತ್ರದಿಂದ ಮಂಗಳೂರು ತಾಲೂಕು ಪಂಚಾಯತ್ ಸದಸ್ಯರಾಗಿ 1995ರಲ್ಲಿ ಚುನಾಯಿತರಾದರು. ಮಾಜಿ ಸಚಿವ ಅಮರನಾಥ ಶೆಟ್ಟರ ಬಲಗೈ ಬಂಟರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಮೂಡುಬಿದಿರೆಯಲ್ಲಿ ಜನತಾ ದಳ ಮನೆಮಾತಾಗಿತ್ತು. ಆವಾಗ ಗ್ರಾಮ-ತಾಲೂಕು-ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನವು 30-30 ತಿಂಗಳ ಅವಧಿಯದ್ದಾಗಿತ್ತು. ಮಂಗಳೂರು ತಾಲೂಕು ಪಂಚಾಯತ್‌ನ 33 ಸ್ಥಾನಗಳ ಪೈಕಿ ಜನತಾ ದಳ 14, ಕಾಂಗ್ರೆಸ್ 12, ಬಿಜೆಪಿ 6, ಸಿಪಿಎಂ 1 ಸ್ಥಾನದಲ್ಲಿ ಗೆದ್ದಿತ್ತು. ನಿರೀಕ್ಷೆಯಂತೆ ಮಂಗಳೂರು ತಾಲೂಕು ಪಂಚಾಯತ್‌ನ ಅಧ್ಯಕ್ಷರಾಗಿ "ಎಂಎಸ್" ಎಂದೇ ಖ್ಯಾತರಾಗಿದ್ದ ಎಂ.ಎಸ್. ಅಬೂಬಕರ್ (ಮಿಜಾರ್ ಶೇಖಬ್ಬ ಅಬೂಬಕರ್) ಚುನಾಯಿತರಾದರು. ಆ ಮೂಲಕ ತಾಲೂಕು ಪಂಚಾಯತ್‌ವೊಂದರ ಪ್ರಪ್ರಥಮ ಬ್ಯಾರಿ ಅಧ್ಯಕ್ಷ ಎಂಬ ಕೀರ್ತಿಗೆ ಎಂ.ಎಸ್. ಅಬೂಬಕರ್ ಪಾತ್ರರಾದರು. ಆವಾಗ ಅವರಿಗೆ ಕೇವಲ 40 ವರ್ಷ ಪ್ರಾಯ. 1997ರ ಡಿಸೆಂಬರ್ 9ರಂದು ಅಧ್ಯಕ್ಷರಾಗಿ ಆಯ್ಕೆಗೊಂಡ ಅವರು 30 ತಿಂಗಳ ಅವಧಿ ಪೂರ್ತಿಗೊಳಿಸಿದರು. ಈ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಗಮನ ಸೆಳೆದಿದ್ದರು.

ಅವರಿಗೆ ಸುಮಾರು 120 ಎಕರೆ ಕೃಷಿ ಜಮೀನು ಇತ್ತು. ಕೃಷಿಯೊಂದಿಗೆ ವ್ಯಾಪಾರ-ಉದ್ಯಮದಲ್ಲೂ ತೊಡಗಿಸಿಕೊಂಡಿದ್ದರು. ಅಂದರೆ "ಎಂಎಸ್" ಬ್ರಾಂಡಿನ ಸ್ವಂತ ಬೀಡಿ ಕಂಪೆನಿ ಇತ್ತು. ಅದು ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ ಪಶ್ಚಿಮಘಟ್ಟ ಪ್ರದೇಶದಲ್ಲಿ ಕೂಡ ಮನೆ ಮಾತಾಗಿತ್ತು. ಸಾಧುಬೀಡಿಯ ಗುತ್ತಿಗೆಯನ್ನೂ ಅವರು ವಹಿಸಿಕೊಂಡಿದ್ದರು. ಮಂಗಳೂರಿನ ಬಲ್ಮಠ-ಮೂಡುಬಿದಿರೆಯ ಕಾಂಪ್ಲೆಕ್ಸ್‌ಗಳಲ್ಲಿ ಬಾಡಿಗೆ ಕಟ್ಟಡವನ್ನೂ ಹೊಂದಿದ್ದರು.

ಈ ಮಧ್ಯೆ ತೋಡಾರಿನ ಬದ್ರಿಯಾ ಜುಮಾ ಮಸೀದಿಯ ಅಧ್ಯಕ್ಷರಾಗಿ 20 ವರ್ಷ ಸೇವೆ ಸಲ್ಲಿಸಿದ್ದರು. ತೋಡಾರಿನ ಆದರ್ಶ ಆಂಗ್ಲ ಮಾಧ್ಯಮ ಶಾಲೆಯ ಟ್ರಸ್ಟಿಯಾಗಿದ್ದರು. ಹೀಗೆ ಅತ್ಯಲ್ಪ ಅವಧಿಯಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ರಂಗದಲ್ಲಿ ತೊಡಗಿಸಿಕೊಂಡಿದ್ದ ಎಂ.ಎಸ್. ಅಬೂಬಕರ್ ಪತ್ನಿ ಆಯಿಶಾ, ನಾಲ್ಕು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳನ್ನು 2017ರ ಸೆಪ್ಟಂಬರ್ 11ರಂದು ಬಿಟ್ಟಗಲಿದರು.

## ದ.ಕ.ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಪ್ರಥಮ ಅಧ್ಯಕ್ಷ ಡಾ.ಎಂ.ಎಂ.ಸಾಲಿಹ್ ಮಂಗಳೂರು



ಮೂಲತಃ ಮಂಜೇಶ್ವರದ ಕುಂಞಿ ಮೂಸಾ ಹಾಜಿ ದಂಪತಿಯ ಪುತ್ರನಾಗಿ 1913ರಲ್ಲಿ ಮಂಗಳೂರಿನ ಬಂದರ್‌ನಲ್ಲಿ ಹುಟ್ಟಿ ಬೆಳೆದ ಮಂಗಳೂರು ಮೊಹಿದಿನಬ್ಬ ಸಾಲಿಹ್ (ಎಂ.ಎಂ.ಸಾಲಿಹ್) ವೃತ್ತಿಯಲ್ಲಿ ಉದ್ಯಮಿ. ಪ್ರವೃತ್ತಿಯಲ್ಲಿ ಹೋಮಿಯೋಪಥಿ ವೈದ್ಯರು. ಬಂದರ್‌ನ ಕಸಾಯಿಗಲ್ಲಿ ಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಡೆದ ಬಳಿಕ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ತರಗತಿಯಲ್ಲಿ ತೇರ್ಗಡೆ ಹೊಂದಿದರು.

ಮೀನು ಉದ್ಯಮದಲ್ಲಿ ಸಾಕಷ್ಟು ಹಿಡಿತ ಸಾಧಿಸಿದ್ದರೂ ಕೂಡ ಅವರ ಹವ್ಯಾಸ ಸಾಹಿತ್ಯ, ಸಂಘಟನೆ, ಭಾಷಣ ಇತ್ಯಾದಿ ಕ್ಷೇತ್ರದಲ್ಲಾಗಿತ್ತು. ಉದ್ಯಮದಲ್ಲಿದ್ದಾಗ ಹೋಮಿಯೋಪಥಿ ವೈದ್ಯಕೀಯ ಪದ್ಧತಿಯನ್ನು ಕಲಿತರು.

ಬಂದರ್‌ನಿಂದ ಜೆಪ್ಪು ಮೋರ್ಗನ್‌ಗೇಟ್‌ಗೆ ವಾಸ್ತವ್ಯ ಬೆಳೆಸಿದ ಬಳಿಕ ಚಿಕಿತ್ಸೆಗಾಗಿ ಅವರ ಬಳಿ ತೆರಳುವ ರೋಗಿಗಳ ಸಂಖ್ಯೆಯೂ ಅಧಿಕವಾಯಿತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಯಾರಿಂದಲೂ ನಯಾ ಪೈಸೆ ಪಡೆಯದೆ ಉಚಿತ ಚಿಕಿತ್ಸೆ ನೀಡಿದರು. ಹಾಗಾಗಿಯೇ ಅವರನ್ನು ಜೆಪ್ಪು ಮೋರ್ಗನ್‌ಗೇಟ್ ಪರಿಸರದ ಜನರು "ಮರ್ದ್‌ದ ಸ್ಯಾಬೆರ್" ಎಂದು ಈಗಲೂ  ಕರೆಯುತ್ತಾರೆ.


ಹೋಮಿಯೋಪಥಿ ವೈದ್ಯರಾಗುವ ಮೂಲಕ ಬಡಜನರ ಕಷ್ಟಕಾರ್ಪಣ್ಯಗಳನ್ನು ಅರಿತ ಡಾ.ಎಂ.ಎಂ.ಸಾಲಿಹ್ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದರು. ಸಹಾಯ ಕೇಳಿಕೊಂಡು ಬಂದವರಿಗೆ ಉದಾರವಾಗಿ ದಾನ ಮಾಡತೊಡಗಿದರು.  ರಾಜಕೀಯವಾಗಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರೂ ಕೂಡ ಸೇವೆಯ ಸಂದರ್ಭ ಅದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಉದಾರಿಯಾದರು. ಸಾರ್ವಜನಿಕರು, ಸಂಘಟನೆಗಳ ಪ್ರಮುಖರು ಸಲಹೆ-ಸಹಕಾರ ಕೇಳಿಕೊಂಡು ಬಂದಾಗ ಸ್ಪಂದಿಸಿದರು. ಸಂಘಟನೆಯಲ್ಲಿ ಕ್ರಿಯಾಶೀಲರಾದ ಕಾರಣ ಒಲಿದು ಬಂದ ವಿವಿಧ ಸಂಘಟನೆಗಳ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿ ಕಾರ್ಯದರ್ಶಿಯಾಗಿಯೇ ಮುಂದುವರಿದರು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ, ಮಂಗಳೂರಿನ ಬದ್ರಿಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮುಸ್ಲಿಂ ಸೆಂಟ್ರಲ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾಗಿ, ಕ್ರೆಸೆಂಟ್ ವೆಲ್ಫೇರ್ ಸೆಂಟರ್‌ನ ಕಾರ್ಯದರ್ಶಿಯಾಗಿದ್ದ ಅವರು ಬೋಳಾರ ಮುಹಿಯ್ಯುದ್ದೀನ್ ಜುಮಾ ಮಸೀದಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಪ್ರಪ್ರಥಮ ಅಧ್ಯಕ್ಷ (18.11.1962ರಿಂದ 11.2.1967ರವರೆಗೆ) ಎಂಬ ಖ್ಯಾತಿಗೂ ಅವರು ಪಾತ್ರರಾಗಿದ್ದಾರೆ. ಮಂಗಳೂರು ಪೀಸ್ ಕಮಿಟಿಯ ಸದಸ್ಯರಾಗಿದ್ದರು. 1968ರಲ್ಲಿ ಮಂಗಳೂರಿನಲ್ಲಿ ನಡೆದ ಕೋಮುಗಲಭೆಯನ್ನು ಹತ್ತಿಕ್ಕಲು ಅಂದಿನ ಜಿಲ್ಲಾಧಿಕಾರಿಗಳ ಜೊತೆಗೂಡಿ ಶ್ರಮಿಸಿದ್ದರು.

ಬ್ಯಾರಿ, ತುಳು, ಕನ್ನಡ, ಮಲಯಾಳಂ, ಉರ್ದು, ಇಂಗ್ಲಿಷ್ ಭಾಷೆಯ ಮೇಲೆ ಅವರಿಗೆ ಅಪಾರ ಹಿಡಿತವಿತ್ತು. ಅಲ್ಲದೆ ಉತ್ತಮ ಭಾಷಣಕಾರರಾಗಿದ್ದರು. ತನ್ನ ಮನೆಯಲ್ಲಿ ಸಾವಿರಾರು ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯವನ್ನೇ ಅವರು ರಚಿಸಿದ್ದರು. ಬಿಡುವಿನ ವೇಳೆಯಲ್ಲಿ ಓದಿನಲ್ಲಿ ತಲ್ಲೀನರಾಗುತ್ತಿದ್ದರು.

1975ರ ನವೆಂಬರ್ 5ರಂದು ತನ್ನ 62ನೆ ವಯಸ್ಸಿನಲ್ಲಿ ಪತ್ನಿ ಮರಿಯಮ್ಮ ಮತ್ತು 5 ಮಂದಿ ಪುತ್ರರು ಹಾಗೂ 2 ಮಂದಿ ಪುತ್ರಿಯರನ್ನು ಅಗಲಿದರು. ಆ ಬಳಿಕ ಅವರ ಬಳಿಯಿದ್ದ ಪುಸ್ತಕಗಳನ್ನು ಮಂಗಳೂರಿನ ಬದ್ರಿಯಾ ಶಿಕ್ಷಣ ಸಂಸ್ಥೆಗೆ ದಾನ ಮಾಡಲಾಯಿತು.



## ಮುಸ್ಲಿಂ ಲೇಖಕರ ಸಂಘದ ಪ್ರಥಮ ಅಧ್ಯಕ್ಷ ಸಿ.ಕೆ.ಹುಸೈನ್

ಮಂಗಳೂರಿನ ಬಂದರ್‌ನ ಕಸೈಗಲ್ಲಿಯಲ್ಲಿ ಸಿ.ಕೆ.ಅಬ್ದುಲ್ಲಾ-ಖತೀಜಮ್ಮ ದಂಪತಿಯ ಪುತ್ರನಾಗಿ 1938ರಲ್ಲಿ ಜನಿಸಿದ ಸಿ.ಕೆ. ಹುಸೈನ್ ವೃತ್ತಿಯಲ್ಲಿ ವ್ಯಾಪಾರಿ. ಪ್ರವೃತ್ತಿಯಲ್ಲಿ ಸಾಹಿತಿ. 1960ರಲ್ಲಿ ಕನ್ನಡ ಸಾಹಿತ್ಯಕ್ಕೆ ಮುಸ್ಲಿಮರಲ್ಲಿ ಅಷ್ಟೇನೂ ಒಲವು ಇರಲಿಲ್ಲ. ಆದರೆ ಸಿ.ಕೆ.ಹುಸೈನ್ ವ್ಯಾಪಾರಿಯಾಗಿದ್ದರೂ ಸಾಹಿತ್ಯದಲ್ಲಿ ಅಪಾರ ಒಲವು ಹೊಂದಿದ್ದರು. ಅಷ್ಟೇ ಅಲ್ಲ, "ಕರ್ಬಲಾ ರಣರಂಗ, ಟಿಪ್ಪುಸುಲ್ತಾನ್, ಔರಂಗಜೇಬ್ ಮತ್ತು ಹಿಂದೂಗಳು, ಬಕ್ರೀದ್ ಬಲಿದಾನ" ಇತ್ಯಾದಿ ಕೃತಿಗಳನ್ನು ರಚಿಸಿದ್ದರು. ಸಾಹಿತ್ಯ ರಚನೆ, ಪತ್ರಿಕೆಗಳನ್ನು ಸಂಗ್ರಹಿಸುವ ಹವ್ಯಾಸವುಳ್ಳ ಅವರಿಗೆ ಇತಿಹಾಸದ ಬಗ್ಗೆ ಅಪಾರ ಆಸಕ್ತಿ ಇತ್ತು. 1960ರಲ್ಲಿ "ದಿವ್ಯವಾಣಿ" ಎಂಬ ಪಾಕ್ಷಿಕ ಪತ್ರಿಕೆಯನ್ನು ಹುಟ್ಟು ಹಾಕಿ ಅದರ ಸಂಪಾದಕರಾಗಿದ್ದ ಅವರು "ಮುಸ್ಲಿಂ ಲೇಖಕರ ಸಂಘ"ದ ಸ್ಥಾಪನೆಗೂ ಕಾರಣಕರ್ತರಾಗಿದ್ದರು. ಬಳಿಕ "ಮುಸಲ್ಮಾನ್" ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಮುಸ್ಲಿಂ ಲೇಖಕರ ಸಂಘದ ಪ್ರಪ್ರಥಮ ಅಧ್ಯಕ್ಷರಾಗಿದ್ದ ಅವರು ಸತತ 6 ವರ್ಷಗಳ ಕಾಲ ಅಧ್ಯಕ್ಷರಾಗಿ ರಾಜ್ಯದ ವಿವಿಧೆಡೆ ಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಅನೇಕ ಕವಿಗೋಷ್ಠಿ, ಕಮ್ಮಟ ಆಯೋಜಿಸಿ ಯುವ ಲೇಖಕರನ್ನು ಬೆಳಕಿಗೆ ತಂದಿದ್ದರು. ಹಲವಾರು ಸಾಹಿತ್ಯ ಮನಸ್ಸುಗಳಿಗೆ ವೇದಿಕೆ ಒದಗಿಸಿದ್ದರು.

ಕೆಲವು ಮಾಧ್ಯಮಗಳಲ್ಲಿ ಮುಸ್ಲಿಮರ ಬಗ್ಗೆ ತಪ್ಪು ಸಂದೇಶ ಬಿತ್ತುವ ಅಥವಾ ಅವಹೇಳನಕಾರಿ ಲೇಖನಗಳು ಪ್ರಕಟಗೊಂಡರೆ ತಟ್ಟನೆ ಎಚ್ಚೆತ್ತುಕೊಂಡು ಮುಸ್ಲಿಂ ಲೇಖಕರ ಸಂಘದ ಪದಾಧಿಕಾರಿ, ಸದಸ್ಯರನ್ನು ಒಳಗೊಂಡ ನಿಯೋಗದೊಂದಿಗೆ ಆ ಪತ್ರಿಕೆಗಳ ಕಚೇರಿಗೆ ತೆರಳಿ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರು. ಅಲ್ಲದೆ ಕ್ಷಮೆಯಾಚಿಸುವಂತೆ ಪಟ್ಟು ಹಿಡಿಯುತ್ತಿದ್ದರು. ಕೆಲವರು ಆದ ತಪ್ಪನ್ನು ಮನ್ನಿಸಿ ಎಂದು ಕ್ಷಮೆಯಾಚಿಸಿದರೆ ಇನ್ನು ಕೆಲವು ಪತ್ರಿಕೆಗಳ ಸಂಪಾದಕರು ಕ್ಷಮೆಯಾಚಿಸಲು ಹಿಂದೇಟು ಹಾಕುತ್ತಿದ್ದರು. ಅಂತಹವರ ವಿರುದ್ಧ ಮುಸ್ಲಿಂ ಲೇಖಕರ ಸಂಘದ ವತಿಯಿಂದ ನ್ಯಾಯಾಲಯದಲ್ಲಿ ದಾವೆ ಹೂಡುತ್ತಿದ್ದರು. ಒಮ್ಮೆಯಂತೂ ಒಂದು ಕೃತಿಯನ್ನು ಅವರು ಮುಟ್ಟುಗೋಲು ಹಾಕುವಂತೆ ಮಾಡಿದ್ದರು.

ಮುಸ್ಲಿಂ ಯಂಗ್‌ಮೆನ್ಸ್ ಅಸೋಸಿಯೇಶನ್ ಮೂಲಕ ಯುವಕರನ್ನು ಸೇರಿಸಿಕೊಂಡು ಅನೇಕ ಜನಪರ ಕೆಲಸಗಳನ್ನು ಮಾಡುತ್ತಿದ್ದರು. ಬದ್ರಿಯಾ ಶಿಕ್ಷಣ ಸಂಸ್ಥೆ, ಕ್ರಿಸೆಂಟ್ ವೆಲ್ಫೇರ್ ಅಸೋಸಿಯೇಶನ್, ಬಂದರ್ ಕಸೈಗಲ್ಲಿಯ ಅನ್ಸಾರುಲ್ ಇಸ್ಲಾಂ ಬನಾತ ದೀನಿಯ್ಯ ಅರಬಿಕ್ ಮದ್ರಸದ ಪ್ರಧಾನ ಕಾರ್ಯದರ್ಶಿಯಾಗಿ, ಮಂಗಳೂರು ನಗರ ಮುಸ್ಲಿಂ ಲೀಗ್ ಜೊತೆ ಕಾರ್ಯದರ್ಶಿಯಾಗಿದ್ದ ಅವರು ಪತ್ನಿ ಬೀಫಾತಿಮಾ ಮತ್ತು ನಾಲ್ಕು ಮಂದಿ ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು 1993ರ ಜನವರಿ 2ರಂದು ಬಿಟ್ಟಗಲಿದ್ದಾರೆ.

## ಸಂಪಾದಕ–ಸಂಘಟಕ–ಚಿಂತಕ ಇಬ್ರಾಹೀಮ್ ಸಈದ್



ಮಂಗಳೂರಿನ ಕೆ.ಸಈದ್–ಬಿಫಾತಿಮಾ ದಂಪತಿಯ ಪುತ್ರನಾಗಿ 1945ರ ಮೇ 20ರಂದು ಹುಟ್ಟಿ ಬೆಳೆದ ಇಬ್ರಾಹೀಮ್ ಸಈದ್ ಮಂಗಳೂರು ಬಂದರ್ ಕಸ್ಬೆಗಲ್ಲಿ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಕೆನರಾ ಹೈಸ್ಕೂಲ್, ಸರಕಾರಿ ಕಾಲೇಜಿನಲ್ಲಿ ಬಿಕಾಂ ಪದವಿಯನ್ನು (ರಾಜ್ಯದಲ್ಲೇ 3ನೆ ರ್‍ಯಾಂಕ್– ಹಿಂದಿ ಭಾಷೆ) ಪಡೆದಿದ್ದರು.

ಬಿಕಾಂ ಪದವಿ ಪಡೆದಿದ್ದ ಅವರಿಗೆ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರಿನಲ್ಲಿ ಉದ್ಯೋಗ ಲಭಿಸಿತ್ತು. ಈ ಬ್ಯಾಂಕ್‌ನ ಹಲವು ಶಾಖೆಗಳಲ್ಲಿ ಕೆಲಸ ಮಾಡಿದರು. ಬಡ್ಡಿಯು ಮಾನವನ ರಕ್ತ ಹೀರುವ ಮಾರಕ ಜಂತುವೆಂದೂ, ಬಡವರನ್ನು ಶೋಷಿಸುವ ಕೆಟ್ಟ ಸಿದ್ಧಾಂತವೆಂದು ಇಸ್ಲಾಮಿನ ಅಧ್ಯಯನದ ಮೂಲಕ ಗ್ರಹಿಸಿದ ಅವರು ಬ್ಯಾಂಕ್ ಉದ್ಯೋಗಕ್ಕೆ ರಾಜೀನಾಮೆ ನೀಡಿ ಹಿರಿಯ ಸಹೋದರ ಕೆ.ಎಂ.ಶರೀಫ್‌ರೊಂದಿಗೆ ವ್ಯಾಪಾರದಲ್ಲಿ ಪಾಲುದಾರರಾದರು. ಅನಂತರ ತನ್ನನ್ನು ಸಂಪೂರ್ಣವಾಗಿ ಇಸ್ಲಾಮಿನ ಅಧ್ಯಯನ ಮತ್ತು ಸಂದೇಶ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡರು. ಯಾವುದೇ ಉನ್ನತ ಧಾರ್ಮಿಕ ಶಿಕ್ಷಣ ಸಂಸ್ಥೆಯಿಂದ ಆಲಿಮ್ ಪದವಿ ಗಳಿಸದಿದ್ದರೂ ಕೂಡ ಸ್ವಪ್ರಯತ್ನ ಮತ್ತು ಪರಿಶ್ರಮದಿಂದ ಇಸ್ಲಾಮಿನ ಬಗ್ಗೆ ಆಳವಾದ ಜ್ಞಾನವನ್ನು ಸಂಪಾದಿಸಿದ್ದರು. ಅಲ್ಲದೆ ಅದನ್ನು ಅಷ್ಟೇ ಪ್ರಖರವಾಗಿ ಪಂಡಿತರ ಮುಂದಿರಿಸುವ ಅದ್ಭುತ ಸಾಮರ್ಥ್ಯ ಹೊಂದಿದ್ದರು.

1978ರ ಎಪ್ರಿಲ್ 23ರಂದು ಆರಂಭವಾದ ಸನ್ಮಾರ್ಗ ವಾರಪತ್ರಿಕೆಯ ಪ್ರಥಮ ಸಂಪಾದಕರಾಗಿ ನಿಯುಕ್ತಿಗೊಂಡ ಅವರು ಮರಣದವರೆಗೆ ಈ ಹುದ್ದೆಯಲ್ಲಿ ಮುಂದುವರಿದಿದ್ದರು. ಪತ್ರಕರ್ತ, ಲೇಖಕ, ಅನುವಾದಕ, ಚಿಂತಕ, ಭಾಷಣಕಾರರಾಗಿದ್ದ ಅವರು ಪ್ರವಾದಿ ಜೀವನ ಮತ್ತು ಸಂದೇಶ, ತಪ್ಪುಕಲ್ಪನೆಗಳು, ಲೋಕಾನುಗ್ರಹಿ, ಸಹಸ್ರ ಹದೀಸ್‌ಗಳು, ನೂರೆಂಟು ಚಿಂತನೆಗಳು, ಜೀವನದ ಶಿಷ್ಟಾಚಾರಗಳು, ಮಹಿಳೆ ಮತ್ತು ಸಮಾಜ, ಕೋಮುಸೌಹಾರ್ದ ಮತ್ತು ಚಾರಿತ್ರ್ಯ ನಿರ್ಮಾಣ, ಬಡ್ಡಿ, ಭಾರತದ ಭವಿಷ್ಯ ಮತ್ತು ಮುಸ್ಲಿಮರು, ಸರ್ವಧರ್ಮ ಸಮಭಾವ ಸೇರಿದಂತೆ 23 ಸ್ವಂತ ಕೃತಿಗಳು ಮತ್ತು 25 ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ.

ಉರ್ದು, ಕನ್ನಡ, ಬ್ಯಾರಿ, ಮಲಯಾಳಂ, ಇಂಗ್ಲಿಷ್, ಹಿಂದಿ, ಅರಬಿ ಭಾಷೆಗಳಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದ ಅವರು ಕನ್ನಡ, ಉರ್ದು, ಬ್ಯಾರಿ ಭಾಷೆಗಳಲ್ಲಿ ಭಾಷಣ, ಉಪನ್ಯಾಸ ನೀಡುತ್ತಿದ್ದರು. ಶಾಂತಿ ಪ್ರಕಾಶನ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಜಮಾಅತೆ ಇಸ್ಲಾಮೀ ಹಿಂದ್‌ನ ಮಂಗಳೂರು ಸ್ಥಾನೀಯ ಅಧ್ಯಕ್ಷರಾಗಿ, ವಿಭಾಗ ಸಂಚಾಲಕರಾಗಿ, ರಾಜ್ಯ ಸಲಹಾ ಸಮಿತಿಯ ಸದಸ್ಯರಾಗಿ, ಕೇಂದ್ರದ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಅವರು ನಾಲ್ಕು ವರ್ಷದ ಅವಧಿಗೆ ಕರ್ನಾಟಕ ಮತ್ತು ಗೋವಾ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

1984ರಲ್ಲಿ ಕೋಮು ಸೌಹಾರ್ದ ಮತ್ತು ಚಾರಿತ್ರ್ಯ ನಿರ್ಮಾಣ ಸಪ್ತಾಹ ಹಮ್ಮಿಕೊಂಡು ರಾಜ್ಯಾದ್ಯಂತ ಸಂಚರಿಸಿ ಅದರ ಮಹತ್ವ ಜನರಿಗೆ ಮನದಟ್ಟು ಮಾಡಿಸಿದ್ದರು. ರಾಜ್ಯಾದ್ಯಂತ "ಸಾರ್ವಜನಿಕ ಕುರ್‌ಆನ್ ಪ್ರವಚನ' ಕಾರ್ಯಕ್ರಮವನ್ನು ಹಮ್ಮಿಕೊಂಡರು.

ಶುಕ್ರವಾರದಂದು ಅರಬಿ ಹೊರತು ಬೇರೆ ಭಾಷೆಯಲ್ಲಿ ಖುತ್ಬಾ (ಭಾಷಣ) ಮಾಡುವುದು ನಿಷಿದ್ಧ ಎಂದು ವಾಸಿಸುತ್ತಿದ್ದ ಕಾಲದಲ್ಲಿ ಬಿಜಾಪುರದ ಗ್ರಾಮೀಣ ಪ್ರದೇಶದ ಮಸೀದಿಯೊಂದರಲ್ಲಿ ಕನ್ನಡದಲ್ಲಿ ಖುತ್ಬಾ ಪ್ರವಚನ ನೀಡಿ ಸಂಚಲನ ಮೂಡಿಸಿದ್ದರು. ಈವತ್ತು ರಾಜ್ಯದ ನೂರಾರು ಮಸೀದಿಗಳಲ್ಲಿ ಶುಕ್ರವಾರದಂದು ಕನ್ನಡ ಭಾಷೆಯಲ್ಲಿ ಪ್ರವಚನ ನೀಡುವುದರ ಹಿಂದೆ ಅವರ ದಿಟ್ಟ ಹೆಜ್ಜೆಯಿದೆ.

ಕನ್ನಡಕ್ಕೆ ಭಾಷಾಂತರಗೊಂಡ ಕುರ್‌ಆನ್ ಅನುವಾದ ಗ್ರಂಥ "ದಿವ್ಯ ಕುರ್‌ಆನ್"ನ ಮುದ್ರಣದ ಮೇಲ್ನೋಟವನ್ನು ವಹಿಸಿದ್ದ ಅವರು 1986ರಲ್ಲಿ ಕರ್ನಾಟಕ ಉರ್ದು ಅಕಾಡಮಿಯು ಹೊರತಂದ ನಿಘಂಟು ರಚನೆಯ ಪರಿಶೀಲನಾ ಸಮಿತಿಯ ಸದಸ್ಯರಾಗಿದ್ದರು.

ಮುಸ್ಲಿಮ್ ಮಹಿಳಾ ಸಾಹಿತ್ಯ ಸಂಘ, ಮುಸ್ಲಿಮ್ ಲೇಖಕರ ಸಂಘದ ಸ್ಥಾಪನೆಯ ರೂವಾರಿಯಾಗಿದ್ದ ಅವರು "ಅನುಪಮ ಮಹಿಳಾ ಮಾಸಿಕ'ದ ಮಾರ್ಗದರ್ಶಕರೂ ಆಗಿದ್ದರು. ಅವರು ರಚಿಸಿದ "ತಪ್ಪು ಕಲ್ಪನೆಗಳು' ಕೃತಿಯ

30,000ಕ್ಕೂ ಅಧಿಕ  ಪ್ರತಿಗಳು ಮಾರಾಟವಾಗಿರುವುದು ಗಮನಾರ್ಹ. ಈ ಪುಸ್ತಕ 10 ಭಾಷೆಗೆ ಅನುವಾದಗೊಂಡಿವೆ.


ಧಾರ್ಮಿಕ ಸೌಹಾರ್ದ ವೇದಿಕೆಯ ಅಧ್ಯಕ್ಷರಾಗಿದ್ದ ಅವರು ಪ್ರಜಾವಾಣಿ ಪತ್ರಿಕೆಯಲ್ಲಿ "ಬಾಳಬುತ್ತಿ' ಅಂಕಣವನ್ನು "ಸನ್ಮಾರ್ಗಿ" ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ಈ ಅಂಕಣ ಬರಹಗಳ ಸಂಗ್ರಹವು "ನೂರೆಂಟು ಚಿಂತನೆಗಳು" ಕೃತಿಯ ರೂಪದಲ್ಲಿ ಪ್ರಕಟವಾಗಿದೆ.

ಹೊಗಳಿಕೆ, ಪ್ರಶಸ್ತಿ, ಸನ್ಮಾನಗಳಿಂದ ಬಹಳ ದೂರ ಉಳಿಯುತ್ತಿದ್ದ ಅವರಿಗೆ ಮುಸ್ಲಿಮ್ ಲೇಖಕರ ಸಂಘದ ಪುಸ್ತಕ ಪ್ರಶಸ್ತಿ ಮತ್ತು ವರ್ಷದ ಹಿರಿಯ ಮುಸ್ಲಿಂ ಸಾಹಿತಿ ಪ್ರಶಸ್ತಿ ಲಭಿಸಿದೆ.

2007ರ ಜನವರಿಯಲ್ಲಿ ದ್ವಿತೀಯ ಬಾರಿ ಹಜ್ಜ್ ಯಾತ್ರೆ ಮುಗಿಸಿ ಮರಳುವಾಗ ರೋಗಪೀಡಿತರಾಗಿದ್ದರು. ಶ್ವಾಸಕೋಶದ ಕ್ಯಾನ್ಸರ್ ಭಾದಿಸಿದೆ ಎಂದು ವೈದ್ಯರು ಹೇಳಿದಾಗ "ಅಲ್‌ಹಮ್ದುಲಿಲ್ಲಾಹ್" ಎಂಬ ಸ್ತುತಿಯೊಂದಿಗೆ ಅದನ್ನು ಸ್ವೀಕರಿಸಿದರು.

2007ರ ಮೇ 27ರಂದು ನಿಧನರಾದ ಇಬ್ರಾಹೀಂ ಸಈದ್ ಪತ್ನಿ ಆಯಿಶಾ ಮತ್ತು ನಾಲ್ಕು ಗಂಡು ಹಾಗೂ ನಾಲ್ಕು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

# ಅನುವಾದವನ್ನೇ ಕಾಯಕವನ್ನಾಗಿಸಿಕೊಂಡಿದ್ದ ಪಿ.ನೂರ್ ಮುಹಮ್ಮದ್



ಬರಹವನ್ನು ಅದರಲ್ಲೂ ಅನುವಾದವನ್ನೇ ಕಾಯಕವಾಗಿಸಿ ಕೊನೆಯುಸಿರಿನ ತನಕವೂ ಲೇಖನಿಯೊಂದಿಗೆ ಬದುಕಿದ ಅಪರೂಪದ ವ್ಯಕ್ತಿತ್ವ ಪಿ.ನೂರ್ ಮುಹಮ್ಮದ್ ಅವರದ್ದಾಗಿತ್ತು. ಯೌವ್ವನದಲ್ಲೇ ಸಾಹಿತ್ಯಾಸಕ್ತಿಯನ್ನು ಬೆಳಸಿಕೊಂಡು ಹಲವಾರು ಕೃತಿಗಳನ್ನು ಕನ್ನಡ ಲೋಕಕ್ಕೆ ಅರ್ಪಿಸಿ ಕನ್ನಡ ಸಾಹಿತ್ಯದ ಸಿರಿಯನ್ನು ಸಂಪನ್ನಗೊಳಿಸಿದ ವ್ಯಕ್ತಿಗಳಲ್ಲಿ ನೂರ್ ಮಹಮ್ಮದ್ ಕೂಡ ಒಬ್ಬರು. ಕನ್ನಡ ಸಾಹಿತ್ಯಕ್ಕೆ ನಾಲ್ಕು ದಶಕಗಳಿಗಿಂತಲೂ ಮೀರಿದ ಸೇವೆಯಿಂದಾಗಿ ನಂದಿಯೂ ಸದಾ ಬೆಳಗುತ್ತಿರುವ ನೂರ್ (ಪ್ರಕಾಶ) ಆಗಿಯೇ ಅವರು ಉಳಿಯುತ್ತಾರೆ.

ಮೊಯ್ದಿನ್ ಕುಟ್ಟಿ–ಖದೀಜಾ ದಂಪತಿಯ 9 ಮಕ್ಕಳಲ್ಲಿ ಮೂರನೆಯವರಾಗಿ 1942ರ ಫೆಬ್ರವರಿ 16ರಂದು ಪುತ್ತೂರು ತಾಲೂಕಿನ ಪಡೀಲ್ ಎಂಬಲ್ಲಿ ನೂರ್ ಮುಹಮ್ಮದ್ ಜನಿಸಿದರು. ತನ್ನ ಪ್ರಾಥಮಿಕ ಶಿಕ್ಷಣವನ್ನು ಉಪ್ಪಿನಂಗಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿ, ಪುತ್ತೂರು ಫಿಲೋಮಿನಾ ಕಾಲೇಜಿನ ಪಿಯುಸಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಸರಕಾರಿ ಕಾಲೇಜಿನಲ್ಲಿ ಬಿಎಸ್ಸಿ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆದರು. ಆವಾಗಲೇ ತಂದೆ ಮೊಯ್ದಿನ್ ಕುಟ್ಟಿ ನಿಧನರಾದರು. ತಕ್ಷಣ ಅವರು ತಂದೆಯ ಹೋಟೆಲು ಉದ್ಯಮವನ್ನು ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಎದುರಾಯಿತು. ಹಾಗಾಗಿ ಸರಕಾರಿ ಉದ್ಯೋಗದ ಅವಕಾಶವನ್ನು ಬಿಟ್ಟು ಹೊಟೇಲ್ ಉದ್ಯಮದಲ್ಲಿ ಯಶಸ್ಸು ಸಾಧಿಸಿದರು.

ಕಾಲೇಜಿನಲ್ಲಿರುವಾಗಲೇ ಸಾಹಿತ್ಯದ ಅಭಿರುಚಿ ಹೊಂದಿದ್ದ ನೂರ್‌ಮುಹಮ್ಮದ್ "ನವ ಭಾರತ್" ಪತ್ರಿಕೆಯಲ್ಲಿ ನಿರಂತರವಾಗಿ ಬರೆಯತೊಡಗಿದ್ದರು. ಹೊಟೇಲು ಉದ್ಯಮದ ಒತ್ತಡದ ಮಧ್ಯೆಯೂ ಮೂಢನಂಬಿಕೆ, ಅನಾಚಾರ, ಅಕ್ರಮ, ಅನ್ಯಾಯಗಳ ವಿರುದ್ಧ ಬರೆಯತೊಡಗಿದರು.

1975ರಲ್ಲಿ ತನ್ನ ಬರಹಗಳಿಗೆ ಒಂದು ವೇದಿಕೆಯನ್ನು ಸಿದ್ಧಪಡಿಸಿದರು. ಉಪ್ಪಿನಂಗಡಿಯ ಇಸ್ಲಾಮಿಕ್ ಕಲ್ಚರಲ್ ಅಸೋಶಿಯೇಶನ್‌ನ ಆಶ್ರಯದಲ್ಲಿ ಅಬ್ದುಲ್ ಖಾದರ್ ಜೀಲಾನಿ, ರೂಪವೂ ಯಥಾರ್ಥವೂ, ಮುಸ್ಲಿಂ ಒಂದು ಪಾರ್ಟಿ, ತುರ್ಕಮಾನ್ ಗೇಟ್ ದುರಂತ, ಹದೀಸ್ ಕಥೆಗಳು.. ಮುಂತಾದ ಪುಸ್ತಕಗಳನ್ನು ಪ್ರಕಟಿಸಿದರು.

1978ರಲ್ಲಿ ಸನ್ಮಾರ್ಗ ವಾರಪತ್ರಿಕೆಯು ಆರಂಭವಾದಾಗ ಅದರ ಉಪಸಂಪಾದಕರಾಗಿ ಜವಾಬ್ದಾರಿ ವಹಿಸಿಕೊಂಡರು. ನಂತರ ಸಂಪಾದಕರಾಗಿ, ಅದರ ಗೌರವ ಸಂಪಾದಕರಾಗಿ ಕೆಲಸ ನಿರ್ವಹಿಸಿದರು.

1986ರಲ್ಲಿ ಸ್ವತಃ ಜ್ಯೋತಿ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿದರು. ಸೆರೆಮನೆಯಿಂದ ಮಸೀದಿಗೆ, ಸತ್ಯ ಮಿಥ್ಯ, ಕುಟುಂಬ ಜೀವನ, ಮಹಾಪುರುಷರು ಮುಂತಾದ ಅನುವಾದಿತ ಕೃತಿಗಳು ಅದರಿಂದ ಪ್ರಕಟಗೊಂಡವು. 1988ರಲ್ಲಿ ಶಾಂತಿ ಪ್ರಕಾಶನವು ಆರಂಭಗೊಂಡಾಗ ಜ್ಯೋತಿ ಪ್ರಕಾಶನವನ್ನು ಅದರೊಂದಿಗೆ ವಿಲೀನಗೊಳಿಸಲಾಯಿತು. ಮಲಯಾಳಂ, ಉರ್ದು ಇಂಗ್ಲಿಷ್‌ನಲ್ಲಿ ಉತ್ತಮ ಹಿಡಿತವಿದ್ದ ಅವರು ಐವತ್ತಕ್ಕೂ ಅಧಿಕ ಕೃತಿಗಳನ್ನು ಕನ್ನಡದ ಜನತೆಗೆ ಅರ್ಪಿಸಿದ್ದಾರೆ. ವಿಶ್ವಪ್ರಸಿದ್ಧ ಬೃಹತ್ ಗ್ರಂಥವಾದ "ತಫ್ಹೀಮುಲ್ ಕುರ್‌ಆನ್"ನ 6 ಸಂಪುಟಗಳಲ್ಲಿ ನಾಲ್ಕು ಸಂಪುಟಗಳು, ಭಾರತೀಯ ಸಂಸ್ಕೃತಿಯ ಅಂತರ್ದಾರೆಗಳು, ದಾಂಪತ್ಯ ಜೀವನ, ಇಸ್ಲಾಂ ಸೌರಭ, ಪರಲೋಕ ಚಿತ್ರಣ ಕುರ್‌ಆನ್‌ನಲ್ಲಿ... ಮೊದಲಾದ ಹಲವು ಕೃತಿಗಳು ಲೋಕಾರ್ಪಣೆಗೊಂಡವು, ಹಲವಾರು ಕವನಗಳನ್ನು ಬರೆದಿರುವ ಅವರ ಅನುವಾದಿತ ಕೃತಿಗಳಲ್ಲಿ ಮೂಲಭಾಷೆಯ ಛಾಯೆಯೂ ಕಂಡುಬರುವುದಿಲ್ಲ. ಅನುವಾದ ಕ್ಷೇತ್ರದಲ್ಲಿ ತರಬೇತಿಗೊಂಡು ಪದವಿ ಪಡೆದು ಬಂದವರನ್ನು ಅಚ್ಚರಿಗೊಳಿಸುವ ಪದಸಂಪತ್ತು ಮತ್ತು ಪದ ಸೌಂದರ್ಯ ಅವರಲ್ಲಿತ್ತು.

ನೇರ, ನಿಖರ ನಡೆನುಡಿಯ ಸಿಹಿ ಲೇಪಿತ ಪದಗಳನ್ನು ಉಪಯೋಗಿಸದ ಮತ್ತು ಮಿತಭಾಷಿಯಾದ ಅವರು ತಮ್ಮ ನಿಸ್ವಾರ್ಥತೆ, ತನ್ಮಯತೆ ಹಾಗೂ ಸೇವಾ ವೃತ್ತಿಯಿಂದಾಗಿ ತಾವಾಗಿಯೇ ಒಡನಾಡಿಗಳ ಮನ ಗೆಲ್ಲುತ್ತಿದ್ದರು. ಅವರೆಂದೂ ಪ್ರಚಾರವನ್ನು ಬಯಸಿದವರಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನಾಲ್ಕು ದಶಕಗಳಿಂದ ಅವಿರತವಾಗಿ ದುಡಿದಿದ್ದರೂ ಸಾಹಿತ್ಯ ವೇದಿಕೆಯ ಫೋಟೋ ಆಲ್ಬಂಗಳಲ್ಲಿ ಅವರಿರಲಿಲ್ಲ. ಅವರೇ ಅನುವಾದಿಸಿದ ಕೃತಿಗಳೆಲ್ಲ ವಿವಿಧ ವೇದಿಕೆಗಳಲ್ಲಿ

ಅನೇಕ ಸಾಹಿತಿಗಳ ಕೈಯಲ್ಲಿ ಬಿಡುಗಡೆಗೊಳ್ಳುವ ಸಂದರ್ಭ ವೇದಿಕೆಯ ಕೆಳಗೆ ಕೂತು ತಣ್ಣಗೆ ಮತ್ತು ಮೌನವಾಗಿ ಅವನ್ನೆಲ್ಲ ಕಣ್ತುಂಬಿಕೊಂಡು ಅಪರಿಚಿತರಂತೆ ಹೊರಟು ಹೋಗುತ್ತಿದ್ದರು. ಮುಸ್ಲಿಮ್ ಲೇಖಕರ ಸಂಘವು ಅತ್ಯುತ್ತಮ ಅನುವಾದ ಕ್ರತಿಗೆ ಪ್ರಶಸ್ತಿ ಘೋಷಿಸಿದಾಗ ಹಾಗೂ ಅವರನ್ನು ಹಿರಿಯ ಸಾಹಿತಿ ಎಂಬ ನೆಲೆಯಲ್ಲಿ ಸನ್ಮಾನಿಸಲು ತೀರ್ಮಾನಿಸಿದಾಗ ಅದನ್ನು ನಯವಾಗಿ ನಿರಾಕರಿಸಿದ್ದರು.

ಇಸ್ಲಾಮಿನ ಕುರಿತು ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಬೇಕೆಂಬ ಮಹತ್ಕಾರ್ಯಕ್ಕೆ ನೂರಾರು ಸಾಹಿತ್ಯಗಳನ್ನು, ಮುಸ್ಲಿಮ್ ಹಾಗೂ ಮುಸ್ಲಿಮೇತರರ ನಡುವೆ ಹಂಚುತ್ತಿದ್ದರು. ಜಮಾತೆ ಇಸ್ಲಾಮಿ ಹಿಂದ್ ಉಪ್ಪಿನಂಗಡಿ ಸ್ಥಾನೀಯ ಸಂಚಾಲಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದ ಅವರು ಹಿದಾಯತ್ ಚಾರಿಟೇಬಲ್ ಟ್ರಸ್ಟ್, ಸನ್ಮಾರ್ಗ ಪಬ್ಲಿಕೇಶನ್ ಟ್ರಸ್ಟ್, ಶಾಂತಿ ಪ್ರಕಾಶನ, ಮುಸ್ಲಿಮ್ ಲೇಖಕರ ಸಂಘ, ಬಡ್ಡಿರಹಿತ ಸಾಲ ಮತ್ತು ಕಲ್ಯಾಣ ಸಂಸ್ಥೆ, ಆಯಿಶಾ ಎಜುಕೇಶನ್ ಟ್ರಸ್ಟ್ ಹಾಗೂ ಮಸ್ಜಿದುಲ್ ಹುದಾ, ಇಸ್ಲಾಮಿಯ ಮದ್ರಸ ಮುಂತಾದ ಸಂಸ್ಥೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ.

ಉಪ್ಪಿನಂಗಡಿಯ ಬಟ್ಟೆ ಉದ್ಯಮಿ ಕೆ.ಎಂ.ಶಾಫಿ–ಆಯಿಶಾ ದಂಪತಿಯ ಹಿರಿಯ ಮಗಳು ಕೆ.ಆಮಿನಾರನ್ನು ವಿವಾಹವಾಗಿದ್ದ ಅವರು 4 ಗಂಡು ಮತ್ತು 3 ಹೆಣ್ಣು ಮಕ್ಕಳ ತಂದೆಯಾಗಿದ್ದರು. ತನ್ನ ಅಲ್ಪ ವೇತನದಲ್ಲಿ ಬಹಳ ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ಯಾವುದೇ ಕೊರತೆ ಗೋಚರಿಸದಂತೆ ಕುಟುಂಬವನ್ನು ನಿಭಾಯಿಸಿದ್ದರು. ಜೀವನದ ಕೊನೆಯವರೆಗೂ ಬಹಳ ಉತ್ಸಾಹದಿಂದ ಕಾರ್ಯನಿರತರಾಗಿದ್ದರು. ಮರಣದ 2 ದಿನ ಮೊದಲು ಬೆಂಗಳೂರಿನಲ್ಲಿ ನಡೆದ ಬರಹಗಾರರ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತನ್ನ ಅನುಭವವನ್ನು ಹಂಚಿಕೊಂಡು, ಮಾರ್ಗದರ್ಶನವನ್ನು ನೀಡಿದ್ದರು. ಉದಯೋನ್ಮುಖ ಯುವ ಬರಹಗಾರರಿಗೆ ಅವರು ಸ್ಫೂರ್ತಿಯ ಸೆಲೆಯಾಗಿದ್ದರು.

2014ರ ಆಗಸ್ಟ್ 19ರಂದು ತನ್ನ ದ್ವಿಚಕ್ರ ವಾಹನದಲ್ಲಿ ಮನೆಗೆ ಮರಳುತ್ತಿರುವಾಗ ನಡೆದ ಅಪಘಾತದಲ್ಲಿ ಮೃತಪಟ್ಟಾಗ ಅವರಿಗೆ 72 ವರ್ಷ ಪ್ರಾಯವಾಗಿತ್ತು.

## ವಿದ್ಯಾದಾಹಿ ಹಾಜಿ ಕೆ.ಅಚ್ಚಬ್ಬ ಮಾಸ್ಟರ್ ಮೂಲರಪಟ್ನ



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೂಲರಪಟ್ನದ ಕುಳವೂರು ಎಂಬಲ್ಲಿ ಹಮ್ಮಬ್ಬ–ಫಾತಿಮಾ ದಂಪತಿಯ ಪುತ್ರನಾಗಿ 1927ರ ಎಪ್ರಿಲ್ 10ರಂದು ಜನಿಸಿದ ಕೆ.ಅಚ್ಚಬ್ಬ ಮಾಸ್ಟರ್ ಆ ಕಾಲದಲ್ಲೇ ಉತ್ತಮ ಶಿಕ್ಷಣ ಪಡೆದಿದ್ದರು. ಬಡತನದಿಂದಾಗಿ ತನ್ನ ಮನೆಯ ಅಂಗಳದಲ್ಲೇ ಕೋಳಿ ಸಾಕಿ ಮಾರಾಟ ಮಾಡಿ ಬಂದ ಹಣದಲ್ಲಿ ವಿದ್ಯಾಭ್ಯಾಸ ಪಡೆದರು. ಪಾಣೆಮಂಗಳೂರು ಹಯಾತುಲ್ ಇಸ್ಲಾಂ ಶಾಲೆಯಲ್ಲಿ ಅಧ್ಯಾಪಕರಾಗಿದ್ದು, ನಂತರ ಅದೇ ಶಾಲೆಯ ಮುಖ್ಯ ಶಿಕ್ಷಕರಾಗಿ ನಿವೃತ್ತಿ ಹೊಂದಿದರು. ಆಗಿನ ಶಾಸಕಿ ಲೀಲಾವತಿ ರೈಯ ಆಪ್ತ ವಲಯದಲ್ಲಿದ್ದ ಅವರು 1967ರಲ್ಲಿ ಬಂಟ್ವಾಳ ತಾಲೂಕು ಕಾಂಗ್ರೆಸ್ ಘಟಕದ ಅಧ್ಯಕ್ಷರೂ ಆಗಿದ್ದರು. ಬಿಸಿರೋಡ್ ವ್ಯವಸಾಯ ಸೇವಾ ಸಹಕಾರಿ ಸಂಘದ ನಿರ್ದೇಶಕರಾಗಿ, ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಅವರು ಹಲವಾರು ಅನಕ್ಷರಸ್ಥ ಬಡ ಕುಟುಂಬಗಳಿಗೆ ಸರ್ಕಾರದ ಸವಲತ್ತುಗಳನ್ನು ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಕಷ್ಟದಲ್ಲಿದ್ದೇವೆ ಎಂದು ಯಾರೇ ಹೇಳಿಕೊಂಡು ಬಂದರೂ ಕೂಡ ತಕ್ಷಣ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತಿದ್ದರು. ಊರಲ್ಲಿ ಯಾವುದೇ ಸಮಸ್ಯೆ ಅಥವಾ ವ್ಯಾಜ್ಯ ಎದುರಾದರೆ ಗ್ರಾಮಸ್ಥರು ಅಚ್ಚಬ್ಬ ಮಾಸ್ಟರ್ ಬಳಿ ಬರುತ್ತಿದ್ದುದು. ಎಲ್ಲರ ವಾದಗಳನ್ನೂ ಆಲಿಸಿ, ನ್ಯಾಯ ಪಂಚಾಯಿತಿ ಮಾಡುವ ಮೂಲಕ ಊರಿನ ಮುತ್ಸದ್ಧಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅವರು ತಮ್ಮ ಸಹೋದ್ಯೋಗಿ ಗೋಪಾಲಕೃಷ್ಣ ಪ್ರಭು ಅವರ ಜೊತೆಗೂಡಿ "ಶಿಕ್ಷಕವಾಣಿ" ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಉಪ ಸಂಪಾದಕರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಎರಡು ಬಾರಿ ಹಜ್ ನಿರ್ವಹಿಸಿದ್ದ ಅವರು ನುಡಿದಂತೆ ನಡೆಯುತ್ತಿದ್ದರು. ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಆದರ್ಶಗಳಿಗೆ ಬದ್ಧರಾಗಿ ಬದುಕಿದ್ದರು. ಆಗಿನ ಕಾಲದಲ್ಲೇ ಪ್ರಗತಿಪರ ಚಿಂತನೆ ಹೊಂದಿದ್ದ ಅವರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಇಡೀ ಕುಟುಂಬಕ್ಕೇ ಶಿಕ್ಷಣ ಕೊಡಿಸಿದಂತೆ ಎಂದು ದೃಢವಾಗಿ ನಂಬಿದ್ದರು. ಅದಕ್ಕೆ ಅನುಗುಣವಾಗಿ, ಮಹಿಳಾ ಶಿಕ್ಷಣಕ್ಕೆ ಒತ್ತು ಕೊಟ್ಟರು. ತನ್ನ ಹೆಣ್ಣುಮಕ್ಕಳಿಗೂ ಆಗಿನ ಕಾಲದಲ್ಲೇ ಪದವಿ ಶಿಕ್ಷಣ ಕೊಡಿಸಿದರು. ಅಧಿಕಾರಕ್ಕಾಗಿ ಎಂದೂ ಆಸೆ ಪಡದೆ ಜೀವಿಸಿದರು. ಬಂಟ್ವಾಳ ತಾಲೂಕು ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿದ್ದ ಅವರು, ಶಿಕ್ಷಕರ ಪ್ರತಿನಿಧಿಯಾಗಿ ರಾಜ್ಯಮಟ್ಟದ ಸಮಾವೇಶಗಳಲ್ಲಿ ಭಾಗವಹಿಸಿದ್ದರು.

ಶಾಲಾ ಶಿಕ್ಷಣ ಪಡೆದಿದ್ದ ಅಚ್ಚಬ್ಬ ಮಾಸ್ಟರ್‌ಗೆ ಮದ್ರಸ ಶಿಕ್ಷಣ ಕಲಿಯಲು ಅವಕಾಶ ಸಿಕ್ಕಿರಲಿಲ್ಲ. ಆದರೆ ಅವರು ವಿದ್ಯಾದಾಹಿಯಾಗಿದ್ದರು. ಹಾಗಾಗಿ, ತಾವು ಅಧ್ಯಾಪಕರಾದ ಬಳಿಕ ತಮ್ಮ ಸ್ವಪ್ರಯತ್ನದಿಂದ ಅರೆಬಿಕ್ ಭಾಷೆಯನ್ನು ಕಲಿತರು. ಅದೇ ರೀತಿ ಮಲಯಾಳಂ ಭಾಷೆಯನ್ನೂ ಕಲಿತು ಓದಲು ಮತ್ತು ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದರು. ತಾವು ಕಲಿಸುತ್ತಿದ್ದ ಶಾಲೆಯ ಪಕ್ಕದಲ್ಲೇ ಸಂಜೆಯ ನಂತರ ಮದರಸ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲಾಗುತ್ತಿತ್ತು. ತಾನು ಅಧ್ಯಾಪಕರಾಗಿದ್ದರೂ ಅಚ್ಚಬ್ಬ ಮಾಸ್ಟರ್ ಆ ಮದರಸದ ಹೊರಗೆ ಕುಳಿತು, ಮಕ್ಕಳಿಗೆ ಹೇಳಿ ಕೊಡುವುದನ್ನು ಕೇಳಿ, ನೋಡಿ ಕುರಾನ್ ಕಲಿತು ಅಪಾರ ಜ್ಞಾನವನ್ನು ಗಳಿಸಿದ್ದರು. ತದನಂತರ ಕುರಾನ್ ಗ್ರಂಥವನ್ನು ಸುಶ್ರಾವ್ಯವಾಗಿ ಓದುತ್ತಿದ್ದರು. ಯಾವುದೇ ಜಾತಿ–ಧರ್ಮಗಳ ಭೇದ ಕಿಂಚಿತ್ತೂ ಇಲ್ಲದೆ, ಸಾಮರಸ್ಯ ಹಾಗೂ ಸೌಹಾರ್ದದ ಚಿಲುಮೆಯಾಗಿ ಬದುಕಿದರು. ಅವರ ಬಳಿ ವಿದ್ಯಾಭ್ಯಾಸ ಪಡೆದ ಹಲವು ವಿದ್ಯಾರ್ಥಿಗಳು ಈಗ ಸಮಾಜದಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ.

ಪತ್ನಿ ಸಾರಮ್ಮ. ಎರಡು ಹೆಣ್ಣು ಮತ್ತು ನಾಲ್ಕು ಗಂಡು ಮಕ್ಕಳೊಂದಿಗೆ ಸಂತೃಪ್ತ ಜೀವನ ನಡೆಸಿದ್ದ ಅವರು 2010ರ ನವೆಂಬರ್ 01ರಂದು ನಿಧನರಾದರು.

# ಹೂ ಮನಸ್ಸಿನ ಭಾವಜೀವಿ ಅಬ್ದುಲ್ ರಹೀಮ್ ಟೀಕೆ



ಅಬ್ದುಲ್ ರಹೀಂ ಟೀಕೆ ವೃತ್ತಿಯಲ್ಲಿ ಓರ್ವ ಉದ್ಯಮಿ ಹಾಗೂ ಒಳಾಂಗಣ ವಿನ್ಯಾಸದ ಹೆಸರಾಂತ ಸಂಸ್ಥೆ ಟೀಕೇಸ್ ಗ್ರೂಪ್‌ನ ನಿರ್ದೇಶಕ. ಆದರೆ ಹವ್ಯಾಸದಲ್ಲಿ ಓರ್ವ ಕವಿ, ಲೇಖಕ, ಸಾಹಿತಿ. ಜೊತೆಗೆ ಸಮಾಜದ ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ಕಳಕಳಿ ಇದ್ದ ಒಬ್ಬ ಭಾವಜೀವಿ.

ಜೋಕಟ್ಟೆಯ ಪ್ರಖ್ಯಾತ ಗುತ್ತಿಗೆದಾರ ಬಾವಾ ಅಬ್ದುಲ್ ಖಾದರ್ ಹಾಗೂ ಮಂಗಳೂರಿನ ಪ್ರತಿಷ್ಠಿತ "ಪದಿನಾರಗ" ಮನೆತನರದ ಕುಂಞರಕಾನ ಕುಟುಂಬದ ಸಲ್ಮಾ ದಂಪತಿಯ ಪುತ್ರನಾಗಿ 1953ರ ಎಪ್ರಿಲ್ 12ರಂದು ಜೋಕಟ್ಟೆಯಲ್ಲಿ ಜನಿಸಿದ ಅಬ್ದುಲ್ ರಹೀಂ ಟೀಕೆ ಅವರು 5ನೇ ತರಗತಿಯವರೆಗೆ ಭದ್ರಾವತಿಯಲ್ಲಿ ಶಿಕ್ಷಣ ಪಡೆದು ಬಜ್ಪೆಯಲ್ಲಿ ಮುಂದಿನ ಶಿಕ್ಷಣ ಪಡೆದರು. ಮಂಗಳೂರಿನ ಸರಕಾರಿ ಕಾಲೇಜಿನಿಂದ ಬಿ.ಕಾಂ ಪದವಿ ಪಡೆದರು.

1998ರಲ್ಲಿ ಮಂಗಳೂರಿನಲ್ಲಿ ನಡೆದ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದ ಸಂಚಾಲಕರಾಗಿ ಬ್ಯಾರಿ ಸಾಹಿತ್ಯ ಲೋಕಕ್ಕೆ ಪದಾರ್ಪಣೆ ಮಾಡಿದರು. ಆ ಬಳಿಕ ಅವರು ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ತಿನ ಸ್ಥಾಪಕ ಅಧ್ಯಕ್ಷರಾಗಿ, 1999ರಲ್ಲಿ ಬಂಟ್ವಾಳದಲ್ಲಿ ನಡೆಸಿದ ಎರಡನೇ ಮತ್ತು 2001ರಲ್ಲಿ ಉಡುಪಿಯಲ್ಲಿ ನಡೆದ ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನಗಳ ಯಶಸ್ವಿಗೆ ಕಾರಣರಾದರು. ಅಲ್ಲದೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಪ್ರಮುಖ ಕಾರಣಕರ್ತರಾದರು.

ವೃತ್ತಿಯಲ್ಲಿ ಉದ್ಯಮಿಯಾಗಿದ್ದರೂ ಅವರು ಸಾಹಿತ್ಯದ ಬಹಳ ದೊಡ್ಡ ಉಪಾಸಕರು. ಕನ್ನಡ ಮತ್ತು ಬ್ಯಾರಿ ಭಾಷೆಗಳಲ್ಲಿ ಕಾವ್ಯಮಯವಾಗಿ ಬರೆಯುವ ಮತ್ತು ಸುಲಲಿತವಾಗಿ ಮಾತಾಡುವ ಕಲೆ ಅವರಿಗೆ ಅನುಗ್ರಹಿತವಾಗಿತ್ತು. ಅವರು ಬರೆದ ಹಲವಾರು ಲೇಖನ, ಕತೆ, ಕವನಗಳು ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇಂಗ್ಲಿಷ್‌ನಲ್ಲೂ ಅವರು ತಮ್ಮ ವಿಚಾರಧಾರೆಗಳನ್ನು ಅವರದೇ ಜನಪ್ರಿಯ ಬ್ಲಾಗ್‌ನಲ್ಲಿ ಪ್ರಕಟಿಸುತ್ತಿದ್ದರು. ಹೆಸರಾಂತ ಚಿಂತಕ ಪೌಲೋ ಕೊಯೆಲ್ಲೊ ಬರೆದ ಜಗತ್ಪ್ರಸಿದ್ಧ ಕೃತಿ "ಅಲ್‌ಕೆಮಿಸ್ಟ್"ನ್ನು "ರಸವಾದಿ" ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದರು. ಈ ಕೃತಿಯು ಸಪ್ನಾ ಬುಕ್ ಹೌಸ್‌ನ ಬೆಸ್ಟ್ ಸೆಲ್ಲರ್ಸ್ ಪಟ್ಟಿಯಲ್ಲಿ ಹಲವು ತಿಂಗಳುಗಳ ಕಾಲ ಅಗ್ರಶ್ರೇಣಿಯಲ್ಲಿತ್ತು.

ಬದುಕಿನ ವೈವಿಧ್ಯಮಯ ಅನುಭವಗಳಿಂದ ಪರಿಪಕ್ವಗೊಂಡಿದ್ದಂತಹ ಅವರ ನೂರಾರು ಕವಿತೆಗಳು, ತಮ್ಮ ಆಳವಾದ ಚಿಂತನೆ ಮತ್ತು ಅನನ್ಯ ಶೈಲಿಯಿಂದಾಗಿ ವಿಮರ್ಶಾತ್ಮಕವಾಗಿಯೂ ಬಹಳಷ್ಟು ಮೆಚ್ಚುಗೆಗೆ ಪಾತ್ರವಾಗಿದ್ದವು. 2014ರಲ್ಲಿ ಅವರು ಪ್ರಕಟಿಸಿದ "ಮಲ್ಲಿಗೆ ಬಲ್ಲಿ" ಬ್ಯಾರಿ ಕವನ ಸಂಕಲನವು ಅವರಿಗೆ ಅಪಾರವಾದ ಜನಪ್ರಿಯತೆಯನ್ನು ತಂದುಕೊಟ್ಟಿತ್ತು.

ಅಬ್ದುಲ್ ರಹೀಂ ಟೀಕೆಯವರು 2019ರ ಫೆಬ್ರವರಿ 15ರಂದು ತನ್ನ 65ನೇ ವರ್ಷದಲ್ಲಿ ಅಲ್ಪಕಾಲದ ಅಸೌಖ್ಯದಿಂದ ಅಪಾರ ಬಂಧು ಬಳಗ ಮತ್ತು ಅಸಂಖ್ಯಾತ ಅಭಿಮಾನಿಗಳನ್ನು ಅಗಲಿ ವಿಧಿವಶರಾದರು. ಅವರ ಪತ್ನಿ ಬೀಬಿ ಫಾತೀಮಾ ಪ್ರತಿಷ್ಠಿತ ಮಂಗಳೂರು ಬಂದರ್‌ನ "ಪೌನಾರಗ" ಮನೆತನದ "ಕಾಯರಕಾನ" ಕುಟುಂಬದವರು. ಅವರ ಹಿರಿಯ ಪುತ್ರ ರಾಹಿಲ್ ಟೀಕೆ ಆರ್ಕಿಟೆಕ್ಟ್ ಮತ್ತು ಉದ್ಯಮಿ. ಎರಡನೇ ಪುತ್ರ ಹಸೀಬ್ ಟೀಕೆ ದ್ವಿತೀಯ ಪಿಯು.ಸಿ ವಿದ್ಯಾರ್ಥಿ.

ಅಬ್ದುಲ್ ರಹೀಂ ಟೀಕೆ ಈ ನೆಲದ ಬಾಷೆ ಮತ್ತು ಸಂಸ್ಕೃತಿಯ ಅಪ್ಪಟ ಅಭಿಮಾನಿಯಾಗಿದ್ದರು ಅನ್ನುವುದಕ್ಕೆ ಅವರ ಬದುಕು ಮತ್ತು ಬರಹಗಳೇ ಸಾಕ್ಷಿಯಾಗಿದೆ. ಬ್ಯಾರಿ ಭಾಷೆ ಮತ್ತು ಸಾಹಿತ್ಯದ ಪುನರುತ್ಥಾನದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದ ಅವರನ್ನು ಸಮುದಾಯವು "ಬ್ಯಾರಿ ಆಂದೋಲನದ ರೂವಾರಿ' ಎಂದು ಈಗಲೂ ಗುರುತಿಸುತ್ತಿದೆ.

# ಪಟೇಲರ ಕಾಲದ ಪಂಚಾಯತಿಗೆದಾರ
# ಮಡ್ಮಣ್ ಅಬೂಬಕ್ಕರ್ ಬ್ಯಾರಿ

ಉಡುಪಿ ಜಿಲ್ಲೆಯ ಕನ್ನಂಗಾರ್ ಸಮೀಪದ ಮಡ್ಮಣ್ ಎಂಬಲ್ಲಿ ಸೂಫಿಬ್ಯಾರಿ-ಉಮಾತುಮ್ಮಾ ದಂಪತಿಯ ಪುತ್ರನಾಗಿ 1875ರಲ್ಲಿ ಜನಿಸಿದ ಮಡ್ಮಣ್ ಅಬೂಬಕರ್ ಬ್ಯಾರಿ ಅವರು ಪಟೇಲರ ಕಾಲದ ಪ್ರಮುಖ ಪಂಚಾಯತಿದಾರನಾಗಿ ಗುರುತಿಸಲ್ಪಟ್ಟಿದ್ದರು.

ಅದು 1875-1900ರ ಕಾಲ. ಅಂದು ಪ್ರತಿಯೊಂದು ಊರು ಪಟೇಲರ ಅಧೀನದಲ್ಲಿತ್ತು. ಪರಿಸರದಲ್ಲಿ ಯಾವುದೇ ತಕರಾರು ಆದಾಗ ಆ ಪಟೇಲರ ಬಳಿ ದೂರು ಹೋಗುತ್ತಿತ್ತು. ಆ ದೂರನ್ನು ಅವರು ಕಿನ್ಯಣ್ಣ ಬಳ್ಳಾಲ್ ಎಂಬವರಿಗೆ ನೀಡಲು ಸೂಚಿಸುತ್ತಿದ್ದರು. ಅದರಂತೆ ಆ ದೂರನ್ನು ಬಳ್ಳಾಲರಿಗೆ ನೀಡಲಾಗುತ್ತಿತ್ತು. ಬಳ್ಳಾಲರಿಗೆ ಪಂಚಾಯತಿ ಕಟ್ಟೆಯಲ್ಲಿ ರಾಜಿ ಇತ್ಯರ್ಥ ಪಡಿಸಲು ಮಡ್ಮಣ್ ಅಬೂಬಕರ್ ಬ್ಯಾರಿ, ಸುಬ್ಬಣ್ಣ ಗುರಿಕಾರ, ಮಹೇಶ್ ಹೆಗ್ಡೆ ಎಂಬ ಮೂವರು ಪಂಚಾಯತಿದಾರರು ಸಹಕರಿಸುತ್ತಿದ್ದರು. ಆ ಪೈಕಿ ಮಡ್ಮಣ್ ಅಬೂಬಕರ್ ಬ್ಯಾರಿ ಪ್ರಮುಖ ಪಂಚಾಯತಿದಾರರಾಗಿದ್ದರು.

ಅವರು ನಡೆಸುವ ಪಂಚಾಯಿತಿಗೆಯ ತೀರ್ಮಾನ ಅಂತಿಮವಾಗುತಿತ್ತು. ಅವರು ನೀಡುವ ತೀರ್ಪಿನ ಬಳಿಕ ಯಾವುದೇ ಅಪೀಲು ಇರುತ್ತಿರಲಿಲ್ಲ. ಆದರೆ ಅವರ ತೀರ್ಪು ಬಡವರ, ಶೋಷಿತರ ಪರವಾಗಿರುತ್ತಿತ್ತು. ಅವರ ಸೇವೆಯನ್ನು ಗಮನಿಸಿ ಕಿನ್ಯಣ್ಣ ಬಳ್ಳಾಲರು ಅವರ ಆಸ್ತಿಯನ್ನೇ ನೀಡಿದ್ದರು ಎಂದು ಅವರ ಕುಟುಂಬಸ್ಥರು ಹೇಳುತ್ತಾರೆ. ಆ ಕೃಷಿ ಭೂಮಿಯಲ್ಲಿ ಕೃಷಿ ನಡೆಸುವ ಮೂಲಕ ಉತ್ತಮ ಕೃಷಿಕರೂ ಆಗಿದ್ದರು. ಆ ಆಸ್ತಿಯನ್ನು ಬಿಟ್ಟು ಬಳಿಕ ಕನ್ನಂಗಾರ್‌ನಲ್ಲಿ ವಾಸವಾಗಿದ್ದರು.

ಅಂದಿನ ದಿನಗಳಲ್ಲಿ ಮಸೀದಿಗೆ ಅಧ್ಯಕ್ಷರು ಅಂತ ಇರಲಿಲ್ಲ. ಒಬ್ಬರು ಮುಖ್ಯಸ್ಥರು ಮತ್ತು ನಾಲ್ಕು ಮಂದಿ ಸದಸ್ಯರು ಇರುತ್ತಿದ್ದರು. ಮಡ್ಮಣ್ ಅಬೂಬಕರ್ ಬ್ಯಾರಿ ಕನ್ನಂಗಾರ್ ಮಸೀದಿಯ ಮುಖ್ಯಸ್ಥರೂ ಆಗಿದ್ದರು. ಆವಾಗ ಪಡುಬಿದ್ರಿ, ಹೆಜಮಾಡಿ, ಕನ್ನಂಗಾರ್, ಫಲಿಮಾರು, ಇನ್ನಾ, ಕಾಂಜರಕಟ್ಟೆ ಪ್ರದೇಶವು ಜಮಾಅತ್ ಆಗಿತ್ತು.

ಸುಮಾರು 80 ವರ್ಷಗಳ ಕಾಲ ಬದುಕಿದ್ದ ಅವರು ಇಬ್ಬರು ಪತ್ನಿಯರು, ಇಬ್ಬರು ಪುತ್ರರು ಮತ್ತು ನಾಲ್ಕು ಮಂದಿ ಹೆಣ್ಣು ಮಕ್ಕಳನ್ನು 1955ರಲ್ಲಿ ಬಿಟ್ಟಗಲಿದರು.

# ಸಾಮಾಜಿಕ ಧುರೀಣ ಅಬ್ಬಾಸ್ ಹಾಜಿ ಕೆಮ್ಮಾರ



ಅಧುನಿಕ ಕೆಮ್ಮಾರದ ರೂವಾರಿ ಎಂದು ಕರೆಯಲ್ಪಡುವ ಅಬ್ಬಾಸ್ ಹಾಜಿ ಕೆಮ್ಮಾರ ಜನಿಸಿದ್ದು ಆತೂರಿನಲ್ಲಿ. 1958ರಿಂದ ಇಹಲೋಕ ತ್ಯಜಿಸುವವರೆಗೂ "ಕೆಮ್ಮಾರ"ದಲ್ಲಿ ಅವರು ವಾಸವಾಗಿದ್ದರು. ಹುಟ್ಟಿದ್ದು ಆತೂರಿನಲ್ಲಾದರೂ ಮೆರೆದದ್ದು ಕೆಮ್ಮಾರದಲ್ಲಿ ಆದ ಕಾರಣ ಅಬ್ಬಾಸ್ ಹಾಜಿ ಕೆಮ್ಮಾರ ಎಂದೇ ಪ್ರಖ್ಯಾತರಾಗಿದ್ದರು.

ಇದ್ದಿನಬ್ಬ (ಕುಂಟ ಬ್ಯಾರಿ)–ಆಯಿಶ ಉಮ್ಮ ದಂಪತಿಯ ಪುತ್ರನಾಗಿ 01.01.1934ರಲ್ಲಿ ಜನಿಸಿದ ಅಬ್ಬಾಸ್ ಹಾಜಿ ಅವಿದ್ಯಾವಂತರು. ಆದರೆ ತನ್ನ ಬುದ್ಧಿಮತ್ತೆಯಿಂದ ವಿದ್ಯಾವಂತರನ್ನೂ ಮಾತಿನಲ್ಲಿ ಮಣಿಸುವ ಛಾತಿ ಹೊಂದಿದ್ದರು. ಮರದ ಉದ್ಯಮದ ಜೊತೆಗೆ ಅಪಾರ ಕೃಷಿ ಭೂಮಿಯನ್ನು ಹೊಂದಿದ್ದ ಅವರು ಕೆಮ್ಮಾರ ಮುಹಿಯದ್ದೀನ್ ಜುಮಾ ಮಸ್ಜಿದ್‌ನ ಸುದೀರ್ಘಕಾಲ ಅಧ್ಯಕ್ಷರಾಗಿ, ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ಸಂದರ್ಭ ರಾಜ್ಯ ವಕ್ಫ್ ಬೋರ್ಡ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಮುಸ್ಲಿಂ ಲೀಗ್‌ನ ನಾಯಕರೂ ಆಗಿದ್ದ ಅವರು 1984ರ ವಿಧಾನ ಸಭಾ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಿಂದ ಮುಸ್ಲಿಂ ಲೀಗ್ ಪಕ್ಷದಿಂದ ಕಣಕ್ಕಿಳಿದಿದ್ದರು, ಕರ್ನಾಟಕ ರಾಜ್ಯ ಮುಸ್ಲಿಂ ಲೀಗಿನ ಸಮಿತಿ ಸದಸ್ಯ ಮತ್ತು ಪುತ್ತೂರು ತಾಲೂಕು ಸಮಿತಿಯ ಅಧ್ಯಕ್ಷರಾಗಿದ್ದರು. ಉಪ್ಪಿನಂಗಡಿಯ ಜೂನಿಯರ್ ಕಾಲೇಜ್‌ನ ಸ್ಥಾಪಕರಲ್ಲಿ ಓರ್ವರಾಗಿದ್ದ ಅವರು ಕಾಲೇಜಿನ ಅಭಿವೃದ್ಧಿ ಸಮಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಹಿರೇಬಂಡಾಡಿ ಗ್ರಾಪಂ ಸದಸ್ಯರಾಗಿ, ಸರಕಾರಿ ಸೇವಾ ಸಂಘದ ನಿರ್ದೇಶಕರಾಗಿ, ಕುಂಬ್ರ ಮರ್ಕಝುಲ್ ಹುದಾ ಮಹಿಳಾ ಕಾಲೇಜಿನ ಸ್ಥಾಪಕ ಸದಸ್ಯರಾಗಿದ್ದ ಅವರು ಹಲವಾರು ಧಾರ್ಮಿಕ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದರು, ಹಿರಿಯ ಉಲಮಾ–ಉಮಾರಾಗಳ ನಿಕಟ ಸಂಬಂಧ ಹೊಂದಿದ್ದ ಅವರು ಕೆಮ್ಮಾರ ಸರಕಾರಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಸಾಮಾಜಿಕ, ಧಾರ್ಮಿಕ, ಕ್ರೀಡೆ, ರಾಜಕೀಯ ಕ್ಷೇತ್ರದಲ್ಲಿ ತನ್ನಿಂದಾದ ಸೇವೆ ಸಲ್ಲಿಸುತ್ತಿದ್ದ ಅವರು ಕೊಡುಗೈದಾನಿಯೂ ಆಗಿದ್ದರು. ಅವರ ಈ ಎಲ್ಲಾ ಸೇವೆಯನ್ನು ಪರಿಗಣಿಸಿ ಹಲವು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ.

ಮೂವರು ಪತ್ನಿಯರಲ್ಲಿ ಇಪ್ಪತ್ತು ಮಂದಿ ಮಕ್ಕಳ ಸಹಿತ ಮೊಮ್ಮಕ್ಕಳು ಮತ್ತು ಮರಿಮಕ್ಕಳು ಎಂದೆಲ್ಲಾ 263 ಮಂದಿಯ ತುಂಬು ಕುಟುಂಬವನ್ನು ಅವರು 2008ರ ಜೂನ್ 9ರಂದು ಬಿಟ್ಟಗಲಿದರು.

# ಸಮಾಜ ಸೇವಕ ಹಾಜಿ ಎಸ್. ಇಬ್ರಾಹೀಂ ಕಮ್ಮಾಡಿ



ಪುತ್ತೂರು ತಾಲೂಕಿನ ಸರ್ವೆ ಗ್ರಾಮದ ಸೊಂಪಾಡಿಯಲ್ಲಿ ಪುತ್ತಬ್ಬ–ಬೀಫಾತಿಮಾ ದಂಪತಿಯ ನಾಲ್ಕನೆಯ ಪುತ್ರನಾಗಿ 1945ರ ಅಕ್ಟೋಬರ್ 2ರಂದು ಹಾಜಿ ಎಸ್. ಇಬ್ರಾಹೀಂ ಕಮ್ಮಾಡಿ ಜನಿಸಿದರು.

ಆರ್ಥಿಕವಾಗಿ ತೀರಾ ಹಿಂದುಳಿದ ಕುಟುಂಬದಲ್ಲಿ ಹುಟ್ಟಿದ ಇಬ್ರಾಹೀಂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಊರಲ್ಲೇ ಪಡೆದರು.

ಬಳಿಕ ಕೂರ್ನಡ್ಕದಲ್ಲಿ ಜಿನಸಿ ವ್ಯಾಪಾರ ಆರಂಭಿಸಿದರು. ಹಾಗೇ ಸುಳ್ಯದಲ್ಲಿ ಗೇರುಬೀಜ ವ್ಯಾಪಾರದಲ್ಲೂ ತೊಡಗಿಸಿಕೊಂಡರು. ಬಡತನದ ಬೇಗ ಅರಿತಿದ್ದ ಇಬ್ರಾಹೀಂರಿಗೆ ಬಾಲ್ಯದಲ್ಲೇ ದೊಡ್ಡ ಉದ್ಯಮಿಯಾಗುವ ಕನಸಿತ್ತು. ವ್ಯಾಪಾರ ಕೈ ಹಿಡಿಯುತ್ತಲೇ ಮಲ್ನಾಡ್ ಇಂಡಸ್ಟ್ರೀಸ್‌ನಲ್ಲಿ ಪಾಲುದಾರರಾಗಿ ಸೇರ್ಪಡೆಗೊಂಡರು. ಹಾಗೇ ಚಿಕ್ಕಮಗಳೂರು, ಕೊಪ್ಪ, ಶೃಂಗೇರಿಯಲ್ಲಿ ಮರದ ವ್ಯಾಪಾರ ಆರಂಭಿಸಿದರು. ಕೆಲಕಾಲ ಘಟ್ಟಪ್ರದೇಶದಲ್ಲಿದ್ದ ಅವರು ಆರ್ಯಾಪು ಗ್ರಾಮದ ಸಂಪ್ಯ ಸಮೀಪದ ಕಮ್ಮಾಡಿ ಎಂಬಲ್ಲಿ ಮರದ ಮಿಲ್‌ವೊಂದನ್ನು ಖರೀದಿಸಿ "ಕಮ್ಮಾಡಿ ಪ್ಲೈವುಡ್" ಎಂದು ಹೆಸರಿನೊಂದಿಗೆ ಅಧಿಕೃತವಾಗಿ ಉದ್ಯಮ ರಂಗದಲ್ಲಿ ತೊಡಗಿಸಿಕೊಂಡರು. ವರ್ಷಗಳು ಉರುಳುತ್ತಲೇ ಈ ಕಂಪೆನಿಗೆ ಕೇಂದ್ರ ಸರಕಾರದ ಐಎಸ್ಐ/ಎಸ್ಐಒ ಮಾನ್ಯತೆಯನ್ನೂ ಪಡೆದಿದೆ.

ಉದ್ಯಮ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುತ್ತಲೇ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರದಲ್ಲೂ ತೊಡಗಿಸಿಕೊಂಡರು. ಸುಳ್ಯದಲ್ಲಿ ವ್ಯಾಪಾರ ನಡೆಸುತ್ತಿದ್ದಾಗ "ಮುಸ್ಲಿಂ ಸಂಯುಕ್ತ ಜಮಾಅತ್" ಸ್ಥಾಪಿಸಿ 12 ವರ್ಷಗಳ ಕಾಲ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಸಂಯುಕ್ತ ಜಮಾಅತ್ ಎಂಬ ಪರಿಕಲ್ಪನೆಯನ್ನು ಕರ್ನಾಟಕದಲ್ಲಿ ಮೊದಲು ಹುಟ್ಟು ಹಾಕಿದ ಕೀರ್ತಿ ಹಾಜಿ ಇಬ್ರಾಹೀಂ ಕಮ್ಮಾಡಿಗೆ ಸಲ್ಲುತ್ತದೆ.

ಬಳಿಕ 2002ರಲ್ಲಿ ಪುತ್ತೂರಿನಲ್ಲಿ ಸಂಯುಕ್ತ ಜಮಾಅತ್ ಸ್ಥಾಪಿಸಿ ಅದರ ಸ್ಥಾಪಕ ಅಧ್ಯಕ್ಷರಾಗಿದ್ದ ಅವರು ಕೊನೆಯ ಉಸಿರೆಳೆಯುವವರೆಗೆ ಅಂದರೆ ಸುಮಾರು 15 ವರ್ಷಗಳ ಕಾಲ ಅಧ್ಯಕ್ಷರಾಗಿದ್ದರು.

ಉಲೆಮಾಗಳನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದ ಅವರು ಹಿರಿಯ ವಿದ್ವಾಂಸರ ಸಲಹೆಯ ಮೇರೆಗೆ ಧಾರ್ಮಿಕ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದರು. ಕೊಡುಗೈ ದಾನಿಯಾಗಿದ್ದ ಅವರು ಸಂಪ್ಯದ ಕಮ್ಮಾಡಿ ಮೈದಾನದಲ್ಲಿ ಆಸ್ಪತ್ರೆಯನ್ನು ನಿರ್ಮಿಸಲು ಮುಂದಾಗಿದ್ದರು. ಅದರ ಕಾಮಗಾರಿ ಪ್ರಗತಿಯಲ್ಲಿರುವಾಗಲೇ ಅವರು ಇಹಲೋಕ ತ್ಯಜಿಸಿದ್ದಾರೆ.

ಕಮ್ಮಾಡಿ ಮಸೀದಿ, ತಿಂಗಳಾಡಿ ಜಂಕ್ಷನ್ ಮಸೀದಿ, ತಿಂಗಳಾಡಿ ದರ್ಬೆ ಮಸೀದಿ ನಿರ್ಮಾಣ ಕಾರ್ಯ ನಡೆಸಿದ್ದ ಅವರು ಬಡ, ಅನಾಥ ಹೆಣ್ಣು ಮಕ್ಕಳ ಮದುವೆ, ಶಿಕ್ಷಣ ಮತ್ತಿತರ ಕಾರ್ಯಗಳಿಗೆ ಧನ ಸಹಾಯ ನೀಡುತ್ತಾ ಗಮನ ಸೆಳೆದಿದ್ದರು.

ಕಮ್ಮಾಡಿಯ ತನ್ನ ಕಚೇರಿಯಲ್ಲಿ ನೂರಾರು ಬಡ ಮಕ್ಕಳಿಗೆ ಉಚಿತ ವಾಸ್ತವ್ಯದೊಂದಿಗೆ ಹಿಫ್ಲುಲ್ ಕುರ್‌ಆನ್ ತರಗತಿ ನಡೆಸಲು ವ್ಯವಸ್ಥೆ ಮಾಡಿದ್ದರು. ಕಮ್ಮಾಡಿಯಲ್ಲಿ ನಡೆಸಲ್ಪಡುತ್ತಿದ್ದ ಝುಹ್‌ರಬತುಲ್ ವುಮೆನ್ಸ್ ಕಾಲೇಜ್‌ನ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದರು. ಕಮ್ಮಾಡಿ ಇಸ್ಲಾಮಿಕ್ ಎಜುಕೇಶನ್ ಸ್ಥಾಪಿಸಿದ್ದರು. ಅನೇಕ ಮಸೀದಿ, ಮದ್ರಸಗಳ ನಿರ್ಮಾಣಕ್ಕೆ ಧನಸಹಾಯ ನೀಡಿದ್ದರು.

ಹಜ್ ಮತ್ತು ಉಮ್ರಾದ ಹೆಸರಿನಲ್ಲಿ ಖಾಸಗಿ ಟೂರಿಸಂನ ವಂಚನೆಯ ವಿರುದ್ಧ ಗುಡುಗಿದ್ದ ಅವರು ಪುತ್ತೂರು ಸಂಯುಕ್ತ ಜಮಾಅತ್ ವತಿಯಿಂದ 2010, 2011, 2012ರಲ್ಲಿ ಹಜ್ ಮತ್ತು ಉಮ್ರಾ ಯಾತ್ರೆಯ ವ್ಯವಸ್ಥೆ ಕಲ್ಪಿಸಿ ಗಮನ ಸೆಳೆದಿದ್ದರು.

ಅನಾರೋಗ್ಯ ಕಾಡಿದರೂ ಅದರಿಂದ ಕುಗ್ಗದೆ ಹುಮ್ಮಸ್ಸಿನಿಂದ ಅವರು ಸದಾ ಕಾರ್ಯ ನಿರ್ವಹಿಸುತ್ತಿದ್ದರು. 2020ರ ಸೆಪ್ಟಂಬರ್ 23ರಂದು ಹೃದಯಾಘಾತದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೊದಲ ಪತ್ನಿ ನಿಧನರಾದ ಬಳಿಕ ಅವರು ಮತ್ತೊಂದು ಮದುವೆಯಾಗಿದ್ದರು. ಮೊದಲ ಪತ್ನಿಯಲ್ಲಿ ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿ ಅವರಿಗಿದ್ದರು.

# ಮುಲ್ಕಿಯ ಸುಲ್ತಾನ ನೂರ್ ಮುಹಮ್ಮದ್



ರಾಷ್ಟ್ರೀಯ ಹೆದ್ದಾರಿ 66 (ಅಂದಿನ ರಾ.ಹೆ.17)ರಲ್ಲಿ ಹಾದು ಹೋಗುವಾಗ ಸಿಗುವ ಮುಲ್ಕಿಯ ಹೆಸರು ಇಂದು ಹೊರ ಊರವರ ಬಾಯಲ್ಲಿ ಕೇಳಿ ಬರಲು ಅಥವಾ ಮನಸ್ಸಲ್ಲಿ ಅಚ್ಚಳಿಯದೆ ಉಳಿಯಲು ನೂರ್ ಮುಹಮ್ಮದ್ ಕಾರಣಕರ್ತರು ಎಂದರೆ ತಪ್ಪಾಗಲಾರದು. ಯಾಕೆಂದರೆ ಅವರ ವ್ಯಕ್ತಿತ್ವವೇ ಅಂತಹದ್ದು. ಜಾತಿ, ಮತ, ಕುಲ, ದೀನ ದಲಿತರೆಂಬ ಭೇದ ಭಾವವಿಲ್ಲದೆ ಎಲ್ಲರ ಸೇವೆಯಲ್ಲಿ ತೊಡಗಿಸಿಕೊಂಡವರು. ಅವರು ಸಮಾಜದ ಮತ್ತು ಸಮುದಾಯದ ನೇತಾರರಾಗಿದ್ದರು. ರಾಜಕೀಯ, ಸಾಮಾಜಿಕ, ಧಾರ್ಮಿಕ ನಾಯಕನಾಗಿ ಮೆರೆದು ಇಂದಿಗೂ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವ ಅವರು ಮುಲ್ಕಿ ಸಹಿತ ಆಸುಪಾಸಿನ ಜನರಿಗೆ ಚಿರಪರಿಚಿತರಾಗಿದ್ದರು. ಹೆಸರಿಗೆ ತಕ್ಕಂತೆ "ನೂರ್" ಮುಲ್ಕಿಯ ಬೆಳಕಾಗಿದ್ದರು. ಬಪ್ಪಬ್ಯಾರಿಯ ವಂಶಸ್ಥರಾದ ನೂರ್ ಮುಹಮ್ಮದ್ ಈಗ ನಮ್ಮ ನಡುವೆ ಇಲ್ಲದಿದ್ದರೂ ಮುಲ್ಕಿಯ ಇತಿಹಾಸದಲ್ಲಿ ಅಜರಾಮರವಾಗಿರುವರು.

ಮುಲ್ಕಿಯ ಬೊಟ್ಟು ಮನೆತನದ ಇದ್ದಿನಬ್ಬ-ಝುಲೇಖಾ ದಂಪತಿಯ ನಾಲ್ಕು ಮಕ್ಕಳಲ್ಲಿ ಹಿರಿಯನಾಗಿ 1938ರ ಜನವರಿ 30ರಂದು ಹುಟ್ಟಿದ ನೂರ್ ಮುಹಮ್ಮದ್ ಮಂಗಳೂರಿನ ಹೆಸರಾಂತ "ಪೌನಾರಗ" ಮನೆತನದ ಐನ್‌ಕಾನ್ ಬೆಲೆ ಮೋನಾಕ ಯಾನೆ ಅಬ್ದುಲ್ ಖಾದರ್‌ರ ಪುತ್ರಿ ರುಕಿಯಾ ಅವರನ್ನು ಮದುವೆಯಾಗಿದ್ದರು. ಈ ದಂಪತಿಯ ಏಕೈಕ ಪುತ್ರ ಶಹಾದಾ ನೂರ್ ಪ್ರಸ್ತುತ ಅಮೇರಿಕಾದಲ್ಲಿ ಕುಟುಂಬ ಸಮೇತ ನೆಲೆಸಿದ್ದಾರೆ.

ತನ್ನ ಎಳೆಯ ವಯಸ್ಸಿನಲ್ಲಿಯೇ ರಾಜಕೀಯ ನೇತಾರನಾದರೂ ಯಾವುದೇ ಸ್ಥಾನಮಾನ ಅಥವಾ ಅಧಿಕಾರಕ್ಕೆ ಪೈಪೋಟಿ ನಡೆಸದೆ ರಾಜಕೀಯದಲ್ಲಿದ್ದುಕೊಂಡು ಹಣ, ಅಂತಸ್ತಿಗಾಗಿ ಹಾತೊರೆಯದೆ ತನ್ನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಕಾಂಗ್ರೆಸ್ ಪಕ್ಷಕ್ಕಾಗಿ ಧಾರೆಯೆರೆದರು. ರಾಜ್ಯದಲ್ಲಿ ಕಾಂಗ್ರೆಸ್‌ನ ಬೆನ್ನೆಲುಬಾಗಿ ನಿಂತು ರಾಜ್ಯಮಟ್ಟದ ನಾಯಕನಾಗಿ ಬೆಳೆದರು. ರಾಜ್ಯ ನಾಯಕರಲ್ಲದೆ ರಾಷ್ಟ್ರ ನಾಯಕರ ಜೊತೆಯೂ ತನ್ನ ಒಡನಾಟ ಬೆಳೆಸಿಕೊಂಡಿದ್ದರು. ಸಿಕ್ಕಿದ ಎಲ್ಲಾ ಅವಕಾಶವನ್ನು ಅವರು ಉತ್ತಮ ರೀತಿಯಲ್ಲಿ, ಸಂಯಮದಿಂದ ಬಳಸಿದರು.

ಅವರು ವಹಿಸಿಕೊಂಡ ಸ್ಥಾನಮಾನಗಳು ನೂರಾರು. ಅದು ಅವರ ನಾಯಕತ್ವ ಗುಣಕ್ಕೆ ಸಾಕ್ಷಿಯಾಗಿತ್ತು. ಸಮಾಜದ ಎಲ್ಲರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಿದ್ದ ಅವರು ಕಾಂಗ್ರೆಸ್ ಪಕ್ಷದ ರಾಜ್ಯದ ವಿವಿಧ ಸಮಿತಿಯ ಪದಾಧಿಕಾರಿಯಾಗಿ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನ ಖಜಾಂಚಿಯಾಗಿ, ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ್ ಹಾಗೂ ಮುಲ್ಕಿ ವಿಜಯ ಕೋ ಅಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ, ಲಯನ್ಸ್ ಕ್ಲಬ್‌ನ ಜಿಲ್ಲಾ ಗವರ್ನರ್ ಹಾಗೂ ಅಧ್ಯಕ್ಷರಾಗಿ, ಮುಲ್ಕಿ ಶಾಫಿ ಜಮಾಅತ್ ಮಸೀದಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಬಪ್ಪನಾಡು ದೇಗುಲದ ಜೀರ್ಣೋದ್ಧಾರ ಸಮಿತಿರೆ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮುಲ್ಕಿ ಸರಕಾರಿ ಕಾಲೇಜಿನ ಆಡಳಿತ ಮಂಡಳಿ, ಮುಲ್ಕಿ ಸರಕಾರಿ ಆಸ್ಪತ್ರೆ, ಮುಲ್ಕಿ-ಕಾರ್ನಾಡ್ ಸ್ಪೋರ್ಸ್ ಹಾಗೂ ಸರಕಾರಿ, ಅರೆಸರಕಾರಿ ಮತ್ತು ಸಾರ್ವಜನಿಕ ವ್ಯವಸ್ಥೆಯ ವಿವಿಧ ಸಮಿತಿಗಳಲ್ಲಿ ಪದಾಧಿಕಾರಿಗಳಾಗಿದ್ದರು. ರಾಜ್ಯ ಸಾಹಿತ್ಯ ಸಮ್ಮೇಳನ ಸಹಿತ ಜಿಲ್ಲೆಯ ವಿವಿಧ ಸಂಘಟನೆಗಳ ಸಮ್ಮೇಳನ, ಸಮಾವೇಶ, ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ದುಡಿದು ರಾಜ್ಯ ಮಟ್ಟದ ಅತ್ಯುತ್ತಮ ಸಂಘಟಕರೆಂದು ಖ್ಯಾತಿ ಪಡೆದಿದ್ದರು. ಅಲ್ಲದೆ ಸೆವೆನ್ ಸ್ಟಾರ್ ಸ್ಪೋರ್ಟಿಂಗ್ ಕ್ಲಬ್ ನಡೆಸಿದ್ದ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಿಯ ಗೌರವ ಸದಸ್ಯರಾಗಿ ಹಾಗೂ ಮುಲ್ಕಿ ನಗರದ ಬೆಳವಣಿಗೆಯಲ್ಲಿಯೂ ವಿವಿಧ ಸ್ಥರದಲ್ಲಿ ದುಡಿದಿದ್ದರು. ಕೇಂದ್ರದ ರೈಲ್ವೆ ಇಲಾಖೆ ಮತ್ತು ದೂರವಾಣಿ ಸಂಪರ್ಕ ಇಲಾಖೆಯ ಸಮಿತಿಯ ಸದಸ್ಯರಾಗಿ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್‌ನ ಸ್ಥಾಪಕ ಸದಸ್ಯರಾಗಿ, ನೂರಾನಿಯ ಎಜುಕೇಶನ್ ಟ್ರಸ್ಟ್‌ನ ಸ್ಥಾಪಕರಾಗಿ, ಬ್ಯಾರಿ ಆಂದೋಲನದ ರೂವಾರಿಯಾಗಿದ್ದ ಅವರು ಸರ್ವಧರ್ಮ ಸಮನ್ವಯತೆಯ ಪ್ರತೀಕರಾಗಿದ್ದರು. ಕಾಂಗ್ರೆಸ್ ಪಕ್ಷ, ಸಮಾಜಕ್ಕೆ ದಾನ ನೀಡುತ್ತಲೇ ತನ್ನ ನೂರಾರು ಎಕರೆ ಜಮೀನು ಮತ್ತು ಆಸ್ತಿಯನ್ನು ಕಳಕೊಂಡ ಅವರು 2017ರ ಮೇ 29ರಂದು ನಿಧನರಾದರು.

## ಸಮಾಜ ಸೇವಕ: ಹಾಜಿ ಹಮೀದ್ ಕಂದಕ್



ಮಂಗಳೂರಿನ ಬಂದರ್ ಕಂದಕ್‌ನಲ್ಲಿ ಯು.ಕೆ.ಅಹ್ಮದ್–ಝುಲೇಖಾ ದಂಪತಿಯ ಪುತ್ರನಾಗಿ 1943ರ ಜನವರಿ 10ರಂದು ಜನಿಸಿದ ಹಮೀದ್ ಕಂದಕ್ "ಕಂದಕ್ ಹಾಜಿ" ಎಂದೇ ಪ್ರಸಿದ್ಧರು.

ಮಂಗಳೂರಿನ ಅಂಜುಮಾನ್ ಖಾದಿಮೀನ್ ಮುಸ್ಲಿಂ ಅಸೋಸಿಯೇಶನ್‌ನ ಅಧ್ಯಕ್ಷರಾಗಿ, ಮುಸ್ಲಿಂ ಸೆಂಟ್ರಲ್ ಕಮಿಟಿಯ ಉಪಾಧ್ಯಕ್ಷರಾಗಿ, ಕರ್ನಾಟಕ ಮುಸ್ಲಿಂ ಪರಿಷತ್‌ನ ಅಧ್ಯಕ್ಷರಾಗಿ, ಅಹಿಂದ ಜನಚಳುವಳಿಯ ಉಪಾಧ್ಯಕ್ಷರಾಗಿ, ಪಂಪ್‌ವೆಲ್ ಮಸ್ಜಿದುತ್ತಖ್ವಾದ ಟ್ರಸ್ಟಿ ಆಗಿ, ಅಖಿಲ ಭಾರತ ಬ್ಯಾರಿ ಪರಿಷತ್ ಮತ್ತು ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್‌ನ ಪದಾಧಿಕಾರಿಯಾಗಿ, ಕೇಂದ್ರ ಮಾರುಕಟ್ಟೆ ವ್ಯಾಪಾರಸ್ಥರ ಸಂಘದ ಸ್ಥಾಪಕ ಕಾರ್ಯದರ್ಶಿಯಾಗಿ, ಗೌರವಾಧ್ಯಕ್ಷರಾಗಿ, ಎಸ್‌ಇಎಸ್‌ಎಂಎ ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾಗಿ, ಮಂಗಳೂರಿನ ಗುಜರಾತಿ ಮಹಾಜನ್ ಶಿಕ್ಷಕ–ರಕ್ಷಕ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಮಂಗಳೂರಿನ ಸಂತ ಜೋಸೆಫ್ ಶಿಕ್ಷಕ–ರಕ್ಷಕ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಅಲ್ ಅಝ್ಹರಿಯಾ ಮದ್ರಸದ ಆಡಳಿತ ಕಮಿಟಿಯ ಸದಸ್ಯರಾಗಿ, ರಾಜ್ಯ ಹಜ್ ಕಮಿಟಿಯ ಸದಸ್ಯರಾಗಿ, ಉಡುಪಿಯ ನಿರೆಬೈಲೂರು ತ್ವಾಹಾ ಜುಮಾ ಮಸ್ಜಿದ್‌ನ ಗೌರವಾಧ್ಯಕ್ಷರಾಗಿ, ದ.ಕ.ಜಿಲ್ಲಾ ಸುನ್ನಿ ಗೈಡೆನ್ಸ್ ಬ್ಯೂರೋದ ಉಪಾಧ್ಯಕ್ಷರಾಗಿ, ರಾಜ್ಯ ಜನತಾ ದಳದ ಮುಖಂಡನಾಗಿ, ದ.ಕ.ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷನಾಗಿ, ಕೆನರಾ ಬ್ಯಾಂಕ್‌ನ ಸ್ಟೀರಿಂಗ್ ಕಮಿಟಿಯ ಸದಸ್ಯರಾಗಿ, ಮಾನವ ಹಕ್ಕುಗಳ ಸಂಘಟನೆಯ ಉಪಾಧ್ಯಕ್ಷರಾಗಿ, ಕರ್ನಾಟಕ ರಕ್ಷಣಾ ವೇದಿಕೆಯ ಸಲಹೆಗಾರರಾಗಿ, ದ.ಕ.ಜಿಲ್ಲಾ ಶಾಂತಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಅವರು ಹಲವು ಪತ್ರಿಕೆಗಳನ್ನೂ ನಡೆಸಿದ್ದರು. ಪಾಪ್ಯುಲರ್ ಕನ್ನಡ ವಾರಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಹಜ್/ಉಮ್ರಾದ ಮುಖ್ಯ ಸಂಘಟಕರಾಗಿದ್ದ ಅವರು 25ಕ್ಕೂ ಅಧಿಕ ಹಜ್ ಯಾತ್ರೆ ಪೂರೈಸಿದ್ದರು.

ಧಾರ್ಮಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಸಕ್ರಿಯವಾಗಿದ್ದ ಅವರು ಮಂಗಳೂರಿನ "ಅಹಿಂದ" ಸಂಘಟನೆಯು 2018ರ ಜನವರಿ 24ರಂದು ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಹೃದಯಾಘಾತದಿಂದ ನಿಧನರಾದರು. ಆವಾಗಲೂ ಅವರ ಬಾಯಲ್ಲಿ ಉದುರುತ್ತಿದ್ದ ಮಾತು ಸಮಾಜ–ಸಮುದಾಯದ ಕುರಿತಾಗಿತ್ತು. ಸಮಾಜದ ಧ್ವನಿಯಾಗಿದ್ದ ಅವರು ಪತ್ನಿ ಮತ್ತು 5 ಮಂದಿ ಪುತ್ರರು ಹಾಗೂ ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

## ಗ್ರಾಮೀಣ ಜನರ ಪ್ರೇರಕ ಶಕ್ತಿ ಹಾಜಿ ಟಿ.ಹುಸೈನ್ ಗುರುಪುರ



ಮಂಗಳೂರು ತಾಲೂಕಿನ ತಣ್ಣೀರುಬಾವಿಯ ಚೆಯ್ಯಬ್ಬ–ರಾಬಿಯಾ ದಂಪತಿಯ ಪುತ್ರನಾಗಿ 1936ರ ಅಕ್ಟೋಬರ್ 6ರಂದು ಜನಿಸಿದ ಹಾಜಿ ಟಿ. ಹುಸೈನ್ ನಾಲ್ಕನೇ ತರಗತಿಯವರೆಗೆ ಕಲಿತರೂ ತನ್ನ ಜೀವಿತಾವಧಿಯಲ್ಲಿ ನಿರೀಕ್ಷೆಗೂ ಮೀರಿದ ಸಾಧನೆಗೈದಿದ್ದರು.

ತಣ್ಣೀರುಬಾವಿಯಿಂದ ಹೊರಟು ಗುರುಪುರದಲ್ಲಿ ನೆಲೆಸಿ ಅಲ್ಲೇ ತನ್ನ ಸೇವೆ ಮುಂದುವರಿಸಿದರು. 1974ರಲ್ಲಿ ಗುರುಪುರ ಗ್ರಾಮ ಪಂಚಾಯತ್ ಸದಸ್ಯರಾಗಿ ಚುನಾಯಿತರಾದ ಅವರು ಬಳಿಕ ಅಧ್ಯಕ್ಷರಾದರು. ಸುಮಾರು 25 ವರ್ಷಗಳ ಕಾಲ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಸಾರ್ವಜನಿಕ ಸೇವೆ ಸಲ್ಲಿಸಿದರು. 1990ರಲ್ಲಿ ಮಂಡಲ ಪ್ರಧಾನರಾಗಿದ್ದರು. ಗುರುಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವರು ಕೆಪಿಸಿಸಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 20 ವರ್ಷಗಳ ಕಾಲ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ, 8 ವರ್ಷಗಳ ಕಾಲ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ, ಹುಬ್ಬಳ್ಳಿ ರೈಲ್ವೆ ಸಲಹಾ ಸಮಿತಿಯ ಸದಸ್ಯರಾಗಿ, ಭೂ ನ್ಯಾಯ ಮಂಡಳಿಯ ಸದಸ್ಯರಾಗಿ, ಗುರುಪುರ ಕ್ಷೇತ್ರದಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ, ಗುರುಪುರ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಸದಸ್ಯರಾಗಿ 20 ವರ್ಷ ಮತ್ತು ಅಧ್ಯಕ್ಷರಾಗಿ 15 ವರ್ಷ ಸೇವೆ ಸಲ್ಲಿಸಿದ್ದರು ಅಡ್ಡೂರಿನ ಸಹರಾ ಇಂಗ್ಲಿಷ್ ಮೀಡಿಯಂ ಶಾಲೆಯ ಅಧ್ಯಕ್ಷರಾಗಿ ಮೂರು ಬಾರಿ ಆಯ್ಕೆಯಾಗಿದ್ದರು. ಗುರುಪುರದ ದಾರುಸ್ಸಲಾಂ ಜುಮ್ಮಾ ಮಸೀದಿಯ ಅಧ್ಯಕ್ಷರಾಗಿ 10 ವರ್ಷ, ಗುರುಪುರ ಹೈದ್ರೋಸ್ ಜುಮ್ಮಾ ಮಸೀದಿಯ ಅಧ್ಯಕ್ಷರಾಗಿ 5 ವರ್ಷ, ಅಡ್ಡೂರು ಕಾಂಜಲಕೋಡಿ ಬದ್ರುಲ್ ಹುದಾ ಜುಮ್ಮಾ ಮಸೀದಿಯ ಅಧ್ಯಕ್ಷರಾಗಿ 22 ವರ್ಷ, ಆದ್ಯಪಾಡಿ ಬೈಲುಪೇಟೆ ಜುಮಾ ಮಸೀದಿಯ ಅಧ್ಯಕ್ಷರಾಗಿ 2 ವರ್ಷ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸೆಂಟ್ರಲ್ ಕಮಿಟಿಯ ಸದಸ್ಯರಾಗಿ 4 ವರ್ಷ, ಸಮಸ್ತ ಸಂಘಟನೆಯ ಸ್ಥಳೀಯ ಘಟಕದಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಗುರುಪುರ ವಲಯ ರೇಂಜ್ ಕಮಿಟಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸುಮಾರು 45 ವರ್ಷಗಳ ರಾಜಕೀಯ ಜೀವನ ನಡೆಸಿದ್ದ ಅವರು ಪತ್ನಿ ಬೀಫಾತುಮ್ಮ ಮತ್ತು 4 ಗಂಡು ಹಾಗೂ 5 ಹೆಣ್ಣು ಮಕ್ಕಳನ್ನು 2009ರ ಫೆಬ್ರವರಿ 24ರಂದು ಬಿಟ್ಟಗಲಿದರು.

## ಬೀಡಿ ಕಾರ್ಮಿಕರ ಧ್ವನಿಯಾಗಿದ್ದ ಅಬ್ದುಲ್ಲಾ ನಯಾಪಟ್ನ



ಮಂಗಳೂರಿನ ಕುದ್ರೋಳಿಯ ಕಂಡತ್ ಪಳ್ಳಿಯ ಪ್ರಥಮ ಬಾಂಗಿ (ಮೈಕ್‌ನಲ್ಲಿ ಆದಾನ್ ನೀಡಿದವರು) ಯಾಗಿದ್ದ ಇಝುದ್ದೀನ್ ಯಾನೆ ಇದ್ದಿನ್ ಮುಕ್ರಿಯ ಪುತ್ರನಾಗಿ 1920ರಲ್ಲಿ ಜನಿಸಿದ ಕೆ. ಅಬ್ದುಲ್ಲ 5ನೇ ತರಗತಿ ಶಾಲೆ ಕಲಿತು ಬಳಿಕ ಬಡತನದ ಬೇಗೆಯಿಂದ ವಿದ್ಯಾಭ್ಯಾಸ ಮುಂದುವರಿಸಲಾಗದೆ ಸಣ್ಣ ಪುಟ್ಟ ಕೆಲಸ ಮಾಡುತ್ತಾ ಸೋಮೇಶ್ವರ ಉಚ್ಚಿಲದ ನಯಾಪಟ್ನ ನಿವಾಸಿ ಆಮಿನಮ್ಮರನ್ನು ಮದುವೆಯಾಗಿ ಆ ಬಳಿಕ ಉಚ್ಚಿಲದಲ್ಲಿಯೇ ನೆಲೆಸಿದರು.

ಅಬ್ಬಾಸ್ ಮತ್ತು ಮಹ್‌ಮೂದ್ ಎಂಬ ಎರಡು ಗಂಡು ಹಾಗೂ ಫಾತಿಮಾ, ಆಯಿಶಾ, ನಫೀಸಾ ಎಂಬ ಮೂವರು ಹೆಣ್ಣು ಮಕ್ಕಳ ತಂದೆಯಾಗಿದ್ದ ಅಬ್ದುಲ್ಲಾ ಉಚ್ಚಿಲದಲ್ಲಿ ಪ್ರಖ್ಯಾತ ಸಾಧು ಬೀಡಿ ಕಂಪೆನಿಯ ಬ್ರಾಂಚನ್ನು ಆರಂಭಿಸಿದರು. ಆವಾಗ ಸೋಮೇಶ್ವರ ಉಚ್ಚಿಲ ಪ್ರದೇಶದ ಬಹುತೇಕ ಮನೆಗಳಲ್ಲಿ ಸಾಧುಬೀಡಿ ಮನೆಮಾತಾಗಿದ್ದು ಹೆಂಗಸರಂತೆ ಗಂಡಸರು ಕೂಡ ಬೀಡಿ ಕಟ್ಟಿ ಬದುಕು ಸಾಗಿಸುತ್ತಿದ್ದರು. ಅವರಿಗೆಲ್ಲಾ ಬೀಡಿ ಎಲೆ–ತಂಬಾಕು ಪೂರೈಸಿ ಇಡೀ ಗ್ರಾಮದ ಉದ್ಯೋಗದಾತರೆಂದೇ ಅವರು ಕರೆಸಿಕೊಂಡಿದ್ದರು. ಅಲ್ಲದೆ ಸಾಧುಬೀಡಿ ಅಬ್ದುಲ್ಲಾ ಎಂದೇ ಗುರುತಿಸಿಕೊಂಡಿದ್ದರು.

ಅಂದಿನ ದಿನದಲ್ಲಿ ಕೆಲವೇ ಕೆಲವು ಮಹಡಿ ಮನೆ ಹೊಂದಿರುವ ಅವರನ್ನು "ಬೆಲೆ ಪೊರೆಂಡೇ ಅದ್ಲುಚ್ಚ" ಎಂದೂ ಊರವರು ಕರೆಯುತ್ತಿದ್ದರು. ಅವರಿಗೆ ವಿದ್ಯೆ ಕಡಿಮೆ ಇದ್ದರೂ ಕೂಡ ಕುದ್ರೋಳಿಯ ಉರ್ದು ಮಾತನಾಡುವ ಹನಫಿಗಳ ಒಡನಾಟದಿಂದ ಶುದ್ಧವಾದ ಉರ್ದು ಮಾತನಾಡುತ್ತಿದ್ದರು. ಆವಾಗ ಅವರ ಬಾಯಿಯಿಂದ ಉದುರುವ "ಉರ್ದು ಶಾಯಿರಿ"ಗಳನ್ನು ಕೇಳಲು ಉಚ್ಚಿಲ ಪ್ರದೇಶದಲ್ಲಿ ಒಂದು ದಂಡೇ ಇರುತ್ತಿತ್ತು ಎಂದು ಅವರ ಒಡನಾಡಿಗಳು ನೆನಪಿಸುತ್ತಾರೆ.

ಯಾವುದೇ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಳ್ಳದ ಅವರು ವ್ಯಕ್ತಿಗಳನ್ನು ನೋಡಿ ಬೆಂಬಲ ನೀಡಬೇಕು ಎಂದು ಪ್ರತಿಪಾದನೆ ಮಾಡುತ್ತಿದ್ದರಿಂದ ಕಾಂಗ್ರೆಸ್, ಕಮ್ಯುನಿಸ್ಟ್, ಜನತಾ ಪಕ್ಷ ಹೀಗೇ ಬೇರೆ ಬೇರೆ ಪಕ್ಷಗಳ ಮುಖಂಡರ ಒಡನಾಟ ಹೊಂದಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗಿಯಾಗದಿದ್ದರೂ ನೆಹರೂ ಮೈದಾನ ಸೇರಿದಂತೆ ಬೇರೆ ಬೇರೆ ಕಡೆ ನಡೆಯುತ್ತಿದ್ದ ಭಾಷಣಗಳನ್ನು ಕೇಳಿ ಚಪ್ಪಾಳೆ ತಟ್ಟುತ್ತಿದ್ದರು. ಕರಪತ್ರ ಸಂಗ್ರಹಿಸಿ ಅದರಲ್ಲಿರುವುದನ್ನು ಅನಕ್ಷರಸ್ಥರಿಗೆ ಓದಿ ಹೇಳುವುದು ಅವರ ಇಷ್ಟದ ಹವ್ಯಾಸ ಆಗಿತ್ತು. ಬಿಬಿಸಿಯಂತಹ ರೇಡಿಯೋ ಸ್ಟೇಶನ್‌ನಲ್ಲಿ ಬರುವ ಹಿಂದಿ ಅಥವಾ ಉರ್ದು ಸುದ್ದಿಗಳನ್ನು ಕುತೂಹಲದಿಂದ ಕೇಳಿ ಅರ್ಥ ಮಾಡಲು ಊರಿನ ಜನರು ಅವರಲ್ಲಿಗೆ ಬರುತ್ತಿದ್ದರು. ಸೆಹಗಲ್ ಮುಕೇಶ್‌ರ  ಹಳೆಯ ಹಾಡುಗಳೆಂದರೆ ಅವರಿಗೆ ಪಂಚಪ್ರಾಣವಾಗಿತ್ತು. "ಟೂನೇನಾ ದಿಲ್ ಟೂಟೇನಾ ಟೂಟೇನಾ.." ಎಂಬ ಮುಕೇಶ್‌ರ ಹಾಡು ಗುಣಗುಣಿಸುತ್ತಲೇ ಇದ್ದರು.

ಕಾರ್ಮಿಕರು ಕಟ್ಟಿ ತರುತ್ತಿದ್ದ ಬೀಡಿಯನ್ನು ತನ್ನ "ಬೆಲೆಪೊರೆ" ಎಂಬ ಮನೆಯಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ತಪಾಸಣೆ ಮಾಡುತ್ತಿದ್ದರು. ಬೀಡಿ ಕಾರ್ಮಿಕರ ಸಂಖ್ಯೆ ಹೆಚ್ಚಾದಾಗ ಈಗಿನ ಬಿಸಿಎಫ್ ಅಧ್ಯಕ್ಷ ಮುಹಮ್ಮದ್ ಅಲಿ ಉಚ್ಚಿಲ್‌ರ ತಂದೆಗೆ ಸೇರಿದ ಬಾಡಿಗೆ ಅಂಗಡಿಯಲ್ಲಿ ಬ್ರಾಂಚ್ ತೆರೆದು ಬೀಡಿ ಸಂಗ್ರಹಿಸುವ ಕಾರ್ಯ ಅಲ್ಲಿಂದ ನೆರವೇರಿಸಲು ಪ್ರಾರಂಬಿಸಿದರು. ಅವರ ಬೀಡಿ ಉದ್ಯಮ ಹೆಚ್ಚು ಜನಪ್ರಿಯವಾಗತೊಡಗಿದ ಪರಿಣಾಮ ಕೇರಳದಿಂದಲೂ ಬಹುತೇಕ ನಿರೋದ್ಯೋಗಿ ಯುವಕರು ಉಚ್ಚಿಲಕ್ಕೆ ಬೀಡಿಕಟ್ಟಲು ಬರಲಾರಂಭಿಸಿದರು. (ಹೀಗೆ ಬಂದ ಆಲಿಚ್ಚ ಎಂಬವರ ಸಹಿತ ಕೆಲವು ಕುಟುಂಬ ಬಳಿಕ ಉಚ್ಚಿಲದಲ್ಲೇ ವಾಸಿಸತೊಡಗಿತು) ಹೀಗೇ ಬಂದವರ ಪೈಕಿ ಹತ್ತಾರು ಯುವಕರು ಒಗ್ಗೂಡಿ ಅಲ್ಲಲ್ಲಿ ಬಾಡಿಗೆ ರೂಮ್ ಪಡೆದು ರಾತ್ರಿ ಹಗಲು ಎರಡು ಪಾಳಿಯದಲ್ಲೂ ದುಡಿಯುತ್ತಿದ್ದರು. ರಾತ್ರಿ ನಿದ್ದೆಗೆಟ್ಟು ಚಿಮಿಣಿ ಬೆಳಕಿನಲ್ಲಿ ಬೀಡಿ ಕಟ್ಟುವ ಈ ಪದ್ಧತಿಯನ್ನು "ರಾತ್‌ಬೈಲ್" ಎಂದು ಬ್ಯಾರಿ ಭಾಷೆಯಲ್ಲಿ ಕರೆಯುತ್ತಿದ್ದರು. ಸಣ್ಣಮಟ್ಟ ಮಕ್ಕಳೂ ಅಲ್ಲಿ ಸಿಕ್ಕುವ ಅವಲಕ್ಕಿ ಬೆಲ್ಲಗಳನ್ನು ಸೇವಿಸುತ್ತಾ ಆನಂದ ಪಡುತ್ತಿದ್ದರು.

ತನ್ನ ಎರಡು ಗಂಡು ಮಕ್ಕಳು ತಂದೆಯೊಂದಿಗೆ ಬೀಡಿ ಉದ್ಯಮಕ್ಕೆ ನೆರವಾಗುತ್ತಲೇ ಸಮಯದ ಬಿಡುವು ಮಾಡಿಕೊಂಡು ಉಚ್ಚಿಲದಿಂದ ಮಂಗಳೂರಿನ ಸರಕಾರಿ ಕಾಲೇಜಿಗೆ ಹೋಗುತ್ತಿದ್ದರು. ಹೆಣ್ಮಕ್ಕಳ ವಿದ್ಯಾಭ್ಯಾಸ ಎಂದರೆ ಮೂಗು ಮುರಿಯುವ ಅಂದಿನ ದಿನದಲ್ಲಿ ತನ್ನ ಮೂವರು ಹೆಣ್ಣು ಮಕ್ಕಳಿಗೂ ಏಳನೇ ತರಗತಿವರೆಗೆ ಶಾಲೆ

ಕಲಿಸಿದ್ದರು. ಈ ಮಧ್ಯೆ ತನ್ನ ಪತ್ನಿ ಕಾಯಿಲೆಯಿಂದ ತೀರಿಕೊಂಡಾಗ ಆಸಿಯಮ್ಮ ಎಂಬ ವಿಚ್ಛೇದಿತೆಯನ್ನು ಮದುವೆಯಾದರು. ಅವರು ಅದಾಗಲೇ ತಮ್ಮ ಮೊದಲ ಪತಿಯಿಂದ ಝುಲೇಕ ಹಾಗೂ ಹಸೈನಾರ್ ಎಂಬ ಮಕ್ಕಳನ್ನು ಹೊಂದಿದ್ದರು. ಮದುವೆಯಾದ ಕೆಲವು ವರ್ಷಗಳ ಬಳಿಕ ಆಸಿಯಮ್ಮ ಅವರಿಂದ ಅಬ್ದುಲ್ ರಹೀಂ ಮತ್ತು ನಸೀಮಾ ಎಂಬ ಎರಡು ಮಕ್ಕಳನ್ನು ಪಡೆದರು. ಈ ಪೈಕಿ ಅಬ್ದುಲ್ ರಹೀಂ ನಂತರದ ದಿನಗಳಲ್ಲಿ ರಹೀಂ ಉಚ್ಚಿಲ್ ಎಂದು ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಂಡರು. ಪ್ರಸಕ್ತ ರಹೀಂ ಉಚ್ಚಿಲ್ ಎರಡನೆ ಬಾರಿಗೆ ಬ್ಯಾರಿ ಅಕಾಡಮಿಯ ಅಧ್ಯಕ್ಷರಾಗಿ, ಭಾರತೀಯ ಜನತಾ ಪಾರ್ಟಿಯ ಮುಖಂಡರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬೀಡಿ ಕಟ್ಟಲು ಬಳಸುವ ಎಲೆಗೆ ನೀರು ಸಿಂಪಡಿಸುವುದರಿಂದ ಎಲೆ ಹಾಳಾಗಿ ಹೋಗುತ್ತದೆ. ಹೀಗೇ ಆಗುವುದನ್ನು "ಎಲೆ ಬಾಸಿ" ಮಾಡುವುದು ಎಂದೂ ಹೇಳುತ್ತಾರೆ. ಆಗಾಗ ಅವರು "ಎಲೆಬಾಸಿ" ಮಾಡಬೇಡಿ ಎಂದು ಹೇಳುತ್ತಾ ಬರುವ ರೂಢಿಯನ್ನು ಕಂಡು ಜನರು "ಬಾಸಿ ಅದ್ದುಲ್ಲಾ" ಎಂದು ಕರೆಯತೊಡಗಿದರು. ಈಗಲೂ ಅಷ್ಟೇ ಉಚ್ಚಿಲಕ್ಕೆ ಹೋದರೆ ಬಾಸಿ ಅದ್ದುಲ್ಲ ಎಂದರೆ ಮಾತ್ರ ಹಿರಿಯರು ಅಂದಿನ ಗತವೈಭವವನ್ನು ಜ್ಞಾಪಿಸುತ್ತಾರೆ.

ರಾಜಿ ಪಂಚಾಯತಿಗೆ ಮೂಲಕ ಯಾವುದೇ ಜಟಿಲ ಸಮಸ್ಯೆಯನ್ನೂ ಬಗೆಹರಿಸುವುದರಲ್ಲಿ ಎತ್ತಿದ ಕೈ ಆಗಿದ್ದ ಅವರು ಧಾರ್ಮಿಕ ಶ್ರದ್ದೆಯುಳ್ಳವರಾಗಿದ್ದರು. ಆಲಿಮ್‌ಗಳನ್ನು ಪ್ರೀತಿಸುವುದು ಮತ್ತು ಅವರಿಗೆ ಊಟ ಕೂಟ ಏರ್ಪಡಿಸುವುದು ಅವರ ಇಷ್ಟದ ಹವ್ಯಾಸವಾಗಿತ್ತು. 1968ರಲ್ಲಿ ಎದೆನೋವು ಕಾಣಿಸಿಕೊಂಡ ಕೆಲವೇ ಕ್ಷಣದಲ್ಲಿ ಇಹಲೋಕ ತ್ಯಜಿಸಿದರು. ಆವಾಗ ರಹೀಂ ಉಚ್ಚಿಲ್ ಐದು ವರ್ಷ ಪ್ರಾಯದ ಮಗುವಾಗಿದ್ದರು.

# ಸೋಮೇಶ್ವರ ಉಚ್ಚಿಲದ ಹೆಮ್ಮೆಯ ಪುತ್ರ: ಜಿ.ಎಂ.ಹಸೈನಾರ್



ಮಂಗಳೂರು ತಾಲೂಕಿನ ಸೋಮೇಶ್ವರ ಉಚ್ಚಿಲ ಗುಡ್ಡೆಯ ಮೊಯಿದಿನ್ ಕುಂಞಿ–ಬೀಫಾತಿಮಾ ದಂಪತಿಯ ಪುತ್ರನಾಗಿ 1921ರಲ್ಲಿ ಜನಿಸಿದ ಜಿ.ಎಂ.ಹಸೈನಾರ್ ಸಾಮಾಜಿಕ, ಧಾರ್ಮಿಕ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಯಶಸ್ವಿ ವ್ಯಾಪಾರಿ, ಪ್ರಗತಿಪರ ಕೃಷಿಕ ಮತ್ತು ರಾಜಕೀಯ ನಾಯಕನಾಗಿ ಮೆರೆದವರು. ಸೋಮೇಶ್ವರ–ಉಚ್ಚಿಲ ಪರಿಸರದಲ್ಲಿ "ಅಬ್ಬೋನಿಚ್ಚ" ಎಂದೇ ಗುರುತಿಸಲ್ಪಟ್ಟಿದ್ದರು.

ಪ್ರಾಥಮಿಕ ಶಿಕ್ಷಣವನ್ನು ಅವರು ಉಚ್ಚಿಲದ ಬೋವಿ ಶಾಲೆಯಲ್ಲಿ ಮುಗಿಸಿದರು. ಚಿಕ್ಕಂದಿನಿಂದಲೇ ವ್ಯವಹಾರ ಕುಶಲರಾಗಿದ್ದ ಅವರು ಉಚ್ಚಿಲದಲ್ಲಿ ಜಿನಸಿ ಅಂಗಡಿಯನ್ನು ತೆರೆದು ಆಸುಪಾಸಿನ ಕಿನ್ಯ, ಕೋಟೆಕಾರ್, ತಲಪಾಡಿ ಗ್ರಾಮಗಳ ಜನರಿಗೆ ನಪ್ರಿಯ ಅಂಗಡಿಯನ್ನಾಗಿರಿಸಿದರು. ಅಲ್ಲದೆ ನ್ಯಾಯಬೆಲೆ ಅಂಗಡಿಯ ಮೂಲಕ ಈ ಎಲ್ಲಾ ಗ್ರಾಮಸ್ಥರ ಹೃದಯ ಗೆದ್ದರು. ಬಡವರಿಗೆ ಉಚಿತ ರೇಶನ್ ವಿತರಿಸಿ ಮಾದರಿಯಾಗಿದ್ದರು. ಜನಸಾಮಾನ್ಯರ ಕಷ್ಟ–ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತಿದ್ದ ಅವರು, ಸಮುದಾಯದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿಕೆಯ ಬಗ್ಗೆ ಅತ್ಯಂತ ಕಾಳಜಿ ಹೊಂದಿದವರಾಗಿದ್ದರು. ಉಚ್ಚಿಲದಲ್ಲಿ ಸರಕಾರಿ ಶಾಲೆಯ ಸ್ಥಾಪನೆಯ ಹಿಂದಿದ್ದ ಚಾಲಕಶಕ್ತಿಯೂ ಅವರಾಗಿದ್ದರು. ವಿದ್ಯಾಭಾಸದಿಂದ ಮಾತ್ರ ಸಮುದಾಯ ಪ್ರಗತಿ ಸಾಧ್ಯ ಎಂದು ದೃಢವಾಗಿ ನಂಬಿದ್ದ ಅವರು ಉಚ್ಚಿಲದಲ್ಲಿ ಶಾಲೆಯನ್ನು ಸ್ಥಾಪಿಸಲು ಪ್ರಯತ್ನಿಸಿ ಅದರಲ್ಲಿ ಸಫಲರಾದರು. ಊರ ಹಿರಿಯರೂ ಮಿತ್ರರೂ ಆಗಿದ್ದ ಇಸ್ಮಾಯಿಲ್ ಹಾಜಿ ಯು.ಎನ್. ಇದ್ದಿಕುಂಞಿ, ಸೂಫಿ ಕುಂಞಿ, ಜಿ. ಪೋಕರ್ ಮತ್ತು ಐತಪ್ಪ ರೈ ತಲಪಾಡಿ ಅವರ ಸತತ ಪ್ರಯತ್ನದಿಂದ 1964ರಲ್ಲಿ ಉಚ್ಚಿಲದಲ್ಲಿ ಏಕೋಪಾಧ್ಯಾಯ ಶಾಲೆಯನ್ನು ಸ್ಥಾಪಿಸುವಲ್ಲಿ ಯಶ್ವಸಿಯಾದರು. ಈ ಶಾಲೆ ಸ್ಥಾಪಿಸಲು ಈ ಎಲ್ಲ ಮಹನೀಯರೊಡಗೂಡಿ ದೇಣಿಗೆಗಾಗಿ ನಡುಮಟ್ಟದ ಹೊಳೆ ನೀರಿನಲ್ಲಿ ಊರೂರು ಸುತ್ತಿದ್ದು ಒಂದು ಸಾಹಸಗಾಥೆ. ಯಾವುದೇ ತರಹದ ಪ್ರಚಾರವನ್ನು ಬಯಸದೆ ತಮ್ಮ ಸ್ವಂತ ಹಣವನ್ನು ಸಮುದಾಯದ, ಸಮಾಜದ ಒಳಿತಿಗಾಗಿ ವಿನಿಯೋಗಿಸುತ್ತಿದ್ದರು. ಉಚ್ಚಿಲದಲ್ಲಿ ಬೋವಿ ಸಮಾಜ ಹೈಸ್ಕೂಲ್ ಸ್ಥಾಪನೆಗಾಗಿ ಸ್ಥಳವನ್ನೂ ದಾನ ಮಾಡಿ ಎಲೆಮರೆಯ ಕಾಯಿಯಂತೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದರು.

ಉಚ್ಚಿಲ ಜುಮಾ ಮಸೀದಿ, ರಹಮಾನಿಯಾ ಮಸೀದಿ ಮತ್ತು ಹಯಾತುಲ್ ಇಸ್ಲಾಂ ಮದ್ರಸದ ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಜಿ ಇನ್ನಿತರ ಪದಾಧಿಕಾರಿ ಹುದ್ದೆಗಳನ್ನು ನಿಭಾಯಿಸಿದ್ದರು. ಇಂದು ಈ ಸರಕಾರಿ ಶಾಲೆ ಮತ್ತು ರಹ್ಮಾನಿಯಾ ಆಂಗ್ಲ ಮಾಧ್ಯಮ ಶಾಲೆಯು ಪರಿಸರದ ಮಕ್ಕಳ ವಿದ್ಯೆಯ ದಾಹವನ್ನು ತಣಿಸುತ್ತಿದೆ.

ಜಾತ್ಯತೀತ ಮನೋಭಾವ ಹೊಂದಿದ್ದ ಅವರು ಸಮುದಾಯದ ಯುವಕರಲ್ಲಿ ಜಾತ್ಯತೀತತೆ, ಸಹೋದರತ್ವವನ್ನು ಬಿತ್ತಿದ್ದರು. ವಿದ್ಯಾಭ್ಯಾಸ ಪಡೆಯಲು ಸದಾ ಪ್ರೋತ್ಸಾಹ ನೀಡುತ್ತಿದ್ದರು. ಪಠ್ಯೇತರ ಚಟುವಟಿಕೆಗಳಿಗೆ ಉತ್ಸಾಹ ತುಂಬುತ್ತಿದ್ದರು. ಸಹೋದರ ಸಮುದಾಯದೊಂದಿಗೆ ಅತ್ಯಂತ ಸುಮಧುರ ಭಾಂದವ್ಯವನ್ನು ಹೊಂದಿದ್ದ ಅವರು ಉಚ್ಚಿಲ ಸುತ್ತಮುತ್ತ ಪರಿಸರದಲ್ಲಿ ಸೌಹಾರ್ದಕ್ಕೆ ಸೇತುವಾಗಿದ್ದರು.

ಅಂದಿನ ಉಚ್ಚಿಲ ಜುಮಾ ಮಸೀದಿಯ ಸಾಧಾರಣ 5 ಎಕರೆ ಸ್ಥಳದ ಕುರಿತು ಸಹೋದರ ಸಮುದಾಯದಿಂದ ಸಮಸ್ಯೆ ಎದುರಾದಾಗ ಅವರೊಂದಿಗೆ ರಾಜಿ ಪಂಚಾಯಿತಿಕೆ ಮೂಲಕ ಮತ್ತು ಸಮಾಜಸೇವಕ ಹಾಜಿ ಮುಹಮ್ಮದ್ ಕಮಾಲ್ ಅವರ ಮಧ್ಯಸ್ಥಿಕೆಯಲ್ಲಿ ಅದನ್ನು ಪರಿಹರಿಸುವಲ್ಲಿಯೂ ಇಸ್ಮಾಯಿಲ್ ಹಾಜಿ, ಯು.ಎನ್. ಇದ್ದಿಕುಂಞಿ, ಯು.ಎಂ.ಕುಂಞಿ ಅವರ ಪಾತ್ರ ಅಪಾರವಾಗಿತ್ತು.

ಕೃಷಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಅವರು ಪ್ರಗತಿಪರ ಕೃಷಿಕರಾಗಿಯೂ ಗುರುತಿಸಿದ್ದರು. ಭತ್ತ, ತೆಂಗು, ಕಂಗುಗಳನ್ನು ವೈಜ್ಞಾನಿಕವಾಗಿ ಬೆಳೆದು ಇತರ ಕೃಷಿಕರಿಗೆ ಮಾದರಿಯಾಗಿದ್ದರು. ಸಕಲೇಶಪುರ ತಾಲೂಕಿನ ಹೊಂಗಡಳ್ಳ ಗ್ರಾಮದಲ್ಲಿ ಏಲಕ್ಕಿ ಪ್ಲಾಂಟೇಶನ್ ನಡಿಸಿ ಅದರಲ್ಲೂ ಯಶಸ್ವಿಯಾಗಿದ್ದರು. ಹಾಸನ, ಸಕಲೇಶಪುರದ ಜನತೆಗೆ ಚಿರಪರಿಚಿತರಾಗಿದ್ದ ಅವರು ಅಂದಿನ ಜನಸಂಘದ ಮುಖಂಡ ಬಿ.ಬಿ. ಶಿವಪ್ಪ ಮತ್ತು ಮಾಜಿ ಪ್ರಧಾನಿ ದೇವೇಗೌಡರೊಂದಿಗೂ ಆತ್ಮೀಯ ಸಂಬಂಧ ಹೊಂದ್ದಿದ್ದರು.

ರಾಜಕೀಯ ರಂಗದಲ್ಲೂ ತಮ್ಮ ಛಾಪು ಮೂಡಿಸಿದ್ದ ಹಸೈನಾರ್ ಉಳ್ಳಾಲ ಮಂಡಲ ಪಂಚಾಯತ್ ಸದಸ್ಯರಾಗಿದ್ದರು.

ಕವಿ ಬಿ.ಎಂ.ಇದಿನಬ್ಬ, ಹಾಜಿ ಮುಹಮ್ಮದ್ ಕಮಾಲ್, ಲೂಯಿಸ್ ಮೊಂತೇರೊ, ಐತಪ್ಪ ರೈ, ಕೆ.ಕೆ.ಶೆಟ್ಟಿ, ಇಬ್ರಾಹಿಂ ಸಈದ್ ಮೊದಲಾದ ಗಣ್ಯರೊಂದಿಗೆ ನಿಕಟ ಸಂಬಂಧ ಹೊಂದ್ದಿದ್ದ ಅವರು ತಮ್ಮ ಬದುಕನ್ನು ಜನಸೇವೆಗಾಗಿ ಮೀಸಲಿಟ್ಟಿದ್ದರು.

ಜಾತಿ, ಮತ, ಕುಲ, ದೀನದಲಿತರೆಂಬ ಭೇದಭಾವವಿಲ್ಲದೆ ಎಲ್ಲರೊಡನೆ ಬೆರೆತರು. ಅತ್ಯಂತ ಸರಳ ವ್ಯಕ್ತಿತ್ವವನ್ನು ಹೊಂದಿದ್ದ ಅವರು ರಾಜಕೀಯ, ಸಾಮಾಜಿಕ, ಧಾರ್ಮಿಕ ನಾಯಕನಾಗಿ ಇಂದಿಗೂ ಸ್ಥಳೀಯರ ಮನಸ್ಸಿನಲ್ಲಿ ಅಚ್ಚಳಿಯಾಗಿ ಉಳಿದಿದ್ದಾರೆ.

ಯು.ಟಿ. ಫರೀದ್‌ರ ಮಾವ ಕಡಬಾಕಾರ್ ಹಾಜಾರ್‌ರ ಮಿತ್ರರಾಗಿದ್ದ ಅವರು ಯು.ಟಿ. ಫರೀದ್ ಮೊದಲ ಬಾರಿ ಉಳ್ಳಾಲ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿದಾಗ ಗೆಲುವಿಗಾಗಿ ಶ್ರಮಿಸಿದ್ದರು.

ಗಜಲ್ ಮತ್ತು ಶಾಯರಿ ಪ್ರೀತಿ ಹೊಂದಿದ್ದ ಅವರು ಅದರ ಮೆಹಫಿಲ್‌ನಲ್ಲಿ ಭಾಗವಹಿಸುತ್ತಿದ್ದರು. ಅವರಲ್ಲಿ ಈ ಹವ್ಯಾಸವನ್ನು ಬಿತ್ತಿದವರು ಅವರ ಹತ್ತಿರದ ಸ್ನೇಹಿತ ಹಾಗೂ ತನ್ನ ಬೀಡಿ ಬ್ರಾಂಚಿನ ಮೂಲಕ ಮನೆಮಾತಾಗಿದ್ದ ಅಬ್ದುಲ್ಲಾಕ (ರಹೀಮ್ ಉಚ್ಚಿಲ್‌ರ ತಂದೆ). ಈ ಸ್ನೇಹಿತರ ದೊಡ್ಡ ಕೂಟವೇ ಇದ್ದು, ಸಂಜೆಯ ವೇಳೆ ತನ್ನ ಅಂಗಡಿಯಲ್ಲಿ ಸೇರಿ ಸಮುದಾಯದ ಉನ್ನತಿ, ಊರಿನ ಸಮಸ್ಯೆ, ಅದಕ್ಕೆ ಪರಿಹಾರ, ರಾಜಿ ಪಂಚಾಯತಿಕೆಯನ್ನು ನಡೆಸುತ್ತಿದ್ದರು. ಉಚ್ಚಿಲ ಮತ್ತು ಸುತ್ತಮುತ್ತಲಿನ ಊರಿನ ಸಮಸ್ಯೆಗಳು ಅವರ ರಾಜಿ ಪಂಚಾಯಿತಿಕೆ ಮೂಲಕ ಇತ್ಯರ್ಥವಾಗುತ್ತಿತ್ತು

ಅಲ್ಪಕಾಲದ ಅನಾರೋಗ್ಯದಿಂದ 1991ರಲ್ಲಿ ನಿಧನರಾದ ಅವರು ಪತ್ನಿ, 4 ಹೆಣ್ಣು ಮತ್ತು 2 ಗಂಡು ಮಕ್ಕಳನ್ನು ಅಗಲಿದ್ದರು.

## ಸಮಾಜ ಸೇವಕ ಇಸ್ಮಾಯೀಲ್ ಹಾಜಿ ಉಚ್ಚಿಲ



ಮಂಗಳೂರು ತಾಲೂಕಿನ ಸೋಮೇಶ್ವರ ಉಚ್ಚಿಲ ಗುಡ್ಡೆ ಎಂಬಲ್ಲಿ ಹುಸೈನ್ ಯಾನೆ ಉಪ್ಪಬ್ಯಾರಿ–ಖದೀಜಾ ದಂಪತಿಯ ಪುತ್ರನಾಗಿ 1910ರಲ್ಲಿ ಜನಿಸಿದ ಇಸ್ಮಾಯೀಲ್ ಹಾಜಿ ಪ್ರಾಥಮಿಕ ಶಿಕ್ಷಣವನ್ನು ಕೋಟೆಕಾರ್ ಶಾಲೆಯಲ್ಲಿ ಮತ್ತು ಅರಬಿಕ್ ಶಿಕ್ಷಣವನ್ನು ಸೋಮಶ್ವರ 407 ಜುಮ್ಮಾ ಮಸೀದಿಯ ಅಧೀನದ ಮದ್ರಸದಲ್ಲಿ ಪಡೆದರು.

ಬಳಿಕ ತನ್ನ ತಂದೆಯೊಂದಿಗೆ ಹಾಸನ ಜಿಲ್ಲೆಯ ಸಕಲೇಶಪುರಕ್ಕೆ ತೆರಳಿ ಅಲ್ಲಿನ ಹೆತ್ತೂರು ಸಮೀಪದ ಉಂಗ್ರಹಲ್ಲ ಎಂಬಲ್ಲಿನ ತೋಟದಲ್ಲಿ ಏಲಕ್ಕಿ ವ್ಯಾಪಾರದಲ್ಲಿ ತೊಡಗಿಸಿಕೊಂಡರು. ಹಾಗೇ 1942ರಲ್ಲಿ ಹೆತ್ತೂರಿನಲ್ಲಿ ಜಿನಸಿ ಅಂಗಡಿ ತೆರೆದರು. 1970ರವರೆಗೂ ಆ ಅಂಗಡಿ ಕಾರ್ಯಾಚರಿಸುತ್ತಿತ್ತು. ಬಳಿಕ 1975ರಲ್ಲಿ ತವರೂರಾದ ಉಚ್ಚಿಲಕ್ಕೆ ಆಗಮಿಸಿ ಬೇಕರಿ ಉತ್ಪಾದನಾ ಘಟಕವನ್ನು ತೆರೆದರು. ಬದುಕಿನ ಕೊನೆಯ ಉಸಿರಿನವರೆಗೂ ಅದೇ ವ್ಯಾಪಾರದಲ್ಲಿ ಮುಂದುವರಿದರು.

ಸಾಮಾಜಿಕ, ರಾಜಕೀಯ, ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಅವರು ಸೋಮೇಶ್ವರ ಉಚ್ಚಿಲದಲ್ಲಿ 1949ರಲ್ಲಿ ತನ್ನ ಸ್ವಂತ ಜಮೀನಿನಲ್ಲಿ ಹಯಾತುಲ್ ಇಸ್ಲಾಮ್ ಮದ್ರಸವನ್ನು ಸ್ಥಾಪಿಸಿದರು. ಮಸೀದಿಯ ಪಕ್ಕದಲ್ಲೇ ರಹ್ಮಾನಿಯಾ ಮಸೀದಿಯೂ ಇತ್ತು. 1952ರಲ್ಲಿ ಸ್ನೇಹಿತರಾದ ಜಿಎಂ ಹಸೈನಾರ್, ಸೂಫಿಕುಂಞಿ ಅವರ ಸಹಕಾರದಿಂದ ಮಸೀದಿ ಮತ್ತು ಮದ್ರಸವನ್ನು ವಿಲೀನಗೊಳಿಸಿದರು. ಇದೀಗ ಈ ಸಂಸ್ಥೆಯ ಅಧೀನದಲ್ಲಿ ನಾಲ್ಕು ಮದ್ರಸ ಮತ್ತು ಆಂಗ್ಲಮಾಧ್ಯಮ ಶಾಲೆಯು ಕಾರ್ಯಾಚರಿಸುತ್ತಿವೆ. 1964ರಲ್ಲಿ ಇಸ್ಮಾಯೀಲ್ ಹಾಜಿ ತನ್ನ ಒಡನಾಡಿಗಳಾದ ಜಿಎಂ ಹಸೈನಾರ್, ಸೂಫಿಕುಂಞಿ, ಇದ್ದಿಕುಂಞಿ ಸೇರಿಕೊಂಡು ಈ ಮದ್ರಸ ಕಟ್ಟಡದಲ್ಲಿ ಸರಕಾರಿ ಶಾಲೆಯ ಆರಂಭಕ್ಕೆ ಅವಕಾಶ ಮಾಡಿಕೊಟ್ಟರು. ಆ ಮೂಲಕ ಪರಿಸರದ ಬಹುತೇಕ ಮುಸ್ಲಿಂ ಬಾಲಕಿಯರು ಲೌಕಿಕ ಶಿಕ್ಷಣವನ್ನು ಪಡೆಯುವಂತಾಯಿತು.

1949ರಿಂದ 1989ರವರೆಗೆ ಈ ಮದ್ರಸ, ಮಸೀದಿ, ಸರಕಾರಿ ಕನ್ನಡ ಮಾಧ್ಯಮ ಶಾಲೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಇಸ್ಮಾಯೀಲ್ ಹಾಜಿ 1952ರಿಂದ 1987ರವರೆಗೆ ಸೋಮೇಶ್ವರ ಉಚ್ಚಿಲ 407 ಜುಮಾ ಮಸೀದಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅಲ್ಲದೆ 1952ರಿಂದ 1953ರವರೆಗೆ ಕೆ.ಸಿ.ರೋಡ್‌ನ ಅಲ್ ಮುಬಾರಕ್ ಜುಮಾ ಮಸೀದಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಸಕಲೇಶಪುರದಲ್ಲಿ ಬದ್ರಿಯಾ ಮದ್ರಸ ಮತ್ತು ಮಸೀದಿಯನ್ನು ಸ್ಥಾಪಿಸಿ ಅದರ ಪ್ರಥಮ ಅಧ್ಯಕ್ಷರಾಗಿದ್ದ ಅವರು ಕೊನೆಯ ಉಸಿರೆಳೆಯುವವರೆಗೂ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಸಕಲೇಶಪುರದ ಹೆತ್ತೂರು ಎಂಬಲ್ಲಿ 1962ರಲ್ಲಿ ತನ್ನ ಸ್ವಂತ ಖರ್ಚಿನಿಂದ ಮಸೀದಿಯನ್ನು ನಿರ್ಮಿಸಿದ್ದರು. 1992ರ ಡಿಸೆಂಬರ್ 6ರ ಬಳಿಕ ಈ ಮಸೀದಿಯನ್ನು ದುಷ್ಕರ್ಮಿಗಳು ಧ್ವಂಸಗೈದಿದ್ದರು. ಬಳಿಕ ಆ ಮಸೀದಿ ಪಾಳುಬಿದ್ದಿತ್ತು.

ಉಳ್ಳಾಲ ಪಂಚಾಯತ್‌ಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಅವರು 30 ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳ ಮದುವೆಗಾಗಿ 1980ರಲ್ಲಿ ಅನ್ಸಾರುಲ್ ಮುಸ್ಲಿಮೀನ್ ಸಂಸ್ಥೆಯನ್ನು ಕಟ್ಟಿದರು. ಊರಲ್ಲಿ ಸಣ್ಣಪುಟ್ಟ ಸಮಸ್ಯೆಗಳಾದಲ್ಲಿ ಅದನ್ನು ಇತ್ಯರ್ಥಪಡಿಸುವಲ್ಲಿ ಮುಂಚೂಣಿಯಲ್ಲಿದ್ದ ಅವರು ಪತ್ನಿ ಖದೀಜಾ ಮತ್ತು 7 ಮಂದಿ ಪುತ್ರರು ಹಾಗೂ 5 ಮಂದಿ ಪುತ್ರಿಯರನ್ನು 1997ರ ಜನವರಿ 13ರಂದು ಬಿಟ್ಟಗಲಿದರು.

# ಶಿಕ್ಷಣಕ್ಕೆ ಪ್ರೇರಣೆ ನೀಡಿದ್ದ
# ಶಾಬಾನ್ ಮಾಸ್ಟರ್ ಮೂಳೂರು



ಉಡುಪಿ ಜಿಲ್ಲೆಯ ಮೂಳೂರಿನಲ್ಲಿ ಬಾಪುಕುಟ್ಟಿ ಬ್ಯಾರಿ–ಆಯಿಶಾಬಿ ದಂಪತಿಯ ಪುತ್ರನಾಗಿ 1899ರಲ್ಲಿ ಹುಟ್ಟಿ ಬೆಳೆದ ಶಾಬಾನ್ ಮಾಸ್ಟರ್ ಪದವಿ ಪೂರ್ವ ಕಾಲೇಜು ವ್ಯಾಸಂಗ ಮಾಡಿದ್ದಾರೆ.

ಸುಮಾರು 80 ವರ್ಷದ ಹಿಂದೆಯೇ ಮೂಳೂರು ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಧಾರ್ಮಿಕ ಮತ್ತು ಲೌಕಿಕ ಸಮನ್ವಯ ಶಿಕ್ಷಣಕ್ಕೆ ಪ್ರಾಧಾನ್ಯ ಕೊಟ್ಟಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಸಿಗುವುದಕ್ಕೂ ಮೊದಲೇ ಅಂದರೆ 1941ರಲ್ಲಿ  ಬೆಳಪು ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾಗಿ ಗ್ರಾಮೀಣ ಭಾಗದಲ್ಲಿ ಲೌಕಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದರು. ಮೂಳೂರು ಜುಮ್ಮಾ ಮಸೀದಿಯ ಖತೀಬರಾಗಿ, ಮೂಳೂರು ಮದ್ರಸದ ಮುಅಲ್ಲಿಮ್ ಆಗಿ ಸೇವೆ ಸಲ್ಲಿಸುವುದರೊಂದಿಗೆ ಮೂಳೂರು ಮಾಪಿಳಾ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿ ಲೌಕಿಕ ಮತ್ತು ಅಲೌಕಿಕ ಪಾಂಡಿತ್ಯ ಉಳ್ಳ ಅಪರೂಪದ ಜ್ಞಾನಿಯಾಗಿದ್ದರು.


ಮೂಳೂರು–ಉಚ್ಚಿಲ–ಬಳಪು–ಮಲ್ಲಾರ್ ಪ್ರದೇಶದಲ್ಲಿ ಇಂದು ಅಧಿಕ ಸಂಖ್ಯೆಯಲ್ಲಿ ವಿದ್ಯಾವಂತರಾಗಲು ಶಾಬಾನ್ ಮಾಸ್ಟರ್ ಕಾರಣ ಎಂದರೆ ತಪ್ಪಾಗಲಾರದು. ಅಂದಿನ ಕಾಲದಲ್ಲಿ ಮಹಿಳೆಯರು ವಿದ್ಯಾಭ್ಯಾಸ ಪಡೆಯಲು ಹುರಿದುಂಬಿಸಿದ್ದನ್ನು ಹಿರಿಯರು ನೆನಪಿಸುತ್ತಾರೆ.

ಮಸೀದಿ ಆಡಳಿತ ಮತ್ತು ಶಾಲೆಯ ದೈನಂದಿನ ಕಾರ್ಯಗಳನ್ನು ಬಹಳ ಅಚ್ಚುಕಟ್ಟಾಗಿ, ಎಲ್ಲಾ ಲೆಕ್ಕ ಪತ್ರ ಕಡತಗಳನ್ನು ಇಟ್ಟು ಕೊಂಡು ನಿಭಾಯಿಸುತ್ತಿದ್ದ ಅವರು ಕ್ರಿಯಾಶೀಲ ವ್ಯಕ್ತಿಯಾಗಿದ್ದರು.

ಅವರ ಹಿರಿಯ ಮಗ ಅಬ್ದುಲ್ ರಝಾಕ್ ಶಾಬಾನ್ ಭಾರತೀಯ ವಾಯುಪಡೆಯ ನಿವೃತ್ತ ಅಧಿಕಾರಿ. ಅಲ್ಲದೆ ಮೂಳೂರು ಜುಮ್ಮಾ ಮಸೀದಿಯ ಮಾಜಿ ಅಧ್ಯಕ್ಷ ಮತ್ತು ಉಡುಪಿ ಜಿಲ್ಲಾ ಮುಸ್ಲಿಂ ಒಕ್ಕೂಟದ ರೂವಾರಿಯಾಗಿದ್ದರು. ಎರಡನೇ ಮಗ ಮಹಮೂದ್ ಶಾಬಾನ್ ಮೂಳೂರು ಜುಮ್ಮಾ ಮಸೀದಿಯ ಆಡಳಿತ ಮಂಡಳಿ ಸದಸ್ಯ. ಮೂರನೇ ಮಗ ಶಂಶುದ್ದೀನ್ ಶಾಬಾನ್ ಉದ್ಯಮಿ ಹಾಗೂ ಮೂಳೂರು ಜುಮ್ಮಾ ಮಸೀದಿಯ ಆಡಳಿತ ಮಂಡಳಿಯ ಸದಸ್ಯ. ನಾಲ್ಕನೇ ಮಗ ಅಬ್ದುಲ್ ಖಾದರ್ ಶಾಬಾನ್ ಗಲ್ಫ್ ಉದ್ಯೋಗಿ, ಸಾಮಾಜಿಕ ಕಾರ್ಯಕರ್ತ.

ಪತ್ನಿ ಆಯಿಶಾ ಬೀಬಿ ಮತ್ತು ನಾಲ್ಕು ಮಂದಿ ಪುತ್ರರನ್ನು ಒಳಗೊಂಡ ಸಂತೃಪ್ತ ಕುಟುಂಬವನ್ನು ಹೊಂದಿದ್ದ ಅವರು 1957ರ ನವೆಂಬರ್ 14ರಂದು ನಿಧನರಾದರು.

# ಸಮಾಜ ಸೇವಕ ಮಹಮೂದ್ ಶೇಖಬ್ಬ ಮೂಳೂರು



ಉಡುಪಿ ಜಿಲ್ಲೆಯ ಮೂಳೂರು ತೋಟದ ಮನೆಯ ಎಂ.ಶೇಖಬ್ಬ ಮತ್ತು ಅಮೀನಾ ದಂಪತಿಯ ಪುತ್ರನಾಗಿ 1934ರಲ್ಲಿ ಜನಿಸಿದ ಮಹಮೂದ್ ಶೇಖಬ್ಬ ಬಾಲ್ಯದಲ್ಲೇ ಬಡತನವನ್ನು ಸವಾಲಾಗಿ ಸ್ವೀಕರಿಸಿದವರು.

ಜಾತಿ, ಧರ್ಮದ ಹಂಗಿಲ್ಲದೆ ಸಹಬಾಳ್ವೆಯನ್ನು ನಡೆಸಿದ ಅವರು ಪ್ರಭಾವಿ ವ್ಯಕ್ತಿ ತನ್ನ ಮುಂದೆ ನಿಂತರೂ ಕೂಡ ನ್ಯಾಯದ ಪರ ವಹಿಸುವ ಆದರ್ಶ ವ್ಯಕ್ತಿತ್ವ ಹೊಂದಿದ್ದರು. ತಪ್ಪನ್ನು ಖಂಡಿಸುವ ಗುಣ ವಿಶೇಷ ಹೊಂದಿದ್ದ ಅವರು ತಾನು ಮತ್ತು ತನ್ನ ಸಂಸಾರದ ಬಗ್ಗೆ ಮಾತ್ರ ಚಿಂತೆ ಮಾಡದೆ ಸಮಾಜಮುಖಿ ಕೆಲಸವನ್ನು ಮಾಡುತ್ತಾ ಊರಿನ ಜನರ ಪ್ರೀತಿ, ವಿಶ್ವಾಸ ಗಳಿಸಿದವರು. ಬಡವರ ಪರ, ಅನ್ಯಾಯದ ವಿರುದ್ಧ ಹೋರಾಡಿದವರು. ಉಚ್ಚಿಲ ಭಾಸ್ಕರ ನಗರದ ಬಡವರಿಗೆ ಸರಕಾರಿ ಭೂಮಿ ದೊರಕಿಸಿಕೊಡುವಲ್ಲಿ ಮತ್ತು ಮನೆ ಕಟ್ಟಿಸುವಲ್ಲಿ ಸ್ವತಃ ತನ್ನ ಮಕ್ಕಳೊಂದಿಗೆ ಸೇರಿ ಕೆಲಸ ಮಾಡಿದವರು.

ಸಮಾಜ ಸೇವೆಯ ಜೊತೆಗೆ ಧರ್ಮದ ಸತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕಿದ ಅವರು ಉಚ್ಚಿಲ ಸೈಯದ್ ಅರಬಿ ಮದ್ರಸ (ಇಂದು ಜುಮ್ಮಾ ಮಸೀದಿ) ಭಾಸ್ಕರ ನಗರದಲ್ಲಿ ಸ್ಥಾಪನೆಯಾಗಲು ಕಾರಣಕರ್ತರಾಗಿದ್ದರು.

ಸಾಮಾಜಿಕ ಕಾರ್ಯಚಟುವಟಿಕೆಯಲ್ಲಿ ಸದಾ ನಿರಂತರಾದ ಅವರು 19.11.1978ರಲ್ಲಿ ಮೂಳೂರು ಗ್ರಾಮ ಪಂಚಾಯತ್ ಸದಸ್ಯರಾಗಿ ಸತತವಾಗಿ ಎರಡು ಅವಧಿಗೆ ಆಯ್ಕೆಯಾಗಿದ್ದರು. 26.02.1994ರಲ್ಲಿ ಕಾಪು ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು 28.09.1981ರಿಂದ ಉಡುಪಿ ತಾಲೂಕು ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಕರ್ನಾಟಕ ಸರಕಾರದಿಂದ ನಾಮ ನಿರ್ದೇಶನಗೊಂಡಿದ್ದರು.

ರೈತರಿಗೆ, ಗೇಣಿದಾರರಿಗೆ ಹಕ್ಕು ದೊರಕಿಸಿಕೊಡುವಲ್ಲಿ ಕಾನೂನು ಹೋರಾಟ ಮಾಡಿದ್ದ ಅವರು 1990ರಿಂದ 1998ರವರಿಗೆ ಕಾಪು ಸಿಎ ಬ್ಯಾಂಕಿನ ನಿರ್ದೇಶಕ ಮಂಡಳಿಗೆ ಆಯ್ಕೆಯಾಗಿದ್ದರು. 1981ರಿಂದ 1985ರವರಿಗೆ ಕಾಪು ಬ್ಲಾಕ್ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿ ನೇಮಕಗೊಂಡು ರಾಜಕೀಯದಲ್ಲೂ ಪಳಗಿದರು. ಎಸ್. ಬಂಗಾರಪ್ಪ ಅವರ ಕ್ರಾಂತಿರಂಗದಲ್ಲೂ ಸೇವೆ ಸಲ್ಲಿಸಿದ್ದರು.

1975–1997ರವರೆಗೆ ಸೈಯದ್ ಅರಬಿ ವಲಿಯ ದರ್ಗಾ ಸಮಿತಿಯ ಪ್ರಧಾನ ಕಾರ್ಯಧರ್ಶಿಯಾಗಿ, ಮೂಳೂರಿನ ಸಿರಾಜುಲ್ ಇಸ್ಲಾಂ ಅರಬಿ ಮದರಸದ ಅಧ್ಯಕ್ಷರಾಗಿ, 1998ರಲ್ಲಿ ಉಡುಪಿ ಜಿಲ್ಲಾ ಸಂಯುಕ್ತ ಜಮಾಅತ್‌ನ ಸ್ಥಾಪಕ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮೂಳೂರು ಸುನ್ನಿ ಸೆಂಟರ್ ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 12.06.2007ರಂದು ಮೂಳೂರು ಜುಮ್ಮಾ ಮಸೀದಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಲ್ಲದೆ ಉಚ್ಚಿಲ ಸೈಯದ್ ಅರಬಿ ದರ್ಗಾ, ಮದ್ರಸ, ಮಸೀದಿಯ ಹಕ್ಕುಪತ್ರ ದೊರೆಕಿಸಿ ಕೊಡಲು ಅವಿರತ ಶ್ರಮಿಸಿದ್ದರು. 19.12.1978ರಲ್ಲಿ ಇಂದಿರಾ ಗಾಂಧಿಯ ಸೆರೆಯಾದಾಗ ಅದನ್ನು ವಿರೋಧಿಸಿ ಹೋರಾಡಿದ್ದರು. ಅದನ್ನು ವಿರೋಧಿಸಿ ಸಮಾಜ ಸೇವಕ ಎಂಇ ಮೂಳೂರು ಮತ್ತು ಅವರ ಪುತ್ರ ಶಾಲಾ ವಿದ್ಯಾರ್ಥಿ ಎಂ.ಎ. ಗಫೂರ್ ಸಹಿತ 166 ಮಂದಿಯನ್ನು ಬಂಧಿಸಿ ಕಾಪು ಕಾರಾಗೃಹದಲ್ಲಿಡಲಾಗಿತ್ತು.

ಅವರ ಸಮಾಜ ಸೇವೆಯನ್ನು ಗುರುತಿಸಿ 2001ರ ಅಕ್ಟೋಬರ್ 21ರಂದು ಉಡುಪಿಯಲ್ಲಿ ನಡೆದ ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲಾಗಿತ್ತು.

ಹೆಜಮಾಡಿ ಸಮೀಪದ ಕನ್ನಂಗಾರ್‌ನ ಛೀಫಾತಿಮಾರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಅವರದ್ದು ಐವರು ಗಂಡು ಮತ್ತು ಐವರು ಹೆಣ್ಮಕ್ಕಳ ತುಂಬು ಸಂಸಾರ. 2014ರ ಮಾರ್ಚ್ 15ರಂದು ಅವರು ಇಹಲೋಕ ತ್ಯಜಿಸಿದರು.

## ನಾಟಿವೈದ್ಯೆ ಬೀಪಾತುಮ್ಮ ಯಾನೆ ಪೊಡಿಮ್ಮ ಇಂಞ್ಞಾ ಕೂರ್ನಡ್ಕ



ಪುತ್ತೂರು ತಾಲೂಕಿನ ಕೆಮ್ಮಿಂಜೆ ಗ್ರಾಮದ ಕೂರ್ನಡ್ಕಲ್ಲಿ ಫಕ್ರು ಬ್ಯಾರಿ–ಖತೀಜಮ್ಮ ದಂಪತಿಯ ಪುತ್ರನಾಗಿ 1922ರಲ್ಲಿ ಜನಿಸಿದ ಬೀಪಾತುಮ್ಮ ಯಾನೆ ಪೊಡಿಮ್ಮ ಇಂಞ್ಞಾ ನುರಿತ ನಾಟಿವೈದ್ಯೆ. ಸುಮಾರು 60 ವರ್ಷಕ್ಕಿಂತಲೂ ಅಧಿಕ ಕಾಲ ಸಾವಿರಾರು ರೋಗಿಗಳಿಗೆ ನಾಟಿ ಮದ್ದು ನೀಡಿ ಗುಣಪಡಿಸಿದ ಖ್ಯಾತಿ ಅವರದ್ದು. ಕೆಂಪು, ಸರ್ಪಸುತ್ತು, ಉಗುರುಸುತ್ತು, ದಡಾರ, ಕಜ್ಜಿ, ದೃಷ್ಟಿ, ಬಿಳಿಸೆರಗು, ಅಸ್ತಮಾ, ಅರಶಿನ ರೋಗ ಇತ್ಯಾದಿಗೆ ಔಷಧ ನೀಡಿದ ಹಿರಿಮೆಗೆ ಪಾತ್ರರಾದ ಅವರು ಜಾನುವಾರುಗಳಿಗೂ ಔಷಧ ನೀಡುತ್ತಿದ್ದರು.

ಲಕ್ಷದ್ವೀಪದ ವೈದ್ಯರೊಬ್ಬರಿಂದ ತನ್ನ 20ರ ಹರೆಯದಲ್ಲೇ ಈ ವಿದ್ಯೆಯನ್ನು ಕರಗತಮಾಡಿಕೊಂಡ ಅವರು ಔಷಧಕ್ಕೆ ನಿಗದಿತ ಶುಲ್ಕ ವಿಧಿಸುತ್ತಿರಲಿಲ್ಲ. ದಿನಕ್ಕೆ ಗರಿಷ್ಟ 25 ಮಂದಿಗೆ ಜಾತಿ, ಮತ ನೋಡದೆ ಚಿಕಿತ್ಸೆ ನೀಡಿದ ಉದಾಹರಣೆಯೂ ಇದೆ. ನಾಟಿ ಮದ್ದುಗಳನ್ನು ಕಾಡಿನಲ್ಲೇ ಸಿಗುವ ಗಿಡಮೂಲಿಕೆಗಳಿಂದ ಅವರು ತಯಾರಿಸುತ್ತಿದ್ದರು. ಕಾಡು ಅಳಿಯತೊಡಗಿದಾಗ ಮನೆಯ ಅಂಗಳದಲ್ಲೇ ನಿರ್ಮಿಸಿದ ಕೈತೋಟದಲ್ಲಿ ಗಿಡಮೂಲಿಕೆ ಬೆಳೆಸಿದ್ದರು.

ಪುತ್ತೂರು ತಾಲೂಕು ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಗಳಿಂದ ಅಲ್ಲದೆ ಮೈಸೂರು–ಕೊಡಗು–ಬೆಂಗಳೂರು ಜಿಲ್ಲೆಯಿಂದಲೂ ರೋಗಿಗಳು ಅವರನ್ನು ಹುಡುಕಿಕೊಂಡು ಬರುತ್ತಿದ್ದರು.

ಕರ್ನಾಟಕದ ಸಚಿವರಾಗಿದ್ದ ಅಝೀಝ್ ಸೇಠ್ ಅವರ ಪತ್ನಿಗೆ ಸರ್ಪಸುತ್ತು ಆದಾಗ ಪೊಡಿಮ್ಮ ಇಂಞ್ಞಾ ಮೈಸೂರಿಗೆ ತೆರಳಿ ಚಿಕಿತ್ಸೆ ನೀಡಿ ಗಮನ ಸೆಳೆದಿದ್ದರು.

ಹಲವು ಸ್ವಯಂ ಸೇವಾ ಸಂಸ್ಥೆಗಳು ಪೊಡಿಮ್ಮ ಇಂಞ್ಞಾ ಅವರ ಸೇವೆಯನ್ನು ಗುರುತಿಸಿ ಗೌರವಿಸಿದೆ. 1997ರಲ್ಲಿ ಪುತ್ತೂರಿನ ಪರಿಸರಾಸಕ್ತ ಒಕ್ಕೂಟ ಮತ್ತು 1994ರಲ್ಲಿ ಪುತ್ತೂರಿನ ರೋಟರಿ ಕ್ಲಬ್ ಸನ್ಮಾನಿಸಿತ್ತು. ಕರ್ನಾಟಕ ತುಳು ಸಾಹಿತ್ಯ ಅಕಾಡಮಿಯು 1998ರಲ್ಲಿ ಮೂಡುಬಿದಿರೆಯಲ್ಲಿ ನಡೆದ ಸಮ್ಮೇಳನದಲ್ಲಿ ಸನ್ಮಾನಿಸಿದೆ. 2000ರಲ್ಲಿ ಉಳ್ಳಾಲದ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯು ರಾಣಿ ಅಬ್ಬಕ್ಕ ಪುರಸ್ಕಾರ ನೀಡಿ ಗೌರವಿಸಿದೆ.

ಐದನೆಯ ತರಗತಿಯವರೆಗೆ ಶಾಲೆ ಕಲಿತಿದ್ದ ಪೊಡಿಮ್ಮ ಇಂಞ್ಞಾ ಮದ್ರಸದಲ್ಲಿ ಅರಬಿಕ್ ಶಿಕ್ಷಣ ಪಡೆದಿದ್ದರು. ಕುರ್‌ಆನ್‌ನ್ನು ಲೀಲಾಜಾಲವಾಗಿ ಓದುತ್ತಿದ್ದರು.

2007ರ ಡಿಸೆಂಬರ್ 10ರಂದು (ದಿವಂಗತ ಪತಿ ಅಹ್ಮದ್ ಕುಂಞಿ) ತನ್ನ ಐದು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಅವರು ಅಗಲಿದ್ದಾರೆ, ಈಗ ಅವರ ಪುತ್ರ ಕೆ. ಹಸೈನಾರ್ ತನ್ನ ತಾಯಿಯ ನಾಟಿ ವೈದ್ಯ ವೃತ್ತಿಯನ್ನು ಮುಂದುವರಿಸಿದ್ದಾರೆ.ದ್ದಾರೆ, ಈಗ ಅವರ ಪುತ್ರ ಕೆ. ಹಸೈನಾರ್ ತನ್ನ ತಾಯಿಯ ನಾಟಿ ವೈದ್ಯ ವೃತ್ತಿಯನ್ನು ಮುಂದುವರಿಸಿದ್ದಾರೆ.

# ಎಲೆಮರೆಯ ಕಾಯಿಯಂತಹ ಪ್ರತಿಭೆ: ಹವ್ವಾಕುಂಞಿ ಉಪ್ಪಿನಂಗಡಿ



ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಮೂಲದ ಮುಕ್ರಿ ಕುಟುಂಬಕ್ಕೆ ಸೇರಿದ "ಟೆಕ್ಸ್‌ಟೈಲ್ ಸೆಂಟರ್" ಎಂಬ ಬಟ್ಟೆ ಅಂಗಡಿ ವ್ಯಾಪಾರಿಯಾಗಿರುವ ಅಬೂಬಕರ್ ಮುಕ್ರಿ–ಖದೀಜಾ ದಂಪತಿಯ ಪುತ್ರಿಯಾಗಿ 1941ರ ಆಗಸ್ಟ್ 6ರಂದು ಜನಿಸಿದ ಹವ್ವಾಕುಂಞಿ ಎಲೆಮರೆಯ ಕಾಯಿಯಂತೆ ಕಣ್ಮರೆಯಾದ ಪ್ರತಿಭೆ. ಅವರ ಪತಿ ಮೂಲತಃ ಮಂಜೇಶ್ವರದ ಮುಹಮ್ಮದ್ ಸೂಫಿ.

ಚಿಕ್ಕಮಗಳೂರು ಜಿಲ್ಲೆಯ ಬಣಕಲ್‌ನಲ್ಲಿ ಬಟ್ಟೆ ಅಂಗಡಿಯನ್ನು ತೆರೆದಿದ್ದ ಮುಹಮ್ಮದ್ ಸೂಫಿ ಅಲ್ಲೇ ಮನೆ ಮಾಡಿಕೊಂಡಿದ್ದರು. ಹಾಗಾಗಿ ಮಂಜೇಶ್ವರದ ಮುಹಮ್ಮದ್ ಸೂಫಿ ಮತ್ತು ಉಪ್ಪಿನಂಗಡಿಯ ಹವ್ವಾಕುಂಞಿಯ ದಾಂಪತ್ಯ ಜೀವನವು ಬಣಕಲ್‌ನಲ್ಲಿ ಮುಂದುವರಿಯಿತು.

ಮುಸ್ಲಿಂ ಮಹಿಳೆಯರು ಶಾಲೆಗೆ ಹೋಗುವುದು ದುಸ್ತರ ಎಂಬಂತಿದ್ದ ಆ ಕಾಲದಲ್ಲಿ ಹೆತ್ತವರ ಪ್ರೋತ್ಸಾಹದಿಂದ 8ನೆ ತರಗತಿಯವರೆಗೆ ಅವರು ಕಲಿತಿದ್ದರು. ತರಗತಿಯ ಕಲಿಕೆಗಿಂತಲೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಹಾಗಾಗಿ ಅವರು ಬ್ಯಾರಿ, ತುಳು ಭಾಷೆಯಲ್ಲದೆ ಕನ್ನಡ, ಇಂಗ್ಲಿಷ್, ಮಲಯಾಳಂ, ಉರ್ದು ಭಾಷೆಯಲ್ಲಿ ಪರಿಣತರಾಗಿದ್ದರು. ಆ ಕಾಲಕ್ಕೇ ಈ ಎಲ್ಲಾ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು, ಸಾಹಿತ್ಯ ಕೃತಿಗಳನ್ನು ಓದುವ ಮತ್ತು ರೇಡಿಯೋ ಕೇಳುವ ಹವ್ಯಾಸ ಬೆಳೆಸಿಕೊಂಡಿದ್ದರು. ದೇಶ ಮತ್ತು ವಿದೇಶದ ಆಗುಹೋಗುಗಳ ಬಗ್ಗೆ ಅಪಾರ ಜ್ಞಾನವುಳ್ಳವರಾಗಿದ್ದರು. ಸಾಮಾನ್ಯ ಮಹಿಳೆಯರ ಚರ್ಚಾ ವಿಷಯಕ್ಕಿಂತಲೂ ಪ್ರಸಕ್ತ ವಿದ್ಯಮಾನ, ರಾಜಕೀಯ ಆಗು ಹೋಗುಗಳು ಮತ್ತು ಮುಸ್ಲಿಂ ಜಗತ್ತು ಎದುರಿಸುವ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿತ್ತು.

ತನ್ನ ಜೀವನದ ಹೆಚ್ಚಿನ ಸಮಯವನ್ನು ಬಣಕಲ್‌ನಲ್ಲಿ ಅವರು ಕಳೆದಿದ್ದರು. ಅಲ್ಲಿ ಬ್ಯಾರಿಗಳ ಸಂಖ್ಯೆ ಕಡಿಮೆ, ಸಂಘ ಸಂಸ್ಥೆಗಳ ಚಟುವಟಿಕೆಯೂ ಅಷ್ಟೇನೂ ಇರಲಿಲ್ಲ. ಆದರೂ ಸಿಕ್ಕಿದ ಅವಕಾಶವನ್ನು ಸಮಾಜದ ಹಿತಕ್ಕಾಗಿ ಬಳಸಿದರು. ಪತ್ರಿಕೆಗಳನ್ನು ವಾಚಿಸುವುದರೊಂದಿಗೆ ಸೌದಿ ಅರೇಬಿಯಾ ಮತ್ತು ಕುವೈಟ್‌ನ ರೇಡಿಯೋ ಕಾರ್ಯಕ್ರಮದ ಶ್ರೋತೃವಾಗಿದ್ದರು. ವಿಶೇಷವಾಗಿ ಸುಶ್ರಾವ್ಯವಾಗಿ ಕುರ್‌ಆನ್ ವಾಚನ ಮತ್ತು ಕುರ್‌ಆನ್ ಕುರಿತಾದ ಕಾರ್ಯಕ್ರಮಕ್ಕಾಗಿ ಅವರು ಗಲ್ಫ್ ರಾಷ್ಟ್ರಗಳ ರೇಡಿಯೋಗಳ ಮೊರೆ ಹೋಗುತ್ತಿದ್ದರು. ಯಾವ ದೇಶದಲ್ಲಿ ಯಾವ ಕುರ್‌ಆನ್ ವಾಚಕರು ಮತ್ತು ಪಂಡಿತರು ಯಾವ ಕಾರ್ಯಕ್ರಮ ನಡೆಸುತ್ತಿದ್ದಾರೆ ಎಂಬುದನ್ನು ಕರಾರುವಕ್ಕಾಗಿ ವಿವರಿಸುವ ಜಾಣ್ಮೆಯೂ ಅವರಿಗೆ ಇತ್ತು. ಕುರ್‌ಆನ್ ಬಗ್ಗೆಯೂ ಅವರಿಗೆ ವಿಶೇಷ ಜ್ಞಾನವಿತ್ತು. ಕುರ್‌ಆನ್‌ನ ಯಾವುದೇ ವಾಕ್ಯದ ಬಗ್ಗೆ ಕೇಳಿದರೂ ಅವರು ತಕ್ಷಣ ಅದು ಇಂತಹ ಅಧ್ಯಾಯದಲ್ಲಿದೆ ಎಂದು ಹೇಳುತ್ತಿದ್ದರು. ಇಸ್ಲಾಮಿನ ಕರ್ಮಶಾಸ್ತ್ರದ ಬಗ್ಗೆಯೂ ಅವರಿಗೆ ಅಪಾರ ಜ್ಞಾನವಿತ್ತು. ಹಜ್ ಯಾತ್ರೆಯ ವೇಳೆ ಬ್ಯಾರಿ ಮಹಿಳೆಯರಿಗೆ ಬ್ಯಾರಿ ಭಾಷೆಯಲ್ಲೇ ಮನಮುಟ್ಟುವಂತೆ ಹಜ್ ಮತ್ತು ಉಮ್ರಾಕ್ಕೆ ಸಂಬಂಧಪಟ್ಟ ವಿಚಾರಗಳನ್ನು ವಿವರಿಸಿಕೊಡುವ ಪರಿಪಾಠ ಬೆಳೆಸಿಕೊಂಡಿದ್ದರು.

"ಉರ್ದು–ಕನ್ನಡ" ಅರ್ಥಕೋಶ ಬರುವುದಕ್ಕೆ ಮೊದಲೇ ಅವರು ಉರ್ದು ಭಾಷೆಯ "ತಫ್ಹೀಮುಲ್ ಕುರ್‌ಆನ್" ಎಂಬ ಆರು ಸಂಪುಟದಲ್ಲಿರುವ ವ್ಯಾಖ್ಯಾನ ಗ್ರಂಥವನ್ನು ಓದಿ ಅದರ ಪದಗಳ ಕನ್ನಡ ಅರ್ಥವನ್ನು ಸೂಚಿಸುವ "ಉರ್ದು ಕನ್ನಡ" ಅರ್ಥಕೋಶವನ್ನು ಸ್ವತಃ ಕೈಬರಹದಲ್ಲಿ ಸಿದ್ಧಪಡಿಸಿದ್ದರು.

ಉಪ್ಪಿನಂಗಡಿ ಮೂಲದವರಿಗೆ ಉರ್ದು ಬರುವುದು ಕಡಿಮೆ. ಆದರೆ ಅವರ ಪತಿ ಮುಹಮ್ಮದ್ ಸೂಫಿ ಬಣಕಲ್‌ನಲ್ಲಿರುವಾಗ ಉರ್ದು ಕಲಿತಿದ್ದರು. ತನ್ನ ಮಕ್ಕಳನ್ನೂ ಅವರು ಉರ್ದು ಶಾಲೆಗೆ ಸೇರಿಸಿದ್ದರು. ಪತಿ ಮತ್ತು ಮಕ್ಕಳ ಸಹಕಾರದಿಂದ ಹವ್ವಾಕುಂಞಿಯೂ ಉರ್ದು ಕಲಿತಿದ್ದರು. ಆ ಮೂಲಕ ಉರ್ದು ಸಾಹಿತ್ಯವನ್ನೂ ಅರಗಿಸಿಕೊಂಡಿದ್ದರು. ಮೊದಲು ಕನ್ನಡದಲ್ಲಿ ಇಸ್ಲಾಮೀ ಸಾಹಿತ್ಯ ಕೃತಿಗಳು ಅಷ್ಟೇನೂ ಇರಲಿಲ್ಲ. ಹಾಗಾಗಿ ಹವ್ವಾಕುಂಞಿ ಉರ್ದು ಮತ್ತು ಮಲಯಾಳಂನ ಇಸ್ಲಾಮೀ ಸಾಹಿತ್ಯ ಕೃತಿಗಳನ್ನು ಓದುತ್ತಿದ್ದರು. ಬಳಿಕ ಕನ್ನಡ ಇಸ್ಲಾಮಿಕ್ ಸಾಹಿತ್ಯದತ್ತ ವಾಲಿದರು. ಇಳಿವಯಸ್ಸಿನಲ್ಲಿ ಕಂಪ್ಯೂಟರ್ ಕಲಿತಿದ್ದರು. ಅಪ್ರತಿಮ ಜ್ಞಾಪಕಶಕ್ತಿ ಹೊಂದಿದ್ದರು. ತನ್ನ ಕುಟುಂಬದ ಎಲ್ಲಾ ಸದಸ್ಯರ ಹುಟ್ಟಿದ ದಿನ, ದೈನಂದಿನ ಅಗತ್ಯದ ವಿಷಯಗಳನ್ನು

ಬಾಯ್ದೆರೆಯಾಗಿ ಅವರು ಹೇಳುತ್ತಿದ್ದರು.

ಹವ್ವಾಕುಂಞಿಯ ಅಪಾರ ಸಾಹಿತ್ಯಾಸಕ್ತಿ ಮತ್ತು ಇಸ್ಲಾಮೀ ಸಾಹಿತ್ಯ ಕೃತಿಗಳನ್ನು ಸ್ವತಃ ಕೊಂಡು ಇತರರಿಗೂ ವಿತರಿಸುತ್ತಿದ್ದ ಅವರ ಸೇವೆಯನ್ನು ಪರಿಗಣಿಸಿ ಮಂಗಳೂರಿನ ಶಾಂತಿ ಪ್ರಕಾಶನ ಸಂಸ್ಥೆಯು 2013ರಲ್ಲಿ ತನ್ನ ಬೆಳ್ಳಿ ಮಹೋತ್ಸವ ಸಂದರ್ಭ ಸನ್ಮಾನಿಸಿ ಗೌರವಿಸಿತ್ತು.

ಹವ್ವಾಕುಂಞಿಯ ಮಕ್ಕಳೂ ಕೂಡ ಇಸ್ಲಾಮೀ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ಹಿರಿಯ ಮಗ ಇಕ್ಬಾಲ್ ಸೂಫಿ "ಸರಳ ಕನ್ನಡ ಕುರ್‌ಆನ್" ವೆಬ್ ಪೋರ್ಟಲ್ ನಡೆಸುತ್ತಿದ್ದಾರೆ. ಎರಡನೇ ಮಗ ಬಿಎಸ್ ಶರ್ಫುದ್ದೀನ್ ಅಂತಾರಾಷ್ಟ್ರೀಯ ವಾಗ್ಮಿ, ಅನುವಾದಕರಾಗಿದ್ದಾರೆ.

ಹೀಗೆ ಬ್ಯಾರಿ ಮಹಿಳಾ ವಲಯದಲ್ಲಿ ಸದ್ದಿಲ್ಲದೆ ಸಾಹಿತ್ಯಾಸಕ್ತಿ ಹುಟ್ಟಿಸಿದ ಹವ್ವಾಕುಂಞಿ 6 ಮಂದಿ ಪುತ್ರರು ಮತ್ತು 3 ಮಂದಿ ಪುತ್ರಿಯರನ್ನು 2018ರ ಮೇ 16ರಂದು ಅಗಲಿದ್ದಾರೆ.

# ಸಮಾಜ ಸೇವಕಿ ಆಮಿನಮ್ಮ ಬಸ್ತಿಪಡ್ಪು ಉಳ್ಳಾಲ



ಉಳ್ಳಾಲ ಅಕ್ಕರಕರೆಯ ಉಮರಬ್ಬ–ಅತಿಜಮ್ಮ ದಂಪತಿಯ ಪುತ್ರಿಯಾಗಿ 1958ರಲ್ಲಿ ಜನಿಸಿದ ಆಮಿನಮ್ಮ ಮದುವೆಯಾದ ಬಳಿಕ ಉಳ್ಳಾಲದ ಬಸ್ತಿಪಡ್ಪುವಿನಲ್ಲಿ ಪತಿ ಮೂಸಾಕುಂಞಿ ಅವರ ಮನೆಯಲ್ಲಿ ನೆಲೆಸಿದರು. ಬಹುತೇಕ ಮುಸ್ಲಿಂ ಮಹಿಳೆಯರು ಗಂಡ, ಮಕ್ಕಳು, ಮನೆಗೆ ಮಾತ್ರ ಸೀಮಿತವಾಗಿದ್ದ ಆ ಕಾಲದಲ್ಲಿ ಆಮಿನಮ್ಮ ತನ್ನ 20ರ ಹರೆಯದಲ್ಲೇ ಸಮಾಜ ಸೇವೆಗೆ ಇಳಿದರು. ಬಡವರ ಬಗ್ಗೆ ಅಪಾರ ಕರುಣೆ ತೋರಿಸಿದರು. ತನ್ನ ಕೈಯಲ್ಲಿ ಹಣವಿಲ್ಲದಿದ್ದರೂ ಕೂಡ ಇತರರಿಂದ ಕೇಳಿ ಪಡೆದು ಮನೆಕಟ್ಟಿಸಲೋ, ರೋಗಕ್ಕೆ ಚಿಕಿತ್ಸೆ ಮಾಡಿಸಲೋ ಅಗತ್ಯ ಉಳ್ಳವರಿಗೋ ಸಹಾಯ ಮಾಡುತ್ತಿದ್ದರು. ಹಾಗೇ ಮಾಡುವಾಗ ತನ್ನ ಕುಟುಂಬಕ್ಕಿಂತಲೂ ಪರಿಚಯವೇ ಇಲ್ಲದ ಅರ್ಹರಿಗೆ ನೆರವು ನೀಡುವುದರಲ್ಲಿ ಮುಂಚೂಣಿಯಲ್ಲಿದ್ದರು.

ಶಾಲೆಯ ಶಿಕ್ಷಣವಿಲ್ಲದಿದ್ದರೂ ಕೂಡ ಮದ್ರಸ ಶಿಕ್ಷಣ ಪಡೆದು ಅದನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅಪ್ಪಟ ಧರ್ಮಾನುಯಾಯಿ ಆಗಿದ್ದರೂ ಮನೆಯಲ್ಲಿ ಕೂರಲಿಲ್ಲ. ಆಸುಪಾಸಿನವರ ಸಂಕಷ್ಟಗಳಿಗೆ ಸ್ಪಂದಿಸತೊಡಗಿದ್ದರು.

ಸುಮಾರು 42 ವರ್ಷಗಳ ಕಾಲ ಅವರು ಸಮಾಜದ ಒಡನಾಡಿಯಾಗಿದ್ದರು. ಸಾವಿರಾರು ಮಹಿಳೆಯರ ಮೈಯತ್ತ್ ಸ್ನಾನ, ಅನಾರೋಗ್ಯ ಪೀಡಿತರ ಆರೈಕೆ, ಆರ್ಥಿಕವಾಗಿ ಹಿಂದುಳಿದವರ ಮನೆ ನಿರ್ಮಾಣಕ್ಕೆ ದಾನಿಗಳಿಂದ ನೆರವು ಕೊಡಿಸುವ ಮೂಲಕ ನಿಸ್ವಾರ್ಥ ಸಮಾಜ ಸೇವಕಿಯಾಗಿ ಗುರುತಿಸಿದ್ದರು. ಹಾಗಾಗಿ ಉಳ್ಳಾಲದ ಜನತೆಗೆ ಅವರು 'ಆಮಿನಾ ಉಮ್ಮಾ' ಆಗಿದ್ದರು. ಸಾತ್ವಿಕ ಗುಣ ಸ್ವಭಾವ, ಅಪಾರ ಧಾರ್ಮಿಕ ಜ್ಞಾನ ಮತ್ತು ನಿಷ್ಠೆಯುಳ್ಳವರಾಗಿದ್ದ ಅವರು ಮತಪ್ರವಚನ–ಕುರ್‌ಆನ್–ಹದೀಸ್ ತರಗತಿಗಳಿಗೆ ತಪ್ಪದೆ ಹಾಜರಾಗುವ ಮೂಲಕ ಇತರರಿಗೆ ಮಾದರಿಯಾಗಿದ್ದರು.

ಉಳ್ಳಾಲದ ಕಡಲಲ್ಲಿ ತೇಲಿ ಬರುವ ಅಪರಿಚಿತ ಮಹಿಳೆಯರ ಅದರಲ್ಲೂ ಕೊಳೆತ ಮೃತದೇಹದ ಅಂತ್ಯಕ್ರಿಯೆಗೆ ಸಂಬಂಧಿಸಿ ವಿಧಿವಿಧಾನಗಳನ್ನು ಪೂರೈಸುವಲ್ಲಿಯೂ ಅವರು ಮುಂಚೂಣಿಯಲ್ಲಿದ್ದರು. ಅವರಿಂದ ಪ್ರೇರಿತರಾದ ಹಲವು ಮಹಿಳೆಯರು ಮೈಯತ್ ಸ್ನಾನ ಮಾಡಿಸಲು ಆಸಕ್ತಿ ವಹಿಸಿದ್ದ ಬಗ್ಗೆ ಸ್ಥಳೀಯರು ನೆನಪಿಸುತ್ತಾರೆ. ಅವರ ಸಮಾಜಸೇವೆಯನ್ನು ಗುರುತಿಸಿ ಉಳ್ಳಾಲ ಮತ್ತು ಮಂಗಳೂರಿನ ಹಲವು ಸಂಘಟನೆಗಳು ಸನ್ಮಾನಿಸಿದೆ.

ನಾಲ್ಕು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು 2020ರ ಜುಲೈ 20ರಂದು ತನ್ನ 62ನೆ ಹರೆಯದಲ್ಲಿ ಅವರು ಬಿಟ್ಟಗಲಿದ್ದಾರೆ.

# ಸಮಾಜ ಸೇವಕಿ ರುಖಿಯಾದ ಮಂಚಿಲ ಉಳ್ಳಾಲ



ತೊಕ್ಕೊಟ್ಟು ಜಂಕ್ಷನ್‌ನಿಂದ ರೈಲ್ವೆ ಹಳಿ ದಾಟಿ ಒಳ ಪೇಟೆಯ ನೇರ ದಾರಿಯಲ್ಲಿ ಹೋಗುವಾಗ ಮಂಚಿಲದಿಂದ ಅಳೇಕಲ  ಸುತ್ತಮುತ್ತಲ ಪ್ರದೇಶದ ಹೆಚ್ಚಿನವರಲ್ಲಿ ರುಖಿಯಾದರ ಬಗ್ಗೆ ಹಲವರು ನೂರಾರು ಘಟನೆಗಳನ್ನು ನೆನಪಿಸಿಕೊಳ್ಳುತ್ತಾರೆ. ಅವರು ಮಾಡಿದ ಸೇವೆಯ ಪುರಾವೆ ತೋರಿಸಲು ಪ್ರಶಸ್ತಿ ಪತ್ರಗಳೋ, ಸ್ಮರಣಿಕೆಗಳೋ ಇಲ್ಲದಿದ್ದರೂ ಅವರ ಜನಸೇವೆ ಅಪ್ಪಿಷ್ಟಲ್ಲ. ಹತ್ತು ವರ್ಷದ ಹಿಂದೆ ಪರಿಸರದ ಸರ್ವರ ನೋವಿಗೆ, ಕಷ್ಟಕ್ಕೆ, ಬಡತನಕ್ಕೆ, ದುಃಖಕ್ಕೆ ಪಾಲುದಾರಳಾಗಿ ಊರಿನವರ ಹೃದಯದಲ್ಲಿ ಅಚ್ಚಳಿಯದೆ ಉಳಿದ ಮಮತೆಯ ಸಂಕೇತವಾಗಿ ಅವರು ಬಾಳಿದ್ದರು.

ಕಾಟಿಪಳ್ಳದ ಇದ್ದಿನಬ್ಬ ಮತ್ತು ಉಳ್ಳಾಲ ಕೋಟೆಪುರದ ಖತೀಜಾ ದಂಪತಿಯ ಮೂವರು ಮಕ್ಕಳಲ್ಲಿ ಹಿರಿಯ ಹೆಣ್ಣು ಮಗಳಾಗಿ 1944ರಲ್ಲಿ ಮಂಗಳೂರು ಬಂದರಿನ ಬೆಲಿಯಗ ತರವಾಡಿನಲ್ಲಿ ರುಖಿಯ ಜನಿಸಿದರು. ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಕಲಿಯುವುದು  ಕನಸ್ಸಾಗಿತ್ತು. ಹಾಗಾಗಿ ರುಖಿಯಾ ಶಾಲೆಯ ಮೆಟ್ಟಿಲನ್ನು ತುಳಿಯಲಿಲ್ಲ. ಪ್ರಾಥಮಿಕ ಮದರಸ ಶಿಕ್ಷಣ ಮುಗಿಸಿದ ನಂತರ ಅರ್ಕುಳದ ಫರಂಗಿಪೇಟೆಯ ಅಬ್ದುಲ್ ಖಾದರ್ (ಬಾವಾಕ) ಅವರನ್ನು ವಿವಾಹವಾದರು. ಪತಿಯ ಕುಟುಂಬಕ್ಕೆ "ಪ್ರೇಮ" ಬೀಡಿ ಉದ್ಯಮವಾಗಿತ್ತು. 1976ರ ಜೂನ್‌ನಲ್ಲಿ ಭೀಕರ ನೆರೆ ಹಾವಳಿಯಿಂದಾಗಿ ಅವರು ಫರಂಗಿಪೇಟೆಯ ಮನೆ ಮತ್ತು ಜಮೀನನ್ನು ಕಳಕೊಂಡರು. ನಂತರ ಕುಟುಂಬದಲ್ಲಿ ಆಸ್ತಿ ಹಂಚಿಕೆಯಾಗಿ ಉಳ್ಳಾಲಕ್ಕೆ ವಲಸೆ ಬಂದು ಮನೆ ಮತ್ತು ಜಮೀನು ಖರೀದಿಸಿ ನೆಲೆಸಿದರು. ಅದೇ ವರ್ಷ ಕ್ಯಾನ್ಸರ್ ರೋಗದಿಂದಾಗಿ ಅವರ ಪತಿ ತೀರಿಕೊಂಡರು.

1974ರಲ್ಲಿ ಕೋಟೆಕ್ಕಾರಿನಲ್ಲಿ ಮನೆ ಖರೀದಿಸಿ ತನ್ನ ಅಣ್ಣನ ಜೊತೆಗೆ ವಾಸಿಸಲಾರಂಭಿಸಿದರು. ಮಕ್ಕಳು ಆರ್ಥಿಕವಾಗಿ ಸಬಲಾರಾದ ನಂತರ 1989ರಲ್ಲಿ ಉಳ್ಳಾಲದ ಮಂಚಿಲದಲ್ಲಿ ಮನೆ ಖರೀದಿಸಿದರು.

ಮಂಚಿಲಕ್ಕೆ ಆಗಮಿಸಿದ ನಂತರ ರುಖಿಯ ಆ ಊರಿನ ನೆಚ್ಚಿನ ರುಖ್ಯಾದಳಾಗಿ ಬದಲಾದರು. ಉನ್ನತ ಉದ್ಯೋಗದಲ್ಲಿದ್ದ ತನ್ನ ಮಕ್ಕಳು ತನಗೆ ಖರ್ಚಿಗೆಂದು ಕೊಡುತ್ತಿದ್ದ ಹಣವನ್ನು ಕೂಡಿಟ್ಟು ಊರಿನ ಬಡವರಿಗೆ ನೆರವಾಗತೊಡಗಿದರು. ಮಾಸಿಕ ಆಹಾರ ಸಾಮಾಗ್ರಿಗಳನ್ನು ವಿತರಿಸುವುದು. ರೋಗಿಗಳ ಸುಶ್ರೂಸೆಗಾಗಿ ಆಸ್ಪತ್ರೆ ಖರ್ಚಿಗಾಗಿ ಹಣ ನೀಡುವುದು ಇತ್ಯಾದಿ ಅವರ ದೈನಂದಿನ ಕಾರ್ಯವಾಗಿತ್ತು. ಭಿಕ್ಷುಕನಾಗಲಿ, ವ್ಯಾಪಾರಿಯಾಗಲಿ, ಕೂಲಿ ಕಾರ್ಮಿಕನಾಗಲಿ, ಮನೆ ಬಾಗಿಲಿನ ಬಳಿ ಬಂದು ನಿಂತರೆ ಒಂದು ಲೋಟ ನೀರು ಕೊಟ್ಟು "ನೀನು ಏನಾದರು ತಿಂದಿದ್ದಿಯಾ? ಎಂದು ಕೇಳಿ, ಹಸಿದವರಿಗೆ ಹೊಟ್ಟೆ ತುಂಬುವಷ್ಟು ಆಹಾರ ನೀಡುತ್ತಿದ್ದರು.

ಅಂದಿನ ಕಾಲಕ್ಕೆ ಅಷ್ಟೇನು ಪ್ರಗತಿಯ ಮೆಟ್ಟಿಲು ಹತ್ತದ ಆ ಪ್ರದೇಶದಲ್ಲಿ ಕೆಲವು ಬೆರಳಣಿಕೆಯ ಹೆಂಚಿನ ಮನೆಗಳಿದ್ದರೆ ಹೆಚ್ಚಿನವುಗಳು ಬಡವರ ಮನೆಗಳಾಗಿತ್ತು. ತೆಂಗಿನಗರಿಗಳಿಂದ ಕಟ್ಟಿದ ಗುಡಿಸಲುಗಳಲ್ಲಿ ವಾಸಿಸುವವರೂ ಇದ್ದರು. ನೇತ್ರಾವತಿ ನದಿ ತೀರದ ಪ್ರದೇಶವಾದ್ದರಿಂದ ಕೂಲಿಕಾರ್ಮಿಕರು, ಮೀನುಗಾರರು ಮತ್ತು ಹೆಚ್ಚಿನವರು ಕೃಷಿಕರಾಗಿದ್ದರು. ದೊಡ್ಡ ರೋಗಗಳಿಗೆ ಮಾತ್ರ ಆಸ್ಪತ್ರೆ ಹೋಗುತ್ತಿದ್ದರಲ್ಲದೆ ಕೈ–ಕಾಲು ಮುರಿದುಕೊಂಡರೆ, ಜ್ವರ ಬಂದರೆ, ಹೆರಿಗೆ ನೋವಾದರೆ, ಮೊದಲು ಓಡಿಕೊಂಡು ಬರುವುದು ರುಖ್ಯಾದರ ಬಳಿ. ಆ ಊರಿನ ಜನರಿಗೆ ಅವರೇ ವೈದ್ಯ. ಅಗತ್ಯಕ್ಕೆ ಬೇಕಾದ ಎಲ್ಲಾ ಬಗೆಯ ನಾಟಿ ಮದ್ದಿನಲ್ಲಿ ಪ್ರಾಮುಖ್ಯತೆ ಪಡೆದಿದ್ದರು. ಅಲ್ಲಿನ ಪ್ರತಿಯೋರ್ವರಿಗೂ ರುಖಿಯಾದ ಹತ್ತಿರವಿದ್ದರೆ ಆನೆ ಬಲ ಬಂದಂತೆ. ಪ್ರತಿಯೊಬ್ಬನಿಗೆ ಸರಿ ಸಮಾನ ಮಾತೃಹೃದಯದ ಮಮತೆ ತೋರಿಸುತ್ತಿದ್ದರು.

ಧೈರ್ಯದಿಂದ ಎಂತಹ ಸವಾಲುಗಳನ್ನು ಮೆಟ್ಟಿ ನಿಲ್ಲಲು ಸಾಮರ್ಥ್ಯ ಹೊಂದಿದ್ದರು. ಊರಿನಲ್ಲಿ ಯಾರಾದರೂ ರೋಗದಿಂದ ಹಾಸಿಗೆ ಹಿಡಿದ ಮಾಹಿತಿ ತಿಳಿದ ತಕ್ಷಣ ಹಾಜರಾಗುತ್ತಿದ್ದರು. ಮಯ್ಯತ್‌ಗಾಗಿ ಬಿಸಿ ನೀರು ಕಾಯಿಸುವುದು, ಮನೆಯವರಿಗೆ ಸಾಂತ್ವನ ಹೇಳುವುದು, ಮರಣದ ಮನೆಯವರಿಗಾಗಿ ಊಟದ ವ್ಯವಸ್ಥೆ ಮಾಡುವುದು. ಮಹಿಳೆ ಅಥವಾ ಹೆಣ್ಣು ಮಕ್ಕಳ ಮರಣವಾದರೆ ಮಯ್ಯತ್ ಪರಿಪಾಲನೆ, ಮಯ್ಯತ್ ಸ್ನಾನ, ಖಫನ್ ಬಟ್ಟೆ ಹೊದಿಸುವುದು ಇತ್ಯಾದಿ ಸ್ವಯಂ ಎದುರು ನಿಂತು ನೆರವೇರಿಸುತ್ತಿದ್ದರು. ಸುಮಾರು ನೂರಕ್ಕಿಂತ ಹೆಚ್ಚು ಮಯ್ಯತ್ ಪರಿಪಾಲನೆಯನ್ನು ಅವರು ಮಾಡಿದ್ದಾರೆ. ಯಾವುದೇ ಅಂಜಿಕೆಯಿಲ್ಲದೆ ಧೈರ್ಯವಂತಿಕೆಯ ಕೆಲವು ಮಹಿಳೆಯರಲ್ಲಿ ರುಖಿಯಾದ ಅಗ್ರಗಣ್ಯರು.

ಅವರು ಹೆಚ್ಚು ಮಹತ್ವ ಕೊಡುತ್ತಿದ್ದ ಇನ್ನೊಂದು ವಿಷಯ ಶಿಕ್ಷಣ. ತಾನು ಅಕ್ಷರ ಕಲಿಯಲಿಲ್ಲ ಎಂಬ ಕೊರಗು ಅವರನ್ನು ನಿರಂತರ ಕಾಡುತಿತ್ತು. ತನ್ನ ಕೊನೆಯ ಉಸಿರಿನವರೆಗೂ ಅದನ್ನವರು ಹೇಳುತ್ತಿದ್ದರು ಎಂದು ಮಕ್ಕಳು ನೆನಪಿಸಿ ಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಕಲಿಯಲು ಅವರು ಹೆಚ್ಚು ಒತ್ತು ಕೊಡುತ್ತಿದ್ದರು, ಮಕ್ಕಳಿಗೆ ಪುಸ್ತಕ ವಿತರಿಸುವುದು, ಸಮವಸ್ತ್ರ ಹೊಲಿಯಲು ಹಣ ನೀಡುವುದು, ಶಾಲೆಯ ಶುಲ್ಕ ನೀಡುವುದು, ಬಡತನ ಕಾರಣದಿಂದ ಶಾಲೆ ತೊರೆದವರಿಗೆ ನೆರವು ನೀಡುವುದು ಇತ್ಯಾದಿ ಸೇವೆ ಮಾಡುತ್ತಿದ್ದರು.

ಅವರದು ಸಂಘಟನಾತೀತ ವ್ಯಕ್ತಿತ್ವ. ಯಾರಿಂದ ದೇಣಿಗೆ ಪಡೆಯದೆ ತನ್ನ ಮಕ್ಕಳು ಖರ್ಚಿಗಾಗಿ ಕೊಟಗಟ ಹಣದಿಂದಲೇ ಜನಸೇವೆ ಮಾಡುತ್ತಿದ್ದರು. ಊರಿನವರೊಂದಿಗೆ ಹೆಚ್ಚು ನಿಕಟವಾದ ಸಂಬಂಧ ಹೊಂದಿದ್ದರು. ಪ್ರತಿದಿನ ಅವರನ್ನು ಸ್ಮರಿಸದ ಜನರಿಲ್ಲ. ಜನ ಉಪಯೋಗಿ ಸೇವೆ ಮಾಡುವ ಸಂಘಟನೆಗಳಿಗೆ, ಮಸೀದಿಗಳಿಗೆ ತನ್ನದೇ ಆದ ದೇಣಿಗೆಯನ್ನು ನೀಡುತ್ತಿದ್ದರು. ಜಾತಿ ಭೇದವಿಲ್ಲದೆ ಎಲ್ಲರ ಏಳಿಗೆಗಾಗಿ ಶ್ರಮವಹಿಸಿದರು.

ಊರಿನಲ್ಲಿ ಮದುವೆಯಾಗದ, ಪ್ರಾಯ ಮೀರಿದ ಹೆಣ್ಣು ಮಕ್ಕಳ ಬಗ್ಗೆ ಅಪಾರ ಕಾಳಜಿ ಇತ್ತು. ಅಂತಹವರು ಹೆಚ್ಚಿನ ಸಂಖ್ಯೆಯಲ್ಲಿ ಬಡವರೇ ಆಗಿದ್ದರಿಂದ ಹೆಣ್ಣು ಮಕ್ಕಳಿಗಾಗಿ ವರ ಹುಡುಕುವುದು, ಮದುವೆ ಖರ್ಚಿಗೆ ಹಣ ನೀಡುವುದು. ಅವರ ನಿಸ್ವಾರ್ಥ ಸೇವಯ ಭಾಗವಾಗಿತ್ತು. ಬಡವರ ಹೆಣ್ಣಾದರೂ ಎಲ್ಲರಂತೆ ಸಂತೋಷದಿಂದ ಮದುವೆಯಾಗಬೇಕು ಎಂಬುವುದು ಅವರ ಆಗ್ರಹವಾಗಿತ್ತು.

ಮನೆಯ ಹೆಸರು ಬಾವ ಕೊಟೇಜ್ ಆದರೂ ಜನರು ರುಖಿಯಾದರ ಅಗ (ಮನೆ) ಎಂದೆ ಕರೆಯುತಿದ್ದರು. ಅವರ ಮಕ್ಕಳನ್ನು ಕೂಡ ಊರವರು ಹೆಸರೆತ್ತಿ ಕರೆಯದೆ ರುಖಿಯಾದರ ಮಗ ಅಥವಾ ರುಖಿಯಾದರ ಮಗಳು ಎಂದೇ ಕರೆಯುತಿದ್ದರು.

1994ರಲ್ಲಿ ಹಜ್ ಯಾತ್ರೆ ಮುಗಿಸಿದ ರುಖಿಯಾದರನ್ನು ಸ್ಥಳೀಯರು "ಮದರ ಥೆರೆಸಾ" ಎಂದು ಕರೆಯುತಿದ್ದರು. 2011ರ ಮಾರ್ಚ್ 23ರಂದು ತನ್ನ ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಬಿಟ್ಟು ಅವರು ಇಹಲೋಕ ತ್ಯಜಿಸಿದರು.

## ಮಾತೃಹೃದಯದ ಲೇಖಕಿ ರಝಿಯಾ ಬೆಳ್ಳಾಯರು



ಮಂಗಳೂರು ತಾಲೂಕಿನ ಬೆಳ್ಳಾಯರು ಗ್ರಾಮದ ಬಿ.ಕೆ.ಮೊಯ್ದಿನ್-ಝೈನಬಾ ದಂಪತಿಯ ಪುತ್ರಿಯಾಗಿ 1973ರ ನವೆಂಬರ್ 15ರಂದು ಜನಿಸಿದ ರಝಿಯಾ ಸ್ಥಳೀಯ ಸರಕಾರಿ ಹೈಸ್ಕೂಲ್‌ನಲ್ಲಿ ಎಸೆಸೆಲ್ಸಿ ಪೂರೈಸಿದರು.

ಪತ್ರಕರ್ತ ಬಿಎಂ ಹನೀಫ್ ಅವರ ಸಹೋದರಿಯಾಗಿರುವ ರಝಿಯಾ ಹೈಸ್ಕೂಲ್‌ನಲ್ಲಿರುವಾಗಲೇ ಓದು-ಬರೆಹದ ಹವ್ಯಾಸ ಬೆಳೆಸಿಕೊಂಡಿದ್ದರು.

ಮಂಗಳೂರಿನ ದೇರಳಕಟ್ಟೆಯಿಂದ ಪ್ರಕಟಗೊಳ್ಳುತ್ತಿದ್ದ ಅಲ್‌ಅನ್ಸಾರ್ ಪತ್ರಿಕೆಯಲ್ಲಿ ರಝಿಯಾರ ಮೊದಲ ಕಥೆ ಪ್ರಕಟವಾಗಿತ್ತು. ಈ ಕಥೆಯು ಸಮುದಾಯದಲ್ಲಿ ಸಂಚಲನ ಮೂಡಿಸಿತ್ತು. ಚರ್ಚೆಗೂ ಕಾರಣವಾಗಿತ್ತು. ಆ ಬಳಿಕ ಮಂಗಳೂರು ಆಕಾಶವಾಣಿಯಲ್ಲಿ ಅವರ ಕಥೆ, ಕವಿತೆ, ಚಿಂತನ ಇತ್ಯಾದಿ ಕಾರ್ಯಕ್ರಮಗಳು ಪ್ರಸಾರವಾಗಿವೆ. ಜೊತೆಗೆ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಕಥೆ, ಕವಿತೆ, ಹನಿಗವನ, ಲೇಖನಗಳು ಪ್ರಕಟವಾಗಿದೆ. ಹಲವು ಸ್ಪರ್ಧೆಗಳಲ್ಲಿ ಕಥೆಗಳಿಗೆ ಬಹುಮಾನಗಳು ಸಿಕ್ಕಿವೆ.

ಮೈಸೂರಿನ ರೂಪ ಪ್ರಕಾಶನ ಅವರ ಮೊದಲ ಕಥಾಸಂಕಲನ "ಮಹರ್"ನ್ನು ಪ್ರಕಟಿಸಿತ್ತು. ಅವರ ನಿಧನದ ಬಳಿಕ ಮಂಗಳೂರಿನಲ್ಲಿ ಈ ಸಂಕಲನ ಬಿಡುಗಡೆಗೊಂಡಿತ್ತು. ಬ್ಯಾರಿ ಜಾನಪದ ಕಥೆಗಳ ಸಂಕಲನ "ಯೆರ್ಚಿಗೆಟ್ಟೆರೊ ಕಥೆ'ಯನ್ನು ಮೈಸೂರಿನ ಸಂವಹನ ಪ್ರಕಾಶನ ಹೊರತಂದಿದೆ. ಅದರಲ್ಲಿ ಒಟ್ಟು ಹತ್ತು ಕಥೆಗಳಿವೆ. 2006ರಲ್ಲಿ ಪ್ರಕಟಗೊಂಡ ಈ ಸಂಕಲನ ಸಂಶೋಧಕಿ ಡಾ. ಸುಶೀಲಾ ಉಪಾಧ್ಯಾಯ ಅವರ ಪುಸ್ತಕದ ಬಳಿಕ ಬಂದ ಜಾನಪದ ಕಥೆಗಳು ಮಾತ್ರ ಇರುವ ಮೊದಲ ಬ್ಯಾರಿ ಜಾನಪದ ಕಥಾ ಸಂಕಲನ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. 2007ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ನಾಲ್ಕನೇ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಮರಣೋತ್ತರವಾಗಿ ಇದು ಬಿಡುಗಡೆಯಾಗಿದೆ.

ರಝಿಯಾ ಮೂಡುತೋಟ, ರಝಿಯಾ ಬೆಳ್ಳಾಯಾರು ಎಂಬ ಹೆಸರಿನಲ್ಲಿ ಬರೆಯುತ್ತಿದ್ದ ಅವರು ಕುಂದಾಪುರ ನಾವುಂದದ ಕೋಯ ಕುಟುಂಬದ ಎಸ್‌ಜೆಬಿ ಕೋಯ ಅವರನ್ನು ಮದುವೆಯಾದ ಬಳಿಕ "ರಝಿಯಾ ಎಸ್‌ಜೆಬಿ" ಎಂಬ ಹೆಸರಿನಲ್ಲಿ ಬರೆಯತೊಡಗಿದರು.

ಯುವ ಲೇಖಕಿಯಾಗಿ ಗುರುತಿಸಲ್ಪಟ್ಟಿದ್ದ ಅವರು ಪತಿ ಎಸ್‌ಜೆಬಿ ಮತ್ತು ಪುತ್ರ ಸಯೀದ್ ಅಬೂಬಕರ್ ಮುತ್ತಲ್ಲಿಬ್ ಕೋಯಾ ಅವರನ್ನು 2005ರ ಜನವರಿ 7ರಂದು ಬಿಟ್ಟಗಲಿದರು.

# ಆಯುರ್ವೇದ ಪಂಡಿತ: ಹುಸೈನ್ ಕುಂಞಿ ವೈದ್ಯರ್ ವಿಟ್ಲ



ಮಂಜೇಶ್ವರ ಸಮೀಪದ ವಾಮಂಜೂರಿನಲ್ಲಿ ಸೂಫಿಕುಟ್ಟಿ–ಖದೀಜಾ ದಂಪತಿಯ ಪುತ್ರನಾಗಿ 1900ರಲ್ಲಿ ಜನಿಸಿದ ಕೆ.ವಿ. ಹುಸೈನ್ ಕುಂಞಿ ವೈದ್ಯರ್ ಶಾಲಾ ಶಿಕ್ಷಣಕ್ಕೆ ಒಲವು ತೋರದ ಆ ಕಾಲದಲೇ ಉತ್ತಮ ಶಿಕ್ಷಣ ಕಲಿತಿದ್ದರು. ಅದರೊಂದಿಗೆ ಕುರಾನ್ ಮತ್ತು ಹದೀಸ್ ಹಾಗೂ ಆಯುರ್ವೇದ ಪಾಂಡಿತ್ಯ ಪಡೆದಿದ್ದರು. ಎಲ್ಲಾ ವಿಧದ ಆಯುರ್ವೇದ ವೈದ್ಯಶಾಸ್ತ್ರದ ಔಷಧಿಗಳನ್ನು ತಯಾರಿಸುತ್ತಿದ್ದರು. ಕೊನೆಯುಸಿರೆಳೆಯುವವರೆಗೆ ವೈದ್ಯರಾಗಿ ಸೇವೆ ಸಲ್ಲಿಸಿದ್ದರು. ಅರಬಿಕ್ ಕಲಿತು ಕುರಾನ್ ಹಾಗೂ ಇನ್ನಿತರ ಗ್ರಂಥಗಳನ್ನು ರಚಿಸಿದ್ದರು. ಅರಬಿಕ್–ಮಲಯಾಳಂನಲ್ಲೂ ಪುಸ್ತಕಗಳನ್ನು ಬರೆದಿದ್ದರು.

ಹುಸೈನ್ ಕುಂಞಿ ವೈದ್ಯರ್ ತನ್ನ ಬಯಕೆಗಳನ್ನು ಮೆಟ್ಟಿನಿಂತು ವೈರಾಗ್ಯದಿಂದಾಗಿ ತಮ್ಮ ಕುಟುಂಬದಲ್ಲಿ ತಮ್ಮ ಪಾಲಿಗಿರುವಂತಹ ಬಹುದೊಡ್ಡ ಆಸ್ತಿಯನ್ನು ಮಾತ್ರವಲ್ಲದೆ ತಾನು ಹುಟ್ಟಿ ಬೆಳೆದ ಊರನ್ನೇ ತೊರೆದು ಬಂಟ್ವಾಳ ತಾಲೂಕಿನ ವಿಟ್ಲದ ಕಾಂತಡ್ಕ ಎಂಬಲ್ಲಿ ಬಂದು ನೆಲೆಸಿದ್ದರು. ಉಪ್ಪಿನಂಗಡಿಯ ಅಳಕೆ ಎಂಬಲ್ಲಿ ಆಯುರ್ವೇದ ಪಂಡಿತರೊಬ್ಬರ ಬಳಿ ಆಯುರ್ವೇದ ಶಾಸ್ತ್ರವನ್ನು ಸಂಪೂರ್ಣವಾಗಿ ಕಲಿತು ಅದನ್ನೇ ತಮ್ಮ ವೃತ್ತಿಯಾಗಿ ಮುಂದುವರಿಸಿದ್ದರು.

ಎಷ್ಟೇ ದೂರದ ಊರನ್ನೂ ಕಾಲ್ನಡಿಗೆಯಲ್ಲೇ ಕ್ರಮಿಸುತ್ತಿದ್ದ ವೈದ್ಯರು ತಾವು ಕೈಯ್ಯಾರೆ ಬರೆದು ರಚಿಸಿದ ಕುರಾನ್ ಅನ್ನು ತಮ್ಮ ಪ್ರತಿಯೊಬ್ಬ ಮಕ್ಕಳಿಗೂ ಕೊಡುಗೆಯಾಗಿ ನೀಡುತ್ತಿದ್ದರು. ಅದು ಈಗಲೂ ಅವರ ಮಕ್ಕಳ ಬಳಿ ಇದೆ. ಶ್ರಮಜೀವಿಯಾಗಿದ್ದ ಅವರು ತಮ್ಮ ಕೆಲಸ ಕಾರ್ಯಗಳನ್ನು ತಾವೇ ಸ್ವತಃ ನಿರ್ವಹಿಸುತ್ತಿದ್ದರು. ಅವರು ಬರೆದ ಕೆಲವೊಂದು ಗ್ರಂಥಗಳು ಈಗಲೂ ಇದೆ. ಆದರೆ ಕೆಲವೊಂದರ ಅಕ್ಷರಗಳು ಅಳಿಸಿ ಹೋಗಿರುವುದು ಮಾತ್ರ ದು:ಖಕರ ಸಂಗತಿಯಾಗಿವೆ.

ಆಗಿನ ಕಾಲದಲ್ಲಿ ದೂರದ ಬಹಳಷ್ಟು ಸಂಖ್ಯೆಯ ರೋಗಿಗಳು ಅವರಲ್ಲಿಗೆ ಧಾವಿಸಿ ಬರುತ್ತಿದ್ದರು. ಹಾಗೇ ಬಂದವರನ್ನು ಪರೀಕ್ಷಿಸಿ ಅವರಿಗೆ ಸೂಕ್ತ ಔಷಧಿಯನ್ನು ನೀಡುತ್ತಿದ್ದುದ್ದರು. ಅಲ್ಲದೆ ಅವರಿಗೆ ಊಟ ಉಪಚಾರಗಳನ್ನು ನೀಡಿಯೇ ಕಳುಹಿಸಿ ಕೊಡುತ್ತಿದ್ದರು. ಇದು ಅವರ ಗುಣ ವಿಶೇಷತೆಯಾಗಿತ್ತು.

ಅನಾರೋಗ್ಯಕ್ಕೆ ತುತ್ತಾಗಿ ದೂರದಿಂದ ಬಂದವರನ್ನು ಅವರು ಗುಣಮುಖರಾಗುವವರೆಗೂ ತಮ್ಮಲ್ಲಿಯೇ ಇರಲು ವ್ಯವಸ್ಥೆ ಕಲ್ಪಿಸಿ ಕೊಡುತ್ತಿದ್ದರು. ಬಡವರು ಅಥವಾ ಕೈಲಾಗದವರು ಬಂದಲ್ಲಿ ಅವರಿಂದ ಔಷಧದ ನಯಾಪೈಸೆಯನ್ನು ಕೂಡ ಪಡೆದುಕೊಳ್ಳದೆ ಅವರಿಗೆ ಔಷಧೋಪಚಾರದೊಂದಿಗೆ ಊಟ ಉಪಚಾರ ನೀಡಿ ಸತ್ಕರಿಸಿ ಅವರು ಮರಳಿ ಊರಿಗೆ ಹೋಗಲು ಬಸ್ಸಿನ ಖರ್ಚು–ವೆಚ್ಚವನ್ನು ಕೂಡ ತಾವೇ ಭರಿಸುತ್ತಿದ್ದರು. ಹೀಗೇ ದಾನ ಧರ್ಮದಲ್ಲೂ ಅವರು ಹೆಸರುವಾಸಿಯಾಗಿದ್ದರು.

ಪ್ರತೀ ಔಷಧವನ್ನು ತಯಾರಿಸುವಾಗಲೂ ಯಾವುದೇ ವಸ್ತುವಿನ ಪ್ರಮಾಣವು ಸ್ವಲ್ಪವೂ ಕೂಡ ವ್ಯತ್ಯಾಸವಾಗದೆ ಕ್ರಮಬದ್ಧವಾಗಿರುವಂತೆ ಬಹಳ ಸಹನೆಯಿಂದ ಶ್ರಮವಹಿಸಿ ಗಮನವಿಟ್ಟು ತಯಾರಿಸುತ್ತಿದ್ದರು. ಈ ಔಷಧಿಗಳ ತಯಾರಿಕೆಗಾಗಿ ಬಳಸುವ ಹಾಲು, ಕೆನೆ, ಬೆಣ್ಣೆ ತುಪ್ಪಗಳ ಅಗತ್ಯಕ್ಕಾಗಿ ಪ್ರತ್ಯೇಕ ಹಸುಗಳನ್ನೂ ಸಾಕುತ್ತಿದ್ದರು.

ಸಂತರಂತೆ ಜೀವನದ ಆದರ್ಶ ತತ್ವಗಳನ್ನು ಹೊಂದಿದ್ದ ಅವರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯೂ ಪರರ ಮರದಡಿಯ ನೆರಳಿನ ಆಶ್ರಯವನ್ನೂ ಕೂಡ ಪಡೆದವರಲ್ಲ ಎಂದು ಅವರ ಕುಟುಂಬಸ್ಥರು ನೆನಪಿಸುತ್ತಾರೆ. ಹಾಗೆಯೇ ಯಾವುದೇ ತೀರಾ ಅತ್ಯಗತ್ಯದ ಸಂದರ್ಭಗಳಲ್ಲಿ ಅವರು ವಾರಿಸುದಾರರ ಒಪ್ಪಿಗೆ ಪಡೆಯದ ವಿನ: ಅದು ಸರಕಾರಿ ನೆಲ, ಜಲ, ವಸ್ತುಗಳೋ ಅಥವಾ ಇನ್ನೇನೇ ಆಗಿದ್ದರೂ ಕೂಡ ಅದನ್ನು ತಪ್ಪಿಯೂ ಬಳಸಿಕೊಂಡವರಲ್ಲ. ಆಗಿನ ಕಾಲದಲ್ಲಿ ಕಾನತಡ್ಕದಲ್ಲಿ ಇದ್ದದ್ದು ಐದನೇ ತರಗತಿಯವರೆಗಿನ ಶಾಲೆ. ತನ್ನ ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಬಯಸಿದ್ದ ವೈದ್ಯರು ಐದನೇ ತರಗತಿಯವರೆಗೆ ಶಾಲೆಗೆ ಕಳುಹಿಸಿದ್ದರು.

ಹುಸೈನ್ ಕುಂಞಿ ವೈದ್ಯರು ತಯಾರಿಸಿದ ಔಷಧಿಗಳನ್ನು ಅವರ ಮರಣದ ಬಳಿಕವೂ ಅಂದರೆ ಸುಮಾರು 30 ವರ್ಷಗಳವರೆಗೂ ನೂರಾರು ಮಂದಿ ಕೇಳಿ ಪಡೆದುಕೊಂಡು ಹೋಗುತ್ತಿದ್ದರು. ಅವರ ನಿಧನದ ಬಳಿಕ ಅವರ ಹಿರಿಯ ಮಗ "ಮಹಮ್ಮದ್ ವೈದ್ಯರ್' ವಿಟ್ಲದಲ್ಲಿ ಕೋಟೆಕ್ಕಲ್‌ನ ಏಂಜೆಟ್ ಆಗಿ ಮೆಡಿಕಲ್ ಶಾಪ್‌ವೊಂದನ್ನು ತೆರೆದು

ವ್ಯಾಪಾರ ಆರಂಭಿಸಿ ವೈದ್ಯ ಪರಂಪರೆ ಮುಂದುವರಿಸಿದ್ದಾರೆ.

ಹೀಗೆ ಬಡವರಿಂದ ಏನನ್ನೂ ಅಪೇಕ್ಷಿಸದೆ ತಮ್ಮಿಂದಾದ ಸಹಾಯ ಮಾಡುತ್ತಾ ಜೀವನ ಸಾಗಿಸುತ್ತಲೇ ಎಲ್ಲರಿಗೂ ಅಚ್ಚುಮೆಚ್ಚಿನ "ಹುಸೈನ್ ಬ್ಯೆಚರ್" ಆಗಿದ್ದ ಅವರು ತನ್ನ 61ನೆ ವಯಸ್ಸಿನಲ್ಲಿ ಅಂದರೆ 1961 ನವೆಂವರ್ 26ರಂದು ನಿಧನರಾದರು.

ಅವರ ಪತ್ನಿ ಕೆ.ಮರಿಯಂ ಕೂಡ ಸಂಪ್ರದಾಯಸ್ಥರು. ಕೊಡುಗೈ ದಾನಿಯಾಗಿದ್ದರು. ಈ ದಂಪತಿಗೆ 5 ಗಂಡು ಮತ್ತು 5 ಹೆಣ್ಣು ಮಕ್ಕಳಿದ್ದರು.

## ಕರ್ಮಭೂಮಿಗೆ ಕೀರ್ತಿ ತಂದ ಡಾ.ಹಮ್ಮಬ್ಬ ಪಕ್ಕಲಡ್ಕ



ಮಂಗಳೂರು ತಾಲೂಕಿನ ಪಕ್ಕಲಡ್ಕ ಬಜಾಲ್ ಎಂದಾಕ್ಷಣ ಜನರ ಮನದಲ್ಲಿ ಮೊದಲು ತೇಲುವ ಹೆಸರು ಶಾಫಿ ಕ್ಲಿನಿಕ್. ಈ ಹೆಸರಿನಿಂದಲೇ ಕಂಕನಾಡಿ ಬಜಾಲ್ ವ್ಯಾಪ್ತಿಯ ಪಕ್ಕಲಡ್ಕ ಎಂಬ ಊರು ರಾಜ್ಯಾದ್ಯಂತ ಪ್ರಸಿದ್ಧಿಗೆ ಬಂದಿದೆ. ಅದಕ್ಕೆ ಮೂಲ ಕಾರಣ ಡಾ.ಹಮ್ಮಬ್ಬ ಎಂದರೆ ತಪ್ಪಿಲ್ಲ.

ವೃತ್ತಿಯಲ್ಲಿ ವೈದ್ಯನಾಗಿದ್ದರೂ ಸಮಾಜದ ವಿವಿಧ ಜನರ ಒಡನಾಟದಲ್ಲಿದ್ದ ಡಾ.ಹಮ್ಮಬ್ಬ ಸೇವಾ ಮನೋಭಾವದಿಂದ ಉನ್ನತ ಮಟ್ಟಕೇರಿದ, ಉತ್ತಮ ವ್ಯಕ್ತಿತ್ವದ ಮಾದರಿ ವ್ಯಕ್ತಿಯಾಗಿದ್ದರು.

ಉಳ್ಳಾಲ ಅಳೇಕಲದ ಉಂಞಬ್ಬ-ಮರಿಯಮ್ಮ ದಂಪತಿಯ ಪುತ್ರನಾಗಿ 1948ರ ಆಗಸ್ಟ್ 22ರಂದು ಜನಿಸಿದ ಹಮ್ಮಬ್ಬ ಶಾಲಾ ಶಿಕ್ಷಣವನ್ನು ಹತ್ತಿರದ ಸಂತ ಸೆಬೆಸ್ಟಿಯನ್ ಶಾಲೆಯಲ್ಲಿ ಪಡೆದರು. ಬಳಿಕ ಪಾವೂರು-ಹರೇಕಳದ ಬಂಗಾರ ಪಾದೆ ಎಂಬಲ್ಲಿ ಅಕ್ಕ ಮತ್ತು ಭಾವನ ಜೊತೆಗಿದ್ದರು. ಭಾವ ಶೇಖಬ್ಬ ಬೈಚರು ಆಯುರ್ವೇದ ಪಂಡಿತರಾಗಿದ್ದರು. ಭಾವನ ನಾಟಿವೈದ್ಯ ವೃತ್ತಿಯನ್ನು ಗರಗತ ಮಾಡಿಕೊಂಡಿದ್ದ ಹಮ್ಮಬ್ಬ ಭಾವನ ಹಾಗೆ ತಾನೂ ಕೂಡಾ ಕಷ್ಟದಲ್ಲಿ ಸಂಕಷ್ಟಪಡುವ ರೋಗಿಗಳಿಗೆ ಮದ್ದು ಕೊಡುವ ಬಗ್ಗೆ ಆಸಕ್ತಿ ಹೊಂದಿದರು.

ಮದುವೆಯ ನಂತರ ಬಜಾಲ್ ಎಂಬ ಗ್ರಾಮಕ್ಕೆ ತೆರಳಿ 8 ರೂಪಾಯಿಯ ಬಾಡಿಗೆ ಗೊತ್ತುಪಡಿಸಿ ಮೊದಲಿಗೆ ಒಂದು ಸಣ್ಣ ಮಟ್ಟದ ಕ್ಲಿನಿಕ್ ಪ್ರಾರಂಬಿಸಿದರು. ಪ್ರತಿದಿನ ಪಾವೂರಿನ ಬಂಗಾರ ಪಾದೆಯಿಂದ ದೋಣಿಯಲ್ಲಿ ಬಜಾಲ್-ಪಕ್ಕಲಡ್ಕಕ್ಕೆ ತೆರಳುತ್ತಿದ್ದರು. ಬೆಳಗ್ಗೆಯಿಂದ ರಾತ್ರಿ ತನಕ ಕ್ಲಿನಿಕ್‌ನಲ್ಲೇ ಇದ್ದು ರಾತ್ರಿ ಪುನಃ ದೋಣಿಯಲ್ಲಿ ಬಂಗಾರ ಪಾದೆಯಲ್ಲಿರುವ ತನ್ನ ಅಕ್ಕನ ಮನೆಗೆ ಮರಳುತ್ತಿದ್ದರು. ಕೆಲವು ತಿಂಗಳ ಬಳಿಕ ಬಜಾಲ್‌ನಲ್ಲೇ ಒಂದು ಸಣ್ಣ ಬಾಡಿಗೆ ಮನೆಯಲ್ಲಿ ಉಳಿದು ಕೊಂಡರು. ಡಾ.ಹಮ್ಮಬ್ಬ ದೊಡ್ಡ ಮಟ್ಟದ ಆಯುರ್ವೇದ ಪಂಡಿತರಾಗಲು ಭಾವ ಶೇಖಬ್ಬ ಬೈಚರೇ ಮೂಲ ಪ್ರೇರಣೆ ಎಂದು ಹೇಳಬಹುದು.

ಬಜಾಲ್ ಪಕ್ಕಲಡ್ಕ ಆವಾಗ ತುಂಬಾ ಹಿಂದುಳಿದ ಪ್ರದೇಶವಾಗಿತ್ತು. ಪಕ್ಕಲಡ್ಕ ಸುತ್ತಮುತ್ತಲ ಪ್ರದೇಶಕ್ಕೆ ಡಾ. ಹಮ್ಮಬ್ಬ ಮಾತ್ರ ಡಾಕ್ಟರ್. ಹತ್ತಿರದಲ್ಲಿ ಬೇರೆ ವೈದ್ಯರಾಗಲಿ, ಆಸ್ಪತ್ರೆಯಾಗಲಿ ಇರಲಿಲ್ಲ. ಒಂದು ಸಣ್ಣ ಕ್ಲಿನಿಕ್ ಇಟ್ಟುಕೊಂಡು ರೋಗಿಗಳನ್ನು ನಿಭಾಯಿಸುತ್ತಿದ್ದರು. ಗಂಭೀರ ರೋಗವಿದ್ದರೆ ಅಲ್ಲೇ ಉಳಿದುಕೊಂಡು ಚಿಕಿತ್ಸೆ ಪಡೆಯುವುದು ಅನಿವಾರ್ಯವಾಗಿತ್ತು. ಹಾಗಾಗಿ ಕ್ಲಿನಿಕ್ ಪಕ್ಕದಲ್ಲೇ ಸಣ್ಣ ಜಾಗದಲ್ಲಿ ನಾಲ್ಕು ಬೆಡ್‌ರೂಮ್ ಇರುವ ಸಣ್ಣ ಮಟ್ಟದ ಕಟ್ಟಡವನ್ನು ಕಟ್ಟಿದರು. ಒಂದು ಕೋಣೆಯಿಂದ ಪ್ರಾರಂಭವಾದ ಶಾಫಿ ಕ್ಲಿನಿಕ್ ಬಳಿಕ ಒಂದೊಂದೇ ಹಂತದಲ್ಲಿ ಮೇಲೇರತೊಡಗಿತು. 1969ರಲ್ಲಿ ಅದು ಪೂರ್ಣಪ್ರಮಾಣದಲ್ಲಿ ತಲೆ ಎತ್ತಿತು. ಈಗ ಎದ್ದು ಕಾಣುವ ವಿಶಾಲವಾದ ಶಾಫಿ ಆಸ್ಪತ್ರೆಯನ್ನು ಕಟ್ಟಲು ಜಾಗ ನೀಡಿ ಆರ್ಥಿಕ ಸಹಾಯ ಮಾಡಿದವರಲ್ಲಿ ಬಜಾಲ್‌ನ ಕೃಷ್ಣ ಭಟ್ಟ ಮತ್ತು ದೇವಪ್ಪ ಮಾಣ್ಯೈ ಹಾಗೂ ಕ್ರೈಸ್ತ ಧರ್ಮಗುರುವೊಬ್ಬರಿದ್ದರು ಎಂಬುದನ್ನು ಹಮ್ಮಬ್ಬ ಅವರ ಕುಟುಂಬಸ್ಥರು ನೆನಪಿಸುತ್ತಾರೆ.

ತನ್ನ ಕ್ಲಿನಿಕ್‌ಗೆ "ಶಾಫಿ ಕ್ಲಿನಿಕ್" ಎಂಬ ಹೆಸರನ್ನು ಇಡಲು ಮುಖ್ಯ ಕಾರಣ ಶಿಫ್ (ಗುಣಪಡಿಸುವುದು) ಎಂಬ ಅರಬಿಕ್ ಪದ. ಶಾಫಿ ಎಂದರೆ ಗುಣಪಡಿಸುವ ಜಾಗವಾಗಿದೆ. ಆದ್ದರಿಂದ ಈ ಕ್ಲೀನಿಕ್‌ಗೆ ಶಾಫಿ ಕ್ಲಿನಿಕ್ ಎಂಬ ಹೆಸರು ಬಂತು.

ಡಾ. ಹಮ್ಮಬ್ಬ ಆಯುರ್ವೇದದಲ್ಲಿ ಹೆಚ್ಚಿನ ಪ್ರಾಬಲ್ಯವನ್ನು ಪಡೆಯಲು ಅಂದಿನ ಪ್ರಖ್ಯಾತ ಶಸ್ತ್ರಚಿಕಿತ್ಸಾ ವೈದ್ಯ ಡಾ. ಗಣೇಶ್ ಪೈ, ಡಾ. ಪ್ರಭಾಕರ ರಾವ್, ಡಾ. ವರ್ಗೀಸ್ ಕಾರಣ. ಅವರಿಂದ ಹೆಚ್ಚಿನ ತರಬೇತಿ ಪಡೆದು ತನ್ನ ವೈದ್ಯಕೀಯ ವೃತ್ತಿಯನ್ನು ಮುಂದುವರಿಸಿ ಊರಿನ ಪ್ರಖ್ಯಾತ ಜನಮೆಚ್ಚಿದ ಡಾಕ್ಟರ್ ಆಗಿ ಗುರುತಿಸಲ್ಪಟ್ಟರು.

ಜಾತಿ ಬೇಧ, ಬಡವ-ಶ್ರೀಮಂತರೆನ್ನದೆ ಎಲ್ಲರ ಜೊತೆ ಉತ್ತಮವಾಗಿ ವ್ಯವಹರಿಸುತ್ತಿದ್ದ ಅವರು, ಓರ್ವ ಕ್ರಿಯಾಶೀಲ, ಬಿಡುವಿಲ್ಲದೆ ಸೇವೆಯನ್ನು ನೀಡುತ್ತಿದ್ದರು. ಯಾವುದೇ ಸಮಯದಲ್ಲಿ ರೋಗಿಗಳ ಮನೆಯವರು ಕರೆದರೆ ರಾತ್ರಿ ಹಗಲು ಎಂದು ನೋಡದೆ ಔಷಧ ನೀಡುತ್ತಿದ್ದರು. ಅವರ ಸೇವಾ ಮನೋಭಾವವನ್ನು ಇಂದಿಗೂ ಪಕ್ಕಲಡ್ಕ ಜನತೆ ನೆನಪಿಸುತ್ತಾರೆ. ತಾವು ಬದುಕಬೇಕು ಮತ್ತು ಇನ್ನೊಬ್ಬರು ಬದುಕಲು ಬಿಡಬೇಕು ಎಂಬ ಭಾವನೆಯೊಂದಿಗೆ ಕಷ್ಟದಲ್ಲಿದ್ದವರಿಗೆ ಸಹಾಯಮಾಡುವ, ಬಡರೋಗಿಗಳ ಕಣ್ಣೊರೆಸುವ ಕೆಲಸವನ್ನು ಮಾಡುತ್ತಿದ್ದರು. ರೋಗಿಗಳಿಂದ ಹೆಚ್ಚಿನ ಹಣವನ್ನು ನಿರೀಕ್ಷಿಸದೆ ತಾನೇ ಗಿಡಮೂಲಿಕೆಗಳನ್ನು ತಂದು ಹುಡಿ ಮಾಡಿ ಔಷಧ ರೂಪದಲ್ಲಿ

ವಿತರಿಸುತ್ತಿದ್ದರು. ರೋಗಿಯು ಗುಣಮುಖವಾಗುವ ತನಕ ಅವರ ಸಂಪರ್ಕದಲ್ಲಿ ಸದಾ ಇರುತ್ತಿದ್ದರು. ಅವರ ಇಂತಹ ಮನೋಭಾವದಿಂದಲೇ ಇಂದು ಶಾಫಿ ಕ್ಲಿನಿಕ್ ಉನ್ನತ ಮಟ್ಟಕ್ಕೇರುವಂತೆ ಆಯಿತು. ಅವರಿಂದಾಗಿಯೇ ಕುಗ್ರಾಮವಾಗಿದ್ದ ಬಜಾಲು ಪಕ್ಕಲಡ್ಕ ಎಂಬ ಪ್ರದೇಶವೂ ಅತ್ಯಂತ ಪ್ರಸಿದ್ಧಿ ಪಡೆಯಿತು. ಅವರ ಔಷಧಿಯ ಕೈ ಗುಣ ಪ್ರಚಾರವಾದಂತೆ ದೂರದೂರಿನ ರೋಗಿಗಳು ಚಿಕಿತ್ಸೆಗೆ ಆಗಮಿಸುತ್ತಿದ್ದರು. ಮಂಗಳೂರಿನ ಸುತ್ತುಮುತ್ತಲಲ್ಲದೆ ಕಲ್ಲಿಕೋಟೆ, ಬೆಂಗಳೂರು, ಮೈಸೂರು, ಗೋವಾದಿಂದಲೂ ಜನರು ಆಗಮಿಸುತ್ತಿದ್ದರು.

ಪಕ್ಷಪಾತಕ್ಕೆ ಪ್ರಸಿದ್ಧಿ ಹೊಂದಿದ್ದ ಶಾಫಿ ಕ್ಲೀನಿಕ್‌ನಲ್ಲಿ ಸಂಧಿವಾತ, ಕಟ್ಟಿಶೂಲ, ಅಮವಾತ, ರಕ್ತವಾತಗಳಿಗೂ ಔಷಧ ನೀಡಲಾಗುತ್ತದೆ.


ಮನೆ ತೋಟ ಬೆಳೆಸುವುದು, ಪ್ರವಾಸಕ್ಕೆ ತೆರಳುವುದು, ಪುಸ್ತಕ ಓದುವ ವಿಶೇಷ ಹವ್ಯಾಸವನ್ನು ಬೆಳೆಸಿಕೊಂಡಿದ್ದ ಡಾ. ಹಮ್ಮಬ್ಬ ಅವರ ಸೇವೆಯನ್ನು ಪರಿಗಣಿಸಿ 1989ರಲ್ಲಿ ಉಡುಪಿ–ದಕ್ಷಿಣ ಕನ್ನಡ ವೈದ್ಯರ ಸಂಘವು ಧನ್ವಂತರಿ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಡಾ.ಹಮ್ಮಬ್ಬ–ಸಾರಾ ದಂಪತಿಗೆ 9 ಮಕ್ಕಳು. ಆ ಪೈಕಿ 6 ಮಂದಿ ಮಕ್ಕಳು ತಂದೆಯ ವೃತ್ತಿಯನ್ನೇ ಮುಂದುವರಿಸಿದರು. ಅಂದರೆ 5 ಮಂದಿ ಗಂಡು ಮಕ್ಕಳಾದ ಡಾ.ಸಲೀಂ, ಡಾ.ಝೈನುದ್ದೀನ್, ಡಾ.ಸಾದಿಕ್, ಡಾ.ತಮೀಮ್ ಹಾಗೂ ಅಳಿಯಂದಿರಾದ ಡಾ.ತಾಜುದ್ದೀನ್, ಡಾ.ಝುಹೀರ್ ಹುಸೈನ್ ಮತ್ತು ಮಗಳು ಸೌಧಾ ಕೂಡಾ ವೈದ್ಯೆಯಾಗಿ ದುಡಿಯುತ್ತಿದ್ದಾರೆ.

ಪ್ರಸ್ತುತ ಶಾಫಿ ಕ್ಲೀನಿಕ್‌ನಲ್ಲಿ 40 ರೋಗಿಗಳಿಗೆ ಅನುಕೂಲವಾಗುವಂತಹ ಒಳರೋಗಿ ವ್ಯವಸ್ಥೆ ಇದೆ. ಅಲ್ಲದೆ ದಿನಂಪ್ರತಿ ನೂರಾರು ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಇತ್ತೀಚೆಗೆ ಅಲೋಪತಿ ಮತ್ತು ದಂತ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಹೀಗೆ ಕುಗ್ರಾಮದಲ್ಲಿ ಹುಟ್ಟಿ ಬೆಳೆದು ಕರ್ಮಭೂಮಿಯ ಹೆಸರನ್ನು ತನ್ನ ಸೇವೆಯಿಂದಾಗಿ ಪ್ರಸಿದ್ಧಿಗೊಳ್ಳುವಂತೆ ಮಾಡಿದ ಡಾ. ಹಮ್ಮಬ್ಬ ಪಕ್ಕಲಡ್ಕ 2010ರ ಜನವರಿ 26ರಂದು ನಿಧನರಾದರು.

# ಆಯುರ್ವೇದಿಕ್ ವೈದ್ಯ ಪಂಡಿತ್ ಹಮ್ಮಬ್ಬ ಉಳ್ಳಾಲ



ಉಳ್ಳಾಲದ ಅಳೇಕಲ ಎಂಬಲ್ಲಿ ಆಯುರ್ವೇದ ಪಂಡಿತರಾಗಿದ್ದ ಹಮ್ಮಬ್ಬ "ಪಂಡಿತ್ ಅಮ್ಮಾಕ" ಎಂದೇ ಖ್ಯಾತಿ ಗಳಿಸಿದವರು. ಜಾತಿಮತಗಳ ಹಂಗಿಲ್ಲದೆ. ಮೇಲು–ಕೀಳುಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಸುಲಭವಾಗಿ ಚಿಕಿತ್ಸೆ ದೊರ ಕಬೇಕೆಂಬ ಸ್ವಸ್ಥ ಸಮಾಜದ ಪರಿಕಲ್ಪನೆ ಹೊಂದಿದ್ದವರು. ತಾನು ಬಡತನದಲ್ಲಿದ್ದರೂ ದುಡ್ಡಿಗಾಗಿ ಹಪಹಪಿಸದೆ ಜನಪರ ಸೇವೆಯನ್ನು ಗುರಿಯಾಗಿಸಿಕೊಂಡು ಬಡಜನತೆಯ ಆಶಾಕಿರಣವಾಗಿದ್ದರು.

ಉಳ್ಳಾಲದ ಪಂಡಿತ್ ಖುಲಾಮ್–ಮರಿಯಮ್ಮ ಅವರ ಪುತ್ರನಾಗಿ 1900ರಲ್ಲಿ ಜನಿಸಿದ ಹಮ್ಮಬ್ಬ ಏಳನೇ ತರಗತಿಯ ಬಳಿಕ ತಂದೆಯಂತೆ ಪಾರಂಪರ್ಯವಾಗಿ ಬಂದ ವೈದ್ಯ ವೃತ್ತಿಯನ್ನೇ ಮುಂದುವರಿಸಿಕೊಂಡರು.

ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಸಾವಿರಾರು ಮಂದಿ ಅವರಿಂದ ಚಿಕಿತ್ಸೆ ಪಡೆದಿದ್ದಾರೆ. ಅರಿಶಿನ ಕಾಮಾಲೆ, ಸರ್ಪ ಸುತ್ತು, ಕೆಂಪು ಮುಂತಾದ ವ್ಯಾಧಿಗಳ ಶಮನಕ್ಕೆ ಅವರನ್ನು ಹುಡುಕಿಕೊಂಡು ಬರುತ್ತಿದ್ದರು. ರಾತ್ರಿ–ಹಗಲೆನ್ನದೆ ಬಡರೋಗಿಗಳ ಸೇವೆಗೈಯುತ್ತಾ ಅವರ ನೋವನ್ನು ನಿವಾರಿಸಿ ಮುಖದಲ್ಲಿ ನಗು ಮೂಡುವಂತೆ ಮಾಡುವುದನ್ನೇ ಧ್ಯೆಯ ವಾಗಿಸಿಕೊಂಡಿದ್ದರು.

ಅವರ ಇಬ್ಬರು ಪತ್ನಿಯರಲ್ಲಿ ಜನಿಸಿದ ಆರು ಗಂಡು ಮತ್ತು ಎರಡು ಹೆಣ್ಣು ಮಕ್ಕಳಲ್ಲಿ ಇಬ್ಬರನ್ನು ವೈದ್ಯ ವೃತ್ತಿಯಲ್ಲಿ ಮುಂದುವರಿಯಲು ಪ್ರೋತ್ಸಾಹಿಸಿದ್ದರು. ಅದರಂತೆ ಪಂಡಿತ್ ಇಬ್ರಾಹೀಂ ಮತ್ತು ಪಂಡಿತ್ ಮಹಮ್ಮದ್ ತಂದೆಯಂತೆ ಖ್ಯಾತಿ ಪಡೆದಿದ್ದಾರೆ. ಅವರ ಮೊಮ್ಮಕ್ಕಳಾದ ಡಾ. ಆಸಿಫ್ ಮತ್ತು ಡಾ. ಝೈನುದ್ದೀನ್ ವೈದ್ಯಕೀಯ ರಂಗದಲ್ಲಿದ್ದಾರೆ. ತನ್ನ ಕೊನೆಗಾಲದವರೆಗೂ ಸಮಾಜಸೇವೆಯ ಮುಂಚೂಣಿಯಲ್ಲಿದ್ದ ಅವರು 1984ರ ಸೆಪ್ಟಂಬರ್ 12ರಂದು ನಿಧನರಾದರು.

## ನಾಟಿವೈದ್ಯ ಮೊಂಟೆಪದವು ಕೆ.ಎಲ್. ಉಮರ್‌ಕುಂಞಿ ಹಾಜಿ



"ಮೊಂಟೆಪದವು" ಎಂದ ತಕ್ಷಣ ಬಹಳ ಮಂದಿ ಕೇಳುವ ಪ್ರಶ್ನೆಯು "ಉಮರ್‌ಕುಂಞಿ ಹಾಜಿಯವರನ್ನು ಗೊತ್ತಾ?".

ಆ ಮಟ್ಟಕ್ಕೆ ಜಿಲ್ಲೆ ಮತ್ತು ಆಸುಪಾಸಿನ ಪ್ರದೇಶಗಳಲ್ಲೂ ಉಮರ್‌ಕುಂಞಿ ಹಾಜಿ ಪ್ರಸಿದ್ಧರಾಗಿದ್ದರು.

ಬಂಟ್ವಾಳ–ಮಂಗಳೂರು ತಾಲೂಕುಗಳ ಗಡಿ ಹಂಚಿಕೊಂಡಿರುವ ಮೊಂಟೆಪದವು ಬಳಿಯ ಮೋಂಟುಗೋಳಿ ಎಂಬಲ್ಲಿ ವಾಸ್ತವ್ಯವಿದ್ದ ಉಮರ್ ಕುಂಞಿ ಹಾಜಿ ಹಿರಿಯ ವಿದ್ವಾಂಸ ಬೇಕಲ್ ಉಸ್ತಾದ್‌ರ ಪಕ್ಕದ ಮನೆಯವರು. "ಪಟ್ಟೋರಿ ಮುಕ್ರಿಕ" ಕುಟುಂಬದ ಅಹ್ಮದ್ ಕುಂಞಿ ಮುಕ್ರಿಕ ಮತ್ತು ಆಯಿಶಮ್ಮ ದಂಪತಿಯ ಪುತ್ರನಾಗಿ 1937ರ ಜೂನ್ 18ರಂದು ಪಟ್ಟೋರಿಯಲ್ಲಿ ಜನಿಸಿದರು. ಪಟ್ಟೋರಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಕಿನ್ಯಾದಲ್ಲಿ ದರ್ಸ್ ಕಲಿತರು.

ನಾಟಿವೈದ್ಯದಲ್ಲಿ ಪರಿಣತರಾಗಿದ್ದ ತನ್ನ ತಂದೆಯ ಜಾಡು ಹಿಡಿದು ಹೊರಟ ಅವರು ಚಿಕಿತ್ಸಾ ರಂಗಕ್ಕೆ ಪ್ರವೇಶಿಸಿದ್ದರು. ಸಂತರಾದ ಚಾವಕ್ಕಾಡ್ ಶೈಖ್ ಹಾಗೂ ವಡಗರ ಉಪ್ಪಾಪರ ಆಶೀರ್ವಾದದೊಂದಿಗೆ ಆಧ್ಯಾತ್ಮಿಕ ಚಿಕಿತ್ಸೆಯ ಜೊತೆಗೆ ಆಯುರ್ವೇದ ಚಿಕಿತ್ಸೆಯನ್ನೂ ನೀಡುತ್ತಿದ್ದರು. ಈ ಕ್ಷೇತ್ರದಲ್ಲಿ ಜನಪ್ರಿಯರಾದ ಬಳಿಕ ಅವರನ್ನು ಹುಡುಕಿಕೊಂಡು ಕರ್ನಾಟಕ, ಕೇರಳ, ಮಹಾರಾಷ್ಟ್ರದ ವಿವಿಧ ಕಡೆಗಳಿಂದ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿ ಪರಿಹಾರಕ್ಕಾಗಿ ಬರುತ್ತಿದ್ದರು.

ವರ್ಷಂಪ್ರತಿ ಅವರ ಮನೆಯಲ್ಲಿ ಉಳ್ಳಾಲ ತಂಙಳ್‌ರ ನೇತೃತ್ವದಲ್ಲಿ ನಡೆಯುತ್ತಿದ್ದ "ರಿಫಾಈ ರಾತೀಬ್" ನಾಡಿನ ವಿವಿಧೆಡೆಗಳಿಂದ ಆಗಮಿಸುವ ಭಾರೀ ಸಂಖ್ಯೆಯ ಜನರಿಂದಾಗಿ ಉರೂಸ್‌ನ ವಾತಾವರಣ ಸೃಷ್ಟಿಸುತ್ತಿತ್ತು ಎಂಬ ಮಾತು ಕೇಳಿ ಬರುತ್ತಿದೆ.

ಪತ್ನಿ ಹಲೀಮಾ ಹಾಜಿಮಾ, ಮೂವರು ಪುತ್ರರು ಮತ್ತು ಐವರು ಪುತ್ರಿಯರನ್ನು ಬಿಟ್ಟಗಲಿದ ಅವರು 2001ರ ಅಕ್ಟೋಬರ್ 12ರಂದು ನಿಧನರಾದರು. ಇವರ ಕಿರಿಯ ಪುತ್ರ ಮುಹಮ್ಮದ್ ಯಾನೆ ಪುತ್ತುಬಾವ ಹಾಜಿ ಆಯುರ್ವೇದ ಚಿಕಿತ್ಸೆಯ ಪರಂಪರೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

# ಕಾರ್ಮಿಕ ನಾಯಕ ಮೂಸಬ್ಬ ಪಕ್ಕಲಡ್ಕ



ಮಂಗಳೂರು ನಗರ ಹೊರವಲಯದ ಬಜಾಲ್ ಸಮೀಪದ ಪಕ್ಕಲಡ್ಕ ಎಂಬಲ್ಲಿ ಅಬೂಬಕ್ಕರ್–ಮರಿಯಮ್ಮ ದಂಪತಿಯ ಪುತ್ರನಾಗಿ 1928ರಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಮೂಸಬ್ಬ ತನ್ನ ಸ್ವ ಪ್ರತಿಭೆಯಿಂದಲೇ ಜನಮನ್ನಣೆ ಗಳಿಸಿದವರು. ಅಂದಿನ ಮೆಟ್ರಿಕ್ಯುಲೇಶನ್ (10ನೇ ತರಗತಿ) ವಿದ್ಯಾಭ್ಯಾಸವನ್ನು ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ಪೂರೈಸಿ, ಇಂಟರ್ ಮೀಡಿಯೇಟ್‌ನ್ನು ಮಂಗಳೂರು ಸರಕಾರಿ ಕಾಲೇಜಿನಲ್ಲಿ ಮುಗಿಸಿದರು.

1953ರಲ್ಲಿ ಪಕ್ಕಲಡ್ಕದಲ್ಲಿ "ಪಕ್ಕಲಡ್ಕ ಯುವಕ ಸಂಘ"ವನ್ನು ಸ್ಥಾಪಿಸಿ ಯುವಕರನ್ನು ಸಮಾಜಮುಖಿ ಕೆಲಸಗಳಿಗೆ ಹಚ್ಚತೊಡಗಿದರು. ತೀರಾ ಹಿಂದುಳಿದ ಜನತೆಗೆ ಶಿಕ್ಷಣ ನೀಡುವ ಉದ್ದೇಶದಿಂದ ಪಕ್ಕಲಡ್ಕದಲ್ಲಿ ರಾತ್ರಿ ಶಾಲೆಯನ್ನು ತೆರೆದು ಬಜಾಲ್ ಪಕ್ಕಲಡ್ಕದಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡಿದರು.

ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತ ಒಪ್ಪಿ ರಾಜಕೀಯ ರಂಗಕ್ಕೂ ಧುಮುಕಿದ ಮೂಸಬ್ಬ ಮಂಗಳೂರು ತಾಲೂಕು ಬೋರ್ಡ್ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಬೀಡಿ, ಹೆಂಚು, ಗೋಡಂಬಿ ಕಾರ್ಮಿಕರ ಪರವಾಗಿ ಧ್ವನಿ ಎತ್ತಿದರಲ್ಲದೆ ಅನೇಕ ಜನಪರ ಹೋರಾಟಗಳಲ್ಲಿ ಪಾಲ್ಗೊಂಡು ಕಾರ್ಮಿಕ ನಾಯಕರಾಗಿಯೂ ಗುರುತಿಸಿಕೊಂಡರು.

ಕಾರ್ಮಿಕರ ಪರವಾಗಿದ್ದ ಅವರ ನಿಸ್ವಾರ್ಥ ಸೇವೆಯನ್ನು ಗಮನಿಸಿದ್ದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಅವರ ಅಹವಾಲಿಗೆ ಸ್ಪಂದಿಸುತ್ತಿದ್ದರು. ರೈತ ಸಂಘಗಳಲ್ಲಿ ಸಕ್ರಿಯರಾಗಿದ್ದ ಅವರು ಸಿಐಟಿಯು ಜಿಲ್ಲಾ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸಿಪಿಐಎಂ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾಗಿದ್ದರು.

ಮೃದು ಮಾತು ಮತ್ತು ಗಂಭೀರ ನಡೆನುಡಿಯ ಸದಾ ಶ್ವೇತ ವಸ್ತ್ರಧಾರಿಯಾಗಿ ಇರುತ್ತಿದ್ದ ಅವರು ಶಿಸ್ತಿನಲ್ಲಿಯೂ ಎತ್ತಿದ ಕೈ. ಆಂಗ್ಲ ಭಾಷೆಯಲ್ಲೂ ಹಿಡಿತ ಸಾಧಿಸಿದ್ದ ಅವರು ಸಿಪಿಐಎಂ ಪಕ್ಷದ ಪೂರ್ಣಪ್ರಮಾಣದ ಕಾರ್ಯಕರ್ತರಾಗಿ ದುಡಿದರು. ಅಲ್ಲಿ ತನಗೆ ಸಿಗುತ್ತಿದ್ದ ಗೌರವ ಸಂಭಾವನೆಯನ್ನು ಆರ್ಥಿಕವಾಗಿ ಹಿಂದುಳಿದ ಹಾಗೂ ಮಧ್ಯಮ ವರ್ಗದ ಮಕ್ಕಳ ಶಿಕ್ಷಣಕ್ಕಾಗಿ ಧಾರೆಯೆರೆಯುತ್ತಿದ್ದರು. ಅವರಿಂದ ಶಿಕ್ಷಣ ಪಡೆದ ನೂರಾರು ಮಂದಿ ಇಂದು ಉನ್ನತ ಮಟ್ಟದಲ್ಲಿರುವುದು ಗಮನಾರ್ಹ.

ನಿರರ್ಗಳ ವಾಗ್ಮಿಯಾಗಿದ್ದ ಅವರ ಭಾಷಣ ಕೇಳಲು ಜನರು ಮುಗಿಬೀಳುತ್ತಿದ್ದರು. ಆಕಾಶವಾಣಿಯಲ್ಲೂ ಅವರ ಚಿಂತನ ಪ್ರಸಾರವಾಗುತ್ತಿತ್ತು. ಓದುವುದು, ಬರೆಯುವುದು ಮತ್ತು ಯಕ್ಷಗಾನ ವೀಕ್ಷಣೆ ಅವರ ನೆಚ್ಚಿನ ಹವ್ಯಾಸವಾಗಿತ್ತು. ಸಾಹಿತ್ಯಾಭಿಮಾನಿಯಾಗಿದ್ದ ಅವರು ತನ್ನ ಮನೆಗೆ ಎಲ್ಲಾ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿದ್ದರು. ಪತ್ರಿಕೆ ಖರೀದಿಸಲು ಅಸಾಧ್ಯವಾದವರಿಗೆ ಓದಲು ಅನುಕೂಲವಾಗುವಂತೆ ತನ್ನ ಮನೆಯ ಒಂದು ಕೋಣೆಯಲ್ಲಿ ಪುಸ್ತಕ ಪೇರಿಸಿಟ್ಟು ಗ್ರಂಥಾಲಯ ಸ್ಥಾಪಿಸಿದ್ದರು.

ಕಾರ್ಮಿಕರ ಧ್ವನಿಯಾಗಿ ಸಿಐಟಿಯು, ಸಿಪಿಐಎಂ ಪಕ್ಷದಲ್ಲಿ ಸಕ್ರಿಯರಾಗಿದ್ದ ಅವರು ಕಾರಣಾಂತರದಿಂದ ಕೆಲಕಾಲ ಜಾತ್ಯತೀತ ಜನತಾ ದಳದಲ್ಲಿ ಗುರುತಿಸಿಕೊಂಡಿದ್ದರು. ಆದರೆ ಸಿಪಿಐಎಂ ಪಕ್ಷದ ನಾಯಕರು, ಕಾರ್ಯಕರ್ತರ ಜೊತೆ ಒಡನಾಟ ಬೆಳೆಸಿಕೊಂಡಿದ್ದರು. ಇಳಿ ವಯಸ್ಸಿನಲ್ಲಿ ತಟಸ್ಥರಾಗಿ ಉಳಿದಿದ್ದರು.

ಪತ್ನಿ ಫಾತಿಮಾ ಮತ್ತು ನಾಲ್ಕು ಗಂಡು ಹಾಗೂ ಎರಡು ಹೆಣ್ಣು ಮಕ್ಕಳನ್ನು ಬಿಟ್ಟು 2008ರ ಆಗಸ್ಟ್ 8ರಂದು ಅವರು ಅಗಲಿದರು.

## ಶಿಕ್ಷಣ ಪ್ರೇಮಿ
## ಹಾಜಿ ಮಾಸ್ಟರ್ ಮಹಮೂದ್ ಕೋಡಿ ಕುಂದಾಪುರ



ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕಡಲ ತೀರದಲ್ಲಿರುವ "ಕೋಡಿ" ಎಂಬ ಪುಟ್ಟ ಗ್ರಾಮದಲ್ಲಿ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಹಾಗೂ ಬೀಬಿಫಾತಿಮಾ ದಂಪತಿಯ ಹಿರಿಯ ಪುತ್ರರಾಗಿ 1941ರ ಎಪ್ರಿಲ್ 11ರಂದು ಹಾಜಿ ಮಾಸ್ಟರ್ ಮಹಮೂದ್ ಜನಿಸಿದರು.

ಬಾಲಕನಾಗಿದ್ದಾಗಲೇ ಮನೆಯ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕಾದ್ದರಿಂದ 8ನೇ ತರಗತಿಗೆ ವಿದ್ಯೆ ನಿಲ್ಲಿಸಬೇಕಾಯಿತು. ಬಳಿಕ ಅವರು ತಮ್ಮ ಬದುಕನ್ನು ಪಾಠ ಶಾಲೆಯಾಗಿಸಿಕೊಂಡರು. ಆ ಮೂಲಕ ಕೋಡಿ ಪರಿಸರದಲ್ಲಿ ಅವರು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆಗೈದರು.

ಕೋಡಿಯಲ್ಲಿ ಶೈಕ್ಷಣಿಕ ಕ್ರಾಂತಿ ಪ್ರಾರಂಭವಾದದ್ದು ಹಾಜಿ ಮಾಸ್ಟರ್ ಮಹಮೂದ್ ಅವರ ಮುತ್ತಜ್ಜ ಅಬ್ದುಲ್ಲಾ 1906ರಲ್ಲಿ ಕೋಡಿಯ ಪ್ರಥಮ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕುವುದರೊಂದಿಗೆ. ಹಾಜಿ ಮಾಸ್ಟರ್ ಅವರ ತಂದೆ ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಶಿಕ್ಷಕರಾದ ನಂತರ ಬ್ಯಾರೀಸ್ ಕುಟುಂಬದವರ ಶೈಕ್ಷಣಿಕ ಸೇವೆ ಇನ್ನಷ್ಟು ಬಲಗೊಂಡಿತು. ತಂದೆಯ ಮರಣದ ನಂತರ ಅವರ ಮಕ್ಕಳು, ಪ್ರಮುಖವಾಗಿ ಸೈಯದ್ ಮುಹಮ್ಮದ್ ಬ್ಯಾರಿ ಅವರು "ಹಾಜಿ ಕೆ. ಮೊಹಿದ್ದೀನ್ ಬ್ಯಾರಿ ಎಜುಕೇಶನ್" ಸ್ಥಾಪಿಸಿ ಕೋಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ತನ್ನ ಅಣ್ಣ ಹಾಜಿ ಮಾಸ್ಟರ್ ಮಹಮೂದ್ ಅವರ ಬಳಿ ಮುಂದಿಟ್ಟಾಗ ತಾನು ನಡೆಸುತ್ತಿರುವ ಉದ್ದಿಮೆಯನ್ನು ತ್ಯಜಿಸಿ, ಸಂಸ್ಥೆಗಳನ್ನು ಮುನ್ನಡೆಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಹಾಜಿ ಮಾಸ್ಟರ್ ಮಹಮೂದ್ ಅವರ ತ್ಯಾಗವಿಲ್ಲದಿದ್ದರೆ ಇಂದು ಕೋಡಿ ಶೈಕ್ಷಣಿಕ ಕೇಂದ್ರವಾಗಿರಲು ಸಾಧ್ಯವಿರಲಿಲ್ಲ. ಸ್ವಾರ್ಥವನ್ನು ಜಯಿಸಿ, ಕೋಡಿಯಲ್ಲಿ ಶಿಕ್ಷಣ ಕ್ರಾಂತಿ ನಡೆಸಿದ ಪ್ರಮುಖರಲ್ಲಿ ಅವರು ಪ್ರಮುಖರು.

ಹಾಜಿ ಮಾಸ್ಟರ್ ಮಹಮೂದ್ ಸಮಾನ ಮನಸ್ಕರಾಗಿ, ತುಂಬು ಸಂಸಾರದ ಯಜಮಾನನಾಗಿ, ಸಂಸಾರದಲ್ಲಿ ಎಲ್ಲೂ ಲೋಪ ಬಾರದಂತೆ ಸಮೃದ್ಧಿ, ಸಂಪತ್ತು ಎಲ್ಲವನ್ನೂ ಸಮಾನವಾಗಿ ಹಂಚಿ ತಿನ್ನುವ ಭಾವನಾತ್ಮಕ ಜೀವಿಯಾಗಿದ್ದವರು. "ಮಾಸ್ಟರ್‌ರ ಮಗ" ಎಂದೇ ಖ್ಯಾತರಾಗಿದ್ದ ಅವರು ಬಾಲ್ಯದಲ್ಲಿ ಕಡು ಬಡತನವನ್ನು ಕಂಡಿದ್ದರೂ, ನಂತರ ಬಡತನಕ್ಕೆ ಸಡ್ಡು ಹೊಡೆದಂತೆ "ಮೀನು" ಉದ್ಯಮವನ್ನು ಪ್ರಾರಂಭಿಸಿ, ಅನೇಕರ ಹಸಿವನ್ನು ನೀಗಿಸಿದವರು. ಒಂದೊಂದೇ ಬ್ಯಾರಿ ಶಿಕ್ಷಣ ಸಂಸ್ಥೆಗಳು ಕೋಡಿಯಲ್ಲಿ ಪ್ರಾರಂಭಗೊಳ್ಳುತ್ತಿರುವ ಸಂದರ್ಭ ತನ್ನ ಆದಾಯ ಗಳಿಕೆಯ ಮೀನಿನ ಉದ್ದಿಮೆಯನ್ನು ಸ್ಥಗಿತಗೊಳಿಸಿ, ಸಂಪೂರ್ಣವಾಗಿ ತನ್ನನ್ನು ಶಿಕ್ಷಣ ಸಂಸ್ಥೆಗಳಲ್ಲಿ ತೊಡಗಿಸಿಕೊಂಡು ಹಿರಿಮೆ ಮೆರೆದವರು.

ಆದರ್ಶ ಶಿಕ್ಷಕರಾಗಿ ಅಪಾರ ಪ್ರೀತಿ ಹಾಗೂ ಜನಮನ್ನಣೆ ಪಡೆದ ಅವರು ತಂದೆಯ ಕನಸನ್ನು ಸಾಕಾರಗೊಳಿಸಲು ಪಣತೊಟ್ಟರು. ಸೈಯದ್ ಮುಹಮ್ಮದ್ ಬ್ಯಾರಿಯ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡ "ಬ್ಯಾರೀಸ್ ಶಿಕ್ಷಣ ಸ್ಸಂಸ್ಥೆ"ಗಳ ಉಸಿರಾಗಿದ್ದುಕೊಂಡು ಶ್ರಮಿಸಿದರು.

ದಾನಗಳಲ್ಲಿ ವಿದ್ಯಾದಾನ ಶ್ರೇಷ್ಠ ಎಂಬ ನಾಣ್ಣುಡಿಯನ್ನು ಸಾಕ್ಷಾತ್ಕಾರಗೊಳಿಸಿದರು. ಈ ವಿದ್ಯಾಸಂಸ್ಥೆ ಎಂದೂ ಕೂಡ ವ್ಯಾವಹಾರಿಕ ದೃಷ್ಟಿಕೋನದ ನೆಲೆಯಲ್ಲಿ ನಡೆದುಕೊಂಡ ನಿದರ್ಶನಗಳೇ ಇಲ್ಲ. ಇದಕ್ಕೆ ಕಾರಣ ಶಿಕ್ಷಣ ಕುರಿತು ಬ್ಯಾರೀಸ್ ಕುಟುಂಬಸ್ಥರಿಗೆ ಇರುವ ಧೋರಣೆ ಮತ್ತು ಕಾಳಜಿ.

ಅಪೂರ್ವವಾದ ವ್ಯಕ್ತಿತ್ವವನ್ನು ಹೊಂದಿದ್ದ ಹಾಜಿ ಮಾಸ್ಟರ್ ಮಹಮೂದ್ ಸೌಮ್ಯ ಸ್ವಭಾವದ ತಂದೆಯನ್ನು ಸದಾ ಸ್ಮರಿಸಿಕೊಳ್ಳುತ್ತಿದ್ದರು. ಅವರ ಸ್ವಭಾವಕ್ಕೆ ತಾನು ತದ್ವಿರುದ್ಧ. ಅತ್ಯಂತ ಕಡಿಮೆ ವೇತನದಲ್ಲಿಯೂ ಕೂಡ ಸಂಸಾರದ ನೊಗವನ್ನು ಹೊತ್ತು ಶಾಂತಚಿತ್ತರಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದ ಅವರು ನಿಜಕ್ಕೂ ಆದರ್ಶಪ್ರಾಯರು ಎಂದು ನೆನಪಿಸಿಕೊಳ್ಳುತ್ತಿದ್ದರು. ಹೊರನೋಟಕ್ಕೆ ಅವರು ಕಠೋರ ಎಂದೆನಿಸಿದರೂ ಮನಸ್ಸು ಹೂವಿನಂತೆ ಕೋಮಲವಾಗಿತ್ತು.

ಶಾಲಾ ವಿದ್ಯಾರ್ಥಿಗಳ ಪೋಷಕರೊಂದಿಗೆ, ಶಾಲಾಭಿವೃದ್ಧಿ ಸಮಿತಿ ಸದಸ್ಯರೊಂದಿಗೆ, ಊರಿನವರೊಂದಿಗೆ,

ಶಿಕ್ಷಕರೊಂದಿಗೆ ಉತ್ತಮ ಬಾಂಧ್ಯವವನ್ನು ಹೊಂದಿದ್ದ ಅವರು ಎಸ್‌ಡಿಎಂಸಿ ಸಭೆಗೆ ಮುನ್ನ ವೈಯಕ್ತಿಕವಾಗಿ ತಾನೇ ದೂರವಾಣಿ ಮೂಲಕ ಆಹ್ವಾನಿಸಿ ಸಭೆಯನ್ನು ಯಶಸ್ಸಿಗೊಳಿಸುತ್ತಿದ್ದರು.

ಊರಿನ ಹಿಂದೂ, ಮುಸ್ಲಿಂ ಬಾಂಧವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರು. ಅಷ್ಟೇ ಅಲ್ಲ ಈ ಸಮುದಾಯದ ಮಧ್ಯೆ ಯಾವುದೇ ಕಾರಣಕ್ಕೂ ಪರಸ್ಪರ ಅಪನಂಬಿಕೆಯಿಂದ ಅಶಾಂತಿ ಸೃಷ್ಟಿಯಾಗಬಾರದು ಎಂದು ಆಶಿಸಿ ಶಾಂತಿಗಾಗಿ ಅಪಾರವಾಗಿ ಶ್ರಮಿಸಿದ್ದರು.

ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತಿದ್ದ ಅವರು ಯಾವತ್ತೂ ಕೂಡ ತನ್ನ ಧೋರಣೆಯನ್ನು ಇನ್ನೊಬ್ಬರ ಮೇಲೆ ಹೇರಿದವರಲ್ಲ. ಯಾವುದೇ ಒಂದು ಯೋಜನೆ/ಕಾರ್ಯಕ್ರಮ ರೂಪಿಸುವಾಗಲೂ ಎಲ್ಲರೊಂದಿಗೆ ಚರ್ಚಿಸಿ ವಿಶ್ವಾಸಕ್ಕೆ ತೆಗೆದುಕೊಂಡು ಅನುಷ್ಠಾನಗೊಳಿಸುತ್ತಿದ್ದರು.

ವಿದಾರ್ಥಿಗಳೆಂದರೆ ಅವರಿಗೆ ಅಚ್ಚುಮೆಚ್ಚು. ಚಿಕ್ಕ ಮಕ್ಕಳ ಜೊತೆ ಮುದ್ದು ಮುದ್ದಾಗಿ ಇಂಗ್ಲೀಷ್‌ನಲ್ಲಿ ಮಾತನಾಡಿ ಸಂತೋಷಪಡುತ್ತಿದ್ದರು. ಶಾಲೆಯಲ್ಲಿ ಮಕ್ಕಳು ಸ್ವಲ್ಪ ಅಸ್ವಸ್ಥರಾದರೂ ತನಗೇ ಆದಂತೆ ವ್ಯಥೆ ಪಡುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಗಳ ಹೆಸರುಗಳನ್ನು ನೆನಪಿಟ್ಟುಕೊಂಡು ಅವರನ್ನು ಹೆಸರಿನಿಂದ ಕರೆದು ಮಾತನಾಡಿಸುವ ಅವರ ನೆನಪಿನ ಶಕ್ತಿ ನಂಬಲು ಅಸಾಧ್ಯವಾದುದು ಮತ್ತು ಮಕ್ಕಳ ಬಗೆಗೆ ಅವರಿಗಿರುವ ಆದಮ್ಯ ಪ್ರೀತಿಯ ಸಾಕ್ಷಿಯಾಗಿತ್ತು.

ಶಿಕ್ಷಕರ ಬಗ್ಗೆಯೂ ಅಪಾರ ಪ್ರೀತಿಯನ್ನು ತೋರಿಸುತ್ತಿದ್ದರು. ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುವ ಶಿಕ್ಷಕರು ಪರಿಶ್ರಮಿಗಳು ಎನ್ನುವ ಮಾತು ಅವರ ಮನದಾಳದಿಂದ ಸದಾ ಬರುತ್ತಿತ್ತು.

ಅವರ ಶೈಕ್ಷಣಿಕ, ಸಾಮಾಜಿಕ ಸೇವೆಗಾಗಿ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ 2010ರಲ್ಲಿ 10ನೇ ತಾಲೂಕು ಸಾಹಿತ್ಯ ಸಮ್ಮೇಳನದಲ್ಲಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪಕ ಎಂದು ಗುರುತಿಸಿ ಸನ್ಮಾನಿಸಿದೆ. ಉಡುಪಿ ಜಿಲ್ಲಾಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯು 2914ರಲ್ಲಿ ನೀಡಿದೆ. ಕುಂದಾಪರ ಪುರಸಭೆಯಿಂದ 2014ರಲ್ಲಿ ಮಕ್ಕಳ ದಿನಾಚರಣೆ ಸಂದರ್ಭ ಸನ್ಮಾನಿಸಲ್ಪಟ್ಟಿದ್ದಾರೆ. ಬ್ಯಾರೀಸ್ ಸಮೂಹ ಸಂಸ್ಥೆಯು "ಜ್ಞಾನ ದೀವಿಗೆಯ ಹರಿಕಾರ" ಎಂಬ ಬಿರುದು ಪ್ರದಾನ ಮಾಡಿದೆ.

2014ರ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರಕ್ಕಾಗಿ ಕುಂದಾಪುರದ ಜಾತ್ರೆಯ ಸಂದರ್ಭ ಸ್ಥಳೀಯರಿಂದ ಸನ್ಮಾನಿಸಲ್ಪಟ್ಟಿದ್ದಾರೆ. ಜಮೀಯ್ಯತುಲ್ ಫಲಾಹ್ ಕುಂದಾಪುರ ಘಟಕದಿಂದ 2015ರಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. ಊರಿನ ಅಭಿವೃದ್ಧಿಗಾಗಿ ನಾಸಿರುಲ್ ಮಸಾಕೀನ್ ಎಂಬ ಸಂಸ್ಥೆಯನ್ನು 50 ವರ್ಷದ ಹಿಂದೆಯೇ ಸ್ಥಾಪಿಸಿ ಆ ಮೂಲಕ ಸಮಾಜ ಸೇವೆಯಲ್ಲಿ ನಿರತರಾಗಿದ್ದರು.

ಕೋಡಿಯ ಬದ್ರಿಯಾ ಜುಮಾ ಮಸೀದಿಯ ಅಧ್ಯಕ್ಷರಾಗಿ 5 ವರ್ಷ ಸೇವೆ ಸಲ್ಲಿಸಿದ್ದರು. ಊರಿನ ಚಕ್ರೇಶ್ವರಿ ದೇವಸ್ಥಾನದ ಸಲಹೆಗಾರರಾಗಿ 25 ವರ್ಷ ಸೇವೆ ಸಲ್ಲಿಸಿ ಸೌಹಾರ್ದಕ್ಕೆ ಮಾದರಿಯಾಗಿದ್ದರು.

1982 ಮತ್ತು 1997ರಲ್ಲಿ ಅವರು ಹಜ್ ಯಾತ್ರೆಗೈದಿದ್ದರು. ಝುಹುರಾರನ್ನು ಮದುವೆಯಾಗಿದ್ದ ಅವರು ಝುಹುರಾರ ನಿಧನದ ಬಳಿಕ ಅವರ ತಂಗಿ ಆಮಿನಾಬಿಯನ್ನು ಮದುವೆಯಾಗಿದ್ದರು. ಅಮಿನಾಬಿಯ ನಿಧನದ ಬಳಿಕ ಬೀಫಾತಿಮಾರನ್ನು ಮದುವೆಯಾಗಿದ್ದರು. ಮೊದಲ ಪತ್ನಿಯಲ್ಲಿ ಒಬ್ಬ ಮತ್ತು ಎರಡನೆ ಪತ್ನಿಯಲ್ಲಿ ಮೂವರ ಸಹಿತ ಅವರು ನಾಲ್ಕು ಹೆಣ್ಣುಮಕ್ಕಳನ್ನು ಹೊಂದಿದ್ದರು. 2019ರ ಫೆಬ್ರವರಿ 9ರಂದು ಅವರು ನಿಧನರಾದರು.



## ಹಾಡನ್ನೇ ಉಸಿರನ್ನಾಗಿಸಿದ್ದ ಇಬ್ರಾಹೀಂ ತಣ್ಣೀರುಬಾವಿ

ಮಂಗಳೂರು ತಾಲೂಕಿನ ತಣ್ಣೀರುಬಾವಿಯಲ್ಲಿ ಅಬ್ಬಾಸ್-ಹೈಜಾದ ದಂಪತಿಯ ಪುತ್ರನಾಗಿ 1941ರ ಸೆಪ್ಟಂಬರ್ 27ರಂದು ಜನಿಸಿದ ಇಬ್ರಾಹೀಂ ತಣ್ಣೀರುಬಾವಿ ಸಾರ್ವಜನಿಕ ಉದ್ದಿಮೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ತಣ್ಣೀರುಬಾವಿ ತೊರೆದು ಕೃಷ್ಣಾಪುರದ ಚೊಕ್ಕಬೆಟ್ಟುವಿನಲ್ಲಿ ಮನೆ ಮಾಡಿಕೊಂಡರು.

ಚೊಕ್ಕಬೆಟ್ಟುವಿನಲ್ಲಿ ವಾಸಿಸಿದರೂ ಕೂಡ ತನ್ನ ಹೆಸರಿನ ಮುಂದೆ ಹುಟ್ಟೂರ ಹೆಸರನ್ನೇ ಹಾಕಿ ಊರಿಗೆ ಕೀರ್ತಿ ತಂದರು.

ಪ್ರಾಥಮಿಕ ಶಿಕ್ಷಣ ಪಡೆದಿದ್ದ ಅವರು ಬಾಲ್ಯದಲ್ಲೇ ಸಾಹಿತ್ಯದಲ್ಲಿ ಅತೀವ ಆಸಕ್ತಿ ಹೊಂದಿದ್ದರು. 18 ವರ್ಷದಲ್ಲೇ ಹಾಡು ಬರೆಯಲು ಆರಂಭಿಸಿದರು. ಆರಂಭದಲ್ಲಿ ಕನ್ನಡ ಮತ್ತು ತುಳುವಿನಲ್ಲಿ ಬರೆಯುತ್ತಿದ್ದ ಅವರು ಬಳಿಕ ಬ್ಯಾರಿ ಭಾಷೆಯಲ್ಲಿ ಕಾವ್ಯ ರಚಿಸಿ ಹಾಡತೊಡಗಿದರು. ಅದಲ್ಲದೆ ಕೊಂಕಣಿ, ಮಲಯಾಳಂ, ತಮಿಳು ಭಾಷೆಯಲ್ಲೂ ಹಾಡು ರಚಿಸಿದ್ದಾರೆ.

ಬೀಡಿಯ ಪ್ರಚಾರ ಹಾಡು, ಚುನಾವಣಾ ಪ್ರಚಾರ ಹಾಡು... ಹೀಗೆ ಸಾವಿರಾರು ಹಾಡುಗಳನ್ನು ಹಾಡಿದ್ದಾರೆ. ಅವರಿಗೆ ಬರೆಯಲು ಬಿಳಿ ಹಾಳೆಯೇ ಬೇಕು ಎಂದೇನಿಲ್ಲ. ತುಂಡು ಕಾಗದ ಅಥವಾ ಬಸ್ ಟಿಕೆಟೂ ಆದೀತು. ಯಾವುದರಲ್ಲಾದರೂ ಅವರು ಬರೆಯುತ್ತಿದ್ದರು. ಮದುವೆ, ಮದರಂಗಿ, ತಾಳಮೇಳ ಹೀಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತಕ್ಕಂತೆ ಹಾಡು ಬರೆದು ಕೊಡುತ್ತಿದ್ದರು. ಅಲ್ಲದೆ ಸ್ವತಃ ಹಾಡುತ್ತಿದ್ದರು. ಸುಮಾರು 500ಕ್ಕೂ ಅಧಿಕ ಹಾಡು ಬರೆದಿದ್ದಾರೆ.

ಅವರು ಕವಿ ಮಾತ್ರವಲ್ಲ ನಾಟಕಗಳಲ್ಲೂ ನಟಿಸುತ್ತಿದ್ದರು. ಕನ್ನಡ-ಬ್ಯಾರಿ ಸಹಿತ 100ಕ್ಕೂ ಅಧಿಕ ನಾಟಕಗಳಲ್ಲಿ ಅವರು ಅಭಿನಯಿಸಿದ್ದಾರೆ. 50ಕ್ಕೂ ಅಧಿಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. "ಮುನ್ನುಡಿ" ಚಲನ ಚಿತ್ರದಲ್ಲೂ ನಟಿಸಿದ್ದಾರೆ. ಬ್ಯಾರಿ, ಕನ್ನಡ, ತುಳುವಿನಲ್ಲಿ ಅನೇಕ ಕಥೆ, ಕವನ, ಲೇಖನವನ್ನೂ ಬರೆದಿದ್ದಾರೆ.

ಮೊಯ್ಲಾಂಜಿ, ಸಂದೋಲ, ಮೆಹರ್, ದಪ್ಪುರೊ ಪಾಟ್ ಹೀಗೆ 10ಕ್ಕೂ ಅಧಿಕ ಕ್ಯಾಸೆಟ್ ರಚಿಸಿದ್ದಾರೆ. ಚೆಲ್ಲೈಕಲ್ಲ, ಚೆನ್ನೆಂಗ್ ಬೇಜಾರಾವು, ಅಂಗಲಾಪು, ಪತ್ತ್ ಇನ್ನವುಡೆ ಮುತ್ತು ಇತ್ಯಾದಿ ನಾಟಕ ರಚಿಸಿ, ನಿರ್ದೇಶಿಸಿ, ಅಭಿನಯಿಸಿದ್ದಾರೆ. ಅವರು ರಚಿಸಿದ ವಸೀಯತ್, ತಿನ್ನೊಗೈತ್ ಚೆಯಿಕೊನಾ?, ಪಿರ್ಸ, ಮಂಜಿಲ ನಾಟಕದ ಕ್ಯಾಸೆಟ್ ಹೊರಬಂದಿದೆ. "ಸಾವುಂಞಾಕರೆ ಸಾಲೆ" ನಾಟಕವನ್ನು ಬೆಂಗಳೂರಿನಲ್ಲಿ ನಡೆದ ಬ್ಯಾರಿ ಸಮ್ಮೇಳನದಲ್ಲಿ ಪ್ರದರ್ಶಿಸಿದ್ದರು. ಬಳಿಕ ಈ ನಾಟಕವು ಅನೇಕ ಸಂಘ-ಸಂಸ್ಥೆಗಳ ವಾರ್ಷಿಕ ಕಾರ್ಯಕ್ರಮ, ಶಾಲಾ ವಾರ್ಷಿಕ ಕಾರ್ಯಕ್ರಮದಲ್ಲಿ ಅಭಿನಯಿಸಲ್ಪಟ್ಟಿತ್ತು.

ಮಂಗಳೂರಿನಲ್ಲಿ 1998ರಲ್ಲಿ ನಡೆದ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ "ನೆನಲ್ ಕಲಿ" ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಭಾವಜೀವಿಯಾಗಿದ್ದ ಅವರು ಕಷ್ಟಕಾರ್ಪಣ್ಯವನ್ನು ಎದುರಿಸಿದ್ದರು. ತನ್ನ ಬರೆಹದಲ್ಲಿ ಹಾಸ್ಯಕ್ಕೆ ಹೆಚ್ಚು ಒತ್ತು ನೀಡಿದ್ದರು. ತುಳುವಿನಲ್ಲಿ "ಮುಕುಲು ಬಿರ್ಸೆರ್", "ಪರಬೆರೆ ಸಾಲೆ", ನಾಟಕ ರಚಿಸಿದ್ದರು. ಅನೇಕ ಗೋಷ್ಠಿಯಲ್ಲಿ ಕವನ ವಾಚಿಸಿದ್ದರು. ಹಾಡಿದ್ದರು. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಅನೇಕ ತುಳು ಸಂಘಟನೆಗಳಿಂದಲೂ ಸನ್ಮಾನಿಸಲ್ಪಟ್ಟಿದ್ದರು.

"ತನಲ್" "ನೆನಲ್" ಬ್ಯಾರಿ ಕವನ ಸಂಕಲನ, "ಸಾವುಂಞಾಕರೆ ಸಾಲೆ" ಎಂಬ ಬ್ಯಾರಿ ನಾಟಕ ಕೃತಿ, "ಇಸ್ರಾಫ್" ಎಂಬ ಬ್ಯಾರಿ ನಾಟಕ ಸಂಕಲನವನ್ನೂ ಹೊರತಂದಿದ್ದರು. ಬೆಂಗಳೂರು ದೂರದರ್ಶನದಲ್ಲೂ ಅವರ ಎರಡು ಹಾಡು ಪ್ರಸಾರವಾಗಿದೆ. ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಉಪಾಧ್ಯಕ್ಷರಾಗಿ, ಗೌರವ ಸಲಹೆಗಾರರಾಗಿದ್ದ ಅವರು 1975ರಲ್ಲಿ ಮಂಗಳೂರಿನಲ್ಲಿ ನಡೆದ ಬ್ಯಾರಿ ರಸಮಂಜರಿ ಕಾರ್ಯಕ್ರಮದ ಎಲ್ಲಾ ಹಾಡುಗಳನ್ನೂ ಬರೆದಿದ್ದರು. 2008ರಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯು ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ. 2004ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್‌ನ ಬ್ಯಾರಿ ಸಾಹಿತ್ಯ ಪ್ರಶಸ್ತಿಯೂ ಲಭಿಸಿದೆ. 2010ರಲ್ಲಿ ದುಬೈಯ ಬ್ಯಾರಿಸ್ ಕಲ್ಚರಲ್ ಫೋರಂನ "ಚಮ್ಮನ" ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. ಚೊಕ್ಕಬೆಟ್ಟು

ಜುಮಾ ಮಸ್ಜಿದ್‌ನ ಉಪಾಧ್ಯಕ್ಷರೂ ಆಗಿದ್ದರು. ಚೊಕ್ಕಬೆಟ್ಟು ಜಾಮಿಯಾ ನರ್ಸರಿ ಇಂಗ್ಲಿಷ್ ಮಾಧ್ಯಮ ಶಾಲೆಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಚೊಕ್ಕಬೆಟ್ಟು ದ.ಕ.ಜಿ.ಪಂ.ಹಿ.ಪ್ರಾ. ಶಾಲೆಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಪತ್ನಿ ಖತೀಜಾ, ನಾಲ್ಕು ಮಂದಿ ಗಂಡು ಮತ್ತು ಐದು ಮಂದಿ ಹೆಣ್ಮಕ್ಕಳನ್ನು 2019ರ ಜುಲೈ 23ರಂದು ಅವರು ಬಿಟ್ಟಗಲಿದರು.

# ಮುಅಲ್ಲಿಮುಲ್ ಕುರ್‌ಆನ್ ಖ್ಯಾತಿಯ
# ಮುಹಮ್ಮದಾಲಿ ಬೋಳಾರ



ಮಂಗಳೂರಿನ ಬೋಳಾರದ ಕುಂಞಲಿಯಾಕ ಮತ್ತು ಬೀಫಾತಿಮ್ಮ ದಂಪತಿಯ ಪುತ್ರನಾಗಿ 1938ರಲ್ಲಿ ಜನಿಸಿದ ಮುಹಮ್ಮದಾಲಿ "ಮುಅಲ್ಲಿಮುಲ್ ಕುರ್‌ಆನ್" ಎಂದೇ ಗುರುತಿಸಲ್ಪಟ್ಟಿರುವರು.

ಮಂಗಳೂರಿನ ಬದ್ರಿಯಾ ಶಾಲೆಯಲ್ಲಿ 5ನೆ ತರಗತಿಯವರೆಗೆ ಕಲಿತು ಬಳಿಕ ಕಸಾಯಿಗಲ್ಲಿ ಶಾಲೆಗೆ ಸೇರಿದರು. ಮದ್ರಸ ವಿದ್ಯಾಭ್ಯಾಸವನ್ನು ಬಂದರ್‌ನ ಅಝ್‌ಹರಿಯಾದಲ್ಲಿ ಕಲಿತರು. ನಂತರ 1956ರಲ್ಲಿ ಉತ್ತರ ಪ್ರದೇಶದ ಬೆಹರಾ ಇಚ್" ನೂರುಲ್ ಉಲೂಂ ಮದ್ರಸ"ಕ್ಕೆ ಸೇರಿದರು. ಅಲ್ಲೇ ಉರ್ದು ಕಲಿತು ಕುರ್‌ಆನನ್ನು ಉರ್ದುವಿನಲ್ಲೂ ಕಲಿಸುವ ಶಿಕ್ಷಕನಾಗಿ ಹೊರ ಹೊಮ್ಮಿದರು. ಅಲ್ಲದೆ "ಮುಅಲ್ಲಿಮುಲ್ ಕುರ್‌ಆನ್" ಪದವಿ ಪಡೆದರು. ಅದಕ್ಕೂ ಮೊದಲು ಕಸಾಯಿಗಲ್ಲಿ ಮತ್ತು ಕಂದಕ್‌ನ ಮದ್ರಸದಲ್ಲೂ ಮುಅಲ್ಲಿಮ್ ಆಗಿದ್ದರು. ಅರಬಿಕ್‌ನಲ್ಲೂ ಜ್ಞಾನ ಹೊಂದಿದ್ದ ಅವರು ಕರ್ನಾಟಕ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಅರಬಿಕ್ ಶಿಕ್ಷಕರಾಗಿ ದುಡಿದರು.

ಸ್ವಾತಂತ್ರ್ಯಹೋರಾಟಗಾರರೂ ಆಗಿದ್ದ ಅವರು ಅರಬಿಕ್ ಮತ್ತು ಉರ್ದುವಿನಲ್ಲಿ ಹಿಡಿತ ಸಾಧಿಸಿದ್ದರು. ಬ್ಯಾರಿ ಭಾಷೆಯ ಬಗ್ಗೆಯ ಅಪಾರವಾದ ಆಸಕ್ತಿ ಮತ್ತು ಅಭಿಮಾನವಿಟ್ಟುಕೊಂಡಿದ್ದ ಅವರು "ಲೆಂಗಲ್" ಎಂಬ ಹೆಸರಿನ ಬ್ಯಾರಿ ಲಿಪಿಯನ್ನು ರಚಿಸಿದ್ದರು. ಅದು ಅರಬಿಕ್ ಲಿಪಿಯನ್ನು ಹೋಲುತ್ತಿತ್ತು. ಬ್ಯಾರಿ ಭಾಷೆಯಲ್ಲಿ ದೇಶಭಕ್ತಿ ಗೀತೆಯನ್ನೂ ರಚಿಸಿದ್ದ ಅವರು ಕುರ್‌ಆನನ್ನು ಬ್ಯಾರಿ ಭಾಷೆಯಲ್ಲೇ ಕಲಿಸಿಕೊಡುತ್ತಿದ್ದರು. ಬ್ಯಾರಿ ಭಾಷೆಯಲ್ಲಿ 150ಕ್ಕೂ ಅಧಿಕ ಮತಪ್ರವಚನದ ಕ್ಯಾಸೆಟ್ ಹೊರ ತಂದಿದ್ದ ಅವರು 1980ರಲ್ಲಿ ಬ್ಯಾರಿ ಭಾಷೆಯಲ್ಲಿ "ಇಲ್ಮಿ ಬೈತ್" ಎಂಬ ಹಾಡುಗಳ ಕ್ಯಾಸೆಟ್, 1994ರಲ್ಲಿ "ಬ್ಯಾರಿಜ ಆರಜ" ಎಂಬ ಭಾಷಣದ ಕ್ಯಾಸೆಟ್, 1996ರಲ್ಲಿ "ಲಾ ಇಲಾಹಿ ಇಲ್ಲಲ್ಲಾಹ್" ಎಂಬ ಬ್ಯಾರಿ ಹಾಡುಗಳ ಕ್ಯಾಸೆಟ್ ಹೊರ ತಂದಿದ್ದರು. 2000ರಲ್ಲಿ ಕುರ್‌ಆನ್‌ನ ಅಧ್ಯಾಯಗಳಲ್ಲಿ ಒಂದಾದ "ಯಾಸೀನ್"ನ್ನು ಬ್ಯಾರಿ ಭಾಷೆಗೆ ಅನುವಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದರು.

ಪತ್ನಿ ಝೈನಬಾ, ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು 2014ರ ಡಿಸೆಂಬರ್ 20ರಂದು ಅವರು ಬಿಟ್ಟಗಲಿದ್ದಾರೆ.

# ಕವಿ ಹೃದಯದ ಅಬ್ದುಲ್ ಹಮೀದ್ ವೇಣೂರು



ಮಂಜೇಶ್ವರ ಸಮೀಪದ ಹೊಸಂಗಡಿಯ ಮಾರೂರು ಎಂಬಲ್ಲಿ ಪುದಿಯಂಪಾಡಿ ಉಸ್ತಾದ್ ಎಂದೇ ಖ್ಯಾತರಾದ ಹಾಜಿ ಮುಹಮ್ಮದ್ ಮುಸ್ಲಿಯಾರ್–ಹಲೀಮಮ್ಮ ದಂಪತಿಯ ಪುತ್ರನಾಗಿ 1947ರ ಫೆಬ್ರವರಿ 16ರಂದು ಜನಿಸಿದ ಅಬ್ದುಲ್ ಹಮೀದ್ ವೇಣೂರು ಕವಿ ಹೃದಯಿ.

ಎಸೆಸೆಲ್ಸಿವರೆಗೆ ಕಲಿತ ಅವರಿಗೆ ಧಾರ್ಮಿಕ ಮತ್ತು ಲೌಕಿಕ ವಿಚಾರದಲ್ಲಿ ಅಗಾಧ ಜ್ಞಾನವಿತ್ತು. ಬಾಲ್ಯದಲ್ಲೇ ಸಾಹಿತ್ಯಾಸಕ್ತಿಯನ್ನು ಮೈಗೂಡಿಸಿಕೊಂಡಿದ್ದ ಅವರಿಗೆ ಅಪಾರವಾಗಿ ಓದುವ ಗೀಳು ಇತ್ತು. ಜ್ಞಾನದಾಹ ಮತ್ತು ಅವರಲ್ಲಿದ್ದ ಭಾಷಾ ಪಾಂಡಿತ್ಯ ಅವರನ್ನು ಅಕ್ಷರ ಪ್ರಪಂಚಕ್ಕೆ ಪರಿಚಯಿಸಿತ್ತು. ಹಾಗೇ ಕವನ ರಚಿಸಲು ಮುಂದಾದ ಅವರು ಆಧ್ಯಾತ್ಮ, ಧಾರ್ಮಿಕ ವಿಚಾರಗಳನ್ನು ತನ್ನ ಕವನಗಳಿಗೆ ವಿಷಯವನ್ನಾಗಿಸಿದರು. ಅಲ್ ಅನ್ಸಾರ್–ಮೊಯ್ಲಾಂಜಿ ಪತ್ರಿಕೆಗಳಲ್ಲಿ ಕವನಗಳನ್ನು ಬರೆಯತೊಡಗಿದರು.

"ನನ್ನ ಆತ್ಮ ಜಡವ ತೊರೆದು ಹೊರಟು ಹೋಗಿವೆ, ಹಮ್ದ್ ಹಮ್ದ್ ನೆಮ್ಮದಿ ತಲುಪಿ ನಾಕದ ಹೂವ ಬನದಲಿ, ಮಣ್ಣಿನ ಕೆಳಗಡಿ ಕತ್ತಲು ತುಂಬಿದ ಬರ್ಬರ ಕಬ್‌ರೊಳು... ಇತ್ಯಾದಿ ಕವನದ ಸಾಲುಗಳು ಮರಣದ ಬಗ್ಗೆ ಅವರಿಗೆ ಪದೇ ಪದೇ ಕಾಡುತ್ತಿದ್ದುದು ಸಾಕ್ಷಿಯಾಗಿದೆ.

ಬಹುತೇಕ ಕವನಗಳು ಮರಣದ ಬಗ್ಗೆಯೇ ಉಲ್ಲೇಖಿಸಲ್ಪಟ್ಟಿರುವುದರಿಂದ ಅವರನ್ನು "ಮರಣದ ಕವಿ" ಎಂದೂ ಕೆಲವರು ಕರೆಯುವುದುಂಟು. ಬ್ಯಾರಿ ಭಾಷೆಯಲ್ಲೂ ಕವನಗಳನ್ನು ಬರೆಯುತ್ತಿದ್ದ ಅವರು ಮದ್ರಸದ ಮಕ್ಕಳಿಗಾಗಿಯೇ ಸರಳ ಮತ್ತು ಸುಂದರ ಹಾಗೂ ಸುಲಲಿತವಾದ ಪದ್ಯಗಳನ್ನು ಬರೆಯುತ್ತಿದ್ದರು.

ಚಿತ್ರಕಲೆ, ಕ್ಯಾಲಿಗ್ರಫಿಯಲ್ಲೂ ಅವರು ಎತ್ತಿದ ಕೈ. ಅವರ ಕೈಬರಹವು ಮುದ್ರಿತ ಬರಹದಷ್ಟೇ ಸ್ಫುಟ ಮತ್ತು ಸುಂದರವಾಗಿತ್ತು. ಅವರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಎಸೆಸ್ಸೆಫ್ ಸಂಘಟನೆಯು ಮರಣೋತ್ತರವಾಗಿ ಸಾಹಿತ್ಯ ಪ್ರಶಸ್ತಿಯನ್ನು ನೀಡಿತ್ತು.

ಬೆಳ್ತಂಗಡಿ ತಾಲೂಕಿನ ವೇಣೂರಿನಲ್ಲಿ ನೆಲೆಸಿದ್ದ ಅವರು ತನ್ನ ವಾಸ್ತವ್ಯವನ್ನು ಮೂಡುಬಿದಿರೆಯ ಬಾಡಿಗೆ ಮನೆಗೆ ಸ್ಥಳಾಂತರಿಸಿದ್ದರೂ ಕೂಡ ಅಬ್ದುಲ್ ಹಮೀದ್ ವೇಣೂರು ಎಂಬ ಹೆಸರಿನಲ್ಲೇ ಬರೆಯುತ್ತಿದ್ದರು. ಆರ್ಥಿಕವಾಗಿ ಬಡತನವಿದ್ದರೂ ಕೂಡ ಬೌದ್ಧಿಕವಾಗಿ ಅವರು ಅತ್ಯಂತ ಶ್ರೀಮಂತರಾಗಿದ್ದರು. ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದ್ದರು. ಹಾಗಾಗಿ ಪತ್ನಿ ರಾಬಿಯಮ್ಮ ಅವರ ಸಹಕಾರದಿಂದ ನಾಲ್ಕು ಗಂಡು ಮಕ್ಕಳು ಮತ್ತು ಐವರು ಹೆಣ್ಮಕ್ಕಳಿಗೂ ಉತ್ತಮ ವಿದ್ಯಾಭ್ಯಾಸ ನೀಡಿದ್ದರು.

ಪುತ್ರರ ಪೈಕಿ ಮೂವರು ಗಲ್ಫ್ ಉದ್ಯೋಗ, ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಪುತ್ರಿಯರ ಪೈಕಿ ಬುಶ್ರಾ ವಿದೇಶದಲ್ಲಿ ಉದ್ಯೋಗಿಯಾಗಿದ್ದರೆ, ಪಿಎಚ್‌ಡಿ ಪದವಿ ಪಡೆದಿರುವ ಸಫಿಯಾ ಮಂಗಳೂರು ವಿವಿಯಲ್ಲಿ ಅತಿಥಿ ಉಪನ್ಯಾಸಕಿಯಾಗಿರುವರು. ಡಾ. ಬರ್ಕತುನ್ನಿಸಾ ದಂತ ವೈದ್ಯೆಯಾಗಿದ್ದಾರೆ. ಆಯಿಶಾ ಖಾತೂನ್ ಎಂಕಾಂ ಪದವೀಧರೆ. ಬೀವಿ ಆಶೂರಾ ಎಂಬಿಎ ಮತ್ತು ಎಂಕಾಂ ಪದವೀಧರೆ.

ಹೀಗೆ ಮರಣದ ಕವಿ ಎಂದೇ ಗುರುತಿಸಲ್ಪಟ್ಟಿದ್ದ ಜೀವನದುದ್ದಕ್ಕೂ ಬಡತನವನ್ನು ಎದುರಿಸಿದ್ದ ಅಬ್ದುಲ್ ಹಮೀದ್ ವೇಣೂರು 2011ರ ಏಪ್ರಿಲ್ 17ರಂದು ಕೊನೆಯುಸಿರೆಳೆದರು.

# ಸಮಾಜ ಸೇವಕ ಹಾಜಿ ಎಂ.ಕೆ. ಅಬ್ದುಲ್ಲಾ ಕುದ್ರೋಳಿ



ಮಂಗಳೂರಿನ ಕುದ್ರೋಳಿಯ ಅಹ್ಮದ್–ಝುಲೇಖಾ ದಂಪತಿಯ ದ್ವಿತೀಯ ಪುತ್ರನಾಗಿ 1933ರ ಮಾರ್ಚ್ 3ರಂದು ಜನಿಸಿದ ಎಂ.ಕೆ. ಅಬ್ದುಲ್ಲಾ "ಅದ್ದಿಯಾಕ" ಎಂದೇ ಗುರುತಿಸಲ್ಪಟ್ಟಿದ್ದರು. ಕುದ್ರೋಳಿಯ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ಜೀವನ ನಿರ್ವಹಣೆಗೆ ಸಣ್ಣಪುಟ್ಟ ವ್ಯಾಪಾರ ಮಾಡುತ್ತಾ ಪಿ.ಕೆ. ನಫೀಸಾ ಅವರನ್ನು ಮದುವೆಯಾದರು. ಈ ದಂಪತಿಗೆ 5 ಹೆಣ್ಣು ಮತ್ತು 3 ಗಂಡು ಮಕ್ಕಳು.

ಹದಿಹರೆಯದಲ್ಲೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಅವರು ತನ್ನ ಬಾಲ್ಯ ಸ್ನೇಹಿತ ಝಕರಿಯಾರನ್ನು ಸೇರಿಸಿಕೊಂಡು "ಅಲ್ ಅಮೀನ್ ಕನ್‌ಸ್ಟ್ರಕ್ಷನ್" ಎಂಬ ಕಟ್ಟಡ ನಿರ್ಮಿಸುವ ಸಂಸ್ಥೆಯನ್ನು ಹುಟ್ಟು ಹಾಕಿದರು. ಕೆಲವೇ ವರ್ಷದಲ್ಲಿ ಈ ಸಂಸ್ಥೆಯು ಜನರ ವಿಶ್ವಾಸಕ್ಕೆ ಪಾತ್ರವಾಯಿತು. ಹಾಗೇ ಮಂಗಳೂರಿನಲ್ಲಿ ಅನೇಕ ಪ್ರಮುಖ ಕಟ್ಟಡಗಳನ್ನು ನಿರ್ಮಿಸಿದ ಖ್ಯಾತಿಯು "ಅಲ್ ಅಮೀನ್ ಕನ್‌ಸ್ಟ್ರಕ್ಷನ್"ಗೆ ಸಲ್ಲುತ್ತದೆ. ಈ ಮಧ್ಯೆ ಕುದ್ರೋಳಿಯಲ್ಲಿ "ಎ1 ಬೀಡಿ" ಸಂಸ್ಥೆಯನ್ನು ಹುಟ್ಟು ಹಾಕಿದರು.

ವರದಕ್ಷಿಣೆ ಪಿಡುಗಿನ ವಿರುದ್ಧ ಹೋರಾಟ ಮಾಡಿದ್ದ ಅವರು ಅನೇಕ ಬಾರಿ ಕೊಲೆ ಬೆದರಿಕೆಯನ್ನೂ ಎದುರಿಸಿದ್ದರು ಎಂದು ಅವರ ಒಡನಾಡಿಗಳು ನೆನಪಿಸುತ್ತಾರೆ. ಮುಸ್ಲಿಂ ಮಕ್ಕಳು ಧಾರ್ಮಿಕವಾಗಿ ಸುಶಿಕ್ಷಿತರನ್ನಾಗಿಸುವ ಉದ್ದೇಶದಿಂದ 1966ರಲ್ಲಿ ಸ್ಥಾಪಿಸಲ್ಪಟ್ಟ ಇಸ್ಲಾಮೀಯಾ ಅಸೋಸಿಯೇಸನ್ (ರಿ)ನ ಸ್ಥಾಪಕ ಅಧ್ಯಕ್ಷರಾಗಿ ಶೈಕ್ಷಣಿಕ ರಂಗದಲ್ಲಿ ಸೇವೆ ಸಲ್ಲಿಸಿದರು. ಎಂ.ಕೆ. ಅಬ್ದುಲ್ಲಾ ಕಟ್ಟಿ ಬೆಳೆಸಿದ ಈ ಸಂಸ್ಥೆಯು ಇಂದು ಬ್ರೈಟ್ ಮಾಡೆಲ್ ಸ್ಕೂಲ್ ಎಂಬ ಹೆಸರಿನಲ್ಲಿ ಪ್ರೌಢಶಾಲೆಯಾಗಿ ಕಾರ್ಯಾಚರಿಸುತ್ತಿವೆ. ಸುಮಾರು 450 ಮಕ್ಕಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಊರಿನ ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಹಾಜಿ ಎಂ.ಕೆ. ಅಬ್ದುಲ್ಲಾ 1996ರ ಅಕ್ಟೋಬರ್ 4ರಂದು ನಿಧನರಾದರು.

# ಪ್ರಥಮ ಬ್ಯಾರಿ ಫೋಟೋಗ್ರಾಫರ್
# ಎಂ.ಶೇಖ್ ಮುಹಮ್ಮದ್ ಮಂಗಳೂರು



ಮಂಗಳೂರಿನ ಕುದ್ರೋಳಿಯಲ್ಲಿ ಮಮ್ಮಿಯಾಕ–ಝೈನಾಬಿ ದಂಪತಿಯ ಪುತ್ರನಾಗಿ 1921ರಲ್ಲಿ ಹುಟ್ಟಿ ಬೆಳೆದ ಎಂ. ಶೇಖ್ ಮುಹಮ್ಮದ್ ಯಾನೆ ಎಂ.ಎಸ್. ಮುಹಮ್ಮದ್ ಪ್ರಪ್ರಥಮ ಬ್ಯಾರಿ ಫೊಟೋಗ್ರಾಫರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಷ್ಟೇ ಅಲ್ಲ ಫೋಟೋ ಡೆವಲಪ್ಪರ್, ಪ್ರಿಂಟರ್ ಕೂಡ ಆಗಿದ್ದರು.

ಎಂ.ಎಸ್. ಫೋಟೋಗ್ರಾಫರ್ ಎಂದೇ ಚಿರಪರಿಚಿತರಾಗಿರುವ ಅವರು ಇಂಟರ್ ಮೀಡಿಯಟ್ ವ್ಯಾಸಂಗ ಮಾಡಿದ್ದಾರೆ. ಮಂಗಳೂರಿನ ಉರ್ದು ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿರುವ ಅವರು ಬ್ಯಾರಿ, ತುಳು, ಕನ್ನಡವಲ್ಲದೆ ಉರ್ದುವಿನಲ್ಲೂ ಹಿಡಿತ ಸಾಧಿಸಿದ್ದರು. ಹಾಗಾಗಿಯೇ ಅವರು ವೃತ್ತಿಯೊಂದಿಗೆ ಉರ್ದುವಿನಲ್ಲಿ ಕಾವ್ಯ, ಖವ್ವಾಲಿ ಹಾಡುಗಳನ್ನು ರಚಿಸುತ್ತಿದ್ದರು ಎಂದು ಅವರ ಸ್ನೇಹಿತ ಡಿಲಕ್ಸ್ ಹೊಟೇಲಿನ ಮುಕ್ರಿಯಾಕ ತಿಳಿಸಿರುವ ಬಗ್ಗೆ ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಧಾರ್ಮಿಕ ಜ್ಞಾನವಿದ್ದ ಅವರು ಆರಂಭದಲ್ಲಿ ಪರಿಸರದ ಮಕ್ಕಳಿಗೆ ಉಚಿತ ಧಾರ್ಮಿಕ ವಿದ್ಯೆ ನೀಡುತ್ತಿದ್ದರು. ಕೆಲವೊಮ್ಮೆ ಮಸೀದಿಯಲ್ಲಿ ಬಾಂಗ್ ಕರೆ ಕೊಡುತ್ತಿದ್ದರು.

ಆರಂಭದಲ್ಲಿ ರಾಜ್ಯ ಆಹಾರ ಇಲಾಖೆಯಲ್ಲಿ ಆಹಾರ ನಿರೀಕ್ಷಕರಾಗಿ ಸೇವೆ ಸಲ್ಲಿಸಿದ್ದ ಅವರು ವೈಯಕ್ತಿಕ ಕಾರಣದಿಂದ ಈ ಹುದ್ದೆಗೆ ರಾಜೀನಾಮೆ ನೀಡಿ ಬಳಿಕ ಮುಂಬೈಗೆ ತೆರಳಿ ಬಿಟಿಸಿ ಕಂಪೆನಿಯಲ್ಲಿ ಕೆಲಸ ಮಾಡಿದರು. ಅಲ್ಲಿ ಚಿತ್ರೋದ್ಯಮದ ಗೆಳೆಯರಿಂದ ಫೋಟೋಗ್ರಾಫಿ ಕಲಿತು ಕಾಸರಗೋಡಿಗೆ ತೆರಳಿ ಅಲ್ಲೇ ಸ್ಟುಡಿಯೋವೊಂದನ್ನು ತೆರೆದು ಫೋಟೋಗ್ರಫಿಯನ್ನೇ ವೃತ್ತಿಯನ್ನಾಗಿಸಿಕೊಂಡರು.

ಬಳಿಕ ಮಂಗಳೂರಿಗೆ ಮರಳಿ ಸ್ನೇಹಿತ ಮಂಜುನಾಥ್ ಜೊತೆ ಸೇರಿಕೊಂಡು "ಸೆಂಟರ್ ಸ್ಟುಡಿಯೋ" ತೆರೆದರು. ಹಿಂದಿನ ಫೋಟೋಗ್ರಫಿ ಇಂದಿನಂತೆ ಕ್ಷಣಾರ್ಧದಲ್ಲಿ ಆಗುವಂತದ್ದಲ್ಲ. ಒಂದು ಫೋಟೋ ಕೈ ಸೇರಲು ಕನಿಷ್ಠ 3 ಅಥವಾ 4 ದಿನಗಳು ಬೇಕಾಗುತ್ತಿತ್ತು. ಹಾಗಾಗಿ ಈ ವೃತ್ತಿಯಲ್ಲಿ ತಾಳ್ಮೆ ಮುಖ್ಯವಾಗಿತ್ತು. ಶೇಖ್ ಮುಹಮ್ಮದ್ ಅದನ್ನು ತಪಸ್ಸು ಎಂಬಂತೆ ಭಾವಿಸಿ ನೈಪುಣ್ಯತೆ ಸಾಧಿಸಿದ್ದರು. ಫೋಟೋಗ್ರಫಿಯಲ್ಲಿ ಅವರಿಗೆ ಹಲವು ಪ್ರಶಸ್ತಿಗಳು ಲಭಿಸಿರುವುದು ಅವರ ತಾಳ್ಮೆಗೆ ಸಾಕ್ಷಿಯಾಗಿತ್ತು.

ಉಳ್ಳಾಲ ಮಂಚಿಲದ ಬೀಫಾತಿಮಾರನ್ನು ವಿವಾಹವಾಗಿದ್ದ ಅವರಿಗೆ ಐದು ಮಂದಿ ಗಂಡು ಮಕ್ಕಳು ಹಾಗೂ ಮೂವರು ಹೆಣ್ಮಕ್ಕಳಿದ್ದರು. 1971ರಲ್ಲಿ ಅವರು ಇಹಲೋಕ ತ್ಯಜಿಸಿದರು.

# ಮುಂಬೈಯಲ್ಲಿ ಬ್ಯಾರಿ ಸಂಘಟನೆ ಸ್ಥಾಪಿಸಿದ್ದ ಸುಲೈಮಾನ್ ಅಮ್ಮದ್ ಕಾಪು ಮಲ್ಲಾರ್



ಉಡುಪಿ ಜಿಲ್ಲೆಯ ಕಾಪು ಸಮೀಪದ ಮಲ್ಲಾರ್‌ನ ಅಮ್ಮದ್ ಬ್ಯಾರಿ–ಬೀಬಿ ದಂಪತಿಯ ಪುತ್ರನಾಗಿ 1944ರ ಫೆಬ್ರವರಿ 19ರಂದು ಜನಿಸಿದ ಸುಲೈನಾನ್ ಅಮ್ಮದ್ ಬ್ಯಾರಿ ಮುಂಬೈಯಲ್ಲಿ ನೆಲೆನಿಂತು ಬ್ಯಾರಿಗಳ ಹಿರಿಮೆ ಎತ್ತಿ ಹಿಡಿದವರು.

ಕೆಲಸ ಅರಸಿಕೊಂಡು ಬಾಲ್ಯದಲ್ಲೇ ಮುಂಬೈಗೆ ತೆರಳಿದ ಅವರು ಮುಂಬೈ ಕೋಟೆ ಭಾಗದ ಬಜಾರ್ ಗೇಟ್‌ನಲ್ಲಿ ಪಠ್ಯಪುಸ್ತಕಗಳ ಅಂಗಡಿಯಲ್ಲಿ ಕೆಲಸವನ್ನು ಮಾಡುತ್ತಾ, ಕತೆ ಕವನಗಳನ್ನು ಬರೆಯುತ್ತಾ, ತನ್ನಲ್ಲಿರುವ ಪ್ರತಿಭೆಯನ್ನು ಬಾನುಲಿಯಲ್ಲಿ ಪ್ರಸಾರ ಮಾಡುತ್ತಾ, ವಿವಿಧ ಸಿನಿಮಾ ತಾರೆಗಳ ವ್ಯಕ್ತಿಕ ಪರಿಚಯವನ್ನು ಪತ್ರಿಕೆಯಲ್ಲಿ ಬರೆಯುತ್ತಾ ಪ್ರತಿಭಾವಂತ ಪತ್ರಕರ್ತನಾಗಿಯೂ ದುಡಿದಿದ್ದಾರೆ.

ಮುಂಬೈ ಉಪನಗರದ ಮಹಿಮ್‌ನ ನಿವಾಸಿಯಾದ ಅವರು ತನ್ನದೇ ಆದ ಮಲ್ಲಾರ್ ಪ್ರಿಂಟಿಂಗ್ ಪ್ರೆಸ್ ತೆರೆದರು. ಕನ್ನಡ, ಹಿಂದಿ, ಮರಾಠಿ, ಉರ್ದು, ಗುಜರಾತಿ, ತುಳು ಭಾಷೆಯ ಕೃತಿಗಳನ್ನು ತನ್ನ ಪ್ರೆಸ್‌ನಲ್ಲಿ ಮದ್ರಣ ಮಾಡುತ್ತಾ ಮುಂಬೈಯಲ್ಲಿ  ಕನ್ನಡ ಸಂಘ ಸಂಸ್ಥೆಗಳ ಪ್ರೀತಿಗೆ ಪಾತ್ರರಾಗಿದ್ದರು.

ಮುಂಬೈಯ ಏಕೈಕ ಬ್ಯಾರಿ ಸಂಸ್ಥೆ "ಶಾಫಿ ವೆಲ್ಫೇರ್ ಅಸೋಸಿಯೇಶನ್ ಮುಂಬೈ" ಇದರ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸತತ 25 ವರ್ಷ ಸೇವೆ ಸಲ್ಲಿಸಿದ್ದರು. ಅವರ ಕನ್ನಡ ಪರ ಸೇವೆಯನ್ನು ಗುರುತಿಸಿ ಗೀತಾಂಬಿಕ ದೇವಸ್ಥಾನ ಅಸಲ್ಫಾ ಘಾಟಕೋಪರ್, ಶನಿಸ್ವಾರ ಮಂದಿರ ನವಿ ಮುಂಬೈ ನೆರುಲ್, ಗುರುಕುಲ ಮುಂಬೈ, ಕನ್ನಡ ಸೇವಾ ಸಂಘ ಪೊವಾಯಿ ಇತ್ಯಾದಿ ಸಂಸ್ಥೆಗಳು ಸನ್ಮಾನಿಸಿವೆ.

ಅಪ್ಪಟ ಕನ್ನಡ ಅಭಿಮಾನಿಯಾಗಿದ್ದ ಅವರು ಪತ್ನಿ ಫಾತಿಮಾ ಮತ್ತು ಇಬ್ಬರು ಪುತ್ರರನ್ನು 2013ರಲ್ಲಿ ಬಿಟ್ಟಗಲಿದರು.

# ಸಮಾಜ ಸೇವಕ ಹಾಜಿ ಅಬ್ಬಾಸ್ ಸಜಿಪ



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸಜಿಪ ಎಂಬಲ್ಲಿ ಎಸ್.ಇಬ್ರಾಹೀಂ–ಝೈನಾಬ್ ದಂಪತಿಯ ಪುತ್ರನಾಗಿ 1952ರ ಮೇ 18ರಂದು ಜನಿಸಿದ ಸಜಿಪ ಅಬ್ಬಾಸ್ ಬಿಎ ಪದವೀಧರ. ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು ಪದವಿಯ ಬಳಿಕ ಕೆಂಪುಕಲ್ಲು, ಹ್ಯೊಗೆ, ಜಿನಸಿ ಅಂಗಡಿ, ಚಪ್ಪಲಿ ಅಂಗಡಿ, ಬಸ್ ಉದ್ಯಮದಲ್ಲಿ ತೊಡಗಿಸಿಕೊಂಡರು. ಜೊತೆಗೆ ಸಾಮಾಜಿಕ, ಧಾರ್ಮಿಕ, ಶಿಕ್ಷಣ, ರಾಜಕೀಯ ಕ್ಷೇತ್ರದಲ್ಲೂ ಕೈಯಾಡಿಸಿದರು. ಆ ಮೂಲಕ ಊರವರ ಪ್ರೀತಿಗೆ ಪಾತ್ರರಾದರು,

ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯಕ್ಕೆ ಇಳಿದ ಅವರು ಸಜಿಪನಡು ಗ್ರಾಮ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ, ಕುರ್ನಾಡು ಮಂಡಲದ ಪ್ರಧಾನರಾಗಿ ಆಯ್ಕೆಯಾದರು. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಚುನಾಯಿತರಾದರು.


ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನಿರ್ದೇಶಕರಾಗಿ, ತೆಂಗು ಮತ್ತು ನಾರು ಮಂಡಳಿಯ ಸದಸ್ಯರಾಗಿ ಸರಕಾರದಿಂದ ನೇಮಕಗೊಂಡಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವರು ಸಜಿಪ ಕೇಂದ್ರ ಜುಮಾ ಮಸ್ಜಿದ್‌ನ ಅಧ್ಯಕ್ಷರಾಗಿ, ಸಜಿಪ ರಿಯಾವುಲ್ ಇಸ್ಲಾಮ್ ಮದ್ರಸದ ಅಧ್ಯಕ್ಷರಾಗಿ, ಬಂಟ್ವಾಳ ತಾಲೂಕು ಸಂಯುಕ್ತ ಜಮಾಅತ್ ಅಧ್ಯಕ್ಷರಾಗಿ, ಸೀರತ್ ಕಮಿಟಿಯ ಸದಸ್ಯರಾಗಿ, ಜಮೀಯ್ಯತುಲ್ ಫಲಾಹ್‌ನ ಬಂಟ್ವಾಳ ತಾಲೂಕು ಸಮಿತಿಯ ಅಜೀವ ಸದಸ್ಯರಾಗಿ, ಸಜಿಪನಡು ಸರಕಾರಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ, ಮೆಲ್ಕಾರ್ ವಿಮೆನ್ಸ್ ಕಾಲೇಜಿನ ಅಧ್ಯಕ್ಷರಾಗಿ, ಬಂಟ್ವಾಳ ತಾಲೂಕು ವರ್ತಕರ ವಿವಿಧೋದ್ದೇಶ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಕಂಚಿನಡ್ಕ ಪದವು ಡಂಪಿಂಗ್ ಯಾರ್ಡ್ ಹೋರಾಟ ಸಮಿತಿಯಲ್ಲಿ ಮುಂಚೂಣಿಯಲ್ಲಿದ್ದ ಅವರು ಸಜಿಪದಲ್ಲಿ ಆದರ್ಶ ಆಂಗ್ಲ ಮಾಧ್ಯಮ ಶಾಲೆಯನ್ನು ಹುಟ್ಟು ಹಾಕಿ ಅದರ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದರು. ಸಮಾಜಮುಖಿ ಸೇವೆಗಾಗಿ ಅವರು ಹಲವು ಸಂಘಟನೆಗಳಿಂದ ಸನ್ಮಾನಿಸಲ್ಪಟ್ಟಿದ್ದರು.

2020ರ ಜುಲೈ 20ರಂದು ಪತ್ನಿ ನಫೀಸಾ, ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಬಿಟ್ಟಗಲಿದರು.

## ಸಮಾಜ ಸೇವಕ ಬಂಟ್ವಾಳ ಅಬ್ದುಲ್ ಖಾದರ್ ಬೈಕಂಪಾಡಿ



ದಕ್ಷಿಣ ಕನ್ನಡ ಜಿಲ್ಲೆಯ ಬೈಕಂಪಾಡಿಯ "ಬಂಟ್ವಾಳ್‌ಕಾರ್ಸ್" ಪ್ರಖ್ಯಾತ ತರವಾಡು ಕುಟುಂಬವಾಗಿದೆ. ಈ ತರವಾಡಿಗೆ ಹೆಸರು ಬರಲು ಪ್ರಮುಖ ಕಾರಣಕರ್ತ ಬಂಟ್ವಾಳ್ ಅಬ್ದುಲ್ ಖಾದರ್. ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅಪೂರ್ವ ಸೇವೆ ಸಲ್ಲಿಸುವ ಮೂಲಕ ಹಾಗೂ ಬಡವರ ಕಷ್ಟಕಾರ್ಪಣ್ಯಗಳಿಗೆ ನೆರವಾಗುವ ಮೂಲಕ ಬೈಕಂಪಾಡಿ ಮತ್ತು ಸುತ್ತಮುತ್ತಲಿನ ಜನರ ಪ್ರೀತಿಗೆ ಪಾತ್ರರಾಗಿದ್ದರು.

ಬಂಟ್ವಾಳ ತಾಲೂಕಿನ ಸೋರ್ನಾಡ್ ಇದ್ದಿನಬ್ಬ ಬ್ಯಾರಿ–ಬೀಫಾತಿಮಾ ದಂಪತಿಯ ಪುತ್ರನಾಗಿ 5.9.1906ರಲ್ಲಿ ಹುಟ್ಟಿ ಬೆಳೆದ ಅಬ್ದುಲ್ ಖಾದರ್ ಪಾಣೆಮಂಗಳೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೆ ತರಗತಿ ಕಲಿತರು. ಪ್ರಾಯಕ್ಕೆ ಬರುತ್ತಲೇ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಬೆಜ್ಜವಳ್ಳಿ ಗ್ರಾಮದಲ್ಲಿ ಅಡಿಕೆ ವ್ಯಾಪಾರ ಆರಂಭಿಸಿದರು. ವ್ಯಾಪಾರ ವೃದ್ಧಿಸುತ್ತಲೇ ಬೈಕಂಪಾಡಿಯಲ್ಲಿ ನೂರಾರು ಎಕರೆ ಕೃಷಿಭೂಮಿಯನ್ನು ಹೊಂದಿದರು. ದಕ್ಷಿಣ ಕನ್ನಡ ಜಿಲ್ಲೆಯ ಬಹುದೊಡ್ಡ ರೈತ ಕುಟುಂಬವಾಗಿ ಗುರುತಿಸಲ್ಪಟ್ಟರು. ಅಷ್ಟೇ ಅಲ್ಲ, ತಾನು ಗಳಿಸಿದ ಲಾಭದ ಒಂದಂಶವನ್ನು ಸಮಾಜದ ಬಡಜನರಿಗೆ ವ್ಯಯಿಸತೊಡಗಿದರು.

ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದಕ್ಕೆ ಪಣತೊಟ್ಟ ಅವರು ಸ್ಥಳೀಯ ಮುಖಂಡರಾದ ಬೈಕಂಪಾಡಿ ಗುತ್ತು ತ್ಯಾಂಪಣ್ಣ ಮಲ್ಲಿ, ಕುಡುಂಬೂರು ಭೋಜ ಶೆಟ್ಟಿ, ಜವುಳಿ ಹಮ್ಮಬ್ಬ ಬ್ಯಾರಿ, ಹ್ಯೊಗೆ ಅಬೂಬಕರ್ ಹಾಜಿ, ಬಟ್ರಕಾಡ್ ಹಮ್ಮಬ್ಬ ಬ್ಯಾರಿ, ಬಂಗಾರ್ ಬಾವು ಬ್ಯಾರಿ, ಕುಕ್ಕಾಡಿ ಹಸನ್ ಬ್ಯಾರಿ, ತಲೆಸಿಂಗಾರ ಮಯ್ಯದ್ದಿ ಬ್ಯಾರಿ, ಬಗ್ಗುಂಜಿ ಹಮ್ಮಬ್ಬ ಬ್ಯಾರಿ, ಪಣಂಬೂರು ಬಿ.ಕೆ. ವೆಂಕಪ್ಪ ಪೂಜಾರಿ, ಪಣಂಬೂರು ಖಾದರ್ ಸಾಹೇಬ್ ಅವರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ಸ್ಥಳೀಯ ಸಮಸ್ಯೆಗಳನ್ನು ಅವರ ಸಮ್ಮುಖ ಚರ್ಚೆ ನಡೆಸಿ ಬಗೆಹರಿಸಿಕೊಳ್ಳುತ್ತಿದ್ದರು.

ನವಮಂಗಳೂರು ಬಂದರು, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಬೈಕಂಪಾಡಿ ಕೃಷಿ ಉತ್ಪನ್ನ ಮಾರುಕಟ್ಟೆ, ಭಾರತ್ ಪೆಟ್ರೋಲಿಯಂ ಕಂಪೆನಿ, ಸದರ್ನ್ ರೈಲ್ವೆ ಯೋಜನೆ ಮುಂತಾದ ಸರಕಾರಿ ಯೋಜನೆಗಳಿಗೆ ಹಲವು ಎಕರೆ ಕೃಷಿ ಜಮೀನನು ತ್ಯಾಗ ಮಾಡಿದ ಹಿರಿಮೆಯನ್ನೂ ಬಂಟ್ವಾಳ್ ಅಬ್ದುಲ್ ಖಾದರ್ ಹೊಂದಿದ್ದಾರೆ.

ಬೈಕಂಪಾಡಿ ಬದ್ರಿಯಾ ಜುಮಾ ಮಸೀದಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಮಸೀದಿಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದರು. ಸಮುದಾಯದ ಶೈಕ್ಷಣಿಕ ಪ್ರಗತಿಗಾಗಿ ಸೇವೆ ಸಲ್ಲಿಸುತ್ತಿದ್ದ ಅವರು ಬಡ ಹೆಣ್ಣು ಮಕ್ಕಳ ಮದುವೆಗೆ ಆರ್ಥಿಕ ಸಹಾಯ ಮಾಡುತ್ತಿದ್ದರು.

ಪತ್ನಿ ಮಮ್ಮಾಟಿಯಮ್ಮ ಮತ್ತು 7 ಗಂಡು ಹಾಗೂ 8 ಹೆಣ್ಣು ಸಹಿತ 15 ಮಕ್ಕಳನ್ನು 1.7.1973ರಲ್ಲಿ ಬಿಟ್ಟಗಲಿದರು. ಅವರ ಮಕ್ಕಳ ಪೈಕಿ ಅಬ್ದುಲ್ ಅಝೀಝ್ ಬೈಕಂಪಾಡಿ, ಅಬ್ದುಲ್ ಹಮೀದ್ ಅನ್ಸಾರಿ ಮೈಸೂರು, ಬಶೀರ್ ಬೈಕಂಪಾಡಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಹೀಗೆ ಮೂವರು ಸಹೋದರರು ಬ್ಯಾರಿ ಅಕಾಡಮಿಯ ಸದಸ್ಯರಾಗಿದ್ದುದು ದಾಖಲೆಯೇ ಎನ್ನಬಹುದು.

ಅಝೀಝ್ ಬೈಕಂಪಾಡಿ ಬ್ಯಾರಿ ಕಲಾರಂಗದ ಅಧ್ಯಕ್ಷರೂ ಆಗಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಆಗಿದ್ದ ಬಶೀರ್ ಬೈಕಂಪಾಡಿ ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿದ್ದಾರೆ. ಅಲ್ಲದೆ ಬ್ಯಾರಿ ವಾರ್ತೆ ಮಾಸಿಕದ ಸಂಪಾದಕರೂ ಆಗಿದ್ದಾರೆ.

# ಸ್ವಾತಂತ್ರ್ಯ ಹೋರಾಟಗಾರ ಬೊಳ್ಳಾಡಿ ಇಬ್ರಾಹೀಂ ಹಾಜಿ



ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರಾವಳಿಯ ಮುಂಚೂಣಿ ನಾಯಕರ ಜೊತೆ ಸಕ್ರಿಯವಾಗಿ ಭಾಗವಹಿಸಿ, ಹೋರಾಟ ರಂಗಕ್ಕೆ ಧುಮುಕಿ ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ದೇಶಕ್ಕಾಗಿ ತನ್ನನ್ನು ಅರ್ಪಿಸಿಕೊಂಡ ಗಾಂಧಿವಾದಿಯಾಗಿದ್ದರು ಬೊಳ್ಳಾಡಿ ಇಬ್ರಾಹೀಂ ಹಾಜಿ.

ಪರಂಪರಾಗತ ಕೃಷಿಕರಾಗಿದ್ದ ಅಬ್ಬಕುಂಞಿ–ಆಯಿಶಾರ ಮಗನಾಗಿ 1921ರ ಜೂನ್ 1ರಂದು ಪುತ್ತೂರು ತಾಲೂಕಿನ ಒಳಮೊಗ್ರು ಗ್ರಾಮದ ಬೊಳ್ಳಾಡಿಯಲ್ಲಿ ಇಬ್ರಾಹೀಂ ಹಾಜಿ ಜನಿಸಿದರು. 6ನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿದ ನಂತರ ತಂದೆಯೊಂದಿಗೆ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

1934ರಲ್ಲಿ ಮಹಾತ್ಮಾ ಗಾಂಧಿ ಪುತ್ತೂರಿಗೆ ಆಗಮಿಸುವ ವಿಷಯ ತಿಳಿದು ಬೊಳ್ಳಾಡಿಯಿಂದ ಪುತ್ತೂರಿಗೆ ನಡೆದುಕೊಂಡು ಹೋಗಿ ಅಲ್ಲಿಂದ ಸುಳ್ಯ ಸಮೀಪದ ಕುಂಬ್ರಾದ ದೇವರ ಕಟ್ಟೆ (ಗಾಂಧಿ ಕಟ್ಟೆ)ಯಲ್ಲಿ ಗಾಂಧೀಜಿಯ ಭಾಷಣವನ್ನು ಆಲಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರೇರಣೆಗೊಂಡರು. ಮೊದಲ ಭೇಟಿಯಲ್ಲಿ ಗಾಂಧೀಜಿಗೆ ಹಸ್ತಲಾಘವ ಮಾಡುವ ಅವಕಾಶ ಒದಗಿ ಬರದಿದ್ದರೂ ಮುಂದೆ ಜಾಥದಲ್ಲಿ ಗಾಂಧೀಜಿಯೇ ಸ್ವಯಂ ಮುಂದೆ ಬಂದು ಇಬ್ರಾಹೀಂ ಹಾಜಿಯ ತಲೆಯ ಮೇಲೇ ಕೈ ಇಟ್ಟು ಆರ್ಶಿವದಿಸಿದ್ದರೆಂದು ಸ್ವತಃ ಇಬ್ರಾಹೀಂ ಹಾಜಿ ತನ್ನ ಇಳಿವಯಸ್ಸಿನಲ್ಲಿ ನೆನಪಿಸಿಕೊಂಡಿದ್ದರು. ಗಾಂಧೀಜಿ  ದಲಿತರ ಕೇರಿ ರಾಗಿಕುಮೇರಿ ಭೇಟಿಯ ಸಂದರ್ಭದಲ್ಲೂ ಅವರೊಂದಿಗೆ ಪ್ರಥಮ ಸಾಲಿನಲ್ಲಿದ್ದರು. ಗಾಂಧಿಜಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಬೇಕೆಂಬ ಇಚ್ಛೆಯಿಂದ ತನ್ನ ಶಾಲಾ ಚೀಲದೊಳಗೆ ತನಗೆ ಬೇಕಾದ ಜೋಡಿ ಬಟ್ಟೆಯನ್ನು ತುಂಬಿಸಿ ಮನೆಯವರ ಕಣ್ಣು ತಪ್ಪಿಸಿ ಕಾಲ್ನಡಿಗೆ ಜಾಥದಲ್ಲಿ ಸೇರಿಕೊಂಡು ಬೆಂಗಳೂರುವರೆಗೆ ಪಾದಯಾತ್ರೆ ಕೈಗೊಂಡಿದ್ದ ಬಗ್ಗೆಯೂ ಅವರು ತನ್ನಾಪ್ತರಲ್ಲಿ ಹೇಳಿಕೊಂಡಿದ್ದರು.

ಸುಳ್ಯದಿಂದ ಬೆಂಗಳೂರುವರೆಗಿನ ಗಾಂಧೀಜಿಯ ಜೊತೆಗೆ ಕಳೆದಿದ್ದ ಒಂದು ವಾರವು ತನ್ನ ಜೀವನದ ಅವಿಸ್ಮರಣಿಯ ದಿನಗಳೆಂದು ಅವರು ತಮ್ಮ ಜೀವನುದ್ದಕ್ಕೂ ನೆನಪಿಸಿಕೊಳ್ಳುತಿದ್ದರು. ತೀವ್ರ ಜ್ವರ ಕಾಣಿಸಿಕೊಂಡ ಅವರು ಸ್ನೇಹಿತರ ಒತ್ತಾಯಕ್ಕೆ ಮಣಿದು ಬೆಂಗಳೂರಿನಿಂದ ಊರಿಗೆ ಮರಳಿದ್ದರು.

ಬಳಿಕ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಕರಾವಳಿಯ ಹಲವು ಕಡೆಗಳಲ್ಲಿ ನಡೆದ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪಾಣೂರು (ಪಾಣೆಮಂಗಳೂರು) ಪುತ್ತೂರು, ಮಂಗಳೂರು, ಕಾಸರಗೋಡು ಕಡೆಗಳಲ್ಲಿ ನಡೆದ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸ್ವಾತಂತ್ರ್ಯ ಹೋರಾಟದ ಪೂರಕವಾಗಿ ಕಲ್ಕತ್ತ ಮತ್ತು ಮದ್ರಾಸ್ ಮುಂಬೈನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್‌ನ ರಾಷ್ಟ್ರೀಯ ಸಮ್ಮೇಳನದಲ್ಲೂ ಅವರು ಭಾಗವಹಿಸಿದರು.

ಕರಾವಳಿ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದ ಡಾ. ಎಫ್‌ಎಚ್ ಒಡೆಯರ್‌ರ ನೇತೃತ್ವದಲ್ಲಿ ನಡೆದ ಖಿಲಾಫತ್ ಚಳುವಳಿಗಾಗಿ ಸುಳ್ಯ, ಪುತ್ತೂರು, ಕಡಬ, ಕುಂಬ್ರ ಕಡೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಜನ ಜಾಗೃತಿಯನ್ನುಂಟು ಮಾಡಿದ್ದರು. ಹಲವು ಕಡೆ ಬ್ರಿಟಿಷ್ ಪೊಲೀಸರ ಲಾಠಿ ಏಟಿಗೊಳಗಾಗಿ ನೋವುಂಡಿದ್ದರು. ಕುಂಬ್ರ ಜತ್ತಪ್ಪ ರೈ, ಮುಗಿರೆ ಮ್ಯೊದಿನ್ ಕುಂಞಿ, ಸಾಲ್ಮರ ಅಬ್ಬುಚ್ಚ, ಕುಂಞಿಂಬಿಚ್ಚ, ಕಯ್ಯಾರ ಕಿಂಜಣ್ಣ ರೈ, ಎಂ. ಅದ್ದಾಕ ಪಾಣೂರು, ಡಾ. ಮ್ಯೊದಿನಬ್ಬ ಸ್ವಾಲಿಹ್, ಅಮ್ಮೆಂಬಳ ಬಾಳಪ್ಪ, ಅವರ ಜೊತೆಗೂಡಿ ಕ್ವಿಟ್ ಇಂಡಿಯಾ ಚಳುವಳಿ, ಖಾದಿ ಚಳುವಳಿ, ಚಾಟಿ ಏಟು ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಕರಾವಳಿಯಲ್ಲಿ ನಡೆದಿದ್ದ ಸಮ್ಮೇಳನದಲ್ಲಿ ಸಕ್ರಿಯರಾಗಿದ್ದರು. ಅಂದಿನ ಕರಾವಳಿ ಮುಸ್ಲಿಮರು ಉದಾರ ದಾನಿಗಳು ಮತ್ತು ಸ್ವಾತಂತ್ರ್ಯಕ್ಕಾಗಿ ಎಲ್ಲವನ್ನು ತ್ಯಾಗಮಾಡಲು ಸಿದ್ದರಿದ್ದರು ಎಂಬುದನ್ನು ಇಬ್ರಾಹೀಂ ಹಾಜಿ ತನ್ನಾಪ್ತರಲ್ಲಿ ಹೇಳಿಕೊಂಡಿದ್ದರು.

1947ರ ಆಗಷ್ಟು 15ರಂದು ಭಾರತ ಸ್ವಾತಂತ್ರ್ಯಗೊಂಡಾಗ ಕುಂಬ್ರಾದ ಜತ್ತಪ್ಪ ರೈ ಊರಿನ ಎಲ್ಲರನ್ನು ಕರೆದು ಭಾರತ ಸ್ವಾತಂತ್ರ್ಯಗೊಂಡ ಶುಭ ಸುದ್ದಿಯನ್ನು ತಿಳಿಸಿದ್ದರು. ನಂತರ ಪುತ್ತೂರು ಮತ್ತು ಸುಳ್ಯದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದನ್ನು ಬೊಳ್ಳಾಡಿ ಇಬ್ರಾಹೀಂ ಹಾಜಿ ನೆನಪಿಸಿದ್ದರು.

ಭಾರತ ಸ್ವಾತಂತ್ರ್ಯಗೊಂಡ ನಂತರ ಕೃಷಿಯನ್ನೇ ನೆಚ್ಚಿಕೊಂಡರು. ಊರಿನ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ

ಸಕ್ರಿಯರಾಗಿ ಹಲವು ಜನಸ್ನೇಹಿ ಸೇವಾ ಕಾರ್ಯಗಳ ಮೂಲಕ ಊರವರ ಪ್ರೀತಿಗೆ ಪಾತ್ರರಾದರು. 1959ರಲ್ಲಿ ಪುತ್ತೂರಿನಲ್ಲಿ ಕೃಷಿಯ ಸಾಮಾಜಿಕ ಅಭಿವೃದ್ಧಿಗಾಗಿ ಕೃಷಿ ಸಂಘವನ್ನು ಸ್ಥಾಪಿಸುವಲ್ಲಿ ಪ್ರಮುಖ ರುವಾರಿಯಾಗಿದ್ದರು. ಸಹಕಾರಿ ಬ್ಯಾಂಕಿಗಾಗಿ ತನ್ನ 36 ಸೆಂಟ್ಸ್ ಸ್ವಾಯತ್ತ ಜಮೀನನ್ನು ದಾನ ಮಾಡಿದರು. ಊರಿನ ಪ್ರತಿ ಮನೆಗೆ ಭೇಟಿ ನೀಡಿ ತನ್ನ ಖರ್ಚಿನಿಂದಲೇ ಸಹಕಾರಿ ಸಂಘದ ಸದಸ್ಯತ್ವವನ್ನು ಮಾಡಿಸಿ ಅದರ ಪ್ರಯೋಜನವನ್ನು ಪಡೆಯುವಂತೆ ಮಾಡಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸ್ಥಾಪಕ ಸದಸ್ಯರಾಗಿದ್ದರು. ರಾಜಕೀಯ ಕ್ಷೇತ್ರದಲ್ಲೂ ಹೆಜ್ಜೆ ಹಾಕಿದ ಅವರು ಒಳಮೊಗ್ರು ಗ್ರಾಮ ಪಂಚಾಯತ್ ಸದಸ್ಯರಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಶೇಖಮಲೆ ಜಮಾಅತ್ ಮಸೀದಿಯ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಅವರು ಕರ್ನಾಟಕ ಇಸ್ಲಾಮಿಕ್ ಸೆಂಟರ್ (ಕೆಐಸಿ) ಕುಂಬ್ರಾದ ಸ್ಥಾಪಕ ಸದಸ್ಯರಲ್ಲಿ ಓರ್ವರಾಗಿದ್ದರು. ರಾಜ್ಯ ರೈತ ಸಂಘ ಹಸಿರು ಸೇನೆಯ ಸದಸ್ಯರಾಗಿ ರಾಜ್ಯಾದ್ಯಂತ ನಡೆದಿದ್ದ ಹಲವು ಚಳುವಳಿಗಳಲ್ಲಿ ಭಾಗವಹಿಸಿದ್ದರು.

ಶಿಕ್ಷಣ ಪ್ರೇಮಿಯೂ ಆಗಿದ್ದ ಅವರು ಶಾಲಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿ ಜಾಗದ ತಕರಾರು ಉಂಟಾದಾಗ ಮುಂಚೂಣಿಯಲ್ಲಿ ನಿಂತು ಅದನ್ನು ಪರಿಹರಿಸಿ ಶಾಲೆ ನಡೆಯಲು ಅವಕಾಶ ಒದಗಿಸಿಕೊಟ್ಟ ಕೀರ್ತಿಯನ್ನು ಹೊಂದಿದ್ದರು.

ಊರವರು ಅವರನ್ನು ಪ್ರೀತಿಯಿಂದ ಪುತ್ತೂರಿನ ಗಾಂಧಿಯೆಂದು ಕರೆದು ಗೌರವಿಸುತ್ತಿದ್ದರು. ಆದರೆ ಅರ್ಹವಾಗಿ ಸಲ್ಲಬೇಕಾದ ಯಾವ ಗೌರವವೂ ಅವರಿಗೆ ಅಧಿಕೃತವಾಗಿ ಸಿಗಲಿಲ್ಲ ಎಂಬುದು ವಿಷಾದನೀಯ.

ಸಂವೇದನ ಆರ್ಟ್ಸ್ ಕಲ್ಚರ್ ಆ್ಯಂಡ್ ಲಿಟ್ರೇಚರ್ ಬೆಂಗಳೂರು ವತಿಯಿಂದ ಸ್ವಾತಂತ್ರ್ಯೋತ್ಸವದ ಭಾಗವಾಗಿ 2020ರಲ್ಲಿ ಗೌರವ ಸನ್ಮಾನ, ಒಕ್ಕಲಿಗ ಸಮುದಾಯ ಪತ್ತಿನ ಸಹಕಾರ ಸಂಘ (ನಿ) ಪುತ್ತೂರು ಇದರ ನೆನಪಿನ ಕಾಣಿಕೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ) ಕುಂಬ್ರ ಇದರ ವತಿಯಿಂದ ಸನ್ಮಾನ, ಎಎಂಎಸ್ ಇನ್‌ಸ್ಟಿಟ್ಯೂಷನ್ ವತಿಯಿಂದ ಸನ್ಮಾನ, ಪುತ್ತೂರು ತಾಲೂಕು ಸೀರತ್ ಕಮಿಟಿ ವತಿಯಿಂದ ಸನ್ಮಾನಿತರಾಗಿದ್ದರು.

2000ರಲ್ಲಿ ಹಜ್ಜ್ ಯಾತ್ರೆ ಪೂರೈಸಿದ್ದರು. ಪುತ್ತೂರು ಸಮೀಪದ ಅಂಚಿನಡ್ಕ ಆಸಿಯಮ್ಮರನ್ನು ವಿವಾಹವಾಗಿದ್ದ ಅವರಿಗೆ ನಾಲ್ಕು ಗಂಡು ಮತ್ತು ಎರಡು ಹೆಣ್ಣು ಮಕ್ಕಳಿದ್ದಾರೆ. ಅಜ್ಞಾತವಾಗಿಯೇ ಬದುಕಿದ್ದ ಅವರು 2020, ಅಕ್ಟೋಬರ್ 4ರಂದು ತನ್ನ 99ನೆ ವಯಸ್ಸಿನಲ್ಲಿ ಸ್ವಗೃಹದಲ್ಲೇ ಇಹಲೋಕ ತ್ಯಜಿಸಿದರು.

# ಬ್ಯಾರಿ ಭಾಷಣ ರಂಗದ ಭೀಷ್ಮ:
# ನೆಕ್ಕಿಲಾಡಿ ಇಸ್ಮಾಯೀಲ್ ಮುಸ್ಲಿಯಾರ್



ಬಂಟ್ವಾಳ ತಾಲೂಕಿನ ವಳವೂರ್ ಜುಮಾ ಮಸೀದಿಯಲ್ಲಿ 45 ವರ್ಷಗಳ ಕಾಲ ಖತೀಬರಾಗಿದ್ದ ಹಾಜಿ ಅಹ್ಮದ್ ಮುಸ್ಲಿಯಾರ್ ಹಾಗೂ ಗೂಡಿನಬಳಿಯ ಹವ್ವಾ ದಂಪತಿಯ ಹತ್ತು ಮಂದಿ ಮಕ್ಕಳ ಪೈಕಿ ಎಂಟನೆಯವರಾಗಿ 1954ರಲ್ಲಿ ಜನಿಸಿದ ನೆಕ್ಕಿಲಾಡಿ ಉಸ್ತಾದ್ ಪ್ರಾಥಮಿಕ ಶಿಕ್ಷಣವನ್ನು ಊರಲ್ಲೇ ಕಲಿತ ಬಳಿಕ ತನ್ನನ್ನು ಧಾರ್ಮಿಕ ಕಲಿಕೆಗೆ ಸಮರ್ಪಿಸಿದರು. ಪ್ರಸಿದ್ಧ ಸೂಫಿವರ್ಯ ಮರ್ಹೂಂ ಸಜಿಪ ಉಸ್ತಾದರ ಬಳಿ ದರ್ಸಿಗೆ ಸೇರಿ ಅಲ್ಲಿ ಏಳು ವರ್ಷಗಳ ಕಾಲ ಧಾರ್ಮಿಕ ಶಿಕ್ಷಣ ಪಡೆದು ನಂತರ ಉಳ್ಳಾಲದ ತಾಜುಲ್ ಉಲಮಾರ ಬಳಿ ಸೇರಿ ಅಲ್ಲಿ ಐದು ವರ್ಷ ಕಲಿತು 1974ರಲ್ಲಿ ಮದನಿ ಪದವಿಯೊಂದಿಗೆ ಸೇವಾ ಕರ್ಮರಂಗಕ್ಕೆ ಇಳಿದರು.

ನೆಕ್ಕಿಲಾಡಿ ಎಂಬ ಈ ಹೆಸರು ಕೇಳುವಾಗಲೇ ನೆನಪಿಗೆ ಬರುವುದು ಇಸ್ಮಾಯಿಲ್ ಮದನಿ ಅಥವಾ ನೆಕ್ಕಿಲಾಡಿ ಉಸ್ತಾದ್. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಸಮೀಪದ ನೆಕ್ಕಿಲಾಡಿ ಎಂಬ ಊರು ಪ್ರಸಿದ್ಧಿ ಪಡೆದದ್ದೇ ಉಸ್ತಾದರಿಂದ. ಅವಿಭಜಿತ ದಕ್ಷಿಣ ಕನ್ನಡದ ಧಾರ್ಮಿಕ, ಶಿಕ್ಷಣ ಕ್ರಾಂತಿಯ ಚಟುವಟಿಕೆಯಲ್ಲಿ ಮುಂಚೂಣಿಯಲ್ಲಿದ್ದ ಅವರು 40 ವರ್ಷಗಳ ಹಿಂದೆಯೇ ಅಂದರೆ ಸ್ವತ: ಬ್ಯಾರಿಗಳೇ "ಬ್ಯಾರಿ" ಎಂದು ಕರೆಸಿಕೊಳ್ಳಲು ಅಥವಾ ಬ್ಯಾರಿ ಭಾಷೆ ಮಾತನಾಡಲು ಹಿಂಜರಿಯುತ್ತಿದ್ದ ಕಾಲದಲ್ಲಿ ಬ್ಯಾರಿ ಭಾಷೆಯಲ್ಲಿ ಮತಪ್ರವಚನ ಮಾಡುವ ಧೈರ್ಯ ತೋರಿದರು.

ಅಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಮಾತ್ರ ಧಾರ್ಮಿಕ ಪ್ರಭಾಷಣಗಾರರು ಇದ್ದರು. ಅವರಲ್ಲಿ ಹೆಚ್ಚಿನವರು ಮಲಯಾಳಂ ಭಾಷಣಗಾರರು. ಭಾಷಣವೆಂದರೆ ಮಲಯಾಳಂ ಮಾತ್ರ ಎಂದು ತಿಳಿದಿದ್ದ ಕಾಲವದು. ಆ ಕಾಲದಲ್ಲಿ ತನ್ನದೇ ಶೈಲಿಯಲ್ಲಿ, ಮನಮುಟ್ಟುವ ರೀತಿಯಲ್ಲಿ ಬ್ಯಾರಿ ಭಾಷಣದ ಮೂಲಕ ಬ್ಯಾರಿಗಳಲ್ಲಿ ಧಾರ್ಮಿಕ ಜ್ಞಾನ ತುಂಬಿದವರು ನೆಕ್ಕಿಲಾಡಿ ಇಸ್ಮಾಯಿಲ್ ಮದನಿ.

ಮೊಟ್ಟ ಮೊದಲ ಬಾರಿಗೆ "ಮಂಜಿಲ" ಎಂಬ ಬ್ಯಾರಿ ಪ್ರಭಾಷಣ ಕ್ಯಾಸೆಟ್ ಹೊರ ತರುವ ಮೂಲಕ ಅವರು ಬ್ಯಾರಿಗಳ ಮನೆ ಮಾತಾದರು. ಆ ಕಾಲದಲ್ಲಿ ಹೆಚ್ಚಿನ ಕಡೆಗಳಲ್ಲಿ ನೆಕ್ಕಿಲಾಡಿ ಉಸ್ತಾದರ ಭಾಷಣವೇ ವಿಜೃಂಭಿಸುತ್ತಿತ್ತು. ಮಲಯಾಳಂ ಭಾಷಣಗಾರರ ನಡುವೆ ನಮ್ಮದೇ ಮನೆಭಾಷೆಯಲ್ಲೂ ಯಶಸ್ವಿಯಾಗಿ ಭಾಷಣ ಮಾಡಲು ಸಾಧ್ಯವೆಂದು ತೋರಿಸಿ ಕೊಟ್ಟವರು ನೆಕ್ಕಿಲಾಡಿ ಉಸ್ತಾದ್.

ಅವರ ಹಾಸ್ಯ ಮಿಶ್ರಿತ ಅರ್ಥಗರ್ಭಿತ ಬ್ಯಾರಿ ಭಾಷಣದಲ್ಲಿ ಮದುವೆ ಮನೆಯಲ್ಲಿ ನಡೆಯುವ ಅನಾಚಾರ, ದಾಂಪತ್ಯ ಜೀವನ, ಪತಿ–ಪತ್ನಿಯರ ಬಾಧ್ಯತೆ, ಮಕ್ಕಳ ಪರಿಪಾಲನೆ, ದಾರಿ ತಪ್ಪುತ್ತಿರುವ ಯುವಕರು, ಮರಣಾ ನಂತರ ಜೀವನ, ಮಯ್ಯಿತ್ ಪರಿಪಾಲನೆ.. ಇತ್ಯಾದಿ ವಿಷಯಗಳು ಅಡಗಿತ್ತು. ಜನರನ್ನು ನಗಿಸುತ್ತಾ, ಅಳುವಂತೆ ಮಾಡುತ್ತಾ ಅವರು ನಡೆಸುತ್ತಿದ್ದ ಬ್ಯಾರಿ ಭಾಷಣಗಳು ಇಂದೂ ಜನರಿಗೆ ಮರೆತಿಲ್ಲ.

ತಾಜುಲ್ ಉಲಮಾರ ಪ್ರೀತಿಯ ಶಿಷ್ಯರಾಗಿದ್ದ ನೆಕ್ಕಿಲಾಡಿ ಉಸ್ತಾದರು ಕರ್ನಾಟಕದ ಮೊದಲ "ಮದನಿ" ಬಿರುದು ಪಡೆದವರೆಂಬ ಕೀರ್ತಿಗೆ ಪಾತ್ರರಾದವರು. 1974ರಲ್ಲಿ ಉಳ್ಳಾಲದಲ್ಲಿ ನಡೆದ ಮೊದಲ ಸನದುದಾನ ಸಮ್ಮೇಳನದಲ್ಲಿ 11 ಮಂದಿಗೆ ಮದನಿ ಪದವಿ ನೀಡಲಾಗಿತ್ತು. ಅದರಲ್ಲಿ 10 ಮಂದಿಯೂ ಕೇರಳದವರಾಗಿದ್ದರೆ ನೆಕ್ಕಿಲಾಡಿ ಉಸ್ತಾದ್ ಮಾತ್ರ ಕರ್ನಾಟಕದವರು.

ಉಳ್ಳಾಲ ತಂಙಳ್, ಸಜಿಪ ಅಬ್ದುಲ್ಲ ಉಸ್ತಾದ್, ಬೈತಾರ್ ಉಸ್ತಾದ್, ಅಹ್ಮದ್ ಬಾವ ಉಸ್ತಾದ್, ತಾಝುಕ್ಕೋಡ್ ಉಸ್ತಾದ್ ಮುಂತಾದ ಪ್ರಮುಖ ಉಸ್ತಾದರಿಂದ ತರಬೇತಿ ಪಡೆದು ಕರ್ಮರಂಗಕ್ಕಿಳಿದ ನೆಕ್ಕಿಲಾಡಿ ಉಸ್ತಾದರು ಉಪ್ಪಿನಂಗಡಿ, ಕಕ್ಕಿಂಜೆ, ನೆಕ್ಕಿಲಾಡಿ, ಕೃಷ್ಣಾಪುರ, ಉರುಮಣೆ, ಬೊಂದೇಲ್ ಮತ್ತಿತರ ಕಡೆ ಖತೀಬ್ ಮತ್ತು ಮುದರ್ರಿಸ್‌ರಾಗಿ ಸೇವೆ ಸಲ್ಲಿಸಿದ್ದರು.

ಏಳು ವರ್ಷ ಸುನ್ನಿ ವಿದ್ಯಾಭ್ಯಾಸ ಮಂಡಳಿಯ ಮುಫತ್ತಿಶರಾಗಿ ಸೇವೆ ಸಲ್ಲಿಸಿದ್ದರು. ಅದಕ್ಕೂ ಮೊದಲು ಏಳು ವರ್ಷಗಳ ಕಾಲ ಉಳ್ಳಾಲ ಸೈಯದ್ ಮದನಿ ದರ್ಗಾದ ಅಧೀನದಲ್ಲಿರುವ ಅರಬಿಕ್ ಟ್ರಸ್ಟ್‌ನ ಅಧೀನದಲ್ಲಿದ್ದ 32 ಮದ್ರಸಗಳ ಮುಫತ್ತಿಶರಾಗಿ ಸೇವೆಗೈದಿದ್ದರು.

ಸಂಘಟನಾ ಚಟುವಟಿಕೆಯಲ್ಲಿ ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದ ನೆಕ್ಕಿಲಾಡಿ ಉಸ್ತಾದ್, ಕೇಂದ್ರ ಮದ್ರಸ ಸಮಿತಿಯಲ್ಲಿ ಸದಸ್ಯತನ ಪಡೆದ ಮೊದಲ ಬ್ಯಾರಿ ವಿದ್ವಾಂಸರು. ನಂತರ ಸುನ್ನೀ ಶಿಕ್ಷಣ ಮಂಡಳಿಯ ಸದಸ್ಯರಾಗಿ ನೇಮಕಗೊಂಡ ಕರ್ನಾಟಕದ ಮೊದಲ ಬ್ಯಾರಿ ವಿದ್ವಾಂಸ ಎನಿಸಿಕೊಂಡರು.

ದಕ್ಷಿಣ ಕನ್ನಡ ಜಂಇಯತುಲ್ ಮುಅಲ್ಲಿಮೀನ್‌ನ ಅಧ್ಯಕ್ಷರಾಗಿ ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಅವರು, ಎಸ್‌ವೈಎಸ್ ರಾಜ್ಯ ಕಾರ್ಯದರ್ಶಿ, ಬಂಟ್ವಾಳ ತಾಲೂಕು  ಜಂಇಯತುಲ್ ಉಲಮಾದ ಅಧ್ಯಕ್ಷ ಹಾಗೂ ಎಸ್‌ಇಡಿಸಿ ಸಂಘಟನೆಯ ರಾಜ್ಯಸಮಿತಿಯ ಸದಸ್ಯರಾಗಿ ದುಡಿದಿದ್ದರು. ತನ್ನ ನಿಧನದ ತನಕ ಕರ್ನಾಟಕ ರಾಜ್ಯ ಜಂಇಯ್ಯತುಲ್ ಮುಫತ್ತಿಶೀನ್ ಇದರ ಉಪಾಧ್ಯಕ್ಷರಾಗಿ ಸೇವೆಯಲ್ಲಿದ್ದರು.

ತನ್ನ ಜೀವನದ ಬಹುಪಾಲು ಸಮಯವನ್ನು ಬ್ಯಾರಿ ಜನಾಂಗದ ಧಾರ್ಮಿಕ ಕಲಿಕೆಗೆ ಆದ್ಯತೆ ಮತ್ತು ಸಂಘಟನೆಗಳಲ್ಲಿ ಕಾರ್ಯಾಚರಿಸಲು ಮೀಸಲಿಟ್ಟಿದ್ದರು. ವಾಹನ ಮತ್ತು ಮೊಬೈಲ್ ಸೌಲಭ್ಯವಿಲ್ಲದ ಆ ಕಾಲದಲ್ಲಿ ಬ್ಯಾರಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಸಿಗಬೇಕೆಂಬ ದೃಷ್ಟಿಯಿಂದ ಮದ್ರಸ ಅಂಗೀಕಾರ ಮಾಡಲು ಊರೂರು ಸುತ್ತಿದವರ ಪೈಕಿ ನೆಕ್ಕಿಲಾಡಿ ಉಸ್ತಾದರೂ ಒಬ್ಬರು. ಅವರ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಹಲವು ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಮರ್ಕಝ್ ಸಖಾಫತಿ ಸುನ್ನಿಯ್ಯಾದ ಇಪ್ಪತ್ತೈದನೇ ವಾರ್ಷಿಕ ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟ ಇಪ್ಪತ್ತೈದು ಮಂದಿಯಲ್ಲಿ ಕರ್ನಾಟಕದ ಏಕೈಕ ಸಾಧಕ. ಮಾಣಿ ದಾರುಲ್ ಇರ್ಶಾದ್‌ನ ಹದಿನೈದನೇ ವಾರ್ಷಿಕ ಸಮಾರಂಭದಲ್ಲಿ ಗೌರವಿಸಲ್ಪಟ್ಟ ಅವರು 2012ನೇ ಸಾಲಿನ ಬ್ಯಾರಿ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿಗೂ ಪಾತ್ರರಾಗಿದ್ದರು.

ದಕ್ಷಿಣ ಕನ್ನಡದ ಮುಅಲ್ಲಿಂ ಚಳವಳಿಯ ಇತಿಹಾಸದಲ್ಲಿ ನೆಕ್ಕಿಲಾಡಿ ಉಸ್ತಾದರ ಸೇವೆ ಅವಿಸ್ಮರಣೀಯ. ಉತ್ತಮ ಸ್ವಭಾವವನ್ನು, ಮೇರು ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದ ಅವರು ನಗುಮುಖದಿಂದಲೇ ಸೌಮ್ಯವಾಗಿ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಎಷ್ಟೇ ಎಳೆಯವರಾಗಲಿ ಅವರೊಂದಿಗೆ ಉಸ್ತಾದರ ವರ್ತನೆ ಅತ್ಯಂತ ಸವಿನಯದಿಂದಲೇ ಕೂಡಿತ್ತು.

ಒಚಿದು ಕಾಲದ ಬ್ಯಾರಿ ಭಾಷಣ ರಂಗದ ಅವಿಶ್ರಾಂತ ಚಕ್ರವರ್ತಿಯಾಗಿ ಮೆರೆದ ಉಸ್ತಾದರು ಬಡ ಜಮಾಅತ್‌ಗಳ ಪಾಲಿಗೆ ಹೀರೋ ಆಗಿದ್ದರು. ಪ್ರಭಾಷಣಕ್ಕೆ ತೆರಳಿದ ಮೊಹಲ್ಲಾಗಳ ಆರ್ಥಿಕತೆಯ ಭದ್ರತೆಗಾಗಿ ಮಹಿಳೆಯರಿಂದ ಚಿನ್ನ ಸಂಗ್ರಹಿಸಿ ಕೊಡುತ್ತಿದ್ದರು. ಹಲವಾರು ಮೊಹಲ್ಲಾದವರು ಜಮಾಅತ್‌ನ ಆರ್ಥಿಕತೆಯ ಸಂಪನ್ಮೂಲತೆಗಾಗಿ ನೆಕ್ಕಿಲಾಡಿ ಉಸ್ತಾದರನ್ನು ಪ್ರಭಾಷಣಕ್ಕೆ ಕರೆಯುತ್ತಿದ್ದರು. ಹೀಗೆ ಧಾರ್ಮಿಕ ಸೇವೆ–ಸಂಘಟನೆಯಲ್ಲಿ 44 ವರ್ಷಗಳ ಕಾಲ ತೊಡಗಿಸಿಕೊಂಡಿದ್ದ  ನೆಕ್ಕಿಲಾಡಿ ಉಸ್ತಾದ್ 2018ರ ಮೇ 9ರಂದು ತನ್ನ 63ನೆ ವಯಸ್ಸಿನಲ್ಲಿ ನಿಧನರಾದರು. ಬ್ಯಾರಿ ಭಾಷಣ ರಂಗದ ಭೀಷ್ಮರಾಗಿ ಮೆರೆದ ಅವರು ಪತ್ನಿ, ಮೂವರು ಪುತ್ರರು ಮತ್ತು ಐವರು ಪುತ್ರಿಯರನ್ನು ಅಗಲಿದ್ದಾರೆ.

# ಬ್ಯಾರಿ ಭಾಷೆಯ ನಿರರ್ಗಳ ಭಾಷಣಕಾರ:
# ಟಿ.ಎಚ್.ಇಬ್ರಾಹಿಂ ಮದನಿ ತೆಕ್ಕಿಲ್




ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ತೆಕ್ಕಾರು ಗ್ರಾಮದ ಹೆಗಡೆ ಹಿತ್ತಿಲು ನಿವಾಸಿಗಳಾದ ಅಬೂಬಕರ್–ಹವ್ವಮ್ಮ ದಂಪತಿಯ ಪುತ್ರನಾಗಿ 1949ರ ಮೇ 10ರಂದು ಜನಿಸಿದ ಟಿ.ಎಚ್.ಇಬ್ರಾಹಿಂ ಮದನಿ ಬ್ಯಾರಿ ಭಾಷೆಯಲ್ಲಿ ನಿರರ್ಗಳವಾಗಿ ಇಸ್ಲಾಮಿನ ಸುಂದರ ಆಶಯಾದರ್ಶಗಳ ಕುರಿತು ಭಾಷಣ ಮಾಡಬಲ್ಲ ಸಾಮರ್ಥ್ಯ ಹೊಂದಿದವರಾಗಿದ್ದರು. ಒಂದು ಕಾಲದಲ್ಲಿ ಬಹು ಬೇಡಿಕೆಯ ವಾಗ್ಮಿಯೂ ಆಗಿದ್ದರು. ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆಯಲ್ಲಿ ಅವರು ಮನೆ ಮಾತಾಗಿದ್ದರು.

9ನೇ ತರಗತಿಯವರೆಗೆ ಶಾಲಾ ಶಿಕ್ಷಣ ಪಡೆದಿದ್ದ ಅವರು ಧಾರ್ಮಿಕ ಶಿಕ್ಷಣವನ್ನು ಉಳ್ಳಾಲದ ಸೈಯದ್ ಮದನಿ ಅರಬಿಕ್ ಶರೀಅತ್ ಕಾಲೇಜಿನಲ್ಲಿ ಪಡೆದರು. 1977ರಲ್ಲಿ "ಮದನಿ" ಬಿರುದು ಪಡೆದ ಅವರು ತಾಜುಲ್ ಉಲಮಾರ ನಿರ್ದೇಶನದಂತೆ ಕುಂಬೋಲ್‌ನಲ್ಲಿ 2 ವರ್ಷ, ಉಜಿರೆಯಲ್ಲಿ 9 ವರ್ಷ, ಸುಳ್ಯದಲ್ಲಿ 9 ವರ್ಷ, ಉಚ್ಚಿಲ ಅರಿಕ್ಕಾಡಿಯಲ್ಲಿ 2 ವರ್ಷ ಹಾಗು ಮಂಜನಾಡಿಯಲ್ಲಿ 9 ವರ್ಷ ಮುದರ್‍ರಿಸ್/ಖತೀಬರಾಗಿ ಸೇವೆ ಸಲ್ಲಿಸಿದರು.

ಕರ್ನಾಟಕ ಕರಾವಳಿ ಭಾಗದ ಅತ್ಯುತ್ತಮ ಭಾಷಣಗಾರರಾಗಿದ್ದರು. ಅದರಲ್ಲೂ ಬ್ಯಾರಿ ಭಾಷೆ–ಸಾಹಿತ್ಯ ಲೋಕಕ್ಕೆ ತನ್ನ ವಾಕ್ಚಾತುರ್ಯವನ್ನು ಮೀಸಲಿರಿಸಿ ತನ್ನದೇ ಆದ ಛಾಪು ಮೂಡಿಸಿದ್ದರು. ಬ್ಯಾರಿ ಭಾಷಣದ ಮೂಲಕ ಇಸ್ಲಾಮಿನ ನೈಜ ಆಶಯ ಆದರ್ಶಗಳನ್ನು ಮುಸಲ್ಮಾನರೆಡೆಯಲ್ಲಿ ಬಿತ್ತಿ ಜನಮಾನಸದಲ್ಲಿ ಇಂದಿಗೂ ಅಮರರಾಗಿದ್ದಾರೆ.

ಟಿ.ಎಚ್.ಉಸ್ತಾದ್ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿರುವ ಅವರು ಕರ್ನಾಟಕ ಸುನ್ನೀ ಜಂ ಇಯ್ಯತುಲ್ ಉಲಮಾ ಕಾರ್ಯದರ್ಶಿ, ಸುನ್ನೀ ಸಂಘ ಸಂಸ್ಥೆಗಳ ಮುಂಚೂಣಿ ನಾಯಕ, ನೂರಾರು ಮೊಹಲ್ಲಾಗಳ ಅಧ್ಯಕ್ಷ, ಗೌರವಾಧ್ಯಕ್ಷ ಹುದ್ದೆಗಳನ್ನು ನಿಭಾಯಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಎಂತಹ ಜಟಿಲ ಸಮಸ್ಯೆಗಳನ್ನು ಸುಲಲಿತವಾಗಿ ಪರಿಹರಿಸುತ್ತಿದ್ದ ಮದನಿ ಉಸ್ತಾದ್ ಬಡ–ಅನಾಥ, ನಿರ್ಗತಿಕರ ಇಹಪರ ವಿಜಯವನ್ನು ಗುರಿಯಾಗಿಸಿ ಉಳ್ಳಾಲದ ಖಾಝಿಯಾಗಿದ್ದ ತಾಜುಲ್ ಉಲಮಾರ ಆಶೀರ್ವಾದದೊಂದಿಗೆ 2006ರಲ್ಲಿ ತನ್ನದೇ ಊರಿನಲ್ಲಿ ಅಲ್ ಮದೀನತುಲ್ ಮುನವ್ವರಃ ಎಂಬ ಧಾರ್ಮಿಕ, ಲೌಕಿಕ ಸಮನ್ವಯ ಶಿಕ್ಷಣ ಸಂಸ್ಥೆಯನ್ನು ಊರ ಹಾಗು ಅನಿವಾಸಿ ವಿದೇಶಿಗರ ಸಹಾಯದೊಂದಿಗೆ ಪ್ರಾರಂಭಿಸಿದ್ದರು. ಅದೀಗಲೂ ಯಶಸ್ವಿಯಾಗಿ ಕಾರ್ಯಾಚರಿಸುತ್ತಿದೆ. ಅಪಾರ ಶಿಷ್ಯ ವೃಂದವನ್ನು ಹೊಂದಿದ್ದ ಅವರು 2008ರ ಜೂನ್ 26ರಂದು ಪತ್ನಿ ಬೀಫಾತಿಮ ಮತ್ತು 6 ಗಂಡು ಹಾಗು 4 ಹೆಣ್ಣು ಮಕ್ಕಳನ್ನು ಬಿಟ್ಟಗಲಿದರು.

## ಹಿರಿಯ ವಿದ್ವಾಂಸ ಎಂ.ಎಸ್.ಮೂಸಾ ಮುಸ್ಲಿಯಾರ್ ಕಕ್ಕಿಂಜೆ



ಸುಳ್ಯ ತಾಲೂಕಿನ ಕನಕಮಜಲು ಎಂಬಲ್ಲಿ ಮುಹಮ್ಮದ್ ಸುಣ್ಣಮೂಲೆ–ಸಕೀನಾ ದಂಪತಿಯ ಪುತ್ರನಾಗಿ 1944ರ ಜೂನ್ 12ರಂದು ಜನಿಸಿದ ಎಂ.ಎಸ್.ಮೂಸಾ ಮುಸ್ಲಿಯಾರ್ ಊರಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ ಪಡೆದ ಬಳಿಕ ಶಂಸುಲ್ ಉಲಮಾ ಇ.ಕೆ. ಅಬೂಬಕರ್ ಮುಸ್ಲಿಯಾರ್, ಉಳ್ಳಾಲ ತಂಙಳ್‌ರ ಶಿಷ್ಯತ್ವ ಪಡೆದು ಆಲಿಂ ಬಿರುದು ಪಡೆದರು.

ಕೇರಳದ ವಿವಿಧ ಕಡೆ ಧಾರ್ಮಿಕ ಸಂಸ್ಥೆಗಳಲ್ಲಿ ಕಲಿತು ರಾಜ್ಯದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರಾಗಿದ್ದ ಅವರು ಖ್ಯಾತ ವಾಗ್ಮಿಯೂ ಆಗಿದ್ದರು.

ಸುಮಾರು 35 ವರ್ಷಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಮಸೀದಿಗಳಲ್ಲಿ ಖತೀಬ್/ಮುದರ್ರಿಸ್ ಆಗಿ ಸೇವೆ ಸಲ್ಲಿಸಿ ಅಪಾರ ಶಿಷ್ಯವೃಂದವನ್ನು ಹೊಂದಿದ್ದರು. ಅನೇಕ ಪ್ರಮುಖ ಉಲೇಮಾಗಳನ್ನು ಸಮಾಜಕ್ಕೆ ಅರ್ಪಿಸಿದ್ದರು. ಮದುವೆಯಾದ ಬಳಿಕ ಪತ್ನಿಯ ತವರೂರು ಕಕ್ಕಿಂಜೆಯಲ್ಲಿ ಮನೆ ಮಾಡಿಕೊಂಡಿದ್ದ ಅವರು ಬೆಳ್ತಂಗಡಿ ತಾಲೂಕು ಜಂ ಇಯ್ಯತುಲ್ ಉಲಮಾ ಸಂಘಟನೆಯ ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು.

ತಾನು ಉದ್ಯೋಗದಲ್ಲಿದ್ದ ಮೊಹಲ್ಲಾಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. ಅನೇಕ ಕಡೆ ಮಸೀದಿ–ಮದ್ರಸ ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಮಸೀದಿಯೊಂದರಲ್ಲಿ ಸೇವೆಯಲ್ಲಿರುವಾಗ 2001ರ ಮೇ 11ರಂದು ನಿಧನರಾದರು. ಪತ್ನಿ ಆಸಿಯಾ, 6 ಗಂಡು ಮತ್ತು 4 ಮಂದಿ ಹೆಣ್ಣು ಮಕ್ಕಳನ್ನು ಅವರು ಅಗಲಿರುವರು. ಆ ಪೈಕಿ ಪ್ರಖ್ಯಾತ ವಾಗ್ಮಿ, ಯುವ ವಿದ್ವಾಂಸ ಡಾ. ಎಂ.ಎಸ್.ಎಂ. ಅಬ್ದುರ್ರಶೀದ್ ಝೈನಿ ಕಾಮಿಲ್ ಸಖಾಫಿ ಅವರ ಹಿರಿಯ ಪುತ್ರ.

## ಗುಲ್ವಾಡಿಯ ಬೆಲಿಯೆ ಉಸ್ತಾದ್: ಕುಂಞಿ ಅಹ್ಮದ್ ಮುಸ್ಲಿಯಾರ್



ಕುಂದಾಪುರ ತಾಲೂಕಿನ ಗುಲ್ವಾಡಿಯ ಅಬ್ದುಲ್ ರಹ್ಮಾನ್ ಮುಸ್ಲಿಯಾರ್–ಖತೀಜಾಬಿ ದಂಪತಿಯ ಪುತ್ರನಾಗಿ 1946ರ ಜನವರಿ 14ರಂದು ಜನಿಸಿದ ಕುಂಞಿ ಅಹ್ಮದ್ ಮುಸ್ಲಿಯಾರ್ "ಬೆಲಿಯೆ ಉಸ್ತಾದ್" ಎಂದೇ ಪ್ರಸಿದ್ಧರು. ಸುಮಾರು ನಲವತ್ತು ವರ್ಷಗಳ ಕಾಲ ಗುಲ್ವಾಡಿಯ ಮದ್ರಸದಲ್ಲಿ ದೀನೀ ಸೇವೆ ಸಲ್ಲಿಸಿದ ಅವರು ಕುಂದಾಪುರ ತಾಲೂಕಿನಾದ್ಯಂತ "ಜಿ.ಕೆ. ಮುಸ್ಲಿಯಾರ್" ಎಂದೇ ಚಿರಪರಿಚಿತರು. ತನ್ನ ತಂದೆಯ ಬಳಿ ಪ್ರಾಥಮಿಕ ಮದ್ರಸ ಶಿಕ್ಷಣ ಪಡೆದ ಅವರು ನಂತರ ಕನ್ನಂಗಾರ್ ಹಾಗೂ ಕಾಞಂಗಾಡ್‌ನಲ್ಲಿ ದರ್ಸ್ ಶಿಕ್ಷಣ ಪಡೆದರು. ಆ ಬಳಿಕ ಗುಲ್ವಾಡಿಯ ಮಿಅ್‌ರಾಜ್ ಜುಮಾ ಮಸೀದಿಯಲ್ಲಿ ಖತೀಬ್/ಮುದರ್ರಿಸ್ ಆಗಿ ಸೇವೆ ಆರಂಭಿಸಿ ಕೊನೆಯ ಉಸಿರು ಎಳೆಯುವವರೆಗೂ ಅಂದರೆ ಸುಮಾರು 40 ವರ್ಷಗಳ ಕಾಲ ಅಲ್ಲೇ ಕಾರ್ಯನಿರ್ವಹಿಸಿದರು.

ಅತ್ಯಂತ ಸೌಮ್ಯ ಸ್ವಭಾವದ ಸುಂದರ ಮುಖಭಾವವನ್ನು ಹೊಂದಿದ್ದ ಅವರ ಧ್ವನಿಯೂ ಅಷ್ಟೇ ಇಂಪಾಗಿತ್ತು. ಊರಿನ ಸಣ್ಣ ಮಕ್ಕಳಿಂದ ಹಿಡಿದು ಹಿರಿಯರಿಗೂ ಜಿ.ಕೆ.ಉಸ್ತಾದ್ ಅಂದರೆ ಎಲ್ಲಿಲ್ಲದ ಪ್ರೀತಿ. ಉಸ್ತಾದ್ ಬಾಂಗ್ ಕರೆ ಕೊಟ್ಟರೆಂದರೆ ಅವರ ಆ ಧ್ವನಿಗೆ ಮಾರು ಹೋಗದವರಿಲ್ಲ. ಅಷ್ಟು ಸುಂದರ ಶೈಲಿಯಿಂದ ಅದು ಕೂಡಿತ್ತು. ಬಿಡುವಿನ ವೇಳೆಯಲ್ಲಿ ಅವರು ಗ್ರಂಥ ಅಧ್ಯಯನ ಮಾಡುವುದರಲ್ಲಿ ಮಗ್ನರಾಗಿರುತ್ತಿದ್ದರು.

2004ರಲ್ಲಿ ಹಜ್ ಕರ್ಮ ಪೂರ್ತಿಗೊಳಿಸಿದ ಉಸ್ತಾದ್ ಪತ್ನಿ ದುಲೈಖಾ ಮತ್ತು ಇಬ್ಬರು ಪುತ್ರರು ಹಾಗೂ ನಾಲ್ಕು ಮಂದಿ ಪುತ್ರಿಯರನ್ನು ತನ್ನ 66ನೆ ವಯಸ್ಸಿನಲ್ಲಿ ಅಂದರೆ 2012ರ ಮಾರ್ಚ್ 17ರಂದು ಬಿಟ್ಟಗಲಿದರು.

# ದಾಖಲಾತಿಯ ಮಹತ್ವ ಅರಿತಿದ್ದ
# ಹಾಜಿ ಎಂ. ಮುಹಮ್ಮದ್ ಸ್ವಾಲಿಹ್ ಕಾಟಿಪಳ್ಳ



ಮಂಗಳೂರಿನ ಬಂದರ್‌ನಲ್ಲಿ ಹಾಜಿ ಎಂ.ಫಕ್ರುದ್ದೀನ್–ಫಾತಿಮಾ ದಂಪತಿಯ ಪುತ್ರನಾಗಿ 1934ರ ಜುಲೈ 14ರಂದು ಜನಿಸಿದ ಮುಹಮ್ಮದ್ ಸ್ವಾಲಿಹ್ ಕಸಾಯಿಗಲ್ಲಿಯಲ್ಲಿ "ಬೆಲಪಲ್ಲಿ ಖತೀಬ್" ಎಂದೇ ಖ್ಯಾತರಾದ ಸಿ.ಕುಂಞಿ ಅಹ್ಮದ್ ಮುಸ್ಲಿಯಾರ್ ಬಳಿ ಸುದೀರ್ಘ ಕಾಲ ಧಾರ್ಮಿಕ ವಿದ್ಯೆಯನ್ನು ಕಲಿತವರು. ಸ್ಥಳೀಯ ಶಾಲೆಯಲ್ಲಿ 10ನೇ ತರಗತಿ ಕಲಿತ ಬಳಿಕ ಧಾರ್ಮಿಕ ಶಿಕ್ಷಕರಾಗಿ ವೃತ್ತಿ ಆರಂಭಿಸಿದರು.

1955ರಿಂದ 1960ರವರೆಗೆ ಬಂದರ್ ಪ್ರದೇಶದ ಬೂಕುರೊ ಪಳ್ಳಿ (ಬೂಬುಕಾನ್ ಮಸ್ಜಿದ್)ಯಲ್ಲಿ ಸೇವೆ ಸಲ್ಲಿಸಿದರು. ಪೌನಾರಗ ಮನೆತನದವರಿಗೆ ಪ್ರೀತಿಯ ಉಸ್ತಾದರಾಗಿದ್ದ ಅವರು 1960ರಲ್ಲಿ ಪಣಂಬೂರಿನಲ್ಲಿರುವ ನವಮಂಗಳೂರು ಬಂದರು ಬಳಿಯ ಮಸೀದಿಯಲ್ಲಿ ಖತೀಬ್ ಆಗಿ ಸೇರ್ಪಡೆಗೊಂಡರು. 1964ರಲ್ಲಿ ಪಣಂಬೂರಿನಿಂದ ಕಾಟಿಪಳ್ಳಕ್ಕೆ ಸಾವಿರಾರು ಮಂದಿ ಸ್ಥಳಾಂತರಗೊಂಡ ಹಿನ್ನೆಲೆಯಲ್ಲಿ ಸ್ವಾಲಿಹ್ ಉಸ್ತಾದ್ ಕೂಡ ಪಣಂಬೂರಿನಿಂದ ಕಾಟಿಪಳ್ಳದಲ್ಲಿ ನಿರ್ಮಾಣಗೊಂಡ ಮಸೀದಿಯಲ್ಲಿ ಸೇವೆ ಮುಂದುವರಿಸಿದ್ದರು. ಕೊನೆಯ ಉಸಿರು ಇರುವ ತನಕ ಪಣಂಬೂರು ಮುಸ್ಲಿಂ ಜಮಾಅತ್ ಕಾಟಿಪಳ್ಳ ಇದರ ಖತೀಬ್ ಆಗಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಆ ಮೂಲಕ ಒಟ್ಟು 43 ವರ್ಷಗಳ ಕಾಲ ಧಾರ್ಮಿಕ ರಂಗದಲ್ಲಿದ್ದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜಮೀಯತುಲ್ ಮುಅಲ್ಲಮೀನ್‌ನ ಸಲಹಾ ಸಮಿತಿಯಲ್ಲಿ ಹಲವು ವರ್ಷಗಳ ಕಾಲ ಸೇವೆಗೈದಿದ್ದ ಅವರು ಮತಪ್ರವಚನದಲ್ಲಿ ಖ್ಯಾತರಾಗಿದ್ದರು. ಅರಬಿಕ್, ಉರ್ದು, ಕನ್ನಡ ಭಾಷೆಯಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು.


ಮುಹಮ್ಮದ್ ಸ್ವಾಲಿಹ್ ಉಸ್ತಾದರ ಮನೆಯು ದಾಖಲು (ರಿಜಿಸ್ಟ್ರೇಷನ್) ಕಚೇರಿಯಂತೆ ಮಾರ್ಪಡಿಸಿದ್ದರು. ಕಾಟಿಪಳ್ಳದ ಜಮಾಅತಿನಲ್ಲಿ ಜನನ ಅಥವಾ ಮರಣವಾದರೂ ಅವರ ಮನೆಗೆ ಹೋಗಿ ಎಲ್ಲರೂ ದಾಖಲು ಮಾಡುತ್ತಿದ್ದರು. ಊರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರೊಬ್ಬರು ಶಾಲಾ ವಾರ್ಷಿಕ ದಿನದಂದು ಅವರ ಬಗ್ಗೆ ಮನ ತುಂಬಿ ಮಾತಾಡಿದ್ದು, ಅವರ ಈ ಸಮಾಜ ಸೇವೆಗೆ ಸಾಕ್ಷಿಯಾಗಿದೆ. ಆ ಕಾಲದಲ್ಲಿ ಶಾಲೆಗೆ ಸೇರಿಸುವಾಗ ಮಕ್ಕಳ ಜನ್ಮದಿನದ ಸರಿಯಾದ ಮಾಹಿತಿಯು ಮಕ್ಕಳ ರಕ್ಷಕರ ಜೊತೆ ಇರದಿದ್ದರೂ ಕೂಡ "ಬೆಲ್ಯೊ ಉಸ್ತಾದ್"ರ ರಿಜಿಸ್ಟರ್ ಫೈಲ್ ಮೂಲಕವೇ ಶಾಲೆಯ ರಿಜಿಸ್ಟಾರಿಗೆ ಹೋಗುತ್ತಿತ್ತು. ಈ ಸೇವೆಯು ಸಂಪೂರ್ಣ ಉಚಿತವಾಗಿತ್ತು.

ಮಂಗಳೂರು ಜೈಲು ಅಧಿಕಾರಿಗಳ ಕೋರಿಕೆಯಂತೆ ಖೈದಿಗಳ ಮನಪರಿವರ್ತಿಸಲು ಉಸ್ತಾದರು ಕನ್ನಡ, ಉರ್ದು, ಹಿಂದಿ, ಅರಬಿ, ಬ್ಯಾರಿ, ತುಳುವಿನಲ್ಲಿ ತರಗತಿ ನೀಡಿದ್ದರು.

ಊರಿನಲ್ಲಿ ನಡೆಯುವ ಧಾರ್ಮಿಕ, ಸಾಮಾಜಿಕ ಮತ್ತು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಕನ್ನಡ, ಬ್ಯಾರಿ, ಉರ್ದು, ಅರೆಬಿಕ್ ಭಾಷೆಯಲ್ಲಿ ಬೈತ್ ಮತ್ತು ಹಾಡುಗಳನ್ನು ರಚಿಸುತ್ತಿದ್ದರಲ್ಲದೆ ಅದನ್ನು ಅಚ್ಚಾಗಿಸಿ ಹದಿನೈದರಿಂದ ಇಪ್ಪತ್ತೈದು ಪೈಸೆಗೆ ಅಂದು ವಿದ್ಯಾರ್ಥಿಗಳಿಗೆ ನೀಡುತ್ತಿದ್ದರು. ಆ ಹಣವನ್ನು ಸ್ವಂತಕ್ಕೆ ಬಳಸದೆ ವಿದ್ಯಾರ್ಥಿಗಳ ಕ್ಷೇಮಕ್ಕೆ ಉಪಯೋಗಿಸುತ್ತಿದ್ದರು. ಅಲ್ಲದೆ ತನಗೆ ಬರುತ್ತಿದ್ದ ತಿಂಗಳ ಅಲ್ಪ ಸಂಪಾದನೆಯಲ್ಲೂ ಸ್ವಲ್ಪ ಮೊತ್ತವನ್ನು ಯತೀಂ ಮಕ್ಕಳಿಗೆ ನೀಡುತ್ತಿದ್ದರು.

ಒಟ್ಟಿನಲ್ಲಿ ಬಹುಮುಖ ಪ್ರತಿಭೆಯ ಬೆಲಿಯೊ ಉಸ್ತಾದ್ ಎಂದೇ ಖ್ಯಾತರಾದ ಎಂ.ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಪತ್ನಿ ಪಿ.ಎಂ ರುಖಿಯ್ಯ ಮತ್ತು 6 ಗಂಡು ಹಾಗೂ 2 ಹೆಣ್ಣು ಮಕ್ಕಳನ್ನು 1998ರ ಫೆಬ್ರವರಿ 19ರಂದು ಅಗಲಿದರು.

# "ಜೋಕಟ್ಟೆ ಉಸ್ತಾದ್" ಖ್ಯಾತಿಯ ಹಾಜಿ ಫಕ್ರುದ್ದೀನ್ ಮುಸ್ಲಿಯಾರ್



ಮೂಲತಃ ಚಿಕ್ಕಮಗಳೂರು ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ನೊಣಬೂರು ಸಮೀಪದ ಚಂದೊಳ್ಳಿಯ ಅಹ್ಮದ್ ಬ್ಯಾರಿ–ಫಾತಿಮ ಬೀವಿ ದಂಪತಿಯ ಪುತ್ರನಾಗಿ 1950ರಲ್ಲಿ ಹಾಜಿ ಫಕ್ರುದ್ದೀನ್ ಮುಸ್ಲಿಯಾರ್ ಜನಿಸಿದರು. (ಇನ್ನೊಂದು ಮೂಲದ ಪ್ರಕಾರ ಅವರು ಚಿಕ್ಕಮಗಳೂರು ಜಿಲ್ಲೆಯ ಆಲ್ದೂರಿನ ತೋರಣಮಾವು ಎಂಬಲ್ಲಿ ಜನಿಸಿದರು ಎನ್ನಲಾಗುತ್ತಿದೆ)

ಸುಮಾರು 6 ವರ್ಷ ಪ್ರಾಯದಲ್ಲೇ ಅವರ ತಾಯಿ ನಿಧನರಾದರು. ಅವರ ತಂದೆ ಬೇರೆ ಮದುವೆಯಾದರು. ಅನಾಥ ಬಾಲಕ ಫಕ್ರುದ್ದೀನ್ ಉಪಾಯವಿಲ್ಲದೆ ತನ್ನ ಚಿಕ್ಕಮ್ಮ ಬಜ್ಪೆಯ ಆಯಿಶಾ ಉಮ್ಮ (ಐಸಮ್ಮ) ಅವರ ಬಳಿ ಆಸರೆ ಪಡೆದುಕೊಂಡರು. ಕೆಲವು ಕಾಲ ಅಲ್ಲಿದ್ದ ಅವರು ಬಳಿಕ ತನ್ನ ಸೋದರಮಾವ ಜೋಕಟ್ಟೆಯ ಹಸನಾಕರ ಸಂರಕ್ಷಣೆಯಲ್ಲಿ ಬೆಳೆದು ಅವರೊಂದಿಗೆ ಸಹಾಯಕರಾಗಿ ಕೂಲಿ ಕೆಲಸ ಮಾಡಲು ಪ್ರಾರಂಭಿಸಿದರು. ಆ ಬಳಿಕ ಗೋಳಿಸೋಡಾ (ಜಿಂಜರ್), ಬ್ರೆಡ್ ಮಾರಾಟವನ್ನೂ ಮಾಡತೊಡಗಿದರು.

1965ರಲ್ಲಿ ಜೋಕಟ್ಟೆಯ ಮುಹಿಯ್ಯುದ್ದೀನ್ ಹೊಸ ಜುಮಾ ಮಸ್ಜಿದ್ ಮತ್ತು ನೂರಾನಿಯ ಜಮಾಅತ್ ಕಮಿಟಿ ವತಿಯಿಂದ ನಡೆದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇರಳದ ಒಬ್ಬ ಧಾರ್ಮಿಕ ಪಂಡಿತರು ಧಾರ್ಮಿಕ ಶಿಕ್ಷಣ, ಅದರ ಮಹತ್ವದ ಬಗ್ಗೆ ನೀಡಿದ ಉಪನ್ಯಾಸವನ್ನು ಕೇಳಿಸಿಕೊಂಡ ಫಕ್ರುದ್ದೀನ್ ತನ್ನ ಮಾವನಲ್ಲಿ ತಾನು ಕೂಡ ಧಾರ್ಮಿಕ ವಿದ್ವಾಂಸನಾಗುವ ಆಸೆ ವ್ಯಕ್ತಪಡಿಸಿದರು. ತಕ್ಷಣ ಅವರು ಮನೆ ಸಮೀಪದ ನೂರಾನಿಯ್ಯಃ ಮದ್ರಸದಲ್ಲಿ ಫಕ್ರುದ್ದೀನ್‌ರನ್ನು ಸೇರಿಸಿದರು. ನಾಲ್ಕೈದನೆ ತರಗತಿಯಲ್ಲಿರಬೇಕಾದ ಬಾಲಕ ಒಂದನೆ ತರಗತಿಗೆ ಸೇರಿದುದನ್ನು ಕಂಡು ತರಗತಿಯ ಇತರ ಮಕ್ಕಳು ಫಕ್ರುದ್ದೀನ್‌ರನ್ನು ಗೇಲಿ ಮಾಡತೊಡಗಿದರು. ಆದರೆ ಫಕ್ರುದ್ದೀನ್ ಯಾವುದನ್ನೂ ಲೆಕ್ಕಿಸದೆ ಕಲಿಕೆಯತ್ತ ಗಮನ ಹರಿಸಿದರು.

ಈ ಮಧ್ಯೆ ಮುಸಾಫಿರ್‌ಗಳಿಗೆ ಊಟೋಪಚಾರ ನೀಡುವ ಮಹತ್ತರವಾದ ಯೋಜನೆಯೊಂದಿಗೆ 1966ರಲ್ಲಿ ಪ್ರಾರಂಭಗೊಂಡ ಅಂಜುಮಾನ್ ಖುವ್ವತುಲ್ ಇಸ್ಲಾಂ ಸಂಸ್ಥೆಯ ವತಿಯಿಂದ "ಧಾರ್ಮಿಕ ವಿದ್ಯೆ ಕಲಿಯುವವರಿಗೆ ತಿಂಗಳಿಗೆ ಸಣ್ಣ ಪ್ರಮಾಣದ ಖರ್ಚಿಗೆ (ಬಟ್ಟೆ ಒಗೆಯಲು ಸೋಪು, ಬ್ರೆಶ್, ಪೇಸ್ಟ್, ಉಜಾಲ) ಹಣ ನೀಡಲಾಗುವುದು ಎಂಬ ಕೊಡುಗೆ ನೀಡಲಾಗಿತ್ತು. ತಕ್ಷಣ ಫಕ್ರುದ್ದೀನ್ ಅದರ ಪ್ರಯೋಜನ ಪಡೆದರು.

ಕಾಶಿಯ ಅಬ್ದುಲ್ ಖಾದಿರ್ ಹಾಜಿಯ ತುಂಬು ಪ್ರೇರಣೆಯಿಂದ 1966ರಿಂದ 1977ರ ತನಕ ಸಜಿಪ ಉಸ್ತಾದ್ ಎಂದೇ ಖ್ಯಾತರಾದ ಶೈಖುನಾ ಉಸ್ತಾದುಲ್ ಅಸಾತೀದ್ ಚೆರುವತ್ತೂರು ಅಬ್ದುಲ್ಲಾಹ್ ಮುಸ್ಲಿಯಾರ್ ಅಲ್‌ಬಾಖವಿ ಅವರ ಬಳಿ ದರ್ಸ್ ಕಲಿತರು. ನಂತರ ಉನ್ನತ ಶಿಕ್ಷಣಕ್ಕಾಗಿ ತಾಜುಲ್ ಉಲಮಾ ಉಳ್ಳಾಲ ತಂಙಳ್‌ರ ಸೈಯದ್ ಮದನಿ ಅರಬಿಕ್ ಕಾಲೇಜ್‌ನಲ್ಲಿ 1977ರಿಂದ 1981ರ ತನಕ ಕಲಿತು "ಮದನಿ" ಬಿರುದು ಪಡೆದರು. ಒಟ್ಟಿನಲ್ಲಿ ಸಜಿಪ ಉಸ್ತಾದ್, ಉಳ್ಳಾಲ ತಂಙಳ್, ಅಹ್ಮದ್ ಬಾವ ಮುಸ್ಲಿಯಾರ್ ಉಳ್ಳಾಲ, ಸೈಯದ್ ಅಬೂಬಕರ್ ಚೆರುಕುಂಞಿ ತಂಙಳ್, ತಾರುಕ್ಕೋಡ್ ಅಬ್ದುಲ್ಲ ಉಸ್ತಾದ್, ಬೈತಾರ್ ಉಸ್ತಾದ್ ಅವರ ಪ್ರಮುಖ ಶಿಷ್ಯರಾಗಿದ್ದ ಫಕ್ರುದ್ದೀನ್ ಮುಸ್ಲಿಯಾರ್ ಕಾಸರಗೋಡು ಖಾಝಿಯಾಗಿದ್ದ ಮೌಲಾನಾ ಇ.ಕೆ.ಹಸನ್ ಮುಸ್ಲಿಯಾರ್‌ರ ಸೂಚನೆಯಂತೆ ಊರಲ್ಲೇ ವೃತ್ತಿಯೊಂದಿಗೆ ಸೇವೆ ಆರಂಭಿಸಿದರು.

ಅಂದಿನ ಜೋಕಟ್ಟೆ ಎಂಬ ಕುಗ್ರಾಮದಲ್ಲಿ ಶಿಕ್ಷಣ ಕ್ರಾಂತಿಗೆ ನಾಂದಿಹಾಡಿದರು. ಅಂದರೆ 1981ರಲ್ಲಿ ಜೋಕಟ್ಟೆಯ "ಕರ್ತವುಡೆ" ಎಂಬಲ್ಲಿ ಹಯಾತುಲ್ ಇಸ್ಲಾಂ ಮದ್ರಸ ಸ್ಥಾಪಿಸಿದರು. 1997ರ ತನಕ ಜೋಕಟ್ಟೆಯಲ್ಲೇ ಸೇವೆಗೈದರು.

1984ರಲ್ಲಿ ಅವರು ಸ್ಥಾಪಿಸಿದ ಸ್ವಲಾತ್ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿತ್ತು. ಸ್ವಲಾತ್ ನೇರ್ಚೆಯಲ್ಲಿ ಉಳಿತಾಯವಾದ ಹಣವನ್ನು ಮೂರು ಪಾಲಾಗಿ ಅವರು ವಿಂಗಡಿಸುತ್ತಿದ್ದರು. ಹಾಗೇ ಒಂದನ್ನು ಮುತಅಲ್ಲಿಮರ ವಾರ್ಷಿಕೋತ್ಸವಕ್ಕೆ, ಇನ್ನೊಂದನ್ನು ತನ್ನ ಅಧೀನದಲ್ಲಿ ಕಲಿಯುತ್ತಿದ್ದ ಯತೀಂ ಮತ್ತು ನಿರ್ಗತಿಕರಿಗೆ, ಮತ್ತೊಂದನ್ನು ಮಸ್ಜಿದ್‌ನ ಪರಿಪಾಲನೆಗೆ ಹಂಚುತ್ತಿದ್ದರು.

ಅಂದು ಜೋಕಟ್ಟೆಯ ಹೊಸ ಮಸೀದಿಯಲ್ಲಿ ಒಂದು ಶುಕ್ರವಾರ ಜುಮಾ ಆದರೆ ಮತ್ತೊಂದು ಶುಕ್ರವಾರ ಹಳೆ ಮಸೀದಿಯಲ್ಲಿ ಜುಮಾ ನಡೆಯುತ್ತಿತ್ತು. ಫಕ್ರುದ್ದೀನ್ ಮುಸ್ಲಿಯಾರ್ ಹಳೆ ಮಸೀದಿಯ ಖತೀಬ್ ಆಗಿದ್ದರು.

ಅತ್ಯಂತ ಸರಳ ಸ್ವಭಾವದ ಫಕ್ರುದ್ದೀನ್ ಮುಸ್ಲಿಯಾರ್ 1997ರ ಜನವರಿ 8ರಂದು ಪತ್ನಿ, ಐದು ಮಂದಿ ಪುತ್ರರು ಮತ್ತು ಮೂವರು ಪುತ್ರಿಯರನ್ನು ಬಿಟ್ಟು ಇಹಲೋಕ ತ್ಯಜಿಸಿದರು.

# ಸಾಲೆತ್ತೂರು ಎಂಬ ಕುಗ್ರಾಮ ಬೆಳಗಿಸಿದ್ದ ಮಮ್ಮುಂಞಿ ಉಸ್ತಾದ್



ಬಂಟ್ವಾಳ ತಾಲೂಕಿನ ಕಟ್ಟತ್ತಿಲ ಹುಸನ್‌ಕುಂಞ ಮುಕ್ರಿಕ–ಬೀಫಾತಿಮ ದಂಪತಿಯ ಏಳು ಮಕ್ಕಳಲ್ಲಿ ಎರಡನೇ ಪುತ್ರನಾಗಿ 1939ರಲ್ಲಿ ಮಮ್ಮುಂಞಿ ಉಸ್ತಾದ್ ಹುಟ್ಟಿದರು. ಪ್ರಾಥಮಿಕ ಅರಬಿಕ್ ಶಿಕ್ಷಣವನ್ನು ಸ್ಥಳೀಯ ಮದ್ರಸದಲ್ಲಿ ಕಲಿತ ಬಳಿಕ ಅವರು ಕಾಸರಗೋಡಿನ ಪ್ರಸಿದ್ಧ ಪಂಡಿತರಾದ ತಾಯಲಂಗಾಡಿ ಉಸ್ತಾದ್ ಮತ್ತು ಆ ಕಾಲದ ಪ್ರಮುಖ ವಿದ್ವಾಂಸ ಮಂಜನಾಡಿ ಉಸ್ತಾದ್ ಅವರ ಶಿಷ್ಯತ್ವ ಪಡೆದು ಅಂದಿನ ಕಾಲದಲ್ಲಿ ಪ್ರಸಿದ್ಧಿ ಪಡೆದ "ಪೊನ್ನಾಣಿ ತಲೆಕೆಟ್ಟ್" ಎಂಬ ಬಿಳಿ ಶಿರೋವಸ್ತ್ರ ಪಡೆದ ಕರ್ನಾಟಕದ ಪ್ರಮುಖ ವಿದ್ವಾಂಸರಲ್ಲಿ ಮಮ್ಮುಂಞಿ ಉಸ್ತಾದ್ ಒಬ್ಬರಾಗಿದ್ದರು. ಸೂರಿಂಜೆ, ಕಲ್ಲಡ್ಕ, ಗೋಳ್ತಮಜಲು, ದೇರಳಕಟ್ಟೆ, ಕಟ್ಟತ್ತಿಲದಲ್ಲಿ ಮುಅಲ್ಲಿಂ ಮತ್ತು ಖತೀಬ್ ಆಗಿ ಸೇವೆ ಸಲ್ಲಿಸಿದ ಅವರು ಸಾಲೆತ್ತೂರು ಸಮೀಪದ ತಾಮರಾಜೆ ಎಂಬಲ್ಲಿ ಕೇಂದ್ರ ಜುಮಾ ಮಸೀದಿ ಮತ್ತು ಮದ್ರಸ ನಿರ್ಮಾಣದ ಪ್ರಮುಖ ಶಿಲ್ಪಿಯಾಗಿದ್ದರು.

ಆ ಕಾಲದಲ್ಲಿ ತಾಮರಾಜೆ, ಕಾಡುಮಠ, ಅಲ್ಲಿಕಂಡೆ, ಕಲ್ಲಮಜಲು ಮತ್ತಿತರ ಊರಿನ ವಿದ್ಯಾರ್ಥಿಗಳು ಮದ್ರಸಕ್ಕೆ ಕಟ್ಟತ್ತಿಲಕ್ಕೆ ಹೋಗಬೇಕಿತ್ತು. ಮಳೆಗಾಲದಲ್ಲಿ ಗುಡ್ಡ, ಕಾಡು, ತೋಡಿನ ಮಾರ್ಗವಾಗಿ ಮಕ್ಕಳಿಗೆ ಕಟ್ಟತ್ತಿಲಕ್ಕೆ ಹೋಗುವುದು ಬಹಳ ಪ್ರಯಾಸಕರವಾಗಿತ್ತು.

ಅದೊಂದು ಮಳೆಗಾಲದ ದಿನ ತಾಮರಾಜೆಯ ವಿದ್ಯಾರ್ಥಿನಿ ಕಟ್ಟತ್ತಿಲದ ಮದ್ರಸದಿಂದ ಮರಳಿ ಮನೆಗೆ ಬರುತ್ತಿರುವಾಗ ನಾಟೆಕಲ್ಲು ಎಂಬಲ್ಲಿನ ತೋಡಿನಲ್ಲಿ ಹರಿಯುವ ನೀರಿಗೆ ಬಿದ್ದು ಕೊಚ್ಚಿಕೊಂಡು ಹೋಗುತ್ತಿದ್ದಳು. ಅದನ್ನು ಕಂಡ ಅವ್ವಮ್ಮ ಎಂಬವರು ಆ ವಿದ್ಯಾರ್ಥಿನಿಯನ್ನು ರಕ್ಷಿಸಿದರು. ಹಾಗಾಗಿ ಆ ವಿದ್ಯಾರ್ಥಿನಿಯ ಕುಟುಂಬಸ್ಥರು ಸಾಲೆತ್ತೂರು ತಾಮರಾಜೆಯಲ್ಲಿ ಮದ್ರಸ ನಿರ್ಮಿಸುವ ಬಗ್ಗೆ ಯೋಚಿಸಿದರು. ಅವಿಭಕ್ತ ಕುಟುಂಬದ ತಾಮರಾಜೆ ಹಸನ್‌ಕುಂಞಿ, ಮೋನುಚ್ಚ, ಅಬ್ಬಾಸ್, ಅಬ್ದುರ್ರಹ್ಮಾನ್ ಎಂಬವರು ತಮಗೆ ಸೇರಿದ ಜಾಗದಿಂದ ಮದ್ರಸ ನಿರ್ಮಿಸಲು ಜಮೀನನ್ನು ದಾನ ಮಾಡಿದರು.


ಅದರಂತೆ ಗುಡಿಸಲು ಕಟ್ಟಿ 8 ವಿದ್ಯಾರ್ಥಿಗಳೊಂದಿಗೆ ಮದ್ರಸದ ತರಗತಿ ಆರಂಭಿಸಲಾಯಿತು. ಕೆ.ಎಂ.ಮಮ್ಮುಂಞಿ ಮುಸ್ಲಿಯಾರ್ ಮುಅಲ್ಲಿಮರಾಗಿ ನೇಮಕಗೊಂಡರು. ಕೆಲವು ವರ್ಷಗಳ ನಂತರ ಗುಡಿಸಲನ್ನು ಕೆಡಹಿ ಮಣ್ಣಿನ ಗೋಡೆಯ ಕಟ್ಟಡ ನಿರ್ಮಿಸಲಾಯಿತು. ಅದಕ್ಕೆ ಸೈಯದ್ ಹಾದಿ ತಂಙಳ್ ಉದ್ಯಾವರ, ಕಾಡುಮಠದ ಅಬ್ದುಲ್ಲ ಹಾಜಿ, ಖಾಸಿಂ ಸಾಹಿಬ್ ಕಲ್ಲಮಜಲು, ಹಸನ್‌ಕುಂಞಿ ಕುಟುಂಬಸ್ಥರು ಪಟ್ಟ ಶ್ರಮ ಅಪಾರ.

14 ವರ್ಷಗಳ ಕಾಲ ಈ ಮದ್ರಸದಲ್ಲಿ ಮಮ್ಮುಂಞಿ ಉಸ್ತಾದ್ ಸೇವೆ ಸಲ್ಲಿಸಿದರು. ಸಾಲೆತ್ತೂರು ಮತ್ತು ಆಸುಪಾಸಿನ ಊರ ಮುಸಲ್ಮಾನರಿಗೆ ಶುಕ್ರವಾರ ಜುಮಾಕ್ಕೆ ದೂರದ ಕಟ್ಟತ್ತಿಲಕ್ಕೆ ಹೋಗಬೇಕಾದ ಅನಿವಾರ್ಯತೆ ಇತ್ತು. ಹಾಗಾಗಿ ಊರ ಪ್ರಮುಖರು ಸಮಾಲೋಚನೆ ನಡೆಸಿ ಅಲ್‌ಹಾಜ್ ಅಬ್ದುರ್ರಹ್ಮಾನ್ ಮುಸ್ಲಿಯಾರ್ ಅಡ್ಯಾರ್ ಕಣ್ಣೂರು ಅವರಿಂದ ಶಿಲಾನ್ಯಾಸ ನೆರವೇರಿಸಿ ಮಸೀದಿ ನಿರ್ಮಿಸಲಾಯಿತು. 1986ರಲ್ಲಿ ಪಾತೂರು ಉಸ್ತಾದ್ ಪ್ರಥಮ ಖುತ್ಬಾವನ್ನು ನೆರವೇರಿಸುವ ಮೂಲಕ ಮಸೀದಿಯಲ್ಲಿ ಜುಮಾ ಆರಂಭಗೊಂಡಿತು. ಅದರೊಂದಿಗೆ ಉಳ್ಳಾಲ ತಂಙಳ್, ಹಾಜಿ ಅಬ್ದುಲ್ಲ ಉಸ್ತಾದ್ ಮಂಡೆಕೋಲು, ಪಾತೂರು ಉಸ್ತಾದ್ ಮಹಾಸಭೆಯ ನೇತೃತ್ವ ವಹಿಸಿಕೊಳ್ಳುತ್ತಿದ್ದರು.

ಮಮ್ಮುಂಞಿ ಉಸ್ತಾದ್ ಈ ಜುಮಾ ಮಸೀದಿಯ ಖತೀಬರಾಗಿ, ಮುಅಲ್ಲಿಮರಾಗಿ 32 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ ಸಾವಿರಾರು ಶಿಷ್ಯಂದಿರನ್ನು ಸೃಷ್ಟಿಸಿದ್ದರು. ಫೈಝಿ, ಸಖಾಫಿ, ದಾರಿಮಿ, ಮದನಿ ಹೀಗೆ ಹಲವಾರು ಮಂದಿ ಧಾರ್ಮಿಕ ಪದವಿ ಪಡೆದಿದ್ದಾರೆ.

ಸರಳ ವ್ಯಕ್ತಿತ್ವಕ್ಕೆ ಹೆಸರುವಾಸಿಯಾಗಿದ್ದ ಅವರು ಆಧ್ಯಾತ್ಮಿಕತೆ, ತಖ್ವಾಗಳಲ್ಲಿ ತಲ್ಲೀನರಾಗಿದ್ದರು. ಸೂಫಿವರ್ಯರೂ ಆಗಿದ್ದ ಅವರು ಫಿಕ್ಹ್ ಕರ್ಮ ಶಾಸ್ತ್ರ, ವ್ಯಾಕರಣ ಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದರು.

ಹೀಗೆ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದು ಪ್ರಮುಖ ವಿದ್ವಾಂಸರಲ್ಲಿ ಒಬ್ಬರಾಗಿದ್ದ ಅವರು ಪತ್ನಿ, ಮೂವರು ಪುತ್ರರು ಮತ್ತು ನಾಲ್ಕು ಮಂದಿ ಹೆಣ್ಣು ಮಕ್ಕಳನ್ನು 2002ರ ಆಗಸ್ಟ್ 12ರಂದು ಬಿಟ್ಟಗಲಿದರು.



# ಮಣಿಪಾಲ ಉಸ್ತಾದ್ ಖ್ಯಾತಿಯ ಹಾಜಿ ಪಿ.ಕೆ. ಅಬ್ದುಲ್ ರಹ್ಮಾನ್ ಮುಸ್ಲಿಯಾರ್

ಉಡುಪಿ ಜಿಲ್ಲೆಯ ಮಸ್ಜಿದ್ ಎ ಮಣಿಪಾಲದಲ್ಲಿ ಹಲವು ವರ್ಷಗಳ ಕಾಲ ಖತೀಬ್ ಆಗಿ ಸೇವೆ ಸಲ್ಲಿಸುವ ಮೂಲಕ "ಮಣಿಪಾಲ ಉಸ್ತಾದ್" ಎಂದೇ ಖ್ಯಾತರಾಗಿರುವ ಹಾಜಿ ಪಿ.ಕೆ. ಅಬ್ದುಲ್ ರಹ್ಮಾನ್ ಮುಸ್ಲಿಯಾರ್ ಬಹುಭಾಷಾ ಪಂಡಿತರಾಗಿದ್ದರು. ಆದರೆ ಅವರು ಬದುಕಿರುವಾಗ ಅವರ ವಿದ್ವತ್‌ನ ಬಗ್ಗೆ ಹೆಚ್ಚಿನವರಿಗೆ ಅರಿವಿರಲಿಲ್ಲ. ಅವರು ಕಣ್ಮರೆಯಾದ ಬಳಿಕವೇ ಅವರ ವಿದ್ವತ್ ಬಗ್ಗೆ ನಾಡು ಅರಿಯುವಂತಾಗಿರುವುದು ವಿಪರ್ಯಾಸ.

ಧಾರ್ಮಿಕ ವಿದ್ವಾಂಸ ಮೂಸ ಮುಸ್ಲಿಯಾರ್–ಖದೀಜಾ ದಂಪತಿಯ ಪುತ್ರನಾಗಿ 1947ರ ಜುಲೈ 7ರಂದು ಜನಿಸಿದ ಅವರು ತನ್ನ ಬಾಲ್ಯವನ್ನು ಕಡಬ ಸಮೀಪದ ಮರ್ದಾಳದಲ್ಲಿ ಕಳೆದಿದ್ದರು. ಬಾಲ್ಯದಲ್ಲಿಯೇ ತಬ್ಬಲಿಯಾದ ಅವರು, ತಾಯಿಯ ಆಸರೆಯಿಂದ ಬೆಳೆದರು. ಬಡತನದ ಕಾರಣ ಶಾಲೆಯ ಬಾಗಿಲು ಹತ್ತದಿದ್ದರೂ ಅರೆಬಿಕ್, ಇಂಗ್ಲಿಷ್, ಉರ್ದು, ಕನ್ನಡ, ಮಲಯಾಳಂ, ಬ್ಯಾರಿ, ತುಳು ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಧಾರ್ಮಿಕ ವಿದ್ಯಾಭ್ಯಾಸ ಪಡೆಯುವ ಸಲುವಾಗಿ ಕೇರಳದ ಚಾವಕ್ಕಾಡ್ ಎಂಬ ಊರಿಗೆ ತೆರಳಿ ಅಲ್ಲಿ ಚಂಗರಂಕುಳಂ ಮೊಯ್ದುಂಞಿ ಮುಸ್ಲಿಯಾರ್‌ರ ಶಿಷ್ಯತ್ವ ಪಡೆದರು. ನಂತರ ಕಾಸರಗೋಡಿನ ಆಲಂಪಾಡಿ ಮಸೀದಿಯಲ್ಲಿ ಕುಂಞಬ್ದುಲ್ಲಾ ಮುಸ್ಲಿಯಾರ್ ಬಳಿ ವಿದ್ಯಾಭ್ಯಾಸ ಪಡೆದರು. ಈ ಮಧ್ಯೆ ಪುಸ್ತಕಗಳ ಸಹಕಾರದಿಂದ ಇತರ ಎಲ್ಲಾ ಭಾಷೆಗಳನ್ನು ಕಲಿತ ಅವರು, ಮಲಯಾಳಂನಲ್ಲೂ ಹಿಡಿತ ಸಾಧಿಸಿದ್ದರು. ಮಲಯಾಳಂ ಶಾಲೆಯ ಬಾಗಿಲು ಹತ್ತದೆಯೇ ತನ್ನ ಮಕ್ಕಳೆಲ್ಲರಿಗೂ ಮಲೆಯಾಳಂ ಭಾಷೆಯನ್ನು ಓದಲು ಮತ್ತು ಬರೆಯಲು ಕಲಿಸಿದ್ದರು. ಹಲವಾರು ಪತ್ರಿಕೆಗಳಿಗೆ ಚಂದಾದಾರರಾಗಿದ್ದ ಅವರು ಅವುಗಳನ್ನೆಲ್ಲಾ ಸಕಾಲಕ್ಕೆ ಓದಿ ಮುಗಿಸುತ್ತಿದ್ದರು. ಧಾರ್ಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ಕೊಕ್ಕಡ ಮಸೀದಿಯಲ್ಲಿ ಕೆಲವು ಕಾಲ ಇಮಾಮ್ ಆಗಿ ಕಾರ್ಯನಿರ್ವಹಿಸಿ, ಬಳಿಕ ಅರಸಿನಮಕ್ಕಿ ಮಸೀದಿಯ ಇಮಾಮ್ ಆಗಿ ಸೇವೆ ಸಲ್ಲಿಸಿದ್ದರು.

ಈ ಮಧ್ಯೆ ಮಂಜನಾಡಿಯ ಖ್ಯಾತ ವಿದ್ವಾಂಸ ಹಾಜಿ ಮೂಸ ಮುಸ್ಲಿಯಾರ್– ಆಸಿಯಾ ಹಜ್ಜುಮ್ಮ ದಂಪತಿಯ ಪುತ್ರಿ ಫಾತಿಮಾರನ್ನು ವಿವಾಹವಾದರು. ಬಜ್ಪೆ ಮಸೀದಿಯ ಖತೀಬ್ ಆಗಿ ಸೇವೆ ಸಲ್ಲಿಸುತ್ತಿದ್ದ ಮಾವ ಮೂಸ ಮುಸ್ಲಿಯಾರ್ ಅಪಘಾತದಿಂದ ತೀರಿಕೊಂಡಾಗ ಅನಿವಾರ್ಯವಾಗಿ ಬಜ್ಪೆ ಖತೀಬ್ ಸ್ಥಾನವನ್ನು ಸ್ವೀಕರಿಸಿಕೊಂಡಿದ್ದರು. ಹಿರಿಯರು, ಕಿರಿಯರು ಎನ್ನದೆ ಸರ್ವರೊಂದಿಗೂ ಮಮತೆಯಿಂದ ಬೆರೆಯುತ್ತಿದ್ದ ಅವರು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಬಜ್ಪೆಯಲ್ಲಿ ಧಾರ್ಮಿಕ ಮುನ್ನಡೆಯೊಂದಿಗೆ ಲೌಕಿಕ ಜ್ಞಾನಕ್ಕೂ ಉತ್ತೇಜನ ನೀಡುತ್ತಿದ್ದ ಉಸ್ತಾದರ ಉದಾತ್ತ ಮನೋಭಾವದ ಕುರಿತು ಮಾಜಿ ಸಚಿವ ಬಿ.ಎ.ಮೊಹಿದಿನ್ ಕೂಡ ಹಲವು ಬಾರಿ ಜ್ಞಾಪಿಸಿಕೊಳ್ಳುತ್ತಿದ್ದರು. ಅಲ್ಲಿನ ಲೌಕಿಕ ವಿದ್ಯಾಸಂಸ್ಥೆಯ ಸ್ಥಾಪನೆಯಲ್ಲಿ ಉಸ್ತಾದರು ಅಹರ್ನಿಶಿ ದುಡಿದಿದ್ದರು ಎಂಬುದನ್ನು ಅವರ ಶಿಷ್ಯಂದಿರು ನೆನಪಿಸಿಕೊಳ್ಳುತ್ತಾರೆ.

ಕೊಡುಗೈದಾನಿ ಶರೂಲ್ ಹಾಜಿ ನೀರುಮಾರ್ಗದಲ್ಲಿ ನೀಡಿದ ಜಾಗದಲ್ಲಿ ಬಿ.ಜೆ.ಮೊಯ್ದಿನ್ ಕುಂಜಾರಿಯ ಸಾರಥ್ಯದಲ್ಲಿ ಸ್ಥಾಪಿಸಲಾಗಿದ್ದ ಇಸ್ಲಾಮಿಕ್ ಎಜುಕೇಶನ್ ಫೌಂಡೇಶನ್‌ನ ಪ್ರಥಮ ಅರಬಿಕ್ ಅಧ್ಯಾಪಕರಾಗಿದ್ದರು. ಬಜ್ಪೆಯ ಉತ್ಸಾಹಿ ವಿದ್ಯಾರ್ಥಿಗಳು ಬಿ.ಎಂ.ಶರೀಫ್ ಉಸ್ತಾದರ ನೇತೃತ್ವದಲ್ಲಿ ಸ್ಥಾಪಿಸಿದ ಸಂಸ್ಥೆಗೆ ಅನ್ಸಾರುಲ್ ಇಸ್ಲಾಂ ಎಂಬ ಹೆಸರನ್ನು ನೀಡಿ ಆ ಯುವಕರಿಗೆ ಪ್ರೋತ್ಸಾಹ ನೀಡಿದ್ದರು.

ಬಜ್ಪೆಯ ಬಳಿಕ ಕಾಸರಗೋಡಿನ ಚಂದ್ರಗಿರಿ ತಟದಲ್ಲಿರುವ ಚೆಮನಾಡ್ ಜುಮಾ ಮಸೀದಿಯ ಖತೀಬ್ ಆಗಿ ನಿಯುಕ್ತಿಗೊಂಡ ಉಸ್ತಾದರು, ಅಲ್ಲಿಯೂ ಹಲವು ಬದಲಾವಣೆಗೆ ಸಾಕ್ಷಿಯಾದರು. ಪ್ರತ್ಯೇಕ ಖಾಝಿ ಇಲ್ಲದ ಆ ಜಮಾಅತಿಗೆ ಆ ಸ್ಥಾನವನ್ನು ಅವರೇ ನಿರ್ವಹಿಸುತ್ತಿದ್ದರು. ಅದೊಂದು ವಿಶಿಷ್ಟ ಪ್ರದೇಶವಾಗಿದ್ದು, ಸುನ್ನೀ, ಜಮಾಅತ್, ಮುಜಾಹಿದ್, ತಬ್ಲೀಗ್ ಮತ್ತಿತರ ಎಲ್ಲಾ ಗುಂಪುಗಳೂ ಅಲ್ಲಿ ಕಾರ್ಯಾಚರಿಸುತ್ತಿದ್ದವು. ಆದರೆ ಅವರೆಲ್ಲರೊಂದಿಗೂ ಉಸ್ತಾದರು ಸಹವರ್ತಿಯಾಗಿ ಸಂವಹನ ನಡೆಸುತ್ತಿದ್ದರು ಮತ್ತು ಇಸ್ಲಾಮಿನ ಮೂಲ ಸಿದ್ಧಾಂತಕ್ಕೆ ಚ್ಯುತಿ ಉಂಟಾಗದಂತೆ ನಡೆದುಕೊಂಡಿದ್ದರು.

ಸರಳ ಜೀವನ ನಡೆಸುತ್ತಿದ್ದ ಅವರು, ಮನಮುಟ್ಟುವಂತೆ ಭೋದನೆ ನೀಡುತ್ತಿದ್ದರು. ಹಲವು ಮಸೀದಿಗಳು, ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದ ಅವರು, ಅತೀ ಹೆಚ್ಚು ಕಾಲ ಖತೀಬ್ ಆಗಿ ಚೆಮನಾಡ್‌ನಲ್ಲಿ ಸೇವೆ ಸಲ್ಲಿಸಿದವರಾಗಿದ್ದರು ಎಂಬುದನ್ನು ಅಲ್ಲಿನ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಮಸ್ಜಿದ್ ಎ ಮಣಿಪಾಲ್‌ನ ಖತೀಬ್ ಆಗಿ ಸೇವೆ ಸಲ್ಲಿಸುವಾಗ ಬಹುತೇಕ ವಿದೇಶೀ ವಿದ್ಯಾರ್ಥಿಗಳು ಮಸೀದಿಗೆ ಆಗಮಿಸುತ್ತಿದ್ದರು. ಅವರಿಗೆ ಅರ್ಥವಾಗುವ ರೀತಿಯಲ್ಲಿ ವ್ಯವಹರಿಸುತ್ತಿದ್ದರು. ಸಮಯ ಸಿಕ್ಕಾಗಲೆಲ್ಲಾ ಓದುವುದಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಿದ್ದ ಅವರು, ಬದುಕಿನ ಕೊನೆಯವರೆಗೂ ಓರ್ವ ವಿದ್ಯಾರ್ಥಿಯಾಗಿಯೇ ಇದ್ದರು. ಆಕಸ್ಮಿಕವಾಗಿ ರಸ್ತೆ ಅಪಘಾತದಲ್ಲಿ ಕಾಲು ಮುರಿತಕ್ಕೊಳಗಾದ ನಂತರ ನಡೆದಾಡುವುದು ಸಾಧ್ಯವಿಲ್ಲದೆ ಅನಿವಾರ್ಯವಾಗಿ ಮಣಿಪಾಲದ ಕೆಲಸವನ್ನು ತ್ಯಜಿಸಿದ್ದರು.

ದೇರಳಕಟ್ಟೆಯ ಅಬೂಬಕರ್ ಹಾಜಿ ಅವರ ಸಾರಥ್ಯದಲ್ಲಿ ದೇರಳಕಟ್ಟೆ ಕೇಂದ್ರೀಕರಿಸಿ ಕಾರ್ಯಾಚರಿಸುತ್ತಿದ್ದ "ಕರ್ನಾಟಕ ಅರಬಿಕ್ ವಿದ್ಯಾಭ್ಯಾಸ ಬೋರ್ಡ್" ಗೆ ಒಂದರಿಂದ ಹತ್ತನೇ ತರಗತಿವರೆಗಿನ ಮದ್ರಸ ಪಠ್ಯ ಪುಸ್ತಕಗಳನ್ನು ರಚಿಸಿದ್ದರು. ಸರಳವಾಗಿ ಕನ್ನಡ ಮತ್ತು ಇಂಗ್ಲಿಷ್ ಮೂಲಕ ಅರಬಿ ಕಲಿಯುವ "ಅಲ್ ಬಯಾನ್" ಪಠ್ಯ ಪದ್ದತಿಯು ಆಸಕ್ತರ ಗಮನ ಸೆಳೆದಿತ್ತು.

ಕಿನ್ಯ ಗ್ರಾಮದ ಬೆಳರಿಂಗೆಯಲ್ಲಿ ವಾಸವಿದ್ದ ಅವರು ಪತ್ನಿ ಮತ್ತು ಕವಿ ಬಶೀರ್ ಅಹ್ಮದ್ ಕಿನ್ಯ ಸಹಿತ ನಾಲ್ಕು ಮಂದಿ ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳನ್ನು 2020ರ ಆಗಸ್ಟ್ 18ರಂದು ಬಿಟ್ಟಗಲಿದರು.

## ದಫ್ ಉಸ್ತಾದ್ : ಹಾಜಿ ಅಬ್ದುಲ್ಲಾ ಮಂಡೆಕೋಲು ಸುಳ್ಯ



ಸುಳ್ಯ ತಾಲೂಕಿನ ಮಂಡೆಕೋಲು ಎಂಬಲ್ಲಿ ಸುಮಾರು 67 ವರ್ಷಗಳ ಕಾಲ ಖತೀಬ್ ಮತ್ತು ಮುಕ್ರಿಯಾಗಿ ಸೇವೆ ಸಲ್ಲಿಸಿದ್ದ ಮುಕ್ರಿ ಎರ್ಮಲ್ಲಾ ಮತ್ತು ಐಸಮ್ಮ ದಂಪತಿಯ ಪುತ್ರನಾಗಿ 1927ರಲ್ಲಿ ಜನಿಸಿದ ಅಬ್ದುಲ್ಲಾ ನುರಿತ ದಫ್ ಕಲೆಗಾರ. ದಕ್ಷಿಣ ಕನ್ನಡ, ಕೊಡಗು ಮತ್ತು ಕೇರಳದ ನಾನಾ ಕಡೆ ಸುಮಾರು 7 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಅವರು ದಫ್ ಕಲಿಸಿದ್ದಾರೆ. ದಫ್ ಬಾರಿಸಲು ಮಾತ್ರವಲ್ಲ, ದಫ್ ನಿರ್ಮಿಸುವುದರಲ್ಲೂ ಅವರು ನಿಸ್ಸೀಮ. ಆಡಿನ ಚರ್ಮವನ್ನು ಒಣಗಿಸಿ ದಫ್ ನಿರ್ಮಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಅದೂ ಒಂದು ಕಲೆಯಾಗಿದ್ದು ತನ್ನ ಆಸಕ್ತ ವಿದ್ಯಾರ್ಥಿಗಳಿಗೆ ದಫ್ ನಿರ್ಮಿಸಲು ಕೂಡ ಕಲಿಸಿ ಕೊಡುತ್ತಿದ್ದರು.

ಊರಲ್ಲೇ ಪ್ರಾಥಮಿಕ ಶಿಕ್ಷಣ ಪಡೆದ ಅವರು ಸುಮಾರು 60 ವರ್ಷಗಳ ಕಾಲ ಖಾದ್ರಿಯಾ ರಿಫಾಈ ತರೀಖತ್ ಆಗಿದ್ದರು. ಯಾವುದೇ ಮಸೀದಿ–ಮದ್ರಸದಲ್ಲಿ ಅವರು ಉದ್ಯೋಗ ಮಾಡಿದ್ದಿಲ್ಲ. ಆದರೆ ನೂರಾರು ಮಸೀದಿ–ಮದ್ರಸಗಳಿಗೆ ತೆರಳಿ ದಫ್ ಕಲಿಸಿಕೊಡುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಕಾಜೂರು, ಅಜಿಲಮೊಗರು, ಮರಕಡ, ಮಲಾರ್ ಅರಸ್ತಾನ ಹೀಗೆ ನಾನಾ ಕಡೆ ಅವರ ಸಾವಿರಾರು ಶಿಷ್ಯಂದಿರಿದ್ದಾರೆ. ಹೋದಲ್ಲೆಲ್ಲಾ ಅವರು ರಿಫಾಈ ರಾತೀಬ್ ಕಮಿಟಿ ರಚಿಸುತ್ತಿದ್ದರು. ಸ್ಥಳೀಯರ ಕೋರಿಕೊಂಡರೆ ಅದರ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ರಿಫಾಈ ರಾತೀಬ್ ನಡೆಸಲು ಪ್ರೇರೇಪಿಸುತ್ತಿದ್ದರು. ರಾತೀಬ್‌ನ ವಾರ್ಷಿಕೋತ್ಸವವನ್ನೂ ಆಯೋಜಿಸುತ್ತಿದ್ದರು.

7 ಬಾರಿ ಪವಿತ್ರ ಹಜ್ ಯಾತ್ರೆಗೈದಿದ್ದ ಅವರು ಎರಡು ಬಾರಿ ಬಾಗ್ದಾದ್‌ಗೆ ತೆರಳಿ ರಿಫಾಈ ಶೇಖ್‌ರ ತಲೆಮಾರಿನ ಸದಸ್ಯರನ್ನು ಭೇಟಿ ಮಾಡಿದ್ದರು.

ನೀಲಕಾಯದ, ಬಿಳಿಗಡ್ಡದ ಅಬ್ದುಲ್ಲಾ ಉಸ್ತಾದ್ ಮಂಡೆಕೋಲು ದಿನಕ್ಕೆ ಕನಿಷ್ಠ 100 ಸಿಗರೇಟ್ ಸೇದುತ್ತಿದ್ದರು ಮತ್ತು ಕನಿಷ್ಠ 25 ಬಾರಿ ಚಹಾ ಸೇವಿಸುತ್ತಿದ್ದರು ಎಂದು ಅವರ ಆತ್ಮೀಯರು ನೆನಪಿಸುತ್ತಾರೆ. ದೈನಂದಿನ ಚಟುವಟಿಕೆಯನ್ನು ಪುಸ್ತಕದಲ್ಲಿ ಬರೆದಿಡುವ ಹವ್ಯಾಸವೂ ಅವರಿಗಿತ್ತು.

"ದಫ್ ಉಸ್ತಾದ್" ಅಥವಾ "ಮಂಡೆಕೋಲು ಉಸ್ತಾದ್" ಎಂದೇ ಎಲ್ಲರೂ ಅವರನ್ನು ಪ್ರೀತಿಯಿಂದ ಕರೆಯುತ್ತಿದ್ದರು. ಅವರ ಗಟ್ಟಿ ಧ್ವನಿಯ ದುಆಕ್ಕೆ ಜನಾಕರ್ಷಣೆ ಇತ್ತು. ಅವರಿಲ್ಲದ ಕಾರ್ಯಕ್ರಮವು ಸಪ್ಪೆ ಎಂದು ಅಭಿಮಾನಿಗಳು ಹೇಳಿಕೊಳ್ಳುತ್ತಿದ್ದರು. ಪತ್ನಿ ಖತೀಜಾರ ನಿಧನದ ಬಳಿಕ ದಫ್ ಕಲಿಸುವ ಅವರ ಉತ್ಸಾಹವೂ ತಣಿಯಿತು. 2010ರಲ್ಲಿ ಅವರು ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಬಿಟ್ಟು ಇಹಲೋಕ ತ್ಯಜಿಸಿದರು.

## ದಫ್ ಹಾಡುಗಾರ: ಕೆ.ಇ. ಮುಹಮ್ಮದ್ ಕೋಡಿ ಕುಂದಾಪುರ



ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಡಿ ಎಂಬಲ್ಲಿ ಯೂಸುಫ್–ಹವ್ವಾಬಿ ದಂಪತಿಯ ಪುತ್ರನಾಗಿ 1950ರ ಜನವರಿ 1ರಂದು ಹುಟ್ಟಿ ಬೆಳೆದ ಕೆ.ಇ. ಮುಹಮ್ಮದ್ "ದಫ್ ಉಸ್ತಾದ್" ಎಂದೇ ತಾಲೂಕಿನಾದ್ಯಂತ ಮನೆ ಮಾತಾಗಿದ್ದಾರೆ.

5ನೆ ತರಗತಿಯವರೆಗೆ ಕಲಿತ ಬಳಿಕ ಹೊಟ್ಟೆಪಾಡಿಗಾಗಿ ಒಣಮೀನು ವ್ಯಾಪಾರದಲ್ಲಿ ತೊಡಗಿಸಿಕೊಂಡರು. 1980ರ ಸುಮಾರಿಗೆ ಕುಂದಾಪುರ ಕೋಡಿಯ ಮಸೀದಿಯಲ್ಲಿ ಖತೀಬ್ ಆಗಿದ್ದ ಉಸ್ಮಾನ್ ಉಸ್ತಾದ್ ಅವರಿಂದ ದಫ್ ತರಬೇತಿ ಪಡೆದ ಬಳಿಕ ಕೆ.ಇ. ಮುಹಮ್ಮದ್ ಪೂರ್ಣಪ್ರಮಾಣದಲ್ಲಿ "ದಫ್ ಉಸ್ತಾದ್' ಆಗಿ ನೂರಾರು ವಿದ್ಯಾರ್ಥಿಗಳಿಗೆ ದಫ್ ಕಲಿಸಿದರು. ತನ್ನ ಸುಶ್ರಾವ್ಯ ಕಂಠದಿಂದಾಗಿ ದಫ್ ಹಾಡುಗಾರರಾಗಿಯೂ ಮೆರೆದ ಅವರು ಬ್ಯಾರಿ, ಮಲಯಾಳಂ ಅಲ್ಲದೆ ಕನ್ನಡದಲ್ಲೂ ಹಾಡತೊಡಗಿದರು. ಹಾಡನ್ನೇ ಉಸಿರಾಗಿಸಿಕೊಂಡ ಅವರು ಪ್ರವಾದಿ ಮುಹಮ್ಮದ್ (ಸ.ಅ) ಅವರನ್ನು ಗುಣಗಾನ ಮಾಡುವ ಹಾಡನ್ನೂ ಸ್ವತಃ ರಚಿಸಿ ಹಾಡತೊಡಗಿದರು. ಮಂಗಳೂರು, ಬೆಂಗಳೂರು, ಪುತ್ತೂರು, ಸುಳ್ಯ, ಹುಬ್ಬಳ್ಳಿ, ಶಿರಸಿ, ಮತ್ತಿತರ ಕಡೆ ನಡೆಯುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಹಾಡತೊಡಗಿದರು. ಉತ್ತರ ಕರ್ನಾಟಕ ಭಾಗದ ಜನರು, ಸಂಘ ಸಂಸ್ಥೆಗಳು ಅವರ ಹಾಡಿಗೆ ವಿಶೇಷ ಮನ್ನಣೆ ನೀಡುತ್ತಿದ್ದರು. ಅಷ್ಟೇ ಅಲ್ಲ, ಅವರ ಪಾಲ್ಗೊಳ್ಳುವಿಕೆಗಾಗಿ ದಿನಾಂಕವನ್ನು ಮುಂಗಡವಾಗಿ ಕಾಯ್ದಿರಿಸುತ್ತಿದ್ದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿ, ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್ ಸಹಿತ ಹಲವು ಸಾಮಾಜಿಕ, ಧಾರ್ಮಿಕ ಸಂಘಟನೆಗಳು ಅವರನ್ನು ಸನ್ಮಾನಿಸಿದೆ. ಅವರ ನೇತೃತ್ವದ ತಂಡವು ಹಲವು ಸಂಸ್ಥೆಗಳು ಆಯೋಜಿಸಿದ ದಫ್ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ.

ಸುಮಾರು 38 ವರ್ಷಗಳ ಕಾಲ ದಫ್ ಹಾಡನ್ನೇ ಉಸಿರಾಗಿಸಿಕೊಂಡಿದ್ದ ಅವರು ಹಾಡುತ್ತಿರುವಾಗಲೇ ಅಂದರೆ 2016ರ ಮೇ 8ರಂದು ಪತ್ನಿ ಸಫಿಯಾ ಮತ್ತು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಬಿಟ್ಟಗಲಿದರು.

## ತಾಲೀಮು ಉಸ್ತಾದ್: ಹಾಜಿ ಇಬ್ರಾಹೀಂ ಬಡ್ಡೂರು



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೇರಮಜಲು ಗ್ರಾಮದ ಬಡ್ಡೂರ್ ಎಂಬಲ್ಲಿ ಮೊಯ್ದಿನಬ್ಬ ಬ್ಯಾರಿ–ಫಾತಿಮಾ ದಂಪತಿಯ ಪುತ್ರನಾಗಿ 1923ರ ಮಾರ್ಚ್ 10ರಂದು ಇಬ್ರಾಹೀಂ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಫರಂಗಿಪೇಟೆಯ ಪುದು ಮಾಪ್ಲಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಡೆದ ಅವರು ಬಳಿಕ ತನ್ನ ತಂದೆಯ ಕೆಲಸದಲ್ಲಿ ಕೈ ಜೋಡಿಸಲು ತೊಡಗಿದರು.

ಬಾಲ್ಯದಲ್ಲೇ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಜಾಯಮಾನ ಹೊಂದಿದ್ದ ಇಬ್ರಾಹೀಂ 1942ರಲ್ಲಿ ಸೈನ್ಯಕ್ಕೆ ಸೇರಿದರು. ನೆಲ್ಯಾಡಿಯ ಸೈನಿಕ ಕ್ಯಾಂಪ್‌ನಲ್ಲಿ ಸೈನ್ಯಾಧಿಕಾರಿಯೊಂದಿಗೆ ಕೂಡಿ ಕಾಡು ಮೃಗಗಳ ಬೇಟೆಯಾಡಿ "ಉತ್ತಮ ಬೇಟೆಗಾರ" ಎಂಬ ಖ್ಯಾತಿ ಹೊಂದಿದ್ದರು. ಮೂರು ವರುಷದಲ್ಲೇ ಸೈನ್ಯ ಬಿಟ್ಟು ಊರಿಗೆ ಬಂದು ಹಾಲಿನ ವ್ಯಾಪಾರ ಮಾಡತೊಡಗಿದರು. ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ ಸೈಕಲಿನಲ್ಲಿ ಮಂಗಳೂರಿನ ಸಣ್ಣ ಮತ್ತು ದೊಡ್ಡ ಹೊಟೇಲಿಗೆ ಹಾಲು ಸರಬರಾಜು ಮಾಡುತಿದ್ದರು.

ಹಾಗೇ "ಹಾಲಿನ ಇಬ್ರಾಯಾಕ" ಎಂದು ಗುರುತಿಸಲ್ಪಟ್ಟಿದ್ದ ಅವರು 1948ರಲ್ಲಿ ಫಾತಿಮಾರನ್ನು ವಿವಾಹವಾದರು. ಅವರ ಪತ್ನಿಯೂ ಧಾರ್ಮಿಕ ವಿದ್ಯೆ ಇದ್ದವರಾದ ಕಾರಣ ಗಂಡನಿಗೆ ಕಲಿಯಲು ಪ್ರೇರೇಪಿಸಿದರು. ಆ ಕಾಲದಲ್ಲಿ ಚೇತ್‌ಲತ್ ದ್ವೀಪದಿಂದ ವ್ಯಾಪಾರಕ್ಕೆ ಬರುತಿದ್ದ ಪೂಕೋಯಾ ಎಂಬವರು ಅವರ ಮನೆಯಲ್ಲೇ ವಾಸಿಸುತ್ತಿದ್ದರು. ಪೂಕೋಯಾ ವ್ಯಾಪಾರಿ ಮಾತ್ರವಲ್ಲ ಧಾರ್ಮಿಕ ಪಂಡಿತರೂ ಆಗಿದ್ದರು. ಅವರೊಂದಿಗೆ ಚರ್ಚಿಸಿ ಇಬ್ರಾಹೀಂ ಮೇರಮಜಲು, ಅರ್ಕುಳ ಗ್ರಾಮದ ಗಡಿಭಾಗದಲ್ಲಿ ಹಯಾತುಲ್ ಇಸ್ಲಾಂ ಮದ್ರಸ ಸ್ಥಾಪಿಸಿದರು. ಅರ್ಕುಳ, ನಿರುಮಾರ್ಗ, ಮಲ್ಲೂರ್ ದೆಮ್ಮಲೆಯ ಹಲವು ವಿದ್ಯಾರ್ಥಿಗಳು ಈ ಮದ್ರಸದಲ್ಲಿ ಧಾರ್ಮಿಕ ವಿದ್ಯೆ ಪಡೆದರು.

ಆ ಮದ್ರಸವು 1990ರಲ್ಲಿ ಮೇರಮಜಲಿನ ಬಡ್ಡೂರ್ ಎಂಬಲ್ಲಿಗೆ ಸ್ಥಳಾಂತರಗೊಂಡಿತು. ಅಲ್ಲಿ ಇಬ್ರಾಹೀಂ ಶ್ರಮಪಟ್ಟು ದಾನಿಗಳ ಸಹಕಾರದಿಂದ ನಾಲ್ಕು ಎಕ್ರೆ ಸ್ಥಳ ಖರೀದಿಸಿ ಒಂದೂವರೆ ಎಕ್ರೆ ಸ್ಥಳವನ್ನು ವಕ್ಫ್ ಮಾಡಿ ಮದ್ರಸ ಮತ್ತು ಜುಮಾ ಮಸೀದಿ ಸ್ಥಾಪಿಸಿದರು. ಉಳಿದ ಎರಡೂವರೆ ಎಕ್ರೆ ಸ್ಥಳವನ್ನು ಹಲವು ಬಡ ಕುಟುಂಬಗಳಿಗೆ ಮನೆಕಟ್ಟಿ ಕೂರಲು ನೀಡಿದರು.

1954ರಲ್ಲಿ ಸೈಯದ್ ಅಹ್ಮದ್ ಎಂಬ ತಾಲೀಂ ಉಸ್ತಾದ್‌ರಿಂದ ಊರಲ್ಲೇ ತಾಲೀಮು ಕಲಿತರು. ಬಳಿಕ ಒಬ್ಬ ಅದ್ಭುತ ತಾಲೀಮು ಪಟುವಾಗಿ ಕರ್ನಾಟಕ, ಕೇರಳ ಹಾಗೂ ದುಬೈಯಲ್ಲೂ ತರಬೇತಿ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಅಡ್ಯಾರ್, ಕಣ್ಣೂರ್, ವಳಚ್ಚಿಲ್, ಇನೋಳಿ, ತುಂಬೆ, ಮಿತ್ತಬೈಲ್, ಮಲ್ಲೂರ್, ಅಡ್ಡೂರು, ಕಲಾಯಿ, ಕಲ್ಲಡ್ಕ, ಅಜಿಲಮೊಗರು, ಪೆರ್ನೆ, ಕಲ್ಲೇಗ, ಪುತ್ತೂರು, ಬೈತಡ್ಕ, ಎನ್ಮೂರ್, ಪಂಜ ಹಾಗೂ ಕೇರಳದ ತಳಿಪರಂಬು, ಕಣ್ಣೂರಿನ ಕಾತಂಪಲ್ಲಿ, ಕಂಬಿಲ್‌ನಲ್ಲಿ  ತರಬೇತಿ ನೀಡಿ ಸಾವಿರಾರು ಶಿಷ್ಯರಿಗೆ ತಾಲೀಮು ಕಲಿಸಿದರು. ಅವರಲ್ಲಿ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಜಿ.ಎ. ಬಾವ ಕೂಡ ಒಬ್ಬರು.

1976ರಲ್ಲಿ ದುಬೈಗೆ ತೆರಳಿ ಅಲ್ಲಿ ಕೆಲಸ ಮಾಡುತ್ತಾ ಅರಬಿಗಳಿಗೂ ತಾಲೀಮು ತರಬೇತಿ ನೀಡಿದರು. 1982ರಲ್ಲಿ ಹಜ್ ಪೂರೈಸಿದರು. ಹಾಲು ವ್ಯಾಪಾರದ ಮಧ್ಯೆ ತಾಲೀಮು ಕಲಿಸುತ್ತಿದ್ದ ಕಾರಣ "ತಾಲೀಮು ಇಬ್ರಾಯಾಕ" ಎಂದೇ ಎಲ್ಲರೂ ಕರೆಯುತ್ತಿದ್ದರು.

ಪತ್ನಿ, ನಾಲ್ಕು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳು ಹಾಗೂ ನಲ್ವತ್ತೈದು ಮೊಮ್ಮಕ್ಕಳು ಹಾಗೂ ಹಲವು ಮರಿಮಕ್ಕಳನ್ನು ಕಂಡು ಸಂತೃಪ್ತ ಜೀವನ ನಡೆಸಿದ್ದ ಅವರು 2018ರ ಜುಲೈ 10ರಂದು ಇಹಲೋಕ ಯಾತ್ರೆಯನ್ನು ಕೊನೆಗೊಳಿಸಿದರು.

# ಯಕ್ಷಗಾನದಲ್ಲಿ ಮಿಂಚಿದ್ದ ಜೋಕಟ್ಟೆಯ ಗುತ್ತು ಬಿ. ಮುಹಮ್ಮದ್



ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆ ಸಮೀಪದ ಕೊಂಚಾರ್ ಮೂಲದ ಬೈಕಂಪಾಡಿ ಬಳಿಯ ಜೋಕಟ್ಟೆ ಗುತ್ತು ಮನೆತನದ ಬಜ್ಪೆ ಜಕ್ರಿ ಬ್ಯಾರಿ–ಖತೀಜಮ್ಮ ದಂಪತಿಯ ಪುತ್ರನಾಗಿ 1943ರ ಅಕ್ಟೋಬರ್ 15ರಂದು ಜನಿಸಿದ ಬಿ. ಮುಹಮ್ಮದ್ ಜೋಕಟ್ಟೆ ಯಕ್ಷಗಾನದ ಭೀಷ್ಮ ಎಂದೇ ಪ್ರಸಿದ್ಧರು.

ಪಿಯುಸಿವರೆಗೆ ಕಲಿತಿದ್ದ ಅವರು ಕೃಷಿಯೊಂದಿಗೆ ಯಕ್ಷಗಾನ ಮತ್ತು ಸಮಾಜ ಸೇವೆಯನ್ನು ಹವ್ಯಾಸವಾಗಿಸಿಕೊಂಡರು. ಯಕ್ಷಗಾನಕ್ಕೂ ಬ್ಯಾರಿಗಳಿಗೂ ಅಜಗಜಾಂತರವಿದೆ. ಆದರೆ ಯಕ್ಷಗಾನ ಕ್ಷೇತ್ರವನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಗುತ್ತು ಬಿ. ಮುಹಮ್ಮದ್ ಹಾಜಿ ಸುಮಾರು 45 ವರ್ಷಗಳ ಕಾಲ ಯಕ್ಷಗಾನದಲ್ಲಿ ತೊಡಗಿಸಿಕೊಂಡು ಗಮನ ಸೆಳೆದರು.

ಗುತ್ತುಮನೆತನದಲ್ಲಿ ಹುಟ್ಟಿ ಬೆಳೆದು ಜೋಕಟ್ಟೆಯ ಅಭಿವೃದ್ಧಿಗೆ ಶ್ರಮಿಸಿದ್ದ ಅವರು ಧಾರ್ಮಿಕ ಮತ್ತು ರಾಜಕೀಯವಾಗಿಯೂ ಸಕ್ರಿಯರಾಗಿದ್ದರು. ಜೋಕಟ್ಟೆಯ ಯುವಕ ಮಂಡಲದ ಅಧ್ಯಕ್ಷ, ಜೋಕಟ್ಟೆ ಗ್ರಾಮ ಪಂಚಾಯತ್ ಅಧ್ಯಕ್ಷ, ಬಾಳ ಮಂಡಲ ಪಂಚಾಯತ್ ಸದಸ್ಯ, ಸುರತ್ಕಲ್ ಪರಿಸರದ ಹದಿನಾರು ಜಮಾಅತ್ ಒಕ್ಕೂಟದ ಅಧ್ಯಕ್ಷ, ಜೋಕಟ್ಟೆಯ ಮುಹಿಯದ್ದೀನ್ ಹೊಸ ಜುಮಾ ಮಸೀದಿಯ ಆಡಳಿತ ಸಮಿತಿಯಲ್ಲಿ ಸುದೀರ್ಘ ಕಾಲ ಸೇವೆಗೈದ ಅವರು ಅಂಜುಮಾನ್ ಖುವ್ವತುಲ್ ಇಸ್ಲಾಮ್ ಸಂಸ್ಥೆಯ ಅಧ್ಯಕ್ಷರಾಗಿ, ಅಂಜುಮಾನ್ ವಿದ್ಯಾಸಂಸ್ಥೆಯ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದರು.

ಅರ್ಥದಾರಿಯಾಗಿ ತಾಳಮದ್ದಳೆ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದ ಹಿರಿಯ ಕಲಾವಿದರಾಗಿದ್ದ ಪೊರ್ಕೋಡಿ ಸುಂದರ ಶೆಟ್ಟಿ ಮತ್ತು ಬಾಳ ಕೆ. ರಮನಾಥ ರಾಯರನ್ನು ಗುರುಗಳಾಗಿ ಅವರು ಸ್ವೀಕರಿಸಿದ್ದರು. ಸಂಧಾನದ ದ್ರೌಪದಿ, ಭೀಮ, ಕೌರವ, ಪರ್ವದ ಕರ್ಣ, ಕೃಷ್ಣ, ವಾಲಿವಧೆಯ ವಾಲಿ ಮತ್ತಿತರ ಪಾತ್ರಗಳನ್ನು ಮಾಡಿದ್ದರು. ಉತ್ತಮವಾದ ತೂಕವುಳ್ಳ ಮಾತು, ಕಂಠದಿಂದಾಗಿ ತುಳುನಾಡಿನ ಸೌಹಾರ್ದ, ಸಂಸ್ಕೃತಿಯ ಉಚ್ರಾಯ ಕಾಲದ ಕೊಂಡಿಯಂತಿದ್ದ ಗುತ್ತು ಮುಹಮ್ಮದರು ಮಾತಿಗೆ ಸಿಕ್ಕಿದಾಗಲೆಲ್ಲ ತಮ್ಮ ಯೌವ್ವನ ಕಾಲದ ಕಾರುಬಾರಿನ ಕತೆಗಳನ್ನು ಹೇಳುತ್ತಿದ್ದರು. ಅದು ಆ ಕಾಲದ ತುಳುನಾಡಿನ ಜನರ ಸಹಜ ಸೌಹಾರ್ದತೆಯ ಬದುಕಿನ ಕತೆಗಳೇ ಆಗಿರುತ್ತಿದ್ದವು.

ಗುತ್ತು ಮುಹಮ್ಮದರನ್ನು, ಮುಹಮ್ಮದ್ ಎಂದು ಕರೆಯುತ್ತಿದ್ದುದಕ್ಕಿಂತಲೂ ಭೀಷ್ಮ ಎಂಬ ಮಹಾಭಾರತದ ಪಾತ್ರದ ಹೆಸರಿನಲ್ಲೇ ಹೆಚ್ಚು ಜನಪ್ರಿಯರಾಗಿದ್ದರು. "ಭೀಷ್ಮ" ಎಂಬ ಪರ್ಯಾಯ ಹೆಸರಲ್ಲಿ ಅವರು ಜನಪ್ರಿಯರಾಗಲು ಕಾರಣ, ಹವ್ಯಾಸಕ್ಕಾಗಿ ಯಕ್ಷಗಾನದಲ್ಲಿ ಹಾಕುತ್ತಿದ್ದ ಭೀಷ್ಮಾಚಾರ್ಯರ ಪಾತ್ರವಾಗಿತ್ತು. ಮುಹಮ್ಮದರ ಭೀಷ್ಮ ಪಾತ್ರ ಊರಿನ ಗಡಿ ದಾಟಿ ಮುಂಬೈವರೆಗೂ ಖ್ಯಾತವಾಗಿತ್ತು ಎಂದು ಅವರ ಸಮಕಾಲೀನರು ನೆನಪಿಸಿಕೊಳ್ಳುತ್ತಾರೆ.

ಮುಂಬೈಯ ಕಲಾ ಪ್ರಕಾರ ಪ್ರತಿಷ್ಠಾನ (ರಿ), ಉಡುಪಿಯಲ್ಲಿ ನಡೆದ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನ, ಮೊಡಂಕಾಪುವಿನಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ 11ನೆ ಸಾಹಿತ್ಯ ಸಮ್ಮೇಳನ, ಕದ್ರಿಯ ಹವ್ಯಾಸಿ ಬಳಗ, ಉಜಿರೆಯ ಯಕ್ಷಪ್ರಭಾ, ಹಳೆಯಂಗಡಿಯಲ್ಲಿ ನಡದ 14ನೆ ಸರ್ವಧರ್ಮ ಸಮ್ಮೇಳನ, ಕಾವೇರಿ ಯುವಕ ಮಂಡಲ, ಸುರತ್ಕಲ್‌ನ ಶ್ರೀ ಚಾಮುಂಡೇಶ್ವರಿ ಮಹಾಗಣಪತಿ ಯಕ್ಷಗಾನ ಮಂಡಳಿ, ಶೇಣಿ ಶತಮಾನೋತ್ಸವದ ಸಂದರ್ಭ 2018ರಲ್ಲಿ ಕಲ್ಕೂರಾ ಪ್ರತಿಷ್ಠಾನದಿಂದ ಸನ್ಮಾನಿತರಾಗಿದ್ದರು.

2020ರ ಆಗಸ್ಟ್ 13ರಂದು ಪತ್ನಿ, ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅವರು ಬಿಟ್ಟಗಲಿದರು.

## ಗಾಂಧಿ ಅಜ್ಜ ಖ್ಯಾತಿಯ ಎಂ. ಅಹ್ಮದ್ ಕುಂಞಿ ಮರಿಕ್ಕಳ



ಸ್ವಾತಂತ್ರ್ಯ ಹೋರಾಟರಂಗದಲ್ಲಿ ಭಾಗಿಯಾಗಿದ್ದ ಬ್ಯಾರಿಗಳ ಹೆಸರು ಮೂಲೆಗುಂಪು ಮಾಡಲಾಗಿದೆ ಎಂದು ಅಪವಾದ ಹೊರಿಸುವುದಕ್ಕಿಂತ ಅವರ ದಾಖಲೆಗಳನ್ನು ಸಂಗ್ರಹಿಸಿಡುವುದರಲ್ಲಿ ಬ್ಯಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂಬುವುದು ವಾಸ್ತವ. ಅಂತಹ ನೂರಾರು ಬ್ಯಾರಿಗಳ ಪೈಕಿ "ಗಾಂಧಿ ಅಜ್ಜ" ಎಂದು ಕರೆಯಲ್ಪಡುತ್ತಿದ್ದ ಎಂ.ಅಹ್ಮದ್ ಕುಂಞಿ ಕೂಡ ಒಬ್ಬರು.

ಬಂಟ್ವಾಳ ತಾಲೂಕಿನ ನರಿಂಗಾನ ಗ್ರಾಮದ ಮರಿಕ್ಕಳ ಎಲಿಮಲೆ ಕುಟುಂಬದ ಕೃಷಿಕ ಮುಹಮ್ಮದ್ ಬ್ಯಾರಿ–ಖತೀಜಮ್ಮ ದಂಪತಿಯ ಹಿರಿಯ ಮಗನಾಗಿ 1907ರಲ್ಲಿ ಹೊಸಮನೆ ತರವಾಡಿನಲ್ಲಿ ಜನಿಸಿದ ಅಹ್ಮದ್ ಕುಂಞಿ ಮೊಂಟೆಪದವಿನ ಪ್ರಾಥಮಿಕ ಶಾಲೆಯಲ್ಲಿ ಏಳನೇ ತರಗತಿ ಪೂರೈಸಿದರು. ಶಿಕ್ಷಣ ಮುಂದುವರಿಸಲು ಆಸಕ್ತಿ ಇದ್ದರೂ ಕೂಡ ಸೂಕ್ತ ಸೌಕರ್ಯ ಇಲ್ಲದ ಕಾರಣ ತಂದೆಯೊಂದಿಗೆ ಕೃಷಿ ರಂಗಕ್ಕೆ ಇಳಿದರು.

ಗಾಂಧಿಜಿಯ ಆಗಮನದೊಂದಿಗೆ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮವೂ ತೀವ್ರತೆ ಪಡೆದುಕೊಳ್ಳುತಿದ್ದಂತೆಯೇ ಮುಂಬೈ, ಮದ್ರಾಸ್, ಮೈಸೂರು, ದೆಹಲಿ, ಕಲ್ಕತ್ತ, ಮಲಬಾರ್ ಭಾಗಗಳಲ್ಲಿ ಅದರ ಕಿಚ್ಚು ಹರಡಲಾರಂಭಿಸಿತು. ಆ ಕಾರಣದಿಂದ ಮಂಗಳೂರು, ಪುತ್ತೂರು, ಪಾಣೆಮಂಗಳೂರು, ಫರಂಗಿಪೇಟೆಯಲ್ಲಿ ಸಣ್ಣ ರೀತಿಯಲ್ಲಿ ಹೋರಾಟಕ್ಕೆ ಚಾಲನೆ ಆರಂಭವಾಯಿತು. ಫರಂಗಿಪೇಟೆಯ ಡಾ.ಎಫ್.ಎಚ್. ಒಡೆಯರ್ ಖಿಲಾಫತ್ ಚಳುವಳಿಯ ನೇತೃತ್ವ ವಹಿಸಿ ಹಳ್ಳಿ ಹಳ್ಳಿಗೆ ತೆರಳಿ ಭಾಷಣ ಮಾಡುತ್ತಿದ್ದರು. ಉಪ್ಪಿನಂಗಡಿಯ ಹಕೀಂ ಹಾಜಿ, ಪುತ್ತೂರಿನ ಸಾಲ್ಮರ ಅಬ್ಬುಚ್ಚ, ಕಾರ್ನಾಡ್ ಸದಾಶಿವ ರಾವ್, ಉಳ್ಳಾಲ ಶ್ರೀನಿವಾಸ ಮಲ್ಯ ಹೀಗೆ ಹಲವು ಯುವ ನೇತಾರರು ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರಾಗಿದ್ದರು.

1920 ಮತ್ತು 1927ರಲ್ಲಿ ಗಾಂಧೀಜಿ ಮಂಗಳೂರಿಗೆ ಆಗಮಿಸಿದಾಗ ಸಂಚಾರ ಸೌಕರ್ಯದ ಕೊರತೆಯಿಂದ ಅಹ್ಮದ್ ಕುಂಞಿಗೆ ಗಾಂಧೀಜಿಯನ್ನು ಮುಖತಃ ಭೇಟಿ ಮಾಡಲಾಗಲಿಲ್ಲ. ಆದರೂ ಸಹ ಊರಿನಲ್ಲಿ ನಡೆಯುವ ಹೋರಾಟದ ಸಭೆಗಳಲ್ಲಿ ಭಾಗವಹಿಸುವುದು, ಕರಪತ್ರಗಳನ್ನು ಹಂಚುವುದು, ಜನರನ್ನು ಒಗ್ಗೂಡಿಸುವುದನ್ನು ನಿರಂತರವಾಗಿ ಮಾಡುತಿದ್ದರು. 1934ರಲ್ಲಿ ಮಹಾತ್ಮಾ ಗಾಂಧಿಜಿಯವರು ಪುತ್ತೂರಿಗೆ ಬರಲಿರುವರೆಂಬ ಸುದ್ದಿ ತಿಳಿದ ಕೂಡಲೇ ಗಾಂಧಿಜಿಯನ್ನು ಭೇಟಿಯಾಗಲು ಪುತ್ತೂರಿಗೆ ನಡೆದುಕೊಂಡೇ ಹೋಗಿದ್ದರು. ಅಲ್ಲಿ ಆಶ್ವಥ ಮರದ ಕೆಳಗೆ ಗಾಂಧಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದ್ದನ್ನು ಆಲಿಸಿ ಭಾವುಕರಾಗಿ ಮುಂದೆ ಕಾಸರಗೋಡು, ಮಂಜೇಶ್ವರ, ಹೊಸಂಗಡಿ, ಮಂಗಳೂರು ಭಾಗದಲ್ಲಿ ಸೇರುವ ಎಲ್ಲಾ ಸಭೆಗಳಲ್ಲಿ ಭಾಗವಹಿಸಿ ಸಕ್ರಿಯರಾದರು. ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ 1942ರಂದು ಎಂ.ಡಿ. ಅಧಿಕಾರಿಯ ನೇತೃತ್ವದಲ್ಲಿ ಮಂಗಳೂರಿನ ನೆಹರೂ ಮೈದಾನದಲ್ಲಿ ಆಯೋಜಿಸಿದ್ದ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹದಲ್ಲಿಯೂ ಭಾಗವಹಿಸಿದ್ದರು. ಬಿ.ವಿ.ಕಕ್ಕಿಲಾಯ, ಬಿ.ಎಂ. ಇದ್ದಿನಬ್ಬ, ನಾರಾಯಣ ಉಚ್ಚಿಲ್, ಡಾ. ಸದಾಶಿವ ರಾವ್ ಹೋರಾಟ ರಂಗದ ಆತ್ಮೀಯ ಗೆಳೆಯರಾಗಿದ್ದರು.

ಜಮೀನ್ದಾರಿ ಕುಟುಂಬಸ್ಥರಾದ ಕಾರಣ ಕಾಡುತ್ಪತ್ತಿ ಗುತ್ತೆದಾರರಾಗಿ ಹಾಸನ–ಸಕಲೇಶಪುರ, ಉದನೆ–ನೆಲ್ಯಾಡಿ, ಪುತ್ತೂರು–ಕಡಬ, ಮೈಸೂರು, ಮಡಿಕೇರಿ, ಬೆಂಗಳೂರು ಕಡೆಗಳಲ್ಲಿ ಕೆಲಸ ಮಾಡಿದ್ದರು.


ಒಳ್ಳೆಯ ಭಾಷಣಗಾರರಾಗಿದ್ದ ಅವರು ನಿರಂತರ ಪತ್ರಿಕೆ ಪುಸ್ತಕಗಳನ್ನು ಓದುತ್ತಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯರಾಗಿದ್ದರು. ಗೆಳೆಯರಿಂದಾಗಿ ಎಡ ಸಿದ್ದಾಂತಕ್ಕೆ ಆಕರ್ಷಿತರಾಗಿ 1952ರಲ್ಲಿ ಕಮ್ಯುನಿಸ್ಟ್ (ಸಿಪಿಐಎಂ) ಪಕ್ಷ ಸೇರಿದರು. 1950ರಿಂದ ಪ್ರಾರಂಭಗೊಂಡ ರೈತ ಚಳುವಳಿಯ ಭಾಗವಾಗಿ ಮಂಗಳೂರಿನಿಂದ ಬೆಂಗಳೂರಿನವರೆಗೆ ಕೈಗೊಂಡ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಅದರ ಹೋರಾಟದ ಭಾಗವಾಗಿ ಜೈಲಿನಲ್ಲಿ ಬಂಧಿಯಾದರು.

ಅಪ್ಪಟ ಮಾನವತಾವಾದಿಯಾಗಿದ್ದ ಅವರು ಸಮಾಜ ಸೇವಕರೂ ಆಗಿದ್ದರು. ಹಿಂದೂ ಮುಸ್ಲಿಮರ ನಡುವೆ ಭಾವೈಕ್ಯತೆಯನ್ನು ಉಂಟು ಮಾಡುವ ಕೆಲಸ ನಿರಂತರವಾಗಿ ಮಾಡುತಿದ್ದರು ಎಂದು ಅವರ ಗೆಳೆಯ ವೆಂಕಪ್ಪ ಶೆಟ್ಟರ್ ಮೋರ್ಲ ನೆನಪು ಹಂಚಿಕೊಳ್ಳುತ್ತಾರೆ.

ಸುಳ್ಯದ ಸೂರ್ಯ ನಾರಾಯಣ, ಮಾಜಿ ಶಾಸಕರಾದ ರಾಮಚಂದ್ರ ರಾವ್, ಯು.ಟಿ. ಫರೀದ್, ಎ.ಕೃಷ್ಣ ಶೆಟ್ಟಿ, ಮಹಾಬಲೇಶ್ವರ ಭಟ್, ಪಾವೂರು ಗುತ್ತು ಬಾಲಪ್ಪ ಶೆಟ್ಟಿ ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ಮರಿಕ್ಕಳ ಜುಮಾ ಮಸೀದಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಸ್ವಾತಂತ್ರ್ಯೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಸನ್ಮಾನಗಳನ್ನು ಸ್ವೀಕರಿಸಿದ್ದರು.

ಸ್ವಾತಂತ್ರ್ಯೋತ್ಸವದಂದು ಧ್ವಜಾರೋಹಣ ಮಾಡಲು ಮನೆ ಸಮೀಪದ ಶಾಲೆಯತ್ತ ಬರುತ್ತಿದ್ದಾಗಲೇ ತಲೆ ತಿರುಗಿ ಬಿದ್ದು ಸ್ವಲ್ಪ ಕಾಲ ಅನಾರೋಗ್ಯದಿಂದ್ದ ಅವರು 2008ರ ಅಕ್ಟೋಬರ್ 21ರಂದು ನಿಧನರಾದರು. ಅವರಿಗೆ ಇಬ್ಬರು ಪತ್ನಿಯರಲ್ಲಿ ಮೂವರು ಗಂಡು ಮಕ್ಕಳಿದ್ದರು.

## ಕಸ್ಬ ಬೆಂಗ್ರೆಯ ಶೈಕ್ಷಣಿಕ ಹರಿಕಾರ ಉಸ್ತಾದ್ ಕೆ.ಪಿ. ಇಸ್ಮಾಯಿಲ್



ಮಂಗಳೂರಿನ ಹಳೆಯ ಬಂದರಿನ ಅನತಿ ದೂರದಲ್ಲಿರುವ ಕಸ್ಬಾ ಬೆಂಗರೆಯಲ್ಲಿ ಶಿಕ್ಷಣ ಕ್ರಾಂತಿಗೆ ಮುನ್ನುಡಿ ಬರೆದ ಕೆ.ಪಿ. ಇಸ್ಮಾಯೀಲ್ ಉಸ್ತಾದ್ 20.5.1946ರಂದು ಪುತ್ತೂರಿನ ಕುಂಜೂರು ಪಂಜ ಎಂಬಲ್ಲಿ ಕೆ.ಪಿ. ಅಬ್ದುಲ್ಲ ಪುತ್ತೂರು ಅವರ ಮೊದಲನೇ ಪತ್ನಿ ಆಮಿನಾರ ನಾಲ್ಕು ಮಕ್ಕಳಲ್ಲಿ ಹಿರಿಯ ಮಗನಾಗಿ ಜನಿಸಿದರು.

ಪುತ್ತೂರಿನ ಫಿಲೋಮಿನಾ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ತಿಗೊಳಿಸಿ ಉನ್ನತ ಶಿಕ್ಷಣಕ್ಕಾಗಿ ಕಾಸರಗೋಡಿನ ಆಲಿಯಾ ಅರಬಿಕ್ ಕಾಲೇಜು ಸೇರಿ ಧಾರ್ಮಿಕ ಜ್ಞಾನದ ಜೊತೆಗೆ ಅರಬಿಕ್ ಪಾಂಡಿತ್ಯವನ್ನು ಗಳಿಸಿದರು. ಸಣ್ಣ ಪ್ರಾಯದಲ್ಲೇ ತಾಯಿಯನ್ನು ಕಳಕೊಂಡ ಅವರು ಉಪ್ಪಿನಂಗಡಿಯ ಹಿರಿಯ ಸಹೋದರಿಯ ಮನೆಯಲ್ಲಿ ಬಾಲ್ಯ ಮತ್ತು ಯವ್ವನವನ್ನು ಕಳೆದರು.

ಉಪ್ಪಿನಂಗಡಿಯ ಅಲ್ ಹುದಾ ಇಸ್ಲಾಮಿಕ್ ಮದ್ರಸದಲ್ಲಿ ಅಧ್ಯಾಪಕನಾಗಿ ಮತ್ತು ಮಸೀದಿಯ ಖತೀಬರಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ ಅವರು 1982–83ರಲ್ಲಿ ಉಪ್ಪಿನಂಗಡಿ, ಮೂಡಿಗೆರೆ ಮತ್ತು ಘಟ್ಟ ಪ್ರದೇಶದಲ್ಲಿ ಹೊಟೇಲ್ ಉದ್ಯಮದಲ್ಲಿ ತೊಡಗಿಸಿಕೊಂಡರು. ಹಾಗೇ ಬಿಡುವಿನ ವೇಳೆ ಅಲ್ಲಿನ ಜನಸಾಮಾನ್ಯರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಅಕ್ಷರ ಜ್ಞಾನವನ್ನು ಕಲಿಸತೊಡಗಿದರು. ಆ ಕಾಲದಲ್ಲಿ ಕಾಫಿ ಬೆಳೆಗೆ ವಿಪರೀತ ಏರಿಕೆ ಆದ ಕಾರಣ ಹೊಟೇಲ್ ಉದ್ಯಮದಲ್ಲಿ ನಷ್ಟ ಹೊಂದಿದರು.

1983ರ ಬಳಿಕ ಹುಟ್ಟೂರು ಉಪ್ಪಿನಂಗಡಿಯನ್ನು ತೊರೆದು ಮಂಗಳೂರಿನ ಕುದ್ರೋಳಿಯ ಇಸ್ಲಾಮಿಯ ಮದ್ರಸದಲ್ಲಿ ಏಳೆಂಟು ವರ್ಷಗಳ ಕಾಲ ಅಧ್ಯಾಪಕನಾಗಿ ಸೇವೆ ಸಲ್ಲಿಸಿದರು. ಉಪ್ಪಿನಂಗಡಿಯ ಮೇಲ್ಮನೆಯ ಯು.ಕೆ. ಅಬೂಬಕರ್ ಮತ್ತು ಹಲಿಮಮ್ಮರ ಮಗಳಾದ ಝೊಹರಾಳನ್ನು ವಿವಾಹವಾಗಿ 1984ರಲ್ಲಿ ಕುಟುಂಬ ಸಮೇತ ಬೆಂಗರೆ ಕಸ್ಬಾ ಎಂಬ ದ್ವೀಪಕ್ಕೆ ತೆರಳಿ ಸಣ್ಣ ಬಾಡಿಗೆ ಮನೆಯೊಂದರಲ್ಲಿ ವಾಸ್ತವ್ಯ ಆರಂಭಿಸಿದರು.

ಅಂದು ಬೆಂಗರೆಯು ಆರ್ಥಿಕ ಮತ್ತು ಸಾಮಾಜಿಕವಾಗಿ ತೀರಾ ಹಿಂದುಳಿದಿತ್ತು. ವಲಸಿಗರಾದ ಕೆಲವು ಮೀನುಗಾರರ ಕುಟುಂಬದ ಮನೆಗಳು ಅಲ್ಲಲ್ಲಿ ಕಂಡು ಬರುತ್ತಿತ್ತು. ಹಾಗಾಗಿ ಅಲ್ಲಿ ಶೈಕ್ಷಣಿಕ ಬೆಳವಣಿಗೆಯು ಕನಸಿನ ಮಾತಾಗಿತ್ತು. ದೋಣಿ ದಾಟಿ ಮಂಗಳೂರಿಗೆ ಶಾಲೆಗೆ ಬರುವುದು ಕಷ್ಟಕರವಾದ್ದರಿಂದ ಉನ್ನತ ಶಿಕ್ಷಣವು ಗಗನಕುಸುಮವಾಗಿತ್ತು. ಹಾಗಾಗಿ ಆರಂಭದಲ್ಲಿ ಮನೆಯಲ್ಲಿಯೇ ಊರಿನ ಸುತ್ತಮುತ್ತಲ ಪ್ರದೇಶದ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನು ಆರಂಭಿಸಿದ ಉಸ್ತಾದ್ ಕೆ.ಪಿ. ಇಸ್ಮಾಯೀಲ್ ಉರ್ದುವನ್ನೂ ಕಲಿಸತೊಡಗಿದರು. ಸ್ಥಳೀಯ ಮಸೀದಿಯ ಖತೀಬರು, ಉಸ್ತಾದರು ಕೂಡ ಅವರ ಈ ಉರ್ದು ತರಗತಿಯ ವಿದ್ಯಾರ್ಥಿಗಳಾಗಿದ್ದರು. ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಳವಾಗುವುದನ್ನು ಗಮನಿಸಿದ ಹಿತೈಷಿಯೊಬ್ಬರು ತನ್ನ ಮನೆಯ ಬಳಿ ಇರುವ ಸಣ್ಣ ಕೋಣೆಯೊಂದನ್ನು ಕಲಿಕಾ ಚಟುವಟಿಕೆಗೆ ಉಚಿತವಾಗಿ ನೀಡಿದರು. ಈ ಮಧ್ಯೆ ಇದೇ ಪರಿಸರದ ಹುಸೇನ್ ಎಂಬವರು ಮನೆ ಮಾರಾಟ ಮಾಡುವ ವಿಚಾರ ತಿಳಿದು ದಾನಿಗಳ ನೆರವಿನಿಂದ ಅದನ್ನು ಖರೀದಿಸಿದರು. ಹಾಗೇ ಆ ಮನೆಯಲ್ಲಿ ಮದ್ರಸ ಶಿಕ್ಷಣ ಮುಂದುವರಿಸಿದರು. ಹದಿನೈದು ಮಕ್ಕಳಿಂದ ಆರಂಭವಾದ ಮದ್ರಸದಲ್ಲಿ ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚತೊಡಗಿತು. ಹಾಗಾಗಿ ಸ್ಥಳ ಸಾಕಾಗದ ಕಾರಣ ಮುಂದಿನ ಯೋಜನೆಗಾಗಿ ಕಮಿಟಿಯೊಂದನ್ನು ಸ್ಥಾಪಿಸಿದರು. ಮೀನುಗಾರರು ಮತ್ತು ದಿನಕೂಲಿಗರಿರುವ ಅತ್ಯಂತ ಕಡು ಬಡವರೇ ಹೆಚ್ಚಾಗಿರುವ ಆ ಪ್ರದೇಶದಲ್ಲಿ ಸಮಾಜ ಸೇವೆಯಲ್ಲಿ ಸಕ್ರಿಯವಾಗಬೇಕಾದ ಅನಿವಾರ್ಯತೆ ಹೆಚ್ಚಾಗಿತ್ತು. ಕಡು ಬಡತನದಲ್ಲಿ ದಿನ ದೂಡುತ್ತಿದ್ದ ಹೆಚ್ಚಿನವರು ತೆಂಗಿನ ಗರಿಗಳಂದ ಕಟ್ಟಿದ ಗುಡಿಸಲಿನಲ್ಲಿ ವಾಸಿಸುತಿದ್ದರು. ನೂರಾರು ಮನೆಗಳಿಗೆ ಶೌಚಾಲಯಗಳೇ ಇರಲಿಲ್ಲ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಉಸ್ತಾದರು ಜನಸೇವಾ ರಂಗಕ್ಕೆ ಮತ್ತು ಊರಿನ ಅಭಿವೃದ್ಧಿಗಾಗಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

ಮಕ್ಕಳ ಶಿಕ್ಷಣ ಸೌಲಭ್ಯಕ್ಕಾಗಿ ಉಚಿತ ಪುಸ್ತಕ ವಿತರಣೆ, ಸಾಮೂಹಿಕ ಫಿತ್ರ್ ಝಕಾತ್, ಸಾಮೂಹಿಕ ಕುರ್ಬಾನಿ, ನಿರಾಶ್ರಿತರಿಗೆ ವಸತಿ ಯೋಜನೆ, ಮನೆ ದುರಸ್ತಿ, ಶೌಚಾಲಯ ನಿರ್ಮಾಣ, ಮಾಸಿಕ ಆಹಾರ ಸಾಮಾಗ್ರಿಗಳ ವಿತರಣೆ ಹೀಗೆ ಸಮಾಜ ಸೇವೆಯ ಮೂಲಕ ಜನರ ಪ್ರೀತಿಗೆ ಪಾತ್ರರಾದರು. ಅಲ್ಲದೆ ಹೆಣ್ಣು ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ಶ್ರಮಿಸಿದರು. ಅರ್ಧದಲ್ಲಿ ಶಾಲೆ ತೊರೆಯುತ್ತಿದ್ದ ಗಂಡು ಮಕ್ಕಳನ್ನು ಉನ್ನತ ಶಿಕ್ಷಣಕ್ಕಾಗಿ ಪ್ರೇರೇಪಿಸುತ್ತಿದ್ದರು. ಮಕ್ಕಳ ಶಿಕ್ಷಣ ಸೌಲಭ್ಯಕ್ಕಾಗಿ ದೇಣಿಗೆಗಳನ್ನು ಸಂಗ್ರಹಿಸುತ್ತಿದ್ದರು. ಹೀಗೆ ಶೈಕ್ಷಣಿಕ ರಂಗಕ್ಕೆ ಅವರು ನೀಡಿದ ಕೊಡುಗೆ ಅಪಾರ.

ಊರಿನ ಸಾಮಾಜಿಕ ಶೈಕ್ಷಣಿಕ ಬೆಳವಣಿಗೆಗೆ ಆಧಾರಸ್ತಂಭವಾದರು. ಜನಸಾಮಾನ್ಯರು ಯಾವುದೇ ಕಷ್ಟ ಕಾರ್ಪಣ್ಯಕ್ಕಾಗಿ ತನ್ನ ಬಳಿ ಬಂದರೂ ಅದನ್ನು ನಿರಾಕರಿಸದೆ ನೆರವೇರಿಸಿ ಕೊಡುತ್ತಿದ್ದರು.

ಬೆಂಗ್ರೆಯಿಂದ ಮಂಗಳೂರಿನ ವಿವಿಧ ಶಾಲೆಗಳಿಗೆ ನೂರಾರು ಮಕ್ಕಳನ್ನು ಹೊತ್ತ ದೋಣಿಯು 1992ರ ಜೂನ್ 15ರಂದು


ಮಗುಚಿದ ಪರಿಣಾಮ ಹನ್ನೆರಡು ಮಕ್ಕಳು ಬಲಿಯಾದರು. ಇದರಿಂದ ನೊಂದ ಉಸ್ತಾದ್ ಇಸ್ಮಾಯೀಲ್ ಬೆಂಗ್ರೆ ಪ್ರದೇಶದ ಮಕ್ಕಳಿಗಾಗಿ ಸುಸಜ್ಜಿತ ಇಂಗ್ಲಿಷ್ ಶಿಕ್ಷಣ ಸಂಸ್ಥೆಯನ್ನು ತೆರೆಯಲು ನಿರ್ಧರಿಸಿದರು. ಹಲವು ದಾನಿಗಳ ನೆರವಿನಿಂದ ಎಆರ್‌ಕೆ ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ಆರಂಭಿಸಿದರು.

1995ರಲ್ಲಿ ಇಸ್ಲಾಮಿಕ್ ವೆಲ್ಫೇರ್ ಸೆಂಟರ್ ಎಂಬ ಸಂಸ್ಥೆಯನ್ನು ರಚಿಸಿದರು. 2003ರಲ್ಲಿ ಬ್ಯಾರಿ–ಕನ್ನಡ ಭಾಷೆಯಲ್ಲಿ ಪ್ರವಚನ ನೀಡುವ ಅನಸ್ ಬಿನ್ ಮಾಲಿಕ್ ಎಂಬ ಮಸೀದಿಯನ್ನು ಸ್ಥಾಪಿಸಲು ಪ್ರಮುಖ ಕಾರಣಕರ್ತರಾದರು. ಅವರ ನಿಸ್ವಾರ್ಥ ಶ್ರಮದ ಫಲವಾಗಿ ಸಾರ್ವಜನಿಕ ಗ್ರಂಥಾಲಯ, ಮದ್ರಸ, ಮಸೀದಿ, ಅನ್ಸಾರ್ ಸೇವಾ ಘಟಕ ಇತ್ಯಾದಿ ಸಹಿತ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ರಂಗದಲ್ಲಿ ಬೆಂಗ್ರೆ ಕಸ್ಬ ಪ್ರದೇಶವು ಉತ್ತಮವಾಗಿ ಬೆಳೆದು ನಿಂತಿದೆ.

ಸರಳ ಸಜ್ಜನಿಕೆಯ ಅವರ ನಡೆನುಡಿಯು ಎಲ್ಲ ಕಾಲದವರಿಗೂ ಮಾದರಿ ಯೋಗ್ಯವಾಗಿತ್ತು. ಅವರ ಸೌಮ್ಯತೆ, ಮಂದಹಾಸ ಎಂದಿಗೂ ಆದರ್ಶವಾಗಿತ್ತು. ಅವರಲ್ಲಿ ಶಿಕ್ಷಣ ಪಡೆದ ದೊಡ್ಡ ವರ್ಗವೇ ಇದೆ. ಇಸ್ಲಾಮಿ ಆಂದೋಲನದ ಹೋರಾಟದಲ್ಲಿಯೂ ಮುಂಚೂಣಿಯಲ್ಲಿದ್ದರು. ಕೆಲ ವರ್ಷಗಳ ಕಾಲ ಬೆಂಗ್ರೆಯ ಅಲ್ ಮದ್ರಸತುಲ್ ಇಸ್ಲಾಮಿಯಾದಲ್ಲಿ ಅಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಹೀಗೆ ಪುತ್ತೂರಿನಲ್ಲಿ ಹುಟ್ಟಿ ಬೆಳೆದು ದ್ವೀಪ ಪ್ರದೇಶವಾದ ಬೆಂಗ್ರೆಯನ್ನು ಕರ್ಮಭೂಮಿಯನ್ನಾಗಿಸಿದ ಕೆ.ಪಿ.ಇಸ್ಮಾಯೀಲ್ ಉಸ್ತಾದ್ 2018ರ ಜನವರಿ 25ರಂದು ಪತ್ನಿ ಮತ್ತು ಒಂಭತ್ತು ಮಕ್ಕಳನ್ನು ಬಿಟ್ಟಗಲಿದರು.

# ಕ್ರಾಂತಿಕಾರಿ ಗ್ರಾಮೀಣ ಶಿಕ್ಷಕ
# ಪಿ.ಎಂ. ಮೂಸಬ್ಬ ಮಾಸ್ಟರ್ ಮಂಜನಾಡಿ



ಮಂಗಳೂರು ನಗರದಿಂದ ಸುಮಾರು ಇಪ್ಪತ್ತೊಂದು ಕಿ.ಮೀ ದೂರದ ಮುಸ್ಲಿಂ ಬಾಹುಳ್ಯವಿರುವ ಗ್ರಾಮೀಣ ಪ್ರದೇಶ ಮಂಜನಾಡಿ. ಬಹಳಷ್ಟು ವರ್ಷಗಳ ಹಿಂದಿನಿಂದಲೂ ಇಸ್ಲಾಮೀ ಅಧ್ಯಾತ್ಮಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸಮಾಜಕ್ಕೆ ಅತೀ ಹೆಚ್ಚು ಕೊಡುಗೆಗಳನ್ನು ನೀಡಿದ ಊರು. ಹಝ್ರತ್ ಇಸ್ಮಾಯಿಲ್ ವಲಿಯುಲ್ಲಾಹಿಯವರ ಆಗಮನದ ನಂತರ ಹಲವಾರು ಸೂಫಿ ಸಂತರ ಪಾದ ಸ್ಪರ್ಶಿಸಿದ ನಾಡು. ಕೇರಳ ಮತ್ತು ಕರ್ನಾಟಕದ ಉದ್ದಗಲಕ್ಕೂ ಅನೇಕ ಧಾರ್ಮಿಕ ಪಂಡಿತರನ್ನು ಕೊಡುಗೆ ನೀಡಿದ ಮನ್ನಣೆಯೂ ಈ ಊರಿಗಿದೆ.

ಭತ್ತ, ಅಡಿಕೆ, ತೆಂಗು ಬೆಳೆಯುವ ಕೃಷಿಕರಲ್ಲದೆ, ಮೂಡಿಗೆರೆ, ಮಡಿಕೇರಿ, ಹಾಸನ ಮತ್ತಿತರ ಕಡೆಗೆ ತೆರಳಿ ಕಾಯಿಮೆಣಸು, ಕಾಫಿ, ಏಲಕ್ಕಿ ವ್ಯಾಪಾರ ಮಾಡುವವರೂ ಇಲ್ಲಿ ಅಧಿಕ ಸಂಖ್ಯೆಯಲ್ಲಿದ್ದರು.

1926ರಲ್ಲಿ ಮಂಜನಾಡಿ ಮಸೀದಿಯ ಅಧೀನದ ಜಾಗದಲ್ಲಿ ಏಳನೇ ತರಗತಿವರೆಗೆ ಹಿರಿಯ ಪ್ರಾಥಮಿಕ ಶಾಲೆ ಪ್ರಾರಂಭ ಗೊಂಡಿದ್ದರೂ ಸಮಾಜದಲ್ಲಿ ಶೈಕ್ಷಣಿಕ ಜಾಗ್ರತಿ ಇಲ್ಲದ ಕಾರಣ ಅಂದಿನ ಸಾಮಾಜಿಕ ಪರಿಸ್ಥಿತಿ, ಬಡತನ, ದಾರಿದ್ರ್ಯ ಹೆಚ್ಚಾಗಿದ್ದರಿಂದ ಕೆಲವೇ ಮಕ್ಕಳು ಶಾಲೆ ಕಲಿಯಲು ಆಸಕ್ತಿ ಹೊಂದಿದ್ದರು. ಬೆರಳಣಿಕೆಯ ಹೆಣ್ಣು ಮಕ್ಕಳು ಮಾತ್ರ ಶಾಲೆಯ ಮೆಟ್ಟಿಲು ತುಳಿಯುತಿದ್ದರು.

ಅಂದಿನ ಕಾಲದಲ್ಲಿದ್ದ ಮಂಜನಾಡಿ ಗ್ರಾಮದ ಶೈಕ್ಷಣಿಕ ಹಿನ್ನಡೆಯ ಚಿತ್ರಣವನ್ನು ಸಂಪೂರ್ಣವಾಗಿ ಬದಲಾಯಿಸಿದ ಒಬ್ಬ ಕ್ರಾಂತಿಕಾರಿ ಶಿಕ್ಷಕರಾಗಿದ್ದರು ಪಿ.ಎಂ. ಮೂಸಬ್ಬ (ಮೂಸಬ್ಬ ಮಾಸ್ಟರ್)

1936ರ ಮೇ 27ರಂದು ಎಂ.ಪಿ. ಮೊಯ್ದಿನ್ ಕುಂಞಿ ಪರ್ತಿಪ್ಪಾಡಿ ಮತ್ತು ಆಸಿಯಮ್ಮ ದಂಪತಿಯ ಪುತ್ರನಾಗಿ ಮಂಜನಾಡಿ ಗ್ರಾಮದ ಪಾರೆ ಮನೆತನದಲ್ಲಿ ಜನಿಸಿದರು. ಪ್ರಾಥಮಿಕ ಮದ್ರಸ ಶಿಕ್ಷಣದ ಜೊತೆಗೆ ಮಂಜನಾಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏಳನೇ ತರಗತಿವರೆಗೆ ಕಲಿತು ಮೈಸಿರ (ಮಂಜೇಶ್ವರ)ದಲ್ಲಿರುವ ಶ್ರೀಮದ್ ಅನಂತೇಶ್ವರ ಟೆಂಪಲ್ ಶಾಲೆ  ಸೇರಿದರು. ಸಾರಿಗೆ ವ್ಯವಸ್ಥೆಯಿಲ್ಲದ ಕಾರಣ ಪ್ರತೀ ದಿನ 16 ಕಿ.ಮೀ ನಡೆದುಕೊಂಡೇ ಹತ್ತನೇ ತರಗತಿ ಪೂರ್ತಿಗೊಳಿಸಿದರು. ನಂತರ ಶೀಕ್ಷಕ ತರಬೇತಿ ಪಡೆದು ಕನ್ನಡ ಭಾಷಾ ಶಿಕ್ಷಕರಾದರು. ಪಣಂಬೂರು, ಚೆಂಬುಗುಡ್ಡೆಯ ಶಾಲೆಯಲ್ಲಿ ಸೇವೆ ಸಲ್ಲಿಸಿ ಮಂಜನಾಡಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರಾಗಿ ನೇಮಕಗೊಂಡ ಮಂಜನಾಡಿ ಪರಿಸರದ ಶೈಕ್ಷಣಿಕ ಬದಲಾವಣೆ ಮತ್ತು ಅಭಿವೃದ್ಧಿಗೆ  ಸಾಕ್ಷಿಯಾದರು.

ಮೂಸಬ್ಬ ಮಾಸ್ಟರ್‌ರ ಆಗಮನದಿಂದ ಮಂಜನಾಡಿ ಮತ್ತದರ ಸುತ್ತಮುತ್ತಲಿನ ಪ್ರದೇಶ ಶೈಕ್ಷಣಿಕವಾಗಿ ಜಾಗೃತಿಗೊಂಡಿತು. ಅವರು ಮನೆ ಮನೆಗೆ ಭೇಟಿ ನೀಡಿ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಡಲು ಹೆತ್ತವರನ್ನು ಒತ್ತಾಯಿಸಲಾರಂಭಿಸಿದರು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತುನೀಡಿದರು. ಅರ್ಧದಲ್ಲಿ ಶಾಲೆ ಮೊಟಕುಗೊಳಿಸುವವರನ್ನು ವಿಚಾರಿಸಿ ಮತ್ತೆ ಶಾಲೆ ಸೇರುವಂತೆ ಮನವರಿಕೆ ಮಾಡಿಸಿಕೊಟ್ಟರು. ಅವರ ಅವಿಶ್ರಾಂತ ಶ್ರಮದ ಫಲವಾಗಿ ಪ್ರತೀ ವರ್ಷ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗತೊಡಗಿತು. ಶಾಲೆಯನ್ನು ಅಭಿವೃದ್ದಿ ಪಡಿಸಲು ಶ್ರಮ ವಹಿಸಿದರು. ಶಾಲೆಯ ಹೊಸ ಕಟ್ಟಡಗಳು ನಿರ್ಮಾಣಗೊಂಡವು. ಕೆಲವು ವರ್ಷ ಶಿರಸಿ, ಚೆಂಬುಗುಡ್ಡೆ ಸರಕಾರಿ ಶಾಲೆಗಳಿಗೆ ವರ್ಗಾವಣೆಗೊಂಡಿದ್ದರೂ ಜನರ ಬೇಡಿಕೆಯಂತೆ ಮತ್ತೆ ಮಂಜನಾಡಿಯಲ್ಲಿಯೇ ಸೇವೆ ಮುಂದುವರಿಸಿದರು.

ಮಕ್ಕಳಲ್ಲಿ ಉನ್ನತ ಶಿಕ್ಷಣದ ಅರಿವು ಮೂಡಿಸುವುದು, ಸರಕಾರಿ ಉದ್ಯೋಗದಲ್ಲಿ ಸೇರಲು ಪ್ರೇರೇಪಿಸುವುದು, ಮಕ್ಕಳೊಂದಿಗೆ ಬೆರೆತು ಕಷ್ಟ ಅರಿತು ಸ್ಪಂದಿಸುವುದು ಅವರ ಗುಣವಾಗಿತ್ತು. ಅವರ ಗರಡಿಯಲ್ಲಿ ಪಳಗಿದ ಶಿಷ್ಯರು ಇಂದು ಪೊಲೀಸ್, ವೈದಕೀಯ, ಬ್ಯಾಂಕ್ ಮತ್ತಿತರ ಉದ್ಯೋಗದಲ್ಲಿದ್ದಾರೆ.

ಶಿಕ್ಷಕ ವೃತ್ತಿಯ ಜೊತೆಗೆ ಸಮಾಜ ಸೇವೆಯಲ್ಲಿ ಸಕ್ರಿಯರಾಗಿದ್ದರು. ಊರಿಗೆ ಬೇಕಾದ ಸಂಪರ್ಕ ರಸ್ತೆಗಳನ್ನು ನಿರ್ಮಿಮಿಸಲು ಅವರು ಪ್ರಮುಖ ಪಾತ್ರ ವಹಿಸಿದ್ದರು. ಮಂಜನಾಡಿ ಬಂಡಸಾಲೆ ಮುನವ್ವರತುಲ್ ಇಸ್ಲಾಂ ಮದ್ರಸದ ಅಧ್ಯಕ್ಷರಾಗಿ, ಮಂಜನಾಡಿ ಜುಮಾ ಮಸೀದಿಯ ಕಾರ್ಯದರ್ಶಿಯಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದರು. ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ಬಳಿಕ ಕೆಲವು ಕಾಲ ದೇರಳಕಟ್ಟೆ, ಚೆಂಬುಗುಡ್ಡೆಯ ಖಾಸಗಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು. ಬಂಡಸಾಲೆಯ ಹಸನ್ ಕುಂಞಿ ಹಾಜಿಯ ಪುತ್ರಿ ಬಿ.ಎಚ್. ಬೀಫಾತಿಮ್ಮರನ್ನು ಮದುವೆಯಾದ ಅವರಿಗೆ ಎರಡು ಗಂಡು ಮತ್ತು ಮೂವರು ಹೆಣ್ಣು ಮಕ್ಕಳಿದ್ದರು. 2006ರ ಅಕ್ಟೋಬರ್ 31ರಂದು ಅವರು ನಿಧನರಾದರು.

# ಬೀಡಿ ಕಾರ್ಮಿಕರ ಪಾಲಿನ ಹಿತೈಷಿ
# ಎಡಪದವು ಅಬ್ದುಲ್ ಖಾದರ್ ಹಾಜಿ



ಮಂಗಳೂರು ತಾಲೂಕಿನ ಕೊಳವೂರು ಗ್ರಾಮದ ಮುತ್ತೂರಿನ ನೂದೊಟ್ಟು ಎಂಬಲ್ಲಿ ಹಸನಬ್ಬ–ಖದೀಜಾ ದಂಪತಿಯ ಪುತ್ರನಾಗಿ 1930ರಲ್ಲಿ ಜನಿಸಿದ ಕೆ. ಅಬ್ದುಲ್ ಖಾದರ್ ಹಾಜಿ ಬೀಡಿ ಕಾರ್ಮಿಕರ ಪಾಲಿನ ಹಿತೈಷಿ ಅಂದರೆ ತಪ್ಪಾಗಲಾರದು.

ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು 5ನೆ ತರಗತಿ ಕಲಿತ ಬಳಿಕ ಘಟ್ಟಪ್ರದೇಶದಲ್ಲಿ ಮೀನಿನ ವ್ಯಾಪಾರ ಆರಂಭಿಸಿದರು. ಬಳಿಕ ಊರಿಗೆ ಆಗಮಿಸಿ ಮಾರದಂಗಡಿ ಎಂಬಲ್ಲಿ ತನ್ನ ಅಣ್ಣನ ಪಾಲುದಾರಿಕೆಯೊಂದಿಗೆ ಜಿನಸಿ ಅಂಗಡಿ ಮತ್ತು ಬೀಡಿ ಬ್ರಾಂಚ್ ತೆರೆದರು. ಮೊದಲು ಭಾರತ್ ಬೀಡಿಯ ಗುತ್ತಿಗೆ ಪಡೆದ ಅವರು ಬಳಿಕ ಪ್ರಕಾಶ್ ಬೀಡಿಯ ಗುತ್ತಿಗೆ ವಹಿಸಿಕೊಂಡರು. ಹಾಗೇ ತನ್ನ ಕಾರ್ಯಕ್ಷೇತ್ರವನ್ನು ಎಡಪದವುಗೆ ಸ್ಥಳಾಂತರಿಸಿದ ಅವರು ಎಡಪದವು ಮತ್ತು ಸುತ್ತಮುತ್ತಲಿನ ಪ್ರದೇಶದ 1 ಸಾವಿರಕ್ಕೂ ಅಧಿಕ ಬೀಡಿ ಕಾರ್ಮಿಕರು ಮತ್ತವರ ಕುಟುಂಬಕ್ಕೆ ಆಸರೆಯಾದರು. ವಾರಕ್ಕೆ ಸುಮಾರು 40 ಲಕ್ಷದಷ್ಟು ಬೀಡಿಯನ್ನು ಕಾರ್ಮಿಕರು ಅವರಿಗೆ ಪೂರೈಸುತ್ತಿದ್ದರು. ಅತ್ಯಧಿಕ ಸಂಖ್ಯೆಯ ಹಿಂದೂ ಬಾಂಧವರು ಅವರ ಬ್ರಾಂಚ್‌ಗೆ ಬೀಡಿ ನೀಡುತ್ತಿದ್ದುದು ಗಮನಾರ್ಹ. ಎಡಪದವಿನ ಸರಕಾರಿ ಜಮೀನಿನಲ್ಲಿ ಸುಮಾರು 38 ಬೀಡಿ ಕಾರ್ಮಿಕರಿಗೆ ಮನೆಗಳ ನಿರ್ಮಾಣಕ್ಕೆ ಅವರು ನೇತೃತ್ವ ನೀಡಿದ್ದರು. ಹಾಗೇ ಎಡಪದವಿನಲ್ಲಿ ಬೀಡಿ ಸೈಟ್ ಕಾಲನಿಯ ನಿರ್ಮಾಣಕ್ಕೆ ಕಾರಣರಾಗಿದ್ದರು. ಸಾಮಾಜಿಕ, ಧಾರ್ಮಿಕ ರಂಗದಲ್ಲಿ ಸೇವೆ ಸಲ್ಲಿಸಿದ್ದರಲ್ಲದೆ ಕೊಡುಗೈ ದಾನಿಯೂ ಆಗಿದ್ದರು.

ಎಡಪದವಿನ ದಾರುಸ್ಸಲಾಂ ವೆಲ್ಫೇರ್ ಅಸೋಸಿಯೇಶನ್‌ನ ಅಧೀನದಲ್ಲಿ ಉಮ್ಮಹಾತುಲ್ ಮುಅ್‌ಮಿನೀನ್ ಜುಮಾ ಮಸೀದಿಯ ನಿರ್ಮಾಣದಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. 1998ರಿಂದ ಆ ಮಸೀದಿಯ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಆರಂಭದಲ್ಲಿ ಸುಮಾರು 15 ವರ್ಷಗಳ ಕಾಲ ತನ್ನ ಸ್ವಂತ ಕಟ್ಟಡದಲ್ಲೇ ಮದ್ರಸದ ತರಗತಿ ಆರಂಭಿಸಿದ್ದರು. ಮುಅಲ್ಲಿಮರನ್ನು ನೇಮಿಸಿ ಅವರಿಗೆ ಸ್ವತಃ ಊಟೋಪಚಾರ, ವೇತನ ನೀಡುತ್ತಿದ್ದರು.

ಹೊಸ ಮದ್ರಸ ಸ್ಥಾಪನೆಯಾದ ಬಳಿಕವೂ ತನ್ನ ಮನೆಯಲ್ಲೇ ಮಹಿಳೆಯರು ಮತ್ತು ಪುರುಷರಿಗೆ ದೀನೀ ತರಗತಿಗಳನ್ನು ನಡೆಸಲು ಮತ್ತು ನಮಾಝ್‌ಗೂ ವ್ಯವಸ್ಥೆ ಕಲ್ಪಿಸಿದ್ದರು. ಬಡತನದಲ್ಲಿ ಹುಟ್ಟಿ ಬೆಳೆದು ಬೀಡಿ ಗುತ್ತಿಗೆಯ ಮೂಲಕ ಕೊಡುಗೈ ದಾನಿಯಾಗಿ ಪರಿಸರದಲ್ಲಿ ಪ್ರಸಿದ್ಧಿ ಪಡೆದಿದ್ದರೂ ಕೂಡ ಅತ್ಯಂತ ಸರಳವಾಗಿ ಬದುಕಿದ್ದರು.

ಅಪಾರ ಧಾರ್ಮಿಕ ಪ್ರಜ್ಞೆ ಬೆಳೆಸಿಕೊಂಡಿದ್ದ ಅವರು 2020ರ ಜುಲೈ 8ರಂದು ಪತ್ನಿ ಹವ್ವಮ್ಮ ಮತ್ತು ಇಬ್ಬರು ಪುತ್ರಿಯರನ್ನು ಬಿಟ್ಟಗಲಿದರು.ಊಂಡಿದ್ದ ಅವರು 2020ರ ಜುಲೈ 8ರಂದು ಪತ್ನಿ ಹವ್ವಮ್ಮ ಮತ್ತು ಇಬ್ಬರು ಪುತ್ರಿಯರನ್ನು ಬಿಟ್ಟಗಲಿದರು.

## ಯುವಕರಿಗೆ ಶಕ್ತಿ ತುಂಬಿದ್ದ ಮುಹಮ್ಮದ್ ಬದ್ರುದ್ದೀನ್



ಬಂಟ್ವಾಳ ತಾಲೂಕಿನ ಕಳ್ಳಿಗೆ ಗ್ರಾಮದ ಬ್ರಹ್ಮರಕೂಟ್ಲು ಎಂಬಲ್ಲಿ ಬಿ.ಎಚ್.ಬದ್ರುದ್ದೀನ್– ಆಸಿಯಮ್ಮ ದಂಪತಿಯ ಪುತ್ರನಾಗಿ 1957ರ ಅಕ್ಟೋಬರ್ 12ರಂದು ಜನಿಸಿದ ಮುಹಮ್ಮದ್ ಬದ್ರುದ್ದೀನ್ ಬಂಟ್ವಾಳದ ಎಸ್‌ವಿಎಸ್‌ನಲ್ಲಿ ಎಸೆಸೆಲ್ಸಿ ತೇರ್ಗಡೆ ಹೊಂದಿದರು. ಬಳಿಕ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಬಿಎ ಪದವಿ ಗಳಿಸಿದರು. ಕಾಲೇಜಿನಲ್ಲಿರುವಾಗಲೇ ಎನ್‌ಎಸ್‌ಯುಐ ಮೂಲಕ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು. 1976ರಲ್ಲಿ ಎನ್‌ಎಸ್‌ಯುಐ ಜಿಲ್ಲಾ ಕಾರ್ಯದರ್ಶಿಯಾಗಿ, 1983ರಲ್ಲಿ ಜಿಲ್ಲಾಧ್ಯಕ್ಷರಾಗಿ, 1987ರಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ, 1989ರಲ್ಲಿ ರಾಜ್ಯ ಉಪಾಧ್ಯಕ್ಷರಾಗಿದ್ದರು. ಬಹುಕಾಲ ಎನ್‌ಎಸ್‌ಯುಐ ಸಂಘಟನೆಯಲ್ಲಿ ತೊಡಗಿಸಿಕೊಂಡ ಕಾರಣ ಅವರನ್ನು "ಎನ್‌ಎಸ್‌ಯುಐ ಬದ್ರುದ್ದೀನ್" ಎಂದೇ ಗುರುತಿಸಲಾಗುತ್ತಿತ್ತು.

1982ರಲ್ಲಿ ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿ, 1995ರಲ್ಲಿ ರಾಜ್ಯ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷರಾಗಿ, 1998ರಲ್ಲಿ ಕೆಪಿಸಿಸಿ ಸದಸ್ಯರಾಗಿ, 2000ರಲ್ಲಿ ಕೆಪಿಸಿಸಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಕನ್‌ಸ್ಯೂಮರ್ ರಿಡ್ರೆಸಲ್ ಫಾರಂನ ಸದಸ್ಯರಾಗಿದ್ದ ಮುಹಮ್ಮದ್ ಬದ್ರುದ್ದೀನ್ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಎಂದೂ ಅಧಿಕಾರಕ್ಕೆ ಜೋತುಬಿದ್ದವರಲ್ಲ. ಲಾಬಿ ನಡೆಸಿದವರಲ್ಲ. ಪಕ್ಷ ನೀಡಿದ ಅವಕಾಶವನ್ನು ಸಾರ್ವಜನಿಕ ಬದುಕಿಗೆ ಮುಡಿಪಾಗಿಟ್ಟರು.

ಕೆಲಕಾಲ ಪಕ್ಷ ಸಂಘಟನೆಯಿಂದ ದೂರ ಸರಿದರೂ ಕೂಡ ಸಾಮಾಜಿಕ ರಂಗದಲ್ಲಿ ಅವರು ಸಕ್ರಿಯರಾಗಿದ್ದರು. ಅಲ್ ವಫಾ ಚಾರಿಟೇಬಲ್ ಟ್ರಸ್ಟ್ ಮೂಲಕ ಅನೇಕ ಬಡ ಹೆಣ್ಮಕ್ಕಳ ಮದುವೆ ಮಾಡಿಸಿದ್ದರು.

ಪತ್ನಿ ನಸೀಮಾ ಮತ್ತು ಏಕೈಕ ಮಗಳ ಜೊತೆ ಮಂಗಳೂರಿನಲ್ಲಿ ನೆಲೆಸಿದ್ದ ಅವರು 2015ರ ಆಗಸ್ಟ್ 25ರಂದು ನಿಧನರಾದರು.

# ನಿಷ್ಠಾವಂತ ಪೊಲೀಸ್ ಅಧಿಕಾರಿ ವಿಟ್ಲ ಮುಹಮ್ಮದ್ ಹಾಜಿ



ಬಂಟ್ವಾಳ ತಾಲೂಕಿನ ವಿಟ್ಲ ಸಮೀಪದ ಮಾರ್ನಮಿ ಗುಡ್ಡೆಯ ಫಕೀರ್ ಸಾಹೇಬ್ (ಕುಟ್ಟಿಚ್ಚ)–ಸಾರಮ್ಮ ದಂಪತಿಯ ಹಿರಿಯ ಪುತ್ರನಾಗಿ 12.1.1947ರಲ್ಲಿ ಜನಿಸಿದ ವಿಟ್ಲ ಮುಹಮ್ಮದ್ ಹಾಜಿ ಪೊಲೀಸ್ ಇಲಾಖೆಗೆ ಕಾನ್‌ಸ್ಟೇಬಲ್ ಆಗಿ ಸೇವೆಗೆ ಸೇರ್ಪಡೆಗೊಂಡು ಸಬ್ ಇನ್ಸ್‌ಪೆಕ್ಟರ್ ಆಗಿ ನಿವೃತ್ತರಾದರು.


ವಿಟ್ಲದಲ್ಲಿ ಜನಿಸಿದರೂ ಸುಮಾರು 27 ವರ್ಷದಿಂದ ಬಜ್ಪೆಯ ನಿವಾಸಿಯಾಗಿ ಅಲ್ಲಿನ ಜನರ ಪ್ರೀತಿಗೆ ಪಾತ್ರರಾದರು. ವಿಟ್ಲದ ಸ್ಥಳೀಯ ಶಾಲೆಯಲ್ಲಿ 8ನೆ ತರಗತಿ ಕಲಿತ ಮುಹಮ್ಮದ್ ಬಡತನದ ಬೇಗೆಯಿಂದ ಹೆಚ್ಚು ಕಲಿಯಲು ಆಗಲಿಲ್ಲ. ಹಾಗಾಗಿ ಬದುಕಿನ ದಾರಿ ಕಂಡು ಹಿಡಿಯುವ ಪ್ರಯತ್ನ ಮಾಡಿದರು. ಮಂಗಳೂರಿನ ದಕ್ಕೆಯಿಂದ ಮೀನನ್ನು ಸೈಕಲಲ್ಲಿ ಹೇರಿಕೊಂಡು ವಿಟ್ಲ ಸುತ್ತಮುತ್ತಲಿನ ಮನೆ ಮನೆಗೆ ತೆರಳಿ ಮಾರಾಟ ಮಾಡತೊಡಗಿದರು. ತಂದೆಗೆ ಮಗನನ್ನು ಒಬ್ಬ ಪೊಲೀಸ್ ಅಧಿಕಾರಿಯನ್ನಾಗಿ ಮಾಡುವ ಆಸೆ ಇತ್ತು. ಆದರೆ ಮಗನಿಗೆ ಪೊಲೀಸ್ ಆಗಲು ಮನಸ್ಸಿರಲಿಲ್ಲ. ಬೇರೆ ಬೇರೆ ರೀತಿಯಲ್ಲಿ ಪೊಲೀಸ್ ಇಲಾಖೆಗೆ ಸೇರುವುದರಿಂದ ತಪ್ಪಿಸಿದರು. ಆದರೆ ತಂದೆಯ ಒತ್ತಾಯಕ್ಕೆ ಮಣಿದು ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ ಎದುರಿಸಲು ಮುಹಮ್ಮದ್ ಮುಂದಾದರು. ಕೊನೆಗೆ ತಂದೆಯ ಇಚ್ಛೆಯಂತೆ ಪೊಲೀಸ್ ಇಲಾಖೆಗೆ ಕಾನ್‌ಸ್ಟೇಬಲ್ ಆಗಿ ಸೇರ್ಪಡೆಗೊಂಡರು.

ಆರಂಭದಲ್ಲಿ ಕಂಕನಾಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯಕ್ಕೆ ಹಾಜರಾದ ಮುಹಮ್ಮದ್ ಬಳಿಕ ಮೂಡುಬಿದಿರೆ, ಕಡಬ, ಕುಂದಾಪುರ, ಪುತ್ತೂರು, ಕಂಕನಾಡಿ, ಬಜ್ಪೆ, ಮಂಗಳೂರಿನ ಸಂಚಾರ ಠಾಣೆ ಹಾಗೂ ಮಂಗಳೂರು ನಗರ ಪೊಲೀಸ್ ಆಯುಕ್ತಾಲಯದಲ್ಲಿ ಸೇವೆ ಸಲ್ಲಿಸಿದರು. ಹಂತ ಹಂತವಾಗಿ ಪೊಲೀಸ್ ಕಾನ್ಸ್‌ಟೇಬಲ್, ಹೆಡ್ ಕಾನ್ಸ್‌ಟೇಬಲ್, ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಆಗಿ ಭಡ್ತಿ ಪಡೆದು ಕರ್ತವ್ಯದಿಂದ ನಿವೃತ್ತರಾದರು.

ನಿವೃತ್ತಿಯ ಬಳಿಕ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದರು. ದಕ್ಷಿಣ ಕನ್ನಡ ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕೋಶಾಧಿಕಾರಿಯಾಗಿ, ಬಜ್ಪೆ ಕೇಂದ್ರ ಜುಮಾ ಮಸೀದಿಯ ಅಧ್ಯಕ್ಷರಾಗಿ, ವಿಟ್ಲ ಜುಮಾ ಮಸೀದಿಯ ಗೌರವಾಧ್ಯಕ್ಷರಾಗಿ, ಮೂಳೂರು ಮರ್ಕಝ್ ಸುನ್ನಿ ಸೆಂಟರ್‌ನ ಪ್ರಧಾನ ಕಾರ್ಯದರ್ಶಿಯಾಗಿ, ಮಂಗಳೂರು ಹಜ್ ನಿರ್ವಹಣಾ ಸಮಿತಿಯ ಸದಸ್ಯರಾಗಿ, ಮಂಗಳೂರಿನ ಸೈದಾನಿ ಬೀಬಿ ದರ್ಗಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ವಕ್ಫ್ ಬೋರ್ಡ್ ಅಧೀನದಲ್ಲಿರುವ ಸುಮಾರಿ 15ಕ್ಕೂ ಅಧಿಕ ಮಸೀದಿ–ಮದ್ರಸಗಳ ಚುನಾವಣಾ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ವಿಟ್ಲದ ಜನತೆಗೆ 'ಪೊಲೀಸ್ ಮೋನಿಚ್ಚ' ಮತ್ತು ಮನೆಮಂದಿಗೆ "ಪೊಲೀಸ್ ಕಾಕ" ಆಗಿದ್ದ ಅವರು 2020ರ ಸೆಪ್ಟಂಬರ್ 10ರಂದು ಪತ್ನಿ ದಿಲ್‌ಶಾದ್ ಮತ್ತು ಮೂವರು ಪುತ್ರಿಯರನ್ನು ಬಿಟ್ಟಗಲಿದರು.

# ಮಾಧ್ಯಮ ಕ್ಷೇತ್ರದಲ್ಲಿ ಮಿಂಚಿದ್ದ ಬಿ.ಎಂ. ರಶೀದ್ ಉಪ್ಪಿನಂಗಡಿ



ಮೌನದೊಳಗೊಂದು
ಮಾತಿತ್ತು!
ಧ್ವನಿಯಿರಲಿಲ್ಲ
ಮಾತು ಮೌನಕೆ ಸೋತು
ಮೌನದ ತೆಕ್ಕೆಗೆ ಜೋತು
ನೋಡಿದರೆ–
ಕಣ್ಣಂಚಲ್ಲೊಂದು
ಹನಿಯಿತ್ತು!

ಇದು ಕವಿ, ಪತ್ರಕರ್ತ, ಕಥೆಗಾರ ಬಿ.ಎಂ. ರಶೀದ್ ಬರೆದ ಕವಿತೆಯ ಸಾಲು. ತನ್ನ 33ನೇ ವರ್ಷಕ್ಕೆ ಅಕಾಲ ಮರಣವನ್ನಪ್ಪಿದ ಬಿ.ಎಂ. ರಶೀದ್ 1969ರಲ್ಲಿ ಉಪ್ಪಿನಂಗಡಿ ಸಮೀಪದ ಮಠ ಎಂಬಲ್ಲಿ ಬಿ.ಎಂ.ಇಸ್ಮಾಯಿಲ್–ಚೆರಿಯಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ಇವರದು ಸಾಹಿತಿಗಳ ಕುಟುಂಬವೂ ಹೌದು. ಮಾಜಿ ಶಾಸಕ, ಕವಿ ಬಿ.ಎಂ. ಇದಿನಬ್ಬ ಇವರ ದೊಡ್ಡಪ್ಪ (ತಂದೆಯ ಅಣ್ಣ). ಪತ್ರಕರ್ತ ಬಿ.ಎಂ. ಬಶೀರ್ ಇವರ ಸಹೋದರ. ಎಳವೆಯಲ್ಲೇ ಸಾಹಿತ್ಯ, ಪತ್ರಿಕೋದ್ಯಮದಲ್ಲಿ ಆಸಕ್ತಿ ಬೆಳೆಸಿಕೊಂಡ ರಶೀದ್ ವಿದ್ಯಾರ್ಥಿಯಾಗಿರುವಾಗಲೇ ವಿಸ್ಮಯ ಹುಟ್ಟಿಸುವಂತೆ ಬರೆದು, ಲಂಕೇಶರಂತಹ ಹಿರಿಯ ಸಾಹಿತಿಯಿಂದ ಮೆಚ್ಚುಗೆ ಪಡೆದವರು.

ಪಿಯುಸಿ ಕಲಿಯುತ್ತಿರುವಾಗಲೇ 'ಸುದ್ದಿ ಬಿಡುಗಡೆ' ಪತ್ರಿಕೆಗೆ ಸೇರ್ಪಡೆಗೊಳ್ಳುವ ಮೂಲಕ ಪತ್ರಿಕೋದ್ಯಮದ ಬದುಕಿಗೆ ರಶೀದ್ ಕಾಲಿಟ್ಟರು. ಸುಮಾರು ಒಂದು ವರ್ಷ ಆ ಪತ್ರಿಕೆಯಲ್ಲಿ ವರದಿಗಾರರಾಗಿ ಕೆಲಸ ಮಾಡಿದ್ದರು. ಬಳಿಕ ಪದವಿ ವಿದ್ಯಾರ್ಥಿಯಾಗಿದ್ದಾಗ ರಾಜ್ಯ ಮಟ್ಟದ ವಿವಿಧ ಪತ್ರಿಕೆಗಳಿಗೆ ಅರೆಕಾಲಿಕ ವರದಿಗಾರರಾಗಿ ಕೆಲಸ ಮಾಡತೊಡಗಿದರು. ರಾಜ್ಯಮಟ್ಟದ ವಿವಿಧ ನಿಯತಕಾಲಿಕಗಳಲ್ಲಿ ಕತೆ, ಕವಿತೆಗಳನ್ನು ವಿದ್ಯಾರ್ಥಿ ಕಾಲದಲ್ಲೇ ಬರೆಯತೊಡಗಿದ್ದರು. ಉಪ್ಪಿನಂಗಡಿಯ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಕಲಿಯುತ್ತಿರುವಾಗ ಇವರ ಸಂಪಾದಕತ್ವದ 'ಸ್ಪಂದನ' ಎನ್ನುವ ಕೈಬರಹ ಪತ್ರಿಕೆ ಕಾಲೇಜಿನ ವಾತಾವರಣವನ್ನೇ ಚೇತೋಹಾರಿಯಾಗಿಸಿತ್ತು. ದ್ವಿತೀಯ ಬಿಎ ಕಲಿಯುತ್ತಿರುವಾಗ ರಾಜ್ಯಮಟ್ಟದ ಡಾ.ಟಿಎಂಎ ಪೈ ಸ್ಮಾರಕ ಆಶುಕವಿತೆ ರಚನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದ್ದರು. 'ಅಶಾಂತಿ ಪರ್ವ' ಎನ್ನುವ ಈ ಕವಿತೆ 1992ರಲ್ಲಿ ತರಂಗ ವಾರಪತ್ರಿಕೆಯಲ್ಲಿ ಪ್ರಕಟವಾಗಿ ತೀವ್ರ ಚರ್ಚೆಗೆ ಕಾರಣವಾಗಿತ್ತು.

ಅಂತಿಮ ಬಿ.ಎ.ಯಲ್ಲಿರುವಾಗ ಇವರ ಅತಿ ಸಣ್ಣ ಕತೆ 'ಗರ್ಭ' ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿ ಹಲವರ ಮೆಚ್ಚುಗೆ ಗಳಿಸಿತ್ತು. ಲಂಕೇಶರಿಗೂ ಈ ಪುಟ್ಟ ಕತೆ ಇಷ್ಟವಾಗಿ 'ಇನ್ನಷ್ಟು ಬರೆ' ಎಂದು ಪತ್ರ ಮುಖೇನ ಸೂಚನೆ ನೀಡಿದ್ದರು. ಆ ಬಳಿಕ ರಶೀದ್ ಅವರ ಕವಿತೆ ಮತ್ತು ಕತೆಗಳು ಪಿ. ಲಂಕೇಶ್ ಸಂಪಾದಕತ್ವದ 'ಲಂಕೇಶ್ ಪತ್ರಿಕೆ'ಯಲ್ಲಿ ನಿರಂತರವಾಗಿ ಪ್ರಕಟವಾಗತೊಡಗಿದವು. 'ಪರ್ಯಾಯ' ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ಇವರ ಎರಡನೆಯ ಕತೆ. ಲಂಕೇಶ್ ಪತ್ರಿಕೆಯ ದೀಪಾವಳಿ ವಿಶೇಷಾಂಕದಲ್ಲೂ ಇವರ ಕತೆಗೆ ಲಂಕೇಶ್ ಪ್ರಾಶಸ್ತ್ಯವನ್ನು ನೀಡಿದ್ದರು. ಅಲ್ಲದೆ ತಮ್ಮ ಪತ್ರಿಕೆಯಲ್ಲಿ ರಶೀದ್ ಬರಹವನ್ನು ಮೆಚ್ಚಿ ಬರೆದರು. 'ಮತ್ತೆ ಇಲ್ಲೊಬ್ಬಳು ಅಮೃತ ಮತಿ' ರಶೀದ್ ಬರೆದ ಇನ್ನೊಂದು ಮಹತ್ವದ ಕತೆ. ಪರ್ಯಾಯದಲ್ಲಿ 'ನಕ್ಸಲ್ ಹೋರಾಟ'ದ ಒಳಸಂಘರ್ಷವನ್ನು ಕಟ್ಟಿಕೊಟ್ಟಿದ್ದರೆ, 'ಮತ್ತೆ ಇಲ್ಲೊಬ್ಬಳು ಅಮೃತಮತಿ' ಕತೆ ಹೆಣ್ಣು–ಗಂಡಿನ ಸಂಬಂಧಗಳ ಮಿತಿಗಳನ್ನು ಹೇಳುತ್ತದೆ. 'ಕ್ಷಮಿಸಿ ಬಯಕೆಗಳೇ ಇನ್ನೆಂದಾದರೊಮ್ಮೆ ಬರುವೆ...' ಕೂಡ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ವಿಭಿನ್ನ ಕತೆ. ಮನುಷ್ಯನ ನಿರೀಕ್ಷೆ ಕೈಗೆಟಕದಿದ್ದಾಗ ಆಗುವ ನಿರಾಸೆಯನ್ನು ವಸ್ತುವಾಗಿಟ್ಟುಕೊಂಡು ಈ ಕತೆಯನ್ನು ಹೆಣೆಯಲಾಗಿದೆ.

"ಅಶಾಂತಿ ಪರ್ವ" ಕವಿತೆ 'ತರಂಗ'ದಲ್ಲಿ ಪ್ರಕಟವಾದರೆ ಬಳಿಕ ಅವರ ಬಹುತೇಕ ಪದ್ಯಗಳು ಲಂಕೇಶ್ ಪತ್ರಿಕೆಯಲ್ಲೇ

ಪ್ರಕಟವಾದವು. 'ಮಾತು ಮೌನದ ಕುರಿತಿಷ್ಟು' 'ನಾನು ಸುಮ್ಮನಿದ್ದೆ! ಆದರೆ...', 'ಗೋಲ್ಡನ್ ಬೀಚ್ ಕಡಲ ದಂಡೆಯಲ್ಲಿ ಕೆಲವು ಪಾಠಗಳು' 'ನಿನಗೆ ನಾನು ಹುಟ್ಟಿದ ನಿಮಿಷ', ' ವಿಷಾದ ಪರ್ವ ' ಇವುಗಳು ಲಂಕೇಶ್ ಪ್ರಕಟಗೊಂಡಿದ್ದರೆ, 'ಪರುಷ ಮಣಿ' ಜನವಾಹಿನಿ ಸಾಪ್ತಾಹಿಕದಲ್ಲಿ ಪ್ರಕಟವಾಗಿತ್ತು. ಗಾಯಕ ಮುಖೇಶನ ಕುರಿತಂತೆ ಬರೆದ ಲೇಖನ 'ನೀನೊಬ್ಬನೇ ಮುಖೇಶಾ' ಲಂಕೇಶ್‌ನಲ್ಲಿ ಪ್ರಕಟವಾದರೆ, ಬೀದಿ ನಾಟಕ–ಹಲವು ಸಾಧ್ಯತೆಗಳು ಲೇಖನ ಪ್ರಜಾವಾಣಿಯಲ್ಲಿ ಮುದ್ರಿಸಲ್ಪಟ್ಟಿತು.

ಇವರ ಕತೆ, ಕವಿತೆ, ನಾಟಕ–ಸಿನಿಮಾ, ವರದಿಯನ್ನು ಒಳಗೊಂಡ ಸಮಗ್ರ ಕೃತಿ "ಪರುಷಮಣಿ'ಯು 2005ರಲ್ಲಿ ಪ್ರಕಟಗೊಂಡಿತ್ತು.

ಕತೆಗಾರ, ಕವಿ ಅಲ್ಲದೆ ರಾಜ್ಯ ಮಟ್ಟದಲ್ಲಿ ವರದಿಗಾರರಾಗಿಯೂ ಗುರುತಿಸಲ್ಪಟ್ಟ ರಶೀದ್ ಅವರ ವಿಶೇಷ ವರದಿಗಳು ರಾಜ್ಯಮಟ್ಟದಲ್ಲಿ ಚರ್ಚೆಯ ಜೊತೆಗೆ ವಿವಾದವನ್ನೂ ಹುಟ್ಟಿಸಿ ಹಾಕಿತ್ತು. ಲಂಕೇಶ್ ಪತ್ರಿಕೆಯಲ್ಲದೆ ಹಾಯ್ ಬೆಂಗಳೂರಿನಲ್ಲೂ ಇವರು ವರದಿಗಾರರಾಗಿ ಗಮನಾರ್ಹ ವರದಿಗಳನ್ನು ಮಾಡಿದ್ದರು. ಸುರತ್ಕಲ್ ಗಲಭೆ, ಪುತ್ತೂರು ಗಲಭೆ ಸಹಿತ ಹಲವು ಕೋಮುಗಲಭೆಗಳ ಬಗ್ಗೆ ವರದಿಗಳನ್ನು ಲಂಕೇಶ್ ಮತ್ತು ಹಾಯ್ ಬೆಂಗಳೂರಿನಲ್ಲಿ ವಸ್ತುನಿಷ್ಠವಾಗಿ ಮಾಡಿ ಸಂತ್ರಸ್ತರಿಗೆ ನ್ಯಾಯ ನೀಡುವ ಪ್ರಯತ್ನ ಮಾಡಿದ್ದರು. ಈ ಮಧ್ಯೆ ಹಲವು ಮಾನವೀಯ ವರದಿಗಳು ರಾಜ್ಯಮಟ್ಟದಲ್ಲಿ ಸುದ್ದಿಯಾಗಿದ್ದವು. ಯಾರೂ ಅರಿಯದ ನೆರಿಯಾದ ಆದಿವಾಸಿಗಳ ಸಂಕಟ, ಎಂಆರ್‌ಪಿಎಲ್ ಸಂತ್ರಸ್ತರ ಅಳಲು ವರದಿಯು ಸರಕಾರದ ಗಮನ ಸೆಳೆದಿತ್ತು.

ಬೆಳ್ತಂಗಡಿಯ ಮಾನಸಿಕ ಅಸ್ವಸ್ಥರ ಆಶ್ರಮದ ಕುರಿತಂತೆ 'ಈ ದೈವ ಸಾಮ್ರಾಜ್ಯವನ್ನು ನೀವು ಕಂಡಿದ್ದೀರಾ?' ಎಂಬ ಹೃದಯ ಸ್ಪರ್ಶಿ ಲೇಖನ ಇವರ ಕೊನೆಯ ಬರಹವಾಗಿತ್ತು. 2002, ನವೆಂಬರ್ 2ರಂದು ಇವರು ನಿಧನರಾದರು. ಬರೇ 33 ವರ್ಷಗಳ ಕಾಲ ಬದುಕಿ, ಬರೆದದ್ದು ಕೆಲವೇ ಕೆಲವಾದರೂ ಕೂಡ ಅವರ ಅಸಾಧಾರಣ ಪ್ರತಿಭೆಗೆ ಅವುಗಳು ಸಾಕ್ಷಿಯಾದವು.

ಬಿ.ಎಂ.ರಶೀದ್ ಬರಹಗಳ ಕುರಿತಂತೆ ಹಿರಿಯ ಲೇಖಕ ಬಂಜಗೆರೆ ಜಯಪ್ರಕಾಶ್ ಹೀಗೆ ಬರೆಯುತ್ತಾರೆ–"....ರಶೀದ್ ಅವರು ಬರೆದ ಕಥೆಗಳಲ್ಲಿ 'ಪರ್ಯಾಯ' ಹಾಗೂ 'ಕ್ಷಮಿಸಿ ಬಯಕೆಗಳೇ ಇನ್ನೆಂದಾದರೊಮ್ಮೆ ಬರುವೆ....' ಎಂಬ ಈ ಕಥೆಗಳು ಸಾಕಷ್ಟು ಪಳಗಿದ ಕಥೆಗಾರನೊಬ್ಬನ ಪ್ರತಿಭೆಯನ್ನು ಅತ್ಯಂತ ಹೃದ್ಯವಾಗಿ ಮುಂದಿಡುತ್ತವೆ. ರಶೀದ್ ಒಬ್ಬ ಕಥೆಗಾರನಾಗಿ ಈ ಕತೆಗಳಲ್ಲಿ ತನ್ನ ವಯಸ್ಸಿಗೆ ಮೀರಿರುವ ಪ್ರಬುದ್ಧತೆಯನ್ನು, ತಾತ್ವಿಕ ಜಿಜ್ಞಾಸೆಯ ನಿರ್ವಹಣೆಯಲ್ಲಿ ಪ್ರದೇಶಿಸಿದ್ದಾನೆ... ಭಾಷೆಯ ಬಳಕೆ, ಕಥಾ ಶಿಲ್ಪದ ನಿರ್ಮಾಣ, ಪಾತ್ರಗಳ ವಿನ್ಯಾಸ ಹಾಗೂ ಸಂದರ್ಭ ನಿರ್ವಹಣೆ ಮುಂತಾದ ತಾಂತ್ರಿಕ ಅಂಶಗಳ ನೆಲೆಯಿಂದ ನೋಡಿದಾಗಲೂ ರಶೀದ್ ಬರೆಯಬಹುದಾಗಿದ್ದ ಮತ್ತೆಷ್ಟೋ ಕಥೆಗಳು ಕನ್ನಡಕ್ಕೆ ಮತ್ತೊಬ್ಬ ಶಕ್ತ ಕಥೆಗಾರನನ್ನು ಕೊಡಲಿದ್ದವು ಎಂಬುದನ್ನು ಹೇಳುವಂತಿವೆ...."

ಒಟ್ಟಿನಲ್ಲಿ ಇವರ ಬಹುತೇಕ ಕತೆಗಳ ಸಮೃದ್ಧ ಭಾಷೆ, ನಿರೂಪಣೆ ಕನ್ನಡದ ಪಾಲಿಗೆ ಹೊಸತಾಗಿದ್ದವು. ಆ ಕಾರಣಕ್ಕಾಗಿಯೇ ಕನ್ನಡ ಸಾಹಿತ್ಯದಲ್ಲಿ ಬಿ.ಎಂ.ರಶೀದ್ ಬರೆದ ಬೆರಳೆಣಿಕೆ ಕತೆ, ಕವಿತೆಗಳು ಇಂದಿಗೂ ಜೀವಂತವಾಗಿವೆ.

# ಬಹುಮುಖ ಪ್ರತಿಭೆಯ ರಫೀಕ್ ಉಪ್ಪಿನಂಗಡಿ



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಉಪ್ಪಿನಂಗಡಿಯಲ್ಲಿ ಹಸೈನಾರ್ ಐ.–ಖತೀಜಮ್ಮ ದಂಪತಿಯ ಪುತ್ರನಾಗಿ 1970ರ ಮಾರ್ಚ್ 28ರಂದು ಹುಟ್ಟಿ ಬೆಳೆದ ರಫೀಕ್ ಉದ್ಯೋಗ ಅರಸಿಕೊಂಡು ಹೋದದ್ದು ಮೈಸೂರಿಗೆ. ಅಲ್ಲಿ ಪತ್ರಕರ್ತನಾಗಿ ನೆಲೆಸಿ ತಾನು ಕಂಡ ಕನಸನ್ನು ನನಸು ಮಾಡುವ ಮೊದಲೇ ಇಹಲೋಕ ತ್ಯಜಿಸಿದ ನತದೃಷ್ಟ.

ವೃತ್ತಿಯೊಂದಿಗೆ ಬಿಎಫ್ಎ ಪದವಿ ಪಡೆದಿದ್ದ ಅವರು ಮೈಸೂರಿನಲ್ಲಿ ಜನವಾಹಿನಿ, ಸಂಜೆವಾಣಿ, ಪ್ರಜಾನುಡಿ, ಆಂದೋಲನ ದಿನ ಪತ್ರಿಕೆ, ಮೈಸೂರು ಪತ್ರಿಕೆಗಳಲ್ಲಿ ಪತ್ರಕರ್ತರಾಗಿ ದುಡಿದರು. ವೃತ್ತಿಯ ಜೊತೆಗೆ ಸಾಹಿತ್ಯದ ಅಭಿರುಚಿ ಮತ್ತು ಬಂಡಾಯ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಅದರ ಫಲವಾಗಿ ಉಪ್ಪಿನಂಗಡಿಯ ಆಗುಹೋಗು–ಜನಜೀವನವನ್ನು ಪ್ರತಿಬಿಂಬಿಸುವ "ಅಜ್ಜಿಮಾದ" ಕಾದಂಬರಿ ಬರೆದರು. "ತಸ್‌ಬಿ" ಕಥಾ ಸಂಕಲನ ಪ್ರಕಟಿಸಿದರು. ಅನೇಕ ಕವಿತೆಗಳನ್ನು ಕೂಡಾ ಬರೆದಿದ್ದಾರೆ.

ಮೈಸೂರಿನ ಚಿತ್ರಕಲಾ ಕಾಲೇಜು "ಕಾವಾ"ದಲ್ಲಿ ಚಿತ್ರಕಲಾ ಪದವಿ ಪಡೆದು, ಹೆಸರಾಂತ ಚಿತ್ರಕಲಾವಿದರಾಗಿ ಬೆಳೆದ ಅವರು ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ವಿಶೇಷವಾಗಿ ರೇಖಾ ಚಿತ್ರಗಳನ್ನು ರಚಿಸುವ ನಿಪುಣತೆಯಲ್ಲಿ ಅವರು ಹೆಸರು ಪಡೆದಿದ್ದಾರೆ.

ಫೋಟೊಗ್ರಫಿ ಕಲಾವಿದರೂ ಆಗಿದ್ದ ಅವರು ತನ್ನ ಕ್ಯಾಮೆರಾದಲ್ಲಿ ಅನೇಕ ಚಿತ್ರಗಳನ್ನು ಸೆರೆಹಿಡಿದು ವಿಶೇಷ ಚಿತ್ರಗಳನ್ನು ಮೈಸೂರು ಕಲಾಮಂದಿರದ ಆವರಣದಲ್ಲಿ ಪ್ರದರ್ಶಿಸಿ ಗಮನ ಸೆಳೆದಿದ್ದಾರೆ.

ಕಿರು ಸಾಕ್ಷ್ಯ ಚಿತ್ರಗಳ ನಿರ್ದೇಶಕರಾಗಿ, ಕ್ಯಾಮೆರಾಮನ್ ಆಗಿ, ಚಿತ್ರಸಾಹಿತಿಯಾಗಿ ಕೆಲವು ಸಾಕ್ಷ್ಯ ಚಿತ್ರಗಳನ್ನು ಮಾಡಿದ್ದಾರೆ. ರಾಜ್ಯ ಸರ್ಕಾರದ ಸಂಪನ್ಮೂಲ ಕೇಂದ್ರದ ಪುಸ್ತಕಗಳಿಗೆ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪುಸ್ತಕಗಳಿಗೆ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದ ಯುನಿಸೆಫ್ ಮಕ್ಕಳ ಪುಸ್ತಕಗಳಿಗೆ ಚಿತ್ರಗಳನ್ನು ರಚಿಸಿದ್ದಾರೆ. ಹಲವು ಪುಸ್ತಕದ ಪುಟ ವಿನ್ಯಾಸವನ್ನೂ ಮಾಡಿದ್ದಾರೆ. "ಅಲ್ಲಮ ಪ್ರಕಾಶನ" ಹುಟ್ಟು ಹಾಕಿ ಕೆಲವು ಪುಸ್ತಗಳನ್ನು ಪ್ರಕಟಿಸುವ ಮೂಲಕ ಪ್ರಕಾಶಕರಾಗಿಯೂ ಗುರುತಿಸಿದ್ದಾರೆ.

ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳೊಡನೆ ಒಡನಾಡವಿಟ್ಟುಕೊಂಡು ಅನಾಥ ಮಕ್ಕಳು, ಅಂಗವಿಕಲ ಮಕ್ಕಳು, ಬೀದಿಯಲ್ಲಿ ಬೀಸಾಕಿದ ಮಕ್ಕಳನ್ನು ರಕ್ಷಿಸಿದ ಹೆಗ್ಗಳಿಕೆಯೂ ಅವರಿಗಿದೆ. ಮೈಸೂರಿನ ಪೌರಕಾರ್ಮಿಕರ ಕುಟುಂಬದ ನಿರುದ್ಯೋಗಿ 20 ಯುವಕರಿಗೆ ಫೋಟೊಗ್ರಫಿ ತರಬೇತಿ ನೀಡಿ ಅವರಿಗೆ ಉತ್ತಮವಾದ ಕ್ಯಾಮೆರಾಗಳನ್ನು ಉಚಿತವಾಗಿ ನೀಡಿ ಸ್ವಯಂ ಉದ್ಯೋಗ ಕಲ್ಪಿಸಿದ್ದಾರೆ.

ಮೈಸೂರಿನ ನಿರಂತರ, ಜನಮನ ಸಾಂಸ್ಕೃತಿಕ ಸಂಘಟನೆಗಳ ಸದಸ್ಯನಾಗಿದ್ದುಕೊಂಡು ಅನೇಕ ನಾಟಕ, ರಂಗಶಿಬಿರ, ರಂಗ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ಪ್ರಗತಿಪರ ಚಿಂತನೆಯನ್ನ ಮೈಗೂಡಿಸಿಕೊಂಡು ಸಾಮಾಜಿಕ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದರು.

ಮಾನವೀಯ ವರದಿಗಾರ ಎಂಬ ಪ್ರಶಂಸೆಯಲ್ಲದೆ, ಫೋಟೋಗ್ರಫಿಗೆ ಸಂಬಂಧಿಸಿದ ಪುಸ್ತಕವನ್ನು ಬರೆದಿದ್ದಾರೆ. ಕೆಲವು ಸಿನಿಮಾಗಳಲ್ಲಿ ಅಸೋಸಿಯೇಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ ಅನುಭವವೂ ಅವರಿಗೆ ಇತ್ತು. ಮೈಸೂರು ದಸರಾದ ಟ್ಯಾಬ್ಲೋಗಳ ವಿನ್ಯಾಸಕರೂ ಆಗಿದ್ದರು.

ಪತ್ನಿ, ಒಬ್ಬ ಗಂಡು ಮತ್ತು ಒಬ್ಬ ಹೆಣ್ಣುಮಗಳನ್ನು 2006ರ ಜೂನ್ 13ರಂದು ಅವರು ಬಿಟ್ಟಗಲಿದರು.

## ಕ್ಯಾಮರಾ ಕಣ್ಣಿನ ಕವಿ: ಅಹ್ಮದ್ ಅನ್ವರ್ ಮಂಗಳೂರು



ಮಂಗಳೂರು ಹೊರವಲಯದ ದ್ವೀಪ ಪ್ರದೇಶವಾದ ಬೆಂಗ್ರೆಯ ಮೂಸಾ ಅಹ್ಮದ್–ನಫೀಸಾ ದಂಪತಿಯ ಪುತ್ರನಾಗಿ 1964ರ ಸೆಪ್ಟಂಬರ್ 26ರಂದು ಹುಟ್ಟಿದ ಅಹ್ಮದ್ ಅನ್ವರ್ ಪಿಯುಸಿ ಕಲಿತಿದ್ದಾರೆ.

ವೃತ್ತಿಯಲ್ಲಿ ಉದ್ಯಮಿಯಾಗಿದ್ದ ಅವರು ಪ್ರವೃತ್ತಿಯಲ್ಲಿ ಫೋಟೋಗ್ರಾಫರ್ ಆಗಿದ್ದರು. ಬಾಲ್ಯದಲ್ಲೇ ಸಾಹಿತ್ಯದಲ್ಲಿ ಅವರಿಗೆ ಅಪಾರ ಒಲವಿತ್ತು. ಹಾಗಾಗಿ ಓದು–ಬರೆಹ ಅವರಿಗೆ ಕರಗತವಾಗಿತ್ತು. ಉದ್ಯಮದ ಜೊತೆಗೆ ನಾಡಿನ ಪ್ರಮುಖ ಪತ್ರಿಕೆಗಳಿಗೆ ಬರೆಯತೊಡಗಿದರು. ಆರಂಭದಲ್ಲಿ ಕನ್ನಡದಲ್ಲಿ ಬರೆಯುತ್ತಿದ್ದ ಅವರು ಬಳಿಕ ಬ್ಯಾರಿ ಭಾಷೆಯಲ್ಲೂ ಬರೆಯತೊಡಗಿದರು. ಅದರಲ್ಲೂ ಕವನ, ಲೇಖನಗಳನ್ನು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬರೆಯುತ್ತಿದ್ದರು. ಅದರ ಫಲವಾಗಿ ಭಾರತಗೀತ, ನೂರೊಂದು ಕವಿತೆಗಳು, ಗುಲ್‌ಮೊಹರು (ಕವನ ಸಂಕಲನ), ನನ್ನ ಕನಸಿನ ಭಾರತ (ಲೇಖನ ಸಂಕಲನ), ಬೇವುಬೆಲ್ಲ (ಹನಿಗವನ) ಪ್ರಕಟಗೊಂಡಿತ್ತು. ಅವರ ಮರಣದ ಬಳಿಕ ಬಿಳಿಚುಕ್ಕೆ ಪ್ರಕಾಶನವು ಅವರ "ಪಯಣಿಗನ ಪದ್ಯಗಳು" ಕವನ ಸಂಕಲನವನ್ನು ಪ್ರಕಟಿಸಿವೆ.

ಕ್ಯಾಮರಾವನ್ನು ಹವ್ಯಾಸಕ್ಕೆ ಕೈಗೆತ್ತಿಕೊಂಡಿದ್ದ ಅವರು ಬಳಿಕ ಉದ್ಯಮದಲ್ಲಿ ನಷ್ಟ ಹೊಂದಿದ ಬಳಿಕ ಅದೇ ಕ್ಯಾಮರಾವನ್ನು ಬದುಕಿನ ಅಸ್ತ್ರವನ್ನಾಗಿಸಿಕೊಂಡರು. ಕ್ಯಾಮರಾ ಮೂಲಕ ಅವರ ವೃತ್ತಿ ಮತ್ತು ಪ್ರವೃತ್ತಿಯು ಜೊತೆ ಜೊತೆಯಾಗಿ ಸಾಗಿದವು. ಹವ್ಯಾಸಕ್ಕಾಗಿ ಅವರು ತೆಗೆದ ಫೋಟೋಗಳ ಪ್ರದರ್ಶನಗೊಂಡಿದೆ.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೂಡುಬಿದಿರೆಯ ಕನ್ನಡ ಸಂಘ, ಮುಸ್ಲಿಂ ಲೇಖಕರ ಸಂಘ, ಕರ್ನಾಟಕ ಫೋಟೋಗ್ರಾಫರ್ ಅಸೋಸಿಯೇಶನ್, ದಕ್ಷಿಣ ಕನ್ನಡ ಜಿಲ್ಲಾ ಛಾಯಾಚಿತ್ರಗ್ರಾಹಕರ ಸಂಘ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಯೂತ್ ಫೋಟೋಗ್ರಾಫರ್ ಅಸೋಸಿಯೇಶನ್ ಸಹಿತ ಹಲವು ಸಂಘಟನೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದರು.

"ಭಾರತಗೀತ', "ನೂರೊಂದು ಕವಿತೆಗಳು" ಕೃತಿಗೆ ಮುಂಬೈ ಕರ್ನಾಟಕ ಸಂಘದ ದಿ. ಕವಿ ಪೇಜಾವರ ಸದಾಶಿವದಾಸ್ ಸ್ಮಾರಕ ಪ್ರಶಸ್ತಿ ಮತ್ತು ಮುಸ್ಲಿಂ ಲೇಖಕರ ಸಂಘದ ಪ್ರಶಸ್ತಿ ಲಭಿಸಿದೆ. "ಗುಲ್‌ಮೊಹರು" ಕೃತಿಗೆ ಬೆಂಗಳೂರಿನ "ಸ್ನೇಹಸೇತು' ಸಂಘಟನೆಯ ಸಾಹಿತ್ಯ ಸೇತು ಪ್ರಶಸ್ತಿ ಲಭಿಸಿದೆ. "ಬೇವು ಬೆಲ್ಲ" ಹನಿಗವನ ಸಂಕಲನಕ್ಕೆ ಅತ್ತಿಮಬ್ಬೆ ಪ್ರತಿಷ್ಠಾನದ ಪ್ರಶಸ್ತಿ ಲಭಿಸಿದೆ. ಯುನಿವೆಫ್ ಕರ್ನಾಟಕ ಸಂಸ್ಥೆಯು "ಶೇಖ್ ಅಹ್ಮದ್ ಸರ್ ಹಿಂದಿ" ಪ್ರಶಸ್ತಿ ನೀಡಿ ಗೌರವಿಸಿದೆ.

ಅಬೂ ಅಸ್ಮಾ ಕಾವ್ಯನಾಮದಿಂದಲೂ ಅವರು ಬರೆಯುತ್ತಿದ್ದರು. ಪತ್ನಿ ಶಾಹಿದಾ ಉಮರ್, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರನನ್ನು 2016ರ ಡಿಸೆಂಬರ್ 11ರಂದು ಅವರು ಅಗಲಿದ್ದಾರೆ.

## ಅಚ್ಚರಿಯ ಕಥೆಗಾರ : ಫಕ್ರುದ್ದೀನ್ ಇರುವೈಲು



'ನೋಡು... ನನ್ನ ಪುಟ್ಟ ಮೋಳೇ, ಇದು ನಿನ್ನ ಅಪ್ಪನ ಹೆಸರು ಮತ್ತು ನಿನ್ನ ಅಮ್ಮನ ಹೆಸರು! ಈಗ ನಿನ್ನ ಹೆಸರನ್ನು ಬರೆಯುತ್ತೇನೆ' ಎನ್ನುತ್ತಾ 'ನಸೀಮಾ' ಎಂದು ಬರೆದಳು.

ಮಗು ಕೇಕೆ ಹಾಕಿತು.

ಇದು 'ಹಲೀಮಾ ಅಕ್ಷರ ಕಲಿತದ್ದು!' ಕಥೆಯ ಒಂದು ಚಿತ್ರಣ. ಈ ಕಥೆಯನ್ನು ಬರೆದವರು ಹಿರಿಯ ಕಥೆಗಾರ ಫಕ್ರುದ್ದೀನ್ ಇರುವೈಲು.

ಫಕ್ರುದ್ದೀನ್ ಅದೆಂತಹ ಅದ್ಭುತ ಮತ್ತು ಅಚ್ಚರಿಯ ಕಥೆಗಾರ ಎಂದು ಹೇಳಲು ಅವರು ಈವರೆಗೆ ಬರೆದ ಇನ್ನೂರಕ್ಕೂ ಅಧಿಕ ಕಥೆಗಳೇ ಸಾಕ್ಷಿ.

ಮೂಡುಬಿದರೆ ತಾಲೂಕಿನ ಇರುವೈಲು ಗ್ರಾಮದ ಪೂವಣಿಬೆಟ್ಟು ಎಂಬಲ್ಲಿ ಸೇಕುಂಞಿ ಬ್ಯಾರಿ–ಮರಿಯಮ್ಮ ದಂಪತಿಯ ಪುತ್ರನಾಗಿ 1960ರ ಜುಲೈ 2ರಂದು ಹುಟ್ಟಿ ಬೆಳೆದ ಫಕ್ರುದ್ದೀನ್ ಹೆಚ್ಚು ಕಲಿತವರಲ್ಲ. ಆದರೆ ದಟ್ಟ ಜೀವನಾನುಭವವಿತ್ತು ಮತ್ತು ಬರೆಹದ ತುಡಿತವೂ ಇತ್ತು. ಆ ತುಡಿತವನ್ನು ಕಥೆ ಮತ್ತು ಕಾದಂಬರಿಯ ಮೂಲಕ ಹೊರಚೆಲ್ಲುವ ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿಯೂ ಆಗಿದ್ದರು. ಆದರೆ ಕನ್ನಡ ಸಾಹಿತ್ಯ ಲೋಕದಿಂದ ಅವರಿಗೆ ಸಿಗಬೇಕಾದ ಮನ್ನಣೆ ಸಿಕ್ಕಿಲ್ಲ ಎಂದರೆ ತಪ್ಪಾಗಲಾರದು.

ಕರಾವಳಿಯ ಬ್ಯಾರಿ ಮುಸ್ಲಿಂ ಸಂವೇದನೆಯನ್ನು ಸಾಹಿತ್ಯದ ಮೂಲಕ ಬಿಂಬಿಸುವ ಪ್ರಮುಖ ಕಥೆಗಾರರಲ್ಲಿ ಓರ್ವರಾಗಿದ್ದ ಅವರು 1985ರಲ್ಲಿ ಕಥೆಗಳನ್ನು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಬರೆಯುತ್ತಾ ಸಾಗಿದರೂ ಕೂಡ ಅವರ ಪ್ರಥಮ ಕೃತಿ 'ಎಲ್ಲಿರುವೆ ನನ್ನ ಕಂದಾ?' (ಕಥಾ ಸಂಕಲನ) ಹೊರಬಂದದ್ದು 2001ರಲ್ಲಿ. ಅದೇ ವರ್ಷ 'ಹಲೀಮಾ ಅಕ್ಷರ ಕಲಿತದ್ದು' ಕಥಾ ಸಂಕಲನವನ್ನು ನವಕರ್ನಾಟಕ ಪ್ರಕಾಶನ ಸಂಸ್ಥೆಯು ಪ್ರಕಟಿಸಿತು. ಅ ಬಳಿಕ ಅವರು ಕಥೆ–ಕಾದಂಬರಿಗಳನ್ನು ಬರೆಯುತ್ತಾ ಸಾಗಿದರೇ ವಿನಃ ಪುಸ್ತಕಗಳನ್ನು ಪ್ರಕಟಿಸಲು ತರಾತುರಿ ತೋರಿಸಲಿಲ್ಲ. ಹಾಗಾಗಿ ಸುಮಾರು 11 ವರ್ಷಗಳ ಬಳಿಕ ಅಂದರೆ 2012ರಲ್ಲಿ 'ಅವಸಾನ' ಕಥಾಸಂಕಲನ ಮತ್ತದೇ ವರ್ಷ 'ಬದುಕೆಂಬ ಮಾಯೆ' ಕಾದಂಬರಿ ಹೊರತಂದರು. 2015ರಲ್ಲಿ 'ಮುಖವಾಡ' ಕಥಾಸಂಕಲನ', 2010ರಲ್ಲಿ 'ಅನಿರೀಕ್ಷಿತ' ಕಥಾ ಸಂಕಲನ, 2010ರಲ್ಲಿ 'ನಾದಿರಾ' ನೀಳ್ಗತೆ, 2011ರಲ್ಲಿ 'ಹಲೀಮಾ' ಕಾದಂಬರಿ, 2010ರಲ್ಲಿ 'ನೊಂಬಲ' ಮತ್ತು 2015ರಲ್ಲಿ 'ಕಿರ್ಫ' ಎಂಬ ಎರಡು ಬ್ಯಾರಿ ಕಥಾ ಸಂಕಲನವನ್ನು ಹೊರತಂದಿದ್ದರು. 2019ರಲ್ಲಿ 'ಮೂನು ಮಿನಿ ಕಾದಂಬರಿಜ' ಪ್ರಕಟಗೊಂಡಿದೆ.

'ಹಲೀಮಾ ಅಕ್ಷರ ಕಲಿತದ್ದು' ಕೃತಿಗೆ 2001ರ ಮುಸ್ಲಿಂ ಸಾಹಿತ್ಯ ಪ್ರಶಸ್ತಿ ಲಭಿಸಿತ್ತು. 2015ರಲ್ಲಿ ಆಳ್ವಾಸ್ ನುಡಿಸಿರಿಯಲ್ಲಿ 'ಬ್ಯಾರಿಸಿರಿ' ಪ್ರಶಸ್ತಿಯೂ ಲಭಿಸಿತ್ತು. ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ್ದ ಅವರು ಈ ಕ್ಷೇತ್ರದ ಬೂಟಾಟಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದರು ಎನ್ನಬಹುದು. ಅದಕ್ಕೆ ಅವರ ಅಂತರ್ಮುಖಿಯೂ ಕಾರಣವಾಗಿರಬಹುದು. ಹೆಚ್ಚೇನೂ ಕಲಿಯಲಿಲ್ಲ, ಹಳ್ಳಿಯಲ್ಲಿ ಬೆಳೆದವ ಎಂಬ ಕೀಳರಿಮೆ ಸದಾ ಅವರನ್ನು ಕಾಡುತ್ತಿತ್ತು. ಹಾಗಾಗಿ ಅವರು ಸಾಹಿತ್ಯದ ವೇದಿಕೆಗಳಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳಲಿಲ್ಲ. ಇತರ ಸಾಹಿತಿಗಳ ಜೊತೆ ಒಡನಾಟವನ್ನೂ ಇಟ್ಟುಕೊಂಡವರಲ್ಲ. ತಾನಾಯಿತು, ತನ್ನ ಬರೆಹವಾಯಿತು ಎಂಬಂತೆ ಅವರು ಬದುಕಿದರು. ತನ್ನ ಅನಾರೋಗ್ಯವನ್ನೂ ಲೆಕ್ಕಿಸದೆ ಕೊನೆಯವರೆಗೂ ಬರೆಯುವುದನ್ನೇ ಉಸಿರಾಗಿಸಿಕೊಂಡಿದ್ದ ಅವರು ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಸೂಕ್ಷ್ಮ ಮತ್ತು ಸಂಕೋಚಮಯ ಮನಸ್ಸನ್ನು ಅರಿಯಲು ಅವರ ಕಥೆ–ಕಾದಂಬರಿಗಳಷ್ಟೇ ನಮ್ಮೊಂದಿಗಿದೆ.

2020ರ ಆಗಸ್ಟ್ 1ರಂದು ಪತ್ನಿ ಮತ್ತು ಮೂವರು ಹೆಣ್ಣು ಮಕ್ಕಳನ್ನು ಅವರು ಬಿಟ್ಟು ಇಹಲೋಕ ತ್ಯಜಿಸಿದರು.

# ಸಮಾಜ ಸೇವಕ ಅಬ್ದುಲ್ ಖಾದರ್ ಉಳ್ಳಾಲ



ಉಳ್ಳಾಲ ಅಳೇಕಲದ ಹಾಜಿ ಇಸ್ಮಾಯೀಲ್ ಅಹ್ಮದ್–ಹಲಿಮಮ್ಮ ದಂಪತಿಯ ಪುತ್ರನಾಗಿ 1941ರ ಸೆಪ್ಟಂಬರ್ 15ರಂದು  ಜನಿಸಿದ ಅಬ್ದುಲ್ ಖಾದರ್ ಪರಿಸರದಲ್ಲಿ ಮೀಸೆ ಕಾದ್ರಾಕ ಯಾನೆ ಕ್ಯಾಪ್ಟನ್ ಖಾದರ್ ಎಂದೇ ಚಿರಪರಿಚಿತ.

ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸೇವೆಯಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ ಅವರಿಗೆ ಮದನಿ ಅವಾರ್ಡ್ ಕೂಡ ಲಭಿಸಿದೆ.

ಉಳ್ಳಾಲ ಕ್ಷೇತ್ರದಿಂದ 1984ರಿಂದ 1989ರವರೆಗೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಸದಸ್ಯರಾಗಿ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದ ಅವರು ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್‌ನ ಸ್ಥಾಪಕ ಸದಸ್ಯರಾಗಿ, ಸೈಯದ್ ಮದನಿ ದರ್ಗಾ ಆಡಳಿತ ಕಮಿಟಿಯ ಸದಸ್ಯರಾಗಿ, ಮದನಿ ವ್ಯವಸಾಯ ಸೇವಾ ಸಂಘದ ಸದಸ್ಯರಾಗಿ, ಮದನಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆಡಳಿತ ಕಮಿಟಿಯ ಸದಸ್ಯರಾಗಿ, ಅಳೇಕಲ ಜುಮ್ಮಾ ಮಸೀದಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

ಕುಂಪಲದ ನೂರಾನಿ ಯತೀಂ ಖಾನಾದ ಸ್ಥಾಪಕ ಸದಸ್ಯ ಮತ್ತು ನುಸ್ರತುಲ್ ಮಸಾಕೀನ್ ಟ್ರಸ್ಟ್‌ನ ಸದಸ್ಯರಾಗಿದ್ದ ಅವರು ಫುಟ್ಬಾಲ್ ಆಟಗಾರ ಮತ್ತು ಕುಸ್ತಿಪಟು ಕೂಡಾ ಆಗಿದ್ದರು.

ಉಳ್ಳಾಲ ಉರೂಸ್ ಸಂದರ್ಭ ಸ್ವಯಂ ಸೇವಕರ ತಂಡದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವರನ್ನು ಕ್ಯಾಪ್ಟನ್ ಕಾದ್ರಾಕ ಎಂದೂ ಕರೆಯಲಾಗುತ್ತಿತ್ತು. ನಾಯಕನಿಗೆ ತಕ್ಕುದಾದ ಅವರ "ಮೀಸೆ ಮತ್ತು "ಕೋಟು" ಜನರನ್ನು ಆಕರ್ಷಿಸುತ್ತಿತ್ತು.

ಉಳ್ಳಾಲದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ/ಮೆಟ್ರಿಕ್ಯುಲೇಷನ್ ತೇರ್ಗಡೆ ಹೊಂದಿದ್ದ ಹಾಜಿ ಅಬ್ದುಲ್ ಖಾದರ್ ಅವರು ಪತ್ನಿ ಅಡ್ಡೂರು ಗರಡಿ ಮನೆಯ ಹಾಜರಮ್ಮ ಮತ್ತು ಒಬ್ಬ ಪುತ್ರನನ್ನು 2019ರ ಎಪ್ರಿಲ್ 22ರಂದು ಬಿಟ್ಟಗಲಿದರು.

## ಲೇಖನ ಮತ್ತು ಮಾಹಿತಿ ಕೊಟ್ಟು ಸಹಕರಿಸಿದವರ ಹೆಸರು

1. ಬಿ.ಎ. ಮುಹಮ್ಮದ್ ಅಲಿ ಕಮ್ಮರಡಿ
2. ಬಿ.ಎ. ಸಂಶುದ್ದೀನ್ ಮಡಿಕೇರಿ
3. ಎಂಇ ಮೂಳೂರು ದುಬೈ
4. ಮುಹಮ್ಮದ್ ಅಲಿ ಉಚ್ಚಿಲ್ ಅಬುದಾಬಿ
5. ಶರ್ಫುದ್ದೀನ್ ಬಣಕಲ್, ಕುವೈತ್
6. ಅಬ್ದುಲ್ಲಾ ಮೋನು ಕತರ್
7. ಅನ್ಸಾರ್ ಕಾಟಿಪಳ್ಳ ಬಹರೈನ್
8. ಅತ್ತೂರು ಜೈಯ್ಯಬ್ಬ ಬೆಂಗಳೂರು
9. ಬಿ.ಎ. ಜಮಾಲುದ್ದೀನ್ ಹಾಸನ
10. ಯಾಕೂಬ್ ಖಾದರ್ ಗುಲ್ವಾಡಿ
11. ನೂರುದ್ದೀನ್ ಸಾಲ್ಮರ
12. ಶಾಹುಲ್ ಹಮೀದ್ ಕೆ.ಕೆ. ಬೆಳ್ತಂಗಡಿ
13. ಮುಹಮ್ಮದ್ ಹನೀಫ್ ಗೋಳ್ತಮಜಲು
14. ಸಲೀಂ ಹಂಡೇಲು
15. ಹರ್ಷದ್ ವರ್ಕಾಡಿ
16. ರಹೀಂ ಸಚ್ಚರಿಪೇಟೆ, ಮುಂಬೈ
17. ಅಹ್ಮದ್ ಬಾವಾ ಪಡೀಲ್
18. ಕರಂಬಾರ್ ಮುಹಮ್ಮದ್
19. ಅಬ್ದುಲ್ ಹಮೀದ್ ಅನ್ಸಾರಿ ಮೈಸೂರು
20. ಕೆಎಂ ಅಬೂಬಕರ್ ಸಿದ್ದೀಕ್ ಮೋಂಟುಗೋಳಿ
21. ಬಿ. ಇಬ್ರಾಹೀಂ ಮಂಗಳೂರು
22. ಮುಹಮ್ಮದ್ ಬಡ್ಡೂರು
23. ಅಶೀರುದ್ದೀನ್ ಆಲಿಯಾ ಮಂಜನಾಡಿ
24. ಅಬ್ದುಲ್ ರಝಾಕ್ ಅನಂತಾಡಿ
25. ಅಬ್ದುಲ್ ರಝಾಕ್ ನಾವೂರು
26. ಉಮರ್ ಟೀಕೆ ಬೆಂಗಳೂರು
27. ನವಾಝ್ ಸಖಾಫಿ ಉಳ್ಳಾಲ
28. ಹಸನ್ ಝುಹ್ರಿ ಮಂಗಳಪೇಟೆ
29. ಮುಹಮ್ಮದ್ ಬಶೀರ್ ಹಿಮಮಿ ಜೋಕಟ್ಟೆ
30. ಎಸ್‌ಕೆ ಹಸನ್ ಫೈಝಿ ಸಾಲೆತ್ತೂರು
31. ಹಮೀದ್ ಪಡುಬಿದ್ರಿ
32. ಬಶೀರ್ ಅಹ್ಮದ್ ಕಿನ್ಯ
33. ಅಬ್ದುಲ್ ಹಮೀದ್ ಮಂಗಳೂರು
34. ಬಿಎಂ ಬಶೀರ್
35. ಬಿಎಂ ಹನೀಫ್
36. ಅನ್ಸಾರ್ ಇನೋಳಿ
37. ಎಸಿ ಅಯ್ಯೂಬ್ ಚಕ್ಕಮಕ್ಕಿ ಮೂಡಿಗೆರೆ
38. ಝುಲೇಖಾ ಮುಮ್ತಾಝ್
39. ಸಬೀಹಾ ಫಾತಿಮಾ
40. ಸಮೀನಾ ನೂರ್
41. ಸಫಿಯಾ ನಈಮ್
42. ಮರಿಯಂ ಇಸ್ಮಾಯೀಲ್
43. ಅಸ್ಮತ್ ವಗ್ಗ
44. ಹಫ್ಸಾ ಬಾನು ಬೆಂಗಳೂರು
45. ಗೀತಾ ರಫೀಕ್ ಮೈಸೂರು
46. ಶಾಹಿದಾ ಉಮರ್
47. ಸಿ.ಕೆ. ಇಬ್ರಾಹೀಂ ಮೂಡಿಗೆರೆ
48. ಅಝೀಝ್ ಮುಲ್ಕಿ
49. ಎಡ್ವಕೇಟ್ ಮುಹಮ್ಮದಲಿ ಮಂಗಳೂರು
50. ಇಕ್ಬಾಲ್ ಬೆಂಗಳೂರು
51. ಸಿ. ಪುತ್ತುಬಾವ ಹಾಜಿ ಮಂಗಳೂರು
52. ಸಿ. ಅಬ್ದುಲ್ ರಹೀಂ ಮಂಗಳೂರು
53. ಸಿದ್ದೀಕ್ ಬ್ಯಾರಿ ಬೆಂಗಳೂರು
54. ಎಸ್‌ಎಂ ರಶೀದ್ ಹಾಜಿ ಮಂಗಳೂರು
55. ಡಿಎಂ ಅಸ್ಲಂ
56. ಬಿಎ ನಝೀರ್ ಬೈಕಂಪಾಡಿ
57. ಪ್ರೊ. ಬಿಎಂ ಇಚ್ಲಂಗೋಡು
58. ಜೀಶಾನ್ ರಮ್ಝಾನ್ ಮಂಗಳೂರು
59. ಹನೀಫ್ ಪುತ್ತೂರು
60. ಎಸ್‌ಪಿ ಬಶೀರ್ ಶೇಖಮಲೆ
61. ಆಲಿಕುಂಞ ಪಾರೆ
62. ಅಬ್ದುಲ್ ಸಮದ್ ಕಂದಕ್
63. ಎಂಎಂ ಸಾಲಿಹ್ ಮಂಗಳೂರು
64. ಬಶೀರ್ ಬೈಕಂಪಾಡಿ
65. ಯಾದವ ಶೆಟ್ಟಿ
66. ಝಫರುಲ್ಲಾ ಒಡೆಯರ್
67. ಖಾದರ್ ಕಾಟಿಪಳ್ಳ
68. ಮುಹಮ್ಮದ್ ಅಮೀನ್ ಮಂಗಳೂರು
69. ಉಮರಬ್ಬ ಉಳ್ಳಾಲ
70. ಬದ್ರುದ್ದೀನ್ ಪಣಂಬೂರು
71. ಹಸನಬ್ಬ ಎಚ್‌ಇ
72. ಜಲಾಲ್ ಮುಸ್ಲಿಯಾರ್
73. ಜುನೈದ್ ಸಅದಿ
74. ಸಲೀಂ ನವಾಝ್
75. ಅನ್ವರ್ ಸಾದಾತ್ ಮಂಗಳೂರು
76. ಅಲ್ತಾಫ್ ಉಳ್ಳಾಲ

77. ಎಂಎ ಅಬ್ದುಲ್ ರಹ್ಮಾನ್ ಮೂಡಿಗೆರೆ
78. ಸಂಶುದ್ದೀನ್ ಅಳೇಕಲ ಉಳ್ಳಾಲ
79. ಹಸೈನಾರ್ ಕೂರ್ನಡ್ಕ
80. ಎಸ್‌ಪಿ ಅಬ್ದುಲ್ ರಹ್ಮಾನ್ ಐವತ್ತೊಕ್ಲು
81. ಮುಹಮ್ಮದ್ ಶಹಾದಾ ನೂರ್ (ಯುಎಸ್‌ಎ)
82. ಇಸ್ಮಾಯೀಲ್ ತಣ್ಣೀರುಬಾವಿ
83. ಮುಬಾರಕ್ ಕಾರಾಜೆ
84. ಅಝೀಝ್ ಕೆಮ್ಮಾರ
85. ಸಿ.ಕೆ. ಅಹ್ಮದ್
86. ಬಶೀರ್ ಹಾಜಿ ಎಸ್‌ಎಂ
87. ಶರೀಫ್ ಮಕ್ಕಾರ್
88. ಅಬ್ಬಾಸ್ ತಲಪಾಡಿ
89. ಮಜೂರ್ ಸಅದಿ
90. ರಫೀಕ್ ಅಡ್ಯಾರ್
91. ಎಸ್. ಮುಹಮ್ಮದ್ ಸಾಲಿ
92. ಅಬೂಬಕರ್ ಮದನಿ ಬೈತಾರ್
93. ಮೊಯಿನುದ್ದೀನ್ ಬೈತಾರ್
94. ಝುಹೀರ್ ಝುಕರಿಯಾ
95. ಆಸೀಫ್ ಮಸೂದ್ ಕೋಡಿ ಕುಂದಾಪುರ
96. ಹಮೀದ್ ಮಜ್ಜಂಪಾಡಿ
97. ಅಶ್ರಫ್ ಎಸ್. ಕಮ್ಮಾಡಿ
98. ಅಬ್ದುಲ್ ರಹೀಂ ಬೇಲೂರು
99. ಮುಜೀಬುರ‍್ರಹ್ಮಾನ್ ಮಂಗಳೂರು
100. ಎನ್.ಇ. ಮುಹಮ್ಮದ್ ಮಲ್ಲೂರು
101. ಲತೀಫ್ ಕಂದಕ್
102. ಎಂಎ ಮುಹಮ್ಮದ್ ಕುಂಞಿ ಮಂಡೆಕೋಲು
103. ಮುಹಮ್ಮದ್ ನಜೀಬ್ ಸಜಿಪ
104. ಎಂ. ನಝೀರ್ ಅಹ್ಮದ್
105. ಎಂ. ಮುಹಮ್ಮದ್ ಹನೀಫ್
106. ಮುಹಮ್ಮದ್ ಶರೀಫ್ ಎಡಪದವು
107. ವೈ. ಮುಹಮ್ಮದ್ ಬ್ಯಾರಿ
108. ಹಸನ್ ಬಾವಾ ಮುಲ್ಕಿ
109. ಎಂ ಅಬ್ದುಲ್ ರಶೀದ್ ಮಂಗಳೂರು
110. ಎಂಎಎಸ್ ಆಸೀಫ್ ಇಕ್ಬಾಲ್ ತೋಡಾರ್
111. ಕೆ.ಪಿ. ಫಝುಲ್ ಪುತ್ತೂರು
112. ರಶೀದ್ ವಿಟ್ಲ
113. ಮುಹಮ್ಮದ್ ಅನ್ವರ್ ಕಲ್ಲಾಪು
114. ಮುಹಮ್ಮದ್ ಶಾಕಿರ್ ಪುತ್ತೂರು
115. ರಿಯಾನ್ ಕಾರ್ನಾಡ್





## ಅಧ್ಯಕ್ಷರೊ ಪಲ್ಕ



ಮರಕೊಗಾವಾತೊ ಮರ್ಹೂಂ ಬ್ಯಾರಿಜ ಚೆಲ್ಡೊ ಒರು ಐತಿಹಾಸಿಕ ಗ್ರಂಥ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ನಿಜಲೊ ಮುನ್ನೊಲು ಬೆಚ್ಚೊಂಟುಂಡು. ಬ್ಯಾರಿ ಭಾಷಿಕ ಸಮುದಾಯತ್ತ್ಲ್ ರಾಜಕೀಯಮಾಯಿತ್ತ್ ಶಿಕ್ಷಣ ಸಂಸ್ಥೆರೊ ಮುನ್ನೊಲು ಕೊಂಪೊಯೊ ಸಾಮಾಜಿಕ ಕಾರ್ಯತ್ತ್ಲ್ ಚಮ್ಮ ಸೊರ ಆಕಿಯೊ, ಅದೇ ಪೊಲೆ ಬ್ಯೇರೆ ಬ್ಯೇರೆ ಕಾರ್ಬಾರ್ ಕಾಟ್ಯೆಜ್ಂತೊ ಹಿರಿಯ ಮರ್ಚಿ ಪೊಯೊ ವಕೀಲಮ್ಮಾರ್ , ಜಜ್ಜ್ ಮ್ಮಾರ್, ಪೊಲೀಸ್ ಅಧಿಕಾರಿಮ್ಮಾರ್, ನಾಟಿ ಮರಂದ್ ಕೊಡ್ಕುರೊ ಹಿರಿಯಜ, ಜಮಾಅತುಂ, ಪಂತಾಯತಿಗೆಲುಂ ಪೇರ್ ಪೊಯತ್ತ್ ಮಶೂರ್ ಆಯೊ ಇಜನೆ ಬ್ಯೇರೆ ಬ್ಯೇರೆ ಕ್ಷೇತ್ರತ್ತ್ಲ್ ನಲ್ಲೊ ಸೊರ ಪನಿ ಆಕ್ಯಜಂತೊ ಹಿರಿಯಜ ಚಮ್ಮ ಆಲ್ ಮರ್ಚಿಪೊಯಿರಾರ್. ಆಯೆಂಗಾ ಅಜಲೊ ನೆನಪು ಇಂಡುಗುಂ ಚಮ್ಮ ಆಲ್ ಮ್ಮಾರ್ಗ್ ಗೊಂತಿಲ್ಲೆ.ಅಜಂತೊ ಸಾಧಕಮ್ಮಾರ್, ನೇದಾಕಮ್ಮಾರ್ ಮುನ್ನೊಲ್ತೊ ತಲೆಮಾರ್, ಅದೇ ಪೊಲೆ ಇಪ್ಪತ್ತೊ ಆಲ್ ಮಾರ್ ಎಲ್ಲಾರುಂ ನೆನಪುಲ್ ಬೈಕೊನು, ಅಜ ಆಕ್ಯೆಜಂತೊ ಸೊರ ಪನಿ ಮಾಞಿ ಪೋಗು ತೀರ ಚೆಲ್ಡಜಂತೊ ಉದ್ದೇಶತ್ತ್ಲ್, ಅಜಂತೊ 123 ಆಲೊ ಸಾಧಕಮ್ಮಾರೊ ಅಜಲೊ ಮಾಹಿತಿ, ಅಜ ಎಂದ್ರೆಲ್ಲಾ ಆಕಿರಾರ್ ಚೆನ್ನಜ್ಕ್ಕಂತೊ ತೇಡಿತ್ತ್ ಪಿಡ್ಚಿತ್ತ್ ಪರ್ತ್ ಕೊಂಬರೊಗು ಪರ್ತಾಯಿರ. ಈ ಒರು ಗ್ರಂಥ ಪ್ರತಿ ಒರು ಆಲುಂ ಓದೊನು, ಎಲ್ಲಾರ್ಗುಂ ಓದು ಬಾಟೊನು, ನಜಲೊ ಮರ್ಚಿ ಪೋಯಜಂತೊ ಆ ಹಿರಿಯಜಲೊ ನಜ ನೆನಪುಲ್ ಬೈಕ್ ರೊ ಪೊಲೆ ಆವೊನು, ಮುನ್ನೊಲ್ತೊ ತಲೆಮಾರ್ಗ್ ಅಜಲೊ ಬಗ್ಗೆ ಪಡಿಕ್ರದುಂ ಅಜ ಕಾಟಿತನ್ನಂತೊ  ತೆರುಂ ಅದ್ ನಜಲೊ ಜೀವನತ್ತ್ಲ್ ನಜ ಅದ್ರೊ ಕೊಂಬರೊಗುಂ, ಅದ್ ಪೋಲೆ ನಡಕೊಗುಂ ನಂಕ್ ಬಾರಿ ಬೆಲ್ಯೊ ಒರು ಅವಕಾಶ ನಂಕ್ ಕಿಟ್ರ್, ಆಯೊ ಸಬುಲ್ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಈ ಒರು ಗ್ರಂಥ ಕೊಂಬರೊಗು ಪರ್ತಾಯಿರ್, ಇದ್ಕ್ ಚಮ್ಮ ನಮ್ಮುಲ್ ನಂಕ್ ಸಲಹಾ ಸಮಿತಿ ಸದಸ್ಯಮ್ಮಾರ್, ಆಯ್ಕೆ ಸಮಿತಿರೊ ಸದಸ್ಯಮ್ಮಾರ್, ಸಂಪಾದಕ ಮಂಡಳಿರೊ ಸದಸ್ಯಮ್ಮಾರ್, ಅಕಾಡೆಮಿರೊ ನಜಲೊ ಸಿಬ್ಬಂದಿ ವರ್ಗ, ಎಲ್ಲಾತೊಕಾಂಟಿ ಯಾರ ನಂಕ್ ನಜಲೊ ರಿಜಿಸ್ಟ್ರಾರ್ ಅಧಿಕಾರಿ ವರ್ಗ ಎಲ್ಲಾರುಂ ಚಮ್ಮ ನಮ್ಮೊ ಸಹಾಯ, ಸಹಕಾರ ಆಕಿರಾರ್, ಅಜಲೆಲ್ಲಾರೊ ನಾನ್ ಈ ನೆರತ್ತ್ ಗ್ ಕಲ್ಬುನೊರಞಿಲೊ ನನ್ನಿ ನಾನ್ ಚೆನ್ನೊಂಟುಲ್ಲೆ. ಈ ಒರು ಐತಿಹಾಸಿಕ ಗ್ರಂಥತ್ತೊ ದೇಶ ವಿದೇಶತ್ತ್ಲ್ ಬಿಡುಗಡೆ ಆಕಿತ್ತ್, ಮರ್ಚಿ ಪೋಯೊ ಮರ್ಹೂಮ್ಮಾರೊ ಪೇರ್ರೊ ಮಶೂರ್ ಆಕ್ಯದ್ ನಜಲೊ ಗಲ್ಫ್ ರಾಯತ್ತುಲ್ಲೊ ಚಮ್ಮ ನಜಲೊ ಸದಸ್ಯಮ್ಮಾರುಗುಂ, ಸದಸ್ಯಮ್ಮಾರುಂ ನಲ್ಲೊ ಸೊರ ಆಕಿರಾರ್. ಅದ್ರೊ ನಾನ್ ಈ ಸಂದರ್ಭತ್ತ್ ಲ್ ಈ ನೇರತ್ತ್ಲ್ ನಾನ್ ನೆನಪಾಕ್ಯೊಂಟುಲ್ಲೆ ಅದೇ ಪೋಲೆ ಇನ್ನ್ ಮುನ್ನೊಲುಂ ಅಕಾಡೆಮಿ ಆಕ್ರ್ ರಂಜಂತೊ ನಲ್ಲೆ ನಲ್ಲೆ ಸೊರತ್ತ್ ಗ್ ಎಲ್ಲಾ ಬ್ಯಾರಿ ಭಾಷಿಕ ಸಮುದಾಯತ್ತೊ ಸಹಾಯ ಸಹಕಾರ ನಾನ್ ಕೇಟೊಂಟುಲ್ಲೆ, ನಜಲೊ ಆಫೀಯತ್ ಗುಂ ದೀರ್ಘಾಯಸ್ಸುಗುಂ ನಿಜೆಲ್ಲಾರುಂ ದುವರ್ಕೊನೂಂಟು ಕೇಟೋಂಟುಲ್ಲೆ.

**ರಹೀಂ ಉಚ್ಚಿಲ್**
**ಅಧ್ಯಕ್ಷರು**
**ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ**